ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.)
ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಸಂದೀಪ. ವಿ

ಮಾರ್ಗದರ್ಶಕರು
ಡಾ. ಸುಚೇತಾ ನವರತ್ನ
ಸಹಾಯಕ ಪ್ರಾಧ್ಯಾಪಕರು

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬
೨೦೧೬

700

ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.)
ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಸಂದೀಪ. ವಿ

ಮಾರ್ಗದರ್ಶಕರು

ಡಾ. ಸುಚೇತಾ ನವರತ್ನ
ಸಹಾಯಕ ಪ್ರಾಧ್ಯಾಪಕರು

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ಸಂದೀಪ .ವಿ ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿಯ ಪ್ರತಿನಿಧೀಕರಣ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

(ಡಾ. ಸುಚೇತಾ ನವರತ್ನ)
ಸಹಾಯಕ ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ :
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಘೋಷಣಾ ಪತ್ರ

ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿಯ ಪ್ರತಿನಿಧೀಕರಣ ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ಡಾ. ಸುಚೇತಾ ನವರತ್ನ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

(ಸಂದೀಪ. ವಿ)
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ದಿನಾಂಕ : 12/9/16
ಸ್ಥಳ : **ವಿದ್ಯಾರಣ್ಯ**

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವೈಧಾನಿಕತೆ

೧.೪. ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

ಪೀಠಿಕೆ

"ಗಾಂಧೀಜಿಯವರ ವ್ಯಕ್ತಿತ್ವ ಬಹುಮುಖವಾದದ್ದು. ಅವರ ಸಾಧನೆ ಸಿದ್ಧಿಗಳಾದರೂ ಅದೇ ತೆರನಾದವು. ಬುದ್ಧನ ನಂತರ ಅಂಥದೇ ಕೀರ್ತಿಯನ್ನು ಲೋಕದಾದ್ಯಂತ ಹರಡಿದ ಭಾರತೀಯರಲ್ಲಿ ಅವರೊಬ್ಬರೆ. ಗಾಂಧೀಜಿ ತಮ್ಮ ಬದುಕಿನಲ್ಲಿ ಪವಾಡಗಳನ್ನು ಮೆರೆದರೆಂದರೆ ಉತ್ಪ್ರೇಕ್ಷೆಯಾಗಲಾರದು. ಅವರ ಸಂದೇಶ ಲೋಕಕ್ಕೆ ಎಲ್ಲ ಕಾಲದಲ್ಲಿಯೂ ಸ್ಫೂರ್ತಿಯನ್ನು, ಶಕ್ತಿಯನ್ನು ಕೊಡುತ್ತದೆ. ಲೇಖಕರಿಗೆ, ವ್ಯಾಖ್ಯಾನಕಾರರಿಗೆ ಗಾಂಧೀಜಿಯೊಂದು ಗಣಿ. ಅವರನ್ನು ಕುರಿತ ಬರವಣಿಗೆಗೆ ಲೆಕ್ಕವಿಲ್ಲ. ಅವರ ವಿಚಾರಗಳಲ್ಲಿ ಕೆಲವು ಬದಲಾಗುವ ಪರಿಸರಕ್ಕೆ ಅನ್ವಯವಾಗದಿದ್ದರೂ, ಇನ್ನೂ ಕೆಲವು ಅತಿ ಆದರ್ಶದ ದೌರ್ಬಲ್ಯಕ್ಕೊಳಗಾಗಿ ಅವರೊಬ್ಬರನ್ನುಳಿದು ಇನ್ನೊಬ್ಬರ ಕೈಗೆ ಎಟುಕದಿದ್ದರೂ, ಅವರ ಉಪದೇಶಗಳು ಅನೇಕ ಶಾಶ್ವತಾಂಶಗಳನ್ನೊಳಗೊಂಡಿವೆ. ಅವುಗಳಲ್ಲಿ ಹಲವು ಚಿಂತನೆ ಅನುಸರಣೆಗಳಿಗೆ ಪ್ರಚೋದಿಸುತ್ತವೆ" ಎಂಬ ಹಾ.ಮಾ. ನಾಯಕರ ಮಾತುಗಳಂತೆ ಮಹಾತ್ಮ ಗಾಂಧೀಜಿಯವರು ಈ ಜಗತ್ತು ಕಂಡ ಅಪರೂಪದ ವ್ಯಕ್ತಿಗಳಲ್ಲಿ ಒಬ್ಬರು. ತಮ್ಮ ವ್ಯಕ್ತಿತ್ವವನ್ನೇ ಮೌಲ್ಯವಾಗಿಸಿಕೊಂಡವರು. ಇಂತಹ ವ್ಯಕ್ತಿತ್ವವನ್ನು ಹೊಂದಿದ ಗಾಂಧೀಜಿಯವರು ಭಾರತದ ಎಲ್ಲಾ ಭಾಷೆಗಳ ಸಾಹಿತ್ಯಗಳನ್ನು, ಲೇಖಕರನ್ನು ರೋಮಾಂಚನಗೊಳಿಸಿದಂತೆ ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಸಾಹಿತಿಗಳನ್ನು, ಬರಹಗಾರರನ್ನು ರೋಮಾಂಚನಗೊಳಿಸಿದ್ದಾರೆ. ಅಷ್ಟಲ್ಲದೆ ಅವರ ಹೃದಯವನ್ನೂ, ಕಲ್ಪನೆಯನ್ನೂ ಸೂರೆಗೊಂಡರು. ಪ್ರೀತಿಯಿಂದ, ಮೆಚ್ಚಿಕೆಯಿಂದ ಮತ್ತು ಗೌರವದಿಂದ ಅವರ ಬಗ್ಗೆ ಬರೆಯುವಂತೆ ಸಾಹಿತಿಗಳನ್ನು ಗಾಂಧೀಜಿಯವರ ತತ್ವ ಆದರ್ಶಗಳು ಪ್ರಚೋದಿಸಿದವು.

ಗಾಂಧೀಜಿಯವರದು ಸಂಕೀರ್ಣ ವ್ಯಕ್ತಿತ್ವ. ಆ ಬಹುಮುಖಿ ಚಹರೆಯಲ್ಲಿ ಏನನ್ನು ಹುಡುಕುವುದು ಹಾಗೂ ಕಂಡುಕೊಳ್ಳುವುದು ಎಂಬುದು ಕಷ್ಟದ ವಿಷಯ. ಆದರೆ ಆ ಚಹರೆಯಲ್ಲಿ ಕಳೆದು ಹೋದವರೇ ಹೆಚ್ಚು. ಅರ್ಥವಾಗುತ್ತಲೇ ಕಗ್ಗಂಟಾಗುವ ಕಗ್ಗಂಟಿನ ಭಾವದಲ್ಲಿ ತೀರ ಸರಳವಾಗುವ ಅವರನ್ನು ಒಂದು ಬಂಧದಲ್ಲಿ ಹಿಡಿದಿಡುವುದು ಹಾಗೂ ಆ ಭಾವವನ್ನು ಅರ್ಥೈಸಿಕೊಳ್ಳುವುದು ಕಷ್ಟ, ಇಂತಹ ವ್ಯಕ್ತಿತ್ವವನ್ನು ಹೊಂದಿದ ಗಾಂಧೀಜಿಯವರನ್ನು ಕನ್ನಡ

ಸಾಹಿತ್ಯ ಅಭಿವ್ಯಕ್ತಿಸಿದ ಬಗ್ಗೆ ಹೇಗೆ ಮತ್ತು ಯಾಕೆ ಎಂಬೆಲ್ಲ ಅಂಶಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಅಧ್ಯಯನ ಕ್ರಮ ರೂಪುಗೊಂಡಿದೆ.

ಗಾಂಧೀಜಿಯ ಬಗ್ಗೆ ಮತ್ತು ಅವರ ಕೃತಿಗಳ ಹಾಗೂ ಉಪದೇಶಗಳ ಬಗ್ಗೆ ವೈವಿಧ್ಯಮಯ ಪ್ರತಿಕ್ರಿಯೆಗಳು ಪ್ರಸಿದ್ಧ ಲೇಖಕರಲ್ಲೂ ಹಾಗೂ ಅಸಂಖ್ಯಾತ ಸಾಮಾನ್ಯ ಲೇಖಕರಲ್ಲೂ ಕಂಡುಬರುತ್ತವೆ. ಈ ಲೇಖಕರು/ಸಾಹಿತಿಗಳು ಜನತೆಯ ಅನುಭವ ಮತ್ತು ಪ್ರತಿಕ್ರಿಯೆಗಳ ಚೇತನಬಿಂದುಗಳಂತಿರುವುದರಿಂದ ಅವರ ವೈಯಕ್ತಿಕ ಅನುಭವಗಳನ್ನಷ್ಟೇ ಅಲ್ಲದೆ ಜನಸಾಮಾನ್ಯರ ಭಾವನೆಗಳನ್ನು ಪ್ರತಿನಿಧಿಸುತ್ತಾರೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗಾಂಧೀವಾದವನ್ನು ಗುರುತಿಸುವುದು ಅಧ್ಯಯನದ ಉದ್ದೇಶವಾಗಿರುವುದಿಲ್ಲ. ಗಾಂಧೀಜಿಯವರನ್ನು ಕುರಿತ ಸೃಜನಶೀಲ ಸಾಹಿತ್ಯದ ಆಕರಗಳನ್ನು ಕ್ರೋಢೀಕರಿಸುವುದು ಮತ್ತು ಕನ್ನಡ ಸಾಹಿತ್ಯ ಹೇಗೆ ಸ್ವೀಕರಿಸಿದೆ ಹಾಗೂ ಹೇಗೆ ಅಭಿವ್ಯಕ್ತಿಸಿದೆ ಎಂಬುದನ್ನು ತಿಳಿಯುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಗಾಂಧೀಜಿಯವರು ಮಹಾತ್ಮ/ರಾಷ್ಟ್ರಪಿತರಾದಂತೆ ಹಲವಾರು ವಾದ - ವಿವಾದಗಳಿಗೂ ಮೂಲವಾಗಿ ಪದೇ ಪದೇ ಚರ್ಚೆಗೆ ಒಳಗಾಗುತ್ತಾರೆ. ಇಂತಹ ವ್ಯಕ್ತಿ ವಿಶೇಷತೆಯನ್ನು ಕನ್ನಡ ಸಾಹಿತ್ಯ ಕಂಡರಿಸಿದ ಬಗೆ ಹಾಗೂ ಅವರ ಚಿಂತನೆಗಳ ತಲಸ್ಪರ್ಶಿ ಅಧ್ಯಯನವಾಗಿದೆ. ಒಬ್ಬ ಲೇಖಕ/ಸಾಹಿತಿ ಒಂದು ಕಾಲದ ಸೀಮಿತ ವಲಯದೊಳಗೆ ಬರೆದಿದ್ದರೂ ಅದರಾಚೆ ಆಲೋಚನೆಗಳು ವಿಸ್ತಾರಗೊಳ್ಳುತ್ತಾ ಹೋಗುತ್ತವೆ. ಈ ನಿಟ್ಟಿನಲ್ಲಿ ಗಾಂಧೀಜಿಯವರನ್ನು ಸಾಹಿತ್ಯಿಕ ಪ್ರಕಾರಗಳಲ್ಲಿ ಹೇಗೆ ಪುನರ್‌ಸೃಷ್ಟಿಸಿದ್ದಾರೆ ಎಂಬುದನ್ನು ನೋಡುವ ಉದ್ದೇಶವನ್ನು ಹೊಂದಲಾಗಿದೆ.

ಗಾಂಧೀಜಿಯವರನ್ನು ಕನ್ನಡ ಸಾಹಿತಿ(ಲೇಖಕರು)ಗಳು ಪರಿಭಾವಿಸಿದ ಬಗ್ಗೆ, ಸೃಜನಶೀಲವಾಗಿ ಸಾಹಿತ್ಯದ ನೆಲೆಯಲ್ಲಿ ಅನುಸಂಧಾನಗೊಳಿಸಿದ ಬಗ್ಗೆ ಹಾಗೂ ಗಾಂಧೀಜಿಯವರನ್ನು ಕುರಿತ ಕನ್ನಡ ಸಾಹಿತ್ಯದ ಸೃಜನಶೀಲ ಕೃತಿಗಳ ಮರುಓದು ಮತ್ತು ಅಧ್ಯಯನ ಹೆಚ್ಚು ಪ್ರಸ್ತುತ ಮತ್ತು ಅರ್ಥಪೂರ್ಣವೆನಿಸುವುದರಿಂದ ಈ ಅಧ್ಯಯನ ಕೈಗೊಳ್ಳಲಾಗಿದೆ.

೧.೧. ಅಧ್ಯಯನದ ಉದ್ದೇಶ

ಗಾಂಧೀಜಿಯವರನ್ನು ಕನ್ನಡ ಸಾಹಿತ್ಯ ಹೇಗೆ ಸ್ವೀಕರಿಸಿದೆ ಮತ್ತು ಹೇಗೆ ಅಭಿವ್ಯಕ್ತಿಸಿದೆ ಎನ್ನುವುದನ್ನು ತಿಳಿಯುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಯಾವುದೇ ವಾದ - ವಿಚಾರ ಇವುಗಳ ಪೂರ್ವಗ್ರಹಿಕೆಯಿಲ್ಲದೇ ಲೇಖಕರ ಸೃಜನೆಯಲ್ಲಿ ಮೂಡಿಬಂದ ಗಾಂಧೀಜಿಯವರನ್ನು ಸೂಕ್ಷ್ಮವಾಗಿ ಅವಲೋಕಿಸಿ ಆ ಅಭಿವ್ಯಕ್ತಿ ಸ್ವರೂಪವನ್ನು, ಅದರ ಮೂಲಕ ಚಿತ್ರಿತವಾಗುವ ಗಾಂಧೀಜಿಯವರನ್ನು ಕುರಿತ ವಿಚಾರಗಳ ಮೂಲಕ ತಾತ್ವಿಕತೆಯನ್ನು ರೂಪಿಸುವುದು ಅಧ್ಯಯನದ ಉದ್ದೇಶವಾಗಿದೆ.

ಒಟ್ಟಾರೆ ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿಯ ಪ್ರತಿನಿಧೀಕರಣ ಸ್ವರೂಪವನ್ನು ಕಂಡುಕೊಳ್ಳುವುದಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಗಾಂಧೀಜಿಯನ್ನು ಕುರಿತ ಕನ್ನಡ ಸಾಹಿತ್ಯದ ಸೃಷ್ಟಿ ಅಥವಾ ಕೊಡುಗೆ ಬಹುವಿಸ್ತಾರವಾದದ್ದು. ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಆರಂಭದ ನವೋದಯ ಕಾಲಘಟ್ಟ(೧೯೨೦)ದಿಂದ ದಲಿತ - ಬಂಡಾಯ(೨೦೦೦)ದ ಕಾಲಘಟ್ಟದವರೆಗಿನ ಕಾವ್ಯ, ಕಾದಂಬರಿ, ಕಥೆ ಹಾಗೂ ನಾಟಕ ಈ ಪ್ರಮುಖ ಸೃಜನಶೀಲ ಪ್ರಕಾರಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

೧.೩. ಅಧ್ಯಯನದ ವೈಧಾನಿಕತೆ

ಗಾಂಧೀಜಿಯನ್ನು ಕುರಿತ ಸೃಜನಾತ್ಮಕ ಸಾಹಿತ್ಯವನ್ನು ಸಂಗ್ರಹಿಸಿ 'ವಿಶ್ಲೇಷಣಾತ್ಮಕ' ಅಧ್ಯಯನ ಮಾದರಿಯನ್ನು ಕೈಗೊಂಡು ವ್ಯಾಖ್ಯಾನ ರೂಪವನ್ನು ಪಡೆಯಲು ಪ್ರಯತ್ನಿಸಲಾಗಿದೆ.

೧.೪. ಅಧ್ಯಯನದ ಸ್ವರೂಪ

ಅಧ್ಯಯನದ ದೃಷ್ಟಿಯಿಂದ ಪ್ರಸ್ತುತ ಈ ಮಹಾಪ್ರಬಂಧವನ್ನು ಒಟ್ಟು ಎಂಟು ಅಧ್ಯಾಯಗಳಾಗಿ ವಿನ್ಯಾಸಗೊಳಿಸಲಾಗಿದೆ. ಈ ಎಂಟು ಅಧ್ಯಾಯಗಳು ಈ ಕೆಳಗಿನ ವಸ್ತುವಿಷಯಗಳನ್ನು ಹೊಂದಿರುತ್ತವೆ.

ಅಧ್ಯಾಯ : ಒಂದು - ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶಗಳನ್ನು ಮತ್ತು ವ್ಯಾಪ್ತಿಯನ್ನು ವಿವರಿಸಲಾಗಿದೆ. ಅಧ್ಯಯನದ ಸ್ವರೂಪ ಭಾಗದಲ್ಲಿ ಅಧ್ಯಯನಕ್ಕೆ ಪೂರಕವಾಗಿ ವಿನ್ಯಾಸಗೊಳಿಸಿಕೊಂಡ ಅಧ್ಯಾಯಗಳನ್ನು ಸಂಕ್ಷಿಪ್ತವಾಗಿ ಅರ್ಥೈಸಿಕೊಳ್ಳಲಾಗಿದೆ.

ಅಧ್ಯಾಯ : ಎರಡು - ವಿಷಯ ಪ್ರವೇಶಿಕೆ ಮತ್ತು ಅಧ್ಯಯನಗಳ ಸಮೀಕ್ಷೆ

ಪ್ರಸ್ತುತ ಅಧ್ಯಾಯದಲ್ಲಿ ಕನ್ನಡದಲ್ಲಿ ಗಾಂಧೀಜಿಯವರನ್ನು ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳನ್ನು ಸಮೀಕ್ಷಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಈ ಅಧ್ಯಯನಗಳ ಮೂಲಕ ಪೂರಕ ಎನ್ನುವುದನ್ನು ಅರ್ಥೈಸಿಕೊಳ್ಳಲಾಗಿದೆ. ತನ್ಮೂಲಕ ಈ ಅಧ್ಯಯನ ಆ ಅಧ್ಯಯನಗಳಿಗಿಂತ ಭಿನ್ನ ಎನ್ನುವುದನ್ನು ನಿರೂಪಿಸಲಾಗಿದೆ.

ಅಧ್ಯಾಯ : ಮೂರು - ಕಾವ್ಯಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

ಪ್ರಸ್ತುತ ಅಧ್ಯಾಯದಲ್ಲಿ ಕನ್ನಡದಲ್ಲಿನ ಸಮಸ್ತ ಕಾವ್ಯಪ್ರಕಾರವನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಅದರಲ್ಲೂ ಪಂಥೀಯ ನೆಲೆಯಲ್ಲಿ ಸೂಕ್ಷ್ಮಾತಿಸೂಕ್ಷ್ಮ ನಿದರ್ಶನಗಳ ಮೂಲಕ ಸ್ಪಷ್ಟೀಕರಿಸಲು ಪ್ರಯತ್ನಿಸಲಾಗಿದೆ. ಆ ಮೂಲಕ ಕಾವ್ಯದ ಪ್ರತಿನಿಧೀಕರಣ ಸ್ವರೂಪವನ್ನು ಗುರುತಿಸಲಾಗಿದೆ.

ಅಧ್ಯಾಯ : ನಾಲ್ಕು - ಕಾದಂಬರಿಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

ಈ ಅಧ್ಯಾಯದಲ್ಲಿ ನವೋದಯದಿಂದ ದಲಿತ ಬಂಡಾಯದ ಕಾಲಘಟ್ಟದಲ್ಲಿನ ಕನ್ನಡ ಕಾದಂಬರಿಕಾರರು ಗಾಂಧೀಜಿಯಿಂದ ಮತ್ತು ಗಾಂಧಿವಾದದಿಂದ ಪ್ರಭಾವಗೊಂಡು ರಚಿಸಿದ ಕಾದಂಬರಿಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಆ ಮೂಲಕ ಕಾದಂಬರಿಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣದ ಬಗೆಯನ್ನು ಗುರುತಿಸಲಾಗಿದೆ.

ಅಧ್ಯಾಯ : ಐದು - ಸಣ್ಣ ಕಥೆಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

ಪ್ರಸ್ತುತ ಅಧ್ಯಾಯದಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಕಾಲಘಟ್ಟಗಳ ಸಣ್ಣ ಕಥೆಗಳಲ್ಲಿ ಸೂಕ್ಷ್ಮಾತಿಸೂಕ್ಷ್ಮ ನಿದರ್ಶನಗಳ ಮೂಲಕ ಗಾಂಧಿಯವರನ್ನು ಕಂಡರಿಸಿದ ಬಗೆಯನ್ನು ಸ್ಪಷ್ಟಪಡಿಸಲು ಪ್ರಯತ್ನಿಸಲಾಗಿದೆ. ಲಘುಬರಹ ಸ್ವರೂಪವನ್ನು ಹೊಂದಿರುವ ಸಣ್ಣಕಥೆಗಳು ಗಾಂಧಿಯವರನ್ನು ಮತ್ತು ಗಾಂಧಿಯ ವಿಚಾರಧಾರೆಗಳನ್ನು ಹಿಡಿದಿಡುವ ಪ್ರಯತ್ನ ಎಷ್ಟರಮಟ್ಟಿಗೆ ಸಾಧ್ಯವಾಗಿದೆ ಎಂಬುದನ್ನು ತಿಳಿಯಲು ಸಣ್ಣ ಕಥೆಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಅಧ್ಯಾಯ : ಆರು - ನಾಟಕಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

ಆಧುನಿಕ ಕನ್ನಡ ನಾಟಕಗಳಲ್ಲಿ ಅದರಲ್ಲೂ ಆಧುನಿಕ ಕನ್ನಡ ಸಾಹಿತ್ಯ ಕಾಲಘಟ್ಟಗಳಲ್ಲಿ ಗಾಂಧೀಜಿಯವರನ್ನು ಚಿತ್ರಿಸಿರುವ ಬಗೆಯನ್ನು ಕಂಡುಕೊಳ್ಳಲು ನಾಟಕಗಳನ್ನು ಅಧ್ಯಯನ ಮಾಡಲಾಗಿದೆ. ನಾಟಕ ಪ್ರದರ್ಶನ ಮಾಧ್ಯಮವಾಗಿದ್ದರಿಂದ ರಾಷ್ಟ್ರಪಿತ ಎನಿಸಿಕೊಂಡ ಗಾಂಧೀಜಿಯ ಚಿತ್ರಣ ಮೂಡಿಬಂದ ಕುತೂಹಲವನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ : ಏಳು - ಕನ್ನಡದಲ್ಲಿ ಗಾಂಧೀಜಿ ಕುರಿತ ಇತರ ಸಾಹಿತ್ಯ

ಏಳನೇ ಅಧ್ಯಾಯದಲ್ಲಿ ಕನ್ನಡ ಸೃಜನಶೀಲ ಸಾಹಿತ್ಯಗಳಾದ ಕಾವ್ಯ, ಕಾದಂಬರಿ, ಕಥೆ ಮತ್ತು ನಾಟಕಗಳು ಗಾಂಧೀಜಿಯವರನ್ನು ಕುರಿತು ರಚನೆಯಾದಂತೆ ಸೃಜನೇತರ ಸಾಹಿತ್ಯಗಳಾದ ಪ್ರಬಂಧ, ಲೇಖನ, ಭಾಷಣ, ಜೀವನಚರಿತ್ರೆ, ಅನುವಾದ ಮುಂತಾದವುಗಳಲ್ಲಿ ಗಾಂಧೀಜಿಯನ್ನು ಕುರಿತು ರಚಿಸಿರುವ ಕೃತಿಗಳನ್ನು, ಹಾಗೆಯೇ ಸೃಜನಶೀಲವಾದ ಶಿಶುಸಾಹಿತ್ಯವನ್ನು ಗಮನಿಸಲಾಗಿದೆ.

ಅಧ್ಯಾಯ : ಎಂಟು - ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿ : ತಾತ್ವಿಕ ಚಿಂತನೆ

ಈ ಅಧ್ಯಾಯದಲ್ಲಿ ಇಡೀ ಕನ್ನಡ ಸಾಹಿತ್ಯ ಗಾಂಧೀಜಿಯವರನ್ನು ಸ್ವೀಕರಿಸಿ ಪ್ರತಿಪಾದಿಸಿರುವುದನ್ನು ಐದು ಅಂಶಗಳನ್ನು ಗುರುತಿಸಿಕೊಂಡು ವಿವರಿಸಲಾಗಿದೆ ಮತ್ತು ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಕೊಡಲಾಗಿದೆ.

ಅನುಬಂಧ : ಕೊನೆಯಲ್ಲಿ ಸಂಶೋಧನೆಗೆ ಬಳಸಿಕೊಂಡ ಆಕರಗಳ ಸೂಚಿಯನ್ನು ನೀಡಲಾಗಿದೆ. ಕನ್ನಡದಲ್ಲಿ ಗಾಂಧೀಜಿಯವರ ಕುರಿತಾದ ಸೃಜನಶೀಲ ಸಾಹಿತ್ಯ ಸೂಚಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. ಇಡೀ ಕನ್ನಡ ಸಾಹಿತ್ಯದ ಮೇಲೆ ಗಾಂಧೀಜಿಯವರ ಪ್ರಭಾವ ಗಾಢವಾಗಿದ್ದು, ಅವರ ವ್ಯಕ್ತಿತ್ವ ಚಿಂತನೆಗಳು ಕನ್ನಡದ ಎಲ್ಲಾ ಪ್ರಕಾರಗಳಲ್ಲೂ ಕಾಣಬಹುದಾಗಿದೆ.

❖❖❖

ಅಧ್ಯಾಯ : ಎರಡು

ವಿಷಯ ಪ್ರವೇಶಿಕೆ ಮತ್ತು ಅಧ್ಯಯನ ಸಮೀಕ್ಷೆ

ಅಧ್ಯಾಯ : ಎರಡು

ವಿಷಯ ಪ್ರವೇಶಿಕೆ ಮತ್ತು ಅಧ್ಯಯನ ಸಮೀಕ್ಷೆ

೨.೧. ವಿಷಯ ಪ್ರವೇಶಿಕೆ

ಕನ್ನಡ ಸಾಹಿತ್ಯ ಪರಂಪರೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿದೆ. ಈ ಸುದೀರ್ಘ ಕಾಲದಲ್ಲಿ ಕನ್ನಡ ಸಾಹಿತ್ಯ ಆಯಾ ಕಾಲಘಟ್ಟಗಳಲ್ಲಿ ಸಮಕಾಲೀನ ಅಗತ್ಯಗಳಿಗೆ ಪೂರಕ ಮಾಧ್ಯಮವಾಗಿ ಕಾಣಿಸಿಕೊಂಡಿದೆ. ಹತ್ತನೆಯ ಶತಮಾನದಲ್ಲಿ ಆಗಮಿಕ ಮತ್ತು ಲೌಕಿಕ ಕಾವ್ಯ ಕೃತಿಗಳ ಮೂಲಕ ಧಾರ್ಮಿಕ ತತ್ವಗಳ ಪ್ರಸಾರಣೆ ಮತ್ತು ಸಮಕಾಲೀನ ಜನಜೀವನದ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಉದ್ದೇಶಗಳನ್ನು ನೆರವೇರಿಸಿದೆ. ಹನ್ನೆರಡನೆಯ ಶತಮಾನದ ವಚನಕಾರರು ಸಾಹಿತ್ಯವನ್ನು ಸಾಮಾಜಿಕ ಉದ್ದೇಶಗಳಿಗೆ ಬಳಸಿಕೊಳ್ಳುವ ಪ್ರಯತ್ನ ಮಾಡಿದರು. ನಂತರದ ಷಟ್ಪದಿ ಮತ್ತು ಕೀರ್ತನೆಕಾರರು ಜನಜೀವನದಲ್ಲಿ ಅನುಭಾವ ಸಾಹಿತ್ಯದ ಮಹತ್ವವನ್ನು ಸಾರಿ ಹೇಳಲು ಪ್ರಯತ್ನಿಸಿದರು.

ಆಧುನಿಕ ಕನ್ನಡ ಸಾಹಿತ್ಯವು ಇದಕ್ಕೆ ಪೂರಕವಾಗಿಯೇ ರೂಪುಗೊಂಡಿದೆ. ಆಧುನಿಕ ಜನಜೀವನದಲ್ಲಿ ಉಂಟಾದ ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಬೆಳವಣಿಗೆಗಳು ಮತ್ತು ಪ್ರಸಿದ್ಧ ಚಾರಿತ್ರಿಕ ವ್ಯಕ್ತಿಗಳ ಜೀವನ ಚರಿತ್ರೆಗಳು ಸಾಹಿತ್ಯ ಮಾಧ್ಯಮದ ಮೇಲೆ ವಿಶೇಷ ಪ್ರಭಾವವನ್ನುಂಟು ಮಾಡಿದವು. ಈ ಕಾಲದಲ್ಲಿ ಪಾಶ್ಚಾತ್ಯ ಸಾಹಿತ್ಯ ಸಂಪರ್ಕ ಭಾರತೀಯ ಭಾಷೆಗಳಿಗೆ ಒದಗಿಬಂದಿದ್ದರಿಂದ ಬೇರೊಂದು ಭಾಷೆಯ ಸಾಹಿತ್ಯ ಮತ್ತು ಅಲ್ಲಿನ ಸಂಸ್ಕೃತಿ ಪರಿಚಿತವಾದವು. ಈ ಕಾರಣದಿಂದಾಗಿ ಸಾಹಿತ್ಯದಲ್ಲಿ ಬರೀ ಸಾಹಿತ್ಯಿಕ ವಿಷಯಗಳು ಮಾತ್ರವಲ್ಲ, ಸಾಹಿತ್ಯೇತರ ವಿಷಯಗಳು ಸ್ಥಾನ ಪಡೆದವು. ಇದರಿಂದ ಸಾಹಿತ್ಯದ ವ್ಯಾಪ್ತಿಯೂ ತುಂಬಾ ವಿಸ್ತಾರವಾಯಿತು. ಕನ್ನಡದ ಮಟ್ಟಿಗೆ ಹೇಳುವುದಾದರೆ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯದ ಕಾಲಘಟ್ಟಗಳಲ್ಲಿ ಕನ್ನಡ ಸಾಹಿತ್ಯವು ಹಲವು ವಿಚಾರಧಾರೆಗಳ ಪ್ರಭಾವಕ್ಕೆ ಒಳಗಾಯಿತು. ಇತರ ಭಾರತೀಯ ಭಾಷಾ ಸಾಹಿತ್ಯದಲ್ಲಿ ನಡೆಯುತ್ತಿದ್ದ ವಿದ್ಯಮಾನಗಳು ಕನ್ನಡಕ್ಕೆ ಅನುವಾದದ ರೂಪದಲ್ಲಿ ಪ್ರವೇಶ ಪಡೆದವು. ಇದರಿಂದ ಸ್ವಾತಂತ್ರ್ಯ ಪೂರ್ವಕಾಲದ ಕನ್ನಡ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟ, ರಾಷ್ಟ್ರಾಭಿಮಾನ, ಭಾರತೀಯ ಸಂಸ್ಕೃತಿಯ ಪುನರುಜ್ಜೀವನ, ಸಾಮಾಜಿಕ

ಸುಧಾರಣೆ ಮುಂತಾದ ಅಂಶಗಳಿಗೆ ಎಡೆ ದೊರೆಯಿತು. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಇದಕ್ಕೆ ಭಿನ್ನವಾದ ಅಂಶಗಳನ್ನು ಗರ್ಭೀಕರಿಸಿಕೊಂಡಿದೆ. ಸ್ವಾತಂತ್ರ್ಯ ದೊರೆತ ಮೇಲೆ ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷಗಳು ಮತ್ತು ನಾಯಕರು ಎಂತಹ ಸ್ವಾರ್ಥಿಗಳಾಗಿ ದೇಶದ ಸಂಪತ್ತನ್ನೆಲ್ಲಾ ಕೊಳ್ಳೆ ಹೊಡೆದು ದೇಶವನ್ನು ಇನ್ನಷ್ಟು ಪ್ರಪಾತಕ್ಕೆ ತಳ್ಳುವ ಪ್ರಯತ್ನ ಮಾಡಿದರು ಎಂಬುದು ಪ್ರಧಾನವಾಗಿ ಸಾಹಿತ್ಯದಲ್ಲಿ ಬಿಂಬಿಸಲಾಗಿದೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟಗಳಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಹಿತ್ಯ ಇತ್ಯಾದಿ ಮುಂತಾದ ಕ್ಷೇತ್ರಗಳಲ್ಲಿ ಗಾಂಧೀಜಿ ಪ್ರಭಾವಿಸಿದಷ್ಟು ಮತ್ಯಾವ ವ್ಯಕ್ತಿಯು ಪ್ರಭಾವಿಸಿಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಕನ್ನಡ ಸಾಹಿತ್ಯದ ಮೇಲಾದ ಗಾಂಧೀಜಿಯ ಪ್ರಭಾವದ ವಿಚಾರವಾಗಿ ಎಂ. ಯಮುನಾಚಾರ್ಯರು ಹೀಗೆ ಬರೆಯುತ್ತಾರೆ. "ಬಡವರ, ನತದೃಷ್ಟರ, ಹಿಂದುಳಿದವರ, ಅಸಡ್ಡೆಗೊಳಗಾದವರ ಹಾಗೂ ತಿರಸ್ಕೃತರ ಬಗೆಗೆ ಮಾನವೀಯ ಅನುಕಂಪೆಯೆ ಇಂದಿನ ಕನ್ನಡ ಸಾಹಿತ್ಯದ ಪ್ರಧಾನ ಲಕ್ಷಣವಾಗಿದೆ. ಶ್ರೀಮಂತ ಸಮಾಜದಿಂದ ದೀನದಲಿತ ಸಮಾಜದ ಕಡೆ ಹೀಗೆ ಆಸಕ್ತಿ ಬದಲಾದುದಕ್ಕೆ ಕಾರಣವನ್ನು ನೇರವಾಗಿ ಇಲ್ಲವೆ ಪರೋಕ್ಷವಾಗಿ ಗಾಂಧೀಜಿಯವರ ವಿಚಾರಧಾರೆಯ ಪ್ರಭಾವದಲ್ಲಿ ಕಾಣಬಹುದು"(ಹಾ.ಮಾ.ನಾಯಕ (ಸಂ); ೧೯೭೧; ಪು. ೧೨).

"ಅಲಂಕಾರಿಕತೆ ಅಥವಾ ಅಗಾಧತೆ ಮತ್ತು ಕಾಲಾತ್ಮಕತೆ ಇವುಗಳಿಂದ ಸರಳತೆ, ಸ್ಪಷ್ಟತೆ ಹಾಗೂ ಪರಿಣಾಮಕತೆ ಇವುಗಳ ಮೇಲೆ ಒತ್ತು ಹೆಚ್ಚಾಯಿತು; ಇದು ಪ್ರಾದೇಶಿಕ ಭಾಷೆಗಳ ಬರವಣಿಗೆಯಂತೆಯೇ ಇಂಗ್ಲಿಷ್ ಬರವಣಿಗೆಯಲ್ಲಿಯೂ ಕಾಣಿಸಿಕೊಂಡಿತು. ವಸ್ತುವಿನ ಆಯ್ಕೆ ಪಾತ್ರಚಿತ್ರಣ ಇವುಗಳ ಮೇಲೂ ಗಾಂಧೀಜಿಯವರ ಪ್ರಭಾವ ಕಡಿಮೆಯಾದುದೇನಲ್ಲ" (ಹಾ.ಮಾ.ನಾಯಕ (ಸಂ); ೧೯೭೧; ಪು. ೧೨). ಎಂದು ರಾಜಕೀಯದಲ್ಲಿ ಕಾಣಿಸಿಕೊಂಡ ಗಾಂಧೀಜಿಯವರ ಕ್ರಾಂತಿಕಾರಿ ಪ್ರಭಾವ ಹೇಗೆ ಸಾಹಿತ್ಯದಲ್ಲಿಯೂ ಕಾಣಿಸಿಕೊಂಡಿತೆಂಬುದನ್ನು ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಅವರು ವ್ಯಕ್ತಪಡಿಸಿದ್ದಾರೆ.

"ಯಾವ ಕನ್ನಡದ ಲೇಖಕನೂ ಈ ತನಕ ಗಾಂಧಿಯುಗವನ್ನು ದೊಡ್ಡ ರೀತಿಯಲ್ಲಿ ಶೋಧಿಸಲು ಬೇಕಾದ ಸೂಕ್ಷ್ಮತೆಯನ್ನು ತೋರಿಸಿಲ್ಲವೆಂಬುದು ಬಹುಮುಖ್ಯ ಪ್ರಶ್ನೆ. ಪ್ರಾಯಶಃ ನಮ್ಮ ಸಾಹಿತಿಗಳ ಜೀವನದ ದೃಷ್ಟಿ - ಅವರನ್ನು ಅತಿ ಮೃದುವಾಗಿ ಮಾಡುತ್ತದೆ; ನೈತಿಕ ಸಮಸ್ಯೆಯೊಂದನ್ನು ತುದಿ ಮುಟ್ಟಿ ನೋಡದಂತೆ ಅವರ ದಾರ್ಶನಿಕತೆಯನ್ನು ಮಂಕಾಗಿಸುತ್ತದೆ ಅಥವಾ ನಾವೆಲ್ಲರೂ ಭಾರತೀಯರಿಗೆ ಸಹಜವಾದ ಆತ್ಮವಂಚನೆಯಲ್ಲಿ ಗಾಂಧಿವಾದವನ್ನು 'ಪೂಜ್ಯ'ವೆಂದು ಕಾಣುವುದರ ಮೂಲಕ ಈ ವಾದದ ಶೋಧನೆಯಿಂದ ಜಾರಿಕೊಳ್ಳುತ್ತಿದ್ದೇವೆ" (ದಂಡಪ್ಪ ಎಚ್. ಮತ್ತು ಇತರರು(ಸಂ); ೨೦೦೬; ಪು. ೩೨೭) ಎಂದು ಯು.ಆರ್. ಅನಂತಮೂರ್ತಿ ಅವರು ಕನ್ನಡ ಸಾಹಿತಿಗಳು ಗಾಂಧೀವಾದವನ್ನು ಅನುಸಂಧಾನಗೊಳಿಸಿದ ಬಗೆಗೆ ಅಭಿಪ್ರಾಯಿಸಿದ್ದಾರೆ.

"ಮುಖ್ಯವಾಗಿ ಗಾಂಧೀಜಿಯವರ ವ್ಯಕ್ತಿತ್ವದ ಆಕರ್ಷಣೆಯ ಮತ್ತು ಭಾರತದಲ್ಲಿನ ವಿಶೇಷ ಪರಿಸ್ಥಿತಿಗಳ ಫಲವಾಗಿ, ಗಾಂಧಿಯವರ ಪ್ರಭಾವ ಅವರ ನಾಡಿನ ಲೇಖಕರಿಗೆ ಸೀಮಿತವಾಯಿತು" (ಹಾ.ಮಾ.ನಾಯಕ (ಸಂ); ೧೯೭೧; ಪು. ೧೨-೧೩) ಎಂಬುದಾಗಿ ಕೃಷ್ಣ ಕೃಪಲಾನಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಗಾಂಧಿಯುಗದ ಲೇಖಕರುಗಳು ಆ ಕಾಲಕ್ಕೆ ಸ್ಪಂದಿಸಿದ ಬಗೆಯಾಗಿ, ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಬದಲಾದ ಸನ್ನಿವೇಶವನ್ನು, ಗಾಂಧಿ ಪ್ರಭಾವವನ್ನು ಸರಿದೂಗಿಸುವ ಜಾಣ್ಮೆಯಾಗಿ ಸಾಹಿತ್ಯದಲ್ಲಿ ಗಾಂಧೀಜಿಯವರನ್ನು ಹೇಗೆ ಅಭಿವ್ಯಕ್ತಿಸಲಾಗಿದೆ ಎಂಬುದನ್ನು ಕುರಿತು ಅಧ್ಯಯನಕ್ರಮ ರೂಪಗೊಂಡಿದೆ. ಹಾಗಾಗಿ ಗಾಂಧೀಜಿ ಸಾಹಿತ್ಯದಲ್ಲಿ ಹೇಗೆ ಚಿತ್ರಿತವಾಗಿದ್ದಾರೆ ಎಂಬುದು ಈ ಅಧ್ಯಯನದಲ್ಲಿ ನಿರೂಪಿಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿಯವರನ್ನು ಕುರಿತು ಅಸಂಖ್ಯಾತ ಕವಿತೆಗಳಿವೆ. ಕಥೆ, ಕಾದಂಬರಿ, ನಾಟಕಗಳಲ್ಲಿಯೂ ಹೇರಳವಾಗಿಯಲ್ಲದಿದ್ದರೂ ಕಡಿಮೆಯೇನಿಲ್ಲ.

ಭಾರತದ ಇತರ ಭಾಷಾ ಸಾಹಿತ್ಯಗಳು ಗಾಂಧೀಜಿಯವರನ್ನು ಸ್ವೀಕರಿಸಿದಂತೆಯೇ ಕನ್ನಡ ಸಾಹಿತ್ಯದಲ್ಲಿಯೂ ಗಾಂಧೀಜಿಯವರನ್ನು ಸ್ವೀಕರಿಸಿ ಅಭಿವ್ಯಕ್ತಿಸಲಾಗಿದೆ. ಯಾಕೆ ಗಾಂಧೀಜಿಯವರನ್ನು ಇಷ್ಟೊಂದು ಬಗೆಯಾಗಿ ಕನ್ನಡ ಸಾಹಿತ್ಯ ಸ್ವೀಕರಿಸಿದೆ. ಯಾಕಾಗಿ ಅವರನ್ನು ಕನ್ನಡ ಲೇಖಕರು ತಮ್ಮ ಕೃತಿಗಳಲ್ಲಿ ಚಿತ್ರಿಸಲು ಹೊರಟಿದ್ದಾರೆ ಎಂಬುದನ್ನು ಮತ್ತು ಇಷ್ಟು ಪ್ರಮಾಣದಲ್ಲಿ ಗಾಂಧೀಜಿಯವರನ್ನು ಕುರಿತ ಕೃತಿಗಳು ರಚನೆಗೊಳ್ಳುತ್ತಿವೆ ಎಂಬ ಕುತೂಹಲ ಸನ್ನಿವೇಶದಲ್ಲಿ ಈ ಅಧ್ಯಯನ ಸಾಗಿದೆ.

೨.೨. ಅಧ್ಯಯನದ ಸಮೀಕ್ಷೆ

ಗಾಂಧೀಜಿಯವರನ್ನು ಕುರಿತಂತೆ ಈವರೆಗೆ ಸಾಕಷ್ಟು ಅಧ್ಯಯನಗಳಾಗಿವೆ. ಡಾ. ಎಚ್.ಪಿ. ಹಾಲೊಳ್ಳಿ ಅವರ 'ಆಧುನಿಕ ಕನ್ನಡ ಕಾವ್ಯ ಮತ್ತು ಗಾಂಧಿವಾದ' ಎಂಬ(ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಕೃತಿಯಲ್ಲಿ ಆಧುನಿಕ ಕನ್ನಡ ಸಾಹಿತ್ಯದ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ - ಬಂಡಾಯ ಕಾಲಘಟ್ಟದ ಪ್ರಮುಖ ಕವಿಗಳ ಕಾವ್ಯಗಳಲ್ಲಿ ಗಾಂಧೀವಾದವನ್ನು ಗುರುತಿಸಿ ವಿಶ್ಲೇಷಿಸಲಾಗಿದೆ.

ಮೂಡಲಗಿರಿಯಯ್ಯರವರ "ಕನ್ನಡ ಕಾದಂಬರಿಗಳಲ್ಲಿ ಗಾಂಧೀವಾದದ ಪ್ರೇರಣೆ(ಪಿಎಚ್.ಡಿ. ಮಹಾಪ್ರಬಂಧ)" ಎಂಬ ಕೃತಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀವಾದದ ವಿಚಾರಗಳು ಭಿನ್ನನೆಲೆಯಲ್ಲಿ ನಿರೂಪಿತವಾಗಿರುವುದನ್ನು ಮತ್ತು ಸ್ವಾತಂತ್ರ್ಯ ಹೋರಾಟದ ಆಶೋತ್ತರಗಳು, ಸಾಮಾಜಿಕ ಸುಧಾರಣಾವಾದಿ ನೆಲೆಗಳು ಫಲಿತಗೊಂಡಿರುವುದನ್ನು ಹಾಗೂ ಗಾಂಧೀವಾದವು ಕಾದಂಬರಿ ಕ್ಷೇತ್ರದಲ್ಲಿ ತಾತ್ವಿಕ ನೆಲೆಗಟ್ಟನ್ನು ನಿರೂಪಿಸಿರುವುದನ್ನು ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಗಾಂಧಿಯ ಆದರ್ಶವಾದ ತತ್ವ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ತಾತ್ಸಾರಕ್ಕೆ ಗುರಿಯಾಗಲು ಕಾರಣವೇನು ಎಂಬುದನ್ನು ಸೈದ್ಧಾಂತಿಕ

ಚೌಕಟ್ಟಿನಲ್ಲಿ ಚರ್ಚಿಸಲಾಗಿದೆ. ಗಾಂಧೀವಾದವು ರಾಜಕೀಯ ತತ್ವವಾಗಿ ರಾಷ್ಟ್ರೀಯತೆಯ ಪರಿಕಲ್ಪನೆಯ ಮೂಲಕ ವಸಾಹತುಶಾಹಿ ಪ್ರಭುತ್ವಕ್ಕೆ ಪ್ರತಿರೋಧದ ನೆಲೆಯನ್ನು ದೇಶೀಯ ನೆಲೆಗಟ್ಟಿನಲ್ಲಿ ರೂಪುಗೊಂಡಿರುವುದನ್ನು ತಾತ್ವಿಕವಾಗಿ ಚರ್ಚಿಸಲಾಗಿದೆ.

ಮೂಡಲಗಿರಿಯಯ್ಯ ಅವರ 'ಕನ್ನಡ ಕಾದಂಬರಿಗಳ ಮೇಲೆ ಗಾಂಧಿವಾದದ ಪ್ರಭಾವ' (ಎಂ.ಫಿಲ್. ಸಂಪ್ರಬಂಧ) ಎಂಬ ಕೃತಿಯಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟದ ಕಾದಂಬರಿಗಳು ಗಾಂಧೀವಾದಕ್ಕೆ ಪ್ರತಿಕ್ರಿಯಿಸಿರುವುದನ್ನು ಪರಿಕಲ್ಪನಾತ್ಮಕ ದೃಷ್ಟಿಕೋನ ದಿಂದ ವಿವರಿಸಲಾಗಿದೆ.

ಶ್ರೀಮತಿ ಜ್ಯೋತಿ ರೈ ಅವರ 'ಕನ್ನಡ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳವಳಿ'(ಪಿಎಚ್.ಡಿ. ಮಹಾಪ್ರಬಂಧ) ಎಂಬ ಕೃತಿಯಲ್ಲಿ ಕನ್ನಡ ಸಾಹಿತಿಗಳು ತಮ್ಮ ಕಾದಂಬರಿಗಳ ಮೂಲಕ ಸ್ವಾತಂತ್ರ್ಯ ಚಳವಳಿಗೆ ಸ್ಪಂದಿಸಿರುವುದನ್ನು ಚರ್ಚಿಸಲಾಗಿದೆ. ಕನ್ನಡ ಕಾದಂಬರಿಗಳಲ್ಲಿ ಕಂಡು ಬಂದ ಗಾಂಧಿ ಕುರಿತಾದ ಪರ-ವಿರೋಧ ವಿಚಾರಗಳನ್ನು ವಿಶ್ಲೇಷಿಸಲಾಗಿದೆ.

ಪಿ.ಸಿ. ದಮಯಂತಿ ಅವರ 'ನಾಗವೇಣಿಯವರ 'ಗಾಂಧಿ ಬಂದ ಕಾದಂಬರಿ : ಸಾಂಸ್ಕೃತಿಕ ಒಳನೋಟಗಳು'(ಎಂ.ಫಿಲ್. ಸಂಪ್ರಬಂಧ) ಎಂಬ ಕೃತಿಯಲ್ಲಿ ಗಾಂಧಿ ಮೌಲ್ಯವು ಶೂದ್ರ ಜನಾಂಗದಲ್ಲಿ ದಾಖಲಾದ ರೀತಿ ಸ್ವರೂಪವನ್ನು ವಿವರಿಸಲಾಗಿದೆ. ಕಾದಂಬರಿಯಲ್ಲಿ ಮೂಡಿಬಂದ ಗಾಂಧಿಯ ಸಾಂಕೇತಿಕತೆಯನ್ನು ತಾತ್ವಿಕವಾಗಿ ವಿಶ್ಲೇಷಣೆ ಮಾಡಲಾಗಿದೆ.

ಡಾ. ಹಾ.ಮಾ. ನಾಯಕ ಅವರು ಸಂಪಾದಿಸಿದ 'ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ' ಎಂಬ ಕೃತಿಯಲ್ಲಿ ಒಟ್ಟು ಭಾರತೀಯ ಭಾಷಾ ಸಾಹಿತ್ಯಗಳ ಮೇಲೆ ಗಾಂಧೀಜಿಯವರ ವ್ಯಕ್ತಿತ್ವ ಮತ್ತು ತತ್ವ ಚಿಂತನೆಗಳ ಪ್ರಭಾವವನ್ನು ಗುರುತಿಸಲಾಗಿದೆ.

ಡಾ. ಟಿ. ಪದ್ಮ ಅವರು ಸಂಪಾದಿಸಿದ "ನಮ್ಮ ಸುತ್ತಣ ಗಾಂಧಿವಾದಿಗಳು' ಎಂಬ ಕೃತಿ ಪ್ರಸ್ತುತ ಸನ್ನಿವೇಶದಲ್ಲಿ ಗಾಂಧೀಜಿಯವರು ಎಷ್ಟು ಮಹತ್ವದ ಮೌಲ್ಯವಾಗಿ ಹೊರಹೊಮ್ಮುತ್ತಾರೆ ಎಂಬುದನ್ನು ಮತ್ತು ಈ ಹಿನ್ನೆಲೆಯಲ್ಲಿ ಗಾಂಧಿ ತತ್ವವನ್ನು ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ತಾವು ನಿಂತ ನೆಲದಿಂದ ಹಾಗೂ ನೆಲದಲ್ಲೇ ಅರ್ಥಪೂರ್ಣ ಗೊಳಿಸಿದವರ ಬಗ್ಗೆ ವಿವರಿಸುತ್ತದೆ.

ಡಾ. ಯು.ಆರ್. ಅನಂತಮೂರ್ತಿಯವರು 'ಕನ್ನಡ ಸಾಹಿತ್ಯ ಮತ್ತು ಗಾಂಧಿವಾದ' ಎಂಬ ಲೇಖನದಲ್ಲಿ ಕನ್ನಡ ಲೇಖಕರು ಗಾಂಧಿಯವರ ದೈವಿಕ ವ್ಯಕ್ತಿತ್ವಕ್ಕೆ ತಲೆಬಾಗುತ್ತಾರೆ. ಆದರೆ ತಮ್ಮ ಕಲಾಕೃತಿಗಳಲ್ಲಿ ಗಾಂಧಿತತ್ವಗಳನ್ನು ಶೋಧನೆಗೆ ಒಳಪಡಿಸುವುದಿಲ್ಲ. ಉಕ್ಕಿ ಹರಿಯುವ ಇವರ ಭಾವುಕತೆಗೆ ಸಾಮಾಜಿಕ ಮೌಲ್ಯಗಳಾದ ಆಚಾರ ಮತ್ತು ಶೀಲಗಳ ಮೇಲೆ ಘಾತ ಬೀಳುವ ಗಾಂಧೀಜಿಯವರ ಜೀವನದೃಷ್ಟಿ ಇಕ್ಕಟ್ಟಿನದಾಗಿ ಕಾಣುತ್ತದೆ. ಹಾಗಾಗಿ ನವೋದಯ ಲೇಖಕರ ಭಾವುಕತೆ ಗಾಂಧಿವಾದದ ನಿಷ್ಠುರತೆಯಿಂದ ವಂಚಿತವಾಗದೆ, ಹೊರಗುಳಿಯದೆ ವಿಧಿಯಿರಲಿಲ್ಲವೆಂದು ವಾದಿಸಿದ್ದಾರೆ.

ಹರಿಹರ ಪ್ರಿಯ ಅವರು 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಾತ್ಮಾ ಗಾಂಧಿ ವಿಚಾರಗಳು' ಎಂಬ ಲೇಖನದಲ್ಲಿ ನೇರವಾಗಿ ಮತ್ತು ಪ್ರಾತಿನಿಧಿಕವಾಗಿ ಗಾಂಧಿ ವಿಚಾರಗಳ ಪ್ರಭಾವ ಕನ್ನಡ ಸೃಜನಶೀಲತೆಯ ಮೇಲೆ ಉಂಟುಮಾಡಿದ ಪ್ರತಿಕ್ರಿಯೆಯನ್ನು ವಿವರಿಸಿದ್ದಾರೆ.

ಸಿದ್ದವನಹಳ್ಳಿ ಕೃಷ್ಣಶರ್ಮ ಅವರ 'ಪರ್ಣಕುಟಿ' ಕೃತಿಯು ಗಾಂಧೀಜಿಯವರ ಜೀವನದ ಅಂತಃಸ್ಸತ್ವವನ್ನು ತಿಳಿಸಿಕೊಡುತ್ತದೆ ಮತ್ತು ಗಾಂಧೀ ವಿಚಾರಗಳನ್ನು ವಿಮರ್ಶೆ ಮಾಡುತ್ತದೆ.

ಪ್ರೊ. ಎನ್. ಕೃಷ್ಣಸ್ವಾಮಿ ಅವರ 'ಮಹಾತ್ಮ' ಕೃತಿಯಲ್ಲಿ ಗಾಂಧೀಜಿಯ ಜೀವನ ಸ್ವಾರಸ್ಯವಾದ, ಬೋಧಪ್ರದವಾದ, ಬಹು ಅಮೂಲ್ಯದ ನೂರಾರು ಘಟನಾವಳಿಗಳನ್ನು ವಿವರಿಸಲಾಗಿದೆ.

ಪದ್ಮಶ್ರೀ ಅವರು ಸಂಗ್ರಹಿಸಿದ 'ಇಂತಿ..... ನಿನ್ನ ಬಾಪು' ಎಂಬ ಕೃತಿಯಲ್ಲಿ ಗಾಂಧೀಜಿಯ ಪತ್ರಗಳು ವರ್ತಮಾನದ ಜೀವನ ಒತ್ತಡಗಳಿಂದ ಸಮಾಧಾನ ನೀಡುತ್ತವೆ ಎಂಬುದನ್ನು ವಿಷದಪಡಿಸಿದ್ದಾರೆ. ಗಾಂಧೀಜಿಯ ಪತ್ರಗಳಿಗೆ ಕಾಲಾತೀತ ಮತ್ತು ಕಲಾತ್ಮಕ ಮೌಲ್ಯವಿರುವುದರಿಂದ ಉದ್ದೇಶಪೂರ್ವಕವಾಗಿಯೇ ಪತ್ರಗಳನ್ನು ಸಂದರ್ಭಗಳಿಂದ ಹೊರಗಿಟ್ಟು ನೋಡಲಾಗಿದೆ. ಈ ಪತ್ರಗಳನ್ನು ಗಾಂಧೀಜಿ ಯಾವಾಗ, ಯಾರಿಗೆ ಬರೆದರು ಎನ್ನುವುದನ್ನು ಪರಿಗಣಿಸದೆ ಇಲ್ಲಿಯ ಕಾಳಜಿಗಳು ಮುಖ್ಯವೆಂದು ಪರಿಗಣಿಸಿ ಸಂಗ್ರಹಿಸಲಾಗಿದೆ.

ಸಿದ್ದವನಹಳ್ಳಿ ಕೃಷ್ಣಶರ್ಮ ಅವರು ಸಂಪಾದಿಸಿದ 'ಗಾಂಧೀ ಮತ್ತು ಕರ್ನಾಟಕ' ಎಂಬ ಕೃತಿಯಲ್ಲಿ ಕರ್ನಾಟಕದ ವಾಙ್ಮಯದ ಮೇಲೆ ಗಾಂಧೀ ವಿಚಾರಧಾರೆ ಪರಿಣಾಮ ಮಾಡಿದ್ದನ್ನು ವಿವರಿಸಲಾಗಿದೆ.

ಡಾ. ರಾಜಶೇಖರ ಮಠಪತಿ ಅವರ 'ಗಾಂಧಿ: ಅಂತಿಮ ದಿನಗಳು' ಗಾಂಧಿಯನ್ನು ಬದುಕಿನ ಒಂದು ಘಟ್ಟಕ್ಕೆ ಸೀಮಿತಗೊಳಿಸಿಕೊಂಡು ಮರುಓದು ನಡೆಸಿದ ಕೃತಿಯಾಗಿದೆ. ಗಾಂಧಿ ತಮ್ಮ ಬಾಳಿನಲ್ಲಿ ಕ್ರಿಯಾಶೀಲವಾಗಿದ್ದ ರೀತಿಯನ್ನು ತಿಳಿದುಕೊಳ್ಳುವ ಕುತೂಹಲಕ್ಕಾಗಿ ಮಠಪತಿ ಈ ಕೃತಿ ರಚಿಸಿದ್ದಾರೆ.

ಕೋ. ಚೆನ್ನಬಸಪ್ಪ ಅವರ 'ಗಾಂಧಿ ಕಗ್ಗೊಲೆ ಕಾರಣ - ಪರಿಣಾಮ' ಎಂಬ ಕೃತಿಯಲ್ಲಿ ಗಾಂಧೀಜಿಯ ಹತ್ಯೆಯ ಆರೋಪದ ಮೇಲೆ ನಾಥೂರಾಮ ಗೋಡ್ಸೆ ಗಲ್ಲು ಶಿಕ್ಷೆಗೆ ಗುರಿಯಾದುದನ್ನು ಮತ್ತು ಇದೇ ಆರೋಪದ ಮೇಲೆ ವಿನಾಯಕ ದಾಮೋದರ ಸಾವರಕರರು ಹೇಗೆ ತಪ್ಪಿಸಿಕೊಂಡರು ಎಂಬುದನ್ನು ವಿವರಿಸಲಾಗಿದೆ.

ಜಗದೀಶ್ ಕೆರೆನಳ್ಳಿ ಅವರ 'ಹೆಜ್ಜೆ ಮತ್ತು ಗಾಂಧಿ ಬಂದ ಕಾದಂಬರಿಗಳ ಅಧ್ಯಯನ' ಎಂಬ (ಎಂ.ಫಿಲ್. ಸಂಪ್ರಬಂಧ) ಕೃತಿಯು ೪೦ರ ದಶಕದಲ್ಲಿ ಸ್ವಾತಂತ್ರ್ಯಾಂದೋಲನದ ಸಂದರ್ಭದಲ್ಲಿ ಗಾಂಧೀಜಿ ಮಲೆನಾಡಿಗೆ ಜನಜಾಗೃತಿಗಾಗಿ ಬಂದಾಗ ಆ ನಾಡಿನಲ್ಲಿ ಗಾಂಧೀಜಿಯ ಪ್ರಭಾವದಿಂದ ಜನರಲ್ಲಿ ಮೂಡಿದ ಸ್ವಾತಂತ್ರ್ಯದ ಕನಸು, ಅದರಿಂದ ಉಂಟಾದ ಪರಿಣಾಮಗಳನ್ನು

ಗುರುತಿಸುತ್ತದೆ. ಗಾಂಧೀಜಿಯ ಪ್ರಭಾವದಿಂದ ಎಲ್ಲ ಜಾತಿ, ವರ್ಗ, ಸಮುದಾಯಗಳಲ್ಲಿ ಆದ ಪರಿವರ್ತನೆಗಳನ್ನು ಸ್ಪಷ್ಟಪಡಿಸಲಾಗಿದೆ.

ವೀಣಾಕುಮಾರ್ ಅವರ 'ಗಾಂಧಿ ಬಂದ' ಕಾದಂಬರಿಯ ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ (ಎಂ.ಫಿಲ್. ಸಂಪ್ರಬಂಧ) ಕೃತಿಯಲ್ಲಿ ಎಚ್. ನಾಗವೇಣಿ ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಖಚಿತಪಡಿಸಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಅವರ ಸಾಹಿತ್ಯದ ಮಹತ್ವವನ್ನು ವಿವರಿಸಲಾಗಿದೆ. ಗಾಂಧಿ ಬಂದ ಕಾದಂಬರಿಯಲ್ಲಿ ಮಾತೃಪ್ರಧಾನ ಕುಟುಂಬ, ಸ್ತ್ರೀ ಸ್ಥಾನಮಾನ, ಜಾತಿ-ಪದ್ಧತಿ, ಪರಿಸರ ಹಾಗೂ ಮನುಷ್ಯ ಸಂಬಂಧಗಳು ಹೇಗೆ ಪೂರಕವಾಗಿವೆ ಹಾಗೂ ಅವುಗಳ ಪರಿಣಾಮಗಳೇನು ಎಂಬುದನ್ನು ವಿಶ್ಲೇಷಣೆ ಮಾಡಲಾಗಿದೆ.

ಅನ್ನಪೂರ್ಣ ಮಲ್ಲಪ್ಪ ಕಂಬಾರ ಅವರ 'ಗಾಂಧಿ ಮೂಲಕತೆ' ಮತ್ತು 'ನಾನು ಗಾಂಧಿ' ಸಿನಿಮಾ: ತೌಲನಿಕ ವಿವೇಚನೆ' (ಎಂ.ಫಿಲ್. ಸಂಪ್ರಬಂಧ) ಎಂಬ ಈ ಕೃತಿಯಲ್ಲಿ ಡಾ. ಬೆಸಗರಹಳ್ಳಿ ರಾಮಣ್ಣರವರ 'ಗಾಂಧಿ' ಕತೆಯನ್ನು ಆಧರಿಸಿ ರೂಪುಗೊಂಡಿರುವ 'ನಾನು ಗಾಂಧಿ' ಸಿನಿಮಾವನ್ನು ಕೇಂದ್ರೀಕರಿಸಿ ಸಂಶೋಧನೆ ಮಾಡಲಾಗಿದೆ. ಈ ಚಿತ್ರವು ಹಲವು ವೈಶಿಷ್ಟ್ಯತೆಗಳೊಂದಿಗೆ ದೇಶ ವಿದೇಶಗಳಲ್ಲಿ ೩೦ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡು, ಇಂದಿನ ಶಿಕ್ಷಣ ಪದ್ಧತಿ ಮತ್ತು ಜಾಗತೀಕರಣದ ಪ್ರಭಾವದಿಂದ ಉದಯಿಸಿದ ಆಧುನಿಕತೆಯ ಎದುರಿನಲ್ಲಿ ದೇಸಿಯ ಜ್ಞಾನ ಹೇಗೆ ತಲ್ಲಣಗೊಳ್ಳುತ್ತಿದೆ ಎಂಬುದನ್ನು ಈ ಕೃತಿ ವಿವರಿಸುತ್ತದೆ.

ಗಂಗಾಧರ ಅವರ 'ಎಂ. ವಿಶ್ವೇಶ್ವರಯ್ಯ ಮತ್ತು ಗಾಂಧಿ'(ಚಿಂತನೆಗಳ ತೌಲನಿಕ ಅಧ್ಯಯನ) ಎಂಬ(ಎಂ.ಫಿಲ್. ಸಂಪ್ರಬಂಧ) ಕೃತಿಯಲ್ಲಿ ಶೀರ್ಷಿಕೆಯಂತೆ ಎಂ. ವಿಶ್ವೇಶ್ವರಯ್ಯ ಮತ್ತು ಗಾಂಧೀಜಿ ಅವರ ಚಿಂತನೆ ಹಾಗೂ ಚಟುವಟಿಕೆಗಳನ್ನು ಕುರಿತು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ಈ ಇಬ್ಬರ ಚಿಂತನೆಗಳು ಸಮಕಾಲೀನ ಸಂದರ್ಭಕ್ಕೆ ಹೇಗೆ ಪ್ರಸ್ತುತ ಎಂಬುದನ್ನು ವಿವರಿಸಲಾಗಿದೆ. ವಿಶ್ವೇಶ್ವರಯ್ಯ ಮತ್ತು ಗಾಂಧೀಜಿ ಭಾರತದ ಮುಕ್ತತೆಯ ವಿಚಾರದಲ್ಲಿ ರಾಷ್ಟ್ರೀಯತೆಯನ್ನು ಅಭಿವ್ಯಕ್ತಿಸುವ ದಿಸೆಯಲ್ಲಿ ನಡೆಸಿದ ಆಲೋಚನೆಗಳನ್ನು ತೌಲನಿಕವಾಗಿ ವಿವೇಚಿಸಲಾಗಿದೆ.

ಎಚ್.ವೈ. ರಾಜಗೋಪಾಲ್ ಅವರ 'ಗಾಂಧಿಯುಗಕ್ಕೆ ಕನ್ನಡಿ' ಎಂಬ ಲೇಖನದಲ್ಲಿ ಎಚ್. ನಾಗವೇಣಿಯವರ 'ಗಾಂಧಿ ಬಂದ' ಮತ್ತು ವ್ಯಾಸರಾಯ ಬಲ್ಲಾಳರ 'ಹೆಜ್ಜೆ...' ಕಾದಂಬರಿಗಳ ಸಮೀಕ್ಷೆ ಮಾಡಲಾಗಿದೆ. ಈ ಎರಡೂ ಕಾದಂಬರಿಗಳ ಕಾಲಪ್ರಕಾರ, ವಸ್ತು, ತಂತ್ರ ವಿಶೇಷತೆಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಹೀಗೆ ಗಾಂಧೀಜಿಯವರನ್ನು ಕುರಿತಂತೆ ಹಲವು ಅಧ್ಯಯನಗಳಾಗಿರುವುದನ್ನು ಕಾಣಬಹುದು. ಆದರೆ ಸಮಗ್ರವಾಗಿ ಗಾಂಧೀಜಿಯನ್ನು ಕುರಿತಂತೆ, ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿಯ ಪ್ರತಿನಿಧೀಕರಣ ಎಂದು ನಿರ್ದಿಷ್ಟವಾಗಿ ಅಧ್ಯಯನಗಳಾಗಿಲ್ಲದೆ ಇರುವುದರಿಂದ ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

❖❖❖

ಅಧ್ಯಾಯ : ಮೂರು

ಕಾವ್ಯಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

೩.೧. ನವೋದಯ ಕಾವ್ಯ

೩.೨. ಪ್ರಗತಿಶೀಲ ಕಾವ್ಯ

೩.೩. ನವ್ಯ ಕಾವ್ಯ

೩.೪. ದಲಿತ-ಬಂಡಾಯ ಕಾವ್ಯ

೩.೫. ಮಹಿಳೆಯರ ಕಾವ್ಯ

ಅಧ್ಯಾಯ : ಮೂರು

ಕಾವ್ಯಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

ಸ್ವಾತಂತ್ರ್ಯಪೂರ್ವದ ಕಾಲಘಟ್ಟ ಪ್ರಮುಖವಾಗಿ ಸ್ವಾತಂತ್ರ್ಯೋತ್ಸಾಹದ ಕಾಲ. ಆ ಅವಧಿಯಲ್ಲಿ ಬರೆದ ಯಾರೇ ಲೇಖಕರಾಗಲಿ ಅವರು ರಾಷ್ಟ್ರೀಯ ಭಾವನೆ ಸ್ವಾತಂತ್ರ್ಯ ಪಡೆಯುವ ಭಾವನೆಯಿಂದ ಅನ್ಯರಾಗಿ ಉಳಿಯುವುದು ಅಸಾಧ್ಯವಾಗಿತ್ತು. ಗಾಂಧೀಜಿ, ಬಾಲಗಂಗಾಧರ ತಿಲಕ್, ಸರ್ದಾರ್ ವಲ್ಲಭಭಾಯಿ ಪಟೇಲ್, ಸುಭಾಷ್‌ಚಂದ್ರ ಬೋಸ್ ಮುಂತಾದ ಮುಂಚೂಣಿಯಲ್ಲಿದ್ದ ರಾಷ್ಟ್ರ ನಾಯಕರ ನೇತೃತ್ವದಲ್ಲಿ ಭಾರತದ ಉದ್ದಗಲಕ್ಕೂ ವ್ಯಾಪಿಸಿದ್ದ ಸ್ವಾತಂತ್ರ್ಯ ಚಳುವಳಿಯು ಆಧುನಿಕ ಕನ್ನಡದ ಕವಿಗಳನ್ನು ಗಾಢವಾಗಿ ಪ್ರಭಾವಿಸಿದೆ. ಕನ್ನಡದ ಸಾಂಸ್ಕೃತಿಕ ಪ್ರಪಂಚವು ಇವರಲ್ಲಿ ಗಾಂಧೀಜಿಯವರನ್ನು ತನ್ನ ಶಕ್ತಿಯ ಒಂದು ಭಾಗವಾಗಿ ಸ್ವೀಕರಿಸಿದೆ. ಹಾಗೆಯೇ ಕನ್ನಡದ ನವೋದಯ ಕವಿಗಳು ಕೂಡ ಗಾಂಧೀಜಿಯನ್ನು ತಮ್ಮ ಬದುಕಿನ ಒಂದು ಭಾಗವೆಂದೇ ಸ್ವೀಕರಿಸಿದ್ದಾರೆ. ಗಾಂಧೀಜಿಯವರನ್ನು ಕುರಿತು ಬರೆಯದ ಕವಿಗಳೇ ಇಲ್ಲವೇನೋ ಎನ್ನುವಷ್ಟರಮಟ್ಟಿಗೆ ಗಾಂಧೀಜಿಯವರ ವ್ಯಕ್ತಿತ್ವ ಕವಿಗಳನ್ನು ಪ್ರಭಾವಿಸಿದೆ. ಈ ಹಿನ್ನೆಲೆಯಲ್ಲಿ ಡಾ. ಹೋ. ಶ್ರೀನಿವಾಸಯ್ಯ ಅವರು ಕುವೆಂಪು ಕಂಡ ಗಾಂಧಿ ಕೃತಿಯಲ್ಲಿ "ಕರ್ನಾಟಕವು ಗಾಂಧೀಜಿ ಅವರನ್ನು ಕೇವಲ ಭಾವನಾತ್ಮಕವಾಗಿ ಮಾತ್ರ ತೆಗೆದುಕೊಳ್ಳಲಿಲ್ಲ; ನೋಡಲಿಲ್ಲ. ಅದು ನಾಡಿನ ಜೀವಸಂಬಂಧಿ ನೆಲೆಯಾಗಿ ಗಾಂಧಿ ತನ್ನತ್ತ ಸೆಳೆದುಕೊಂಡಿತು. ಭಾರತವೇ ಆ ಗಾಂಧಿ ಸಂತನ ಹಿಂದೆ ನಡೆಯಿತು. ಈ ಮಾತು ಕರ್ನಾಟಕಕ್ಕೆ ಹೊರತಾದುದಲ್ಲ, ಅವರು ಕವಿಗಳಿಗೆ, ಬರಹಗಾರರಿಗೆ, ಕಲಾವಿದರಿಗೆ, ವಿಜ್ಞಾನಿಗಳಿಗೆ, ಸಮಾಜಶಾಸ್ತ್ರಜ್ಞರಿಗೆ, ಹೋರಾಟಗಾರರಿಗೆ, ಸತ್ಯವಂತರಿಗೆ, ಧಾರ್ಮಿಕ ಚಿಂತಕರಿಗೆ ಒಂದು ಬಗೆಯ 'ಶಕ್ತಿ'ಯನ್ನು ಪ್ರದಾನ ಮಾಡಿದರು"(ಶ್ರೀನಿವಾಸಯ್ಯ ಹೋ.; ೨೦೦೪; ಪು. ೪) ಎಂದು ತಮ್ಮ ವಿಚಾರಗಳನ್ನು ಅರ್ಥಪೂರ್ಣಗೊಳಿಸಿದ್ದಾರೆ.

ಸ್ವಾತಂತ್ರ್ಯಪೂರ್ವ ಕಾಲಘಟ್ಟದ ಸಂದರ್ಭದಲ್ಲಿ ಗಾಂಧೀಜಿ ಉಂಟುಮಾಡಿದ ಪ್ರಭಾವ ಮತ್ತು ಪ್ರೇರಣೆಗಳು ಅನನ್ಯವಾದುದು. ಹೀಗಾಗಿ ಆ ಕಾಲದ ನವೋದಯ ಕವಿಗಳ ಆರಾಧನೆಯ ಮನೋಭಾವ ಗಾಂಧೀಜಿಯವರನ್ನು ಅಲೌಕಿಕ ನೆಲೆಯಲ್ಲಿ ನಿಲ್ಲಿಸಿಬಿಟ್ಟಿದೆ. ನವೋದಯ ಕವಿಗಳು ಗಾಂಧೀಜಿಯವರನ್ನು ದೈವಪುರುಷನಾಗಿ, ಅವತಾರಪುರುಷನಾಗಿ, ಸಿದ್ಧಪುರುಷನಾಗಿ, ಮಾನವತಾವಾದಿ ಯಾಗಿ, ಒಂದು ಶಕ್ತಿಯಾಗಿ, ಎಲ್ಲಾ ಸಮಸ್ಯೆಗಳ ಪರಿಹಾರದ ಪ್ರತೀಕವಾಗಿಯೇ ನೋಡಲು

ಅಥವಾ ತಮ್ಮ ಬರಹಗಳಲ್ಲಿ ಪ್ರತಿಪಾದಿಸಲು ಪ್ರಯತ್ನಿಸಿದ್ದಾರೆ. ಡಾ. ಹಾ.ಮಾ.ನಾಯಕ ಅವರು "ಜನಮನದಲ್ಲಿ ಗಾಂಧಿ ಅವತಾರ ಪುರುಷರಾಗಿದ್ದರು. ಪುರಾಣ ಪುಣ್ಯ ಕಥೆಗಳ ಅವತಾರ ಪುರುಷನಂತೆ ಗಾಂಧಿ ಯಾವ ಬಗೆಯ ಪವಾಡಗಳನ್ನು ಮಾಡಿದವರಲ್ಲ. ಆದರೂ ಶ್ರೀಸಾಮಾನ್ಯರ ಮನಸ್ಸಿನಲ್ಲಿ ಅವರೊಬ್ಬ ಅಸಾಮಾನ್ಯ ಪವಾಡಪುರುಷರಾಗಿ ನಿಂತಿದ್ದರು. ಅದರಲ್ಲೂ ಅವರು ತೀರಿಹೋದ ಸಮಯ, ಸಂದರ್ಭ ಹಾಗೂ ರೀತಿಗಳು ಜನತೆಯ ಮನಸ್ಸಿನಲ್ಲಿ ಆಗಲೇ ಅಚ್ಚಳಿಯದ ರೂಪತಾಳಿದ್ದ ಗಾಂಧೀಜಿಯವರು ಅಮರರಾಗುವಂತೆ ನೋಡಿಕೊಂಡವು. ಗಾಂಧಿ ಎಂಬುವ ಹೆಸರು ಮಂತ್ರ ಸದೃಶವಾಗಿ ಉನ್ನತ ಆದರ್ಶ ಸ್ವಾತಂತ್ರ್ಯದ ಉತ್ಸಾಹ, ಕರುಣೆ, ಮರುಕ, ಸತ್ಯ, ಸರಳತೆಗೆ ಸಂಕೇತವಾಗಿ ನಿಂತಿತು" (ಹಾ.ಮಾ.ನಾ.; ೧೯೯೮; ಪು. ೩೯) ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಉನ್ನತ ಬದುಕಿಗೆ ಗಾಂಧೀಜಿಯ ಸಮೃದ್ಧತೆಯ ಚಿಂತನೆಗಳು ನವೋದಯ ಕವಿಗಳನ್ನು ರೋಮಾಂಚನಗೊಳಿಸಿದವು. ಅಷ್ಟೇ ಅಲ್ಲದೆ ಅವರ ಹೃದಯ ಮತ್ತು ಕಲ್ಪನೆಗಳನ್ನು ಮನಸೂರೆಗೊಳ್ಳುವಂತೆ ಮಾಡಿದವು. ನವೋದಯ ಕವಿಗಳ ಕಾವ್ಯಗಳನ್ನು ಗ್ರಹಿಸುವಾಗ ಗಾಂಧೀಜಿ ಅವರಿಗೆ ಆರಾಧನೆಯ ವ್ಯಕ್ತಿಯಷ್ಟೇ ಆಗಿರಲಿಲ್ಲ. ಆ ಆರಾಧನೆಯ ಹಿಂದೆ ಅವರ ಆಲೋಚನೆಯ ನೆಲೆಯ ಒತ್ತಾಸೆಯೂ ಇತ್ತು ಎಂಬುದು ಬಹುಮುಖ್ಯವಾದುದಾಗಿದೆ. ಶಿವರುದ್ರಪ್ಪನವರು "ಮಹಾತ್ಮ ಗಾಂಧೀಜಿಯವರ ಮುಂದಾಳುತನದಲ್ಲಿ ಈ ನಾಡಿನ ಮಣ್ಣಿನ ಕಣಕಣವೂ ಸಿಡಿಲಾಗಿ, ಹುಲ್ಲುಕಡ್ಡಿಯೂ ಬ್ರಹ್ಮಾಸ್ತ್ರವಾಗಿ ನಿಂತು, ಪರಕೀಯ ಆ ಪ್ರಭುತ್ವದ ವಿರುದ್ಧವಾಗಿ, ಸುಮಾರು ಮೂರು ದಶಕಗಳ ಕಾಲ ನಡೆಯಿಸಿದ ಆ ರೋಮಾಂಚನಕಾರಿ ಸಾಹಸ ಇಂದು ನಮ್ಮ ಪಾಲಿಗೆ ಕೇವಲ ಒಂದು ನೆನಪಾಗಿದೆ; ಮಕ್ಕಳ ಪಾಲಿಗೆ ಕತೆಯಾಗಿದೆ. ಚಾರಿತ್ರಿಕ, ಸಾಹಿತ್ಯಿಕ ದಾಖಲೆಗಳಲ್ಲಿ ಕೆದಕಿದರೆ ಇನ್ನು ಹೊಗೆಯಾಡುವ ಈ ಹೋರಾಟದ ಸಂಗತಿ ಸಾಹಿತಿಗಳ ಕಲ್ಪನೆಗೆ ಇಂದಿಗೂ ಸ್ಫೂರ್ತಿಯನ್ನೊದಗಿಸುವಷ್ಟಿದೆ. ಈ ಹೋರಾಟದ ಕಾಲದಲ್ಲಿ, ಜನತೆಯನ್ನು ಪ್ರಚೋದಿಸಿದ ಸಾಹಿತಿಗಳ ಪಾತ್ರವೂ ಹಾಗೂ ಹೋರಾಟದಿಂದ ಸ್ಫೂರ್ತಿಗೊಂಡ ಸಾಹಿತ್ಯಾಭಿವ್ಯಕ್ತಿಯೂ ಗಣನೀಯವಾಗಿದೆ"(ಶಿವರುದ್ರಪ್ಪ. ಜಿ.ಎಸ್.(ಸಂ); ೧೯೭೬; ಪು. ೭೬-೭೭) ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅನೇಕ ಕವಿಗಳು ಗಾಂಧೀಜಿಯವರನ್ನು ತಮ್ಮ ಕಾವ್ಯದ ಮುಖೇನ ಅಭಿವ್ಯಕ್ತಿಸಲು ಪ್ರಯತ್ನಿಸಿದ್ದಾರೆ. ಈ ಅಭಿವ್ಯಕ್ತಿ ಸ್ವರೂಪವನ್ನು ಅಧ್ಯಯನದ ಅನುಕೂಲತೆಗಾಗಿ ಪಂಥೀಯ ನೆಲೆಯಲ್ಲಿ ವಿಭಾಗೀಕರಿಸಲಾಗಿದೆ. ಆದರೂ ಅಧ್ಯಯನ ಇತಿಮಿತಿಗಳಲ್ಲಿ ಹೇಳುವುದಾದರೆ ಈ ಕವಿಗಳನ್ನೆಲ್ಲ ಇದೇ ಪಂಥೀಯ ಧೋರಣೆಯವರು ಎಂದು ಸ್ಪಷ್ಟೀಕರಿಸುವುದು ಅಷ್ಟು ಸುಲಭ ಸಾಧ್ಯವಲ್ಲ. ಹಾಗಾಗಿ ಅವರ ಒಟ್ಟು ಸಾಹಿತ್ಯದ ಕೊಡುಗೆಯನ್ನು ಗಮನಿಸಿ ಪಂಥೀಯ ಧೋರಣೆಗಳನ್ನು ವಿವರಿಸಿಕೊಳ್ಳಲಾಗಿದೆ.

೩.೧. ನವೋದಯ ಕಾವ್ಯ

ಆಧುನಿಕ ಕನ್ನಡದ ನವೋದಯ ಸಾಹಿತ್ಯ ಸಂದರ್ಭವು ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದಲ್ಲಿ ಹುಟ್ಟಿ ಬೆಳೆದಿದೆ. ಭಾರತದ ರಾಜಕೀಯ ಇತಿಹಾಸದಲ್ಲಿ. ೧೯೨೦ರಿಂದ

೧೯೫೦ರವರೆಗಿನ ಕಾಲವನ್ನು 'ಗಾಂಧಿಯುಗ'ವೆಂದು ಗುರುತಿಸಲಾಗುತ್ತದೆ. ಈ ಗಾಂಧಿಯುಗದ ಪರಿಪ್ರೇಕ್ಷ್ಯದಲ್ಲಿ(ಭೂಮಿಕೆ/ಹಿನ್ನೆಲೆ) ಮೈಪಡೆದು ಬಂದ ಆಧುನಿಕ ಕನ್ನಡ ಸಾಹಿತ್ಯದ ಮೊದಲ ಘಟ್ಟವನ್ನು 'ನವೋದಯ ಸಾಹಿತ್ಯ'ವೆಂದು ಗುರುತಿಸಿಕೊಳ್ಳುತ್ತೇವೆ. ಹೀಗಾಗಿ ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಅವರ ಚಿಂತನೆಗಳು ನವೋದಯ ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆದಿವೆ. ಚದುರಂಗ ಅವರು "ನಮ್ಮ ನವೋದಯ ಸಾಹಿತ್ಯ ಹೆಚ್ಚು ಕಡಿಮೆ ಗಾಂಧಿಯುಗದಲ್ಲೇ ಆರಂಭವಾಗಿದೆ. ಅಂದರೆ ಸುಮಾರು ೧೯೨೦ರಿಂದ ೧೯೫೦ರವರೆಗೆ ವಿಶೇಷವಾಗಿ ಚಾಲ್ತಿಯಲ್ಲಿತ್ತು. ಗಾಂಧಿಯುಗದಲ್ಲಿ ಪ್ರಜ್ಞೆಗಿಂತ ಭಾವನೆಯ ಲಯಕ್ಕೆ ಹೊಂದುವಂಥ ಪ್ರೇರಣೆಯ ಮೂಲವಾದ ಗತವೈಭವಕ್ಕೆ ಹೆಚ್ಚು ಪ್ರಾಧಾನ್ಯತೆ ದೊರೆತಿದೆ. ಭಾವನಾಮಲಯತೆ ಆದರ್ಶೀಕರಣ ಇವು ಕಾವ್ಯದ ಸ್ಥಾಯೀ ಭಾವ ಆದವು"(ಶಿವರುದ್ರಪ್ಪ. ಜಿ.ಎಸ್.(ಸಂ); ೧೯೯೮; ಪು. ೧೮-೨೦) ಎಂದು ಅಭಿಪ್ರಾಯಿಸಿದ್ದಾರೆ. ಹೀಗಾಗಿ ನವೋದಯ ಕವಿತೆಗಳಲ್ಲಿ ಸಹಜವಾಗಿಯೇ ದೇಶದ ಅಂದಿನ ದುಸ್ಥಿತಿ, ವಿಷಾದ, ಗತವೈಭವದ ಬಗೆಗೆ ಹೆಮ್ಮೆ, ಸಾಮಾಜಿಕ ಸುಧಾರಣೆಗಾಗಿ ತುಡಿತ, ಪರಕೀಯ ದಾಸ್ಯವನ್ನು ಕಿತ್ತೊಗೆಯುವ ಬಗೆಗಿನ ವೀರ ಭವಿಷ್ಯ ಭವ್ಯವಾಗಿದೆ ಎಂಬ ಆಶಾದಾಯಕವಾದ ಮಾತುಗಳು ನವೋದಯ ಕಾವ್ಯಗಳಲ್ಲಿ ಅಭಿವ್ಯಕ್ತಿಯಾಗಿರುವುದನ್ನು ಕಾಣಬಹುದಾಗಿದೆ.

ನವೋದಯ ಕವಿಗಳೆಲ್ಲ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಉಸಿರಾಡಿದವರಾಗಿದ್ದುದರಿಂದ ಗಾಂಧೀಜಿಯವರನ್ನು ಪ್ರತ್ಯಕ್ಷವಾಗಿ ಕಂಡಿದ್ದಾರೆ ಮತ್ತು ಅವರಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಅವರ ಚಿಂತನೆ ಮತ್ತು ರಚನಾತ್ಮಕ ಕಾರ್ಯಕ್ರಮಗಳಿಂದ ಪ್ರಭಾವಿತಗೊಂಡಿದ್ದಾರೆ. ಹೀಗಾಗಿ ಗಾಂಧೀಜಿಯವರ ಪಾರದರ್ಶಕವಾದ ಘನವ್ಯಕ್ತಿತ್ವ ಮತ್ತು ಮಾನವನ ಅಭ್ಯುದಯವನ್ನು ಬಯಸುವ ಅವರ ಚಿಂತನೆಗಳು ಸಾರಸ್ವತ ಲೋಕದಲ್ಲಿ ಬೆಳಗಿರುವುದನ್ನು ಕಾಣಬಹುದಾಗಿದೆ. ದೇ. ಜವರೇಗೌಡ ಅವರು "ಸಾಹಿತ್ಯವು ಇಂತಹ ವ್ಯಕ್ತಿಗಳ ಪ್ರಬಲ ಪ್ರಭಾವಕ್ಕೆ ಒಳಗಾಗದೇ ಇರದು. ಅನೇಕ ರೀತಿಗಳಲ್ಲಿ ಮತ್ತು ಅನೇಕ ಭಾಷೆಗಳ ಮೂಲಕ ಅವರ ಸಂದೇಶ ಎಲ್ಲಾ ಕಡೆಗಳಲ್ಲಿಯೂ ಹರಡಿಕೊಳ್ಳುತ್ತದೆ. ಅಷ್ಟೇ ಅಲ್ಲ, ಅವರ ಜೀವನ ಸೃಜನಾತ್ಮಕ ಸಾಹಿತ್ಯದ ಅಕ್ಷಯ ಭಂಡಾರವಾಗಿ ಪರಿಣಮಿಸುತ್ತದೆ. ಗಾಂಧೀಜಿಯವರನ್ನು ಬಿಟ್ಟರೆ ಇಷ್ಟು ಅಗಾಧವಾದ ಪ್ರಮಾಣದಲ್ಲಿ ಬೇರಾವ ವ್ಯಕ್ತಿಯ ಬಗ್ಗೆಯೂ ಸಾಹಿತ್ಯ ಸೃಷ್ಟಿಯಾಗಿರುವಂತೆ ತೋರುವುದಿಲ್ಲ"(ಹಾ.ಮಾ.ನಾಯಕ (ಸಂ); ೧೯೭೧; ಅಧ್ಯಕ್ಷೀಯ ಭಾಷಣ) ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸಮಾಜದಲ್ಲಿರುವ ಎಲ್ಲ ರೀತಿಯ ಶೋಷಣೆ, ದಬ್ಬಾಳಿಕೆಗಳನ್ನು ವಿರೋಧಿಸಿದ ಗಾಂಧೀಜಿ ಜನಮಾನಸದಲ್ಲಿ ಸರ್ವಧರ್ಮ ಸಮಭಾವ, ಸ್ವಧರ್ಮ ನಿಷ್ಠೆ, ಅಸ್ಪೃಶ್ಯತಾ ನಿವಾರಣೆ ಮತ್ತು ಇನ್ನಿತರ ರಚನಾತ್ಮಕ ಕಾರ್ಯಗಳ ಮೌಲ್ಯಗಳನ್ನು ಬಿತ್ತಿದ್ದಾರೆ. ಇವೆಲ್ಲಾ ನವೋದಯ ಕವಿಗಳನ್ನು ಮಂತ್ರಮುಗ್ಧಗೊಳಿಸಿವೆ.

ನವೋದಯ ಕಾಲಘಟ್ಟದಲ್ಲಿ ಗಾಂಧೀಜಿಯವರನ್ನು ಕುರಿತು ಕವಿತೆಗಳನ್ನು ರಚಿಸದ ಕವಿಗಳೇ ಇಲ್ಲವೆನ್ನುವಷ್ಟರಮಟ್ಟಿಗೆ ಕವಿತೆಗಳನ್ನು ಕವಿಗಳು ರಚಿಸಿದ್ದಾರೆ. ಅವೆಲ್ಲಾ ವೈವಿಧ್ಯತೆಯಿಂದ ಕೂಡಿದ ರಚನೆಗಳಾಗಿವೆ. ನವೋದಯ ಕವಿಗಳಾದ ಎಂ. ಗೋವಿಂದ ಪೈ, ಕಡೆಂಗೋಡ್ಲು ಶಂಕರ ಭಟ್ಟ,

ಡಿ.ವಿ.ಜಿ., ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ.ರಾ. ಬೇಂದ್ರೆ, ಪು.ತಿ.ನ., ಸಾಲಿ ರಾಮಚಂದ್ರರಾವ್, ಬೆಟಗೇರಿ ಕೃಷ್ಣಶರ್ಮ, ಡಿ.ಎಸ್. ಕರ್ಕಿ, ತೀ.ನಂ.ಶ್ರೀ, ವಿ. ಸೀತಾರಾಮಯ್ಯ, ಎಸ್.ವಿ. ಪರಮೇಶ್ವರ ಭಟ್ಟ, ಎನ್ಕೆ, ಜಯದೇವಿತಾಯಿ ಲಿಗಾಡೆ, ಕಯ್ಯಾರ ಕಿಞ್ಞಣ್ಣ ರೈ, ಕೆ.ಎಸ್. ನರಸಿಂಹಸ್ವಾಮಿ, ಜಿ.ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ಕಾವ್ಯಾನಂದ ಮುಂತಾದ ಕವಿಗಳು ಗಾಂಧೀಜಿಯವರನ್ನು ಕಾವ್ಯಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ನವೋದಯ ಕವಿಗಳಲ್ಲಿ ಪೇಜಾವರ ಸದಾಶಿವರಾಯರು ಒಬ್ಬರು. ಅವರು ತಮ್ಮ 'ಸ್ವಾತಂತ್ರ್ಯ ಭೈರವ' ಕವಿತೆಯಲ್ಲಿ ಗಾಂಧೀಜಿಯವರನ್ನು ಸ್ವಾತಂತ್ರ್ಯದ ಭೈರವನಾಗಿ ಪ್ರತಿನಿಧಿಸಿದ್ದಾರೆ. ಗಾಂಧೀಜಿಯವರು ಸ್ವಾತಂತ್ರ್ಯ ಸಂಗ್ರಾಮದ ಚುಕ್ಕಾಣಿ ಹಿಡಿದ ದಿನಗಳಲ್ಲಿ ರಚನೆಯಾದಂತೆ ಕಾಣುವ ಈ ಕವಿತೆಯಲ್ಲಿ ಗಾಂಧೀಜಿಯವರ ನೋಟ, ನಡೆ, ಮಾತು ಮುಂತಾದವುಗಳ ತೀವ್ರತೆಯನ್ನು ಹೀಗೆ ಚಿತ್ರಿಸಿದ್ದಾರೆ.

"ನಿನ್ನ ಗುಡುಗಿನ ನಡೆಗೆ ಧರೆಯು ಬಿರಿಯುವುದು
ನಿನ್ನ ತುಂಬಟೆ ಸರಕೆ ದಾಸ್ಯ ಹರಿಯುವುದು
ಸ್ವಾತಂತ್ರ್ಯ ಭೈರವನೆ ನಿನ್ನಮರ ಕರೆಗೆ
ಮಾಂತ್ರಿಕ ಮತವು ತಲೆವಾಗುವುದು ಕೆಳಗೆ
ಬಂಧನದ ಬಲ-ಹರಿವ ಆಯುಧವ ತಾರ
ದಾಸ್ಯಬೇಡಿಯ ಮುರಿವ ಭೈರವನೆ ಬಾರ"

(ಸದಾಶಿವರಾಯ ಪೇಜಾವರ (ಸಂ); ಮರೆಯಲಾರದ ಬರಹಗಾರರು; ಪು. ೩೧)

ಗಾಂಧೀಜಿ ಸಾಮಾನ್ಯ ಮಾನವರಂತೆ ಬದುಕಿದರೂ ತಮ್ಮ ನಿಸ್ವಾರ್ಥ ಸೇವೆಯಿಂದ ಮಹಾತ್ಮರೆನಿಸಿಕೊಂಡರು. ಸಮುದಾಯದ ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹಗಲಿರುಳು ಶ್ರಮವಹಿಸಿದರು. ಇಂತಹ ಮಹಾನ್ ರಾಷ್ಟ್ರನಾಯಕನ ಮಾರ್ಗದರ್ಶನದ ಅವಶ್ಯಕತೆ ದೇಶಕ್ಕೆ ಮತ್ತು ಜನತೆಗೆ ಇನ್ನೂ ಬೇಕಿತ್ತು ಎಂಬುದು ಗೋವಿಂದ ಪೈ ಅವರ ಅಭಿಪ್ರಾಯ. ಹೀಗಾಗಿ ಅವರ "ಇನ್ನಿನಿಸು ನೀ, ಮಹಾತ್ಮ ಬದುಕಬೇಕಿತ್ತು!" ಎಂಬ ಕವಿತೆಯಲ್ಲಿ ಪರಸ್ಪರ ಪ್ರೀತಿ, ಸ್ನೇಹವನ್ನು ಕಳೆದುಕೊಂಡಿರುವ, ಮಗು ತಾಯಿಯನ್ನು ಕಳೆದುಕೊಂಡಿರುವಾಗೆ, ಸ್ವಾರ್ಥಪರತೆಗಾಗಿ ಸಹೋದರತೆಯನ್ನು ಮರೆತು ಮತಾಂಧವಾಗುತ್ತಿರುವ ನಮ್ಮನ್ನು ರಕ್ಷಿಸುವವರು, ಕೈಹಿಡಿದು ನಡೆಸುವವರು ಯಾರೆಂದು ಈ ರೀತಿ ಮೊರೆಯಿಟ್ಟಿದ್ದಾರೆ.

"ಇನ್ನಿನಿಸು ನೀ ಮಹಾತ್ಮ, ಬದುಕಬೇಕಿತ್ತು!
ಈಗ ಭಾರತಕತ್ಯಗತ್ಯವಿದೆ ನಿನ್ನ,
ಬಿರುಗಾಳಿಗೊಲೆವ ಹಡಗಂತಿಹುದದಾಸತ್ತು,
ನಿನ್ನ ಹೊರತಾರೋಯ್ಯೆ ರೇವಿನೊಳದನ್ನ?

ಹಿಮನಗವೊ ನಿನ್ನ ಚಲ ವಿಮಲ ಭಗವದ್ಭಕ್ತಿ,
ಜಗವನಪ್ಪುವ ವಾರ್ಧಿಯೆನೆ ಜಗತ್ಪ್ರೀತಿ,
ನಿನ್ನ ಸೂರ್ಯತಪಕಭಿನ್ನ ಮಾತ್ಮಿಕ ಶಕ್ತಿ -
ಕಾದುವೈ ನಮ್ಮನೀವರ ಮೇಕರೀತಿ!

ಸ್ವಾರ್ಥಪರವಾಗಿಹೆವು ದೇವರಿಲ್ಲೆಮಗಿಂದು,
ಸೋದರತೆ ಇಲ್ಲ, ಮುಂದಿನದಿಲ್ಲ ಗೊಡವೆ!
ಧರ್ಮಾಬಾಹಿರರೆಮ್ಮನೆತ್ತಲಿನ್ನಾರೆಂದು
ತೋಚದೆ, ಮಹಾತ್ಮ, ನಿನಗಿಂತು ಮೊರೆಯಿಡುವೆ
ಗಾಳಿ ಕಾಣದೆ ಬೀಸಿ ಉಸುರುಗೊಳಿಪಂತೆ
ತಾರ ನವಜೀವನವ ನಮ್ಮನುಳಿಪಂತೆ!"

(ಧಾರವಾಡಕರ. ರಾ.ಯ.(ಸಂ); ೧೯೬೦; ಪು. ೮೮)

ಗಾಂಧೀಜಿಯವರು ಇಲ್ಲದ ಭಾರತವನ್ನು ಸ್ಮರಿಸಿಕೊಂಡು ಗೋವಿಂದ ಪೈ ಭಾರತಕ್ಕೆ ಒದಗಿದ ಶೋಚನೀಯ ಸ್ಥಿತಿಯನ್ನು ಕಾವ್ಯವಾಗಿಸಿದ್ದಾರೆ. ಭಾರತದ ಜನತೆ ಬಿರುಗಾಳಿಗೆ ಸಿಕ್ಕ ಹಡಗಿನಂತಾಗಿದ್ದಾರೆ. ಸ್ವಾತಂತ್ರ್ಯಾನಂತರ ನಡೆದ ಗಾಂಧೀಜಿಯ ಹತ್ಯೆಯಿಂದ ಉಂಟಾದ ಹಿಂಸಾಚಾರ, ಮತೀಯ ಸಂಘರ್ಷ, ಅಧಿಕಾರ ದಾಹ, ಸ್ವಾರ್ಥ ಮತ್ತು ಸ್ವಹಿತಾಸಕ್ತಿ ಭಾರತದಲ್ಲಿ ತಾಂಡವಾಡುತ್ತಿರುವುದನ್ನು ಚಿತ್ರಿಸಿದ್ದಾರೆ. ಇಂತಹ ದುಷ್ಟಶಕ್ತಿಗಳಿಂದ ಭಾರತವನ್ನು ರಕ್ಷಿಸುವ ಶಕ್ತಿ ಗಾಂಧೀಜಿಯವರಿಗೆ ಮಾತ್ರ ಇತ್ತು ಎಂಬುದನ್ನು ಈ ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ.

ಗಾಂಧೀಜಿಯವರು ಯಾವ ನಿಶ್ಚಿತ ಸಿದ್ಧಾಂತಗಳಿಗೆ ಒಳಗಾಗದೆ ಅಥವಾ ಬದ್ಧರಾಗದೆ ನಿತ್ಯ ಚಿಂತನೆ ಮತ್ತು ಕ್ರಿಯೆಗಳಲ್ಲಿ ಸತತ ಪ್ರಯೋಗಗಳನ್ನು ನಡೆಸುತ್ತ ಸಾಗಿದ ಸತ್ಯಶೋಧಕರೆಂದು ಡಿ.ವಿ.ಜಿ. ಅವರು 'ಸಾಧು ಗಾಂಧಿ' ಕಾವ್ಯದಲ್ಲಿ ನಿರೂಪಿಸಿದ್ದಾರೆ.

"ಇಂದ್ರಿಯಂಗಳ ಜಯಿಸಿ ಚಿತ್ತಶುದ್ಧಿಯ ಬಯಸಿ
ಲೋಭಮಂ ತ್ಯಜಿಸಿ ರೋಷವ ವರ್ಜಿಸಿ ।
ಸರ್ವಸಖ್ಯವ ಭಜಸಿ ತೃಪ್ತತೆಯನಭ್ಯಸಿಸಿ

ಸತ್ಯಪಾಲನೆಯೊಂದ ಮನದೊಳಿರಿಸಿ ।
ಕಾಯಕಷ್ಟವ ಸಹಿಸಿ ವೈರಿಗಣಮಂ ಕ್ಷಮಿಸಿ ।
ಸರ್ವಸಮತೆಯ ಗಳಿಸಿ ಶಮವನರಸಿ ।
ಸ್ವಾತ್ಮ ಶಿಕ್ಷಣಮೇ ಸ್ವರಾಜ್ಯಮೆನ್ನುತ ವಚಿಸಿ
ದೇಶಸೇವೆಯನೀಶಸೇವೆಯೆನಿಸಿ ॥

ಸಾಧುವರವೃತ್ತಿಯಂ ತನ್ನೊಳೇ ಜಗಕೆ ತೋರಿ ।
ಐಹಿಕಾರ್ಥಿಗಳಾರ್ಥ್ಯಮಂ ವಿಶದಬಡಿಸಿ ।

ಪಾಶ್ಚಾತ್ಯ ಜನಕಮತಿ ವಿಮಲ ನೀತಿಯನು ಪೇಳ್ವಾ ।
ದೈವ ಸಂಪನ್ಮಾರ್ಗದರ್ಶಕಂ ಗಾಂಧಿಯಲ್ತೆ॥"

(ಚಂದ್ರಶೇಖರ ಪಾಟೀಲ ಮತ್ತು ಇತರರು; ೧೯೯೮; ಪು. ೬)

ಗಾಂಧೀಜಿಯವರ ಸಂಪೂರ್ಣ ವ್ಯಕ್ತಿತ್ವದ ಚಿತ್ರಣವನ್ನೇ ಈ ಕಾವ್ಯದಲ್ಲಿ ಚಿತ್ರಿಸಲಾಗಿದೆ. ಇಂದ್ರಿಯಗಳನ್ನು ನಿಗ್ರಹಿಸುವುದು, ವಿಲಾಸಿ ಜೀವನವನ್ನು ತ್ಯಜಿಸುವುದು, ಸತ್ಯವನ್ನು ಆರಾಧಿಸುವುದು, ವೈರಿಗಳನ್ನು ಕ್ಷಮಿಸುವುದು, ದೇಶ ಸೇವೆಯೆ ದೇವರ ಸೇವೆಯೆಂದು ಪ್ರಾಮಾಣಿಕವಾಗಿ ಶ್ರಮಿಸುವುದು ಅಹಿಂಸೆಯಿಂದ ಮಾತ್ರ ಸಾಧ್ಯ ಎಂದು ಇಲ್ಲಿ ಪ್ರತಿಪಾದಿಸಿದ್ದಾರೆ. ಹಾಗಾಗಿ ಗಾಂಧೀಜಿಯವರಿಗೆ ಸತ್ಯ ಮತ್ತು ದೇವರು ಎರಡೂ ಒಂದೇ, ಜೊತೆಗೆ ಸರ್ವರ ಹಿತವನ್ನು ಬಯಸಿದ ಮಹಾತ್ಮ ಗಾಂಧೀಜಿ. ಉದಾತ್ತ ಚಿಂತನೆಯ ಸಾಕಾರಮೂರ್ತಿ ಎಂದು ಚಿತ್ರಿಸಲಾಗಿದೆ.

ಗಾಂಧೀಜಿಯಿಲ್ಲದ ಭಾರತದಲ್ಲಿ ಉಸಿರಾಡುವುದು ತುಂಬಾ ಕಷ್ಟವೆಂದು ಗೋವಿಂದ ಪೈ ಅವರು ಸ್ಮರಿಸಿದರೆ, ಚೆನ್ನವೀರ ಕಣವಿಯವರು ಮಾನವ ಬದುಕಿನ ಅವಿಭಾಜ್ಯ ಅಂಗವೇ ಆಗಿ ಗಾಂಧಿ ಬೆರೆತು ಹೋಗಿದ್ದಾರೆ ಎಂದು ತಮ್ಮ 'ಗಾಂಧಿಯುಗ' ಕವನದಲ್ಲಿ ಪ್ರತಿನಿಧಿಸಿದ್ದಾರೆ.

"ನುಡಿಗೆನುಡಿಗೆ ಅಡಿಗಡಿಗೆ ಗಾಂಧಿ ಹೆಸರೆದ್ದು ನಿಲ್ಲುತಿಹುದು
ವಿಶ್ವಬಂಧು ವಿಶ್ವಾತ್ಮನೆಂದು ಜನಕೋಟಿ ನಮಿಸುತಿಹುದು
ಲೋಕದೀಚೆ ಮುಗಿಲಂಚಿನಾಚೆ ಅವನಾತ್ಮ ತುಳುಕುತಿಹುದು
ನೇಸರುದಿಸಿ ಹೂಗಾಳಿ ಸೂಸಿ ಸಂದೇಶ ಬೀರುತಿಹವು!"

ಗಾಂಧೀಜಿಯವರು ಒಬ್ಬ ವ್ಯಕ್ತಿಯಾಗಿರಲಿಲ್ಲ. ಅವರೊಬ್ಬ ಯುಗದ ಶಕ್ತಿಯಾಗಿದ್ದರು. ಭಾರತೀಯ ಇತಿಹಾಸದಲ್ಲಿ ಯುಗವನ್ನೇ ನಿರ್ಮಿಸಿದ ಯುಗಪುರುಷರಾಗಿದ್ದರು. ಯೇಸು ಕ್ರಿಸ್ತ, ಬುದ್ಧ, ಬಸವರ ಹಾದಿಯಲ್ಲೇ ಗಾಂಧೀಜಿ ನಡೆದು ಅವರಂತೆ ಒಬ್ಬ ಆದರ್ಶ ಯುಗ ಪುರುಷರಾಗಿದ್ದಾರೆ. ಹಾಗಾಗಿ ಕವಿ ಚೆನ್ನವೀರ ಕಣವಿಯವರು ಗಾಂಧೀಜಿಯವರನ್ನು ಯೇಸು, ಬುದ್ಧ, ಬಸವಣ್ಣನವರೊಂದಿಗೆ ಈ ರೀತಿ ಸಮೀಕರಿಸಿದ್ದಾರೆ.

"ಯೇಸುಕ್ರಿಸ್ತನುತ್ತ್ರೇಮಹಸ್ತ ಸುಸ್ತೇಜವಾಂತು ಬಂತು
ಬುದ್ಧನೆದೆಯ ಉದ್ಬುದ್ಧನೀತಿ ಹಿಂಸೆಯನು ತಳ್ಳಿ ನಿಂತು,
ಬಸವ ನಡೆದ ನುಡಿ ದಯವೇ ಧರ್ಮಗುಡಿಗಳಸವಾಗಲಿಂತು
ಗಾಂಧಿರೂಪ ಅಪರೂಪ ದೀಪ ಭಾರತವ ಬೆಳಗಿತಿಂತು!"

ಬ್ರಿಟೀಷರ ದಾಸ್ಯದಿಂದ ಭಾರತದ ಜನತೆಯನ್ನು ಮುಕ್ತಗೊಳಿಸಿ ಜನತೆಯಲ್ಲಿದ್ದ ಜಡತ್ವವನ್ನು ಕಿತ್ತೊಗೆದು ನವಸೃಷ್ಟಿಯನ್ನು ನಿರ್ಮಿಸಿದ ದಾಸ್ಯ ಮುಕ್ತ ಭಾರತಕ್ಕೆ ಗಾಂಧಿಯುಗವೆಂದು ಹೇಳಿದರೆ ತಪ್ಪಾಗಲಾರದು ಎಂಬುದು ಕಣವಿಯವರ ಈ ಕವನದಲ್ಲಿ ಹೀಗೆ ಮೂಡಿಬಂದಿದೆ.

"ದಾಸ್ಯನೊಗವ ಕಿತ್ತೊಗೆದ ಯುಗವ ನಿರ್ಮಿಸಿದ ಸಹನೆ ಬಲ್ಪು
ಹಗೆಯತಿದ್ದಿ ಜನಮನವ ಮಿದ್ದಿ ನವಸೃಷ್ಟಿಗೈದ ಬಾಪು!

ಹೊಸತು ಯುಗವು ಜಯ ಗಾಂಧಿ ಯುಗವು! ಇನ್ನಾವುದಿದಕೆ ಸೊಗವು?
ಭರತಮಾತೆ ಹೆಸರಿಡುವಳಿದೆಕೆ ಯುಗವಿದುವೆ ಗಾಂಧಿ ಯುಗವು"

(ಧಾರವಾಡಕರ. ರಾ.ಯ.(ಸಂ); ೧೯೬೦; ಪು. ೩೭)

ಹೀಗೆ ಗಾಂಧೀಜಿಯವರ ಆದರ್ಶದ ಪರಿಶುದ್ಧದ ಬದುಕು ನಮ್ಮ ಮನಃಸಾಕ್ಷಿಯನ್ನು ಎಚ್ಚರಿಸಿ ಪ್ರತಿ ಮಾತು ಮಾತಿಗೂ, ಹೆಜ್ಜೆ ಹೆಜ್ಜೆಗೂ ಗಾಂಧೀಜಿ ಇಂದು ನಮಗೆ ನೆನಪಾಗುತ್ತಾರೆ ಮತ್ತು ಪ್ರಸ್ತುತವೆನಿಸುತ್ತಾರೆ. ವಿಶ್ವಭ್ರಾತೃತ್ವವನ್ನೇ ಬಯಸಿದ ಗಾಂಧೀಜಿ ಜಗತ್ತಿನ ಎಲ್ಲ ಜನಮನವನ್ನು ಗೆದ್ದವರಾಗಿದ್ದಾರೆ.

ಗಾಂಧೀಜಿ ಯಾವುದೇ ದ್ವೇಷ ಅಸೂಯೆಗಳಿಲ್ಲದೆ ನಿಸ್ವಾರ್ಥ ಸೇವೆಯನ್ನು ಸಮಾಜದ ಹಿತಕ್ಕಾಗಿ ಮಾಡಿದರು. ಮಾನವನ ಬದುಕಿನ ಕಲ್ಮಶಗಳನ್ನೆಲ್ಲ ತೊಳೆದ ಗಾಂಧೀಜಿಯವರ ಬದುಕು ಸತ್ಯ, ಪ್ರೇಮ, ಕರುಣೆಗಳಿಂದ ಕೂಡಿದುದಾಗಿದೆ. ಇಂತಹ ಗುಣಗಳನ್ನು ಹೊಂದಿದ ಗಾಂಧೀಜಿಯವರ ಗುಣಗಾನವನ್ನು ಡಿ.ಎಸ್. ಕರ್ಕಿ ಅವರು ದಿವ್ಯಜ್ಯೋತಿ ಕವಿತೆಯಲ್ಲಿ ಹೀಗೆ ವರ್ಣಿಸಿದ್ದಾರೆ.

"ಹೋದ ಹೋದನವ ತ್ಯಾಗಜೀವನದ ತುತ್ತತುದಿಯನೇರಿ
ಏರಿ ಏರಿದೊಲು ಅಂತರಂಗದೈಸಿರಿಯ ಜಗಕೆ ತೂರಿ
ಸತ್ಯ-ಪ್ರೇಮಗಳ ಸತ್ವವನ್ನೇ ಕಣ್ಣೆದುರು ಎತ್ತಿ ತೋರಿ
ಬೇರೆ ಲೋಕದನುಭಾವ ಬೀರಿ ಅವರ ಹೋದನಾವ ದಾರಿ?

ಎನಿತು ಸರಳು ನುಡಿ, ಎಷ್ಟು ಸಹಜ ನಡೆ, ಮನದ ಮಹತಿಯೇನು?
ಅವನ ಎದೆಯ ಉನ್ನತಿಯ ನಿಲುಕುವದು ಯಾವ ಗಿರಿಯ ಸಾನು?
ಇಹುದೆ ಅವನ ಕರುಣೆಯನು ಧರೆಗೆ ಕರೆವಂಥ ಕಾಮಧೇನು?
ಅವನು ಗೈದ ಲೀಲೆಯಲಿ ಲಯಿಸಿತೆಂಥವರ "ನಾನು-ನಾನು"

(ಧಾರವಾಡಕರ. ರಾ.ಯ.(ಸಂ); ೧೯೬೦; ಪು. ೩೨-೩೩).

'ಸರಳ ಜೀವನ, ಉದಾತ್ತ ಚಿಂತನೆ' ಗಾಂಧೀಜಿಯವರ ಜೀವನ ವಿಧಾನವಾಗಿತ್ತು. ಗಾಂಧೀಜಿಯವರ ಸಹಕಾರದಿಂದ ಕೂಡಿದ ಸಾಧನೆಗಳ ಎದುರು ಎಂಥವರ ಅಹಂಕಾರವೂ ನಿಲ್ಲುವುದಿಲ್ಲ ಎಂದು ಗಾಂಧೀಜಿಯವರ ಪಾರದರ್ಶಕ ಬದುಕಿನ ಹಿರಿಮೆಯನ್ನು ಇಲ್ಲಿ ವರ್ಣಿಸಲಾಗಿದೆ. ಗಾಂಧೀಜಿಯವರು ಕರುಣೆ, ಪ್ರೇಮ ಮತ್ತು ಕ್ಷಮಾಗುಣಗಳ ಪ್ರತೀಕವೆಂದು ಡಿ.ಎಸ್. ಕರ್ಕಿಯವರು ಕಾವ್ಯದ ಮೂಲಕ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪು.ತಿ. ನರಸಿಂಹಾಚಾರ್ ಅವರು ಗಾಂಧೀಜಿಯವರನ್ನು 'ನೆರಳು' ಎಂಬ ಪ್ರತಿಮೆಗೆ ಹೋಲಿಸಿ ಅವರ ವ್ಯಕ್ತಿತ್ವವನ್ನು ಈ ರೀತಿ ಬಣ್ಣಿಸಿದ್ದಾರೆ.

"ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು

ಅದಕೊ ಅದಿರಿಚ್ಚೆ ಹಾದಿ
ಇದಕು ಹರಿದತ್ತ ಬೀದಿ!
ಇವನೋಡಿ ನಾನು ನೆನೆವೆನಿಂದು
ಇಂಥ ನೆಳಲೇನು ಗಾಂಧಿಯೆಂದು!"

(ಸಿದ್ಧಲಿಂಗಯ್ಯ ಜಿ.ಎಸ್.(ಸಂ); ೧೯೭೧; ಪು. ೨).

ಇಲ್ಲಿ ನೆರಳು ಗಾಂಧೀಜಿಯವರ ವ್ಯಕ್ತಿತ್ವದ ಪ್ರತಿಮೆಯಾಗಿದೆ. ಮೇಲೆ ಗರುಡ ತನ್ನ ಇಚ್ಛೆಯಂತೆ ಹಾರುತ್ತದೆ. ಅದನ್ನು ಹಿಂಬಾಲಿಸಿ ನೆರಳು ಅದರಂತೆ ಓಡುತ್ತದೆ. ಸ್ವಾತಂತ್ರ್ಯ ಪಡೆಯುವುದಕ್ಕಾಗಿ ಗಾಂಧೀಜಿ ನಡೆಸಿದ ಯಾನ ಬಹು ವ್ಯಾಪಕವಾದುದು ಎಂಬುದು ಈ ಕಾವ್ಯದ ಧ್ವನಿ. ಗಾಂಧೀಜಿ ಸ್ವಾತಂತ್ರ್ಯಯಾಗಕ್ಕಾಗಿ ಎಲ್ಲಾ ಸಮುದಾಯಗಳ ಜನಗಳ ಮನಸ್ಸನ್ನು ಯಾವ ತಾತ್ಸಾರ ಭಾವನೆ ಇಲ್ಲದೆ ಹೋಗಿ ತಟ್ಟಿದರು. ಈ ಪಯಣದಲ್ಲಿ ಎದುರುಗೊಂಡ ಎಲ್ಲ ನೋವು ಸಂಕಟಗಳನ್ನು ಗಾಂಧೀಜಿ ಮೀರಿ ನಡೆದರು ಎಂಬ ಭಾವ ಇಲ್ಲಿದೆ. 'ನೆರಳು' ಗಾಂಧೀಜಿಯವರ ಮುಕ್ತಮನದ ಸಂಕೇತವೆಂಬಂತೆ ಪು.ತಿ.ನ. ಅವರು ಪ್ರತಿನಿಧಿಸಿದ್ದಾರೆ.

ಬಲದಿಂದ ನ್ಯಾಯವನ್ನು ಪಡೆಯಬಾರದು, ಬದಲಾಗಿ ಸತ್ಯದಿಂದ ನ್ಯಾಯವನ್ನು ಗಳಿಸಬೇಕು ಎಂಬುದು ಗಾಂಧೀಜಿಯವರ ನಂಬಿಕೆಯಾಗಿತ್ತು. ಹಾಗಾಗಿ ಅವರು ನಂಬಿಕೆ, ಸತ್ಯ, ಅಹಿಂಸೆ ಮುಂತಾದ ಸನ್ಮಾರ್ಗಗಳಿಂದ ತಮ್ಮ ಇಡೀ ಜೀವನವನ್ನು ನಡೆಸಿದರು. ಈ ಮೂಲಕ ಬೃಹತ್ ಭಾರತವನ್ನು ವಿಮೋಚನೆಯೆಡೆಗೆ ಮುನ್ನಡೆಸಿದರು. ಈ ನಿಲುವುಗಳ ಸಾಕಾರಮೂರ್ತಿಯಾಗಿ ಬಾಳಿ ಬದುಕಿದ ಗಾಂಧೀಜಿಯವರ ವ್ಯಕ್ತಿತ್ವದಿಂದ ದರ್ಶನ ಉಂಟಾಗುತ್ತದೆ. ಇದನ್ನು ಮಾಸ್ತಿಯವರು ತಮ್ಮ 'ಗಾಂಧೀಜಿಯವರ ದರ್ಶನ' ಎಂಬ ಕವನದಲ್ಲಿ ಹೀಗೆ ಚಿತ್ರಿಸಿದ್ದಾರೆ.

"ಜನದ ಸೇವೆಯಲ್ಲಿ ಮೆಯ್
ಸೋತವನೆಂದರು.
ಅನುಮಾನ ಬರಿದು ಇದು,
ಭೀತಿ ಬಹುಬರಿದು.

ಎಳೆಯ ಮಗುವಿನ ಮೊಗದ
ನಗೆಯಿಹುದು ಮೊಗದೆ;
ಇಳೆಯರಸರಿಗೆ ಬರದ
ಬಗೆಯ ಗಾಂಭೀರ್ಯ;

ಅನುಜರೊಡನಾಡುತಿಹ
ಹಿರಿಯನುರುಸರಸ;
ಮನುಜರಾಟವ ನೋಡಿ
ಕರಗಿರುವ ಕರುಣೆ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೭-೮).

'ಜನಸೇವೆಯೇ ಜನಾರ್ಧನ ಸೇವೆ' ಎಂಬ ಧೋರಣೆಯಿಂದ ಗಾಂಧೀಜಿಯವರು ಜನರ ಸೇವೆಯಲ್ಲಿ ತೊಡಗಿ ದೇಹ ಬಳಲಿದರೂ ಅದನ್ನು ತೋರ್ಪಡಿಸಿಕೊಳ್ಳದೇ ನಿರಂತರ ಕ್ರಿಯಾಶೀಲಗೊಂಡು ಜನರ ಮನಸ್ಸುಗಳನ್ನು ಸಮಾಜಪರ ಚಿಂತನೆಗಳಿಗೆ ಅಣಿಗೊಳಿಸಿದವರು. ಗಾಂಧೀಜಿಯವರು ಮುಗ್ಧ ಮಕ್ಕಳ ಮನಸ್ಸು ಉಳ್ಳವರು. ಅವರ ಮುಖದ ಮೇಲೆ ಇರುವ ನಗುವು ಸಹ ಮಕ್ಕಳ ನಗೆಯಾಗಿ ಮತ್ತು ಭರತಖಂಡದ ಅರಸರಿಗಿಲ್ಲದ ಗಾಂಭೀರ್ಯ ಗಾಂಧೀಜಿಯವರಿಗಿದೆ ಎಂದು ಮಾಸ್ತಿಯವರು ಕಂಡರಿಸಿದ್ದಾರೆ.

ಪು.ತಿ. ನರಸಿಂಹಾಚಾರ್ ಅವರು ಸ್ವಾತಂತ್ರ್ಯಪೂರ್ವ ಕಾಲಘಟ್ಟದ ಅಪರೂಪದ ಸಂತ ಕವಿ. ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ಗುರುತಿಸಿಕೊಂಡಿರುವ ಇವರು ಗಾಂಧಿಯುಗದ ಹಿರಿಯ ಸಾಹಿತಿಗಳಲ್ಲೊಬ್ಬರು. ಇವರು ಗಾಂಧೀಜಿಯವರ ನೇರ ಪ್ರಭಾವಕ್ಕೆ ಒಳಗಾಗಿದ್ದರು. ಸ್ವಾತಂತ್ರ್ಯ ಆಂದೋಲನ, ಗಾಂಧೀಜಿಯವರ ಸತ್ಯಾಗ್ರಹಗಳಿಂದ ಪ್ರಭಾವಿತರಾದ ಇವರು ಗಾಂಧೀಜಿ ಕುರಿತು ಹಲವಾರು ಕವಿತೆಗಳನ್ನು ಬರೆದಿದ್ದಾರೆ. ಇವರು ತಮ್ಮ 'ಗಾಂಧೀಸ್ತವ' ಕವನದಲ್ಲಿ ಸಾಮಾಜಿಕ ಸುಧಾರಕನೆಂಬಂತೆ ಚಿತ್ರಿಸದೆ ಹೊಗಳಿಕೆಗೂ ಮಿಗಿಲಾದ ವ್ಯಕ್ತಿತ್ವ ಗಾಂಧೀಜಿಯವರದು ಎಂದು ಹೀಗೆ ಚಿತ್ರಿಸಿದ್ದಾರೆ.

> "ಹೊಗಳಲೆ ಹರಿಜನ ಶಾಪವಿಮೋಚನ ಕಾರ್ಯವ
> ಹೊಗಳಲೆ ನಾಡಿನ ನೈಚ್ಯವನಳಿಸಿದ ಕಾರ್ಯವ
> ಹೊಗಳಲೆ ನರಪಶು ಮಾನವನೆನಿಸಿದ ಕಾರ್ಯವ
> ಹೊಗಳಿಕೆಗೂ ಮಿಗಿಲೀತನ ಕಲ್ಯಾಣಕೃತಿ"

ಎಂಬುದಾಗಿ ಮಹಾತ್ಮನ ನಾನಾ ಕಲ್ಯಾಣ ಕಾರ್ಯಗಳನ್ನು ಸಾಧಿಸಿದ ವ್ಯಕ್ತಿತ್ವ ಗಾಂಧೀಜಿಯವರದು ಎಂದು ಹೇಳುತ್ತಾ -

> "ನೆನೆವೆನೆಂದಿಗು ಪೂಣ್ಯಜಾತನ ನಮ್ಮ ನಾಡವಿಧಾತನ
> ಜನಪದ ಸ್ವಾತಂತ್ರ್ಯದಾತನ ಸಕಲ ಹೃದಯೋಪೇತನ
> ನೆನೆಯುತಚ್ಚರಿಗೊಳುವೆ ಮಹಿಮನ ದಿವ್ಯಮಂಗಳ ಚರಿತೆಗೆ
> ಕೊನೆಯ ಕೇಡಿಗೆ ದುಗುಡಪಡುವೆನು ರಿಕ್ತವಾದೀ ಜನತೆಗೆ"

(ಅದೇ; ಪು. ೯-೧೧)

ಎಂದು ಜನಪದರ ಎದೆ, ಎದೆಗಳಲ್ಲಿ ಸ್ವಾತಂತ್ರ್ಯದ ಹಂಬಲವನ್ನು ಹುಟ್ಟಿಸಿದ ಗಾಂಧೀಜಿ ಭಾರತದ ಉದಯರವಿಯೇ ಆಗಿ ಕವಿಗೆ ಕಂಡಿದ್ದಾರೆ. ಶತಶತಮಾನಗಳ ಕಾಲದ ಜಪ ನಿದ್ರೆಯಲ್ಲಿ ಮುಳುಗಿ ಪರದಾಸ್ಯ, ಶೋಷಣೆ, ದಾರಿದ್ರ್ಯದಲ್ಲಿ ಬದುಕು ಸಾಗಿಸುತ್ತಿದ್ದ ಜನಗಳನ್ನು ಎಚ್ಚರಗೊಳಿಸಿ ದಬ್ಬಾಳಿಕೆ, ಶೋಷಣೆ, ಜಾತಿ-ಮತಗಳ ತಾರತಮ್ಯದಲ್ಲಿ ಬಸವಳಿದ ಸಮುದಾಯಗಳಿಗೆ ಅರಿವು ಆಚಾರಗಳನ್ನು ಬಿತ್ತಿದವರು ಎಂಬುದಾಗಿ ವ್ಯಕ್ತಪಡಿಸಿದ್ದಾರೆ.

ಡಿ.ಎಸ್. ಕರ್ಕಿ ಗಾಂಧೀಜಿಯವರ ಸತ್ಯ, ಕರುಣೆ, ತ್ಯಾಗ ವ್ಯಕ್ತಿತ್ವಕ್ಕೆ ಪ್ರಭಾವಗೊಂಡವರು. ಇವರು ಗಾಂಧೀಜಿಯವರ ಅನನ್ಯ ಬದುಕಿನ ಕುರಿತು ಹಲವಾರು ಕವಿತೆಗಳನ್ನು ರಚಿಸಿದ್ದಾರೆ. ಗಾಂಧೀಜಿಯವರ ವಿರಾಟ ಸ್ವರೂಪವನ್ನು 'ನಿಂತಿರುವರು ಗಾಂಧೀಜಿ' ಎಂಬ ಪದ್ಯದಲ್ಲಿ ಹೀಗೆ ಮೂಡಿಸಿದ್ದಾರೆ.

"ಮಾನವತೆಯ ಮೇರುವಾಗಿ
ಸಜ್ಜನಿಕೆಯ ಸಾರವಾಗಿ
ಸದ್ಭಾವದ ತೀರವಾಗಿ
ಚಿತ್ತಭೂಮಿವ್ಯೋಮದಿ
ನಿಂತಿರುವರು ಗಾಂಧಿಜಿ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೩೪-೩೫)

ಮಾನವೀಯ ಅಂತಃಕರಣವನ್ನು ಮೈಗೂಡಿಸಿಕೊಂಡಿರುವ ಗಾಂಧೀಜಿ ಬಿರುಕುಗೊಂಡ ಮನಸ್ಸುಗಳನ್ನು ಒಂದುಗೂಡಿಸುವ ಕೊಂಡಿಯಾಗಿದ್ದಾರೆಂದು ಈ ಕಾವ್ಯದಲ್ಲಿ ಅಭಿವ್ಯಕ್ತಿಸಲಾಗಿದೆ. ದೀನ, ದುರ್ಬಲರ ಹಾಗೂ ದಲಿತರ ಆಶಾಕಿರಣವಾಗಿ, ವ್ಯಕ್ತಿಯ ಆತ್ಮ ವಿಕಾಸದ ನೀತಿ ಪಥವನ್ನು ತೋರಿಸಿಕೊಟ್ಟ ನೇತಾರನಾಗಿ ಇಲ್ಲಿ ಗಾಂಧೀಜಿಯನ್ನು ಕಾಣಲಾಗಿದೆ.

ಅನಾಚಾರ, ಶೋಷಣೆ, ಕಂದಾಚಾರಗಳಿಂದ ಕೂಡಿರುವ ಭಾರತಕ್ಕೆ ಗಾಂಧೀಜಿ ಒಬ್ಬ ಯೋಗಿಯಾಗಿ ಬಂದರು. ಇಲ್ಲಿರುವ ಮೂಢನಂಬಿಕೆಗಳ ಸಮುದಾಯಗಳಿಂದಲೇ ಗಾಂಧೀಜಿ ಶಕ್ತಿಯಾಗಿ ಮೇಲೆದ್ದು ಬಂದವರು ಎಂಬುದನ್ನು ಬೆಟಗೇರಿ ಕೃಷ್ಣಶರ್ಮ ಅವರು ತಮ್ಮ 'ಮಹಾತ್ಮನಿಗೆ' ಕವಿತೆಯಲ್ಲಿ ಚಿತ್ರಿಸಿದ್ದಾರೆ.

ಮೈತ್ರಿಯಿಂದೆ ಶತ್ರುಗಳನು ಸೋಲಿಸಿರುವ ವೀರ,
ಮೃತ್ಯುವನೂ ಮಿತ್ರನಂತೆ ಸ್ವಾಗತಿಸಿದ ಧೀರ,
ನಿನ್ನ ನೌಕೆ ನಂಬಿದರನು ತಲ್ಪಿಸಿತ್ತೈ ತೀರ
ನೀನು ನಡೆದ ದಾರಿಯದೇ ಸತ್ಯಧರ್ಮ ಸಾರ
ನಮನವಿದೋ, ನಮನವಿದೋ, ನಮನ ಸಹಜಯೋಗಿ!"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೪-೧೫)

"ಗಾಂಧೀಜಿ ಕುಳಿತದ್ದೇ ದೇವಮಂದಿರ, ಅವರು ನಡೆದದ್ದೇ ಪಾವನಭೂಮಿ" ಎಂಬ ಜವಾಹರಲಾಲರ ನುಡಿಯಂತೆ ಗಾಂಧೀಜಿ ನಡೆದ ದಾರಿಯಲ್ಲಿ ಸತ್ಯ, ಧರ್ಮ, ಅಹಿಂಸೆ ನೆಲೆಸಿರುತ್ತವೆ. ಗಾಂಧೀಜಿಯ ಆದರ್ಶಗಳನ್ನು ಪಾಲಿಸಿದರೆ ಎಂದೂ ಜೀವನದಲ್ಲಿ ಸೋಲಿಲ್ಲ. ಶತ್ರುಗಳನ್ನು ಮತ್ತು ಸಾವನ್ನು ಮಿತ್ರನಂತೆ ಕಾಣುವ ಗುಣ ಗಾಂಧೀಜಿಯವರದು. ಹಾಗಾಗಿ ಅವರು ಹುಟ್ಟುತ್ತಲೇ ಯೋಗಿಯಾಗಿ ಜನಿಸಿದ್ದಾರೆ ಎಂದು ಇಲ್ಲಿ ಚಿತ್ರಿಸಿದ್ದಾರೆ.

ಜನಸಾಮಾನ್ಯರನ್ನು ಮುಟ್ಟಿದ ಗಾಂಧೀಜಿಯವರು ತೀ.ನಂ.ಶ್ರೀಯವರಿಗೆ ಸರ್ವಜನ ಕಲ್ಯಾಣದ ಸೂತ್ರಧಾರನಾಗಿ ಕಂಡಿದ್ದಾರೆ. ಪ್ರೇಮದ ಸಂಸ್ಥಾಪನೆಯ ಮೌಲ್ಯಗಳನ್ನು ಪ್ರಚುರಪಡಿಸಿದ ಗಾಂಧೀಜಿ ಅವುಗಳನ್ನು ಅನುಷ್ಠಾನಗೊಳಿಸಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿರುವ ಭಾವವನ್ನು ತೀ.ನಂ.ಶ್ರೀಯವರು 'ಗಾಂಧಿ' ಕವಿತೆಯಲ್ಲಿ ಮೂಡಿಸಿದ್ದಾರೆ.

"ಹುಡಿಯ ಹುಳುಗಳನೆತ್ತಿ ವಜ್ರ ಹೃದಯವ ಬಿತ್ತಿ
ವೀರ ಜನ್ಮವನಿತ್ತ ಹಿರಿಯ ತಂದೆ;
ನೆಲದ ನಡೆವಳಿಕೆಯಲಿ ನಾಕದೌನ್ನತ್ಯವನು
ಮೇಳವಿಸಿ ತೋರಿದ ಪವಾಡಪುರುಷ;
ಪ್ರಾಣ ಪೂರ್ಣಾಹುತಿಯನಿತ್ತ ದಾನಿ
ಸರ್ವೋದಯದ ಸೂತ್ರಧಾರ ಗಾಂಧಿ!"

(ಅದೇ; ಪು. ೩೫)

ಗಾಂಧೀಜಿಯವರು ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುವ ಜನರಲ್ಲಿ ವಜ್ರ ಗುಂಡಿಗೆಗಳನ್ನು ತುಂಬಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಎಂತಹ ಹೋರಾಟಕ್ಕೂ, ಬಲಿದಾನಕ್ಕೂ ಸಿದ್ಧರಾಗುವ ವೀರರ ಪಡೆಯನ್ನೇ ನಿರ್ಮಿಸಿದರು. ಅವರಲ್ಲಿ ಸಹೋದರತ್ವ, ಐಕ್ಯತೆ, ಜಾತ್ಯಾತೀತತೆಯಿಂದ ಬಾಳುವುದನ್ನು, ತಾಳ್ಮೆಯ ಮೌಲ್ಯಗಳನ್ನು ಬಿತ್ತಿದ ಗಾಂಧೀಜಿ ಸ್ವರ್ಗದ ಔನ್ನತ್ಯದ ಬದುಕನ್ನು ತೋರಿಸಿದ ಪವಾಡಪುರುಷರಾಗಿ ಮತ್ತು ಇಡೀ ಸರ್ವೋದಯದ ಸೂತ್ರಧಾರರನ್ನಾಗಿ ಈ ಕಾವ್ಯದಲ್ಲಿ ಪ್ರತಿನಿಧಿಸಲಾಗಿದೆ.

ಗಾಂಧೀಜಿಯ ವ್ಯಕ್ತಿತ್ವವನ್ನು ಕಾವ್ಯದಲ್ಲಿ ಸ್ಮರಿಸಿದವರು ಕೆ.ಎಸ್. ನರಸಿಂಹಸ್ವಾಮಿ ಅವರು. ಗಾಂಧೀಜಿಯವರ ವ್ಯಕ್ತಿತ್ವ ಮತ್ತು ಚಿಂತನೆಗಳಿಗೆ ಪ್ರಭಾವಗೊಂಡವರು. ಇವರು ರಚಿಸಿದ 'ಗಾಂಧೀಜಿಯ ಪಾದಕ್ಕೆ' ಎಂಬ ಕವಿತೆಯಲ್ಲಿ ಪರದಾಸ್ಯ, ಶೋಷಣೆ, ಧಾರ್ಮಿಕ ಸಂಘರ್ಷಗಳಲ್ಲಿ ಮುಳುಗಿದ ದೇಶಕ್ಕೆ ಬೆಳಕು ಚೆಲ್ಲಿದ್ದಾರೆ. ಜಾತಿ, ಮತಾಂಧತೆಯ ಪ್ರವಾಹದಲ್ಲಿ ಸಿಲುಕಿರುವ ಜನಗಳಿಗೆ ಶಾಂತಿಯ 'ಸೌಹಾರ್ದತೆಯ ಸೇತುವೆ'ಯಾದವರು ಎಂದು ಹೀಗೆ ಪ್ರತಿನಿಧಿಸಲಾಗಿದೆ.

"ಆಫ್ರಿಕದ ಕತ್ತಲೆಗೆ ಬೆಳಕ ಬೀರಿದೆ ನೀನು;
ಆಂಗ್ಲರಧಿಕಾರ ಮೋಹವನು ಮುರಿದೆ.
ಅವರಿವರ ದುಷ್ಕೃತಿಗೆ ಕುದಿದು ಕಂಬನಿಗರೆದು
ಉಪವಾಸದಗ್ನಿಯಲಿ ನಡೆದುಬಂದೆ".

ಗಾಂಧೀಜಿಯವರು 'ಕಗ್ಗತ್ತಲೆಯ ಖಂಡ'ವೆಂದೇ ಹೆಸರಾಗಿದ್ದ ಆಫ್ರಿಕಕ್ಕೆ ಹೋಗಿ ಅಲ್ಲಿನ ವರ್ಣವ್ಯವಸ್ಥೆಯಲ್ಲಿ ನರಳುತ್ತಿರುವ ಜನತೆಯನ್ನು ಅದರಿಂದ ಮುಕ್ತಗೊಳಿಸಿದರು. ಬ್ರಿಟೀಷ್ ವಸಾಹತುಶಾಹಿಯ ಆಡಳಿತ ಯಂತ್ರದ ಕೊಂಡಿಯನ್ನು ಸತ್ಯ, ಶಾಂತಿ, ಅಹಿಂಸೆ ಮತ್ತು ಉಪವಾಸ ಸತ್ಯಾಗ್ರಹದಂಥ ಅಸ್ತ್ರಗಳಿಂದ ಕಿತ್ತೊಗೆದರು ಎಂದು ಹೇಳುತ್ತಾ -

"ಪೊಡವಿಯನಹಿಂಸೆಯಲಿ ಕಂಡು ಹರಸಿದೆ, ಗುರುವೆ,
ಚರಕದಲಿ ಸರಳತೆಯ ಇಂಪ ಬೆಳೆದೆ;
ಭಾರತದ ಬಿಡುಗಡೆಗೆ ದುಡಿದು ತಾರಗೆಯಾದೆ,
ಎಲ್ಲರೆದೆಗೂಡಿನಲಿ ನಿನ್ನ ಬೆಳಕೆ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೭೬-೭೭)

ದೇಶಕ್ಕೆ ಹಿಡಿದ ದರಿದ್ರವನ್ನೆಲ್ಲಾ 'ಅಹಿಂಸೆ'ಯ ಅಸ್ತ್ರದಿಂದ ತೊಳೆದು ಹಾಕಿದವರು ಗಾಂಧೀಜಿ. ದೇಶದ ಆರ್ಥಿಕ ಉತ್ಪನ್ನವು ಚರಕದಲ್ಲಿ ಅಡಗಿರುವ ಸರಳತೆಯನ್ನು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟರು. ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿ ಮಿನುಗು ನಕ್ಷತ್ರದಂತೆ ಎಲ್ಲರ ಎದೆಗಳಲ್ಲಿ ಬೆಳಕಾಗಿ ನಿಂತರು ಎಂದು ಚಿತ್ರಿಸಲಾಗಿದೆ.

ಗಾಂಧೀಜಿಯನ್ನು ಕುರಿತು ಕುವೆಂಪು 'ಸ್ವಾತಂತ್ರ್ಯ ಶಿಲ್ಪಿ', 'ಸತ್ತನೇ ಸೈನ್ಯಪತಿ' ಮತ್ತು 'ದಿವಂಗತ ರಾಷ್ಟ್ರಪಿತ' ಎಂಬ ಮೂರು ಕವಿತೆಗಳನ್ನು ರಚಿಸಿದ್ದಾರೆ. ಮಗುವನ್ನು ತಾಯಿ ಕಳೆದುಕೊಂಡಾಗ ದುಃಖಿಸುವಂತೆ, ಗಾಂಧೀಜಿಯನ್ನು ಮರಣದಿಂದ ದೇಶದ ಜನತೆ ದುಃಖತಪ್ತರಾದುದನ್ನು ಕುವೆಂಪು 'ಸ್ವಾತಂತ್ರ್ಯ ಶಿಲ್ಪಿ' ಕವನದಲ್ಲಿ ಹೀಗೆ ಚಿತ್ರಿಸಿದ್ದಾರೆ.

"ಮರೆವುದೆಂತಾ ನಮ್ಮ ಸ್ವಾತಂತ್ರ್ಯ ಶಿಲ್ಪಿಯಂ
ದಿವ್ಯದಿನದೀ ಶುಭ ಮುಹೂರ್ತದಲ್ಲಿ?
ಹೆಜ್ಜೆ ಹೆಜ್ಜೆಯನಿಡಿಸಿ ಕೈಹಿಡಿದು ನಡೆಗಲಿಸಿ
ಬಿಡುಗಡೆಗೆ ತಂದ ಆ ತಂದೆಯೆಲ್ಲಿ?
ಕ್ರಿಸ್ತ ಬುದ್ಧರ ಮೈತ್ರಿಯಂ ಸಾಧಿಸುತ
ವಿಶ್ವಸೇವಕರ ಪಂಕ್ತಿಯಲಿ ನಿಂದೆ!
ಯಂತ್ರ ನಾಗರಿಕತೆಯ ರಾಜಕೀಯದ ಕುಟಿಲ
ತಂತ್ರಕಧ್ಯಾತ್ಮಮಂತ್ರವನು ತಂದೆ!

ಇಂದಿಗುತ್ಸವಕೆಮ್ಮನುಳಿದೆಲ್ಲಿ ಹೋದೆ ಹೇ
ಸ್ವಾತಂತ್ರ್ಯ ಕನ್ಯೆಯಂ ಪಡೆದ ತಂದೆ?
ಗಾಂಧಿಯೆಂಬಾ ಪೆಸರೆ ನಾಂದಿಯಾಗಲಿ ನಮ್ಮ
ಸ್ವಾತಂತ್ರ್ಯ ಸಂಭ್ರಮಕೆ ಹಾಡು, ಪಕ್ಷಿ!"
(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೧-೨೨)

ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮೀಸಲಾಗಿಟ್ಟ ಮಹಾತ್ಮನಿಗೆ ಭಾರತದ ಜನತೆಯು ಸ್ವಾತಂತ್ರ್ಯದ ಹರ್ಷ ಹಾಗೂ ಉಲ್ಲಾಸಗಳನ್ನು ಕಾಣುವ ಭಾಗ್ಯ ಲಭಿಸಲಿಲ್ಲ. ಸ್ವಾತಂತ್ರ್ಯ ಉತ್ಸವದಲ್ಲಿ ಗಾಂಧೀಜಿ ಇಲ್ಲದೆ ಬಣಬಣಿಸುವುದರಿಂದ ಜನಗಳು ದುಃಖಿಸುತ್ತಿರುವುದನ್ನು ಕುವೆಂಪು ಚಿತ್ರಿಸಿದ್ದಾರೆ. ಗಾಂಧೀಜಿ ಭಾರತೀಯ ಜನತೆಯನ್ನು ಹೆಜ್ಜೆ ಹೆಜ್ಜೆಗೂ ಎಚ್ಚರಿಸಿ, ಹಾದಿ ತಪ್ಪಿದಾಗ

ಸರಿಯಾದ ದಾರಿಯಲ್ಲಿ ಕೈಹಿಡಿದು ನಡೆಸಿದ ತಂದೆ ಆಗಿದ್ದರು. ಯೇಸು-ಬುದ್ಧರ ವಿಚಾರಗಳನ್ನು ಮೈಗೂಡಿಸಿಕೊಂಡು ಜನ ಸೇವೆಗೈದು ವಿಶ್ವದೆತ್ತರಕ್ಕೆ ಬೆಳೆದು ಮಹಾತ್ಮನಾದರು. ಇಂತಹ ಆದರ್ಶ ವ್ಯಕ್ತಿತ್ವವನ್ನು ಹೊಂದಿರುವ ಗಾಂಧೀಜಿಯ ಹೆಸರು ಸ್ವಾತಂತ್ರ್ಯ ಉತ್ಸವಕ್ಕೆ/ ಸಂಭ್ರಮಕ್ಕೆ ನಾಂದಿಯಾಗಲಿ ಎಂದು ಕವಿ ಕುವೆಂಪು ಅವರು ಅಭಿವ್ಯಕ್ತಿಸಿದ್ದಾರೆ.

"ಆಶ್ಚರ್ಯದದ್ಭುತವು ಧರೆಯೊಳಾಯ್ತು!
ನಿಶ್ಚೇಷ್ಟ ಜೀವನವು ಸಿಡಿದೆದ್ದಿತು! ||

ಬೆಳಕು ಹೊಸ ಬೆಳಕು ಪಸರಿಸಿತೆಲ್ಲಿಯೂ ವಿಶ್ವ
ದೊಳು, ಜನವು ಕಂಡು ವಿಸ್ಮಯಗೊಂಡಿತು||
ಅಳಿವಸದ್‌ಬಲಕೆ ತಪ್ಪಿದುದಲ್ಲವೆಂದು ನಿ-
ರ್ಮಳಂತರಂಗದಲಿ ನಲಿನಲಿದರು!"

(ಅದೇ; ಪು. ೧೨-೧೩)

ಗಾಂಧೀಜಿಯವರು ಭಾರತೀಯ ಜನರಿಗೆ ಒಂದು ರೀತಿಯ ಶಕ್ತಿಯಿದ್ದಂತೆ. ಅವರಂತೆ ಭಾರತದ ಹಳ್ಳಿಗಳನ್ನು ತಿರುಗಿದವರು ಬೇರೆ ಯಾರೂ ಇಲ್ಲ. ಕೋಟಿ ಕೋಟಿ ಮನೆಗಳಲ್ಲಿ ಅವರ ಭಾವಚಿತ್ರವಿರುತ್ತದೆ ಮತ್ತು ಎಲ್ಲರ ಬಾಯಲ್ಲಿ 'ಮಹಾತ್ಮ ಗಾಂಧೀಜಿ ಕೀ ಜೈ' ಎಂಬ ಹರಕೆ ಅಥವಾ ಘೋಷಣೆ ಸರ್ವೇಸಾಮಾನ್ಯವಾದುದಾಗಿದೆ ಎಂಬುದನ್ನು ಸಾಲಿರಾಮಚಂದ್ರರಾಯರು 'ಆಶ್ಚರ್ಯದದ್ಭುತವು!' ಎಂಬ ಕವನದಲ್ಲಿ ಚಿತ್ರಿಸಿದ್ದಾರೆ.

ಬೇಂದ್ರೆಯವರು ಗಾಂಧೀಜಿಯನ್ನು ಕುರಿತು 'ಜಯ ಜಯ ಗಾಂಧೀ ಮೋಹನಾ', 'ಕೇಳಿರೊಂದು ಸೋಜಿಗ', 'ಅಮರ ಮರಣ', 'ಶ್ರದ್ಧಾಂಜಲಿ' ಮುಂತಾದ ಕವನಗಳನ್ನು ರಚಿಸಿದ್ದಾರೆ. ಗಾಂಧೀಜಿಯವರ ಮರಣದಿಂದ ಉಂಟಾದ ನೋವು, ಸಂಕಟ, ಸಂತಾಪ ಭಾವನೆಗಳನ್ನು ವಿಶಿಷ್ಟ ರೀತಿಯಲ್ಲಿ ಕಾವ್ಯವಾಗಿಸಿದ್ದಾರೆ.

"ಅದ್ಭುತವು ಅದ್ಭುತವು ವಿಶ್ವಕದ್ಭುತವು
ಸತ್ಯಶರಣನ ಸಂದ ಮರಣದದ್ಭುತವು
ಮಣಿಹ ಸಂದಿತು; ದೇಹ ಕೆಳಗೆ ಇಟ್ಟ;
ಧ್ಯೇಯವನೆ ನಕ್ಷತ್ರ ಮಾಡಿ ಬಿಟ್ಟ.
ಎಂಥನಗು! ಎಂಥ ಮಗು! ಎಂಥ ಮನುಜ!
ನಮ್ಮಂತೆ ಕಂಡರೂ ದೇವತನುಜ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೨೩)

ಶರಣರಂತೆ ಜೀವಿಸಿದ ಗಾಂಧಿ ದ್ವೇಷ ಅಸೂಯೆಗಳನ್ನು ಮೀರಿ ಮೋಹ, ಮಮಕಾರಗಳನ್ನು ಗೆದ್ದರು. ಇಂತಹ ಮಹಾತ್ಮನ ಮರಣ ಇಡೀ ವಿಶ್ವಕ್ಕೆ ಅದ್ಭುತವಾದುದು. ಅವರು ನಮ್ಮಂತೆ ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದುಕ್ಕೊಂಡು ಮಹಾತ್ಮರೆನಿಸಿಕೊಂಡರು. ಅವರ ಆತ್ಮ ನಮ್ಮನ್ನಗಲಿರ ಬಹುದು. ಆದರೆ ಅವರ ಬದುಕಿನ ಆದರ್ಶಗಳು, ಚಿಂತನೆಗಳು ಸದಾ ನಕ್ಷತ್ರಗಳಂತೆ

ಮಿನುಗುತ್ತಿರುತ್ತವೆ. ಅವರ ದೇಹವನ್ನು ಗುಂಡಿನಿಂದ ಕೊಲ್ಲಬಹುದು. ಆದರೆ ಪರ್ವತದೆತ್ತರಕ್ಕೆ ಬೆಳೆದಿರುವ ಅವರ ಆತ್ಮವನ್ನು ಕೊಲ್ಲುವುದು ಅಸಾಧ್ಯವೆಂದು ಬೇಂದ್ರೆಯವರು 'ಅಮರ ಮರಣ' ಎಂಬ ಕವನದಲ್ಲಿ ಪ್ರತಿನಿಧಿಸಿದ್ದಾರೆ. ಬೇಂದ್ರೆಯವರು ಗಾಂಧೀಜಿಯವರ ಸಾವಿನ ಮೂಲಕ ಹಿಂಸೆ-ಅಹಿಂಸೆಯ ಚಿಂತನೆಯನ್ನು 'ಶ್ರದ್ಧಾಂಜಲಿ' ಕವಿತೆಯಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ.

"ಹಿಂಸೆ ಕೊನೆಗಹಿಂಸೆಯನ್ನು ಗುಂಡುಹಾಕಿ ಕೊಂದಿತೋ?
ತನ್ನ ಕೊಲೆಯ ಕೊನೆಗಾಣಿಸೆ ಇವಗೆ ಶರಣು ಬಂದಿತೋ?
ಅಯ್ಯೋ ಇವನು ಅಮರ. ನಾನೆ ತಾನೆ ಸತ್ತೆ 'ಎಂದಿತೋ -
ನಾನೆ ಸತ್ತೆ' ಎಂದಿತೋ"?

(ಅದೇ; ಪು. ೨೪)

ಗಾಂಧೀ ಅಹಿಂಸೆಯ ಸಾಕಾರಮೂರ್ತಿ, ಅವರನ್ನು ಕೊಲ್ಲುವುದಕ್ಕೆ ಹಿಂಸೆ ಗುಂಡು ಹಾರಿಸಿದರೆ ಅದೇ ಗುಂಡಿಗೆ ಅಹಿಂಸೆ ಸಾಯದೇ ಹಿಂಸೆನೇ ಸತ್ತಿತ್ತು ಎಂದು ಕರುಣಾಪೂರ್ವಕವಾಗಿ ಚಿತ್ರಿಸಿದ್ದಾರೆ. 'ಅಯ್ಯೋ, ಇವನು ಅಮರ ನಾನೆ ತಾನೆ ಸತ್ತೆ' ಎಂದು ಹಿಂಸೆ ಪ್ರಾಣಬಿಟ್ಟು ಸತ್ತಿತು ಎಂದಿದ್ದಾರೆ. ಇಲ್ಲಿ ಹಿಂಸೆ ಹಾಗೂ ಅಹಿಂಸೆಯ ಸೋಲು-ಗೆಲುವು ಪ್ರಕಟವಾಗಿದೆ. ಹಾಗೆನೇ 'ಕೇಳೊಂದು ಸೋಜಿಗ' ಎಂಬ ಕವಿತೆಯಲ್ಲಿ ಬೇಂದ್ರೆಯವರು ಹೀಗೆ ವ್ಯಕ್ತಪಡಿಸಿದ್ದಾರೆ.

"ಬಾಳು ಜಗವೆ ಬಾಳೆಲೋ
ಪ್ರೇಮದಿಂದ ತಾಳೆಲೋ
ಎಂದು ಕೊನೆಗು ಸಾರಿದಾತ
ಗಾಂಧಿ ಸ್ವರ್ಗಕ್ಕೇರಿದಾ.
ಅದನೆ ಇಲ್ಲಿ ತರುವನೋ?
ಮತ್ತೆ ಮರಳಿ ಬರುವನೋ?
ಏಕೆ ಹರಟೆ? ಏಕೆ ಪ್ರಶ್ನೆ?"

(ವಾಮನ ಬೇಂದ್ರೆ.(ಸಂ).; ೨೦೦೩; ಪು. ೪೧೮)

ಗಾಂಧೀಜಿ ಜೀವನದುದ್ದಕ್ಕೂ ಪ್ರೇಮ, ಕರುಣೆ, ತ್ಯಾಗದ ಮಂತ್ರವನ್ನೇ ಸಾರಿದವರು ಮತ್ತು ಅದನ್ನೇ ಬೋಧಿಸಿದರು. ಜನರೆಲ್ಲ ತಮ್ಮಲ್ಲಿರುವ ದ್ವೇಷ, ಅಸೂಯೆ, ಕ್ರೋಧ, ಮದ, ಮತ್ಸರ ಭಾವನೆಗಳನ್ನು ತ್ಯಜಿಸಿ ಪರಸ್ಪರ ಪ್ರೀತಿ, ವಿಶ್ವಾಸದಿಂದ ಬಾಳಿರಿ ಎಂದು ಹೇಳಿ ಗಾಂಧೀಜಿ ಸ್ವರ್ಗಕ್ಕೇರಿದರು. ಇಲ್ಲಿರುವ ಜನರಿಗೆ ಆ ಸ್ವರ್ಗಲೋಕದ ಸುಖವನ್ನು ಮತ್ತೊಮ್ಮೆ ಧರೆಗೆ ಹುಟ್ಟಿ ಬಂದು ಕರುಣಿಸುವನು. ಇದರಲ್ಲಿ ಸಂಶಯ ಬೇಡ ಎಂದು ಕವಿ ಬೇಂದ್ರೆ ಗಾಂಧೀಜಿಯನ್ನು ಅಗಲಿದ ನೋವಿನಲ್ಲಿ ಅವರ ಮರುಜನ್ಮದ ಹಂಬಲವನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

ಭಾರತದ ಬೆಳಕಾಗಿ, ಚೈತನ್ಯವಾಗಿ ಬಂದ ಗಾಂಧೀಜಿಯ ಮೇರುಸದೃಶ ವ್ಯಕ್ತಿತ್ವವನ್ನು ವರ್ಣಿಸುವ ಕುವೆಂಪು ಅವರ 'ಮಹಾತ್ಮಾ ಗಾಂಧಿ' ಕವಿತೆ ಗಮನಾರ್ಹವಾದುದಾಗಿದೆ. ದೇಶದ

ಎಲ್ಲೆಡೆ ಜನಗಳ ಎದೆಯಲ್ಲಿ ಗಾಂಧೀಜಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿಸಿದವರು. ಅಂದಿನ ಸ್ವಾತಂತ್ರ್ಯ ರಣಯಾಗದಲ್ಲಿ ಗಾಂಧೀಜಿ ಹೇಗೆ ಕಾಣಿಸುತ್ತಿದ್ದರು ಎಂಬುದನ್ನು ಹೀಗೆ ಚಿತ್ರಿಸಿದ್ದಾರೆ.

"ಈ ಮಹಾಸ್ವಾತಂತ್ರ್ಯ ರಣಯಾಗ ಧೂಮದಲಿ
ಶ್ವೇತಾಗ್ನಿ ಜ್ವಾಲೆಯೊಂದುರಿಯುತಿದೆ; ನಿಶ್ಚಲಂ
ರಂಜಿಸುತ್ತಿದೆ - ಶಾಂತಿಯಲಿ ಹಿಮಮಹಾಚಲಂ
ರಾರಾಜಿಪಂತೆ ನೀಲಿಮ ನಭೋಧಾಮದಲಿ
ಲೋಕ ಲೋಚನದಂತರಾಳದಾರಾಮದಲಿ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೪೨)

ಗಾಂಧೀಜಿಯವರ ದಿವ್ಯ ತೇಜಸ್ಸಿನ ವ್ಯಕ್ತಿತ್ವದ ಗುಣಗಾನ ಮಾಡುವ ಪದ್ಯ ಇದಾಗಿದೆ. ಗಾಂಧೀಜಿಯ ರೂಪ, ಸ್ವಾತಂತ್ರ್ಯ ರಣಯಾಗದ ಮಧ್ಯದಿಂದ ಎದ್ದ ಶ್ವೇತಾಗ್ನಿಯ ಜ್ವಾಲೆಯ ಹಾಗೆ, ಶಾಂತಿಯ ಹಿಮಾಚಲದ ಹಾಗೆ ಎಂದು ಕುವೆಂಪು ಪ್ರತಿನಿಧಿಸಿದ್ದಾರೆ. ಕುವೆಂಪು ಅವರು ತಮ್ಮ ಆತ್ಮಚರಿತ್ರೆಯಾದ 'ನೆನಪಿನ ದೋಣಿ'ಯಲ್ಲಿ ಬರುವ 'ಮಹಾತ್ಮಾಗಾಂಧಿ' ಎಂಬ ಕವಿತೆಯಲ್ಲಿ ಗಾಂಧೀಜಿಯವರ ವ್ಯಕ್ತಿತ್ವದ ಉಪಾಸನೆಯನ್ನು ಮನೋಜ್ಞವಾಗಿ ಹೀಗೆ ಮೂಡಿಸಿದ್ದಾರೆ.

"ನಿನ್ನ ಸೇವೆಯ ಅಮಲ ಗಂಗೆಯು
ಜಗವ ಪಾವನ ಗೈಯಲಿ;
ಮುಕ್ತಿಗೆಮ್ಮನು ಒಯ್ಯಲಿ!
ನೀನು ಪರಮ ಪವಿತ್ರನು,
ನೀನಮರ ಚಾರಿತ್ರನು!"

(ಕುವೆಂಪು; ೧೯೮೦; ಪು. ೪೪೯)

ಗಾಂಧೀಜಿ ಕೈಗೊಂಡ ಸೇವೆ, ತ್ಯಾಗ, ತಪಸ್ಸುಗಳು ಜನತೆಯನ್ನು ಮುಕ್ತಿ ಮಾರ್ಗದತ್ತ ಕೊಂಡೊಯ್ಯುವ ಪವಿತ್ರ ಕ್ರಿಯೆಗಳಾಗಿದ್ದವು. ಪಾವನ ಗಂಗೆ ಹರಿದು ಪರಿಶುದ್ಧಗೊಂಡಂತೆ ಪರಮ ಪವಿತ್ರ ಮೂರ್ತಿಯಾದ ಗಾಂಧೀಜಿ ಲೋಕದ ಜನತೆಗೆಲ್ಲಾ ಸತ್ಯ, ಶಾಂತಿ, ಅಹಿಂಸೆ, ಕರುಣೆಯ ಮೌಲ್ಯಗಳನ್ನು ಬೋಧಿಸಿ ಜನರ ಮನಸ್ಸಿನಲ್ಲಿ ಅಮರರಾಗಿ ಉಳಿದುಕೊಂಡಿದ್ದಾರೆ ಎಂದು ಕುವೆಂಪು ಇಲ್ಲಿ ಚಿತ್ರಿಸಿದ್ದಾರೆ.

ಎಸ್.ಡಿ. ಇಂಚಲ ಅವರು ತಮ್ಮ 'ಮಹಾತ್ಮರ ಚಿತಾಭಸ್ಮ ವಿತರಣ' ಎಂಬ ಕಾವ್ಯದಲ್ಲಿ ಗಾಂಧೀಜಿಯನ್ನು ಪಾವನಗಂಗೆಯ ಮೂರ್ತ ರೂಪವಾಗಿ ಅಭಿವ್ಯಕ್ತಿಸಿದ್ದಾರೆ.

"ಶಾಂತಿ ಸತ್ಯಗಳಮರ ತತ್ವದಿ
ಗೌರಿ ಶಂಕರದಂತೆಯೆ,
ನಿಂತ ನಿಲುವಿಕೆಯಿಂದ ಬೆಳಗಿದ
ತಿಂಗಳಿನ ನವ ಕಾಂತಿಯೇ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೧೮)

ಸತ್ಯವನ್ನು ಭಗವಂತನ ಸ್ವರೂಪದಲ್ಲಿ ದರ್ಶಿಸಿದ ಗಾಂಧೀಜಿ ಸತ್ಯ, ಶಾಂತಿಯ ಗೌರಿಶಂಕರವಾಗಿ, ಪೂರ್ಣಚಂದಿರನ ಕಾಂತಿಯ ಹಾಗೆ ಹೊಳೆಯುತ್ತಿದ್ದಾರೆ ಎಂದು ಗಾಂಧೀಜಿಯವರ ಮಹೋನ್ನತ ವ್ಯಕ್ತಿತ್ವದ ವರ್ಣನೆ ಮಾಡಿದ್ದಾರೆ. ಸಿದ್ದಣ್ಣ ಮಸಳಿಯವರು ಸಹ ಗಾಂಧೀಜಿಯವರನ್ನು 'ಶುಭೋದಯ' ಕವಿತೆಯಲ್ಲಿ ಚಂದಿರನಿಗೆ ಹೋಲಿಸಿದ್ದಾರೆ.

"ಬೆಳಕಿಲ್ಲದೀ ಮನೆಗೆ ಬೆಳಕಾಗಿ ಬಂದನಿವ
ಚಿಕ್ಕೆಯಂಗಳದಿ ಚೆಂದ್ರಾಮ ಚೆಲುವ!
ದಳದಳವೇರಿ ಕಳೆಯೇರಿ
ಇರುಳ ಮಲ್ಲಿಗೆಯರುಳು ಬೆಳುದಿಂಗಳು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೭೭)

ಶೋಷಣೆ, ದಬ್ಬಾಳಿಕೆ, ಅನೈಕ್ಯತೆ ಮತ್ತು ಅನಾಚಾರದ ಕತ್ತಲೆಯಲ್ಲಿ ಕಳೆಯುತ್ತಿದ್ದ ಭಾರತವೆಂಬ ಮನೆಗೆ ಗಾಂಧೀಜಿ ಬೆಳಕಾಗಿ ಬಂದರು. ಗಾಂಧೀಜಿ ತಮ್ಮ ವಿಶಿಷ್ಟ ವ್ಯಕ್ತಿತ್ವ ಮತ್ತು ಚಿಂತನೆಗಳಿಂದ ಬೆಳೆಯುತ್ತ ಜನತೆಗೆ ಸತ್ಯ, ಶಾಂತಿ, ಅಹಿಂಸೆಯ ಬೆಳಕು ಬೀರುತ್ತಾ ಇಡೀ ಲೋಕವನ್ನೇ ಮಲ್ಲಿಗೆಯ ಸುವಾಸನೆಯಂತೆ ಹರಡಿಕೊಂಡಿರುವರು ಎಂದು ಈ ಕವಿತೆಯಲ್ಲಿ ಕೊಂಡಾಡಿದ್ದಾರೆ.

ಗಾಂಧೀಜಿಯವರ ಬದುಕಿನ ಮೂರು ಮುಖ್ಯ ಸನ್ನಿವೇಶಗಳ ಮೂಲಕ ಅವರ ವ್ಯಕ್ತಿತ್ವವನ್ನು ಜಿ.ಎಸ್. ಶಿವರುದ್ರಪ್ಪ ಅವರು ತಮ್ಮ 'ಕಂಡಿದ್ದು ಮೂರು ಸಲ' ಕವಿತೆಯಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ.

"ಒಂಬತ್ತು ವರುಷಗಳೀಚೆ ನಿಂತು ನೋಡುವೆ ನಾನು -
ನಿನ್ನ ಆ ಮೇರುಸಮ ಧೀರವ್ಯಕ್ತಿತ್ವವನು
ಮುಗಿಲ ಗೋಡೆಗೆ ಆದಿಗೊ ತೂಗುಬಿಟ್ಟಿದೆ ನೋಡು
ಬರೆದಿಟ್ಟ ಚಿತ್ರಪಟ,
ಮೇರುದಂಡದ ತುದಿಗೆ ಹಾರುತಿದೆ ಬಾವುಟ,
ನೆಲ ಕಡಲು ಜನಪದದ ಬದುಕೆಲ್ಲ
ಜೀವಂತ ಭೂಪಟ
ಹಿಮಶೈಲ ಶಾಂತಿಯಲಿ ಜ್ವಲಿಸುತಿದೆ ಇದೋ
ಎದೆಯ ದೇಗುಲದಲ್ಲಿ ನಿತ್ಯನಂದಾದೀಪ
ನಿನ್ನ ರೂಪ!

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೧೧೮)

೧೯೫೭ರಲ್ಲಿ ಗಾಂಧಿ ಜಯಂತಿಯ ಅಂಗವಾಗಿ ಕವಿ ಈ ಕವಿತೆಯನ್ನು ರಚಿಸಿದ್ದಾರೆ. ಈ ಕವಿತೆ ಗಾಂಧೀಜಿಯವರ ಬದುಕಿನ ಮೂರು ಮುಖ್ಯ ಸನ್ನಿವೇಶಗಳನ್ನು ಒಳಗೊಂಡಿದೆ. ತನ್ನ ತಂದೆ ಅನಾರೋಗ್ಯದಿಂದ ಮಲಗಿರುವಾಗ, ಬಾಲಕ ಗಾಂಧಿ ತಾನು ಮಾಡಿದ ತಪ್ಪುಗಳನ್ನೆಲ್ಲ ಕಾಗದದಲ್ಲಿ ಬರೆದು ತಂದೆಯ ಕೈಗೆ ಕೊಟ್ಟ ಸನ್ನಿವೇಶ. ಎರಡನೆಯದು ವರ್ಣ ತಾರತಮ್ಯಕ್ಕೆ ಗುರಿಯಾಗಿ ಬಿಳಿಯನೊಬ್ಬನಿಂದ ರೈಲಿನಿಂದ ದಬ್ಬಲ್ಪಟ್ಟ ಪ್ರಸಂಗ, ಮೂರನೆಯದು ಪ್ರಾರ್ಥನಾ

ಸಭೆಯಲ್ಲಿ ಹಂತಕನ ಸಿಡಿಗುಂಡಿಗೆ ಎದೆ ಒಡ್ಡಿದ ಸಂದರ್ಭ. ಗಾಂಧಿ ಸತ್ತ ಒಂಬತ್ತು ವರ್ಷಗಳ ನಂತರ ಅವರ ವ್ಯಕ್ತಿತ್ವವನ್ನು ಜಿ.ಎಸ್.ಎಸ್. ಈ ಮೇಲಿನಂತೆ ಸ್ಮರಿಸಿಕೊಳ್ಳುತ್ತಿದ್ದಾರೆ. ಗಾಂಧೀಜಿಯವರ ಧೀರ ವ್ಯಕ್ತಿತ್ವವನ್ನು ಬಾನೆತ್ತರದ ಗೋಡೆಗಳಿಗೆ ಬರೆದಿಟ್ಟ ಚಿತ್ರವನ್ನು ತೂಗುಬಿಟ್ಟಿದ್ದಾರೆ. ಪ್ರತಿಯೊಬ್ಬರ ಜನಸಾಮಾನ್ಯರ ಎದೆಯಲ್ಲೂ ನಿತ್ಯ ನಂದಾದೀಪವಾಗಿ ಬೆಳಗುತ್ತಿದ್ದಾರೆ ಎಂದು ಪ್ರತಿನಿಧಿಸಲಾಗಿದೆ.

ಪು.ತಿ.ನ. ಅವರ 'ನೆರಳು' ಕವಿತೆಯ ಹಾಗೆ ಕಣವಿಯವರು ಗಾಂಧೀಜಿಯವರ ವ್ಯಕ್ತಿತ್ವವನ್ನು ಭೂಮಿ ಮತ್ತು ಮೋಡಕ್ಕೆ ಹೋಲಿಸಿ 'ಗಾಂಧಿ' ಎಂಬ ಕವನದಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ.

"ಇರುವ ನೀರೆಲ್ಲ ಸುರಿದು
ಹಸಿದ ನೆಲ ಹಸುರಾಗಿ ಕಳಕಳಿಸಿ
ಬಾನು ಥಳ ಥಳಸಿರಲು -
ಬೆಳ್ಳಗೆ ಮೇಲೆ ಹೊರಟಿತ್ತು ಮಂದಹಾಸದ ಮೋಡ;
ಗಾಂಧಿ ನೋಡ
ಮಹಡಿ ಮನೆ, ಗುಡಿಸಲು
ಪಡಭೂಮಿ, ಹೊಲಗದ್ದೆ, ಸುಡಗಾಡ ಸುತ್ತಲು
ಒಂದೇ ಸಮ
ಮೋಡ ಕೂಡಲ ಕರುಣಾ ವೃಷ್ಟಿ"

(ಚೆನ್ನವೀರ ಕಣವಿ; ೧೯೬೬; ಪು. ೩೦೫)

'ಭೂಮಿ' ಮತ್ತು 'ಮೋಡ' ಒಂದಕ್ಕೊಂದು ಪೂರಕವಾದವುಗಳು; ಅಂತೆಯೇ 'ಗಾಂಧಿ' ಮತ್ತು 'ಸಮುದಾಯ' ಪರಸ್ಪರ ಪೂರಕವಾದವುಗಳು ಎಂಬ ಆಶಯ ಇಲ್ಲಿದೆ. ಮೋಡ ಸಮೃದ್ಧಿಯ ಮೂಲದ ಮಳೆಯ ಸಂಕೇತವಾದರೆ ಗಾಂಧೀಜಿ ಈ ನಾಡಿನ ಸಮೃದ್ಧಿಯ ಸಂಕೇತವೆಂಬುದು ಕವಿಯ ಕಲ್ಪನೆಯಾಗಿದೆ. ಬರಗಾಲದಲ್ಲಿ ಭೂಮಿಗೆ ಮಳೆಯಾಗದೆ ಬಂಜರುಗೊಂಡಿದ್ದ ಭೂಮಿಗೆ ಮೋಡ ಮಳೆಯಾಗಿ ಹಸುರಿನಿಂದ ಕಂಗೊಳಿಸುವಂತೆ, ಶೋಷಣೆ, ಅಸಮಾನತೆ, ಅನಾಚಾರಗಳಿಂದ ಕೂಡಿದ ಸಮುದಾಯಕ್ಕೆ ಗಾಂಧೀಜಿ ಮೋಡವಾಗಿ, ಮಳೆಯಾಗಿ ಬಂದವರು. ಹಳೆಯ ಕೊಳೆಯ ಜಾಡ್ಯವನ್ನು, ವೈಷಮ್ಯವನ್ನು ತೊಳೆದು ಬಿರುಕುಗೊಂಡ ಮಾನವರ ಎದೆಗಳನ್ನು ಬೆಸೆದವರು ಗಾಂಧೀಜಿ ಎಂದು ಚಿತ್ರಿಸಿದ್ದಾರೆ.

ಈಶ್ವರ ಸಣಕಲ್ಲ ಅವರ 'ಭಾಷ್ಪ - ಪುಷ್ಪ' ಎಂಬ ಕವಿತೆಯಲ್ಲಿ ಗಾಂಧೀಜಿಯವರ ಸಾವನ್ನು, ನೋವನ್ನು ಹೀಗೆ ಕಾಣಲಾಗಿದೆ.

ಹಿಮಗಿರಿಯನುಳಿದಾವ ದಿಣ್ಣೆಗಳ ಆಧಾರ?
ಧವಳಿಮಾಜಾಹ್ನವಿಯ ತೀವ್ರಗತಿ ಪ್ರಖರಕ್ಕೆ
ಹರಿ-ಹರ-ಭಗೀರಥರನುಳಿದಾವ ನಿರ್ಧಾರ!
ಲೋಕ - ವಿಸ್ತಾರವೇ ಗಾಂಧಿ-ಲೀಲಾ ರಂಗ!

ಆಕಾಶದಾತ್ಮದಲಿ ಬಹುಮುಖದ ಮೇಲೇಳ್ದು
ಬಗೆಬಗೆಯ ದೃಶ್ಯ - ಪ್ರಯೋಗಗಳ ತಾ ಸಮೆದು
ಚಿರ ಯೋಗ - ನಿದ್ರೆಯಲಿ ಮಲಗಿಹನು ಘನಸಂಗ!
ಓ, ಅಹಿಂಸಾ - ಸತ್ಯ - ಶಾಂತಿ - ಚಂದನ ಜ್ಯೋತಿ
ಕಂಪಿಟ್ಟು ಬೆಳಗುತಿದೆ ಬಾಂಬರಂ ಚಿರಖ್ಯಾತಿ||"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೪೫)

ಗಾಂಧೀಜಿ ನಂಬಿದ ಆದರ್ಶ, ಮೌಲ್ಯಗಳನ್ನು ಮೊದಲು ತಮ್ಮ ಮೇಲೆ ಮತ್ತು ತಮ್ಮ ಮನೆ ಮಂದಿಯ ಮೇಲೆ ಪ್ರಯೋಗಿಸಿದರು. ತಾವು ಆ ಮೌಲ್ಯಾದರ್ಶಗಳ ದಾರಿಯಲ್ಲಿ ನಡೆದು ನಂತರ ಜನತೆಗೆ ಅವುಗಳನ್ನು ಅಳವಡಿಸಿಕೊಳ್ಳಲು ಹೇಳಿದರು. ತ್ಯಾಗ, ಸಹನೆ, ಕರುಣೆ, ಕ್ಷಮೆ ಮುಂತಾದ ಗುಣಗಳಿಂದ ಲೋಕದಲ್ಲೆಡೆ ಗಾಂಧಿಯ ಲೀಲೆಗಳೇ ಪ್ರಚಾರಗೊಂಡು, ಅಹಿಂಸಾ-ಸತ್ಯ-ಶಾಂತಿಯ ಪ್ರತಿನಿಧಿಯಾದರು. ಇಂತಹ ಅಹಿಂಸಾವಾದಿ ಹಿಂಸಾವಾದಿಗಳ ಗುಂಡಿಗೆ ಬಲಿಯಾಗಿ ಯೋಗ ನಿದ್ರೆಯಲ್ಲಿ ಮಲಗಿ ಕೊನೆಗೂ ಎಲ್ಲರ ಮನಸ್ಸಲ್ಲಿ ಚಿರಖ್ಯಾತಿಯನ್ನು ಪಡೆದರು ಎಂಬ ಭಾವ ಈ ಕಾವ್ಯದಲ್ಲಿದೆ.

ವೀ. ಸೀತಾರಾಮಯ್ಯನವರು ತಮ್ಮ 'ಕೈ ಮುಗಿವ ಗಾಂಧಿ' ಕವಿತೆಯಲ್ಲಿ ಗಾಂಧೀಜಿಯವರು ಇಳೆಯ ಹೊರೆಯನ್ನು ಇಳಿಸಿ, ಭೂಮಿತಾಯಿಯ ಋಣವನ್ನು ತೀರಿಸಿ ಮೃತ್ಯುವಿನಿಂದ ಅಮೃತಕ್ಕೆ ಏರಿದ ಮತ್ತು ಅವರ ಭವ್ಯ ಜೀವನದ ಉತ್ತುಂಗ ಶ್ರೇಣಿಗಳನ್ನು ಇಲ್ಲಿ ಹೀಗೆ ಸ್ಮರಿಸಿದ್ದಾರೆ.

"ಕಾಳಕೂಟವ ಶಿವನು ಕುಡಿದು ಜೀರ್ಣಿಸಿದಂತೆ
ನಾಡವಿಷವನು ಉಂಟು ಕೇಡ ಹೀರಿದಿರಿ,
ಹಿಗ್ಗಿದುದೆ ಧರೆ ಕೊಲೆಗೆ? ಹಿಂಗಿತೇ ಋಣವವಗೆ, ನಮಗೆ?
ಎಂತು ಹಿಗ್ಗೀತು ಹಗೆಯು? ಎಂದು ಹಿಂಗೀತು ಋಣವು?"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೧೧೨)

ಶಿವನು ವಿಷವನ್ನು ಕುಡಿದು ಜೀರ್ಣಿಸಿಕೊಂಡು ನಂಜುಂಡನಾದಂತೆ ಗಾಂಧೀಜಿ ಈ ನಾಡಿನಲ್ಲಿರುವ ಹಿಂಸೆ, ಮತಾಂಧತೆ, ಶೋಷಣೆ, ದಬ್ಬಾಳಿಕೆ ಮತ್ತು ದ್ವೇಷ, ಸ್ವಾರ್ಥಗಳನ್ನು ತೊಳೆದು ಹಾಕಲು ಹಲವಾರು ಅವಮಾನ, ಅಪಮಾನಗಳನ್ನು, ಟೀಕೆಗಳನ್ನು ಉಂಡು ಸಹಿಸಿಕೊಂಡು, ಅವರು ಜನರ ದುರ್ನಡೆತಗಳನ್ನು ತಿದ್ದಿ ಸದಾಚಾರ, ಸದ್ಭಾವಗಳನ್ನು ಜನರಲ್ಲಿ ಬಿತ್ತಿ ಮಹಾತ್ಮರೆನಿಸಿಕೊಂಡರು ಎಂದು ಈ ಕವಿತೆ ಧ್ವನಿಸುತ್ತದೆ.

ಗಾಂಧೀಜಿಯವರು ನಮ್ಮಿಂದ ಅಗಲಿರಬಹುದು. ಆದರೆ ಅವರು ಬೆಳಗಿದ ಆದರ್ಶ, ಅರಿವು, ಜಾಗೃತಿಯ ಬೆಳಕನ್ನು ಎಂಥ ಶಕ್ತಿಯಿಂದಲೂ ಆರಿಸಲು ಸಾಧ್ಯವಿಲ್ಲ. ಅವು ಇಡೀ ಜಗತ್ತನ್ನೇ ತುಂಬಿಕೊಂಡಿವೆ ಎಂಬುದನ್ನು ಕವಿ ಕೃಷ್ಣಮೂರ್ತಿ ಪುರಾಣಿಕ ಅವರು 'ಅಮರ ಜ್ಯೋತಿ' ಎಂಬ ಕವಿತೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

"ಕೋಟಿ ಮನಗಳ ಬೆಳಗಿ ಶತಕೋಟಿ ಹೃದಯಗಳ
ಹಣತೆಯೊಳು ಚಾಚಿರುವ ಅಮರಜ್ಯೋತಿ
ಕಣ್ಣೀರ ನೇಹದೊಳು ಹಚ್ಚಿ ಸಾಸಿರ ದೀಪ
ಬೆಳಗುತಿಹುದಮಲಾತ್ಮ ದಿವ್ಯಜ್ಯೋತಿ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೪೯)

ಗಾಂಧೀಜಿಯವರು ತಮ್ಮ ಸತ್ಯಾನ್ವೇಷಣೆ, ಆದರ್ಶಗಳಿಂದ ಸಾವಿರಾರು ಜನಮನಗಳನ್ನು ಬೆಳಗಿದವರು. ಅದು ಈಗ ಶತಕೋಟಿ ಹೃದಯಗಳಲ್ಲಿ ಹಣತೆಯಾಗಿ ಬೆಳಗುತ್ತಿದೆ ಎಂದು ಪ್ರತಿನಿಧಿಸಲಾಗಿದೆ.

ದ.ರಾ. ಬೇಂದ್ರೆಯವರು ದೇಶದ ಜನತೆಯನ್ನು ಒಗ್ಗೂಡಿಸಿ ಸ್ವಾತಂತ್ರ್ಯ ಪಡೆಯುವಲ್ಲಿ ಗಾಂಧೀಜಿ ಪಾತ್ರ ಬಹುದೊಡ್ಡದು ಎಂಬುದನ್ನು 'ಜಯ ಜಯಾ ಗಾಂಧಿ ಮೋಹನಾ' ಎಂಬ ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ.

"ಕಾದಿದಿರಿ ಶಾಂತಿಗೆ ಅಂತು
ಅಂತನಃ ಬಂತು
ಭೀಷ್ಮ ಮರಣಾ - ಭೀಷ್ಮ ಮರಣಾ
ಬಯಲಾತು ಮಾತಿನ ಭ್ರಾಂತಿ
ತಣ್ಣಿಸಿತು ಶಾಂತಿ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೨೬-೨೭)

ಎಂದು ಶಾಂತಿಯ ಪ್ರತೀಕವೆಂದು ಗಾಂಧೀಜಿಯನ್ನು ನೆನೆಯುತ್ತಾ -

"ವೈರಿಯನು ಕೂಡ ಒಳಗೊಂಡು
ಪ್ರೇಮವ ಕಂಡು
ಅಬಲೆಯರ ಬಾಲಕರ ಹಿಂಡು
ಮಾಡಿದಿರಿ ದಂಡು
ಮುರಿದಿರಿ ಭೇದದ ಸಂದು
ವಿಶ್ವದ ಬಂಧು
ನಿಮ ಸೋಲಿಗೂ ಕೊನಿಗೂ ಜಯಾ
ಯಾರಿಗಿದೆ ಭಯಾ
ನಿತ್ಯಕರುಣಾ-ನಿತ್ಯಕರುಣಾ"

(ಅದೇ; ಪು. ೨೮-೨೯)

ಎಂದು ಶತ್ರುಗಳನ್ನು ದ್ವೇಷಿಸದೇ, ಸ್ತ್ರೀ ಶಕ್ತಿಯನ್ನು ಮತ್ತು ಯುವಶಕ್ತಿಯನ್ನು ಸಂಘಟಿಸಿ ಭೇದ-ಭಾವಗಳನ್ನು ಮುರಿದು ವಿಶ್ವ-ಭ್ರಾತೃತ್ವಗಳನ್ನಾಗಿ ಮಾಡಿ ಸೋಲಿನಲ್ಲಿ, ನೋವಿನಲ್ಲಿ ಗೆಲುವನ್ನು ಕಾಣುತ್ತಾ -

"ಸ್ವಾತಂತ್ರ್ಯಜೇತ ಜಯ ಜಯಾ
ಹುಟ್ಟಾ ನಿರ್ಭಯಾ
ದೇವಹವನಾ - ದೇವಹವನಾ"
(ಅದೇ; ಪು. ೩೧)

ಸ್ವಾತಂತ್ರ್ಯದ ರುವಾರಿಯಾಗಿ ಜಯ ಸಾಧಿಸಿದ ದೇವಮಾನವ-ದೇವಮಾನವ ಎಂದು ಬೇಂದ್ರೆಯವರು ಗಾಂಧೀಜಿಯನ್ನು ಸ್ತುತಿಸಿದ್ದಾರೆ.

ಬೇಂದ್ರೆಯವರಂತೆ ಕಾವ್ಯಾನಂದರೂ ಕೂಡ ಗಾಂಧೀಜಿಯವರ ಸರಳ ನಡೆ-ನುಡಿ-ಜೀವನಶೈಲಿಯನ್ನು ನೆನೆಯುತ್ತಾ ಅವರು ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದುಕೊಂಡು ಮಹಾತ್ಮನಾದುದ್ದನ್ನು, ದೇವಮಾನವರಾದುದ್ದನ್ನು ಶ್ರೀ ಶರಣ ಕವಿತೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

"ಅಧಿಕಾರ ಪದವಿಗಳು ಅಡಿಗೆರಗಿ ನಿಂದರೂ
ಕಡೆಗಣಿಸಿ ಅವುಗಳನು, ವಾರ್ಧಕ್ಯ ಬಂದರೂ
ಬಡವಗಿಂತಲು ಬಡವನಾಗಿ ಗುಡಿಸಲಿನಲ್ಲಿ
ಬಿಡುವಿರದೆ ದುಡಿದವನ ಅರ್ಧ ಬರಿಮೈಯಲ್ಲಿ
ಬಡವನಿಗೆ ಸಿಕ್ಕದಿಹ ಆಹಾರ ಔಷಧವು
ಯಾವುದೂ ಬೇಡೆಂದ ದೇವ ಮಾನವನವನು!"
(ಧಾರವಾಡಕರ.ರಾ.ಯ. (ಸಂ); ೧೯೬೦; ಪು. ೪೦)

ಗಾಂಧೀಜಿ ಉನ್ನತ ವರ್ಗದಲ್ಲಿ ಜನಿಸಿದವರು. ಉನ್ನತ ಶಿಕ್ಷಣವನ್ನು ವಿದೇಶದಲ್ಲಿ ಪಡೆದು ಬಂದವರು. ಹಲವಾರು ಅಧಿಕಾರ, ಪದವಿಗಳು ಅವರನ್ನು ಹುಡುಕಿಕೊಂಡು ಬಂದರೂ ಸಹ ಅವುಗಳನ್ನೆಲ್ಲಾ ಧಿಕ್ಕರಿಸಿ ಬಡ ಜನರ ಏಳಿಗೆಗಾಗಿ ಬದುಕಿದವರು. ಬಡವರ ಜೀವನ ಶೈಲಿಯಲ್ಲಿಯೇ ತಾನೂ ಬದುಕಿ ಸರಳ ಜೀವನದ ಉದಾತ್ತತೆಯನ್ನು ಮೆರೆದು ಒಬ್ಬ ಮಹಾದೇವ ಮಾನವನಾದರು ಎಂದು ಕಾವ್ಯಾನಂದರು ಚಿತ್ರಿಸಿದ್ದಾರೆ.

ಬ್ರಿಟೀಷರ ಆಡಳಿತಕ್ಕೆ ಒಳಗಾಗಿದ್ದ ಭಾರತಮಾತೆಯನ್ನು ಬಿಡಿಸಲು ಬಂದ ಗಾಂಧಿಯನ್ನು ಒಬ್ಬ ಅವತಾರಿ ಪುರುಷನಾಗಿ ಜಿ.ಆರ್. ಪಾಂಡೇಶ್ವರ ಅವರು 'ಅವತಾರಿ ಗಾಂಧಿ' ಎಂಬ ಕವನದಲ್ಲಿ ಪ್ರತಿನಿಧಿಸಿದ್ದಾರೆ.

"ಹತ್ತು ಶತಮಾನಗಳ ದಾಸ್ಯಭಾರವ ಹೊತ್ತು
ಕತ್ತುಬಗ್ಗಿಸಿ ಮಾತೆ ನಿಂತಿರುವಳೀ ಹೊತ್ತು!
ಹೆತ್ತಮಕ್ಕಳು ಹಸಿದು ಹಲಬುತಿರಲಜ್ಞಾನ
ಕತ್ತಲೆಯ ಕಾರೊಡ್ಡು ದಾರಿಗಟ್ಟಿರೆ, ಮಾನ
ಎತ್ತೆತ್ತಲೋ ಹಾರಿ, ಮಾಯಾವಾಗಿರೆ ತೀರ,
ಹೆತ್ತಟ್ಟಿ ಹಾರೈಸಲುದಿಸಿ ಬಂದನು ಧೀರ!"
(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೮೫)

ಭಾರತ ಮಾತೆ ಬ್ರಿಟೀಷರ ದಾಸ್ಯಭಾರದಲ್ಲಿ ಕತ್ತು ಬಗ್ಗಿಸಿ ನಿಂತು ಅವರ ತೊತ್ತಿನವಳಾಗಿದ್ದಳು. ಅವಳ ಮಕ್ಕಳನ್ನು ಉಪವಾಸದಿಂದ ನರಳುವಂತೆ ಮಾಡಿದ್ದಳು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಗಾಂಧೀಜಿ ಸತ್ಯ, ಶಾಂತಿ, ಅಹಿಂಸೆಯ ಅಸ್ತ್ರಗಳಿಂದ ಯಾವುದೇ ರಕ್ತಪಾತವಿಲ್ಲದೆ, ಭಾರತ ಮಾತೆಯನ್ನು ಅವಮಾನಕ್ಕೆ ಗುರಿಮಾಡದೆ ಬ್ರಿಟೀಷರ ಸಂಕೋಲೆಯಿಂದ ಮಾತೆಯನ್ನು ಸ್ವತಂತ್ರಗೊಳಿಸಿದ ಧೀರನೆಂದು ಪ್ರತಿನಿಧಿಸಿದ್ದಾರೆ. ರಾಷ್ಟ್ರಕವಿ ಗೋವಿಂದ ಪೈ 'ಮಹಾತ್ಮನ ಆತ್ಮಕ್ಕೆ' ಎಂಬ ಕವಿತೆಯಲ್ಲಿ ಗಾಂಧಿಯನ್ನು -

"ನಿನ್ನ ಮಮತೆಯೊ ಮಹಾತ್ಮಾ, ಸನಾತನ ಧರ್ಮ
ಕನಿತೆ, ಭಾರತಕನಿತೆ ಅಲ್ಲ. ಜಗಕೆಲ್ಲ!
ಅರ್ಧಧರಣಿಯ ದಿನಾರ್ಧಕೆ ಬೆಳಗಿಸಲು ಘರ್ಮ
ಕಿರಣ ನಿನ್ನೊಲವೂರದೆಡೆ ಜಗದೊಳಿಲ್ಲ!
ಕೃಷ್ಣ, ಮಾವೀರ, ಗೌತಮ, ಯೇಸುವೀ ನಾಲ್ವ
ರವತಾರಿಗಳ ಧಾತುವಿಂದಾಯ್ದು ನಿನ್ನ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೮೭)

ಗಾಂಧೀಜಿ ಕೃಷ್ಣ, ಮಹಾವೀರ, ಗೌತಮ, ಯೇಸುಗಳು ನೀಡಿದ ಸಂದೇಶದ ಮಾರ್ಗದಲ್ಲಿ ನಡೆದು ಜಗತ್ತಿಗೆ ಉತ್ತಮ ಹಾದಿಯನ್ನು ತೋರಿದವರು. ಈ ನಾಲ್ವರ ಅವತಾರಿಗಳ ಧಾತುವಿನಿಂದ ಗಾಂಧೀ ಮಹಾತ್ಮರಾದರು ಎಂದು ಪೈಯವರು ಸ್ಮರಿಸಿದ್ದಾರೆ.

ಎಸ್.ಎಸ್. ಬಸುಪಟ್ಟದ ಅವರಿಗೆ ಗಾಂಧೀಜಿ ಒಬ್ಬ ಯುಗಪುರುಷರಾಗಿ ಕಂಡಿದ್ದಾರೆ. ಗಾಂಧೀಜಿಯ ತತ್ವಾದರ್ಶಗಳು ಉತ್ತಮ ಜೀವನಕ್ಕೆ ಸನ್ಮಾರ್ಗದ ಸೂತ್ರಗಳಾಗಿವೆ. ಮಾನವೀಯತೆ, ಸತ್ಯ, ಶಾಂತಿ ಮತ್ತು ಅಹಿಂಸೆಗೆ ಮತ್ತೊಂದು ಹೆಸರು ಗಾಂಧೀಜಿ ಎನ್ನುವ ರೀತಿಯಲ್ಲಿ ಎಸ್.ಎಸ್. ಬಸುಪಟ್ಟದ ಅವರು 'ಬಾಪೂಜಿ!' ಎಂಬ ಕವನದಲ್ಲಿ ಹೀಗೆ ಚಿತ್ರಿಸಿದ್ದಾರೆ.

"ಮಾನವತೆ ಮೈಗೊಂಡ ಓ ಮೂರ್ತಿ ಮೋಹನನೇ,
ಕರ್ತವ್ಯ - ಕರಮರಾ ಓ ಪುಣ್ಯಾ ಬೆಳಸೇ,
ಗುಣಕೆ ಗಣ್ಯತೆ ತಂದೆ ಶ್ರೀಗಂಧಿ ಪಾರ್ಶ್ವದಲಿ
ಭಾರತಕೆ ಬಾಪೂಜಿ ಭಾಗ್ಯನಿಧಿ ವಿಶ್ವದಲಿ
ಶಾಂತಿ-ಸತ್ಯಾಹಿಂಸೆ ಸುಗುಣಗಳ ತವ ಮೂರ್ತಿ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೮೯)

ಹೀಗೆ ಶಾಂತಿ, ಸತ್ಯ, ಅಹಿಂಸೆಗಳ ಸಾಕಾರಮೂರ್ತಿ ಎಂದು ಬಸುಪಟ್ಟದ ಅವರು ಗಾಂಧಿಯನ್ನು ಪ್ರತಿನಿಧಿಸಿದ್ದಾರೆ. ಭುಜೇಂದ್ರ ಮಹೀಷವಾಡಿ ಅವರು 'ಜ್ಯೋತಿ ನಂದಿಹೋಯಿತೆ?' ಕವನದಲ್ಲಿ -

"ಜಗವನೆಲ್ಲ ಬೆಳಗುತಿರುವ
ಜ್ಯೋತಿ ನಂದಿಹೋಯಿತೆ?
ಶಾಂತಿ - ಸುಧೆಯ ನದಿಯು ಬತ್ತಿ
ಅರಬು ಬಂದುದಾಯಿತೆ?"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೯೪)

ಜಗತ್ತಿಗೆ ಬೆಳಕು ಬೀರುವ ಸೂರ್ಯ ಅಥವಾ ಜ್ಯೋತಿಗೆ ಗಾಂಧಿಯನ್ನು ಹೋಲಿಸಿದ್ದಾರೆ ಮತ್ತು ಮುಂದೆ ಭುಜೇಂದ್ರ ಮಹೀಷವಾಡಿ ಅವರು 'ಓ! ತಂದೆ' ಕವನದಲ್ಲಿ ಗಾಂಧಿಯನ್ನು ಈ ರೀತಿ ಕಾವ್ಯವಾಗಿಸಿದ್ದಾರೆ.

"ನಿತ್ಯಜೀವನದಲ್ಲಿ ಸತ್ಯಶೋಧನಗೈದು
ಸದ್ಗುಣದ ಗಂಧ ಬೀರುತ ಗಾಂಧಿಯಾದೆಯಾ?
ಭಾರತಾಂಬೆಗೆ ಮಣಿದು ಪಾರತಂತ್ರ್ಯವ ಹರಿದು
ಸ್ವಾತಂತ್ರ್ಯಸಂಭ್ರಮಕೆ ಸವಿ ನಾಂದಿಯಾದೆಯಾ?"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೯೩)

ಹೀಗೆ ಗಾಂಧೀಜಿ ತಮ್ಮ ಇಡೀ ಜೀವನವನ್ನು ಸತ್ಯಶೋಧನೆಗೆ ಒಳಪಡಿಸಿದರು. ಶಾಂತಿ, ಅಹಿಂಸೆ, ಸತ್ಯಾಗ್ರಹದ ಮಂತ್ರಗಳನ್ನು ಜಪಿಸುತ್ತಾ, ಪಾಲಿಸುತ್ತಾ ಅಹಿಂಸಾ ಮಾರ್ಗದಲ್ಲಿ ಭಾರತಾಂಬೆಯನ್ನು ಪಾರತಂತ್ರ್ಯದ ಸುಳಿಯಿಂದ ಮುಕ್ತಗೊಳಿಸಿದರು. ಸ್ವಾತಂತ್ರ್ಯ ಸಂಭ್ರಮಕ್ಕೆ ಗಾಂಧಿಯೇ ನಾಂದಿಯಾದರು ಎಂದು ನೆನೆಯಲಾಗಿದೆ.

ಪಾರತಂತ್ರ್ಯದ ಭಾರತದಲ್ಲಿ ಮೋಹ, ಮೋಸ, ಸುಳ್ಳುಗಳಿಂದ ತಾಂಡವಾಡುತ್ತಿದ್ದ ಕಗ್ಗತ್ತಲಿನಿಂದ ಕೂಡಿದ ಭರತ ನಾಡಿಗೆ ಗಾಂಧೀಜಿ ಒಬ್ಬ ಕಿರಣ(ಬೆಳಕು)ವೆಂಬಂತೆ ಬಂದು ಸತ್ಯ, ಶಾಂತಿ, ಪ್ರೀತಿಯ ಪತಾಕೆಯನ್ನು ಹಾರಿಸಿದರು ಎಂದು ರಂ.ಶ್ರೀ. ಮುಗಳಿ ಅವರು 'ಗಾಂಧಿಕಿರಣ' ಎಂಬ ಕವನದಲ್ಲಿ ಚಿತ್ರಿಸಿದ್ದಾರೆ.

"ಮುಗಿಲು ಕವಿದು ದಾರಿಯರಿದು
ಕತ್ತಲಾದ ನೆಲದಲು
ಬಂದಿತಿಂದು ಗಾಂಧಿಕಿರಣ
ಪ್ರೀತಿಪಥವ ಬೆಳಗಲು

ತನ್ನ ಬಾಳ ಶುಚಿಯಗೈದು
ಸಾರಿತದರ ರೀತಿಯು;
'ಪ್ರೀತಿಯೊಂದೆ ಜಗದ ಸತ್ಯ
ಸತ್ಯವೆನ್ನ ಪ್ರೀತಿಯು.'

ನನ್ನ ಹಿಂಸೆ ಪ್ರೀತಿಯೆಂಬ
ಹಿರಿಯ ಬಾಳಮಂತ್ರವು
ಅದುವೆ ಜಪವು ಅದುವೆ ತಪವು
ಅರಿದ ಮನದ ತಂತ್ರವು"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೯೭-೯೮)

ಶಿವನು ವಿಷವನ್ನು ಕುಡಿದು ಜೀರ್ಣಿಸಿಕೊಂಡಂತೆ ಗಾಂಧೀಜಿ ಹಿಂಸೆಯನ್ನು ಸಹಿಸಿಕೊಂಡು ಅಹಿಂಸೆಯನ್ನು ಪ್ರತಿಪಾದಿಸಿದರು ಎಂಬುದು ಈ ಕವಿತೆಯ ಆಶಯವಾಗಿದೆ.

ಗಾಂಧೀಜಿಯವರು ಎಷ್ಟೋ ಜನ ಪತಿತರಿಗೆ, ದಲಿತರಿಗೆ, ಬಡವರಿಗೆ, ರೈತರಿಗೆ ಮತ್ತು ಕಾರ್ಮಿಕರಿಗೆ ಬೆನ್ನೆಲುಬಾಗಿ ನಿಂತು ಮುಂದೆ ಬರುವಂತೆ ಮಾಡಿದರು. ಸತ್ಯ, ಶಾಂತಿ ಮತ್ತು ಅಹಿಂಸೆಯ ಸನ್ಮಾರ್ಗದಲ್ಲಿ ಜೀವಿಸುವುದನ್ನು ಕಲಿಸಿಕೊಟ್ಟರು. ಹಾಗಾಗಿ ಇವರ ವ್ಯಕ್ತಿತ್ವ ವಿಶ್ವಕ್ಕೆ ಸರಿಸಾಟಿಯಾದುದು ಎಂದು ಬ.ಗಿ. ಯಲ್ಲಟ್ಟಿ ಅವರು 'ವಿಶ್ವಮಾನ್ಯ' ಕವಿತೆಯಲ್ಲಿ ವಿಶ್ವಮಾನವನಾಗಿ ಪ್ರತಿನಿಧಿಸಿದ್ದಾರೆ.

"ಏನಿದು ತಲೆ ಎಂತಹಕಲೆ
ವಿಶ್ವವೆ ತಲೆದೂಗಿತು ಸಲೆ
ಗುಣಮೋಹನ ಮನಮೋಹನ
ಸರ್ವಕಾಲ ಜನಾದರಣ!
ಸುರಿಯಿತು ನುಡಿಮುತ್ತಿನ ಮಳೆ
ದೆಸೆದೆಸೆಗೂ ಬೆಳಗಿತು ಕಳೆ!
ಸರ್ವದೇಶ ಒಪ್ಪುವಂಥ
ಸರ್ವಜನತೆಯಪ್ಪುವಂಥ
ವಿಶ್ವಾತ್ಮಕ ದೃಷ್ಟಿಯಾಂತು
ಆತ್ಮೀಯತೆ ಭಾವ ಬಂತು!
ವಿಶ್ವಮಾನ್ಯ ಮೂರ್ತಿಗೆ!!"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೯೫)

ಗಾಂಧೀಜಿ ಮತ್ತು ಅಹಿಂಸೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಕವಿರುದ್ರ ಅವರು 'ಅಹಿಂಸೆ - ಗಾಂಧಿ' ಎಂಬ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

"ಅಹಿಂಸೆ ನಮ್ಮ ಮಂತ್ರ !
ತ್ಯಾಗ ನಮ್ಮ ತಂತ್ರ ॥
ಹನಿರಕ್ತ ಸಿಡಿದಿಲ್ಲ! ಮನದಿ ಭಯ ಸುಳಿದಿಲ್ಲ!
ಪ್ರಾಣಿಗಳ ಹುರಿದೊಗೆವ ಅಸ್ತ್ರನಿಸ್ತ್ರಗಳಿಲ್ಲ ॥

ಚಣಚಣಕೆ ಪರರಕ್ತ ಕುಡಿಕುಡಿದು ಬೆಳೆದಿಲ್ಲ !
ಎಂದೆಂದು ಹೀಗಿದ್ದು ಅಮರರಾದೆವು ನಾವು"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೧೦೧)

ಯಾವುದೇ ರಕ್ತಪಾತವಿಲ್ಲದೇ ಯಾರನ್ನೂ ಹಿಂಸಿಸದೆ ಅಹಿಂಸೆಯ ಮೂಲಕ ಸ್ವಾತಂತ್ರ್ಯ ಪಡೆದದ್ದು ನಾವೇ ಧನ್ಯರು ನಾವೇ ಅಮರರಾದೆವು ಎಂದು ಹೇಳುತ್ತಾ -

"ಹೇಮದಾಶೆಯ ತೊರೆದು ನಿಜಮನುಜರಾಗೋಣ
ಆ ಮಹಾತ್ಮನ ದಿವ್ಯ ಪಥವಿಡಿದು ಬದುಕೋಣ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೧೦೨)

ಆ ಮಹಾತ್ಮನ ದಾರಿಯಲ್ಲಿ ನಡೆಯೋಣವೆಂದು ಕವಿ ಆಶಿಸಿದ್ದಾರೆ. ಗಾಂಧೀಜಿಯವರು ಇಡೀ ಭಾರತೀಯ ಜನಸಾಮಾನ್ಯರ ಮನದಲ್ಲಿ, ಭಾರತೀಯ ಸಂಸ್ಕೃತಿಯಲ್ಲಿ ಬೆರೆತುಹೋಗಿದ್ದಾರೆ. ಹಾಗಾಗಿ ಗಾಂಧಿ ಈ ದೇಶದ ಸಂಸ್ಕೃತಿಯ ಪ್ರತೀಕವಾಗಿ ಮತ್ತು ಎಲ್ಲರ ಮನದಲ್ಲಿ ನೆಲೆಸಿ ಪ್ರತಿಯೊಬ್ಬರ ನಾಲಿಗೆಯ ಮೇಲೆ ಹರಿದಾಡುವ ಮಹಾತ್ಮನೆಂದು ವಿ. ಸೀತಾರಾಮಯ್ಯನವರು 'ಮಹಾತ್ಮ' ಎಂಬ ಕವಿತೆಯಲ್ಲಿ -

"ಎಲ್ಲವನು ಬಲ್ಲವನು ಎಲ್ಲರಿಗು ಒಲಿವವನು
ಎಲ್ಲವನು ಗೆಲುವವನು ನೀನು ಕಾಣಾ,
ಎಲ್ಲ ಸೊಬಗನು ಸವಿದು ಬಲ್ಲವನು ನೀ ಕಣಾ
ಎಲ್ಲರೂ ಸವಿವನಕ ತಣಿಯದವನು"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೧೧೦)

ಚಿತ್ರಿಸಿದ್ದಾರೆ. ಬ.ಹೆ. ಶ್ರೀಧರ ಅವರಿಗೆ ಗಾಂಧೀಜಿ ಬುದ್ಧನಾಗಿಯೇ ಕಂಡಿದ್ದಾರೆ. ಸತ್ಯ, ದೇವರನ್ನು ಹುಡುಕುತ್ತ ಹೊರಟ ಸಿದ್ಧಾರ್ಥ ಹಲವು ವರ್ಷಗಳ ಕಾಲ ಶಾಂತಿಯ ತಪಸ್ಸನ್ನು ಮಾಡಿ ಬುದ್ಧನಾದ. ಶಾಶ್ವತ ಸತ್ಯವನ್ನು, ಅರಿವನ್ನು ಕಂಡುಕೊಂಡು ಬುದ್ಧ ಜನಸಾಮಾನ್ಯರ ದುಃಖ, ನೋವನ್ನು ನಿವಾರಿಸಲು ಮುಂದಾದನು. ಬ.ಹೆ. ಶ್ರೀಧರ ಅವರು ಗಾಂಧೀಜಿಯನ್ನು 'ರಾಷ್ಟ್ರ ಪಿತಾಮಹ' ಎಂಬ ಕವಿತೆಯಲ್ಲಿ ಹೀಗೆ ಚಿತ್ರಿಸಿದ್ದಾರೆ.

"ಈತನಭಿನವಬುದ್ಧನೀತಕಾರಣಪುರುಷ,
ಸೋತು ಗೆಲುವ ವಿದಗ್ಧ ಸಂಪ್ರಬುದ್ಧ;
ಭೀತರನು ಕಾವ ನಿರ್ಭೀತಾತ್ಮನೀತ ನವ -
ನೀತ ಕೋಮಲ ಹೃದಯ, ನವ್ಯಸಿದ್ಧ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೧೨೪)

ಹೀಗೆ ಬುದ್ಧನೊಂದಿಗೆ ಸಮೀಕರಿಸುವುದು ಜೊತೆಗೆ ಸ್ವಾತಂತ್ರ್ಯ ಸಮರದ ಪಂಡಿತನಾಗಿ, ಭಾರತದ ಭಾಗ್ಯಚಕ್ರವ ತಿರುಗಿಸಿದ ತಂತ್ರಸಾರನಾಗಿ, ಸರ್ವೋದ್ಧಾರಕನಾಗಿ, ಸತ್ಯಾಹಿಂಸೆಯಸ್ತ್ರಗಳನ್ನು

ಹಿಡಿದ ಕರ್ಮಯೋಗಿಯಾಗಿ, ನುಡಿದಂತೆ ನಡೆವ ನವದೇವಮಾನವನಾಗಿ, ಯುಗಪುರುಷನಾಗಿ, ಶಾಂತಿದೂತನಾಗಿ ಕವಿ ಇಲ್ಲಿ ಪ್ರತಿನಿಧಿಸಿದ್ದಾನೆ.

ಸಿಂಪಿ ಲಿಂಗಣ್ಣ ಅವರು 'ಬಹುರೂಪಿ' ಕವನದಲ್ಲಿ ಗಾಂಧೀಜಿಯನ್ನು ಹಲವು ಮಹಾಪುರುಷರಿಗೆ ಹೋಲಿಸಿದ್ದಾರೆ.

"ರಾಟಿಕಾಮಧೇನುವಿರುವ ತವಸಿ ವರವಸಿಷ್ಠನು
ಕೋಟಿ ವಿಘ್ನಗಳಲಿ ಸತ್ಯಬಿಡದ, ಹರಿಶ್ಚಂದ್ರನು ||
ಘೋರಸಾಸದಿಂದ ಸೃಷ್ಟಿಗೈದ ವಿಶ್ವಾಮಿತ್ರನು
ಘೋರಹಿಂಸೆ ಕರುಣೆಯಿಂದ ಮುರಿಯನಿಂತ ಬುದ್ಧನು ||
ದನುಜಬಲವ ದೈವಶಕ್ತಿಯಿಂದ ಮುರಿವಕೃಷ್ಣನು
ಮನುಜಕುಲವ ಪ್ರೇಮದಿಂದ ಗೆಲಲುನಿಂತ ಕ್ರಿಸ್ತನು ||
ತಂದೆಯಾಜ್ಞೆಯಂತೆ ಮನಸಿನೊಲವ ತೊರೆದ ರಾಮನು
ಒಂದುಘೋರ ಆಣೆಯಿಟ್ಟುಕೊಂಡು ನಡೆದ ಭೀಷ್ಮನು ||
ದಿವ್ಯ ನೆರವಿನಿಂದ ಗುರಿಯ ಹೊಡೆವ ಇಂದ್ರತನುಜನು
....
ನಲ್ಲೆಯಲ್ಲಿ ದೈವರೂಪಕಂಡ ರಾಮಕೃಷ್ಣನು
ಹೊಲೆಯರನ್ನು ಹರಿಯಜನರಗೈದ ಪುಣ್ಯವಂಶನು ||
ಬಗೆದರಷ್ಟು ಬಗೆಯಭಾವ ಬೆಳೆಗುವಾ ಮಹಾತ್ಮನು"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೧೩೯)

ಹೀಗೆ ಮಹಾ ಚಾರಿತ್ರಿಕ ಹಾಗೂ ಪೌರಾಣಿಕ ಮಹಾಪುರುಷರ ವ್ಯಕ್ತಿತ್ವಗಳಿಗೆ ಹೋಲಿಸಿ ಗಾಂಧಿಯನ್ನು ಬಹುರೂಪಿಯಾಗಿ ಕಂಡರಿಸಿದ್ದಾರೆ.

ಗಾಂಧೀಜಿಯವರ ವ್ಯಕ್ತಿತ್ವ ವೈಶಾಲ್ಯತೆ ಸ್ವದೇಶ ಮತ್ತು ವಿದೇಶಗಳಲ್ಲಿಯೂ ಸಾರ್ವತ್ರಿಕ ಗೌರವವನ್ನು ಪಡೆದುಕೊಂಡುದುದಾಗಿದೆ. ಕಾರಣ ಅವರು ಶ್ರೀಸಾಮಾನ್ಯನಾಗಿ ಬದುಕಿದುದು ಮತ್ತು ವೈಯಕ್ತಿಕ ಹಿತಾಸಕ್ತಿಗಳನ್ನು ತ್ಯಜಿಸಿದ್ದು. ಅಹಿಂಸೆ, ಆಸ್ತೇಯ, ಅಪರಿಗ್ರಹ ಇವೇ ಮೊದಲಾದ ಉದಾತ್ತ ತತ್ವಗಳು ಅನುಲಂಘನೀಯವಾದವುಗಳೆಂದು ಭಾವಿಸಿ ಶ್ರದ್ಧೆಯಿಂದ ಅವುಗಳನ್ನು ತಮ್ಮ ಜೀವನದಲ್ಲಿ ಪಾಲಿಸಿಕೊಂಡು ಬಂದರು. ಈ ಎಲ್ಲ ಕಾರಣಗಳಿಂದಾಗಿ ಗಾಂಧೀಜಿ ನವೋದಯ ಕವಿಗಳಿಗೆ ಬಾನೆತ್ತರಕ್ಕೆ ಬೆಳೆದು ನಿಂತ ಹಿಮಾಲಯದಂತೆ ದರ್ಶನವಾಗಿದ್ದಾರೆ.

ಹಿಂಸೆಗೆ ಎದುರಾಗಿ ನಿಶ್ಯಸ್ತ್ರವಾದ ಅಹಿಂಸೆಯನ್ನಿಟ್ಟು ಇಡೀ ನಾಡನ್ನು ಎತ್ತಿ ನಿಲ್ಲಿಸಿ ಜಯಿಸಿದ ಆ ಮಹಾತ್ಮ ಗಾಂಧಿ ಬ್ರಿಟೀಷರ ದಾಸ್ಯದಿಂದ ಕೋಟಿ ಕೋಟಿ ಜನರನ್ನು ವಿಮುಕ್ತಿಗೊಳಿಸಿ ತಾನು ಮುಕ್ತಿ ಪಡೆದರು. ಬ್ರಿಟೀಷರ ವಿರುದ್ಧ ನಿಶ್ಯಸ್ತ್ರಗಳನ್ನು ಬಳಸಿಕೊಂಡು ಹೋರಾಡಿ ತ್ರಿವಿಕ್ರಮನಂತೆ ಜಯಿಸುತ್ತಲೇ ಬಂದು, ಕೊನೆಗೆ ನಿರ್ದಯಿಯೊಬ್ಬನ ಗುಂಡಿಗೆ

ಬಲಿಯಾದ ಗಾಂಧೀಜಿಯನ್ನು ಕುರಿತು ಡಾ. ಪಿ.ಎಸ್. ರಾಮಾನುಜಂ ಅವರು 'ಓ ಅದ್ಭುತ ಸನ್ಯಾಸಿ!' ಕವಿತೆಯಲ್ಲಿ ಗಾಂಧಿಯನ್ನು ಒಬ್ಬ ಯುಗಪುರುಷರಂತೆ ಚಿತ್ರಿಸಿದ್ದಾರೆ.

"ಓ ಅದ್ಭುತ ಸನ್ಯಾಸಿ! ಸತ್ಯಾಗ್ರಹ ಸಮರ ವಿನ್ಯಾಸಿ!
ದೇಹದ ಅರಿಗಳನೋಡಿಸಿದುದಲ್ಲದೆ
ದೇಶದ ಅರಿಗಳನೂ ಹೊರಗಟ್ಟಿದ
ಓ ಯುಗಪುರುಷ ಮಹಾತ್ಮಾ! ನೀನೇ ಭಾರತದ ಆತ್ಮ."

ದೇಶದಿಂದ ಬ್ರಿಟೀಷರನ್ನು ಹೊರಗೋಡಿಸಿದ ಸತ್ಯಾಗ್ರಹ ಸಮರ ವೀರನಾದ ಗಾಂಧಿಯನ್ನು ಕುರಿತು -

"ಉಪ್ಪೇ ನಿನ್ನ ಶಸ್ತ್ರಾಸ್ತ್ರ, ವೈರಿಗಳ ಗುಂಡಿಗೆ ಪ್ರತ್ಯಸ್ತ್ರ
ಕರಾಳ ಶಾಸನಕೆ ಸತ್ಯ ನಿಷ್ಠೆಯೇ ನಿನ್ನ ಪ್ರತಿಬಲ
ರಾಷ್ಟ್ರಪ್ರೇಮಿ ಹೃದಯಗಳ ಮಹಾಪೂರವೆ
ನಿನ್ನ ಚತುರಂಗಬಲ"

(ಚಂದ್ರಶೇಖರ ಪಾಟೀಲ ಮತ್ತು ಇತರರು (ಸಂ); ೧೯೯೮; ಪು. ೯೫)

ಉಪ್ಪನ್ನು ಶಸ್ತ್ರಾಸ್ತ್ರವನ್ನಾಗಿ ಮಾಡಿಕೊಂಡು ಸತ್ಯಾಗ್ರಹವನ್ನು ಆರಂಭಿಸಿ, ಸತ್ಯ, ಅಹಿಂಸೆಗಳನ್ನು ವೈರಿಗಳ ಗುಂಡಿಗೆ ಪ್ರತ್ಯಸ್ತ್ರಗಳನ್ನಾಗಿ ಬಳಸಿಕೊಂಡು ರಾಷ್ಟ್ರದ ಜನತೆಯನ್ನು ಒಂದುಗೂಡಿಸಿ ನಾಡಿಗೆ ಸ್ವಾತಂತ್ರ್ಯವನ್ನು ತಂದು ಕೊಟ್ಟ ಗಾಂಧೀಜಿ ಈ ಯುಗದ ಯುಗ ಪುರುಷನೆಂಬಂತೆ ಚಿತ್ರಿಸಿದ್ದಾರೆ.

ಅರಿವು ಇಲ್ಲದೆ ನಿತ್ಯ ಹಿಂಸೆಯಲ್ಲೇ ಹಿಗ್ಗುತ್ತಿರುವ ಈ ಜಗತ್ತಿನ ಬಾಳಲ್ಲಿ ಕವಿ ಕೆ.ಎಸ್. ನಿಸಾರ್ ಅಹಮದ್ ಅವರು ಗಾಂಧೀಯ ಹುಡುಕಾಟವನ್ನು 'ಬಾಪೂ' ಎಂಬ ಕವಿತೆಯಲ್ಲಿ ಹೀಗೆ ಮಾಡಿದ್ದಾರೆ.

"ಭವಿಷ್ಯತ್ತಿಗೂ ನಿನಗೂ ಕಟ್ಟಾಗಿ ಹೊಕ್ಕುಳೆಳೆ
ತಲೆಕೆರೆಯುತಿರುವಾಗ ಎಲ್ಲಿ ಹುಡುಕಲಿ ನಿನ್ನ?
ಎಲ್ಲಿ ಹುಡುಕಲಿ ಮಹಾತ್ಮ? ಎಲ್ಲಿ?
ಹೆಸರಲ್ಲೆ? ಸಮಾಧಿ ಪಾರ್ಕಿನ ಪ್ರತಿಮೆಯಲ್ಲೆ?
ಭಕ್ತರಲ್ಲೇ?
ಜಾತ್ರೆಜಂಗುಳಿಯಲ್ಲಿ ಕ್ಷೀಣಿಸದ ನಿನ್ನ ಲೆಫ್ಟ್‌ರೈಟು ಸನ್ನೆಯಲ್ಲೆ?
ಸತ್ಯಾಗ್ರಹ ಉಪವಾಸ ಮುಷ್ಕರದ ಮರೆಯಲ್ಲೆ?
ಪಡಖಾನೆಯಲ್ಲೇ? ಕಾಲಧರ್ಮವಾಗಿರುವ ದುರಭಿಲಾಷೆಯಲ್ಲೆ?
ತಿಕ್ಕಾಡಿರುವ ಭಾಷೆಯಲ್ಲೇ?
ಅಥವಾ ತಕ್ಕಲಿಯಲ್ಲಿ? ಫ್ಯಾಕ್ಟರಿಯಲ್ಲಿ?

ಕಛೇರಿಗಳ ಏಲುಫೈಲಾದ ಫೈಲುಫೈಲುಗಳ ಕಪಾಟಿನಲ್ಲಿ?
ಖೋಟ ನೋಟಿನಲ್ಲಿ?
- ಎಲ್ಲಿ ಹುಡುಕಲಿ ಮಹಾತ್ಮ? ಎಲ್ಲಿ ಹುಡುಕಲಿ ನಿನ್ನ?"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೧೯-೧೨೦)

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಗಾಂಧಿಯ ಮೌಲ್ಯಗಳು ನಿಧಾನವಾಗಿ ಕಣ್ಮರೆಯಾಗುತ್ತಿರುವಾಗ ಹುಡುಕಾಟದ ಆತಂಕವನ್ನು ಕವಿ ಹೀಗೆ ವ್ಯಕ್ತಪಡಿಸಿದ್ದಾರೆ.

ಕವಿ ಜಿ.ಎಸ್. ಶಿವರುದ್ರಪ್ಪನವರು ಒಂದೇ ಕಾವ್ಯ ಪರಿಹಾರಕ್ಕೆ ಸೀಮಿತರಾಗದೆ ನವೋದಯ, ನವ್ಯ, ದಲಿತ ಬಂಡಾಯ ಕಾವ್ಯದವರೆಗೂ ತಮ್ಮ ಕಾವ್ಯ ಕೃಷಿಯನ್ನು ವಿಸ್ತರಿಸಿಕೊಂಡಿದ್ದಾರೆ. ಇವರ 'ಗಾಂಧಿ' ಎಂಬ ಕವಿತೆ ಸಮಾಜದಲ್ಲಿರುವ ವ್ಯಕ್ತಿಗಳು ತಮ್ಮ ಜಾತಿ, ಮತ, ಪಂಥ, ವರ್ಣ, ಭಾಷೆಗಳ ಮಧ್ಯೆ ಗೋಡೆಗಳನ್ನು ನಿರ್ಮಿಸಿಕೊಂಡು ಬದುಕುತ್ತಿರುವ ವಿಕೃತ ಮನಸ್ಸುಗಳ ಮಧ್ಯ ಗಾಂಧೀಜಿಯವರ ಮೌಲ್ಯಗಳು ಮೌಲ್ಯ ಕಳೆದುಕೊಳ್ಳದೇ ಹೇಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿವೆ ಎಂಬುದನ್ನು ಪ್ರತಿನಿಧಿಸುತ್ತದೆ.

"ಉತ್ತ ಹೊಲ; ತೆರೆದ ಪುಸ್ತಕ
ಗಾಜು ಮೈ ಗಡಿಯಾರ;
ನಿನ್ನ ಬದುಕು
ಕಾವಿಯುಡಲಿಲ್ಲ, ಹೆಣ್ಣು ಬಿಡಲಿಲ್ಲ
ಎಲ್ಲೋ ಮಠದೊಳಗೆ ಕೂತು ರಹಸ್ಯವಾಗಿ
ಜಪಮಣಿ ಎಣಿಸಿ ಸಮಾಧಿಸ್ಥನಾಗಲಿಲ್ಲ;
ತೆರೆದ ಬಯಲಿನ ಕೆಳಗೆ ಎಲ್ಲರ ಜೊತೆಗೂ ಕೂತು
ಪ್ರಾರ್ಥಿಸಿದೆ;
ಸಬಕೋ ಸನ್ಮತೀ-ದೇ-ಭಗವಾನ್
ಪವಾಡಗಳನ್ನು ತೋರಿಸಿ ಯಾರನ್ನು ಮರುಳು ಮಾಡಲಿಲ್ಲ
ಮಾಡಿದ್ದೇ ಪವಾಡದ ತಲೆ ಮೆಟ್ಟಿತು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೭೨-೭೩)

ಇಲ್ಲಿನ ಗಾಜು, ಮೈ, ಗಡಿಯಾರ ಈ ಪದಗಳು ಅವರ ಸರಳ ಜೀವನವನ್ನು ಪ್ರತಿನಿಧಿಸುತ್ತವೆ. ಅವರ ಸೌಜನ್ಯದ ಬದುಕು ತೆರೆದ ಪುಸ್ತಕವಿದ್ದಂತೆ. ಇಂತಹ ಪಾರದರ್ಶಕ ವ್ಯಕ್ತಿತ್ವದ ಗಾಂಧೀಜಿ ಕಾವಿ ಉಡದೆ, ಹೆಣ್ಣು ಬಿಡದೆ ಎಲ್ಲೋ ಮಠದೊಳಗೆ ಕುಳಿತು ರಹಸ್ಯವಾಗಿ ಜಪಮಣಿ ಎಣಿಸದೆ, ಬದಲಿಗೆ ಅವರು ಎಲ್ಲ ಜನಸಮುದಾಯಗಳ ಜೊತೆಗೆ ಬೆರೆತು ಜೀವಿಸಿದವರು ಎಂದು ಈ ಕವಿತೆ ಪ್ರತಿಪಾದಿಸುತ್ತದೆ.

ನವೋದಯ ಕವಿಗಳು ಗಾಂಧೀಜಿಯವರನ್ನು ಮಾನವ ಬದುಕಿನ ಮೌಲ್ಯವಾಗಿ, ಆದರ್ಶಗಳ ಸಮೂಹವಾಗಿ ಸ್ವೀಕರಿಸಿದಂತೆ ತೋರುತ್ತದೆ. ಹೀಗಾಗಿ ಕವಿಗಳು ಗಾಂಧೀಜಿಯವರನ್ನು

ವಿನಮ್ರಭಾವದಂತೆ ಮೆಚ್ಚಿಗೆಯಿಂದ ಗುಣಗಾನ ಮಾಡಿರುವುದನ್ನು ಕಾಣಬಹುದು. ಕೀರ್ತಿನಾಥ ಕುರ್ತಕೋಟಿಯವರು "ರಾಷ್ಟ್ರ ನಾಯಕ ಗಾಂಧೀಜಿಯ ಬಗ್ಗೆ ನಮ್ಮ ಎಲ್ಲ ಕವಿಗಳಿಗೂ ಅಪಾರ ಗೌರವವಿತ್ತು. ಗೌರವವನ್ನು ಮೀರಿ ಗಾಂಧೀಜಿಯವರ ಜೀವನ ಒಂದು ರೂಪಕವಾಗಿಯೂ ಅವರಿಗೆ ಕವಿ ಕಂಡಿತ್ತು"(ಶಿವರುದ್ರಪ್ಪ.ಜಿ.ಎಸ್. (ಸಂ); ೧೯೭೮; ಪು. ೧೮) ಎಂದು ಅಭಿಪ್ರಾಯಿಸಿದ್ದಾರೆ. ಗಾಂಧೀಜಿಯವರ ವೈವಿಧ್ಯಮಯ ಆದರ್ಶ ಬದುಕಿನ ಉನ್ನತಿಯನ್ನು ನವೋದಯ ಕವಿಗಳು ಪ್ರತಿನಿಧಿಸಿದ ರೀತಿ ಅಪೂರ್ವವಾಗಿದೆ.

ಚೆನ್ನವೀರ ಕಣವಿ ಅವರು 'ಆದರೂ ಅವನ ನೆನಪು' ಎಂಬ ಕವಿತೆಯಲ್ಲಿ ಗಾಂಧಿಯನ್ನು ಹೀಗೆ ಚಿತ್ರಿಸಿದ್ದಾರೆ.

"ಗಾಂಧೀಜಿಯ ಬಗ್ಗೆ ಈ ಕವಿತೆ ಬರೆದು
ಗೆದ್ದೆ
ಎಂದು ಭಾವಿಸಿದ್ದೆ.
ಆದರೆ ಈಗ
ಶಬ್ದಗಳಿಗೆ ಸಿಲುಕದೆ, ಅರ್ಥಕ್ಕೂ ನಿಲುಕದೆ
ಬರಿಯ ಧ್ವನಿಯಾಗಿ ಬಿಟ್ಟಿದ್ದಾನೆ."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೬೬)

ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಛಾಪನ್ನು ಮೂಡಿಸಿದ ಗಾಂಧೀಜಿಯ ಬಗ್ಗೆ ಎಷ್ಟು ಅಧ್ಯಯನ ಮತ್ತು ಸೃಜನ ಸಾಹಿತ್ಯ ರಚಿಸಿದರೂ ಕಡಿಮೆಯೇ. ಶಬ್ದಗಳಿಗೆ ಸಿಗದೆ, ಅರ್ಥಕ್ಕೂ ಸಿಗದೆ ಧ್ವನಿ ಮಾತ್ರವಾಗಿದ್ದಾರೆ. ಹಾಗಾಗಿ ಗಾಂಧೀಜಿಯನ್ನು ಬಹು ಸಂಕೀರ್ಣ ವ್ಯಕ್ತಿಯಾಗಿ ಪ್ರತಿನಿಧಿಸಿದ್ದಾರೆ.

ಪಾಂಡೇಶ್ವರ ಗಣಪತಿರಾವ್ ಅವರು ತಮ್ಮ 'ಮಹಾತ್ಮಗಾಂಧಿಗೆ' ಕವಿತೆಯಲ್ಲಿ ಗಾಂಧೀಜಿಯನ್ನು ವೀರನಾಗಿ, ಧೀರನಾಗಿ ಕಂಡರಿಸಿದ್ದಾರೆ.

"ಹತ್ತು ಶತಮಾನಗಳ ದಾಸ್ಯಭಾರವ ಹೊತ್ತು
ಕತ್ತು ಬಗ್ಗಿಸಿ ಮಾತೆ ನಿಂತಿರುವಳೂ ಹೊತ್ತು!
ಹೆತ್ತ ಮಕ್ಕಳು ಹಸಿದು ಹಲಬುತ್ತಿರಲಜ್ಞಾನ
ಕತ್ತಲೆಯ ಕಾರೊಡ್ಡು ದಾರಿಗಟ್ಟಿರೆ, ಮಾನ
ಎತ್ತೆತ್ತಲೋ ಹಾರಿ ಮಾಯವಾಗಿರೆ ತೀರ
ಹೆತ್ತಬ್ಬೆ ಹಾರೈಸಲುದಿಸಿ ಬಂದನು ಧೀರ!"

ಹತ್ತು ಶತಮಾನಗಳ ಕಾಲ ಭಾರತ ಮಾತೆ ಬ್ರಿಟೀಷರ ದಬ್ಬಾಳಿಕೆಗೆ ಒಳಗಾಗಿ ದಾಸ್ಯಭಾರವ ಹೊತ್ತು ನಿಂತಿದ್ದಳು. ಭಾರತ ಮಾತೆಯ ಮಕ್ಕಳು ಹಸಿದು ಕಂಗಾಲಾಗಿ, ಹೊಟ್ಟೆ ತುಂಬಿಸಿಕೊಳ್ಳಲು ದಾರಿ ಕಾಣದೆ ಕತ್ತಲೆಯಲ್ಲಿ ಮುಳುಗಿದ್ದರು. ಆ ಮಾತೆಯ ಮಕ್ಕಳ ಮಾನ ಬ್ರಿಟೀಷ್ ಪಾಲಾಗುತ್ತಿತ್ತು. ಇಂಥ ಹೀನಾಯ ಸ್ಥಿತಿಯಲ್ಲಿದ್ದ ಭಾರತ ಮಾತೆಯ ಮಾನ ಕಾಪಾಡಲು, ದಾಸ್ಯದಿಂದ ಮುಕ್ತಿಗೊಳಿಸಿ ಹಾರೈಸಲು ಬಂದ ಮಹಾವೀರ ನೀನು ಗಾಂಧಿ ಎಂದು ಚಿತ್ರಿಸಿದ್ದಾರೆ.

ಶಾ. ಬಾಲುರಾವ್ ಅವರು ಗಾಂಧೀಜಿಯನ್ನು ದೇವರಾಗಿ, ಆತ್ಮವಾಗಿ 'ಗಾಂಧೀಜಿ-ಲಾರ್ಡ್ ಬಾಟವ್ಸ್‌ಲೇಗೆ ಹೇಳಿದ್ದು' ಕವಿತೆಯಲ್ಲಿ ಪ್ರತಿನಿಧಿಸಿದ್ದಾರೆ. ಆ ಕವಿತೆಯ ಸಾಲುಗಳು ಹೀಗಿವೆ.

"ದೇವರಿಗಾಗಿ ಹುಡುಕಾಡಿದೆ
ಅವನು ಎಲ್ಲೂ ಸಿಗಲಿಲ್ಲ
ಆತ್ಮಕ್ಕಾಗಿ ತಡಕಾಡಿದೆ
ಅದು ಎಲ್ಲೂ ಕಾಣಲಿಲ್ಲ.
ಕೊನೆಗೊಬ್ಬ ಸೋದರನಿಗಾಗಿ ಅರಸಾಡಿದೆ
ಅವನಲ್ಲಿ ಎಲ್ಲ ಸಿಕ್ಕವು -
ದೇವರು, ಆತ್ಮ ಹಾಗೂ ಸ್ವತಃ ಅವನು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೮೧)

ಗಾಂಧೀಜಿ ಸಾತ್ವಿಕ ಗುಣಗಳನ್ನು ಬೆಳೆಸಿಕೊಂಡವರು. ಅವರು ಯಾರಲ್ಲಿಯೂ ದ್ವೇಷ ಸಾಧಿಸಿದವರಲ್ಲ, ಅಸೂಯೆ ಪಟ್ಟವರಲ್ಲ. ಹಾಗಾಗಿ ಅವರನ್ನು ದೇವರಾಗಿ ಪ್ರತಿನಿಧಿಸಿದ್ದಾರೆ ಮತ್ತು ಇಡೀ ದೇಶದ ಜನತೆಯ ಆತ್ಮವಿದ್ದಂತೆ ಎಂದು ಚಿತ್ರಿಸಿದ್ದಾರೆ.

ಗಾಂಧೀಜಿಯವರ ಕಾಲದ ಮೌಲ್ಯಗಳು ಪ್ರಸಕ್ತ ರಾಜಕಾರಣದ ಆಡಂಬರದಲ್ಲಿ ಹೇಗೆ ಮಣ್ಣುಪಾಲಾಗಿ ಹೋಗುತ್ತಿವೆ ಎಂಬುದನ್ನು ಜಿ.ಎಸ್. ಶಿವರುದ್ರಪ್ಪ ಅವರು "ಗಾಂಧೀ ಶತಮಾನೋತ್ಸವ" ಎಂಬ ಕವಿತೆಯಲ್ಲಿ ಹೀಗೆ ವಿಡಂಬಿಸುತ್ತಾರೆ.

"ಹಬ್ಬಿರುವ ಮಬ್ಬಿನೊಳಗೊಬ್ಬನೇ ಮುದುಕ
ಕೋಲೂರಿ ನಡೆದಿದ್ದಾನೆ.
ಹಾದಿಯುದ್ದಕ್ಕೂ ಹಾಳು ಬಿದ್ದಿರುವ ಹೂವಿನ ತೋಟ
ಇನ್ನೂ ಹೊಗೆಯಾಡುತ್ತಿರುವ ಬೆಂಕಿ,
ಕಾಲಿನ ಕೆಳಗೆ ರಕ್ತದ ಕೆಸರು,
ಕೋಟಿ ಬಿರುಕುಗಳಲ್ಲಿ ಯಾರದೋ ನಿಟ್ಟುಸಿರು,
ಗೆದ್ದಲಡರುತ್ತಿರುವ ಕಂಬಳ ಮುರುಕು ಮಹಲು,
ಹೊಸದಾಗಿ ರಿಪೇರಿಯಾಗಿರುವ ರಸ್ತೆಗಳ ಮೇಲೆ
ನಾಯಿಗಳ ಕಚ್ಚಾಟ;
ಈ ಎಲ್ಲದರ ನಡುವೆ, ಕೇಳುತ್ತಲಿದೆ
ಹಬ್ಬಿರುವ ಮಬ್ಬಿನೊಳಗೊಬ್ಬನೇ ಮುದುಕ
ಕೋಲೂರಿ ನಡೆಯುವ ಸದ್ದು"

(ತಿಪ್ಪೇರುದ್ರಸ್ವಾಮಿ.ಎಚ್. ಮತ್ತು ಇತರರು(ಸಂ); ೧೯೭೦; ಪು. ೧೧)

ಹಾಳುಬಿದ್ದ ಹೂವಿನ ತೋಟ, ಇನ್ನೂ ಹೊಗೆಯಾಡುತ್ತಿರುವ ಬೆಂಕಿ, ರಕ್ತದ ಕೆಸರು, ಕೋಟಿ ಬಿರುಕುಗಳಲ್ಲಿ ಯಾರದೋ ನಿಟ್ಟುಸಿರು, ಹೊಸದಾಗಿ ರಿಪೇರಿಯಾಗುತ್ತಿರುವ ರಸ್ತೆಗಳು

ಮೇಲೆ ನಾಯಿಗಳ ಕಚ್ಚಾಟ. ಇವೆಲ್ಲ ಈ ಹೊತ್ತಿನ ಭಾರತದ ದಯನೀಯ ಸ್ಥಿತಿಯ ಕಡೆಗೆ ಬೆರಳು ಮಾಡಿ ತೋರಿಸುತ್ತಿವೆ. ನಾಡ ಜನಗಳ ಸದಾಚಾರ, ಸದ್ಭಾವದ ಬದುಕಿಗಾಗಿ ಹಗಲಿರುಳು ಕೋಲು ಹಿಡಿದು ಸಂಚರಿಸಿದ ಗಾಂಧೀಜಿಯವರ ಆದರ್ಶಗಳು ಇಂದು ಬರೀ ಶಬ್ದಗಳಾಗಿ ಮಾತ್ರ ಉಳಿದಿವೆ. ಅಪ್ರಾಮಾಣಿಕ, ಸ್ವೇಚ್ಛಾಚಾರಿಗಳ ಅಟ್ಟಹಾಸದ ಕತ್ತಲೆಯೊಳಗೆ ಗಾಂಧೀಜಿ ಒಬ್ಬರೇ ನಡೆದು ಬರುತ್ತಿದ್ದಾರೆ ಎಂದು ಪ್ರತಿನಿಧಿಸಿದ್ದಾರೆ.

ಚೆನ್ನವೀರ ಕಣವಿಯವರು ನವೋದಯ, ನವ್ಯ, ದಲಿತ-ಬಂಡಾಯ ಕಾಲಘಟ್ಟದ ಎಲ್ಲ ಬಗೆಯ ಪ್ರಭಾವಗಳಿಗೆ ಒಳಗಾದರೂ ತಮ್ಮದೇ ಆದ ವಿಶಿಷ್ಟ ಕಾವ್ಯಧೋರಣೆಯನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಇವರ 'ಎರಡು ದಡ' ಕವನ ಸಂಕಲನದಲ್ಲಿ 'ಗಾಂಧಿ' ಎಂಬ ಪದ್ಯವಿದೆ. ಆ ಕವಿತೆ ಸಾಲುಗಳು ಇಂತಿವೆ.

"ಯಾರು ಹೇಳಿದರು ನಾವೆಲ್ಲ ನಿನ್ನ ಮರೆತೆವೆಂದು?
ಹಗಲೆಲ್ಲ ಕಟಕಟಿ ಬೇಡವೆಂದು
ಕಟೆದು ನಿಲ್ಲಿಸಿದ್ದೇವೆ
ಕೊಟು ಕೊಟಿನಲಿ ನಿನ್ನ ನಗುವ ಮೂರ್ತಿ;
ಕಂಡು ಕಾಣದ ಹಾಗೆ ದಾಟಿ ಹೋಗುತ್ತೇವೆ -
ಮರುಗುವುದು ಒಳಗೊಳಗೆ
ಪಾರದರ್ಶಕದಂಥ ನಿನ್ನ ಅಂತಃಕರಣ
ಕಾಡಿಗೆ ಬಳಿದ ಕಾಜಿನಲಿ ಮಾತ್ರ ಕಾಣುವುದು
ನಮಗೀಗ ಹಿಡಿದ ಗ್ರಹಣ
ನೀನಿಂದು ಬದುಕಿದ್ದರೊಂದು ವೇಳೆ
ಗರತಿಯಾಗಬಹುದಿತ್ತೇನೊ "ರಾಜಕಾರಣದ ಸೂಳೆ"

(ಚೆನ್ನವೀರ ಕಣವಿ; ೧೯೯೬; ಪು. ೩೦೭)

ದೇಶದ ಮೂಲೆ ಮೂಲೆಗಳಲ್ಲಿ ಬಾಹ್ಯ ರೂಪದಲ್ಲಿ ಗಾಂಧೀಜಿಯ ಮೂರ್ತಿಗಳನ್ನು ಸ್ಥಾಪಿಸಲಾಗಿದೆ ಎಂಬ ವಾಸ್ತವವನ್ನು ಇಲ್ಲಿ ಚಿತ್ರಿಸಲಾಗಿದೆ. ಗಾಂಧಿಯ ಮೂರ್ತಿಯನ್ನು ದಿನವೂ 'ಕಂಡು ಕಾಣದ ಹಾಗೆ ದಾಟಿ ಹೋಗುತ್ತೇವೆ' ಎನ್ನುವ ಸಾಲು ನಮಗೆ ಗಾಂಧಿ ಬೇಕಾಗಿಲ್ಲ ಎಂಬ ನಕಾರಾತ್ಮಕ ಧೋರಣೆಯನ್ನು ಸೂಚಿಸುತ್ತದೆ. ಗಾಂಧೀಜಿ ವ್ಯಕ್ತಿತ್ವ ಪಾರದರ್ಶಕದಂತೆ ನಿಷ್ಕಲ್ಮಶವಾಗಿತ್ತು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಇಡೀ ರಾಜಕಾರಣ, ನೀತಿ ನಿಯಮಗಳನ್ನೆಲ್ಲ ಗಾಳಿಗೆ ತೂರಿ ನಿಂತ ಸ್ವೇಚ್ಛೆಯ ಬದುಕಾಗಿದೆ. ಅದಕ್ಕೆ ಗಾಂಧೀಜಿ ಇಂದು ಬದುಕಿದ್ದರೆ 'ರಾಜಕಾರಣದ ಸೂಳೆ ಗರತಿಯಾಗಬಹುದಿತ್ತು' ಎಂದು ವಿಷಾದಿಸಿದ್ದಾರೆ.

ಕೆ.ಎಸ್. ನಿಸಾರ್ ಅಹಮ್ಮದ್ ಅವರು 'ಬಾಪೂ' ಎಂಬ ಕವಿತೆಯಲ್ಲಿ ನವೋದಯ ಕಾಲದ ಕವಿಗಳಂತೆ ಗಾಂಧೀಜಿಯವರನ್ನು ಅವತಾರ ಪುರುಷರೆಂದು ಬಣ್ಣಿಸದೆ ವಾಸ್ತವದ ನೆಲೆಯಲ್ಲಿ ಅನಾವರಣಗೊಳಿಸಿದ್ದಾರೆ.

"ನೆರೆಯವನ ಬಂದೂಕು ತುದಿ ಬೆನ್ನಿಗೊತ್ತಿರಲು
ಅಹಿಂಸೆಯ ಬೋಧಿಸಲೆಂದು ತವಕಿಸಿದ ಪ್ರೇತಾತ್ಮಗುಣದವರ,
ದೇವರೆಂದೇ ಭ್ರಮಿಸಿ ದೂಡಿ ಸೆರೆಯಲಿ, ನಮಿಸಿ
ನಿನ್ನ ಮರೆತಿರುವವರ ನಡುವೆ ಏಗುವ ನಾನು
ಅಪ್ಪ ಕಲಿಸಿದ್ದನ್ನೇ ನನ್ನ ಮೊಮ್ಮಕ್ಕಳಿಗೆ ಮಗ್ಗಿಯೊಪ್ಪಿಸಲೇನು?
ಗತಕಾಲ ಸೂಚಿ ಹಳೆಯುಳಿಕೆ ನಾಣ್ಯದ ಬಳಕೆ
ಏಕಾಗಲಿಲ್ಲೆಂದು ಸವಾಲೆತ್ತಿದರೆ ಏನು ಹೇಳಲಿ ಬಾಪೂ?

(ತಿಪ್ಪೇರುದ್ರಸ್ವಾಮಿ. ಎಚ್. ಮತ್ತು ಇತರರು(ಸಂ); ೧೯೭೦; ಪು. ೧೪-೧೫)

ಗಾಂಧೀಜಿಯ ಮರಣಾನಂತರ ಅವರ ಹೆಸರಿನಲ್ಲಿ ಪ್ರತಿಮೆಗಳನ್ನು ನಿಲ್ಲಿಸಿ, ಪಾರ್ಕುಗಳಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ. ಅವರು ಬದುಕಿರುವವರೆಗೂ ಸತ್ಯ, ಅಹಿಂಸೆ, ಪ್ರಾಮಾಣಿಕತೆಯ ತತ್ವಗಳನ್ನು ಬಿಡದೆ ಪಾಲಿಸಿದ್ದರು. ಇಂದು ಆ ತತ್ವಗಳಿಗೆ ಸಂಪೂರ್ಣ ತಿಲಾಂಜಲಿಯನ್ನಿತ್ತು ಸ್ವೇಚ್ಛಾಚಾರಿಗಳಾಗಿದ್ದಾರೆ ಎಂದು ವಿಷಾದಿಸಿದ್ದಾರೆ. ಗಾಂಧೀಜಿಯವರನ್ನು ಆದರ್ಶ ಮತ್ತು ವಾಸ್ತವಗಳ ನಡುವಿನ ಅಂತರವನ್ನು ಕೇಂದ್ರವಾಗಿರಿಸಿಕೊಂಡು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದಾರೆ.

ನವೋದಯ ಕವಿಗಳು ಗಾಂಧೀಜಿಯವರನ್ನು ಕಂಡದ್ದು ಎರಡು ಬಗೆಗಳಲ್ಲಿ; ೧. ವಿವಿಧ ಪ್ರಾಸಂಗಿಕ ಸನ್ನಿವೇಶಗಳ ಜೊತೆಗೆ ಗಾಧೀಜಿಯವರ ವ್ಯಕ್ತಿತ್ವದ ಅನಾವರಣ. ೨. ಪ್ರತಿಮೆ/ ಸಂಕೇತಗಳ ಮೂಲಕ ಒಟ್ಟಾಗಿ ಗಾಂಧಿ ವ್ಯಕ್ತಿತ್ವದ ಅನಾವರಣ. ನವೋದಯ ಆದರ್ಶೀಕೃತವಾದುದು ಪ್ರತಿಯೊಂದು ಕಾವ್ಯ, ಕಾವ್ಯಗುಣ ಎಲ್ಲದರಲ್ಲಿ ಪೂಜ್ಯಭಾವ ಇರುವಂತಹುದು. ಮೇಲಾಗಿ ಗಾಂಧಿಯುಗವಾಗಿ ಇದು ಪರಿಗಣಿತವಾಗುವ ಹಿನ್ನೆಲೆಯಲ್ಲಿ ಗಾಂಧಿಯನ್ನು ದೈವತ್ವಕ್ಕೇರಿರುವುದು ಸಹಜವೆನಿಸಿದೆ.

೩.೨. ಪ್ರಗತಿಶೀಲ ಕಾವ್ಯ

"ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಅಧ್ಯಯನದ ದೃಷ್ಟಿಯಿಂದ ನಾಲ್ಕು ಘಟ್ಟಗಳಲ್ಲಿ ಗುರುತಿಸಿಕೊಳ್ಳುತ್ತೇವೆ. ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ ಬಂಡಾಯ, ಹೊಸಗನ್ನಡ ಕಾಲಘಟ್ಟದಲ್ಲಿ ಕೇವಲ ಐದಾರು ವರ್ಷ(೧೯೪೩ರಿಂದ ೧೯೪೭) ಪ್ರಗತಿಶೀಲ ಸಾಹಿತ್ಯ ಕಾಣಿಸಿಕೊಂಡು ಎಲ್ಲರ ಗಮನ ಸೆಳೆದು ತಣ್ಣಗಾಯಿತು. ಈ ಕಾಲಘಟ್ಟದಲ್ಲಿ ಹೊಸಗನ್ನಡ ಸಾಹಿತ್ಯದ ಬೆಳವಣಿಗೆಗೆ ಮಹತ್ವದ ಕೊಡುಗೆಯನ್ನು ನೀಡಲಿಲ್ಲ. ಕನ್ನಡದ ಸಂದರ್ಭದಲ್ಲಿ 'ಮಾನವೀಯತೆಗಾಗಿ ಕಲೆ' ಎಂಬ ದೃಷ್ಟಿಕೋನದಿಂದ ಪ್ರಗತಿಶೀಲ ಸಾಹಿತ್ಯ ಚಳುವಳಿ ಕಾಣಿಸಿಕೊಂಡಿದ್ದು, ಇಂದು ಕೇವಲ ಚಾರಿತ್ರಿಕ ಘಟನೆಯಾಗಿದೆ" (ಶಿವರುದ್ರಪ್ಪ.ಜಿ.ಎಸ್. (ಸಂ); ೧೯೯೦; ಪು. ೪೭) ಎಂದು ಚಿ. ಶ್ರೀನಿವಾಸರಾಜು ಅಭಿಪ್ರಾಯಿಸಿದ್ದಾರೆ.

"ಗಾಂಧೀಜಿ ಆ ಹೊತ್ತಿಗಾಗಲೇ ಬ್ರಿಟೀಷ್ ಪ್ರಭುತ್ವದ ವಿರುದ್ಧ ಪ್ರಬಲವಾದ ರಾಷ್ಟ್ರೀಯ ಚಳುವಳಿಯನ್ನು ರೂಪಿಸಿದ್ದರು. ೧೯೪೨ರ 'ಭಾರತ ಬಿಟ್ಟು ತೊಲಗಿ'(Quit India) ಆಂದೋಲನ,

ದೇಶದ ಬಹುಪಾಲು ಜನರಲ್ಲಿ ಹೊಸ ಎಚ್ಚರವನ್ನು, ಕಾವನ್ನು ಉಂಟುಮಾಡಿತ್ತು. ಅದೇ ಸಂದರ್ಭದಲ್ಲಿ ಭಾರತೀಯ ಕಮ್ಯೂನಿಸ್ಟ್ ಪಕ್ಷ, ನಾಡು ಸ್ವಾತಂತ್ರ್ಯವನ್ನು ಪಡೆಯುವ ಉತ್ಸಾಹದಲ್ಲಿದ್ದಾಗ ತನ್ನದೇ ಕಾರಣಗಳಿಂದಾಗಿ ಭಾರತದ ಬಿಡುಗಡೆಗೆ ಬೆಂಬಲ ನೀಡಲಿಲ್ಲ. ಸಾಮ್ಯವಾದದ ಹಿನ್ನೆಲೆಯಿಂದ ರೂಪುಗೊಂಡ ಪ್ರಗತಿಶೀಲ ಲೇಖಕರ ಸಂಘ ತಾನು ಭಾವಿಸಿದಷ್ಟು ವೇಗವಾಗಿ ವ್ಯಾಪಿಸಲು ಸಾಧ್ಯವಾಗಲಿಲ್ಲ. ಈ ಹೊಸ ಸ್ವರೂಪದ ಸಂಘಟನೆಯನ್ನು ಅನುಮಾನದಿಂದಲೂ, ಕುತೂಹಲದಿಂದಲೂ ಪ್ರಗತಿಶೀಲ ಕವಿಗಳು, ಲೇಖಕರು ಕಂಡರು"(ಅದೇ; ಪು. ೪೯-೫೦) ಎಂದು ಚಿ. ಶ್ರೀನಿವಾಸರಾಜು ವ್ಯಕ್ತಪಡಿಸಿದ್ದಾರೆ.

"ಭಾರತದಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿ ತನ್ನ ನೆಲೆಯನ್ನು ಕಂಡುಕೊಳ್ಳುವ ಸಂದರ್ಭದಲ್ಲಿ ಭಾರತ ಬದಲಾವಣೆಯ ಅಗ್ನಿಕುಂಡವಾಗಿತ್ತು. ಗಾಂಧೀಜಿಯವರ ಸ್ವದೇಶಿ ಆಂದೋಲನ ಜನಸಾಮಾನ್ಯರಲ್ಲಿ ಹೊಸ ಅಲೆಯನ್ನು ಎಬ್ಬಿಸಿತ್ತು. ಭಾರತದ ಸಾಮಾಜಿಕ, ಧಾರ್ಮಿಕ, ಕಲಾರಂಗಗಳಲ್ಲಿ ಪುನರುಜ್ಜೀವನದ ಎಚ್ಚರ ಮೂಡಿತ್ತು. ಗಾಂಧೀಜಿಯವರ ಕ್ರಿಯಾಶೀಲ ವ್ಯಕ್ತಿತ್ವದ ಪ್ರಕಾರ ಬೆಳಕಿನೆದುರಿನಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿ ಮಂಕಾಯಿತು. ಗಾಂಧೀಜಿಯವರು ಕರೆ ನೀಡಿದ ಹರಿಜನೋದ್ಧಾರ, ಸ್ತ್ರೀ ಸಮಾನತೆ, ಗ್ರಾಮಸುಧಾರಣೆ, ಸ್ವದೇಶಿ ಚಳುವಳಿಯಂತಹ ಅಂಶಗಳು ಪುನರುಜ್ಜೀವನದ ಮನೋಧರ್ಮ ಪ್ರಮುಖವೆನಿಸಿತ್ತು"(ಅದೇ; ಪು. ೫೧-೫೨) ಎಂದು ಚಿ. ಶ್ರೀನಿವಾಸರಾಜು ತಮ್ಮ ಲೇಖನದಲ್ಲಿ ಅಭಿಪ್ರಾಯಿಸಿದ್ದಾರೆ. "ಪ್ರಗತಿಶೀಲ ಚಳುವಳಿ ಪೇಲವಗೊಂಡಿದ್ದಕ್ಕೆ ಮುಖ್ಯ ಕಾರಣವೆಂದರೆ ಗಾಂಧೀಜಿಯವರ ಮಾಂತ್ರಿಕ ನೇತೃತ್ವದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಆಂದೋಲನದ ಉಬ್ಬರ. ಅದೇ ಸಂದರ್ಭಕ್ಕೆ ಭಾರತದ ರಾಜಕೀಯ ಪಲ್ಲಟಗೊಂಡಿತು. ಗಾಂಧೀಜಿಯ ಕೊಲೆಯಿಂದ ಉಂಟಾದ ಭಯ, ಹತಾಶೆ, ಅಸಹಾಯಕತೆ ಪ್ರಗತಿಶೀಲ ಧೋರಣೆಯ ಮೊನಚನ್ನು ಕಡಿಮೆ ಮಾಡಿ ನವ್ಯ ಸಾಹಿತ್ಯಕ್ಕೆ ದಾರಿ ಮಾಡಿಕೊಟ್ಟಿತು. ಗಾಂಧೀಜಿಯ ಆದರ್ಶಗಳು ಕಳೆಗುಂದಿ, ಸ್ವಾರ್ಥದ ಬದುಕು ಸಮಾಜದಲ್ಲಿ ಮುಖ್ಯವಾಯಿತು. ೧೯೪೩ರಿಂದ ೧೯೪೭ರ ಪ್ರಗತಿಶೀಲರ ಗೊತ್ತು ಗುರಿಗಳನ್ನು, ಆಕಾಂಕ್ಷೆಗಳನ್ನು ಗಾಂಧೀಜಿಯವರ ಕ್ರಿಯಾಶೀಲ ಸಾಮಾಜಿಕ ಕಾರ್ಯಕ್ರಮಗಳು ಮತ್ತು ಮಾಂತ್ರಿಕ ವ್ಯಕ್ತಿತ್ವ ಆ ಪೋಷಣೆ ತೆಗೆದುಕೊಂಡಿತು"(ಅದೇ; ಪು. ೫೭) ಎಂದು ಚಿ. ಶ್ರೀನಿವಾಸರಾಜು ಅಭಿಪ್ರಾಯಿಸಿದ್ದಾರೆ.

ಪ್ರಗತಿಶೀಲರು ಮುಖ್ಯವಾಗಿ ಆರಿಸಿಕೊಂಡ ಸಾಹಿತ್ಯ ಮಾಧ್ಯಮಗಳೆಂದರೆ ಸಣ್ಣಕಥೆ ಮತ್ತು ಕಾದಂಬರಿ, ಅದರಲ್ಲೂ ಕಾದಂಬರಿ ವಸ್ತುಸ್ಥಿತಿಯನ್ನು ವಾಸ್ತವ ಬದುಕಿನ ವಿವರಣೆಗಳೊಂದಿಗೆ, ನೇರ ಮಾತಿನ ಶೈಲಿಯನ್ನು ರೂಢಿಸಿಕೊಂಡು ಸಮಸ್ಯೆಗಳನ್ನು ಮೇಲುಪದರದಲ್ಲೇ ಸರಳೀಕರಿಸಿಕೊಂಡು ಕೃತಿ ರಚನೆಗಳಲ್ಲಿ ಅವಸರವನ್ನು ತೋರಿಸಿದರು. 'ಆಪ್ಯಾಯಮಾನ'ವಾಗಿ ಹೇಳುವುದೇ ಪ್ರಗತಿಶೀಲರಿಗೆ ಮುಖ್ಯವಾಯಿತು.

ಹೀಗಾಗಿ ಪ್ರಗತಿಶೀಲ ಸಾಹಿತಿಗಳು ಕಾವ್ಯಕ್ಷೇತ್ರಕ್ಕಿಂತ ಹೆಚ್ಚಾಗಿ ಕಾದಂಬರಿ ಮತ್ತು ಸಣ್ಣಕಥೆಗಳನ್ನು ಮಾಧ್ಯಮಗಳನ್ನಾಗಿ ಆರಿಸಿಕೊಂಡಿದ್ದರಿಂದ ಪ್ರಗತಿಶೀಲ ಕಾವ್ಯಕ್ಷೇತ್ರದಲ್ಲಿ ಸ್ವಲ್ಪಮಟ್ಟಿಗೆ ಬಡವಾಗಿದೆ

ಎಂದು ಹೇಳಬಹುದು. ನವೋದಯ ಮತ್ತು ನವ್ಯಗಳ ಕಾಲಘಟ್ಟಗಳ ಮಧ್ಯದಲ್ಲಿ ಈ ಪ್ರಗತಿಶೀಲ ಪಂಥ ಹುಟ್ಟಿಕೊಂಡಿದ್ದರಿಂದ ಆ ಎರಡೂ ಕಾಲಘಟ್ಟದಲ್ಲಿ ಬರುವ ಕವಿಗಳು ಸಮನ್ವಯ ಮನೋಧೋರಣೆಯನ್ನು ಅನುಸರಿಸಿದ್ದಾರೆ. ಪ್ರಗತಿಶೀಲ ಕಾಲಘಟ್ಟದ ಕೆಲವು ಕವಿಗಳನ್ನು ಹೆಸರಿಸುವುದಾದರೆ, ಶಾಂತರಸ, ದಿನಕರ ದೇಸಾಯಿ, ಗಂಗಾಧರ ಚಿತ್ತಾಲ, ಎಂ. ಅಕಬರ ಅಲಿ, ಸು.ರಂ. ಎಕ್ಕುಂಡಿ, ಜಿ.ಪಿ. ರಾಜರತ್ನಂ ಹೀಗೆ ಮುಂತಾದವರು ಗಾಂಧೀಜಿಯವರನ್ನು ಕುರಿತು ಕವಿತೆಗಳನ್ನು ರಚನೆ ಮಾಡಿದ್ದಾರೆ.

ಗಾಂಧೀಜಿ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯನ್ನು ಬಯಸುವ ಜಗತ್ತಿನ ಎಲ್ಲ ಜನ, ದೇಶಗಳ ಪ್ರತಿನಿಧಿಯಾದವರು. ಹೀಗಾಗಿ ಪರತಂತ್ರದಲ್ಲಿರುವ, ಶೋಷಣೆಯ ಉರಿಯಲ್ಲಿ ಬೇಯುತ್ತಿರುವ ಜನಗಳ ಬಿಡುಗಡೆಯ ಕಣ್ಣಾಗಿಯೇ ಎಂ. ಅಕಬರ ಅಲಿ ಅವರ 'ಜಗದ ಕಣ್ಣು ಗಾಂಧಿ' ಎಂಬ ಕವಿತೆಯಲ್ಲಿ ವ್ಯಕ್ತಗೊಂಡಿದ್ದಾರೆ.

> "ಹೊಮ್ಮಿಸುತ ವಿಶ್ವವೀಣಾಗಾನ ಮಂದ್ರ - ಮಂದ್ರ,
> ಇರುಳ್ಗಡಲ ಒಡಲಿಂದ ಮೂಡಿ ಬಂದಿತು ಅಣ್ಣ ಈ ಕಣ್ಣು - ಚಂದ್ರ!
> ತಾನಾಗಿ ರಾಮ - ಚಂದ್ರ!
> ಏನೆಂಥ ಕಣ್ಣು!
> ನೆಲ - ಮುಗಿಲು ಎವೆಯಾಗಿ ತೆರೆದ ಅದ್ಭುತ ಕಣ್ಣು!
> ಭಾರತದ ಮಾನಸದಿ ಮಿಂದು ಮೆರೆಯಲು ಬಂದ ಹಂಸ ತಾನು!"
>
> (ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೬೮; ಪು. ೮೨)

ಎಂ. ಅಕಬರ ಅಲಿಯವರಿಗೆ ಗಾಂಧೀಜಿ ರಾಮನ ಅವತಾರವಾಗಿಯೇ ಕಂಡಿದ್ದಾರೆ. ರಾಮನ ಪಾದದ ಸ್ಪರ್ಶದಿಂದ ಅಹಲ್ಯೆಗೆ ಮರುಜೀವನ ಬರುವಂತೆ ಇಲ್ಲಿಯೂ ಗಾಂಧಿಯಿಂದ ಪರಕೀಯರ ಆಡಳಿತದಲ್ಲಿ ಬಂಧಿತಳಾದ ಭಾರತ ಮಾತೆಯನ್ನು ಬಂಧಮುಕ್ತಗೊಳಿಸಿ ಅವಳಲ್ಲಿ ಚೈತನ್ಯ ತುಂಬಿದವರು ಎಂಬುದು ಪ್ರತಿನಿಧಿಸಿದ್ದಾರೆ. ಗಾಂಧೀಜಿಯವರು ದೇಶದ ಜನಗಳಿಗಷ್ಟೇ ಕಣ್ಣಾಗಿರಲಿಲ್ಲ. ಜಗತ್ತಿನ ಎಲ್ಲೆಡೆ ಅಮಾನುಷ ಶೋಷಣೆಗೆ ಒಳಗಾದ ಜನಗಳಿಗೆಲ್ಲಾ ಪಾವನಗೊಳಿಸಿದ ಕಣ್ಣಾಗಿದ್ದರು ಎಂಬ ಆಶಯ ಇಲ್ಲಿದೆ. ಈ ನೆಲದ ಎಲ್ಲ ಧರ್ಮಗಳ ಉತ್ತಮಾಂಶಗಳನ್ನು ಸ್ವೀಕರಿಸಿದ ಗಾಂಧೀಜಿಯವರನ್ನು ಹಂಸ ಪಕ್ಷಿಗೆ ಹೋಲಿಸಲಾಗಿದೆ.

ಎರಡೂವರೆ ಶತಮಾನಗಳಿಂದ ಬ್ರಿಟೀಷರ ಯಜಮಾನಿಕೆ, ದಬ್ಬಾಳಿಕೆಗಳಿಂದ ಇಡೀ ಭಾರತ ದೇಶ ದಿನದಿಂದ ದಿನಕ್ಕೆ ಉಸಿರುಗಟ್ಟಿದಂತಾಗಿತ್ತು. ದಿನ ಬೆಳಗಾದರೆ ಬ್ರಿಟೀಷರ ಅಟ್ಟಹಾಸ, ತಮಗೆ ಅನುಕೂಲವಾಗುವಂತೆ ದಿನಕ್ಕೊಂದು ಕಾನೂನುಗಳನ್ನು ದೇಶದ ಜನತೆಯ ಮೇಲೆ ಹೇರುತ್ತಿದ್ದಾರೆ. ಇದರಿಂದ ಎಷ್ಟೋ ಸಾಮಾನ್ಯರ ಜೀವನ ದುಸ್ತರವಾಗಿ ಒಡಲುರಿದವು, ತಲೆಕುಸಿದವು; ದಿನ ಬೆಳಗಾದರೆ ಜನತೆ ದುಃಖೋದಯವನ್ನು ಅನುಭವಿಸಬೇಕಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ದೇಶದ ಪೀಳಿಗೆಗೆ ಉಸಿರೇ ಬರದಂತಾಯಿತು ಮತ್ತು ಹೆಸರೇ ಇರದಂತಾಯಿತು ಎಂದು

ಸು.ರಂ. ಎಕ್ಕುಂಡಿಯವರು ತಮ್ಮ 'ಗಾಂಧೀಜಿ' ಕವನದಲ್ಲಿ ನೊಂದು ನುಡಿದು ಗಾಂಧೀಜಿಯವರನ್ನು ಸ್ಮರಿಸಿದ್ದಾರೆ.

"ಹಗೆತನಗಳ ಹೊಗೆ ಹಾರಿಸಿ
ನೊಂದವರೆದೆಯುರಿ ಆರಿಸಿ
ದೇಶದ ಕಣ್ಣೀರೊರಿಸಿ
ರಾಷ್ಟ್ರಧ್ವಜ ಕೈಗಿರಿಸಿ
ಬೀಳ್ಕೊಂಡರು ಪಡೆವೆರಿಸಿ
ಅಮೃತರಾಳಾಳ್ಗಿ
ನೆಲಮಂಗಳ ಬಾಳ್ಗಿ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೨೧-೨೨)

ಬ್ರಿಟೀಷರ ಅಟ್ಟಹಾಸ, ದಬ್ಬಾಳಿಕೆಗಳಲ್ಲಿ ದೇಶದ ಜನತೆಯ ಮಧ್ಯದಲ್ಲೇ ಹಗೆತನಗಳು, ಮತಾಂಧತೆ, ದುರಾಚಾರಗಳು ಮತ್ತು ಅರಾಜಕತೆ ತುಂಬಿಕೊಂಡಿದ್ದವು. ಅವುಗಳನ್ನು ಗಾಂಧೀಜಿ ತಮ್ಮ ಅಹಿಂಸೆಯ ತತ್ವದ ಮೂಲಕ ಹೋಗಲಾಡಿಸಿ ಜನತೆಯನ್ನು ಒಂದುಗೂಡಿಸಿದರು. ಆ ಮೂಲಕ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಹೋರಾಟವನ್ನು ಕೈಗೊಂಡು ಕೊನೆಗೆ ಯಶಸ್ವಿ ಕಾಣಲಾಯಿತು. ಇದೆಲ್ಲಾ ಗಾಂಧೀಜಿಯ ದೆಸೆಯಿಂದ ಎಂದು ಕವಿಯ ಆಶಯವಾಗಿದೆ.

ಗಾಂಧೀಜಿಯವರ ಆದರ್ಶಗಳನ್ನು, ತತ್ವಗಳನ್ನು ಪಾಲಿಸದೇ ಬರೀ ಅಪಾರ ಪ್ರತಿಮೆಯನ್ನು, ಸ್ಮಾರಕಗಳನ್ನು, ಚೌಕಗಳನ್ನು, ಬಡಾವಣೆಗಳನ್ನು ನಿರ್ಮಿಸಿದರೆ ಸಾಲದು ಎಂದು ದಿನಕರ ದೇಸಾಯಿ ಅವರು 'ಗಾಂಧಿಯವರ ಸ್ಮಾರಕ' ಎಂಬ ಕವಿತೆಯಲ್ಲಿ ಎಚ್ಚರಿಸಿದ್ದಾರೆ.

"ನಾವು ಮೆರೆವುದು ವ್ಯರ್ಥ
ನಮ್ಮ ಹೃದಯದೊಳಿರಲಿ
ನಿನ್ನ ಮರಣದ ಅರ್ಥ"

ಹೀಗೆ ಗಾಂಧಿಯಿಂದ ಜೀವನ ಮತ್ತು ಮರಣ ಸಾರ್ಥಕವಾಗಬೇಕಾದರೆ ಅವರು ತೋರಿದ ದಾರಿಯಲ್ಲಿ ಹೆಜ್ಜೆಯನ್ನಿಡಬೇಕು ಎಂದು ಹೇಳುತ್ತಾ -

"ಹುಟ್ಟಿದವರಿಗೆ ಹಬ್ಬ
ಸತ್ತವರಿಗೇ ತಿಥಿಯು
ನಿನಗೆ ಎರಡೂ ಇಲ್ಲ,
ಯಾವುದೂ ಇತಿಮಿತಿಯು

ನಿನಗೇಕೆ ಸ್ಮಾರಕವು?
ಶಿಲ್ಪಕೃತಿ, ಹೂಮಾಲೆ?
ಲೋಕವನೆ ಬೆಳಗುತಿದೆ
ನಿನ್ನ ಎಲುಬಿನ ಜ್ವಾಲೆ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೭೨-೭೩)

ಗಾಂಧೀಜಿಯವರ ಹುಟ್ಟು ಮತ್ತು ಸಾವು ಕಾಲಾತೀತವಾದುದು. ಆದುದರಿಂದ ಬಾಹ್ಯವಾಗಿ ಅವರಿಗೇಕೆ ಸ್ಮಾರಕ, ಶಿಲ್ಪಕೃತಿ, ಹೂಮಾಲೆ ಎಂದು ಪ್ರಶ್ನಿಸುತ್ತಾ ಅಂತರಂಗದಲ್ಲಿ ಅವರ ಆದರ್ಶಗಳನ್ನು ಪಾಲಿಸಿದರೇ ಅಷ್ಟೇ ಸಾಕು ಎಂದು ಕವಿ ಅಭಿಪ್ರಾಯಪಡುತ್ತಾರೆ.

ಸು.ರಂ. ಎಕ್ಕುಂಡಿ ಅವರು ತಮ್ಮ 'ಗಾಂಧೀಜಿ' ಎಂಬ ಕವಿತೆಯಲ್ಲಿ ನಮ್ಮ ನಾಡನ್ನು ಪರದಾಸ್ಯದಿಂದ ಬಿಡಿಸಿಕೊಳ್ಳುವಲ್ಲಿ ಗಾಂಧೀಜಿ ಪಾತ್ರ ಅನನ್ಯವಾದುದು ಎಂಬುದನ್ನು ಈ ರೀತಿ ಚಿತ್ರಿಸಿದ್ದಾರೆ.

"ಎರಡೂವರೆ ಶತಮಾನಕೆ
ದಬ್ಬಾಳಿಕೆ ಯಾಜಮಾನಿಕೆ
ದುರ್ದೆಸೆಗಳ ದಿನಮಾನಕೆ
ಉಸಿರಾಡಿಸಲನುಮಾನಿಕೆ
ಈ ದೇಶದ ಸಂತಾನಕೆ
ಉಸಿರೇ ಬರಲಿಲ್ಲ
ಹೆಸರೇ ಇರಲಿಲ್ಲ"

ಇನ್ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲ ನಮ್ಮನ್ನು ಬ್ರಿಟೀಷರು ದಬ್ಬಾಳಿಕೆಯಿಂದ ಆಳಿದರು. ಅಂತಹ ಸಂದರ್ಭದಲ್ಲಿ ನಮ್ಮ ನಾಡಿಗೆ ಹಾಗೂ ನಮ್ಮ ಜನತೆಗೆ ಹೆಸರೇ ಇಲ್ಲದಂತಾಯಿತು. ಅಂತಹ ಸಂದರ್ಭದಲ್ಲಿ ಗಾಂಧೀಜಿ ತಮ್ಮ ನಿಶ್ಯಸ್ತ್ರಗಳನ್ನು ಬಳಸಿಕೊಂಡು ದೇಶದ ಜನತೆಯನ್ನು ಒಗ್ಗೂಡಿಸಿಕೊಂಡು ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ನಾಡನ್ನು ಪರದಾಸ್ಯದಿಂದ ಮುಕ್ತಿಗೊಳಿಸಿದರು. ಇಂತಹ ಧೀಮಂತ ವ್ಯಕ್ತಿತ್ವವನ್ನು ಹೊಂದಿದ ಗಾಂಧೀಜಿಯನ್ನು ಕುರಿತು ಸು.ರಂ. ಎಕ್ಕುಂಡಿಯವರು ಹೀಗೆ ಕಾವ್ಯವಾಗಿಸಿದ್ದಾರೆ.

"ಹೇ ಭಾರತ ಪುಣ್ಯವ್ರತ
ಧೀಶಕ್ತಿಯ ದೇವವ್ರತ!
ಸ್ವಾತಂತ್ರ್ಯದ ಸತ್ಯವ್ರತ
ಗಾಂಧೀಜಿ ಗೆಲ್ಗೆ!
ಬರಬಾರದ್ದೇ ಬಂದಿತು!
ಸೆರೆಬಿಡಿಸಿದ ಕೈ ಕೊಂದಿತು!
ಈ ರಾಷ್ಟ್ರದ ಋಣ ಸಂದಿತು
ನೆಲ ಮಂಗಳ ಬಾಳ್ಗೆ!"

(ಚಂದ್ರಶೇಖರ ಪಾಟೀಲ ಮತ್ತು ಇತರರು (ಸಂ); ೧೯೯೮; ಪು. ೯೭-೯೯)

ಭಾರತದ ಪುಣ್ಯವ್ರತದಂತೆಯೂ ಬುದ್ಧಿಬಲದಿಂದ ಭೀಷಣವಾದ ಪ್ರತಿಜ್ಞೆಗೈದ ಭೀಷ್ಮನಂತೆ ಸತ್ಯವೆಂಬ ವ್ರತದ ಮೂಲಕ ಸ್ವಾತಂತ್ರ್ಯವನ್ನು ತಂದುಕೊಟ್ಟರು ಎಂಬುದಾಗಿ ಪ್ರಾಸಬದ್ಧ ಕಾವ್ಯ ಅಷ್ಟೇ ಅರ್ಥಗಾಂಭೀರ್ಯವೂ ಇರುವಂತೆ ಗಾಂಧೀಜಿಯರನ್ನು ಗುಣಗಾನ ಮಾಡಿದ್ದಾರೆ.

ಶಾಲೆಯಲ್ಲಿಯೂ ಕೂಡ ಗಾಂಧಿ ಕುರಿತ ಚಿಂತನೆ ಹೇಳುವ ಪದ್ಯವೊಂದರಿಂದ ನವೋದಯದ ಆದರ್ಶೀಕೃತ, ಪೂಜ್ಯಭಾವದ ಮೌಲ್ಯಗಳನ್ನು ಪ್ರಗತಿಶೀಲ ಪಂಥದಲ್ಲಿ ಅಳೆದು ತೂಗಿ ನೋಡುವ ಘಟ್ಟವಾಯಿತು. ಮೌಲ್ಯವೊಂದನ್ನು ತೌಲನಿಕ ವಿಮರ್ಶೆಗಳ ಸಂಚಲನದಿಂದ ಅಧ್ಯಯನ ಮಾಡುವಂತಾಯಿತು. ಪ್ರವಾಹ ಬಂದು ಇಳಿದ ನಂತರದ ಕ್ಷಣ ಇದಾಗಿದ್ದರೂ ಈ ಘಟ್ಟ ಗಾಂಧಿಯವರನ್ನು ಆದರ್ಶೀಕೃತ ನೆಲೆಯಲ್ಲಿ ಪ್ರತಿನಿಧಿಸಿದೆ.

೩.೩. ನವ್ಯ ಕಾವ್ಯ

ಭಾರತ ಸ್ವತಂತ್ರಗೊಂಡಾಗ ದೇಶದ ಜನಜೀವನದಲ್ಲಿ ಹೊಸ ಪ್ರಜ್ಞೆಯೊಂದು ಮೂಡತೊಡಗಿತು. ಸ್ವಾತಂತ್ರ್ಯಪೂರ್ವ ಕಾಲದಲ್ಲಿನ ಜನಜೀವನಕ್ಕೂ ಸ್ವಾತಂತ್ರ್ಯೋತ್ತರ ಜನಜೀವನಕ್ಕೂ ನಡುವೆ ಗಮನಾರ್ಹವಾದ ವ್ಯತ್ಯಾಸಗಳಿವೆ. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟೀಷರ ದಬ್ಬಾಳಿಕೆಯಿಂದ ಸ್ವಾತಂತ್ರ್ಯ ಪಡೆಯುವ ಹಂಬಲವಿತ್ತು. ಇದರಿಂದ ಭಿನ್ನ ಭಿನ್ನ ಭಾಷೆ, ಸಂಸ್ಕೃತಿ, ಸಮುದಾಯಗಳ ಜನ ದೇಶಕ್ಕಾಗಿ ಹೋರಾಡುವ ಸಮಯ ಬಂದರೆ ಪ್ರಾಣವನ್ನು ತ್ಯಾಗ ಮಾಡುವ ಮನೋಧರ್ಮ ಹೊಂದಿದ್ದರಿಂದ ಸಾಂಘಿಕ ಜೀವನಕ್ಕೆ ಹೆಚ್ಚು ಪ್ರಾಮುಖ್ಯತೆ ಇತ್ತು. ಅಂದರೆ ಪಾರಂಪರಿಕ ಜೀವನಕ್ಕೆ ಸ್ವಾತಂತ್ರ್ಯಪೂರ್ವದಲ್ಲಿ ಹೆಚ್ಚಿನ ಮಹತ್ವವಿತ್ತು. ಆದರೆ ಸ್ವಾತಂತ್ರ್ಯ ನಂತರದ ಜೀವನದಲ್ಲಿ ಇದು ಭಿನ್ನವಾಯಿತು. ಬ್ರಿಟೀಷರ ಅಧಿಕಾರದಿಂದ ದೇಶ ಸ್ವಾತಂತ್ರ್ಯ ಪಡೆದ ನಂತರ ಆ ಸ್ವಾತಂತ್ರ್ಯ ಉಳ್ಳವರಿಗೆ ಮಾತ್ರ ಸೀಮಿತ ಎಂಬ ಭಾವನೆ ಮೂಡತೊಡಗಿತು. ದೇಶದಲ್ಲಿ ಅರಾಜಕತೆ ತಾಂಡ ವಾಡಲು ಪ್ರಾರಂಭವಾಯಿತು. ಅಧಿಕಾರದ ರುಚಿ ಕಂಡಂತಹ ರಾಜಕೀಯ ನಾಯಕರು ತಮ್ಮ ಸ್ವಾರ್ಥ ಸಾಧನೆಗೆ ಕಾನೂನುಗಳನ್ನು ರಚಿಸಿಕೊಳ್ಳುತ್ತಾ ಬಂದರು. ಇಂತಹ ಸಮಸ್ಯೆಗಳು ದೇಶವನ್ನು ಕಾಡುವಾಗ ಸಾಹಿತ್ಯ ಲೋಕದಲ್ಲಿಯೂ ಸಹ ಬದಲಾವಣೆಗಳು ಕಾಣಿಸಿಕೊಳ್ಳಲು ಆರಂಭವಾಯಿತು. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನವ್ಯ ಸಾಹಿತ್ಯ ಪಂಥ ಹುಟ್ಟಿಕೊಂಡಿತು. ನವೋದಯ ಸಾಹಿತ್ಯದ ಆದರ್ಶ ಮೌಲ್ಯಗಳ ಪ್ರತಿಪಾದನೆಗಿಂತ ನವ್ಯ ಸಾಹಿತ್ಯ ವಾಸ್ತವ ಜೀವನದ ಅನುಭವಗಳತ್ತ ಮುಖ ಮಾಡಿತು.

"ನವ್ಯ ಕಾವ್ಯದತ್ತ ತಿರುಗುವ ಮುನ್ನ ಒಂದು ಅಂಶವನ್ನು ಗಮನಿಸಬೇಕು. ಕನ್ನಡ ನವೋದಯ ಕಾವ್ಯವನ್ನು 'ರೊಮ್ಯಾಂಟಿಕ್' ಎಂದು (ಇಂಗ್ಲೀಷ್ ಸಾಹಿತ್ಯದ 'ರೊಮ್ಯಾಂಟಿಕ್' ಕವನದ ಅರ್ಥದಲ್ಲಿ) ಕರೆಯಲಾಗುವುದಿಲ್ಲ. ಆದರೆ ಇದಕ್ಕೆ ಇಂಗ್ಲೀಷಿನ ರೊಮ್ಯಾಂಟಿಕ್ ಕಾವ್ಯದ ಪ್ರೇರಣೆ ಇತ್ತು. ರೊಮ್ಯಾಂಟಿಕ್ ಕಾವ್ಯದ ಹಲವು ಅಂಶಗಳು ಈ ಕಾವ್ಯದಲ್ಲಿ ಇದ್ದವು ಎನ್ನುವುದು ನಿಜ.

ಸ್ವಾತಂತ್ರ್ಯದ ಮೊದಲಿನ ಹೊನ್ನಗನಸುಗಳು ಮಾಯವಾಗುತ್ತ ಬಂದಂತೆ, ಆಗಿನ ಆದರ್ಶಗಳ ಮಾತುಗಳು ಮಾತ್ರ ಉಳಿದು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅವು ಅಣುಕು ಮಾತುಗಳಾಗಿ ಕೇಳಲು ಪ್ರಾರಂಭವಾದಾಗ ತರುಣ ಪೀಳಿಗೆಗೆ ದಿಗ್ಭ್ರಮೆ, ನಿರಾಸೆ, ಹಿಂದಿನ ಆದರ್ಶಗಳಲ್ಲಿ

ಧೋರಣೆಗಳಲ್ಲಿ ಅಪನಂಬಿಕೆ ಉಂಟಾದವು. ಕಾವ್ಯಕ್ಕೂ ಜನಜೀವನಕ್ಕೂ ಜನಮನಕ್ಕೂ ಸಂಬಂಧ ತಪ್ಪಿದೆ ಎನ್ನಿಸಿತು. ಕೈಗಾರಿಕೆಗಳು ಬೆಳೆದು, ಅತೀ ವೇಗದ ಜೀವನದ, ಮಾನವೀಯ ಸಂಪರ್ಕ ಕಡಿಮೆಯಾದ ನಗರಗಳು ಬೆಳೆದದ್ದೂ ಈ ಕಾಲದಲ್ಲೆ. ಈ ವಾತಾವರಣದಲ್ಲಿ ಹುಟ್ಟಿತು ನವ್ಯಕಾವ್ಯ. ಸ್ವಾತಂತ್ರ್ಯಪೂರ್ವದ ನವೋದಯ ಕಾವ್ಯಕ್ಕೂ ಸ್ವಾತಂತ್ರ್ಯೋತ್ತರದ ನವ್ಯಕಾವ್ಯಕ್ಕೂ ಇವು ಮುಖ್ಯ ವ್ಯತ್ಯಾಸಗಳು. ಅಂದರೆ ನವ್ಯಕಾವ್ಯ ಹೆಚ್ಚು ಅಂತರ್ಮುಖಿ; ಅದರ ಉದ್ದೇಶ ವಿಶ್ಲೇಷಣೆ; ಅದು ಅಭಿವ್ಯಕ್ತಿಯಲ್ಲಿ ಪ್ರಾಧಾನ್ಯ ನೀಡಿದ್ದು ವ್ಯಂಗ್ಯಕ್ಕೆ, ಸೂಚ್ಯಾರ್ಥಕ್ಕೆ, ಅರ್ಥಸ್ತರಗಳಿಗೆ" (ಶೇಷಗಿರಿರಾವ್. ಎಸ್.ಎಲ್.; ೨೦೦೯; ಪು. ೧೧೧).

"ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವುದಾಗಲಿ, ಜನರಲ್ಲಿ ಸ್ವಾತಂತ್ರ್ಯದ ಬಗೆಗೆ ಕಹಳೆ ಊದಿ ಜನರನ್ನು ಎಚ್ಚರಗೊಳಿಸುವ ಅವಶ್ಯಕತೆಯಾಗಲಿ ಸ್ವಾತಂತ್ರ್ಯೋತ್ತರ ಕಾವ್ಯಗಳಲ್ಲಿ ಇರಲಿಲ್ಲ. ನವೋದಯಕ್ಕಿಂತಲೂ ಬೇರೆಯಾದ ವಾತಾವರಣ ಮತ್ತು ಸಮಸ್ಯೆಗಳು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇದ್ದವು. ಸಾಹಿತಿಗಳೇ ಅಂತಹ ಸಮಸ್ಯೆಗಳೆಡೆಗೆ ದೃಷ್ಟಿ ಬೀರಿ ಅವುಗಳನ್ನು ತಮ್ಮ ಸಾಹಿತ್ಯದಲ್ಲಿ(ಕಾವ್ಯ) ಪ್ರತಿಬಿಂಬಿಸುವ ಮೂಲಕ ಸಮಕಾಲೀನತೆಗೆ ಸ್ಪಂದಿಸಬೇಕಾಯಿತು" (ಹಿರೇಮಠ.ಎಸ್.ಎಂ.; ೧೯೯೩; ಪು. ೪೭೯). ಅದೇ ಸಂದರ್ಭದಲ್ಲಿ ಎರಡನೇ ಮಹಾಯುದ್ಧವು ಮುಗಿದು ಹೋದುದರಿಂದ ಸ್ವತಂತ್ರ ಭಾರತದಲ್ಲಿ ಆತಂಕ ಅಥವಾ ದ್ವಂದ್ವಗಳಿಗೆ ಎಡೆಮಾಡಿಕೊಟ್ಟಿತು. ನವ್ಯ ಕಾಲದ ಸಾಹಿತಿಗಳಲ್ಲಿ ಅಭಿವ್ಯಕ್ತಿಯ ಶೈಲಿ, ಬಂಧ ಭಿನ್ನಗೊಂಡವು. ವಾಸ್ತವತೆಗೆ ಒತ್ತು ನೀಡಿತು. ಭಾಷೆಯನ್ನು ಸರಳಗೊಳಿಸಿ, ಪ್ರಾಸ ಛಂದೋಬಂಧಗಳಿಂದ ಮುಕ್ತಿ ಪಡೆಯಿತು. ಸಮಕಾಲೀನ ಜ್ವಲಂತ ಸಮಸ್ಯೆಗಳೇ ಕಾವ್ಯದ ವಸ್ತುಗಳಾದವು. ಮಣ್ಣಿನ ವಾಸನೆಯ ಜೊತೆಗೆ ಕಾವ್ಯದಲ್ಲಿ ಪ್ರತಿಮೆ, ಪ್ರತೀಕಗಳ ಸಂಕೇತಗಳನ್ನು ತರಲಾಯಿತು. ಕಾಲಕ್ರಮೇಣದಲ್ಲಿ ನವ್ಯ ಸಾಹಿತ್ಯ ಸಂಕೀರ್ಣ ಗೊಂಡಿತು.

ಭಾರತ ಸ್ವಾತಂತ್ರ್ಯ ಪಡೆದ ಮೇಲೆ ಇಲ್ಲಿರುವ ಸಮಸ್ಯೆಗಳು, ಶೋಷಣೆ, ದಬ್ಬಾಳಿಕೆ, ಅನ್ಯಾಯ, ಅಕ್ರಮ, ದುಃಖ, ದಾರಿದ್ರ್ಯಗಳು ನಾಶವಾಗಿ ನೆಮ್ಮದಿಯ ಬದುಕು ದೊರಕುತ್ತದೆ ಎಂದು ಜನಸಾಮಾನ್ಯರು ಕನಸು ಕಂಡಿದ್ದರು. ಆದರೆ ಸ್ವಾತಂತ್ರ್ಯ ನಂತರದಲ್ಲಿ ನಡೆದ ಘಟನೆಗಳು ಜನರ ಕನಸುಗಳನ್ನೆಲ್ಲ ಭಗ್ನಗೊಳಿಸಿದವು. ಸ್ವಾತಂತ್ರ್ಯ ಭಾರತದ ಕನಸು ಕಂಡಿದ್ದ ಭಾರತೀಯರಿಗೆ ಗಾಂಧೀಜಿಯ ಹತ್ಯೆ ದೇಶದ ಮುಂಬರುವ ದುರಂತಗಳು ಸೂಚ್ಯವಾಗಿ ತೋರುತ್ತಿದ್ದವು. ಡಾ. ಗಿರಡ್ಡಿ ಗೋವಿಂದರಾಜು ಅವರು "ಸ್ವಾತಂತ್ರ್ಯ ಬಯಸಿದ್ದನ್ನು ತರಲಿಲ್ಲ ಎಂಬ ಅರಿವು ಮೂಡುವುದಕ್ಕೆ ಹೆಚ್ಚು ದಿನಗಳೇನೂ ಹಿಡಿಯಲಿಲ್ಲ. ಗಾಂಧೀವಾದದ ಎಲ್ಲ ಆದರ್ಶಗಳೂ ಮಣ್ಣು ಪಾಲಾದವು. ಗಾಂಧೀಜಿಯವರ ಸಾವು ಕೂಡ ಆ ಯುಗದ ಮೌಲ್ಯಗಳ ಕ್ರೂರ ಹತ್ಯೆಯನ್ನು ಸಂಕೇತಿಸಿತು. ಸಾಮಾಜಿಕ ಸಮಾನತೆಯನ್ನು ತರಬೇಕಿದ್ದ ಸ್ವಾತಂತ್ರ್ಯ ಬಂಡವಾಳಶಾಹಿಯ ಕೈಗೊಂಬೆಯಾಗಲಿದ್ದ ಭವಿಷ್ಯದ ಭಯವನ್ನು ಕವಿತೆ ತನ್ನ ಒಡಲಿನಲ್ಲಿ ಸೇರಿಸಿಕೊಂಡಿದೆ. ಗಾಂಧೀಯ ಮರಣಾನಂತರ ಒಂದೇ ಸಮನೆ ರಾಜಕೀಯ ಅಧಃಪತನ ಆರಂಭವಾಯಿತು.

ಸಮಾಜವಾದ, ಪ್ರಜಾಪ್ರಭುತ್ವ, ಜಾತ್ಯಾತೀತತೆಯ ಆದರ್ಶಗಳು ಕೇವಲ ಭಾಷಣದ ಸರಕುಗಳಾಗಿ ಮಾತ್ರ ಉಳಿದವು. ಬಡತನ, ನಿರುದ್ಯೋಗ, ಭ್ರಷ್ಟಾಚಾರ, ಅಧಿಕಾರಶಾಹಿ ಅಟ್ಟಹಾಸಗಳು ಜೀವನದ ಎಲ್ಲ ಸ್ತರಗಳನ್ನು ತಾಕಿದವು. ಇದರಿಂದಾಗಿ ವ್ಯಾಪಕವಾಗಿ ಭ್ರಮನಿರಸನದ ದನಿ ಕಾವ್ಯದಲ್ಲಿ ಸ್ಥಾಯಿಯಾಯಿತು. ಸ್ವಾತಂತ್ರ್ಯೋತ್ತರದ ನವ್ಯ ಮತ್ತು ನವ್ಯೋತ್ತರ ಕಾವ್ಯಗಳೆರಡರಲ್ಲೂ ಈ ಭಾವನೆಗಳನ್ನು ಕಾಣಬಹುದು"(ಶಿವರುದ್ರಪ್ಪ. ಜಿ.ಎಸ್.(ಸಂ); ೧೯೯೮; ಪು. ೭೫) ಎಂದು ಅಭಿಪ್ರಾಯಪಟ್ಟಿದ್ದಾರೆ. ಗಿರಡ್ಡಿ ಗೋವಿಂದರಾಜು ಅವರ ಈ ಮೇಲಿನ ಮಾತುಗಳು ಸ್ವಾತಂತ್ರ್ಯಾನಂತರದ ಭಾರತದ ಸ್ಥಿತಿಗತಿಗಳನ್ನು ಬಿಚ್ಚಿಡುತ್ತವೆ. ಇವುಗಳನ್ನೆಲ್ಲಾ ಕಂಡ ಜನಸಮುದಾಯ, ಬುದ್ಧಿಜೀವಿಗಳು ಸ್ವಾತಂತ್ರ್ಯ ಬಯಸಿದ ಸುಖ ತರಲಿಲ್ಲವೆಂದು ನಿರಾಶೆ ಮತ್ತು ಭ್ರಮನಿರಸನಗೊಂಡರು. ಈ ಎಲ್ಲ ಘಟನೆಗಳನ್ನು ಸ್ವಾತಂತ್ರ್ಯಪೂರ್ವದ ನವೋದಯ ಕವಿಗಳು ಕಂಡು ಕೂಡ ಮೌಲ್ಯಗಳ ಆರಾಧನೆ, ಗತವೈಭವ ವರ್ಣನೆ, ಕನಸು, ಕಲ್ಪನೆ, ಪ್ರೀತಿ ಪ್ರಣಯಗಳ ಹಳೆಯ ರಾಗದ ಗುಂಗಿನಲ್ಲಿಯೇ ಮೈಮರೆತಿರುವುದನ್ನು ಕಂಡ ಸ್ವಾತಂತ್ರ್ಯೋತ್ತರದ ನವ್ಯ ಮತ್ತು ದಲಿತ ಬಂಡಾಯದ ಕವಿಗಳು ರೋಸಿ ಹೋಗಿದ್ದರು. ಇದಕ್ಕೆ ಜಿ.ಆರ್. ತಿಪ್ಪೇಸ್ವಾಮಿ ಅವರು "ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಗಾಂಧಿ ಆದರ್ಶವಾದ ಗಾಂಧಿ ಅನುಯಾಯಿಗಳಲ್ಲಿಯೇ ಮಾಯವಾಯಿತು. ರಾಷ್ಟ್ರಾಭಿಮಾನ ಮುಖವಾಡ ಧರಿಸಿ ಹೋರಾಡುತ್ತಿದ್ದ ನಾಯಕರು ಮತ್ತು ಅಂಥವರ ವ್ಯಕ್ತಿತ್ವಗಳು ಜವಾಬ್ದಾರಿ ಬದುಕಿನ ಸಂದರ್ಭಗಳಲ್ಲಿ ಟೊಳ್ಳಾಗಿ ಕಾಣಿಸಿದವು. ಇದರಿಂದಾಗಿ ಅಕ್ಷರಸ್ಥರ ಮನಸ್ಸು ಕಡಿದು ಹೋಯಿತು. ಪ್ರಾಮಾಣಿಕವಾಗಿ ಯೋಚಿಸುವವರಿಗೆ ಮನಸ್ಸು ಮುರಿಯಿತು. ಮಾತು ಮತ್ತು ಕ್ರಿಯೆಗಳಲ್ಲಿ ಅಂತರವೇರ್ಪಟ್ಟಾಗ ಆ ವ್ಯತ್ಯಾಸಗಳನ್ನು ವ್ಯಂಗ್ಯ ವಿಡಂಬನೆಗಳಿಂದ ನೋಡುವಂತಾಯಿತು. ಹೊಸ ಬದುಕಿನ ಹುಡುಕಾಟ ಆರಂಭವಾಯಿತು"(ರಾಮಚಂದ್ರಪ್ಪ ಬರಗೂರು ಮತ್ತು ಇತರರು(ಸಂ); ೧೯೯೩; ಪು. ೧೬೭) ಎಂದು ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ನವ್ಯ ಕಾವ್ಯಗಳಲ್ಲಿ ಹೊಸ ಮೌಲ್ಯಗಳನ್ನು, ಹೊಸತನವನ್ನು ಹುಡುಕುತ್ತಾ, ಅಂತರಂಗದ ಮೌಲ್ಯಗಳನ್ನು ಅನ್ವೇಷಣೆ ಮಾಡುತ್ತಾ, ಬದುಕಿನ ವಾಸ್ತವತೆಗಳನ್ನು ಅರಸುತ್ತಾ ಹೊರಟ ನವ್ಯ ಕಾವ್ಯ (ಸಾಹಿತ್ಯ) ವಿಡಂಬನೆಗಳಿಂದ ತುಂಬಿ ಹೋಯಿತು.

ನವ್ಯ ಕವಿಗಳು ಗಾಂಧೀಜಿಯವರನ್ನು ಅರ್ಥೈಸಿಕೊಳ್ಳುವ ಅಥವಾ ಪ್ರತಿನಿಧಿಸುವ ರೀತಿಯಲ್ಲಿ ವ್ಯತ್ಯಾಸಗಳಿರುವುದು ಸಾಮಾನ್ಯ. ಗಾಂಧೀಜಿಯವರ ಚಿಂತನೆಗಳನ್ನು, ಆದರ್ಶಗಳನ್ನು, ತತ್ವಗಳನ್ನು, ಮೌಲ್ಯಗಳನ್ನು ಮತ್ತು ವ್ಯಕ್ತಿತ್ವವನ್ನು ನವ್ಯಕಾವ್ಯ ಗರ್ಭೀಕರಿಸಿಕೊಂಡಿದೆ. ಇದನ್ನು ಕುರಿತು ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು "ಗಾಂಧೀಜಿಯಂತಹ ವ್ಯಕ್ತಿಯನ್ನು ಕುರಿತು ಬರೆಯುವಾಗ ಕವನಗಳು ಸಾಮಾನ್ಯವಾಗಿ ಎರಡು ಹಾದಿ ಹಿಡಿಯುತ್ತವೆ. ಒಂದು ಅವರ ವ್ಯಕ್ತಿತ್ವವನ್ನು ಕೊಂಡಾಡಿ ಬರೆಯುವುದು; ಇಲ್ಲವೆ ಅಂಥವರೆದುರು ನಾವು ಎಷ್ಟು ಅಲ್ಪರೆಂದು ಹಳಿದುಕೊಳ್ಳುವುದು. ಇವುಗಳೆಲ್ಲ ಒಂದು ನಾವು ತಾಳದ ಮೌಲ್ಯಗಳ ಆರಾಧನೆ; ಮತ್ತೊಂದು ನಾವು ಬದುಕುತ್ತಿರುವ ನಿಜದ ಖಂಡನೆ"(ಶಿವರುದ್ರಪ್ಪ. ಜಿ.ಎಸ್.(ಸಂ); ೧೯೭೩; ಪು. ೧೭) ಎಂದು ಅಭಿಪ್ರಾಯಿಸಿದ್ದಾರೆ.

ಗಾಂಧೀಜಿಯವರ ವ್ಯಕ್ತಿತ್ವ ನವ್ಯರಿಗೆ ಆದರ್ಶದ ಮೌಲ್ಯಗಳಾಗಿ ಕಂಡಿದ್ದು, ಅಂತಹ ಮಹಾತ್ಮನು ಅನುಸರಿಸಿದ ಉನ್ನತವಾದ ಮೌಲ್ಯ ಅಥವಾ ತತ್ವಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲಿಲ್ಲ ಎಂಬ ಕೊರಗು ಒಂದು ಕಡೆ ಇದ್ದರೆ, ಗಾಂಧೀಜಿಯವರ ತತ್ವಾದರ್ಶಗಳನ್ನು ಗಾಳಿಗೆ ತೂರಿ, ಗಾಂಧೀಜಿಯನ್ನು ವೋಟು ಪಡೆಯುವುದಕ್ಕೆ, ಅಧಿಕಾರ ಗಿಟ್ಟಿಸುವುದಕ್ಕೆ, ಭಾಷಣ ಮಾಡುವುದಕ್ಕೆ ಮಾತ್ರ ಬಳಸಿಕೊಂಡುದರ ಬಗೆಗೆ ಇರುವ ವಿಷಾದವನ್ನು ನವ್ಯ ಕವಿಗಳಲ್ಲಿ(ಕಾವ್ಯ) ಕಾಣಬಹುದು.

೧೯೫೦ರಿಂದ ೧೯೭೫ರ ಕಾಲಘಟ್ಟವನ್ನು ಅಧ್ಯಯನದ ದೃಷ್ಟಿಯಿಂದ ನವ್ಯ ಸಾಹಿತ್ಯವೆಂದು ಗುರುತಿಸಿಕೊಳ್ಳುತ್ತೇವೆ. ಈ ಕಾಲಘಟ್ಟದಲ್ಲಿ ಗಾಂಧೀಜಿಯವರನ್ನು ಕುರಿತು ನವ್ಯಕವಿಗಳು ಅಸಂಖ್ಯಾತ ಕವಿತೆಗಳನ್ನು ರಚಿಸಿದ್ದಾರೆ. ಅವು ಗಾಂಧೀಜಿಯವರ ಸರ್ವತೋಮುಖ ವ್ಯಕ್ತಿತ್ವವನ್ನು ಪ್ರತಿನಿಧಿಸುವ ವೈವಿಧ್ಯಮಯವಾದ ಹಾಗೂ ವಿಶಿಷ್ಟವಾದ ರಚನೆಗಳಾಗಿವೆ. ಕೆಲವು ಕವಿಗಳನ್ನು ಹೆಸರಿಸುವುದಾದರೆ ಸಿದ್ಧಲಿಂಗ ಪಟ್ಟಣಶೆಟ್ಟಿ, ಸಮತೀಂದ್ರ ನಾಡಿಗ್, ಗಿರಡ್ಡಿ ಗೋವಿಂದರಾಜು, ಕೆ.ವಿ. ತಿರುಮಲೇಶ್, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಜಯಂತ ಕಾಯ್ಕಿಣಿ, ಗಂಗಾಧರ ಚಿತ್ತಾಲ, ವಿನಾಯಕ, ಗೋಪಾಲಕೃಷ್ಣ ಅಡಿಗ, ರಾಮಚಂದ್ರಶರ್ಮ, ಸುಬ್ರಾಯ ಚೊಕ್ಕಾಡಿ, ಅಬ್ದುಲ್ ಮಜೀದ್‌ಖಾನ್, ಚಂದ್ರಶೇಖರ ಪಾಟೀಲ, ಜಯಸುದರ್ಶನ, ಅರವಿಂದ ನಾಡಕರ್ಣಿ ಮುಂತಾದ ನವ್ಯ ಕಾಲಘಟ್ಟದ ಕವಿಗಳು ಗಾಂಧೀಜಿಯನ್ನು ಕುರಿತು ಕವಿತೆಗಳನ್ನು ರಚಿಸಿದ್ದಾರೆ.

ಗಾಂಧೀಜಿಯವರನ್ನು ಕುರಿತು ಗೌರವ, ಅಭಿಮಾನ ಮತ್ತು ಧನ್ಯತೆಯ ಭಾವಗಳನ್ನು ಗೋಪಾಲಕೃಷ್ಣ ಅಡಿಗರು 'ಭಾರತದ ತಂದೆ ಗಾಂಧಿ' ಎಂಬ ಕವಿತೆಯಲ್ಲಿ ಹೀಗೆ ಸ್ಮರಿಸಿದ್ದಾರೆ.

"ಆದರೇನೊ ಪುಣ್ಯಲೇಶದಿಂದ
ನಿನ್ನ ದಿವ್ಯ ಪಾದ
ತುಳಿದ ಕಾಲದೇಶದೊಳೇ
ಬದುಕಿ ನಾ ಕೃತಾರ್ಥನು.

ಯಾವ ಬಿತ್ತೊ ನಾನು ಅದೇ
ಇದೇ ನೆಲದ ಬಸಿರಲಿ
ಬಾನೆತ್ತರ ಬೆಳೆವಂದವ
ಆ ಚಂದವ, ಬಿಸವಂದವ
ನಿನ್ನೊಳಣ್ಣ ಕಂಡೆನು;
ಅತ್ಯುನ್ನತ ಸುರಭೂಜವ -
ನಿಲ್ಲೆ ನೆಲದಿ ಕಂಡೆನು,
ಅಂತೆ ನಾನು ಧನ್ಯನು!

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೬-೭)

ಇಲ್ಲಿ ಅಡಿಗರು ಗಾಂಧೀಜಿಯವರನ್ನು ಪೂಜ್ಯಭಾವದಿಂದ ದೈವತ್ವಕ್ಕೇರಿಸಿ ನೋಡಿದ್ದಾರೆ. ಗಾಂಧೀಜಿ ಹುಟ್ಟಿದ ಈ ನಾಡಿನಲ್ಲಿ, ಆತ ತಿರುಗಾಡಿದ ಈ ನೆಲದಲ್ಲಿ ತಾನು ಜನಿಸಿದುದು

ನನ್ನ ಪುಣ್ಯವೆಂದೇ ಕವಿ ಹೆಮ್ಮೆ ಪಡುತ್ತಾರೆ. ಹೀಗೆ ಧನ್ಯತಾಭಾವದಿಂದ ಸ್ಮರಿಸಿ ಈ ದೇಶದ ಪಿತಾಮಹ ಗಾಂಧೀಜಿ ಎಂದು ಪ್ರತಿನಿಧಿಸಿದ್ದಾರೆ.

ಗಾಂಧಿಯನ್ನು ಗುಂಡಿಕ್ಕಿ ಕೊಂದಾಗ ದೇಶದಲ್ಲುಂಟಾದ ಆತಂಕ, ತಳಮಳ-ತಲ್ಲಣಗಳನ್ನು ಮತ್ತು ಸಾಯುವಾಗಲೂ ಗಾಂಧೀಜಿಯ ಮುಖದಲ್ಲಿರುವ ಹಸನ್ಮುಖವನ್ನು 'ಮಹಾತ್ಮ' ಕವನದಲ್ಲಿ ಗಂಗಾಧರ ಚಿತ್ತಾಲರು ಹೀಗೆ ಅಭಿವ್ಯಕ್ತಿಸಿದ್ದಾರೆ.

"ನಿನ್ನ ನೆತ್ತರು ನೆಲಕೆ ಚೆಲ್ಲಿದಂದು
ಮಣ್ಣು ನಡುಗಿತು, ಹಗಲ ಹೂ ಬಾಡಿತು"

ಎಂದು ಆತಂಕವನ್ನು ವ್ಯಕ್ತಪಡಿಸುತ್ತಾ -

"ತಿಳಿವು ತುಂಬಿದ ಕಣ್ಣು, ಒಲವು ತುಂಬಿದ ಎದೆಯು,
ಛಲವನರಿಯದ ಬದುಕು - ಇಷ್ಟೆ ಸಾಕು
ಅಂತೆ ತವಕದಿ ಬಂದೆ, ಮನದ ಮಮತೆಯ ತಂದೆ
ಹಗೆಯ ಕಾಳೋರಗವ ತವಿಪೆನೆಂದೆ.
ಇತ್ತ ಹಾಲಾಹಲವು, ಅತ್ತ ಕೋಲಾಹಲವು -
ಅಮೃತಹಾಸವ ಬೀರಿ ನಡೆದೆ ಮುಂದೆ"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೫೧)

ಗಾಂಧೀಜಿಯವರ ತಿಳಿವು ತುಂಬಿದ ಕಣ್ಣುಗಳಿಗೆ, ಒಲವು ಮಮತೆಯಿಂದ ಕೂಡಿದ ಅವರೆದೆಗೆ ಗುಂಡಿಕ್ಕಿದಾಗ ಇತ್ತ ಹಾಲಾಹಲವು, ಅತ್ತ ಕೋಲಾಹಲಗಳ ಸುಳಿಯಲ್ಲಿ ಅಮೃತಹಾಸವನ್ನು ಬೀರಿ ಶಾಂತಿ ಸಮರಸಕ್ಕೆ ಎಡೆಮಾಡಿಕೊಟ್ಟು ಹೋದರು. ಇದರಿಂದ ಮನುಕುಲದ ರಕ್ತಮಯ ಇತಿಹಾಸ ಕೂಗಿತ್ತೆ ವಿನಃ ಈ ದೇಶ ನಂದನವಾಗಲು ಹೇಗೆ ಸಾಧ್ಯವೆಂದು ಪ್ರಶ್ನಿಸುತ್ತಾರೆ ಗಂಗಾಧರ ಚಿತ್ತಾಲರು. ಹಾಗಾಗಿ ಗಾಂಧಿ ಬದುಕಿದ್ದಾಗ ದೇಶದಲ್ಲಿ ಶಾಂತಿ ನೆಲೆಸಿತ್ತು. ಅವರು ಸತ್ತಾಗ ಸಮರಸಕ್ಕೆ ದಾರಿಯಾಗಿ ಇಡೀ ದೇಶ ಅರಾಜಕತೆಯಿಂದ ಕೂಡಿತ್ತು ಎಂಬ ಆಶಯ, ಈ 'ಮಹಾತ್ಮ' ಕವನದಲ್ಲಿದೆ. ಗಾಂಧಿ ಶಾಂತಿಯ ಪ್ರತೀಕ, ಗಾಂಧೀಯ ಸಾವು ಸಮರಸಕ್ಕೆ ನಾಂದಿಯಾಗಿದೆ ಎಂದು ಕವಿ ಚಿತ್ರಿಸಿದ್ದಾರೆ.

ಗಾಂಧೀಜಿ 'ಜನಸೇವೆಯೇ ಜನಾರ್ಧನ ಸೇವೆ' ಎಂಬ ನುಡಿಯಂತೆ ಇಡೀ ತಮ್ಮ ಜೀವನವನ್ನು ದೇಶಕ್ಕಾಗಿ, ಜನಸಾಮಾನ್ಯರಿಗಾಗಿ ಮುಡಿಪಾಗಿಟ್ಟರು. ನಿಸ್ವಾರ್ಥ ಜೀವನವನ್ನು ಬಾಳಿದವರು ಗಾಂಧೀಜಿ. ಇಂತಹ ವಿಶಾಲವಾದ ಮನಸ್ಸನ್ನು ಹೊಂದಿದ ಗಾಂಧೀಜಿಯ ಸರಳ ಜೀವನವನ್ನು ಗೌರೀಶ ಕಾಯ್ಕಿಣಿ ಅವರು 'ಅಮರ ಜನ್ಮ' ಎಂಬ ಕವಿತೆಯಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ.

"ಈ ಅಮೃತ ಪುತ್ರನೋ!
ದೇಶದ ವಿರಾಟ್ ಕಾಯಕಲ್ಪ ಶಿಲ್ಪಿಸ ಬಂದು

ತನ್ನ ಬಾಳನೆ ತಳೆದು ಸಂಜೀವನವಗ್ಯೆದ
ದೇವಯಾನವ ಕಳೆದುಕೊಂಡ ಜನಕೆಂದು
ಲಕ್ಷೋಪಲಕ್ಷ ಕಚವಕ್ಷ ಕವಚಗಳೊಳಗೆ
ಸಾಕ್ಷಿ ಒಳದನಿಯಾಗಿ ಗುರುದೇವನಿವಗೆಲ್ಲೆ!"

(ಧಾರವಾಡಕರ. ರಾ.ಯ. (ಸಂ); ೧೯೬೦; ಪು. ೬೧)

ಹೀಗೆ ವ್ಯಕ್ತಪಡಿಸಿ ಗಾಂಧೀಜಿಯವರ ಜನ್ಮ ಅಮರವಾದುದು ಎಂದು ಹೇಳಿದ್ದಾರೆ.

ಗೋಪಾಲಕೃಷ್ಣ ಅಡಿಗರು ಕಾವ್ಯ ಪರಂಪರೆಯಲ್ಲಿ ಒಂದು ಮಹಾಪರಂಪರೆಯನ್ನೇ ನಿರ್ಮಿಸಿದ್ದಾರೆ. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಮೂರು ಕವಿತೆಗಳನ್ನು ರಚಿಸಿದ್ದಾರೆ. ಅಡಿಗರನ್ನು ಕುರಿತು ಬಿ.ವಿ. ಕೆದಿಲಾಯರು "ಅಮೂರ್ತ ಭಾವಗಳನ್ನು, ಅನುಭವಗಳನ್ನು ವಿಚಾರಗಳನ್ನು ವಸ್ತುವಾಗಿ ಮಾಡಿಕೊಂಡು ಕಾವ್ಯ ರಚಿಸಿದಂತೆ, ರಕ್ತ ಮಾಂಸದ ವ್ಯಕ್ತಿಗಳ ಕುರಿತು ಅಡಿಗರು ಕೆಲವು ಕವನಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಆಯಾ ವ್ಯಕ್ತಿಗಳ ಬಗ್ಗೆ ಗೌರವ ವ್ಯಕ್ತಪಡಿಸುವುದರ ಜೊತೆಗೆ ಅವರ ಸಾಧನೆಗಳು ಮತ್ತು ಅವರು ಪ್ರತಿಪಾದಿಸಿದ ಮೌಲ್ಯಗಳ ಕುರಿತು ಚಿಂತನೆಯೂ ಹಾಗೂ ಅವರನ್ನು ಜನರು ನಡೆಸಿಕೊಂಡ ರೀತಿಯ ಬಗ್ಗೆ ವಿಷಾದವೂ ವ್ಯಕ್ತವಾಗಿದೆ"(ಕೆದಿಲಾಯ.ಬಿ.ವಿ.; ೧೯೯೬; ಪು. ೯೫) ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಡಿಗರು 'ಗಾಂಧಿ' ಎಂಬ ಕವನದಲ್ಲಿ ಗಾಂಧೀಜಿಯವರನ್ನು 'ತಮಗೆ ಸಂತೆ ಗದ್ದಲದಲ್ಲಿ ಮೂಡಿಬಂದ ಅಮೂಲ್ಯ ಮಾಲು' ಎಂದು ಆರಾಧಿಸಿದ್ದಾರೆ.

"ಗಾಂಧಿ, ಗಾಂಧಿ, ಗಾಂಧಿ!
ಈ ಬಚ್ಚಲ ಕಗ್ಗವಿಯಲಿ
ತಮದ ಸಂತೆ ಗದ್ದಲದಲಿ
ಬಂತೆಲ್ಲಿಂದೆಂತು ಹೇಳು
ಈ ಅಮೂಲ್ಯ ಮಾಲು
ನಾಲಿಗೆ ಗುಡಿ ಬೆಂಬೆಳಕುಲಿ
ಕುಡಿದೀಪದ ಸಾಲು?"

(ಚಂದ್ರಶೇಖರ ಪಾಟೀಲ ಮತ್ತು ಇತರರು (ಸಂ); ೧೯೮೮; ಪು. ೫೧)

ಸಾದಾ ಶಬ್ದವೆನಿಸಿದರೂ ವ್ಯವಹಾರಿಕ/ವಹಿವಾಟಿನ ಸ್ಪರ್ಶವಿದೆ ಹಾಗೂ ಚಲಾವಣೆಯಲ್ಲಿರುವ ವಿಶೇಷವಿದೆ. ಅವರ ಆಕರ್ಷಕ ವ್ಯಕ್ತಿತ್ವವನ್ನು ಹಿಡಿದಿಡುವ ಪ್ರಯತ್ನವಿದೆ. ಮನುಷ್ಯನ ಮನದಲ್ಲಿ ಹೊಯ್ದಾಟ ಮಾಡುತ್ತಿರುವ ಹಿಂಸೆ, ಸ್ವಾರ್ಥ ಶೋಷಣೆಯ ರಾಕ್ಷಸೀ ಗುಣಗಳ ಮಧ್ಯದಲ್ಲಿ ಗಾಂಧೀಜಿ ಕುಡಿದೀಪವಾಗಿ ಬಂದು ಬೆಳಗಿದವರು ಎಂದು ಪ್ರತಿನಿಧಿಸಿದ್ದಾರೆ.

ವಿನಾಯಕರು 'ಗಾಂಧೀಜಿ' ಎಂಬ ಕವನದಲ್ಲಿ ಶಾಂತಿ, ಅನಂತ ಪ್ರೀತಿಯ ಅಮೃತಬೀಜವನ್ನು ಬಿತ್ತಿದ ಗಾಂಧೀಜಿಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

"ಬೇಕಾರಿ ಬರಿ ಚರ್ಮ, ಬರಿ ಎಲುಬು, ಆದರಿವನು
ರಾಷ್ಟ್ರರುಧಿರದ ಆಗರ
ಪಂಚೆಯುಟ್ಟಿಹ ರೈತ, ನಮ್ಮ ತಲೆಮಾರಿಗಿವನು
ಬುದ್ಧ, ಕೃಪಾಗರ"

(ಚಂದ್ರಶೇಖರ ಪಾಟೀಲ ಮತ್ತು ಇತರರು (ಸಂ); ೧೯೯೮; ಪು. ೪೯)

ಅಲ್ಪ ಪ್ರಮಾಣದಲ್ಲಿ ರಕ್ತಮಾಂಸಗಳಿಂದ ಕೂಡಿದ ಎಲುಬಿನ ತಡಿಕೆಯಾದರೂ ಸಹ ಇಡೀ ರಾಷ್ಟ್ರಕ್ಕೆ ಆಶ್ರಯವನ್ನು ನೀಡುವ ಧೀಮಂತ ವ್ಯಕ್ತಿ ಈ ಗಾಂಧಿ. ಈತನು ಪಂಚೆಯುಟ್ಟಿದ ರೈತನಂತೆ. ಜಾಗತೀಕರಣ ಸಂದರ್ಭದ ಬುದ್ಧ. ಕೃಪಸಾಗರವೆಂದೆಲ್ಲಾ ಗಾಂಧೀಯ ವ್ಯಕ್ತಿತ್ವವನ್ನು ಕೊಂಡಾಡಿದ್ದಾರೆ. ರಾಮಚಂದ್ರ ಶರ್ಮರೂ ಗಾಂಧೀಜಿಯ ವ್ಯಕ್ತಿತ್ವವನ್ನು "ಇಂದಿಲ್ಲವೇ ಆ ದೇವಮಾನವ" ಎಂಬ ಕವಿತೆಯಲ್ಲಿ ಈ ರೀತಿ ಚಿತ್ರಿಸಿದ್ದಾರೆ.

"ಜ್ಞಾನ ಭಾನುವು ಮುಳುಗಿ ಕಾವಳವು ಸುತ್ತಿರಲು,
ದ್ವೇಷ ಸಾರಥಿಯಾಗಿ ಜಗರಥವ ಹತ್ತಿರಲು
ತುಂಬು ಬೆಳಕನು ತಂದೆ, ದಾರಿ ತೋರಿದೆ, ತಂದೆ!
ಜಗದ ಬಾಳೊಳು ಬೆರೆತು, ನಾನು ಎಂಬುವ ಕೊಂದೆ.
ನೊಂದವರ ಬಂಧು, ನೀ ಕಣ್ಣೀರ ಮಳೆಗರದೆ,
ಲೋಕದಪರಾಧಗಳ ನೀ ಮನ್ನಿಸಿದೆ, ಮರೆತೆ,
ಸುಗ್ಗಿ ಚಂದಿರನಂತೆ, ಜನಕ್ಕೆ ಹಿಗ್ಗನು ತಂದೆ
ದೀನ ದಲಿತರ ಸೇವೆಯೊಳು ಸ್ವರ್ಗಸುಖವೆಂದೆ,
ಜಗಹಿತಕೆ ದುಡಿದೆ. ಜನ ನಿನಗಿತ್ತ ಫಲವೇನು?"

(ಚಂದ್ರಶೇಖರ ಪಾಟೀಲ ಮತ್ತು ಇತರರು (ಸಂ); ೧೯೯೮; ಪು. ೭೫)

ಇಡೀ ಬಾನು ದ್ವೇಷ ಅಸೂಯೆಗಳಿಂದ ಕತ್ತಲಲ್ಲಿರುವಾಗ ಬೆಳಕನ್ನು ತಂದು ದಾರಿ ತೋರಿದ ತಂದೆ ಗಾಂಧೀಜಿ. ಜನಸಾಮಾನ್ಯರೆಲ್ಲರನ್ನು ಒಗ್ಗೂಡಿಸಿ ಅವರೊಂದಿಗೆ ಬೆರೆತು 'ನಾನು' ಎಂಬ ಅಹಂಕಾರವನ್ನು ತೊಳೆದು ಹಾಕಲು ಪ್ರಯತ್ನಿಸಿ ನೊಂದವರ ಬಾಳಿಗೆ ಸ್ಪಂದಿಸಿದರು. ದೀನ-ದಲಿತರ ಸೇವೆಯಲ್ಲಿ ಸ್ವರ್ಗ ಸುಖವನ್ನು ಕಾಣುತ್ತಾ ಜಗಹಿತಕ್ಕೆ ದುಡಿದ ನಿನಗೆ ಜನ ಕೊಟ್ಟ ಫಲವೇನು? ಎಂದು ಪ್ರಶ್ನಿಸುವ ಮೂಲಕ ಗಾಂಧಿಯ ಅನನ್ಯ ವ್ಯಕ್ತಿತ್ವವನ್ನು ಕೊಂಡಾಡಿದ್ದಾರೆ.

ಕವಿ ಸುಜನಾ ಅವರು 'ಗಾಂಧಿ' ಎಂಬ ಕವನದಲ್ಲಿ ಗಾಂಧಿಯ ವ್ಯಕ್ತಿತ್ವವನ್ನು ತಮ್ಮ ಸಮಕಾಲೀನತೆಗೆ ಬಿಂಬಿಸಿಕೊಂಡು ಅದ್ಭುತವಾಗಿ ಚಿತ್ರಿಸಿದ್ದಾರೆ.

"ಇವನೊಬ್ಬ ಎದ್ದ;
ಮುಗಿಲುದ್ದ ನಿಮಿರಿ ಬೆಳೆದ

ನೆಲದ ನೆಲಗಟ್ಟನೊದೆಲ್ಲೊ ಮುಗಿಲ ಮರೆಬಿದ್ದ
ಆಕಾಶ ಕ್ಷಿಪಣಿಯಂತಲ್ಲ;
ಪಾತಾಳದಿಂದೆದ್ದು ನೆಲದೊಳಕ್ಕೆ ಕಾಲೂರಿ
ಬಾನ ಮುಡಿಯೊಳು ಧರಿಸಿ ನಿಂತಂತೆ ಮಂದರಾದ್ರಿ"

(ಚಂದ್ರಶೇಖರ ಪಾಟೀಲ ಮತ್ತು ಇತರರು (ಸಂ); ೧೯೯೮; ಪು. ೭೮)

ಶಾರೀರಿಕವಾಗಿ ನೋಡಿದರೆ ಗಾಂಧಿ ಬಲು ಸಣಕಲು ದೇಹ ಹೊಂದಿದವರು. ಸ್ವಲ್ಪ ಪ್ರಮಾಣದಲ್ಲಿ ರಕ್ತಮಾಂಸಗಳಿಂದ ಕೂಡಿದ ಎಲುಬಿನ ಹಂದರವಿದ್ದಂತೆ. ಆದರೆ ತನ್ನ ಉದಾತ್ತ ಚಿಂತನೆ, ಆದರ್ಶ ಮೌಲ್ಯಗಳಿಂದ ಜಗತ್ತಿನಲ್ಲಿರುವ ಎಲ್ಲಾ ದಾರ್ಶನಿಕರಿಗಿಂತಲೂ ಒಂದು ಕೈ ಮಿಗಿಲು ಎಂದು ಹೇಳಬಹುದು. ಹಾಗಾಗಿ ಮುಗಿಲು ಎಷ್ಟು ಎತ್ತರವಾಗಿದೆಯೋ ಅಷ್ಟೇ ಗಾಂಧಿಯ ವ್ಯಕ್ತಿತ್ವ ದೊಡ್ಡದು ಎಂದು ಮುಗಿಲಿಗೆ ಹೋಲಿಸಲಾಗಿದೆ.

ಕವಿ ಸುಜನಾ ಅವರಂತೆಯೆ ಸಾ.ಶಿ. ಮರುಳಯ್ಯ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಗಾಂಧಿ' ಎಂಬ ಕವನದಲ್ಲಿ ಗಾಂಧೀಜಿಯವರ ವ್ಯಕ್ತಿತ್ವವನ್ನು ಮುಗಿಲಿಗೆ ಹೋಲಿಸಿ ಹೀಗೆ ಚಿತ್ರಿಸಿದ್ದಾರೆ -

"ಇವನೊಬ್ಬ ಕಾರಣಿಕ,
ಮೇಲಿಂದ ಇಳಿದು ಬಂದವನಲ್ಲ
ಇಲ್ಲಿಂದಲೇ ಬೆಳೆದು ಮೇಲೇರಿದಾತ
ಬೆಳೆದ,
ಇವನು ಬೆಳೆದೇ ಬೆಳೆದ ಬಾನೆತ್ತರ!
ಕಾಲು ಕಡಲಾಳದಲ್ಲಿ,
ತೋಳು ದಿಕ್ಕು ದಿಕ್ಕುಗಳಲ್ಲಿ
ಆದನಿವ ಸೂಕ್ತ ಪುರುಷ!"

(ಚಂದ್ರಶೇಖರ ಪಾಟೀಲ ಮತ್ತು ಇತರರು (ಸಂ); ೧೯೯೮; ಪು. ೯೦)

ಗಾಂಧೀಜಿಯ ವ್ಯಕ್ತಿತ್ವ ಬಾನೆತ್ತರಕ್ಕೆ ಅಷ್ಟೇ ಅಲ್ಲ, ಸಮುದ್ರದ ಆಳದಷ್ಟು, ಭೂ ಮಂಡಲದ ನಾಲ್ಕು ದಿಕ್ಕುಗಳಿಗೂ ಅವರ ವಿಚಾರ, ಮೌಲ್ಯಗಳು ಹರಡಿಕೊಂಡಿವೆ ಎಂದು ಚಿತ್ರಿಸಲಾಗಿದೆ.

ಅಹಿಂಸೆ, ಸತ್ಯಗಳನ್ನು ಪ್ರತಿಪಾದಿಸಿಕೊಂಡು ಬಂದ ಗಾಂಧೀಜಿಯವರನ್ನು "'ಜೀವಿ' ಕುಲಕರ್ಣಿ"ಯವರು ಬುದ್ಧ, ಯೇಸುವಿನಂತಹ ಮಹಾನ್ ದಾರ್ಶನಿಕರಿಗೆ ಹೋಲಿಸಿ ತಮ್ಮ 'ನಾಲ್ಕು ಧ್ವನಿ' ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಮಾನವನ ಇತಿಹಾಸ ತಿಳಿಸುವುದು: ಹಿಂದಕ್ಕೆ
ಬುದ್ಧ ಮಾಡಿದ ಕಾರ್ಯ; ಕ್ರಿಸ್ತ ಮಾಡಿದ ಕಾರ್ಯ
ಮತ್ತೆ ನಡೆಸಿದನೊಬ್ಬ ಭರತ ಭೂಮಿಯಲಿ

ಮೃಣ್ಮಯದ ದೇಹದಲಿ, ಚಿನ್ಮಯದ ದೀಪವನು
ಹೊತ್ತಿಸಿದ ಅವತಾರಿ, ಅವನೆ ಗಾಂಧೀಜಿ"

ಎಂದು ಹೇಳುತ್ತಾ ಮುಂದುವರಿದು -

"ಇವನೊಬ್ಬ ಮಾಂತ್ರಿಕನು ಯುಗಕೊಮ್ಮೆ ಬರುವವನು
ಹಿಂಸೆಯನು ಗೆಲಲಿಕ್ಕೆ ಅಹಿಂಸೆಯದೆ ಅಸ್ತ್ರ!
ದ್ವೇಷವನು ತೊಲಗಿಸಲು ಪ್ರೀತಿಯದೆ ಶಸ್ತ್ರ!
ದರ್ಪವನು ತೊಲಗಿಸಲು ಸತ್ಯಾದಾಗ್ರಹ ಮಂತ್ರ!
ಲೋಕೋತ್ತರ ಚರಿತ! ಪುಣ್ಯ-ಶ್ಲೋಕ
ಇವನ ಚಿತ್ತದ ಆಳ ಬಲ್ಲವರು ಯಾರು?"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೦೧)

ದ್ವೇಷ, ಅಸೂಯೆ, ಹಿಂಸೆ ಮುಂತಾದ ಮತ್ಸರಗಳನ್ನು ಗೆಲ್ಲಲು ಗಾಂಧೀಜಿ ಕಂಡುಕೊಂಡ ಮಾರ್ಗಗಳನ್ನು ಮತ್ತಾರು ಕಂಡುಕೊಂಡಿಲ್ಲ ಮತ್ತು ಗಾಂಧೀಜಿಯ ಆ ಮಾರ್ಗಗಳನ್ನು ಮೀರಲು ಯಾರಿಂದಲೂ ಇದುವರೆಗೆ ಸಾಧ್ಯವಾಗಿಲ್ಲವೆಂದು ವ್ಯಕ್ತಪಡಿಸಲಾಗಿದೆ. ಈ ಉಪಮೆಗಳು ಸಂಸ್ಕೃತ ಕಾವ್ಯಾಲಂಕಾರಗಳಂತಿರದೆ ಉಪಮೆಗಳು ತಾತ್ವಿಕ ಆನ್ವಯಿಕ ಸಂಕೇತಗಳಾಗಿವೆ. ಬುದ್ಧ ಕ್ರಿಸ್ತರುಗಳು ಸಂದೇಶವೊಂದರ ಪ್ರತಿಪಾದನೆಗಾಗಿ ಗೈದ ತ್ಯಾಗ ಇಲ್ಲಿ ಏಕಕಾಲಕ್ಕೆ ತಾತ್ವಿಕ/ಆನ್ವಯಿಕವಾಗಿ ವ್ಯಕ್ತವಾಗಿವೆ.

ಅಬ್ದುಲ್ ಮಜೀದ್‌ಖಾನ್ ಅವರು 'ಬಾಪೂ' ಎಂಬ ಕವಿತೆಯಲ್ಲಿ ಗಾಂಧೀಜಿಯವರ ಹೆಸರನ್ನು ಬಳಸಿಕೊಂಡು ಅವರ ವ್ಯಕ್ತಿತ್ವ ಮತ್ತು ಅವರ ಮೌಲ್ಯಗಳನ್ನು ಅದೆಷ್ಟು ಅಪವ್ಯಯ ಅಥವಾ ಅಪಮೌಲ್ಯೀಕರಿಸುತ್ತಿದ್ದಾರೆ ಎಂಬುದನ್ನು ಹೀಗೆ ಚಿತ್ರಿಸಿದ್ದಾರೆ.

"ನಿನ್ನ ಸ್ಮೃತಿಗಾಗಿ ನಾವು ಏನೇನು ಮಾಡಿಲ್ಲ?
ನಿನ್ನ ನುಡಿಮುತ್ತುಗಳ, ಸಂದೇಶಗಳ
ತಾಯತಗಳ ಮಾಡಿ, ಹಾರಗಳ ಕಟ್ಟಿ ಮಾರುತ್ತೇವೆ.
ನಿನ್ನ ಸ್ಮಾರಕಕೆಂದು, ಸಂಚಿಕೆಗೆಂದು ಚಂದಾ ಎತ್ತಿ, ಮನೆಕಟ್ಟಿ
ನಿನ್ನದೇ ಹೆಸರಿಟ್ಟು, ಪಾಪಗಳಿಗೆ ಪಾಲಿಷ್ ಮಾಡುತ್ತೇವೆ,
ನಿನ್ನ ಚಿತ್ರಗಳು ಫಲಕಗಳ ಸುತ್ತ ತೂಗುತ್ತಿರುವ
ಗುಪ್ತ ನೆಲಮಾಳಿಗೆಗಳ ಮಂದ ಬೆಳಕಲ್ಲಿ
ಖೊಟ್ಟಿ ನೋಟುಗಳ ವ್ಯವಹಾರ ನಡೆಸುತ್ತೇವೆ.
ದವಸ-ಧಾನ್ಯಗಳಲ್ಲಿ ಕಲ್ಲುಮಣ್ಣು; ಬೆಣ್ಣೆಯಲ್ಲಿ ಬಾಳೆಹಣ್ಣು, ಕೊಟ್ಟು;
ಸೀಮೆಎಣ್ಣೆಯಲ್ಲಿ ನೀರು, ಸಕ್ಕರೆಯಲ್ಲಿ ಲೋಹದ ಹಿಟ್ಟು;
ಬೆರಕೆ ಮಾಲುಗಳ ಮಾರಿ, ರಾಷ್ಟ್ರದಾರೋಗ್ಯ ಕಾಪಾಡಿ,

ಮೋಡಗಳ ಜೊತೆ ಮಾತಾಡುವ ಮಹಲುಗಳ ಕಟ್ಟಿ
ಗಗನಕ್ಕೇರಿಸುತ್ತೇವೆ ನಾಗರೀಕತೆಯ ಪತಾಕೆ"
(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೨೫-೧೨೬)

ಹೀಗೆ ಸಾಮಾನ್ಯನಿಗೆ ದೊರಕುವ ಸೌಲಭ್ಯಗಳಲ್ಲೂ ಸಹ ಗಾಂಧಿಯ ಹೆಸರಿನಲ್ಲಿ ಜನರನ್ನು ವಂಚಿಸುತ್ತಿದ್ದಾರೆ. ಗಾಂಧೀಜಿ ಬಡವರಿಗೋಸ್ಕರ - ದಲಿತರಿಗೋಸ್ಕರ ಜೀವನವನ್ನೇ ಮುಡಿಪಾಗಿಟ್ಟವರು, ಅದಕ್ಕಾಗಿ ದಲಿತರನ್ನು ಗಾಂಧೀಜಿ 'ದರಿದ್ರನಾರಾಯಣ'ನೆಂದು ಕರೆಯುತ್ತಿದ್ದರು. ಅಂಥವರ ಹೆಸರಿನಲ್ಲಿ ಶ್ರೀಸಾಮಾನ್ಯನಿಗೆ ಮೋಸ, ವಂಚನೆ ಪ್ರಸ್ತುತ ಸಮಾಜ ಮಾಡುತ್ತಿದೆ. ಹಾಗಾದರೆ ಪ್ರಸ್ತುತದಲ್ಲಿ ಗಾಂಧೀಜಿ ಮೌಲ್ಯಗಳಿಗೆ ಬೆಲೆ ಎಲ್ಲಿದೇ? ಎಂದು ಪ್ರಶ್ನಿಸಲಾಗಿದೆ. 'ಗಾಂಧೀಜಿ' ಎಂಬ ನಾಣ್ಯ ಅಥವಾ ನಾಣ್ಯದ ಮೇಲಿನ ಗಾಂಧಿ ಅವರದೇ ಸ್ವಾರ್ಥ ಪ್ರಪಂಚಕ್ಕೆ ಬಳಕೆಯಾಗುತ್ತಿರುವವರ ಬಗ್ಗೆ ವಿಷಾದ ಮಡುಗಟ್ಟಿದೆ. ಸ್ವಾತಂತ್ರ್ಯ ಕಾಲದ ಆದರ್ಶ ಕಿಚ್ಚು ಮಾಯವಾಗಿರುವುದನ್ನು ಈ ಕವನ ಪ್ರತಿನಿಧಿಸುತ್ತದೆ.

ಸುಬ್ರಾಯ ಚೊಕ್ಕಾಡಿ ಅವರ 'ಬಾಪೂ-ಜತೆ ಮಾತುಕತೆ' ಎಂಬ ಕವಿತೆ ಬಹು ವಿಶಿಷ್ಟವಾದುದು. ಕವಿ ನೇರವಾಗಿ ಗಾಂಧೀಜಿಯವರೊಂದಿಗೆ ಮಾತಿನ ಸಂಭಾಷಣೆಯಲ್ಲಿ ತೊಡಗಿದ್ದಾನೆ ಎಂಬ ರೀತಿಯಲ್ಲಿ ಈ ಕವಿತೆ ವ್ಯಕ್ತಗೊಂಡಿದೆ.

"ನಿನ್ನ ಕಾನೂನು ಭಂಗ ಚಳುವಳಿಯನ್ನು ಮತ್ತೆ
ನಮ್ಮ ಮೇಲೆ ಪ್ರಯೋಗಿಸಬೇಕಾಗಿ ಬಂದಿದೆ ಬಾಪೂ
ನಿನ್ನ ಬ್ರಹ್ಮಚರ್ಯವನ್ನು ಯಶಸ್ವಿಗೊಳಿಸುವುದಕ್ಕಾಗಿಯೇ ಇಲ್ಲಿ
ಕುಟುಂಬ ಯೋಜನೆ ಜಾರಿಯಾಗಿದೆ ಬಾಪೂ
ನಿನ್ನ ಖಾದಿಗೆ ನಿನ್ನ ಅರೆ ಉಡುಪಿಗೆ
ಹೊಸ ರೂಪು ಹೊಸ ಹೊಳಪು ಬರುತ್ತಿದೆ ಬಾಪೂ
ಇಲ್ಲಿ ಮಾಡುತ್ತಲೇ ಇದ್ದಾರೆ
ಇಲ್ಲಿ ಮಡಿಯುತ್ತಲೇ ಇದ್ದಾರೆ"
(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೩೧)

ಕವಿ ಗಾಂಧೀಜಿಯವರ ಮೌಲ್ಯಗಳು ಈಗ ಪ್ರಸ್ತುತವೋ, ಅನಿವಾರ್ಯವೋ ಅಥವಾ ದುಸ್ತರವೋ ಎಂಬ ಆತಂಕವನ್ನು ಸೂಚಿಸಿದ್ದಾರೆ. ಕೊನೆಗೆ ಬಾಪೂರವರ ಪ್ರಭಾವಗಳೆಲ್ಲ ಇಲ್ಲಿ ಮಣ್ಣಾಗುತ್ತಿವೆ ಎಂದು ತಮ್ಮ ತಳಮಳವನ್ನು ವ್ಯಕ್ತಪಡಿಸಿದ್ದಾರೆ.

ಬಿ.ಆರ್. ಲಕ್ಷ್ಮಣರಾವ್ ಅವರ ಅಭಿವ್ಯಕ್ತಿ ಕ್ರಮ ಒಂದೇ ರೀತಿಯಲ್ಲಿ ವಿಶಿಷ್ಟವೆನ್ನಬಹುದು. ಇವರು ತಮ್ಮ 'ನನ್ನ ಗಾಂಧಿ' ಎಂಬ ಕವನದಲ್ಲಿ ಗಾಂಧೀಜಿ ತನಗೆ ಅಥವಾ ತನ್ನ ಕುಟುಂಬದ ಸದಸ್ಯರಿಗೆ ಚಿರಪರಿಚಿತವೆನೋ ಎಂಬ ರೀತಿಯಲ್ಲಿ ಚಿತ್ರಿಸಿದ್ದಾರೆ ಮತ್ತು ಗಾಂಧೀಜಿಯೊಂದಿಗೆ ನೇರ ಸಂಭಾಷಣೆಯ ಶೈಲಿಯಲ್ಲಿ ಗಾಂಧೀಜಿಯವರ ನೋವನ್ನು ಅಭಿವ್ಯಕ್ತಿಸಿದ್ದಾರೆ. ಕವಿ ಕವಿತೆಯ ಮೂಲಕ ಗಾಂಧೀಜಿಯವರನ್ನು ಮಾತನಾಡಿಸುವುದನ್ನು ಈ ರೀತಿ ನೋಡಬಹುದು.

"ಮಲಗಿದ್ದೆ ಜ್ವರದಿಂದ ನಿತ್ರಾಣನಾಗಿ,
ಹಾಸಿಗೆಯಲ್ಲಿ ಕಣ್ಣು ಮುಚ್ಚಿ;
ಯಾವುದೋ ತಂಪು ಕೈ ಹಣೆ ನೀವಿದಂತಾಗಿ,
ಕಣ್ಣು ಬಿಟ್ಟೆ ಗಕ್ಕನೆ ಬೆಚ್ಚಿ,
ನೋಡಿದರೆ, ಅರರೇ! ಸಾಕ್ಷಾತ್ ಗಾಂಧೀಜಿ!
ಏಳಲೆತ್ನಿಸಿದೆ ಸಂಭ್ರಮಿಸಿ
ಭುಜ ಹಿಡಿದು ನನ್ನ ತಡೆದರು ಗಾಂಧೀಜಿ
ಮತ್ತೆ ಮಲಗಿಸಿದರು ರಮಿಸಿ
ಕೇಳಿದರು; "ಎಲ್ಲಿ ಯಾರೂ ಕಾಣ್ತಾ ಇಲ್ಲವಲ್ಲ?"
ಅಂದೆ: ನೋಡ್ತಾ ಇರಬಹುದು ಟಿ.ವಿ."
"ಹಾಗೋ?" ಎಂದು ನಕ್ಕು ಅಡಿಗೆ ಮನೆಗೆ ಹೋದರು
ಮಾಡಿ ತಂದರು ಸ್ವತಃ ಕಾಫಿ"

ಹೀಗೆ ಕವಿ ಮತ್ತು ಗಾಂಧೀಜಿಯ ಮಧ್ಯೆ ಕುಶಲೋಪರಿ ಮಾತುಗಳು ನಡೆಯುತ್ತವೆ. ಮುಂದೆ ಕವಿಯ ತಂದೆಯವರನ್ನು ಗಾಂಧೀಜಿ ಕೇಳಿ ಅವರನ್ನುದ್ದೇಶಿಸಿ ಗಾಂಧೀಜಿ ಹೀಗೆ ಮಾತು ಮುಂದುವರೆಸುತ್ತಾ -

"ಅವರ ಚಿಕ್ಕಂದಿನಲ್ಲಿ ನಾನವರನ್ನು ಕಂಡದ್ದು,
ತುಂಬಾ ಕಟ್ಟುನಿಟ್ಟು ಮನುಷ್ಯ;
ಈಗಲೂ ಹಾಗೇ ನನ್ನ ಬಯ್ತಾ ಇರ್ತಾರಾ?
'ಗಾಂಧಿಯಿಂದಲೇ ಹಾಳಾದದ್ದು ಇಂಡಿಯಾ'
ಒಂದರ್ಥದಲ್ಲಿ ಅವರಂದದ್ದೇ ನಿಜವಾಯ್ತು,
ಅದೇ ಇಂದಿಗೂ ನನ್ನ ಕೊರಗು
ನಾನು ಬಯಸಿದ್ದೊಂದು, ಆದದ್ದೇ ಮತ್ತೊಂದು;
ಪ್ರತಿಯೊಂದು ತಿರುಗು ಮುರುಗು"
(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೪೮-೧೪೯)

ಸ್ವಾತಂತ್ರ ಭಾರತದ ಸ್ಥಿತಿಗತಿಯನ್ನು ಕವಿ ಗಾಂಧೀಜಿಯವರ ಬಾಯಿಂದಲೇ ಮಾತನಾಡಿಸುವುದರ ಜೊತೆಗೆ ಗಾಂಧೀಜಿಯನ್ನು ನೇರವಾಗಿ ಇಲ್ಲಿ ವ್ಯಕ್ತಿಯಾಗಿ ಚಿತ್ರಿಸಲಾಗಿದೆ.

ಕಣವಿಯವರಂತೆ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಗಾಂಧೀಜಿ ಒಬ್ಬ ಸಂಕೀರ್ಣ ವ್ಯಕ್ತಿಯಾಗಿ ತಮ್ಮ 'ಗಾಂಧೀಜಿ' ಎಂಬ ಕವಿತೆಯಲ್ಲಿ ಪ್ರತಿನಿಧಿಸಿದ್ದಾರೆ. ಅವರು ಏರಿದ ಎತ್ತರಕ್ಕೆ ನಮ್ಮಿಂದ ಏರಲು ಸಾಧ್ಯವಿಲ್ಲವೆಂದು ಹೀಗೆ ಚಿತ್ರಿಸಿದ್ದಾರೆ.

"ನಾವು
ಏರಲಾಗದ ಎತ್ತರ
ಅಳೆಯಲಾಗದ ಸಂಖ್ಯಾಗೋಪುರ

ಅರಿಯಲಾಗದ ಬದುಕಿನರ್ಥ
ಇಳಿಯಲಾಗದ ಆಳ
ಏರಿ ಇಳಿದು ನವಿರಾಗಿ ಮೇಲೇರಿ ಕರಗಿದಿ
ಅಗ್ನಿಯಪ್ಪಿದ ಕರ್ಪೂರ ಗಿರಿ ಸದಾಕಾಲ
ನಮ್ಮನ್ನು ಸಣ್ಣ ಚಿಕ್ಕ ಅಲ್ಪ ಕುಬ್ಜರನ್ನಾಗಿಸಿದಿ
ಸ್ತಬ್ಧರನ್ನಾಗಿಸಿದಿ."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೩೫)

ಗಾಂಧೀಜಿಯ ಚಿಂತನೆಗಳು, ಆದರ್ಶಗಳು ಉನ್ನತವಾದವುಗಳು. ಅವರ ಬದುಕಿನರ್ಥದ ಆಳ ಅರಿವು ತುಂಬಾ ವಿಶಾಲವಾದದ್ದು. ಅವರನ್ನು ತಲುಪಲು ನಮ್ಮಿಂದ ಸಾಧ್ಯವಿಲ್ಲ. ಎಂಥವರನ್ನು ಅವರ ವ್ಯಕ್ತಿತ್ವ ಸ್ತಬ್ಧರನ್ನಾಗಿಸುತ್ತದೆ. ಹಾಗಾಗಿ ಅವರು ಎಲ್ಲರಿಗೂ ಸಂಕೀರ್ಣ ವ್ಯಕ್ತಿಯಾಗಿ ಕಂಡು ಬರುತ್ತಾರೆ ಎಂಬುದಾಗಿ ಅಭಿಪ್ರಾಯಿಸಿದ್ದಾರೆ.

ಪಾ.ವೆಂ. ಆಚಾರ್ಯ ಅವರೂ ಸಹ ಗಾಂಧೀಜಿಯನ್ನು ದೇವರಾಗಿ ತಮ್ಮ 'ಗಾಂಧಿಗೆ' ಕವಿತೆಯಲ್ಲಿ ಕಂಡರಿಸಿದ್ದಾರೆ. ಆ ಕವಿತೆಯ ಸಾಲುಗಳು ಹೀಗಿವೆ.

"ಎಲ್ಲಾರು ನಿನ್ನನ್ನ ದೇವರು ಮಾಡಬೇಕೆಂ-
ದಿದ್ದಾಗ್ಗೆ ನೀನೊಬ್ಬ ಹಟಮಾರಿಯ ಹಾಗೆ
ಮಾನುಷರ ಮಧ್ಯೇ ಮನುಷ್ಯನಾಗಿರುವ
ಅಮಾನುಷೀ ಒಂಟಿದಾರಿಯಲ್ಲಿ ನಡೆದೆ.

ನಾವು ಮಾನವರು ಮಲಗಿ ರೊಜ್ಜಿನಲ್ಲೇ
ಕನವರಿಸುತ್ತೇವೆ ಮಾನಸ ಸರಸ್ಸನ್ನು
ಉಡಿಯಲ್ಲಿಟ್ಟುಕೊಂಡು ಹಳೇ ದೈತ್ಯರನ್ನು
ಹುಡುಕುತ್ತೇವೆ ಹೊಸ ಹೊಸ ದೇವರನ್ನು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೮೪)

ಗಾಂಧೀಜಿ ಪ್ರಚಾರವನ್ನು ಬಯಸದೆ ಎಲೆಮರೆಕಾಯಿಯಂತೆ ಇದ್ದುಕೊಂಡು ಕಠಿಣವಾದ ಆದರ್ಶ ಜೀವನ ನಡೆಸಿದರು. ಗಾಂಧಿ ರಾಮನಲ್ಲಿ ದೈವತ್ವವನ್ನು ಕಂಡರೆ ಜನತೆ ಗಾಂಧೀಜಿಯಲ್ಲಿ ದೈವತ್ವವನ್ನು ಕಾಣಲು ಹೊರಟರು. ಹಾಗಾಗಿ ಗಾಂಧಿ ಕಣ್ಣಿಗೆ ಕಾಣುವ, ನಡೆದಾಡುವ ದೇವರಂತೆ ಪ್ರತಿನಿಧಿಸಿದ್ದಾರೆ.

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ಗಾಂಧೀಜಿಯವರು ವಿದೇಶಿ ಗಾಳಿಯಲ್ಲಿ ಬೆಳೆದು ಬಂದರು; ದೇಶದ ಮಣ್ಣಿನ ಸೊಗಡನ್ನು ಮರೆಯದ ಅಪರೂಪದ ರತ್ನವೆಂದು 'ಅಪರೂಪದವನು' ಎಂಬ ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಗಾಂಧಿ, ನೀನು
ಹತ್ತು ಹುತ್ತಗಳಲ್ಲಿ ಕೈಯಿಟ್ಟು ಹುಲಿಬಾಯ

ಮುತ್ತಿಟ್ಟು ಸಾಗಿದವನು,
ನಾವೆಲ್ಲ ಗೇಟಾಚೆ ಎಸೆದ ನಯನೀತಿಗಳ
ಮೈಯಲ್ಲಿ ನೆಟ್ಟು ಮರ ಬೆಳೆದು ಫಲಭಾರಕ್ಕೆ
ತಲೆಬಾಗಿದವನು;
ಸತ್ಯಶುಭಗಳ ಕಲ್ಪನೆ ಹಂಸತಲ್ಪದಲಿ
ಹೊರಳಿಯೂ ಮಣ್ಣನ್ನು ಮರೆಯದವನು;
ಗೊಬ್ಬರವಾಗಿ ಬಿದ್ದು
ಮಲ್ಲಿಗೆಯಾಗಿ ಎದ್ದು
ಹೆತ್ತ ಬಳ್ಳಿಗೆ ರತ್ನಕಿರೀಟವಾದವನು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೪೫)

ಗಾಂಧೀಜಿಯವರು ವಿದೇಶಿ ಶಿಕ್ಷಣಕ್ಕೆ ಹೊರಟಾಗ ಗಾಂಧೀಜಿ ತಾಯಿ ವಿದೇಶದ ಆಮಿಷಗಳಿಗೆ ಒಳಗಾಗದೆ ದೇಶದ ಮಣ್ಣಿನ ಋಣವನ್ನು ಮರೆಯದಿರು ಎಂದು ಹೇಳಿದ ತಾಯಿಯ ಮಾತನ್ನು ಗೌರವಿಸಿದ ರತ್ನಕಿರೀಟವಾದವರು ಎಂದು ಪ್ರತಿನಿಧಿಸಿದ್ದಾರೆ.

ಶ್ರೀಪಾದ ಶೆಟ್ಟಿ ಅವರು ಗಾಂಧೀಜಿಯವರ ವ್ಯಕ್ತಿತ್ವ ಅಥವಾ ಅವರ ತತ್ವಗಳು ಹೇಗೆ ಕಳಚಿಕೊಂಡು ಗೌಣವಾಗುತ್ತಿವೆ ಎಂಬುದನ್ನು "ಅಜ್ಜಾ ಕಂಡೆಯಾ...!" ಎಂಬ ಕವಿತೆಯಲ್ಲಿ ಹೀಗೆ ವ್ಯಕ್ತಗೊಳಿಸಿದ್ದಾರೆ.

"ಅಜ್ಜಾ.....
ನಿನ್ನ ಕನ್ನಡಿ ಕಟ್ಟಿನ ಪಟದಡಿಯಲ್ಲಿ
ಗೋಡ್ಸೆಗಳು ಕುಳಿತಿದ್ದ ಕಂಡೆಯಾ
ನೀ ಸತ್ತು ಚಿರನಿದ್ದೆಯಲ್ಲೊರಗಿದ
ನಿನ್ನ ಸಮಾಧಿಯಲ್ಲಿ, ನಮ್ಮ ಜನ - ನಾಯಕರು
ಪ್ರಮಾಣ ವಚನ ಸ್ವೀಕರಿಸಿ
ನಿನ್ನನ್ನು ಮತ್ತೆ ಮತ್ತೆ ಕೊಲ್ಲುವುದ ಕಂಡೆಯಾ!
ಪ್ರಚಾರ ಪ್ರತಿಷ್ಠೆ ಬಯಸದ
ಸತ್ಯ-ಶಾಂತಿ-ಅಹಿಂಸೆಯ
ನಿನ್ನ ಮೂರ್ತಿಯ ಅನಾವರಣದಲ್ಲಿ;
ಈ ಹಸಿ ಪಟಿಂಗರ ಮೋಸ ವಂಚನೆ
ದಗಲ್ಬಾಜಿತನ ಅನಾವರಣಗೊಂಡಿದ್ದು
ಪತ್ರಿಕೆಯಲ್ಲಿ ದಪ್ಪಾಕ್ಷರಗಳಲ್ಲಿ
ಅಚ್ಚುಗೊಂಡಿದ್ದನ್ನು ಮುಖಪುಟದಲ್ಲಿ
ಕಿಸಬಾಯಿ ದಾಸರಂತೆ ಪೋಟೋಕ್ಕೂ
ಪೋಜು ಕೊಟ್ಟಿದ್ದನ್ನು ಕಂಡೆಯಾ...."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೭೩)

ನಾಥೂರಾಮ್ ಗೋಡ್ಸೆ ಗಾಂಧೀಜಿಯವರ ದೇಹವನ್ನು ಕೊಂದಿದ್ದಾನೆ. ಆದರೆ ಗಾಂಧೀಜಿಯವರ ಆದರ್ಶಗಳು, ತತ್ವಗಳನ್ನು ಇಂದಿನ ರಾಜಕೀಯ ನಾಯಕರ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇದರಿಂದ ಗಾಂಧೀಜಿಯವರ ಮೌಲ್ಯಗಳಿಗೆ ಧಕ್ಕೆ ಬರುವಂತೆ ಮಾಡುವುದಲ್ಲದೆ ಗಾಂಧೀಜಿಯನ್ನು ನಿಜವಾಗಿ ಕೊಂದವರು ಮತ್ತು ಕೊಲ್ಲುತ್ತಿರುವವರು - ಇಲ್ಲಿ ಎಲ್ಲೆಲ್ಲೂ ಜೀವಂತವಾಗಿದ್ದಾರೆ ಎಂದು ಪ್ರತಿನಿಧಿಸಿದ್ದಾರೆ.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅವರು ನವ್ಯಸಾಹಿತ್ಯದ ಮಹತ್ವದ ಕವಿಗಳಲ್ಲಿ ಒಬ್ಬರಾಗಿದ್ದಾರೆ. ಇವರು ಐತಿಹಾಸಿಕ, ಪೌರಾಣಿಕ ಮಹಾಪುರುಷರ ಬದುಕಿನ ಮೌಲ್ಯಗಳ ಹಿನ್ನೆಲೆಯಲ್ಲಿ ತಮ್ಮನ್ನು ತಾವು ಕಂಡುಕೊಳ್ಳುವ ಆತ್ಮಾವಲೋಕನದ ಪ್ರಕ್ರಿಯೆಯನ್ನು ಅವರ ಅನೇಕ ಕಾವ್ಯಗಳಲ್ಲಿ ನೋಡಬಹುದು. ಅಂತಹ ಕವಿತೆಗಳಲ್ಲಿ ವಿಶಿಷ್ಟವಾದದ್ದು ಅವರ 'ಐವತ್ತರ ನೆರಳು' ಎಂಬ ಕವನ ಸಂಕಲನದಲ್ಲಿರುವ 'ಈ ಮುದುಕ' ಎಂಬ ಕವಿತೆ. ಇದು ಗಾಂಧೀಜಿಯವರ ಬದುಕಿನ ಆದರ್ಶಗಳನ್ನು ನೆನಪಿಗೆ ತಂದುಕೊಡುವ ಕವಿತೆಯಾಗಿದೆ. ಕವಿತೆಯ ಸಾಲುಗಳು ಹೀಗಿವೆ.

"ಸುಡುಗಾಡಿಗೆ ಬಿದ್ದು
ಸತ್ಯ ಪರೀಕ್ಷೆ ಕೊಡಬೇಕಾದಲ್ಲಿ
ಮಣ್ಣಿನ ಮಗಳು ವೈದೇಹಿಯಾದರೂ
ನೆಲತಾನೇ ನುಂಗಿ ಉದ್ಧರಿಸಬೇಕಾದಲ್ಲಿ
ಸುಳ್ಳಾಡಿ ಧರ್ಮನೂ ಜೀವಗಳ್ಳನಾದಲ್ಲಿ
ಈ ಮುದುಕ ಹಾಗೆ ನಡೆದನಲ್ಲ!
ಈ ಮುದುಕಜ್ಜನ ಕಥೆ ಕೇಳಿದರೆ
ಈಗಲೂ ದಿಗಿಲಾಗುತ್ತದೆ.
ಚಿತ್ರ ನೋಡಿದರೆ ಬೆರಗಾಗುತ್ತದೆ.
ಮುಳ್ಳಿನ ಕಿರೀಟ ಶಿಲುಬೆ ಹೆಮ್ಲಾಕಿನ ಬಟ್ಟಲು
ಲಾಠಿ ಗುಂಡು ಫಿರಂಗಿ
ಹೆಜ್ಜೆ ಹೆಜ್ಜೆಗೆದುರಾಗುವ ದಾರಿಯಲ್ಲಿ
ವಿಹಾರಕ್ಕೆ ಹೊರಟಂತೆಯೇ ಹೊರಟ"

(ಸಿದ್ಧಲಿಂಗಯ್ಯ. ಜಿ.ಎಸ್.; ೧೯೮೧; ಪು. ೧೩೪)

ಪೌರಾಣಿಕ ಮಹಾಪುರುಷರಾದ ಹರಿಶ್ಚಂದ್ರ, ಧರ್ಮರಾಯ, ಸೀತೆಯರ ಸ್ಮರಣೆಯಿಂದ ಕವಿತೆ ಆರಂಭಗೊಳ್ಳುತ್ತದೆ. ಹರಿಶ್ಚಂದ್ರ ತನ್ನ ಸತ್ಯವನ್ನು ಲೋಕಕ್ಕೆ ಸಾಬೀತುಪಡಿಸಲು ಸ್ಮಶಾನವನ್ನು ಕಾಯಬೇಕಾಯಿತು. ಸೀತೆ ತನ್ನ ಪಾವಿತ್ರ್ಯತೆಯ ಅಗ್ನಿದಿವ್ಯಗಳಿಗೆ ಹತಾಶಳಾಗಿ ಭೂಮಿಯ ಒಡಲನ್ನು ಸೇರಬೇಕಾಯಿತು. ಧರ್ಮರಾಯ ತನ್ನ ಗೆಲುವಿಗಾಗಿ ಸುಳ್ಳಾಡಬೇಕಾಯಿತು. ಆದರೆ ಗಾಂಧೀಜಿಯವರು ಎಂತಹ ವಿಷಮ ಸಂದರ್ಭದಲ್ಲೂ ಪಾಲಿಸಿಕೊಂಡು ಬಂದ ಮೌಲ್ಯಗಳಿಗೆ ಧಕ್ಕೆ ತರಲಿಲ್ಲ. 'ಈ ಮುದುಕ ಹಾಗೇ ನಡೆದನಲ್ಲ!' ಎಂದು ಈ ಕವಿತೆಯಲ್ಲಿ ಉದ್ಗಾರ

ಮಾಡಲಾಗಿದೆ. ಹಾಗಾಗಿ ಈ ಕವಿತೆ ಗಾಂಧೀಜಿಯವರು ಬದುಕಿನ ಆದರ್ಶಗಳನ್ನು ನೆನಪು ಮಾಡಿಕೊಡುತ್ತದೆ. ಮೌಲ್ಯಗಳಿಂದ ದೂರ ಸರಿದು, ಸ್ವೇಚ್ಛಾಚಾರದ ಬದುಕು ಸಾಗಿಸುತ್ತಿರುವ ಈ ಹೊತ್ತಿನ ಸಂದರ್ಭದಲ್ಲಿ ಗಾಂಧೀಜಿಯವರು ಪಾಲಿಸಿದ ಆದರ್ಶಗಳು ಪ್ರಸ್ತುತವಾದವುಗಳು ಎಂಬುದನ್ನು ಪ್ರತಿನಿಧಿಸಲಾಗಿದೆ. ಇವರ ಮತ್ತೊಂದು ಕವಿತೆ 'ಅಕ್ಕ ಕೇಳವ್ವ' ಎಂಬುದು ಗಾಂಧೀಜಿಯವರ ಮೌಲ್ಯಗಳನ್ನು ಆರಾಧಿಸುವ ಕವಿತೆಯಾಗಿದೆ. ಸರಳ ವ್ಯಕ್ತಿತ್ವದ, ಮಗುವಿನಂಥ ಮನದ, ಬೊಚ್ಚ ಬಾಯಿಯ ಗಾಂಧೀಜಿಯವರ ರೂಪವನ್ನು ಚಿತ್ರಿಸುತ್ತದೆ.

"ಅರೆ ಬೆತ್ತಲೆ ಫಕೀರನ
ಛಲವಂತನ ಕಂಡೆ
ಬಡವ ಬಲ್ಲಿದ
ಹರಿಜನ ಹರಿಜನವೆಲ್ಲಾ ಏಕವಾಗಿ
ದೊಣ್ಣೆಯೂರಿ ನಡೆವ
ಈ ಕಿಂದರಿಜೋಗಿಯ ಹಿಂದೆ
ಲಾಠಿ ಗುಂಡು ಫಿರಂಗಿಗೆದೆಗೊಟ್ಟು ನಿಂತಿದ್ದಕಂಡೆ"

(ಸಿದ್ಧಲಿಂಗಯ್ಯ. ಜಿ.ಎಸ್.; ೧೯೭೭; ಪು. ೪೦)

ದೀನ, ದಲಿತರ, ದುರ್ಬಲರ ಸ್ವಸ್ಥ ಬದುಕಿಗಾಗಿ ಅವರು ಕೈಗೊಂಡ ಕಾರ್ಯಗಳನ್ನು ಹಾಗೂ ದೇಶದ ದುಷ್ಟ ಮನಸ್ಸುಗಳು ವಿಮೋಚನೆಗಾಗಿ ಜನಶಕ್ತಿಯಲ್ಲಿ ಮೂಡಿಸಿದ ಪ್ರಜ್ಞೆಯನ್ನು ಈ ಕವಿತೆ ಪ್ರತಿನಿಧಿಸುತ್ತದೆ.

ಪಂಚಾಕ್ಷರಿ ಹಿರೇಮಠ ಅವರ "ಯುಗ ಪುರುಷ ಗಾಂಧಿ" ಎಂಬ ಕವಿತೆ ಗಾಂಧೀಜಿ ದೇಶದ ಜನಗಳಲ್ಲಿ ತುಂಬಿದ ಚೈತನ್ಯ ಶಕ್ತಿಯನ್ನು ಮತ್ತು ಜೀವಿಗಳಿಗೆ ಧಾರೆಯೆರೆದ ಮೈತ್ರಿಯ ಮೌಲ್ಯಗಳನ್ನು ಪ್ರತಿನಿಧಿಸುವ ಕವಿತೆಯಾಗಿದೆ. ಈ ಕವಿತೆಯ ಸಾಲುಗಳು ಇಂತಿವೆ.

"ಬರೀ ಮಾತಿನ ಬುಡ ಬುಡುಕೆಯ ನಂಬಲಿಲ್ಲ ನೀನು
ಕಾಯಕಕೆ ಹೊಸರೂಪ ನೀಡಿ ಅದಕ್ಕೆ ನಿಷ್ಠನಾಗಿದ್ದೆ!
ಸಕಲ ಸಂಸಾರದ ನೋವ ಕಳೆಯಲೆಂದು ನೀನು
ನಿನ್ನನ್ನೇ ಬಳಲಿಸಿದೆ, ನೋಯಿಸಿದೆ, ಪರೀಕ್ಷೆಗೆ ಈಡು ಮಾಡಿದೆ."

(ಸಿದ್ಧಲಿಂಗಯ್ಯ. ಜಿ.ಎಸ್.(ಸಂ); ೧೯೭೭; ಪು. ೮೩)

ಗಾಂಧೀಜಿ ಈಗಿನ ರಾಜಕೀಯ ನಾಯಕರಂತೆ ಸುಳ್ಳು ಆಶ್ವಾಸನೆಗಳ ಬುರುಡೆ ಬಿಟ್ಟವರಲ್ಲ. ಬುಡುಬುಡುಕೆಯ ಮಾತುಗಳನ್ನು ನಂಬಿದವರಲ್ಲ. ಲೋಕದ ಜನಗಳ ನೋವು, ದುಃಖಗಳಲ್ಲಿ ಪಾಲುದಾರರಾದ ಗಾಂಧೀಜಿಯವರು ದುಃಖವನ್ನು ಕಳೆಯುವುದಕ್ಕಾಗಿ ತಾವೂ ಕೂಡ ಬಡವರ ನೋವನ್ನು ಅನುಭವಿಸಿದವರು. ತಮ್ಮ ಇಡೀ ಬದುಕನ್ನೇ ಅಗ್ನಿಪರೀಕ್ಷೆಗೆ ಒಡ್ಡಿಕೊಂಡು ಸ್ವಾವಲಂಬಿ ಜೀವನವನ್ನು ನಡೆಸಿ ಸಾರ್ಥಕಪಡಿಸಿಕೊಂಡವರು ಎಂದು ಪ್ರತಿನಿಧಿಸಲಾಗಿದೆ.

ಗಾಂಧೀಜಿ ದೇಶದ ಜನತೆಗೆ ಒಗ್ಗಟ್ಟಿನ, ಸಮಾನತೆಯ, ಸಂಯಮದ ಆದರ್ಶಗಳನ್ನು ತೋರಿಸಿಕೊಟ್ಟವರು. ಮಾನವನ ಎಲ್ಲಾ ಊನತೆಗಳನ್ನು ಕಳೆದ ಗಾಂಧೀಜಿಯವರ ಮೌಲ್ಯಗಳು ಅಮರ್ತ್ಯ ಶಕ್ತಿವುಳ್ಳವುಗಳಾಗಿದ್ದವು ಎಂದು ಜಿ. ವರದರಾಜರಾವ್ ಅವರು 'ಗಾಂಧೀಜಿಯ ಒಕ್ಕಲು' ಎಂಬ ಕವಿತೆಯಲ್ಲಿ ಹೀಗೆ ವಿವರಿಸಿದ್ದಾರೆ.

"ಕುಟಿಲ ಜಟಿಲ ರಾಜಕೀಯವಲ್ಲ
ನೇರವಾಯ್ತು ನಿನ್ನ ನಡೆಯಲಿ!
ಹಿಂಸೆ ಮುಖದಲ್ಲಿದ್ದ ಕ್ರೌರ್ಯವೆಲ್ಲ
ಉಡುಗಿದುದು, ಅಹಿಂಸೆಯ ಬಲದಲಿ!
ಮರೆತಸತ್ಯ ಮತ್ತೆ ತಲೆಯನೆತ್ತಿ
ನಿತ್ಯವಾಯ್ತು ನಿನ್ನ ಬದುಕಲಿ!
ಹಗೆಯ ಹರಸುವಂಥ ನಿನ್ನ ಮೈತ್ರಿ
ಮಿನುಗುತ್ತಿತ್ತು ಮುಗುಳ್ನಗೆಯಲಿ!"

(ತಿಪ್ಪೇರುದ್ರಸ್ವಾಮಿ. ಎಚ್. ಮತ್ತು ಇತರರು(ಸಂ); ೧೯೭೦; ಪು. ೨೩)

ಬ್ರಿಟಿಷರ ದುರಾಡಳಿತದ ಮುಖಗಳಾದ ಹಿಂಸೆ, ಕ್ರೌರ್ಯಗಳನ್ನು ಗಾಂಧೀಜಿಯವರು ತಮ್ಮ ಸದಾಚಾರದ ನಡೆ, ನುಡಿಗಳಿಂದ, ಅಹಿಂಸೆಯ ಆತ್ಮಬಲದಿಂದ ನಿಗ್ರಹಿಸಿದರು. ಸತ್ಯವು ಪುನಃ ತಲೆಯೆತ್ತಿ ನಿಲ್ಲುವಂತೆ ಮಾಡಿ, ಗಾಂಧೀಜಿ ತಮ್ಮ ಬದುಕನ್ನೇ ಸತ್ಯದ ಶೋಧನೆಯ ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡರು. ವೈರಿಗಳನ್ನು ಕೂಡ ಒಲಿಸಿಕೊಂಡು ಅವರ ಸಹೃದಯವನ್ನು ಪರಿವರ್ತಿಸುವಾಗ ಗಾಂಧೀಜಿಯವರ ಆದರ್ಶಗಳು ಇಂದಿಗೂ ದಾರಿದೀಪಗಳಾಗಿವೆ ಎಂಬುದಾಗಿ ಪ್ರತಿನಿಧಿಸಲಾಗಿದೆ.

ವೇಣುಗೋಪಾಲ ಸೊರಬ ಅವರು 'ಕಿವಿಮಾತು' ಎಂಬ ಕವಿತೆಯಲ್ಲಿ ಗಾಂಧೀಜಿಯ ವ್ಯಕ್ತಿತ್ವವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿದ್ದಾರೆ.

"ರಾಜಕೀಯದ ಹಸಬೆ ಚೀಲವನು ಹೆಗಲಿಗೇರಿಸಿ
ವಜನ ಹೆಚ್ಚಾಗಿ ಜಗ್ಗಿದರೂನು
ತಲೆಯೆತ್ತಿ ನಡೆದಿರಿ-ಇಲ್ಲ ಅಂದರೆ
ನಿಮ್ಮ ಹೃದಯ ವೈಶಾಲ್ಯ, ಪ್ರಾಯೋಗಿಕ ಕುತೂಹಲ
ಬಳಸಿ ಬ್ರಹ್ಮಚಾರಿ ನಿಷ್ಠೆ, ಆಗೀಗಿನ ಕುಚೇಷ್ಟೆ
ಯಾರಿಗೆ ಸ್ವಾಮೀ ಮನಸ್ಸಿಗೆ ಬರುತ್ತಿತ್ತು?
ಸ್ವಾಮಿ ಯಾರಿಗೂ ಪ್ರಿಯವಾಗುತ್ತಿತ್ತು"?
ಕುಟುಂಬ ಯೋಜನೆಯ ಪ್ರಚಾರದಂತೆ
ಎಲ್ಲೆಲ್ಲೂ ನಿಮ್ಮ ಚಿತ್ರ ಹೇಗೆ ಸ್ವಾಮಿ ಕಾಣಸಿಗುತ್ತಿತ್ತು"

(ಸಿದ್ಧಲಿಂಗಯ್ಯ. ಜಿ.ಎಸ್.(ಸಂ); ೧೯೭೭; ಪು. ೩೦೭)

ಇಲ್ಲಿ ಗಾಂಧೀಜಿಯ ವ್ಯಕ್ತಿತ್ವವನ್ನು ವೈಭವೀಕರಿಸದೆ ವಾಸ್ತವದ ನೆಲೆಯಲ್ಲಿ ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ದೇಶದ ರಾಜಕೀಯ ವ್ಯವಸ್ಥೆಯು ತುಂಬಾ ಕ್ರೂರವಾಗಿದ್ದಾಗಲೂ ಅದಕ್ಕೆ ಎದುರಾಗಿ ಸತ್ಯ, ಅಹಿಂಸೆಗಳ ಮಾನವೀಯ ಸ್ಪರ್ಶದಿಂದ ಗಾಂಧೀಜಿ ಅಪರೂಪದ ವ್ಯಕ್ತಿಯಾಗಿದ್ದರು ಎಂದು ಪ್ರತಿನಿಧಿಸಲಾಗಿದೆ. ಅಂತಹ ಅಪೂರ್ವ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡು ಅನುಸರಿಸದೇ ಅವರನ್ನು 'ಕುಟುಂಬ ಯೋಜನೆಯ ಪ್ರಚಾರದಂತೆ' ಎಲ್ಲೆಲ್ಲೊ ಪ್ರಚಾರದ ವಸ್ತುವಾಗಿಸಿಬಿಟ್ಟಿದ್ದೇವೆ ಎಂದು ವ್ಯಕ್ತಪಡಿಸಿದ್ದಾರೆ.

ಗಿರಡ್ಡಿ ಗೋವಿಂದರಾಜು ಅವರು 'ಗಾಂಧೀಜಿಯ ನೆನಪು' ಕವಿತೆಯಲ್ಲಿ ಗಾಂಧೀಜಿಯ ವ್ಯಕ್ತಿತ್ವದ ಅನನ್ಯತೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

"ಅಯ್ಯ ನೀನು ಅವತಾರಿಯೇ ಇರಬಹುದು.
ಎಷ್ಟು ಅವತಾರಗಳ ಚುಂಬಕವ ಮುಟ್ಟಿದರು
ಬರಿಯ ಕಬ್ಬಿಣದ ತುಂಡು ನಾವು
ಬೇಕಾದರೆ ಬಂದು ನೋಡು
ನೀನು ಬೆವರಿಳಿಸಿ ಕಟ್ಟಿರುವ ಹುತ್ತದ ತುಂಬ
ಮಿರಿ ಮಿರಿ ಮೈಯ, ಚಪ ಚಪ ನಾಲಿಗೆಯ
ನಮ್ಮ ಸುಳಿದಾಟ
ಅಯ್ಯ, ಬರಿಯ ಮರ್ತ್ಯರು ನಾವು
ಮತ್ತೊಮ್ಮೆ ಅಮೃತ್ವದ ಕನಸು ಕಾಣುವುದಕ್ಕೆ
ಇನ್ನೊಬ್ಬ ನಿನ್ನಂಥವನಿಗಾಗಿ
ದಾರಿಕಾಯುವುದೊಂದೆ ಕೆಲಸ ನಮಗೆ"

(ಸಿದ್ಧಲಿಂಗಯ್ಯ. ಜಿ.ಎಸ್.(ಸಂ); ೧೯೭೭; ಪು. ೫೦)

ಗಾಂಧೀಜಿ ಅವತಾರ ಪುರುಷರಂತೆ ತಮ್ಮ ಜೀವನದುದ್ದಕ್ಕೂ ದೇಶದ ಏಳಿಗೆ ಮತ್ತು ಸಂಕಷ್ಟಕ್ಕೆ ಸಿಲುಕಿದ ಜನಗಳನ್ನು ಪಾರು ಮಾಡಲಿಕ್ಕೆ ಪ್ರಯತ್ನಿಸಿದರು. ಅವರು ಬೆವರಿಳಿಸಿ ಕಟ್ಟಿದ ಸ್ವಾತಂತ್ರ್ಯದ ಹುತ್ತದ ತುಂಬ ಇಂದು ಬರೀ ಹಾವುಗಳೇ ಸುಳಿದಾಡುತ್ತಿರುವುದು ಒಂದು ವಿಪರ್ಯಾಸವಾಗಿದೆ ಎಂದು ವ್ಯಕ್ತಪಡಿಸಿದ್ದಾರೆ.

ಸ್ವಾಭಿಮಾನವು ಜೀವನದ ಅವಿಭಾಜ್ಯ ಅಂಗವೆಂದು ಗಾಂಧೀಜಿ ಹೇಳುತ್ತಾರೆ. ಸ್ವಾಭಿಮಾನ ಜೀವನ ನಡೆಸಬೇಕೆಂದರೆ ಸ್ವದೇಶದ ವಸ್ತುಗಳನ್ನೇ ಉತ್ಪಾದಿಸಬೇಕು ಮತ್ತು ಅವುಗಳನ್ನೇ ಬಳಸಬೇಕು ಎಂಬುದು ಗಾಂಧೀಜಿಯ ನಿಲುವಾಗಿತ್ತು. ಹಾಗಾಗಿ ಚರಕವು ಸ್ವಾವಲಂಬನೆಯ ಅಸ್ತ್ರ ಎಂದು ಭಾವಿಸಿದ್ದರು. ಸ್ವರಾಜ್ಯ, ಸ್ವಾಭಿಮಾನ, ಸತ್ಯ ಅಹಿಂಸೆ ಮತ್ತು ಅಸ್ಪೃಶ್ಯತೆ ಗಾಂಧೀಜಿಯ ಸಂವಹನ ಮಾಧ್ಯಮಗಳಾಗಿವೆ ಎಂದು ಸುಮತೀಂದ್ರ ನಾಡಿಗ ಅವರು 'ಗಾಂಧೀಜಿಯ ಸಂವಹನ ಮಾಧ್ಯಮಗಳು' ಎಂಬ ಕವಿತೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

"ಸ್ವಂತಿಕೆಯೇ ಸ್ವಾಭಿಮಾನ, ಸ್ವಾಭಿಮಾನ ಸ್ವಾತಂತ್ರ್ಯ
ಸ್ವರಾಜ್ಯಕ್ಕೆ ಮುಖ್ಯವೆಂದ ಸ್ವಾವಲಂಬನೆ,
ಸಶಸ್ತ್ರರಾದ ಬ್ರಿಟಿಷರೆದುರು ಅಸಹಾಯರು ನಿಲ್ಲಲಿಕ್ಕೆ
ಅಹಿಂಸೆ ಅಸ್ತ್ರವನ್ನು ಕೊಟ್ಟು ಧೈರ್ಯ ತುಂಬಿದ
....
ಉಪ್ಪೇ ಇರಲಿ, ಊಟವಿರಲಿ, ಒಡವೆ ವಸ್ತ್ರ ಏನೇ ಇರಲಿ,
ಪ್ರತಿಯೊಂದು ಅಸ್ತ್ರವಾಗಿ ಬಿಡಲು ಕಲಿಸಿದ,
ಪರದೇಶದ ವಸ್ತ್ರ ಸುಟ್ಟು, ತೊಟ್ಟ ಒಡವೆ ಬಿಚ್ಚಿಕೊಟ್ಟು,
ಗುರಿಯನೊಂದೆ ನೆಚ್ಚುವಂಥ ಸ್ಥೈರ್ಯ ಕಲಿಸಿದ."
(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೮೮; ಪು. ೧೦೫-೧೦೬)

ಸ್ವಾಲಂಬಿಗಳಾಗಿ ಜೀವಿಸಿದರೆ ಅದರಿಂದ ಸ್ವರಾಜ್ಯವನ್ನು ನಿರ್ಮಾಣ ಮಾಡಬಹುದೆಂದು ಹೇಳುತ್ತಾರೆ. ಸಶಸ್ತ್ರರಾದ ಬ್ರಿಟಿಷರನ್ನು ಎದುರಿಸಲು ಅಹಿಂಸೆಯ ಅಸ್ತ್ರವನ್ನು ತೋರಿಸಿಕೊಟ್ಟರು. ಹರಿಜನರು ಅಸ್ಪೃಶ್ಯರಲ್ಲ, ಸ್ತ್ರೀಯರು ಅಬಲೆಯರಲ್ಲ ಎಂದು ಎಲ್ಲರೂ ಕೂಡಿ ಹೋರಾಡಿದರೆ ಸತ್ಯ ಗೆಲ್ಲುವುದೆಂದು ಎಲ್ಲರೂ ಸಮಾನರೆಂದು ಎತ್ತಿ ತೋರಿಸಿದರು. ಉಪ್ಪು, ಊಟ, ಒಡವೆ ಪ್ರತಿಯೊಂದನ್ನು ಹೋರಾಟಕ್ಕೆ ಅಸ್ತ್ರವಾಗುತ್ತದೆ ಎಂದು ತೋರಿಸಿಕೊಟ್ಟರು. ವಿದೇಶಿ ವಸ್ತ್ರಗಳನ್ನು ಬಳಸದೆ, ಆಭರಣಗಳನ್ನು ತೊಡದೆ ಸ್ವದೇಶಿ ವಸ್ತುಗಳನ್ನು ಬಳಸಿ ಗುರಿಯ ಕಡೆಗೆ ಸಾಗಬೇಕೆಂಬ ಸ್ಥೈರ್ಯ ತುಂಬಿದರು. ಹಾಗಾಗಿ ಇಲ್ಲಿ ಗಾಂಧೀಜಿಯನ್ನು ಅಹಿಂಸೆಯ ಹರಿಕಾರ, ಸ್ವಾವಲಂಬನೆ ಜೀವನದ ಸೂತ್ರಧಾರ, ಸ್ವಾತಂತ್ರ್ಯ ಹೋರಾಟದ ಗುರಿಯನ್ನು ತಲುಪಿಸುವ ಗುರುವಾಗಿ, ಎಲ್ಲರಿಗೂ ತಂದೆಯಾಗಿ ಜಾತ್ಯಾತೀತತೆಯ ಹರಿಕಾರಕನಾಗಿ ಇಲ್ಲಿ ಪ್ರತಿನಿಧಿಸಲಾಗಿದೆ.

ನವ್ಯ ಕಾಲಘಟ್ಟದ ಕಾವ್ಯಗಳಲ್ಲಿ ಭ್ರಮನಿರಸನ ಕಂಡುಬಂದಿದೆ. ಆದರೆ ಇಲ್ಲಿಯೂ ಗಾಂಧೀಜಿಯವರನ್ನು ದೇವಮಾನವರೆಂದೇ ಬಿಂಬಿಸಿದರೂ ಕೂಡ ಕಾವ್ಯ ಕಟ್ಟುವ ಪರಿಕರಗಳು ಸ್ವತಂತ್ರ ಭಾರತದ ಸ್ಪಷ್ಟ ಉದಾಹರಣೆಗಳಂತಿವೆ. ದೇವ ಮಾನವತ್ವವನ್ನು ಒಪ್ಪಿಕೊಂಡರೂ ಅಂತಃಕರಣ ಪೂರ್ವಕವಾಗಿಲ್ಲ ಎಂಬುದನ್ನು ಕವಿತೆಯ ಸಾಲುಗಳು ಮನಗಾಣಿಸುತ್ತಿವೆ. ಗಾಂಧೀಜಿಯವರನ್ನು ಒಪ್ಪಿ ಮೂರ್ತಿ ಪ್ರತಿಷ್ಠಾಪಿಸಿ ನೋಡದಂತೆ ಮುಂದೆ ಸಾಗುವ ಪ್ರಕ್ರಿಯೆ ಅಸಹಾಯಕ/ಒಮ್ಮೊಮ್ಮೆ ಜಾಣತನದ ಪರಮಾವಧಿಯನ್ನು ಅಥವಾ ನುಣುಚಿಕೊಳ್ಳುವ ಪ್ರವೃತ್ತಿಯನ್ನು ಎತ್ತಿ ತೋರಿಸುತ್ತವೆ.

೩.೪. ದಲಿತ-ಬಂಡಾಯ ಕಾವ್ಯ

ಆಧುನಿಕ ಕನ್ನಡ ಕಾವ್ಯದಲ್ಲಿ ದಲಿತ-ಬಂಡಾಯ ಕಾಲಘಟ್ಟವು ನವ್ಯದ ನಂತರ ಬಂದ ಕಾಲಘಟ್ಟವಾಗಿದೆ. ಇದನ್ನು ಸಾಮಾಜಿಕ ಕ್ರಾಂತಿಯ ಘಟ್ಟವೂ ಎಂತಲೂ ಹೇಳಬಹುದು. "ಸಾವಿರಾರು ವರ್ಷಗಳಿಂದ ಮೇಲ್ವರ್ಗದವರು ತಮ್ಮ ಮೇಲೆ ಮಾಡುತ್ತಾ ಬಂದ ಅನ್ಯಾಯ,

ದಬ್ಬಾಳಿಕೆ, ದೌರ್ಜನ್ಯಗಳಿಗೆ ಪ್ರತಿಭಟನೆಗಳನ್ನು ವ್ಯಕ್ತಪಡಿಸಿದಾಗ ಅದು ದಲಿತರ ಸಾಮಾಜಿಕ ಕ್ರಾಂತಿಯೆಂದು ಹೆಸರು ಪಡೆದುಕೊಂಡಿದೆ. ಆ ಕ್ರಾಂತಿಯ ಕಿಡಿಗಳು ಬರಹದ ರೂಪ ಪಡೆದು ಸಾಹಿತ್ಯದಲ್ಲಿ ಒಡಮೂಡಿದಾಗ ಆ ಸಾಹಿತ್ಯವೇ ದಲಿತ-ಬಂಡಾಯ ಸಾಹಿತ್ಯವಾಯಿತು" ಎಂದು ಎಸ್.ಎಂ. ಹಿರೇಮಠ ಅವರು ಹೇಳಿದ್ದಾರೆ(ಹಿರೇಮಠ. ಎಸ್.ಎಂ.; ೧೯೯೩; ಪು. ೪೭೬). ಇಲ್ಲಿನ ಭಾಷೆ, ಛಂದೋಬಂಧಗಳು ಸರಳಗೊಂಡು, ಆಡುಭಾಷೆ(ಉಪಭಾಷೆ ಒಂದು ಸಮುದಾಯದ ಭಾಷೆ) ಕಾವ್ಯವಾಗುತ್ತಾ ಬಂತು. ಕೆಳವರ್ಗದ ಸಮಾಜದ ಸಮಸ್ಯೆಗಳನ್ನು ತಲಸ್ಪರ್ಶಿಯಾಗಿ ವಿಶ್ಲೇಷಿಸುವುದು ಪ್ರಮುಖವೆನಿಸಿತು.

"ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ದಲಿತ ಸಮಸ್ಯೆಗಳಿಗೆ ಸ್ಪಂದಿಸಿದ ಪಂಪ, ವಚನಕಾರರು, ಹರಿಹರ, ರಾಘವಾಂಕ ಮತ್ತು ಹರಿದಾಸರಂತಹ ಕವಿಗಳ ಕಾವ್ಯವೂ ಹೆಚ್ಚಿನ ಪ್ರೇರಣೆಯನ್ನು ದಲಿತ ಕಾವ್ಯಕ್ಕೆ ನೀಡಿವೆ. ಇವುಗಳ ಜೊತೆಗೆ ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರಭಾವಿಸಿದ ವಿಚಾರವಾದಿಗಳು, ಚಿಂತಕರು ಮತ್ತು ಸಮಾಜ ಸುಧಾರಕರೆನಿಸಿದ ಮಾರ್ಕ್ಸ್, ಅಂಬೇಡ್ಕರ್, ಜ್ಯೋತಿಬಾ ಫುಲೆ, ಪೆರಿಯಾರ್ ಮತ್ತು ಲೋಹಿಯಾರಂತಹ ವಿಚಾರವಾದಿಗಳಿದ್ದಾರೆ. ಆದರೆ ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ ಗಾಂಧೀಜಿಯವರಿಗೆ ಅಗ್ರಸ್ಥಾನ ಸಲ್ಲುತ್ತದೆ"(ಹಾಲೋಳ್ಳಿ. ಎಚ್.ಪಿ; ೨೦೦೯; ಪು. ೨೦೪) ಎಂಬುದು ನಿಜವೆನಿಸುತ್ತದೆ. ಗಾಂಧೀಜಿಯವರನ್ನು ಆಯಾ ಕಾಲಘಟ್ಟದ ಲೇಖಕರು ಸ್ವೀಕರಿಸಿದ ರೀತಿ ಭಿನ್ನವಾಗಿದೆ. ಈ ಕುರಿತು ಡಾ. ಪ್ರಹ್ಲಾದ ಅಗಸನಕಟ್ಟೆ ಅವರು "ನವೋದಯದವರು ಕಂಡ ಗಾಂಧಿ, ನವ್ಯರು ಕಂಡ ಗಾಂಧಿ ಈಗ ದಲಿತ ಬಂಡಾಯದವರು ಕಾಣುತ್ತಿರುವ ಗಾಂಧಿಗೂ ಪರಿಕಲ್ಪನೆಯ ನೆಲೆಯಲ್ಲಿಯೇ ಗುಣಾತ್ಮಕ ವ್ಯತ್ಯಾಸವಿದೆ. ನವೋದಯದವರಿಗೆ ಗಾಂಧಿ ಒಂದು ಆದರ್ಶವಾಗಿ ಕಂಡರೆ, ನವ್ಯರಿಗೆ ನೆಹರು, ಇಂದಿರಾ ಆಡಳಿತವನ್ನು ವಿಡಂಬಿಸುವ ಸಂಕೇತವಾಗಿ ಗಾಂಧೀಜಿ ಕಂಡರು. ದಲಿತ-ಬಂಡಾಯಗಾರರಿಗೆ ನವವಸಾಹತೀಕರಣ, ಆಧುನಿಕ ತಂತ್ರಜ್ಞಾನ ಪ್ರೇರಿತ ಉಪಭೋಗವಾದಿ ಅಲೆಯನ್ನು ವಿರೋಧಿಸುವ ಪ್ರಜ್ಞೆಯಾಗಿ ಗಾಂಧಿ ಕಂಡು ಬರುತ್ತಿದ್ದಾರೆ. ಕಾಲದ ಪರೀಕ್ಷೆಯಲ್ಲಿ ಕುದಿದು-ಮಾಗಿ-ಉಳಿದ ಗಾಂಧಿತತ್ವ ಈಗ ಒಂದು ಮೌಲ್ಯವಾಗುವ ಪ್ರಕ್ರಿಯೆ ನಮ್ಮ ಸಾಂಸ್ಕೃತಿಕ ಜಗತ್ತಿನಲ್ಲಿ ಕಾಣತೊಡಗಿದೆ"(ಪ್ರಹ್ಲಾದ ಅಗಸನಕಟ್ಟೆ; ೨೦೦೧; ಪು. ಮುನ್ನುಡಿ) ಎಂದು ಅಭಿಪ್ರಾಯಿಸಿದ್ದಾರೆ.

ದೇಶ ಸ್ವಾತಂತ್ರ್ಯಗೊಂಡ ಮೇಲೆ ಇಲ್ಲಿರುವ ಸಮಸ್ಯೆಗಳು, ಶೋಷಣೆ - ದಬ್ಬಾಳಿಕೆ, ಅನ್ಯಾಯ-ಅಕ್ರಮ, ದುಃಖ - ದಾರಿದ್ರ್ಯಗಳು ನಾಶವಾಗಿ ನೆಮ್ಮದಿಯ ಬದುಕು ದೊರಕುತ್ತದೆ ಎಂದು ಕನಸು ಕಂಡಿದ್ದರು. ಆದರೆ ಸ್ವಾತಂತ್ರ್ಯನಂತರದಲ್ಲಿ ನಡೆದ ಘಟನೆಗಳು ಜನರ ಕನಸುಗಳನ್ನೆಲ್ಲಾ ಭಗ್ನಗೊಳಿಸಿದವು. ಸ್ವಾತಂತ್ರ್ಯೋತ್ತರ ಕಾವ್ಯಗಳಲ್ಲಿ ಹೊಸ ಮೌಲ್ಯಗಳನ್ನು, ಹೊಸತನವನ್ನು ಹುಡುಕುತ್ತ, ಅಂತರಂಗದ ಮೌಲ್ಯಗಳನ್ನು ಅನ್ವೇಷಣೆ ಮಾಡುತ್ತಾ, ಬದುಕಿನ ವಾಸ್ತವತೆಗಳನ್ನು ಆಲಿಸುತ್ತಾ ಹೊರಟ ದಲಿತ ಬಂಡಾಯ ಸಾಹಿತ್ಯ ವಿಡಂಬನೆಗಳಿಂದ ತುಂಬಿ ಹೋಯಿತು.

ದಲಿತ ಬಂಡಾಯದ ಸಾಹಿತಿಗಳಿಗೆ ಗಾಂಧೀಜಿ ಸ್ವಾತಂತ್ರ್ಯದ ಪ್ರತಿನಿಧಿಯಾಗಿ, ಭಾರತೀಯ ಜನಜೀವನದ ಅದರಲ್ಲೂ ಗ್ರಾಮೀಣ ಬದುಕಿನ ಆದರ್ಶವಾಗಿ ಕಂಡಿದ್ದಾರೆ. ಗಾಂಧೀಜಿಯನ್ನು ವಿರೋಧಿಸಿ ಮಾತನಾಡಿದ ಕವಿಗಳ ಸಂಖ್ಯೆ ತುಂಬಾ ವಿರಳವೆಂದು ಹೇಳಬಹುದು. ಯಾಕೆಂದರೆ ದಲಿತರು ಸವರ್ಣೀಯರ ದಬ್ಬಾಳಿಕೆಯಿಂದ ಹೊರಬರುವ ವಿಮೋಚನೆಯ ತತ್ವಕ್ಕೆ ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಕಲ್ಪನೆಗಳು ಪ್ರೇರಣೆಯಾಗಿರಬಹುದು. ಸರ್ವಾಧಿಕಾರದ ವಿರುದ್ಧ, ದಲಿತರ, ಶೋಷಿತರ ಹಕ್ಕುಗಳಿಗಾಗಿ ಅಹಿಂಸಾತ್ಮಕವಾಗಿ ಹೋರಾಡಬೇಕೆನ್ನುವ ಸತ್ಯಾಗ್ರಹದ ಕಲ್ಪನೆ ಗಾಂಧೀಜಿಯವರ ಬದುಕಿನಿಂದಲೇ ಬಂದುದಾಗಿದೆ. ನಗರಗಳಲ್ಲಿನ ಔದ್ಯಮೀಕರಣದಿಂದಾಗಿ ಗ್ರಾಮೀಣ ಜನರ ಗುಡಿಕೈಗಾರಿಕೆಗಳು ನಶಿಸಿಹೋಗಿ ಹಳ್ಳಿಗಳ ಆರ್ಥಿಕ ಮಟ್ಟ ಕುಸಿಯುತ್ತಿದೆ. ಈ ಸಮಸ್ಯೆಯಿಂದ ಮುಕ್ತಿ ಹೊಂದಬೇಕಾದರೆ 'ಗ್ರಾಮ ಸ್ವರಾಜ್ಯ' ಅಸ್ತಿತ್ವಕ್ಕೆ ಬರಬೇಕೆಂದು ಗಾಂಧೀಜಿ ಪ್ರಯತ್ನಿಸಿದರು. ಗಾಂಧೀಜಿಯ ತತ್ವಗಳಲ್ಲಿ ಬಂದಾಗ ಈ ಗ್ರಾಮ ಸ್ವರಾಜ್ಯವೇ ದಲಿತ ಕವಿಗಳಿಗೆ ಊರುಗೋಲಾಗಿ ಕಂಡಿರಬಹುದು. ಹೀಗೆ ವ್ಯಕ್ತಿ ಸ್ವಾತಂತ್ರ್ಯದಿಂದ ಹಿಡಿದು ಸಮಾಜ, ನಾಡು ಮತ್ತು ರಾಷ್ಟ್ರದ ಸುಧಾರಣೆಯವರೆಗೆ ಒಂದಿಲ್ಲೊಂದು ರೀತಿಯಲ್ಲಿ ಗಾಂಧೀಜಿ ನೆನಪಾಗುತ್ತಾರೆ. ಇದನ್ನು ಕುರಿತು ಡಾ. ಪ್ರಹ್ಲಾದ ಅಗಸನಕಟ್ಟೆಯವರು "ಕವಿಗಳು ದಲಿತರು ಇರಬಹುದು. ಲೋಹಿಯಾವಾದಿಗಳು, ಮಾರ್ಕ್ಸ್‌ವಾದಿಗಳ ಮತ್ಯಾವುದೇ ಪ್ರಭಾವಿತವಾದ ಅಂಶವಿದ್ದರೂ ಅವರು 'ಗಾಂಧೀಜಿ'ಯನ್ನು ಮತ್ತೆ ಮತ್ತೆ ನೆನೆದದ್ದು ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಿದಾಗ, ಗಾಂಧೀಜಿ ಕೊಡಮಾಡಿದ ಪ್ರಜಾಪ್ರಭುತ್ವಕ್ಕೆ ಅಪಾಯ ಉಂಟಾದಾಗ; ವರ್ತಮಾನದ ರಾಜಕಾರಣಿಗಳು ಸ್ವಾತಂತ್ರ್ಯ ನೆಪದಲ್ಲಿ ಸ್ವೇಚ್ಛೆಗೆ ಇಳಿದಾಗ ಮತ್ತು ಆದರ್ಶಗಳಿಗೆ ಅಪಾಯ ತಗುಲಿದಾಗ ಗಾಂಧೀಜಿ ಪ್ರತಿಭಟನೆಯ ಊರುಗೋಲಾಗಿ, ದನಿಯಾಗಿ ಅವರಿಗೆ ಕಾಣಿಸಿಕೊಂಡಿದ್ದಾರೆ. ಗಾಂಧೀಜಿಯ ಹೆಸರಿನಲ್ಲಿ 'ನಕಲಿ ಗಾಂಧಿ'ಗಳ ಆಡಳಿತವನ್ನು ತಮ್ಮ ಬರಹದಲ್ಲಿ ಗೇಲಿ ಮಾಡಿದ್ದಾರೆ, ಪ್ರತಿಭಟಿಸಿದ್ದಾರೆ" ಎಂದು ವ್ಯಕ್ತಪಡಿಸಿದ್ದಾರೆ(ಪ್ರಹ್ಲಾದ ಅಗಸನಕಟ್ಟೆ; ೨೦೦೪; ಪು. ೩೩೪).

ದಲಿತ - ಬಂಡಾಯ ಕಾವ್ಯಕ್ಕೆ ಅಂಬೇಡ್ಕರ್ ಚಿಂತನೆಗಳು ಪ್ರಮುಖ ಪ್ರೇರಣೆ ಪಡೆದುದರಿಂದ, ದಲಿತ ಕವಿಗಳಿಗೆ ಗಾಂಧೀಜಿ ತುಸು ದೂರವೇ ನಿಂತರು ಎಂದು ಹೇಳಿದರೆ ತಪ್ಪಾಗಲಾರದು. ಯಾಕೆಂದರೆ ಅಂಬೇಡ್ಕರ್ ಮತ್ತು ಗಾಂಧೀಜಿಗೂ ಇದ್ದ ಕೆಲವು ತಾತ್ವಿಕ ಭಿನ್ನಾಭಿಪ್ರಾಯಗಳಿಂದ ದಲಿತ ಕವಿಗಳು ಈ ಧೋರಣೆ ಅನುಸರಿಸಿರಬಹುದು. ಆದರೆ ಗಾಂಧೀಜಿಯವರ ಕಡೆಗೆ ಇಡೀ ಭಾರತೀಯ ಸಾಹಿತ್ಯವೇ ಮುಖ ಮಾಡಿ ನಿಂತಾಗ ದಲಿತ ಕವಿಗಳು ಅದಕ್ಕೆ ಬೆನ್ನು ತಿರುಗಿಸುವುದು ಸಾಧ್ಯ ಆಗಲಿಲ್ಲವೆಂದು ಹೇಳಬಹುದು. ಸಕಾರಾತ್ಮಕ ಧೋರಣೆ ಇರಿಸಿಕೊಂಡು ಸಮಾಜದ ಬದಲಾವಣೆಗಾಗಿ ಪ್ರಯತ್ನಿಸುವ ಪ್ರತಿಯೊಬ್ಬ ಲೇಖಕನಿಗೂ ಗಾಂಧೀಜಿ ಒಂದಿಲ್ಲೊಂದು ರೀತಿಯಲ್ಲಿ ಎದುರಾಗುತ್ತಾರೆ. "ಬಡವರ, ನತದೃಷ್ಟರ, ಹಿಂದುಳಿದವರ, ಅಸಡ್ಡೆಗೊಳಗಾದವರ ಹಾಗೂ ತಿರಸ್ಕೃತರ ಬಗೆಗೆ ಮಾನವೀಯ ಅನುಕಂಪ ಇಂದಿನ ಕನ್ನಡ ಸಾಹಿತ್ಯದ ಪ್ರಧಾನ ಲಕ್ಷಣವಾಗಿದೆ. ಶ್ರೀಮಂತ ಸಮಾಜದಿಂದ ದೀನದಲಿತ ಸಮಾಜದ ಕಡೆ ಹೀಗೆ ಆಸಕ್ತಿ ಬದಲಾದುದಕ್ಕೆ

ಕಾರಣವನ್ನು ನೇರವಾಗಿ ಇಲ್ಲವೆ ಪರೋಕ್ಷವಾಗಿ ಗಾಂಧೀಜಿಯವರ ವಿಚಾರಧಾರೆಯ ಪ್ರಭಾವದಲ್ಲಿ ಕಾಣಬಹುದು"(ಹಾ.ಮಾ.ನಾಯಕ (ಸಂ); ೧೯೭೧; ಪು. ಸ್ವಾಗತ ಭಾಷಣ) ಎಂದು ಎಂ. ಯಮುನಾಚಾರ್ಯ ಅವರು ತಮ್ಮ 'Gandhi Marga' ಕೃತಿಯಲ್ಲಿ ಅಭಿಪ್ರಾಯಿಸಿರುವುದನ್ನು ಹಾ.ಮಾ. ನಾಯಕರು 'ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ' ಎಂಬ ವಿಚಾರಗೋಷ್ಠಿಯ ಸ್ವಾಗತ ಭಾಷಣದಲ್ಲಿ ಉದ್ಗರಿಸಿದ್ದಾರೆ.

ದಲಿತ ಕಾವ್ಯಗಳಲ್ಲಿ ಗಾಂಧೀಜಿ

"ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ದಲಿತ ಚಳವಳಿ; ಕಾವ್ಯದ ಮೂಲಕ; ಕಾವ್ಯ ಚಳವಳಿಯ ಮೂಲಕವೇ ನಾಂದಿ ಹಾಡಿದ್ದು. ಅನಂತರ ಕತೆ, ನಾಟಕ, ಕಾದಂಬರಿ, ಸಂಶೋಧನೆ, ಆತ್ಮಕತೆ ರಚನೆಗೆ ಸ್ಫೂರ್ತಿ ಚಾಲನೆ ದೊರೆತದ್ದು ಮಹತ್ವದ ಘಟ್ಟ. ಕರ್ನಾಟಕದಲ್ಲಿ ದಲಿತ ಸಾಹಿತ್ಯ ರಚನೆಯಾಗುತ್ತಿದ್ದರೂ ಅದನ್ನು ದಲಿತ ಸಾಹಿತ್ಯ ಎಂದು ಕರೆಯುತ್ತಿರಲಿಲ್ಲ. 'ದಲಿತ' ಪದ ಬಳಕೆ ಮಹಾರಾಷ್ಟ್ರದಿಂದಲೇ ವಲಸೆ ಬಂದಿದೆ. 'ದಲ' ಎಂಬುದು ಸಂಸ್ಕೃತ ಪದ. 'ದಲ' ಎಂದರೆ ತುಂಡು, ಚೂರು, ಭಾಗ, ಸೈನ್ಯ ಎಂದರ್ಥ. ಈ ಪದ ಇಟ್ಟುಕೊಂಡು ಕೆಲವರು 'ದಲಿತ' ಎಂದರೆ ದಮನಕ್ಕೆ ಒಳಗಾದವರು, ಅಸ್ಪೃಶ್ಯರು ಎಂದು ವಾದಿಸಿದರು. ಇವರ ಪರವಾಗಿ ಆರಂಭವಾದ ಚಳವಳಿಯೇ 'ದಲಿತ ಚಳವಳಿ' ಆಗಿದ್ದರೂ ಅದನ್ನು ಈ ಹೆಸರಿನಿಂದ ಕರೆದಿರಲಿಲ್ಲ. ಯಾವಾಗ ಅಲ್ಲಲ್ಲಿ ಮಾಧ್ಯಮಗಳಲ್ಲಿ 'ದಲಿತ' ಪದ ಬಳಕೆವಾಯಿತೊ, ಆವಾಗ ಸಹಜವಾಗಿ ಎಲ್ಲೆಡೆ ಇದು ಸ್ವೀಕೃತ ಪದವಾಗಿ ಬಿಟ್ಟಿತು" ಎಂದು ಅರ್ಜುನ ಗೊಳಸಂಗಿ ಅವರು ವ್ಯಕ್ತಪಡಿಸಿದ್ದಾರೆ(ಅರ್ಜುನ ಗೊಳಸಂಗಿ(ಸಂ); ೨೦೦೩; ಪು. ಸಂಪಾದಕರ ಮಾತು).

"ಕನ್ನಡ ದಲಿತ ಸಾಹಿತ್ಯ ಚಳವಳಿಯು ಮರಾಠಿ ದಲಿತ ಸಾಹಿತ್ಯ ಚಳವಳಿ ಹಾಗೂ ಡಾ. ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್‌ವಾದದ ಪ್ರಭಾವ, ಪ್ರೇರಣೆಯಿಂದಲೇ ರೂಪುಗೊಂಡಿತು" (ಅದೇ; ಪು. ಸಂಪಾದಕರ ಮಾತು). ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಪ್ರಕಾರವಾಗಿ ಗುರುತಿಸಲ್ಪಟ್ಟ ದಲಿತ ಸಾಹಿತ್ಯ ಕುರಿತು ವ್ಯಾಖ್ಯಾನಿಸುವಾಗ ಅರ್ಥವನ್ನು ಸಂಕುಚಿತಗೊಳಿಸಲಾಗುತ್ತಿದೆ ಎಂದು ಮತ್ತು ಅದರ ಅರ್ಥವನ್ನು ಇನ್ನೂ ಸ್ಪಷ್ಟೀಕರಣಗೊಳಿಸಿಕೊಂಡಂತಿಲ್ಲ ಎಂದೆನಿಸುತ್ತದೆ. "ದಲಿತ ಸಾಹಿತ್ಯಕ್ಕೂ ಬಂಡಾಯ ಸಾಹಿತ್ಯಕ್ಕೂ ಅಂತರ ಇರುವುದನ್ನು ಗಮನಿಸಬೇಕು. ದಲಿತರಾದವರು ಹುಟ್ಟಿನಿಂದ ಅಸ್ಪೃಶ್ಯರಾಗಿದ್ದು, ದಲಿತ ಪ್ರಜ್ಞೆ, ದಲಿತ ಮನೋಧರ್ಮದ ನೆಲೆಯಲ್ಲಿ, ದಲಿತಾನುಭವದ ಹಿನ್ನೆಲೆಯಿಂದ ಅಭಿವ್ಯಕ್ತಿಗೊಂಡ ಸಾಹಿತ್ಯವನ್ನು 'ದಲಿತ-ದಲಿತೇತರ ಸಾಹಿತ್ಯಕ್ಕೆ ಪರಸ್ಪರ ಜೀವನಾನುಭವ, ಕಾವ್ಯಾನುಭವದಲ್ಲಿ ವ್ಯತ್ಯಾಸ ಗೋಚರಿಸುತ್ತದೆ ಎಂಬುದು ಸ್ಪಷ್ಟ. ದಲಿತರ ಬದುಕು - ಸಂಸ್ಕೃತಿಯನ್ನು ಕುರಿತು ದಲಿತ ಲೇಖಕರೇ ಬರೆದಾಗಿನ ದಲಿತಾನುಭವ; ನೋವು-ನಲಿವು; ಆಂತರ್ಯದ ತುಡಿತ-ಮಿಡಿತ ಹಾಗೂ ಪ್ರಾಮಾಣಿಕತೆಯ ಅಭಿವ್ಯಕ್ತಿಯ ಕೃತಿ ಚಿತ್ರಣಕ್ಕೂ; ದಲಿತೇತರರು ಕಂಡು ಬರೆದ ಸಾಹಿತ್ಯಕ್ಕೂ ಅಂತರ ಇದ್ದೇ ಇರುತ್ತದೆ ಎಂಬುದನ್ನು ಯಾವ ಚಿಂತಕರಾದರೂ ಒಪ್ಪುವಂಥದ್ದೇ.

ದಲಿತ ಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು. ಆದರೆ, ಬಂಡಾಯ ಸಾಹಿತಿಗಳೆಲ್ಲ ದಲಿತ ಸಾಹಿತಿಗಳಲ್ಲ. ಹಾಗೆಯೇ ದಲಿತನಾಗಿ ಹುಟ್ಟಿ ಯಾವುದೋ ಸಾಹಿತ್ಯ ಕೃತಿ ಬರೆದಾಕ್ಷಣ, ಅವನು ದಲಿತ ಸಾಹಿತಿಯಾಗಲಾರನೆಂಬುದು ಕೂಡ ಅಷ್ಟೇ ಸತ್ಯ. ದಲಿತ ಸಾಹಿತ್ಯ ಎನ್ನುವುದು ಕೆಳಸ್ತರದಲ್ಲಿಯೇ ಅತ್ಯಂತ ಕೆಳಸ್ತರದ, ಶತಶತಮಾನಗಳಿಂದ ಅಸ್ಪೃಶ್ಯ, ಅನಾಗರಿಕ, ಪಂಚಮ ಮೊದಲಾದ ಹೀನಾರ್ಥಗಳಲ್ಲಿ ಸಂಬೋಧಿಸಲ್ಪಟ್ಟು, ಇತರ ಕೆಳವರ್ಗಗಳಿಗಿಂತ ಕೇವಲ ಶೋಷಣೆ ಮಾತ್ರವಲ್ಲದೆ, ಅವಮಾನಕ್ಕೆ, ಅವಮಾನವೀಯವಾದ ನಡವಳಿಕೆಗೆ ತಾವು ಮನುಷ್ಯರಲ್ಲವೇನೋ? ಎನ್ನುವಂತಹ ಸ್ಥಿತಿಗೆ ತಳ್ಳಲ್ಪಟ್ಟಂತಹ ಒಂದು ವರ್ಗದವರು ದಲಿತರು. ಇವರು ಬರೆದದ್ದು ದಲಿತ ಸಾಹಿತ್ಯವಾಗಬಲ್ಲದು"(ಅದೇ; ಪು. ಸಂಪಾದಕರ ಮಾತು) ಎಂದಿದ್ದಾರೆ. ದಲಿತರ ಬಗೆಗೆ ಯಾರು ಬರೆದರೂ ಅದು ದಲಿತ ಸಾಹಿತ್ಯ ಎಂಬ ಸ್ವೀಕಾರ ಮೊದಲಿಗಿತ್ತು. ಆದರೆ ಈಗ ವಿಶಿಷ್ಟವಾದ ಬರವಣಿಗೆಯ ದಲಿತ ಲೇಖಕರೇ ಹೆಚ್ಚು ಇರುವಾಗ, ದಲಿತೇತರ ಲೇಖಕರ ದಲಿತತನದ ಸಾಚಾ ಅನುಭವದ ಸಾಹಿತ್ಯ, ಅದು ಬಂಡಾಯ ಸಾಹಿತ್ಯ ಎಂದು; ಬಡತನ, ದೌರ್ಜನ್ಯ, ಯಾತನೆ, ಆಕ್ರೋಶದ ಅನುಭವದ ಪ್ರಾಮಾಣಿಕ ಅಭಿವ್ಯಕ್ತಿ ಅದು ದಲಿತ ಸಾಹಿತ್ಯ ಎಂದು ಪರಿಗಣಿಸಲಾಯಿತು.

ಡಾ. ಸಿದ್ಧಲಿಂಗಯ್ಯ, ಮುಳ್ಳೂರ ನಾಗರಾಜ, ವಿ. ಮುನಿವೆಂಕಟಪ್ಪ, ಅರವಿಂದ ಮಾಲಗತ್ತಿ, ಕೆ. ರಾಮಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಲಕ್ಷ್ಮೀಪತಿ ಕೋಲಾರ, ಇಂದೂಧರ ಹೊನ್ನಾಪುರ, ಮ.ನ. ಜವರಯ್ಯ, ಎಲ್. ಹನುಮಂತಯ್ಯ, ಕೆ.ಬಿ. ಸಿದ್ಧಯ್ಯ, ಮೊಗಳ್ಳಿ ಗಣೇಶ್, ಸುಬ್ಬು ಹೊಲೆಯಾರ, ಹೊಸೂರು ಮುನಿಶಾಮಪ್ಪ, ಚಾಂಡಾಲ, ಟಿ.ಎಂ. ಭಾಸ್ಕರ್, ಬಾನಂದೂರು ಕೆಂಪಯ್ಯ ಮೊದಲಾದವರು ದಲಿತ ಕಾಲಘಟ್ಟದಲ್ಲಿ ಕಾವ್ಯ ಕೃಷಿ ಮಾಡಿದ್ದಾರೆ.

ಡಾ. ಸಿದ್ಧಲಿಂಗಯ್ಯ ಅವರು ದಲಿತ ಕಾವ್ಯದ ನಾಂದಿಯನ್ನು ಹಾಡಿದ ಕವಿ ಎಂದು ಹೇಳಬಹುದು. ಇವರ ಕಾವ್ಯ ಸಂಕಲನಗಳು ದಲಿತ ಕಾವ್ಯಕ್ಕೆ ಪ್ರಾತಿನಿಧಿಕವಾಗಿವೆ. ಗಾಂಧಿ, ಮಾರ್ಕ್ಸ್ ಮತ್ತು ಅಂಬೇಡ್ಕರ್ ಪ್ರಭಾವಕ್ಕೆ ಒಳಗಾಗಿ ಅವರ ಸಿದ್ಧಾಂತಗಳನ್ನು ಪದ್ಯಗಳಲ್ಲಿ ಹೆಣೆಯುತ್ತಾ ಹೋಗಿದ್ದಾರೆ. ಅದರಲ್ಲಿ 'ಗಾಂಧಿ' ಎಂಬ ಕವಿತೆಯಲ್ಲಿ ಗಾಂಧೀಜಿಯನ್ನು ಹೀಗೆ ಕಂಡರಿಸಿದ್ದಾರೆ.

> "ಛತ್ರಿಚಾಮರವಿಲ್ಲ, ಬಹುಪರಾಕುಗಳಿಲ್ಲ
> ಭಾರತದ ಬೀದಿಯಲ್ಲಿ ಅರಸನಂತೆ
> ನಡೆದು ಬಂದಿರಿ ನೀವು, ನೊಂದ ಜೀವಿಯ ಕಂಡು
> ತಬ್ಬಿಕೊಂಡಿರಿ ಬಾಚಿ ತಂದೆಯಂತೆ
> ....
> ಜಾತಿಮತಗಳ ವಿಷದ, ಮಂಜು ಕರಗಲಿ ಎಂದು
> ಬಿಸಿಲಿನಲಿ ತಿರುಗಿದಿರಿ ದೇಶವೆಲ್ಲ
> ಹುಲ್ಲುಗರಿಕೆಗು ಕೂಡ ಪ್ರಾಣಮಾನಗಳುಂಟು
> ಎಂಬುದನು ಸಾರಿದಿರಿ ಲೋಕಕೆಲ್ಲ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೮೮; ಪು. ೨೦೯)

ಈ ಕವಿತೆಯಲ್ಲಿ ಗಾಂಧೀಜಿ ಭಾರತದ ಅರಸನಂತೆ, ನೊಂದ ಜೀವಿಗಳ ತಂದೆಯಂತೆ ಮತ್ತು ಜಾತಿ-ಮತಗಳ ನಡುವಿನ ಸಂಘರ್ಷವನ್ನು ನಿವಾರಿಸುವ ಜಾತ್ಯಾತೀತಕಾರನಾಗಿ ಪ್ರತಿನಿಧಿಸಲಾಗಿದೆ.

ಮೂಡ್ನಾಕೂಡು ಚಿನ್ನಸ್ವಾಮಿಯವರು ಗಾಂಧೀಜಿಯ ಪ್ರಭಾವಕ್ಕೆ ಒಳಗಾದವರು. ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಯೇ ದಲಿತರ ಏಳಿಗೆಗಾಗಿ ಗಾಂಧೀಜಿ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿರುವುದನ್ನು ಚಿನ್ನಸ್ವಾಮಿಯವರು ತಮ್ಮ 'ಗಾಂಧಿ ಇದ್ದಿದ್ದರೆ' ಎಂಬ ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ನೆಲದ ಮೇಲಿಕ್ಕಿದ ಮಲ
ಗುಡಿಸಿ ಮೋರಿಗೊತ್ತರಿಸಿ
ಕೇರಿ ಶುದ್ಧಮಾಡಿದ ಗಾಂಧಿ
ಇಂದು ನೀನಿದ್ದರೆ
ಚೆಂಡಿಗೇರಿಯಲ್ಲಿ ನಿನ್ನ
ಗುಂಡಿಗೆ' ವಿಲವಿಲ ಒದ್ದಾಡಿ ಚೀತ್ಕರಿಸುತ್ತಿತ್ತು
ತತ್ತೂರಿನಲ್ಲಿ ನಿನ್ನ
ಕಣ್ಣುಗಳು ನೆತ್ತರ ಕಾರಿ ಸಾವ ಕೂಗುತ್ತಿದ್ದವು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೨೨)

ಕೇರಿಯ ಇಕ್ಕೆಲಗಳ ನೆಲದಲ್ಲಿ ಕೂತಿರುವ ಮಲವನ್ನು ಗುಡಿಸಿ ಮೋರಿಗೆಸಿವಂತಹ ಗಾಂಧಿ, ಇಂದು ಬೆಳಗಾವಿ ಜಿಲ್ಲೆಯ ಚಿಂಡಿಗೇರಿಯಲ್ಲಿ ದಲಿತರಿಗೆ ಮಲ ತಿನ್ನಿಸುವ ಪ್ರಕರಣ ರಾಜ್ಯದಲ್ಲಿಯೇ ಬಹುದೊಡ್ಡ ಸುದ್ದಿಯನ್ನು ಮಾಡಿತು. ಅದನ್ನು ಗಾಂಧೀಜಿ ಇಂದು ಇದ್ದು ನೋಡಿದ್ದರೆ ಅವರ ಗುಂಡಿಗೆ ವಿಲವಿಲ ಒದ್ದಾಡಿ ಸಾಯುತ್ತಿತ್ತು. ಇಲ್ಲಿ ಗಾಂಧೀಜಿಯವರನ್ನು ಬಡವರ, ದಲಿತರ ಸುಧಾರಕರಾಗಿ ಪ್ರತಿನಿಧಿಸಲಾಗಿದೆ.

ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಸಮಕಾಲೀನರು. ಇವರಿಬ್ಬರ ನಡುವೆ ತಾತ್ವಿಕವಾದ ಭಿನ್ನಾಭಿಪ್ರಾಯಗಳಿದ್ದವು. ದಲಿತರಿಗೆ ಪ್ರತ್ಯೇಕವಾದ ಚುನಾವಣೆ ವ್ಯವಸ್ಥೆ ಬೇಕೆಂಬ ಅಹವಾಲನ್ನು ಅಂಬೇಡ್ಕರ್ ಮುಂದಿಟ್ಟಾಗ ಅದನ್ನು ಗಾಂಧೀಜಿ ವಿರೋಧಿಸಿ ಉಪವಾಸ ಸತ್ಯಾಗ್ರಹ ಹೂಡಿದರು. ಅದನ್ನು 'ಪೂನಾ ಮಾತುಕತೆ'ಯಲ್ಲಿ ಚರ್ಚಿಸಿ ಅಂಬೇಡ್ಕರ್ ದಲಿತರ ಪ್ರತ್ಯೇಕ ಚುನಾವಣೆಯನ್ನೇ ಹಿಂದಕ್ಕೆ ಪಡೆದರು. ಇದರಿಂದ ಅಂಬೇಡ್ಕರ್ ಅನುಯಾಯಿಗಳೆಲ್ಲ ಗಾಂಧೀಜಿ ದಲಿತರ ವಿರೋಧಿ ಎಂಬಂತೆ ಪ್ರಚಾರಿಸಿದರು. ಇದರಿಂದ ಕರ್ನಾಟಕದಲ್ಲಿ ದಲಿತ ಸಂಘರ್ಷಗಳು ಮತ್ತು ದಲಿತ ಲೇಖಕರು ಗಾಂಧೀಜಿಯವರನ್ನು ದಲಿತ ವಿರೋಧಿಯಾಗಿ ಕಂಡಿದ್ದಾರೆ. ಅದರಲ್ಲಿ ವಿ.ಮುನಿವೆಂಕಟಪ್ಪ ಅವರು 'ಈ ದೇಶದ ಗಾಂಧಿ' ಪದ್ಯದಲ್ಲಿ ದಲಿತರ ವಿರೋಧಿಯಾಗಿ ಹೀಗೆ ಚಿತ್ರಿಸಿದ್ದಾರೆ.

"ಸ್ವಾತಂತ್ರ್ಯ ತಂದವ
ಪಾಕಿಸ್ತಾನ ಕೊಟ್ಟವ
ರಾಮ ರಾಮ ಎಂದು ಸತ್ತ
ಈ ದೇಶದ ಗಾಂಧೀ
ಖಾದಿ, ಗಾಂಧೀ ಎಲ್ಲಾ ಒಂದೇ
ಖಾದಿ ಹೆಸರಲಿ ಮೋಸ ಮಾಡಿ
ಜನರಿಗೆಲ್ಲ ಟೊಪ್ಪಿಗೆ ಹಾಕಿದ
ಈ ದೇಶದ ಗಾಂಧೀ
ಸಂವಿಧಾನ ಶಿಲ್ಪಿ ಸಮಾನತೆ
ಕೇಳಿದಾಗ ಹಿಂದೂ ಧರ್ಮದ್ವೇಷಿ
ಎಂದು ಪಿತೂರಿ ನಡೆಸಿದ
ಈ ದೇಶದ ಗಾಂಧೀ
....
ನಮ್ಮ ನಡುವೆ ನಿಂತ ದೀನ
ದಲಿತ ಜನರ ಹಲ್ಲೆ ಗೈದ
ಈ ದೇಶದ ಗಾಂಧೀ
ಯಥಾಸ್ಥಿತಿಗೆ ನಾಂದಿ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೬೫-೨೬೬)

ಇಲ್ಲಿ ಗಾಂಧೀಜಿಯನ್ನು ದಲಿತರ ವಿರೋಧಿಯಾಗಿ ಪ್ರತಿನಿಧಿಸಲಾಗಿದೆ. ಗಾಂಧೀಜಿ ಈ ದೇಶದ ಏಳಿಗೆಗೋಸ್ಕರ ತಮ್ಮ ಇಡೀ ಜೀವನವನ್ನು ಮೀಸಲಿಟ್ಟ ವ್ಯಕ್ತಿಯ ಬಗೆಗೆ ಹೀಗೆ ವಿರೋಧಾತ್ಮಕ ನಿಲುವಿಗೆ ಬರುವ ಮುನ್ನ ಆಲೋಚಿಸಬೇಕಾಗುತ್ತದೆ ಎಂದು ಹೇಳಬಹುದು.

ಗಾಂಧೀಜಿ ದಲಿತರ, ಬಡವರ, ದುರ್ಬಲರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಹತ್ತಿಕ್ಕಲು ಹಗಲಿರುಳು ಹೋರಾಡಿದವರು. ದಲಿತರ ದುಃಖ ದುಮ್ಮಾನಗಳಿಗೆ ಸ್ಪಂದಿಸಿದರು. ಹೀಗಾಗಿ ಗಾಂಧೀಜಿ ಎಲ್ಲಾ ಜನರ ಪ್ರೀತಿಗೆ, ಮೆಚ್ಚುಗೆಗೆ ಮತ್ತು ದಲಿತರ ಏಳಿಗೆಯ ಸುಧಾರಕನಾಗಿ ಸುಬ್ಬು ಹೊಲೆಯಾರ್ ಅವರು "ಗಾಂಧಿಯನ್ನು ಪ್ರೀತಿಸಲಾರದವರು" ಎಂಬ ಕವಿತೆಯಲ್ಲಿ ಹೀಗೆ ಪ್ರತಿನಿಧಿಸಿದ್ದಾರೆ.

"ಅವರು
ಮನುಷ್ಯರಾಗಿದ್ದು
ಗುಬ್ಬಚ್ಚಿಯಾಗಿ ಗೂಡು ಕಟ್ಟಿದ್ದಕ್ಕೆ
ನಾನು ಪ್ರೀತಿಸುತ್ತೇನೆ;
ಪಿತಾಮಹರೆಂದಲ್ಲ
....

ಆಫ್ರಿಕಾದಲ್ಲಿ ಇಂಡಿಯಾದಲ್ಲಿ
ಮಾಂಸಖಂಡ, ರಕ್ತನಾಳಗಳನ್ನು
ಒಂದಾಗಿಸಿ ಉಸಿರಾಡಿದ್ದಕ್ಕೆ ಕರಮ
ಚಂದ ಗಾಂಧಿಯನ್ನು ಪ್ರೀತಿಸಿದ್ದು
ನಾಡಿನ ಸತ್ಯ ಹರಿಶ್ಚಂದ್ರ ನೋಡಿ ಅತ್ತಿದ್ದಕ್ಕೆ"

(ಅಲ್ಲಮಪ್ರಭು ಬೆಟ್ಟದೂರು(ಸಂ); ೧೯೯೩; ಪು. ೨೭೮)

ಗುಬ್ಬಚ್ಚಿಯು ಗೂಡನ್ನು ಹಾವಿನಿಂದ ರಕ್ಷಿಸಿದಂತೆ ದೇಶದ ಜನತೆಯನ್ನು ಬ್ರಿಟೀಷರಿಂದ ಕಾಪಾಡಿದ ರಕ್ಷಕನು ಗಾಂಧೀಜಿ. ಹಾಗಾಗಿ ಗಾಂಧೀಜಿ ಮಾನವೀಯ ಗುಣಗಳ ಗಣಿ ಇದ್ದಂತೆ ಮತ್ತು ದಲಿತರ ಮಾನವೀಯ ಬದುಕಿಗೆ ಆಶಾಕಿರಣವಾದವರು ಎಂದು ಪ್ರತಿನಿಧಿಸಲಾಗಿದೆ.

ದಲಿತ ಕವಿ ಎಂದೆನಿಸಿಕೊಂಡಿರುವ ಡಾ. ಸಿದ್ಧಲಿಂಗಯ್ಯನವರು ತಮ್ಮ ಮೊದಲ ಕವನ ಸಂಕಲನದಿಂದಲೇ ದಲಿತ ಧೋರಣೆಯನ್ನು ಅನುಸರಿಸಿದವರು. ಇವರು ಗಾಂಧಿ ಮತ್ತು ಕಾರ್ಲ್‌ಮಾರ್ಕ್ಸ್ ಪ್ರಭಾವಕ್ಕೆ ಒಳಗಾಗಿ ಅವರ ಸಿದ್ಧಾಂತಗಳನ್ನು ತಮ್ಮ ಕಾವ್ಯಗಳಲ್ಲಿ ಸೆರೆ ಹಿಡಿದಿದ್ದಾರೆ. ಅದರಲ್ಲಿ 'ಗಾಂಧಿ' ಎಂಬ ಕವಿತೆಯ ಸಾಲುಗಳು ಹೀಗಿವೆ :

"ನೀವು ಧನ್ಯರು ಗಾಂಧಿ ನೀವು ದೇವರು ಗಾಂಧಿ
ನಾವಿಂದು ಸೈತಾನರೇಕಾದೆವು?
ಅಂತರಂಗದ ಮಾತ ಏಕೆ ಮರೆತೆವು ನಾವು?
ಏಕೆ ಭಾರತವನ್ನು ಬಲಿಕೊಟ್ಟವು?"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೧೯)

ಇಲ್ಲಿ ಗಾಂಧೀಜಿಗೆ ಪ್ರಶ್ನೆಯನ್ನು ಕೇಳುತ್ತಾ ಮಿಶ್ರಭಾವವಾಗಿ ಪ್ರತಿಪಾದಿಸಿದ್ದಾರೆ.

ಡಿ. ಗೋವಿಂದದಾಸ್ ಅವರು ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಕವಿ ಹಾಗೂ ನಾಟಕಕಾರರು; ಇವರು ಅಪ್ಪಟ ಗಾಂಧಿವಾದಿಗಳಾಗಿದ್ದರು. ಇವರಿಗೆ ದೇಶಿ ಸಂಸ್ಕೃತಿಯ ಬಗ್ಗೆ ತುಂಬಾ ವಿಶ್ವಾಸವಿತ್ತು. ವಿದ್ಯಾರ್ಥಿ ದೆಸೆಯಿಂದಲೇ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣ, ಸುಧಾರಣ ಕೆಲಸಗಳು, ಸ್ವದೇಶಿ ಆಂದೋಲನ, ಸ್ವಾತಂತ್ರ್ಯ ಚಳವಳಿ ಮುಂತಾದ ವಿಚಾರಧಾರೆಗಳಿಂದ ಗಂಭೀರವಾಗಿ ಪ್ರಭಾವಿತರಾದವರು. ಗಾಂಧೀಜಿಯವರನ್ನು ಕುರಿತು ಹಲವಾರು ಕವಿತೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ 'ದೇಶಭಕ್ತನ ಧೀರತ್ವ' ಎಂಬ ಕವಿತೆಯಲ್ಲಿ -

"ಹುಟ್ಟಿದರೆ ಹುಟ್ಟಬೇಕು । ನಮ್ಮ
ದಿಟ್ಟ ಗಾಂಧಿಯಂತ । ಗಟ್ಟಿಗರೀಲೋಕದಲಿ
ಭಾರತಾಂಬೆಗೆ ತಾನು । ಧೀರಮಗನೆಂದೆನಿಸಿ
ಆರು ಖಂಡದೊಳೆಲ್ಲ । ಪೆಸರಾಂತ ಧೀರನಿವ

ಎರವಾಡ ಜೈಲೊಳಗೆ । ಒರಗಿ ಕುಳಿತುಕೊಂಡು
ಥರಥರನೆ ನಡುಗಿಸಿದ । ಪರದೇಶದವರನ್ನು"
(ಶೇಖರ.ಎಂ.ಎಸ್.; ೨೦೦೭; ಪು. ೯)

ಎಂದು ಗಾಂಧೀಜಿಯವರ ವ್ಯಕ್ತಿತ್ವವನ್ನು ಚಿತ್ರಿಸುತ್ತಾರೆ. ಹಾಗೆನೇ 'ದರಿದ್ರ ನಾರಾಯಣ' ಎಂಬ ಕವಿತೆಯಲ್ಲಿ ಗಾಂಧೀಜಿಯವರನ್ನು ಹೀಗೆ ಕಂಡಿದ್ದಾರೆ.

"ಏಕೆ ನೀನೀ ಪಥಕಿಳಿದೆ । ಖ್ಯಾತನೇ ಮಹಾತ್ಮ
ಮೆರೆಯುತಿರ್ದ ನಿನ್ನ । ಸರ್ವಭಾಗ್ಯದಾನ
ಮೆರೆದು ದೇಶ ಸೇವೆಗೆ ತಿರುಕನಂತಿರಲೇಕೆ
ಚರಕದಿಂದ ದಾರ ನೂತು ಪರರಿಗಿತ್ತು
ಬರುವ ಮೌಲ್ಯದಿಂದ ಹೊರೆಯಬೇಕೆ ಉದರ
ಬೆಲೆಯ ಬಾಳ್ವ ವಸ್ತ್ರಮುಳಿದು ಬಂದುಯಿಂತ
ಸುಲಭ ಬೆಲೆಯದುಪ್ಪಟಿಗೊಲಿದುದೇಕೆ ದಟ್ಟಿಗೆ
ಬ್ಯಾರಿಸ್ಟರ್ ನೀನಾಗಿ ಅರಮನೆಯೊಳು ಪೋಗಿ
ಇರದೆ ನೀಂ ಸುಖಮಾಗಿ ಸೆರೆಯವಾಸಬೇಕೆ
ಕುಲಸುಗೋತ್ರವೆಂಬ ನೆಲೆಯನೆಲ್ಲ ಮರೆದು
ಒಲಿದು ಹರಿಜನರಾ ಸಲಹಲೇಕೆ ನಿಂದೆ"
(ಅದೇ; ಪು. ೬೯)

ಬ್ಯಾರಿಸ್ಟರ್ ಹುದ್ದೆಯನ್ನು ಅಲಂಕರಿಸಿ ಅರಮನೆಯಂತಹ ಮನೆಯಲ್ಲಿ ಸುಖವಾಗಿ ಜೀವನ ಸಾಗಿಸುವ ಬದಲು ಜೈಲಿನಲ್ಲಿ ಸೆರೆಯ ವಾಸವನ್ನು ಅನುಭವಿಸಿದೆ. ಕುಲಗೋತ್ರ ನೋಡದೆ ಕೆಳವರ್ಗದ ಹರಿಜನರನ್ನು ಸಲಹಲೆಂದೆ ತನ್ನ ಜೀವನವನ್ನು ಮುಡಿಪಾಗಿಟ್ಟ ಮಹಾತ್ಮ ನೀನು ಎಂದು ಚಿತ್ರಿಸಿದ್ದಾರೆ. ಗಾಂಧೀಜಿಯ ಎದೆಗೆ ಗುಂಡು ಹಾರಿಸಿ ಧರೆಗುರುಳಿಸಿದ ದಿನ ಗೋವಿಂದದಾಸರು ಈ "ಮಹಾತ್ಮಗಾಂಧಿ ಮರೆಯಾದೆಯ ನೀಂ" ಎಂಬ ಕವಿತೆಯನ್ನು ರಚಿಸಿದ್ದಾರೆ.

"ಮಹಾತ್ಮಗಾಂಧಿ ಮರೆಯಾದೆಯ ನೀಂ
ಸ್ವರಾಜ್ಯಗಳಿಸೆಮಗೆ
ಸತ್ಯಶೋಧಿಸಿ ನಿತ್ಯವ ನೀಂ ಜಗ
ಸ್ತುತ್ಯನಾದೆಯ ಹಠಯೋಗಿ
ಸತ್ಯಾಹಿಂಸೆ ತತ್ವಮಹತ್ವದಿ
ಗೆಲಿದೆ ಮಹಾತ್ಕಾರ್ಯವ ತ್ಯಾಗಿ?
ಸೆರೆವಾಸ ಉಪವಾಸದಿಂದಲಿ
ಸುಖ ಸಂತೋಷಗಳನು ತೊರೆದೆ"
(ಅದೇ; ಪು. ೭೭)

ಮಹಾತ್ಮ ಗಾಂಧೀಜಿ ಸ್ವರಾಜ್ಯ ಗಳಿಸಲು ಹಗಲಿರುಳು ಹೋರಾಡಿದರು. ತಮ್ಮ ಬದುಕನ್ನು ಸತ್ಯಶೋಧನೆಯಾಗಿಸಿಕೊಂಡು ಸತ್ಯ, ಅಹಿಂಸೆ, ತತ್ವಗಳಲ್ಲಿ ಜೀವಿಸಿದ ಮಹಾತ್ಮಾಗಿ. ಸೆರೆವಾಸ, ಉಪವಾಸಗಳನ್ನು ಅನುಭವಿಸಿ ತಮ್ಮ ಸುಖ-ಸಂತೋಷಗಳನ್ನು ತೊರೆದರು. ಹರಿಜನರ ಉದ್ಧಾರಕ್ಕಾಗಿ ತಮ್ಮ ಶರೀರವನ್ನು ಭೂಮಿಗೆ ಅರ್ಪಿಸಿದ್ದಾರೆ. ಹರಿಜನ ಉದ್ಧಾರಕ್ಕಾಗಿ ಹೋರಾಡಿದ ಹರಿಜನರ ನಿಜವಾದ ಪ್ರೇಮಿ ಎಂದು ಪ್ರತಿನಿಧಿಸಿದ್ದಾರೆ.

ಬಂಡಾಯ ಕಾವ್ಯಗಳಲ್ಲಿ ಗಾಂಧೀಜಿ

ಕನ್ನಡ ಕಾವ್ಯ ಹಲವಾರು ಹಂತಗಳನ್ನು ದಾಟಿ ಬಂಡಾಯ ಕಾವ್ಯ ಪ್ರಕಟವಾಯಿತು. ಬಂಡಾಯ ಎಂದರೆ 'ಪ್ರತಿಭಟನೆ' ಎಂದು ಹೇಳಬಹುದು. ಗಾಂಧೀಜಿ ಬ್ರಿಟೀಷರ ದಬ್ಬಾಳಿಕೆಯ ವಿರುದ್ಧ ನಡೆಸುತ್ತಿದ್ದ ಉಪವಾಸ, ಸತ್ಯಾಗ್ರಹ ಚಳವಳಿಗಳು ಬಂಡಾಯದ ನೆಲೆಯಲ್ಲಿ ಮೂಡಿಬಂದವುಗಳು.

'ಬಂಡಾಯ' ಪದದ ವಿಶ್ಲೇಷಣೆಗೆ ಸಂಬಂಧಿಸಿದಂತೆ ಹಲವಾರು ವಿದ್ವಾಂಸರು ಭಿನ್ನ ಭಿನ್ನ ಅರ್ಥಗಳನ್ನು ನೀಡಿದ್ದಾರೆ.

"ಬಂಡಾಯವೆಂಬುದು ಸಂಸ್ಕೃತ 'ಬಂದು' ಪದದ ಮೂಲದಿಂದ ಬಂದಿದೆ. ಇದನ್ನು 'ಬಣ್ಡು' ಎಂದೂ ಬಳಸಲಾಗಿದೆ. ಇದರ ಮೂಲಾರ್ಥ 'ಯುದ್ಧ' ಎಂದಾಗುತ್ತದೆ" ಎಂದು ಬಿ. ರಾಜಣ್ಣ ಅವರು ತಮ್ಮ 'ಬಂಡಾಯ ಕಾವ್ಯ ಒಂದು ಸಾಂಸ್ಕೃತಿಕ ಅಧ್ಯಯನ'ವೆಂಬ ಸಂಶೋಧನಾ ಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ(ರಾಜಣ್ಣ.ಬಿ. ಉಪಲೀಕನಹಳ್ಳಿ; ೨೦೦೫; ಪು. ೨).

"ಬಂಡಾಯವೆನ್ನುವುದು ಒಂದು ಮನೋಧರ್ಮ. ಆದ್ದರಿಂದಲೇ ಬಂಡಾಯ ಸಾಹಿತ್ಯವು ಇದ್ದಕ್ಕಿದ್ದಂತೆ ಅವತರಿಸಿದ ಸ್ಥಿತಿಯಲ್ಲ. ಮನೋಧರ್ಮವೊಂದು ರೂಪುಗೊಳ್ಳಲು ಬೇಕಾದ ಕ್ರಿಯೆ-ಪ್ರಕ್ರಿಯೆಗಳ ನೆಲೆ. ಈ ಸಾಹಿತ್ಯ ಸೃಷ್ಟಿಗೆ ಹಿನ್ನೆಲೆ ಇದೆ. ಈ ಅರ್ಥದಲ್ಲಿಯೇ ಬಂಡಾಯ ಸಾಹಿತ್ಯಕ್ಕೆ ಚಾರಿತ್ರಿಕತೆ ಇದೆಯೆಂದೂ, ಚರಿತ್ರೆಯ ಅನಿವಾರ್ಯತೆಯಲ್ಲಿ ಇದು ಹುಟ್ಟಿದೆಯೆಂದೂ ನಾವು ತಿಳಿಯಬೇಕಾಗಿದೆ"(ಅದೇ; ಪು. ೩) ಎಂಬ ಬರಗೂರು ರಾಮಚಂದ್ರಪ್ಪನವರ ಈ ಮಾತುಗಳಲ್ಲಿ ಬಂಡಾಯ ಸಾಹಿತ್ಯದ ಹುಟ್ಟಿನ ನೆಲೆಯನ್ನು ತಿಳಿಯಬಹುದಾಗಿದೆ.

"ಈ ಬಂಡಾಯ ಸಾಹಿತ್ಯ ತನ್ನ ನೆಲೆಯನ್ನು ಪ್ರಕಟಿಸಿದ್ದು ೧೯೭೯ ಮಾರ್ಚ್ ೧೦ ಮತ್ತು ೧೧ ರಂದು ಬೆಂಗಳೂರಿನಲ್ಲಿ"(ಅದೇ; ಪು. ೩). ಸಾಹಿತ್ಯ ಮತ್ತು ಚಳವಳಿ ಎರಡೂ ಜೊತೆಯಾಗಿ ಹುಟ್ಟಿ ಬೆಳೆದರೂ ಸಾಹಿತ್ಯ ನಿರಂತರತೆಯನ್ನು ಪಡೆದುಕೊಂಡು ಚಳುವಳಿ ಸ್ಥಗಿತಗೊಂಡಿದ್ದು ವಿಷಾದನೀಯ.

ಒಟ್ಟಿನಲ್ಲಿ ಬಂಡಾಯ ಎನ್ನುವ ಪದವನ್ನು ವ್ಯವಸ್ಥೆಯ ವಿರುದ್ಧ ಸಿಟ್ಟಿಗೆದ್ದ, ಸಿಡಿದು ನಿಂತ ಪ್ರತಿಭಟನೆ, ಹೋರಾಟ, ಕ್ರಾಂತಿ ಎನ್ನುವ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ.

ಬಂಡಾಯ ಕಾವ್ಯಗಳಲ್ಲಿ ಶೋಷಿತ ಸಮಾಜ ವಸ್ತುವಾಗುತ್ತದೆ. ಇಂತಹ ಶೋಷಿತ ವ್ಯವಸ್ಥೆಯ ಒಳನೋಟಗಳೇ ಇಲ್ಲಿನ ಭಿನ್ನ ನೆಲೆಯಾಗಿ ರೂಪುಗೊಳ್ಳುತ್ತವೆ.

ಬಂಡಾಯ ಕಾವ್ಯದ ಸ್ವರೂಪವನ್ನು ಕಾವ್ಯ ರಚನೆಯ ಹಂತದಲ್ಲಿ ಕಾಣಬಹುದು.

೧. ಜಾತಿ ಸಮಸ್ಯೆಗೆ ಸಂಬಂಧಿಸಿದಂತೆ ಅಸ್ಪೃಶ್ಯತೆ, ವರ್ಣವ್ಯವಸ್ಥೆ.

೨. ಆರ್ಥಿಕ ಸಮಸ್ಯೆಗಳಾದ ಹಸಿವು, ಬಡತನ, ಅಪರಾಧ, ಅನಕ್ಷರತೆ.

೩. ಸ್ತ್ರೀ ಶೋಷಣೆ(ಅತ್ಯಾಚಾರ, ಲೈಂಗಿಕ, ಸಾಮಾಜಿಕ ಅಸಮಾನತೆ).

೪. ರಾಜಕೀಯ ಅಸಮಾನತೆ.

೫. ನಂಬಿಕೆ, ಸಂಪ್ರದಾಯ, ಆಚರಣೆಗಳು

ಮುಂತಾದ ಅಂಶಗಳನ್ನು ಒಳಗೊಂಡಂತೆ ಬಂಡಾಯ ಕಾವ್ಯದ ಸ್ವರೂಪವನ್ನು ಗುರುತಿಸಬಹುದು. "ಬಂಡಾಯ ಸಾಹಿತ್ಯದ ಲಕ್ಷಣಗಳಲ್ಲಿ ಮಾನವೀಯತೆಯೂ ಚಳವಳಿಯ ಒಂದು ಪ್ರಮುಖ ತಳಹದಿಯೂ ಆಗಿದೆ. ಭ್ರಮೆಯಿಂದ ಹೊರಬಂದು, ನೈಜತೆಯನ್ನು ಹುಡುಕಿದರೆ ಮಾನವೀಯ ನೆಲೆ ಸಿಗುತ್ತದೆ. ಬಂಡಾಯ ಕವಿ, ಸಾಹಿತಿಗಳು ಈ ಕೆಲಸವನ್ನೇ ಮಾಡಿಕೊಂಡು ಬಂದಿದ್ದಾರೆ. ಬಹುತೇಕ ಬಂಡಾಯ ಕವಿಗಳು ಈ ಕಾರಣಕ್ಕಾಗಿಯೇ ಮಾನವತವಾದಿಗಳಾಗಿದ್ದಾರೆ. ಮನುಷ್ಯನ ಬದುಕಿಗೆ ಹೆಚ್ಚು ಒತ್ತನ್ನು ನೀಡಿದ್ದಾರೆ"(ಅದೇ; ಪು. ೮-೯) ಎಂದು ಬಿ. ರಾಜಣ್ಣ ಅವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ. ಮನುಷ್ಯನೇ ಎಲ್ಲದಕ್ಕೂ ಕೇಂದ್ರಬಿಂದು ಎಂದು ರಾಜಣ್ಣ ಅವರ ಮಾತುಗಳು ಅರ್ಥೈಸುತ್ತದೆ. 'ಖಡ್ಗವಾಗಲೀ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಿಮಿತ್ರ' ಎಂಬ ಘೋಷವಾಕ್ಯದೊಂದಿಗೆ ಬಂಡಾಯ ಸಾಹಿತ್ಯ ಅಸ್ತಿತ್ವಕ್ಕೆ ಬಂದಿತು.

"ಬಂಡಾಯ ಸಾಹಿತ್ಯ ಹುಟ್ಟಿಗೆ ದಲಿತ ಸಾಹಿತ್ಯವೇ ಕಾರಣವಾಯಿತು. ೧೯೭೯ರಲ್ಲಿ ಧರ್ಮಸ್ಥಳದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಚೆನ್ನಣ್ಣ ವಾಲೀಕರ, ಬೋಳ ಬಂಡೆಪ್ಪ ಅವರ ಪತ್ರದಲ್ಲಿ ಸಮ್ಮೇಳನದಲ್ಲಿ ದಲಿತ ಗೋಷ್ಠಿಗೆ ಅವಕಾಶ ಮಾಡಿಕೊಡಬೇಕೆಂಬ ಬೇಡಿಕೆ ಇಟ್ಟಾಗ ಅದನ್ನು ನಿರಾಕರಿಸಿ "ಸಾಹಿತ್ಯದಲ್ಲಿ ದಲಿತ" ಬಲಿತ, ಗಿಲಿತ ಎಂಬುದು ಇಲ್ಲವೆಂದು ಅಂದಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ನಿರಾಕರಿಸಿ ಹೇಳಿಕೆ ನೀಡಿದಾಗ, ಅದನ್ನು ಪ್ರತಿಭಟಿಸಿ, ಅದೇ ಸಂದರ್ಭದಲ್ಲಿ ಒಂದು ಪರ್ಯಾಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ರೂಪಿಸಿದರು. ಅದೇ ಬಂಡಾಯ ಸಾಹಿತ್ಯ ಸಮ್ಮೇಳನ, ಬದುಕು ಬೇರೆ ಅಲ್ಲ, ಬರಹ ಬೇರೆ ಅಲ್ಲ ಎಂದು ಘೋಷಿಸಿಕೊಂಡ ಪ್ರಗತಿಪರ ಲೇಖಕರು ಕನ್ನಡದಲ್ಲಿ ಬಂಡಾಯ ಸಾಹಿತ್ಯ ರಚನೆಯಲ್ಲಿ ತೊಡಗಿದರು" ಎಂದು ವಿ. ಮುನಿವೆಂಕಟಪ್ಪನವರು ಬಂಡಾಯ ಸಾಹಿತ್ಯದ ಉಗಮದ ಹಿನ್ನೆಲೆಯನ್ನು ವಿವರಿಸಿದ್ದಾರೆ(ಮುನಿವೆಂಕಟಪ್ಪ.ವಿ.; ೨೦೦೨; ಪು. ಪ್ರಸ್ತಾವನೆ).

ಹೊರೆಯಾಲ ದೊರೆಸ್ವಾಮಿ, ಪ್ರಭುಸ್ವಾಮಿ ಮಠ, ಚಂದ್ರಶೇಖರ ತಾಳ್ಯ, ಮಲ್ಲಿಕಾರ್ಜುನ ಹಿರೇಮಠ, ಆನಂದ ಝುಂಜರವಾಡ, ಅಲ್ಲಮಪ್ರಭು ಬೆಟ್ಟದೂರು, ಗವಿಸಿದ್ಧ ಎನ್. ಬಳ್ಳಾರಿ, ಶೂದ್ರ ಶ್ರೀನಿವಾಸ, ಹೋ.ಮ. ಪಂಡಿತಾರಾಧ್ಯ, ಬಿ.ಟಿ. ಲಲಿತಾನಾಯಕ್, ಪ್ರಭು ಖಾನಾಪುರೆ, ಎಂ. ಲೋಕೇಶ, ದಿ.ಬಿ. ಢಂಗ, ಬಿ.ಎಸ್. ದುಂಡರಡ್ಡಿ, ಸತ್ಯಾನಂದ ಪಾತ್ರೋಟ, ಮಹಾಬಲೇಶ್ವರ

ಕಾಟ್ರಹಳ್ಳಿ, ಧರಣೇಂದ್ರ ಕುರಕುರಿ, ಆರ್.ಜಿ. ಹಳ್ಳಿ ನಾಗರಾಜ, ಬಸವರಾಜ ಸಬರದ ಮೊದಲಾದವರು ಬಂಡಾಯ ಕಾಲಘಟ್ಟದ ಕಾವ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಇವರು ಗಾಂಧೀಜಿಯನ್ನು ತಮ್ಮ ಕಾವ್ಯಗಳಲ್ಲಿ ಕಂಡರಿಸಿದುದನ್ನು ಇಲ್ಲಿ ನೋಡಲಾಗಿದೆ.

ಬ್ರಿಟೀಷರ ಆಳ್ವಿಕೆಯ ಪರದಾಸ್ಯದಲ್ಲಿ ನಮ್ಮ ಜನತೆಗೆ ನಮ್ಮ ನಾಡು-ನುಡಿ ಅಥವಾ ಸ್ವಾತಂತ್ರ್ಯದ ಪರಿಕಲ್ಪನೆಯೇ ಇಲ್ಲದೇ ಬರೀ ಧರ್ಮ, ಜಾತಿ, ಮತ ಎಂದು ಸಂಕುಚಿತ ಗೋಡೆಗಳನ್ನು ನಿರ್ಮಿಸಿಕೊಂಡವು. ನಂತರ ಅವು ನಶಿಸಿ ಹೋದಾಗ ಮುಂದೇನು ಎಂದು ಪರಿತಪಿಸುವಾಗ ದೇವರಂತೆ ಈ ನಾಡಿಗೆ ಗಾಂಧೀ ಆಫ್ರಿಕಾದಿಂದ ಬಂದರು. ಗಾಂಧೀಜಿ ಹಾಕಿದ ಹೆಜ್ಜೆಗಳಲ್ಲಿ ಹೆಜ್ಜೆ ಹಾಕಿ ಜೀವನ ಸಾರ್ಥಕಗೊಳಿಸಿದೆವು ಎಂದು 'ಹೊರೆಯಾಲ ದೊರೆಸ್ವಾಮಿ' ಅವರು ತಮ್ಮ "ನಿನ್ನದೇನು ತಪ್ಪು" ಎಂಬ ಕವಿತೆಯಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ.

ಅಂದಿನಿಂದಲೂ ನಾವು
ಹೀಗೆಯೇ ಬಾಳಿದೆವು
ನೀ ಬರುವ ವರೆಗೆ
ಧರ್ಮ ಮತ ಜಾತಿ ಎಂದು
ನಮ್ಮ ಮನೆಯಲ್ಲೆ.
ಗೋಡೆಗಳ ಏರಿಸುತ
ಆಮೇಲೆ ಉಜ್ಜಿ ನಶಿಸಿ
ಇನ್ನೇನು ಮುಂದೇನು ಎಂದು
ಕಣ್ ಕಣ್ ಬಿಟ್ಟು
ತಲೆಯೆತ್ತಿ ತಡಕುವಾಗ
ನೀನೊಬ್ಬ ಸಿಕ್ಕಿದೆ.
ಭಾಗ್ಯವಂತರೊ ನಾವು!"

ಗಾಂಧೀಜಿ ಬರುವಿಕೆಯಿಂದ ಪರದಾಸ್ಯದಿಂದ ಮುಕ್ತರಾಗಿ ಸಾರ್ಥಕ ಜೀವನ ನಡೆಸಿದೆವು. ಆದರೆ ಸ್ವತಂತ್ರ ಭಾರತದಲ್ಲಿ ನೆಮ್ಮದಿಯ ಜೀವನ ಸಾಗಿಸಲು ಆಗುತ್ತಿಲ್ಲ. ಗಾಂಧೀಜಿ ಹಾಕಿಕೊಟ್ಟ ದಾರಿಯಲ್ಲಿ ನಡೆದರೂ ಜೀವನವೂ ಕಷ್ಟವಾಗುತ್ತಿದೆ -

"ನಿನ್ನ ದುಡಿತದಿ ನಾವು
ಜೀವವನು ಹೊರೆಯುತ್ತ
ಅಲ್ಲೆಲ್ಲೊ ದಿಬ್ಬಗಳ
ಅವುಕಿ ಸರಿ ಮಾಡುತ್ತ
ಕುಳಿಯನ್ನು ಮುಚ್ಚುತ್ತ
ಸೊರಗಿ ಮಲಗಿದ್ದೇವೆ
ಗಾಂಧಿ;
ಕ್ಷಮಿಸು ನಿನ್ನೆದೇನು ತಪ್ಪು?"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೮೮; ಪು. ೧೬೧)

ಗಾಂಧೀಜಿಯನ್ನು ಕ್ಷಮೆಯಾಚಿಸುತ್ತಾ, ಸ್ವತಂತ್ರ ಭಾರತದಲ್ಲಿ ನಿನ್ನನ್ನು ಅನುಸರಿಸುವುದರಲ್ಲಿ ಹಿಂದೆ ಬಿದ್ದಿದ್ದೇವೆ. ಹಾಗಾಗಿ ತಪ್ಪೆಲ್ಲ ನಮ್ಮದು. ನಿನ್ನದು ಯಾವ ತಪ್ಪು ಇಲ್ಲ. ಕ್ಷಮಿಸು ಎಂದು ಕವಿ ಇಲ್ಲಿ ಚಿತ್ರಿಸಿದರೆ, ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣಿಗಳು ಮತ್ತು ಗಾಂಧಿವಾದಿಗಳು ಎಂದು ಮುಖವಾಡ ಧರಿಸಿದವರು ಗಾಂಧೀಜಿಯ ತತ್ವಗಳು, ಮೌಲ್ಯಗಳನ್ನು ಬಹಿರಂಗವಾಗಿ ಅಲ್ಲಗಳೆಯದೇ ತಮ್ಮ ಮನಸ್ಸಿನ ವಿರುದ್ಧ ನಡೆದುಕೊಳ್ಳದೇ ಇಬ್ಬಂದಿತನದಲ್ಲಿರುವವರ ಮನಸ್ಸಿನೊಳಗೆ ಗಾಂಧಿ ಎಂದರೆ ಎಂತಹ ಭಯ ಎಂಬುದನ್ನು ಕವಿ ಪ್ರಭುಸ್ವಾಮಿ ಮಠ ಅವರು 'ಬಾಪೂವಿಗೆ' ಎಂಬ ಕವಿತೆಯಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ.

"ಎಂಥ ಮೊಂಡನೋ ನೀನು?
ಸತ್ತು ಸುಡುಗಾಡು
ಸೇರಿದೆಯೆಂದು
ನಿಶ್ಚಿಂತೆಯಿಂದಿದ್ದರೆ
ಗಸ್ತಿ ತಿರುಗುತ
ಮತ್ತೆ,
ಎಚ್ಚರಿಸುವೆ?"

ಗಾಂಧೀಜಿ ಸತ್ತರೂ ಗಾಂಧೀಜಿಯ ಮೌಲ್ಯಗಳು ಸಾಯಲಿಲ್ಲ. ಅವು ದಿನದಿನಕ್ಕೂ ಪ್ರಸ್ತುತವೆನಿಸುತ್ತವೆ ಮತ್ತು ಮಲಗಿರುವ ಸಮಾಜವನ್ನು ವ್ಯಕ್ತಿಗಳನ್ನು ಎಚ್ಚರಿಸುತ್ತಿರುತ್ತವೆ ಎಂದು ಹೇಳುತ್ತಾ ಮುಂದುವರೆದು -

"ಏನೇ ಅನ್ನು ಸತ್ತು ಬದುಕಿದ ಬೇತಾಳ ನೀನು
ಬಿಸಿಲ ನಡುನೆತ್ತಿಗೇರಿದಾಗಲೂ
ನೀ ಬರುವ ಭಯ
ತಪ್ಪದು ನಮಗೆ
ಯಾಕೆ ಗೊತ್ತಾ?
ಮತ್ತೆಲ್ಲಿ ಬರುತ್ತೀಯೋ
ನಮ್ಮ ಕುರುಕ್ಷೇತ್ರ ಮಧ್ಯೆ
ಗೀತೆಯ ಗಂಟು ಬಿಚ್ಚಲಿಕ್ಕೆಂದು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೬೮; ಪು. ೧೬೨-೧೬೩)

ದೇಶವನ್ನೇ ಕೊಳ್ಳೆ ಹೊಡೆಯುವ ರಾಜಕೀಯ ಧುರೀಣರಿಗೆ ಅಥವಾ ಅನ್ಯಾಯದ ಮಾರ್ಗದಲ್ಲಿ ನಡೆದುಕೊಳ್ಳುವವರಿಗೆ ಗಾಂಧೀಜಿ ಸತ್ತರೂ ಗಾಂಧೀಜಿಯ ಮೌಲ್ಯಗಳು, ತತ್ವಗಳು ಭಯವನ್ನು ಹುಟ್ಟಿಸುತ್ತವೆ.

ಗಾಂಧೀಜಿ ಸರಳವಾಗಿ ಜೀವಿಸಿದವರು. ಉದಾತ್ತವಾಗಿ ಆಲೋಚನೆ ಮಾಡಿದವರು. ಸಮುದಾಯ ಸಮುದಾಯಗಳ ಮಧ್ಯೆ ದೇಶ-ದೇಶಗಳ ಮಧ್ಯ ಬಾಂಧವ್ಯಗಳನ್ನು ಬೆಸೆದವರು.

ಮಾನವೀಯ ಮೌಲ್ಯಗಳನ್ನು ಬಿತ್ತರಿಸಿದವರು. ಇಂತಹ ಅಸಾಮಾನ್ಯ ವ್ಯಕ್ತಿತ್ವ ಹೊಂದಿದ ಗಾಂಧೀಜಿ ನಮ್ಮ ದೇಶದಲ್ಲಿ ಹುಟ್ಟಿದ್ದು ಅದೃಷ್ಟವೇ ಸರಿ. ಆದರೆ ನಾವು ಅವರನ್ನು ಅನುಸರಿಸುವಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ ಎಂದು ಮಲ್ಲಿಕಾರ್ಜುನ ಹಿರೇಮಠ ಅವರು "ನಾವಿನ್ನು ಕಲಿಯಲಿಲ್ಲ ಬಾಪು" ಎಂಬ ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ.

"ಮಾತು ಮಾತುಗಳ ನಡುವೆ ಕಂದರ
ಮಾತು, ಮಾತುಗಳ ನಡುವೆ
ಕಂದರ ಕಂದರ
ಬ್ರಿಡ್ಜ ಕಟ್ಟುವುದನ್ನು ಕಲಿಯಲಿಲ್ಲ
ನಿನ್ನ ಹಾಗೆ.

ಬಾಪೂ
ಯುಗ ಯುಗಕೆ ಪ್ರಾಣ ತೆತ್ತಿರಿ ನೀವು
ಆದರೂ ನಾವಿನ್ನು ಕಲಿಯಲಿಲ್ಲ ಬಾಪು
ನಿಮಗೆ ತುಬಾಕಿ
ಹಾರಿಸುವುದನ್ನು
ನಾವು ಬಿಟ್ಟಿಲ್ಲ."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೭೮; ಪು. ೧೬೬)

ಹೀಗೆ ಗಾಂಧೀಜಿಯವರ ಆಲೋಚನೆ, ಮೌಲ್ಯ, ತತ್ವಗಳನ್ನು ಪಾಲಿಸದೇ ಹೋದರೂ ಅವುಗಳಿಗೆ ಧಕ್ಕೆ ತರುವುದನ್ನು ಬಿಡುತ್ತಿಲ್ಲ. ಹೀಗಾಗಿ ಗಾಂಧೀಜಿಯವರನ್ನು ಅನುಸರಿಸುವುದು ಬಹು ಸಂಕೀರ್ಣವಾದದ್ದು ಎಂದು ಪ್ರತಿನಿಧಿಸಲಾಗಿದೆ. ಗಾಂಧೀಜಿ ಸಂಕೀರ್ಣ ವ್ಯಕ್ತಿತ್ವದವರು. ಅವರು ತೋರಿಸಿಕೊಟ್ಟ ಮಾರ್ಗಗಳು ಅಷ್ಟು ಸಂಕೀರ್ಣವಲ್ಲದಿದ್ದರೂ ಸಹ ಅವುಗಳು ಸ್ವತಂತ್ರ್ಯ ಭಾರತದಲ್ಲಿ ಯಾರಿಗೂ ಬೇಕಾಗಿಲ್ಲ ಎಂಬುದನ್ನು "ಅವರು" ಎಂಬ ಕವಿತೆಯಲ್ಲಿ ಆನಂದ ಝುಂಜರವಾಡ ಎಂಬುವರು ಹೀಗೆ ವ್ಯಕ್ತಪಡಿಸಿದ್ದಾರೆ.

"ಅವರು ಹಚ್ಚಿಟ್ಟ ದೀಪಕ್ಕೆ ಎಣ್ಣೆ ಎರೆಯುವವರಿಲ್ಲ
ಚಿವುಟುವವರಿಲ್ಲ ಕಪ್ಪು-ಕುಡಿಗೆ
ಹೊಸ ಬತ್ತಿಗಳ ಹೊಸೆದು ಹೊತ್ತಿಸುವವರಿಲ್ಲ
ಹೇಗೋ ನಡೆದಿವೆ ಕತ್ತಲೆಯ ನಡಿಗೆ
ಸರಳ ಬದುಕಿನ ಪಾಠ ಕಲಿಯುವವರೆ ಇಲ್ಲ
ಸತ್ಯವಂತೂ ಈಗ ಬೇಡವಾದ ಮಾತು
ಕೋಲೂರಿ, ನಿಧಾನ ಹೆಜ್ಜೆ ಇಡುವ ಎಚ್ಚರದರಿವು ಯಾರಿಗೂ ಇಲ್ಲ
ಮಾಂಸದಂಗಡಿಯಲ್ಲಿ ಕರುಣೆಯನು ಹುಡುಕುತಿದೆ ಕಟ್ಟಿರುವ ಹೋತು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೭೮; ಪು. ೧೬೭)

ಗಾಂಧಿ ದೇಶವನ್ನು ಪರರ ದಾಸ್ಯದಿಂದ ಮುಕ್ತಗೊಳಿಸಿ ಸ್ವತಂತ್ರವನ್ನಾಗಿಸಿದ. ಸ್ವತಂತ್ರ ಭಾರತದ ಆಡಳಿತ ಯಂತ್ರವನ್ನು ಗಾಂಧಿ ತೋರಿಸಿದ ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗುವವರಿಲ್ಲ. ಹೇಗೋ ಕತ್ತಲೆಯಲ್ಲಿ ತಡವರಿಸಿಕೊಂಡು ನಡೆದಾಡುವಂತಾಗಿದೆ. ಸತ್ಯ, ಶಾಂತಿ, ಸರಳ ಜೀವನ ಮೊದಲೇ ಬೇಡವಾಗಿದೆ. ಆಲೋಚಿಸಿ ಹೆಜ್ಜೆ ಇಡುವ ಮನಸ್ಥಿತಿ ಯಾರಿಗೂ ಇಲ್ಲವಾಗಿದೆ. ಸ್ವತಂತ್ರ ಭಾರತದ ಆಡಳಿತ ಅಥವಾ ಜನರ ಜೀವನ ಯಾಂತ್ರಿಕವಾದದ್ದು. ಗಾಂಧೀಜಿಯ ತತ್ತ್ವಾದರ್ಶಗಳು ಒಂದೊಂದಾಗಿ ಕಳಚಿ ಹೋಗುತ್ತವೆ ಎಂದು ವ್ಯಕ್ತಗೊಂಡಿದೆ.

ಕವಿ ಎಂ.ಡಿ. ಗೋಗೇರಿಯವರು 'ಜನಿಸಿ ಬಾ ಗಾಂಧಿ' ಎಂಬ ಕವನದಲ್ಲಿ ಸ್ವತಂತ್ರ ಭಾರತದ ಸಮಾಜದ ಅನ್ಯಾಯಗಳನ್ನು ತೊಳೆದು ಹಾಕಲು ಗಾಂಧೀಜಿ ಪುನಃ ಹುಟ್ಟಿ ಬರುವಂತೆ ಹೀಗೆ ವ್ಯಕ್ತಪಡಿಸಿದ್ದಾರೆ.

"ನೆನೆಸುವದು ಜಗವೆಲ್ಲ ಜನಿಸಿ ಬಾರಯ್ಯ ತಂದೆ
ದೀನ ದಲಿತರು ನಿನ್ನ ಬೆನ್ನ ಹಿಂದೆ
ಬಡವ-ಬಲ್ಲಿದರೆಂಬ ಮೇಲು-ಕೀಳುಗಳೆಂಬ
ಕೊಳೆಯ ಬೆಳಗಲು ಮುಂದೆ ಕಾತರಿಸಿ ಬಂದೆ
ಅಹಿಂಸೆ ನಿನ್ನಯ ಉಸಿರು ನ್ಯಾಯ ಅನ್ನವೇ ನೀರು
ಆತ್ಮಶುದ್ಧಿಗೆ ಸತ್ಯ ನಿತ್ಯ ದೇವರು
ಅನ್ಯಾಯ ಅಧಿಕಾರ ಸುಳ್ಳು ಆಡಂಬರ
ಕನಲಿ ಕಂಗಾಲಾದೆ ನೋಡಿ ಬಡವರ
ಪಾರತಂತ್ರ್ಯದ ಬಲೆಗೆ ಸಿಲುಕಿರಲು ಭಾರತವು
ನಿನ್ನ ಬರುವನೆ ಅಹಿಂಸೆ ದಂಡವ ಪಿಡಿದು
ಸ್ವಾತಂತ್ರ್ಯವನೆ ಇತ್ತೆ ಬಾಳು ತೆತ್ತು.

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೭೫)

ಗಾಂಧೀಜಿ ಜನಸಾಮಾನ್ಯರೊಂದಿಗೆ ಸರಳ ಜೀವನವನ್ನು ನಡೆಸಿದವರು. ಅಹಿಂಸೆ, ಶಾಂತಿ, ನ್ಯಾಯ, ಸತ್ಯ ಮುಂತಾದ ಮೌಲ್ಯಗಳನ್ನೂ ಮೈಗೂಡಿಸಿಕೊಂಡು ಪ್ರತಿನಿತ್ಯ ಅನುಸರಿಸುತ್ತಿದ್ದವರು. ಅಹಿಂಸೆಯೇ ಉಸಿರು, ನ್ಯಾಯವೇ ಅನ್ನವಾಗಿ, ಸತ್ಯವೇ ದೇವರಾಗಿದ್ದವು ಎಂದು ಬಾಳಿದರು. ದಕ್ಷಿಣ ಆಫ್ರಿಕಾದಿಂದ ಬಂದು ಪಾರತಂತ್ರ್ಯದ ಬಲೆಗೆ ಸಿಲುಕಿದ ಈ ಭಾರತವನ್ನು ಅಹಿಂಸೆಯ ದಂಡದಿಂದ ಬ್ರಿಟೀಷರನ್ನು ಹೊಡೆದೋಡಿಸಿದರು. ಇಂತಹ ಮಹಾತ್ಮನು ಇಂದಿನ ಸಮಾಜದ ಕೊಳೆಯನ್ನು ತೊಳೆಯಲು ಮತ್ತು ಗಾಂಧೀಜಿನೇ ಹುಟ್ಟಿಬರಬೇಕಾಗಿದೆ. ಅದನ್ನು ಸರಿಪಡಿಸಲು ಯಾರಿಂದಲೂ ಸಾಧ್ಯವಿಲ್ಲವೆಂದು ಚಿತ್ರಿಸಲಾಗಿದೆ.

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಗಾಂಧೀಜಿ ಒಬ್ಬ ವ್ಯಕ್ತಿಯಾಗಿರದೆ ವ್ಯಕ್ತಿತ್ವವಾಗಿ, ಆದರ್ಶವಾಗಿ, ಆರಾಧಕ ವ್ಯಕ್ತಿಯಾಗಿ, ಶೋಷಣೆ ದಬ್ಬಾಳಿಕೆಗಳನ್ನು ದಮನಗೊಳಿಸುವ ಶಕ್ತಿಯಾಗಿ ಕಂಡಿದ್ದಾರೆ.

ಸ್ವಾತಂತ್ರ್ಯ ಭಾರತದಲ್ಲಿ ಈ ಮೇಲಿನಂತೆ ಕಂಡರೂ ಅವರ ತತ್ವಚಿಂತನೆಗಳನ್ನು, ಮೌಲ್ಯಗಳನ್ನು ಬಂಡವಾಳವಾಗಿಸಿಕೊಂಡು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಪ್ರವೃತ್ತಿ ಬೆಳೆದು ಬರುತ್ತಿದೆ ಎಂದು ಕವಿ ಅಲ್ಲಮಪ್ರಭು ಬೆಟ್ಟದೂರು ಅವರ 'ಗಾಂಧಿ' ಎಂಬ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

"ಗಾದಿ ಏರುವವರಿಗೆ
ಗಾದಿ ಏರುವವರೆಗೆ
ಟೊಪ್ಪಿಗೆ ಹಾಕುವವರಿಗೆ
ಟೊಪ್ಪಿಗೆ ಹಾಕುವವರೆಗೆ
ಬೂಟಿನಿಂದ ತುಳಿಯುವವರಿಗೆ
ಬೂಟಿನಿಂದ ತುಳಿಸುವವರೆಗೆ
ಗಾಂಧಿ ಬೇಕು

ಗಾಂಧಿ ಬೇಕೇ ಬೇಕು ಸ್ವಾಮಿ
ಗಾಂಧಿ ಬೇಕೇ ಬೇಕು
ಸಂಧಿ ಸಾಧಿಸಲಿಕ್ಕೆ
ಮಂದಿ ಕೂಡಿಸಲಿಕ್ಕೆ
ಚಿತ್ರ ಮಾಡಲಿಕ್ಕೆ
ಗಾಂಧಿ ಬೇಕೇ ಬೇಕು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೭೯-೧೮೦)

ಗಾದಿಗೇರುವುದೇ ಈಗಿನ ಗಾಂಧಿವಾದವಾಗಿದೆ. ಮೋಸವೋ - ಪಾಸವೋ, ಹಿಂಸೆಯೋ - ಅಹಿಂಸೆಯೋ, ಕಾಲು ಹಿಡಿಯುವುದೋ - ಕೈ ಹಿಡಿಯುವುದೋ ಯಾವುದೇ ಮಾರ್ಗದಲ್ಲಿ ಸೀಟು(ಅಧಿಕಾರ) ಹಿಡಿಯುವುದೇ ಈಗಿನ ನಿಜವಾದ ಗಾಂಧಿವಾದವಾಗಿದೆ. ಹಾಗಾಗಿ ಗಾಂಧೀಜಿಯ ತತ್ವಗಳು, ಆದರ್ಶಗಳು ಗಾಂಧಿವಾದದ ಮುಖವಾಡ ಧರಿಸಿದವರ ಬಂಡವಾಳದ ಅಸ್ತ್ರಗಳಾಗಿವೆ ಎಂದು ಪ್ರತಿನಿಧಿಸಲಾಗಿದೆ.

ಗಾಂಧೀಜಿ ತತ್ವಗಳನ್ನು, ಚಿಂತನೆಗಳನ್ನು ಬಂಡವಾಳದ ಅಸ್ತ್ರಗಳನ್ನಾಗಿ ಬಳಸಿಕೊಳ್ಳುವ ಈ ಸಮಾಜದಲ್ಲಿ ಇನ್ನೂ ಅವರ ಹೆಸರನ್ನು ಯಾವ ಯಾವ ಬಗೆಯಲ್ಲಿ ಬಳಸಿಕೊಳ್ಳಬೇಕೆಂಬುದನ್ನು "ರಾಷ್ಟ್ರಪಿತನೊಂದಿಗೆ" ಎಂಬ ಕವನದಲ್ಲಿ ಆರ್ಕೆ ಮಣಿಪಾಲ ಅವರು ಹೀಗೆ ಅಭಿವ್ಯಕ್ತಿಸಿದ್ದಾರೆ.

"ಹೊಲೆಬೀದಿಗಳಿಗೆ ನಿನ್ನ ಹೆಸರಿಟ್ಟು
ಕೈ ಒರೆಸಿಕೊಂಡಿದ್ದೇವೆ(ಖಾದಿ ಟವಲಲ್ಲಿ!)
ಶಕದಾರಿ ನಿನ್ನ ಸರಕಾರೀ ಕಛೇರಿಗಳಲ್ಲಿ
ಸಾಗುವನಿ ಪ್ರೇಮಿನೊಳಗೆ ಭದ್ರವಾಗಿಟ್ಟು ಪ್ರೇಮಿಸಿದ್ದೇನೆ.
(ಮೊಳೆ ಜಡಿದು ಕನ್ನಡಿಯೊಳಗೆ ಹುಗಿದು
ಬಿರುಕು ಕಾಣದ ಹಾಗೆ ಗೋಡೆಗೆ

ಬಡಿದಿದ್ದೇವೆ; ಬಣ್ಣದ ಮಾಲೆ ಗಿಡಿದಿದ್ದೇವೆ)
ನಿನ್ನ ಹೆಸರಲ್ಲೇ ಭೋಜನಶಾಲೆ
ಮದ್ಯದಂಗಡಿ ತೆರೆದಿದ್ದೇವೆ.
ಖಾದಿಗೆ ಹಾದಿ ತೋರಿಸಿದ್ದೇವೆ."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೮೫)

ಗಾಂಧೀ ಮತ್ತು ಗಾಂಧೀಜಿಯ ಹೆಸರು ಬೇಕಾಗಿರುವುದು ರಸ್ತೆಗಳ ಓಣಿಗಳ ಸಂದಿಗೊಂದಿಗಳಲ್ಲಿ ಚೌಕ-ವೃತ್ತಗಳಲ್ಲಿ ಗಾಂಧಿಯ ಕರಿ ವಿಗ್ರಹ ನಿಲ್ಲಿಸಿ ಕಾಗೆಗಳನ್ನು ಹೊಡೆಯಲಿಕ್ಕೆ ಎಂದು ಈ ಕವಿತೆಯ ಆಶಯಗಳಲ್ಲೊಂದು ಮತ್ತು ಸರ್ಕಾರಿ ಕಛೇರಿಗಳ ಗೋಡೆಗಳ ಬಿರುಕು ಮುಚ್ಚಲು ಗಾಂಧೀಜಿಯ ಫೋಟೋ ಬಳಸಿಕೊಳ್ಳಲಾಗುತ್ತದೆ. ಗ್ರಂಥಾಲಯದ ಒಂದು ಚೌಕಟ್ಟಿನಲ್ಲಿ ಹಿಡಿದಿಡಲು ಭೋಜನ ಶಾಲೆಗಳಿಗೆ, ಮದ್ಯದಂಗಡಿಗಳಿಗೆ ಹೆಸರಿಡಲು ಗಾಂಧೀಜಿಯ ಹೆಸರನ್ನು ಬಳಸಿಕೊಳ್ಳಲಾಗುತ್ತದೆ. ಇದು ಒಂದು ರೀತಿಯಲ್ಲಿ ಗಾಂಧೀಜಿಯ ಹೆಸರನ್ನು ಖಾಸಗಿ ಬಂಡವಾಳವನ್ನಾಗಿಸಿಕೊಳ್ಳಲಾಗಿದೆ ಎಂದು ಪ್ರತಿನಿಧಿಸಲಾಗಿದೆ.

ಸ್ವತಂತ್ರ ಭಾರತದಲ್ಲಿ ಗಾಂಧೀಜಿ ಬದುಕಿದ್ದರೆ ಆತನಿಗೆ ಒದಗುವ ಸ್ಥಿತಿ ಅಥವಾ ಆತಂಕವನ್ನು ಹೋ.ಮ. ಪಂಡಿತಾರಾಧ್ಯ ಅವರು 'ಗಾಂಧೀಜಿ' ಎಂಬ ಕವಿತೆಯಲ್ಲಿ ಹೀಗೆ ಚಿತ್ರಿಸಿದ್ದಾರೆ.

"ಗಾಂಧೀಜಿ ಎನ್ನುವ ಹೆಸರು
ಸ್ವಾತಂತ್ರ್ಯಕ್ಕೆ ಮೂಲಮಂತ್ರ ಮೊದಲು
ಗಾಂಧೀ ಎನ್ನುವ ಹೆಸರೇ
ಬ್ರಿಟಿಷರಿಗೆ ಬರಸಿಡಿಲು
ಆತನಿದ್ದರೂ ಈಗ ಅದಲು ಬದಲು.

ಸ್ವಾತಂತ್ರ್ಯ ಪಿಂಚಣಿಗೆ ಗಾಂಧಿ ಅರ್ಜಿಯನಿಟ್ಟು
ನಿಲ್ಲುತ್ತಿದ್ದನೋ ತಹಶೀಲದಾರ್ರ ಮುಂದೆ ಕೈ ಜೋಡಿಸಿ
ಆಗ ಬಾ ಈಗ ಬಾ ಹೋಗಿ ಬಾ ಎನ್ನುವ
ತಹಶೀಲ್ದಾರರುಗಳೆಲ್ಲಾ ಗಾಂಧಿಯನೇ ಅಡ್ಡಾಡಿಸಿ
ತಿರುತಿರುಗಿ ಗಾಂಧಿ ಕೋಲು ಸವೆಯುವತನಕ
ಎಡೆಬಿಡದೇ ಕಡೆವರೆಗೆ ಪಿಂಚಣಿಗೆ ಹೋರಾಡಿದ

ಗಾಂಧೀಜಿ ಸತ್ತಂತ ಸಿಡಿಲ ಸುದ್ದಿಯ ಕೇಳಿ
ದುಃಖಿಸಿತು ಸರಕಾರ ರಜೆಯನ್ನು ನೀಡಿ
ದುಃಖದನುಕಂಪದ ತೋಪನು ಸಿಡಿಸಿ
ಭಗವದ್ಗೀತೆಯ ಪಠಿಸಿ ಬ್ಯಾಂಡನ್ನು ಸಿಡಿಸಿ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೧೦-೨೧೧)

ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿ ಹೆಸರು ಸ್ವಾತಂತ್ರ್ಯಕ್ಕೆ ಮೂಲಮಂತ್ರವಾಗಿತ್ತು. ಗಾಂಧೀಜಿ ಬ್ರಿಟೀಷರಿಗೆ ಸಿಡಿಲಾಗಿದ್ದರು. ಆದರೆ ಇಂದು ಅದೆಲ್ಲ ಅದಲು ಬದಲು, ಸ್ವಾತಂತ್ರ್ಯ ಹೋರಾಟಗಾರರ ದುಃಸ್ಥಿತಿಯನ್ನು ಗಾಂಧೀಜಿಯನ್ನು ಸಾಂಕೇತಿಕವಾಗಿಟ್ಟುಕೊಂಡು ಚಿತ್ರಿಸಲಾಗಿದೆ. ಸ್ವತಂತ್ರ ಭಾರತದಲ್ಲಿ ಗಾಂಧೀಜಿಯವರ ತತ್ವ ಆದರ್ಶಗಳಿಗೆ ಬೆಲೆ ಇಲ್ಲ ಎಂಬ ಆತಂಕವನ್ನು ವ್ಯಕ್ತಪಡಿಸಲಾಗಿದೆ.

ಪ್ರಭು ಖಾನಾಪುರ ಅವರು 'ಗಾಂಧಿ' ಕವನದಲ್ಲಿ ಗಾಂಧೀಜಿಯವರು ನಮ್ಮ ದೇಶದಲ್ಲಿ ಹುಟ್ಟಬಾರದಿತ್ತು. ಬೇರೆ ಎಲ್ಲಾದರೂ ಹುಟ್ಟಿದ್ದರೆ ಇಲ್ಲಿಗಿಂತ ಹೆಚ್ಚು ಮರ್ಯಾದೆ, ಗೌರವ ಸಿಗುತ್ತಿತ್ತು ಎಂದು ಗಾಂಧಿಯನ್ನು ಕಂಡರಿಸಿದ್ದಾರೆ.

"ಗಾಂಧಿ :
ನೀ ಇಲ್ಯಾಕ ಹುಟ್ಟಿ ಬಂದಿ
ಮತ್ತೆಲ್ಲೆರ ಹುಟ್ಟಿ ಬಂದಿದರ
ನಿನಗೆ ಎಂಥಾ ಮರ್ಯಾದೆ ಸಲ್ಲತ್ತಿತ್ತಲ್ಲ
ಎಂದೊ ಒಂದು ದಿನ
ಮಜಾಕಂತ ಕುರಿ ತಿಂದಿ
ಹೊಟ್ಟ್ಯಾಗ ಬ್ಯಾ ಅಂತ ಒದರುದ ಕಂಡು
ಬೆಚ್ಚಿ ಬಿದ್ದಿ
ನಾವು -
ದಿನಾ ಕುರಿಯಾಕ
ಮನುಷ್ಯಾರ್ನ ತಿಂತೀವಿ
ಇಲ್ಲಿವರೆಗೆ ಒಬ್ಬನೂ ಕೂಗಲಿಲ್ಲ
ಇದು ನಿನ್ನ ತಪ್ಪಲ್ಲ
ದಕ್ಕಿಸಿಕೊಳ್ಳುವ ಶಕ್ತಿ ನಿನ್ನಲ್ಲಿ ಇಲ್ಲ
ಅದಕೆ ಅಂತೀನಿ
ನೀ ಇಲ್ಯಾಕ ಹುಟ್ಟಿ ಬಂದೀ ಅಂತ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೭೮; ಪು. ೨೧೬)

ಗಾಂಧಿ ಅಸಾಮಾನ್ಯ ವ್ಯಕ್ತಿತ್ವವುಳ್ಳವರಾಗಿದ್ದಾರೆ. ಗಾಂಧಿಯ ವ್ಯಕ್ತಿತ್ವಕ್ಕೂ ಇನ್ನಿತರರ ವ್ಯಕ್ತಿತ್ವಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಒಂದು ದಿನ ಗಾಂಧಿ ಗೆಳೆಯರ ಸಹವಾಸದಿಂದ ಮೋಜಿಗೋಸ್ಕರ ಕುರಿಮಾಂಸ ತಿಂದರು. ಮೊದಲೇ ಗಾಂಧಿ ಮನೆತನ ಆಧ್ಯಾತ್ಮಕತೆಯಿಂದ ಕೂಡಿದ್ದಾಗಿತ್ತು. ಹಾಗಾಗಿ ತಿಂದ ಕುರಿ ಹೊಟ್ಟೆಯಲ್ಲಿ ಅರಚಿತು ಎಂದು ಭ್ರಾಂತಿಗೊಂಡರು. ಅಂದಿನಿಂದ ಮಾಂಸ-ಮದ್ಯ ಇನ್ನಿತರ ದುಶ್ಚಟಗಳಿಂದ ಪರಿವರ್ತನೆಗೊಂಡು ಅದ್ಭುತ ವ್ಯಕ್ತಿತ್ವದ ಸಾಕಾರಮೂರ್ತಿಯಾದರು. ಆದರೆ ಇಂದಿನ ಜನಸಾಮಾನ್ಯರು ಆಧ್ಯಾತ್ಮಿಕ ದೃಷ್ಟಿಯನ್ನು ಇಟ್ಟುಕೊಂಡೇ ಮಾಂಸ-ಮದ್ಯಗಳನ್ನು ಸೇವಿಸುತ್ತಿದ್ದಾರೆ ಮತ್ತು ಇಂದಿನ ಸಮಾಜದ ಮನುಷ್ಯರಲ್ಲಿ ಪರಿವರ್ತನೆಗೊಳ್ಳುವುದು ಅಸಾಧ್ಯವೆಂದು ಕವಿ ಚಿತ್ರಿಸಿದ್ದಾರೆ.

ಎಂ. ಲೋಕೇಶ ಅವರು 'ಹರಿಜನ ಮೋಹನದಾಸರಿಗೆ' ಎಂಬ ಕವಿತೆಯಲ್ಲಿ ಗಾಂಧೀಜಿ ಹರಿಜನರಿಗೆ ಹರಿಜನ ಮತ್ತು ಬ್ರಹ್ಮಜನ ಎಂದು ಉದ್ಧರಿಸಿ ಹೇಳುವುದನ್ನು ಕವಿ ಹೀಗೆ ಪ್ರಶ್ನಿಸಿ ಕೇಳುತ್ತಾರೆ.

"ನಾವೆಲ್ಲಿಯ ಹರಿಜನ
ಮೋಹನದಾಸ ದೇವರನೆಂದು ಕಂಡವರಲ್ಲಾ
ಗುಡಿಯೊಳಗೆಂದು ಸುಳಿದವರಲ್ಲಾ
ದೇವರು-ದಿಂಡಿರ ಹೆಸರನು ಉಸುರುತ
ಕೋಳಿ-ಕುರಿಯೊಡನೆ ನಮ್ಮಯ ರಕ್ತ ಕೊಟ್ಟವರು
ಬಡವ - ಬಲ್ಲಿದರೊಂದೆ ಎನ್ನುತ
ಟಾಟಾ - ಬಿರ್ಲಾರ ಮಠದೊಳ ಕೂತು
"ರಾಮಾ...ರಾಮಾ..." ಎಂದವ ನೀನೆ
ನಮಗಿನ್ನೇತಕೆ ಬಿರುದನು ಕೊಟ್ಟೆ
ಹರಿಜನ..... ನೀವೆ ..... ಬ್ರಹ್ಮಜನ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೧೮)

ಹೀಗೆ ಕವಿ ಎಂ. ಲೋಕೇಶ ಅವರು ಹರಿಜನರ ಅಳಲನ್ನು ವ್ಯಕ್ತಪಡಿಸಿದ್ದಾರೆ. ಹರಿಜನರು ಎಂದೂ ದೇವರನ್ನು ಕಂಡವರಲ್ಲ, ಗುಡಿಯೊಳಗೆ ಅವರಿಗೆ ಪ್ರವೇಶವಿಲ್ಲ. ದೇವರ ಹೆಸರಲ್ಲಿ ಕುರಿ-ಕೋಳಿಗಳ ರಕ್ತದ ಜೊತೆಗೆ ತಮ್ಮ ರಕ್ತವನ್ನು ಸುರಿಸುವರು. ದೊಡ್ಡ ದೊಡ್ಡ ಅಧಿಕಾರಿಗಳು ಬರಿ ಮಾತಿನಲ್ಲಿ ಬಡವ-ಬಲ್ಲಿದರೆಂದು ಹೇಳುವರೆ ವಿನಃ ಎಂದೂ ಏಳಿಗೆಗೋಸ್ಕರ ಕಾರ್ಯರೂಪಕ್ಕೆ ತರುವುದಿಲ್ಲ. ಅಂಥದರಲ್ಲಿ 'ರಾಮಾ..... ರಾಮಾ....' ಎನ್ನುವ ನೀನು ನಮಗ್ಯಾಕೆ ಹರಿಜನ....ಬ್ರಹ್ಮ ಜನ....! ಎಂದು ಯಾಕೆ ಬಿರುದನ್ನು ಕೊಟ್ಟೆ ಎಂದು ಕವಿ ಗಾಂಧೀಜಿಯವರನ್ನು ಪ್ರಶ್ನಿಸುವರು.

ಡಿ.ಬಿ. ಥಂಗ ಅವರು ತಮ್ಮ 'ನಾನು ನಿನ್ನಂತೆ ನಡೆಯುವಾಗ' ಎಂಬ ಕವಿತೆಯಲ್ಲಿ ಗಾಂಧೀಜಿಯ ತತ್ವಾದರ್ಶಗಳು ಕಾಲಕ್ರಮೇಣ ನಶಿಸಿ ಹೋಗುತ್ತಿವೆ ಎಂಬ ರೀತಿಯಲ್ಲಿ ಪ್ರತಿನಿಧಿಸಿದ್ದಾರೆ.

"ಮಹಾತ್ಮಾ
ಹೋಗುತ್ತಿವೆ ಮಾಸಿ ಈಗೀಗ
ನಿನ್ನ ಹೆಜ್ಜೆಯ ಗುರುತುಗಳು
ಕೆಂಡದಂಥ ಧೂಳು ಅಲ್ಲಲ್ಲಿ
ಕಲ್ಲು ಮುಳ್ಳುಗಳು ಹೆಜ್ಜೆಯ ಸುಳಿಯಲ್ಲಿ
ಹೀಗಿರುವಾಗ
ನೀನಿಟ್ಟು ಹೋದ ಹೆಜ್ಜೆಗಳಲ್ಲಿ
ನನ್ನ ಹೆಜ್ಜೆ ಇಡಲು ನನಗೇ ಭಯ
....

ನಡೆಯಬೇಕೆನಿಸಿದರೂ
ನಾ ಹೇಗೆ ನಡೆಯಲಿ
ನೀ ತುಳಿದ ದಾರಿಯಲ್ಲಿ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೧೯)

ಗಾಂಧೀಜಿ ಸತ್ಯ, ಅಹಿಂಸೆ, ಶಾಂತಿ ಮುಂತಾದ ಆದರ್ಶವಾದ ತತ್ವಗಳನ್ನು ಪರಿಪಾಲಿಸಿಕೊಂಡು ಬಂದವರು. ಆದರೆ ಅವರ ತತ್ವಗಳು ಇಂದಿನ ಕಾಲದಲ್ಲಿ ನಶಿಸಿ ಹೋಗಿ ಅದರ ಬದಲು ಸುಳ್ಳು, ಕಪಟ-ಮೋಸ-ವಂಚನೆ, ಅನ್ಯಾಯ, ಅಶಾಂತಿಗಳೇ ತುಂಬಿ ತುಳುಕುತ್ತಿವೆ. ಇಂದು ಸತ್ಯ ಅಹಿಂಸೆಗಳನ್ನು ಪರಿಪಾಲಿಸಿದರೆ ಅವುಗಳಿಗೆ ಉಳಿಗಾಲವಿಲ್ಲ. ಗಾಂಧೀಜಿ ನಡೆದು ಬಂದ ದಾರಿಯಲ್ಲಿ ಇಂದು ನಮ್ಮಿಂದ ನಡೆಯಲು ಸಾಧ್ಯವಿಲ್ಲ. ಹಾಗಾಗಿ ಗಾಂಧೀಜಿ ನೈತಿಕ ಜೀವನವನ್ನು ನಡೆಸಿದ ಒಬ್ಬ ಮಹಾತ್ಮನೆಂದು ಪ್ರತಿನಿಧಿಸಿದ್ದಾರೆ.

ಗಾಂಧೀಜಿ ಬಡವರ-ದಲಿತರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದವರು ಎಂಬುದನ್ನು 'ನಿಂಗಣ್ಣ ಸಣ್ಣಕ್ಕಿ ಅವರು 'ಕ್ಷಮಿಸು ಗಾಂಧಿ' ಎಂಬ ಕವನದಲ್ಲಿ ಚಿತ್ರಿಸಿದ್ದಾರೆ.

"ಮೋಹನದಾಸ ಕರಮಚಂದ ಗಾಂಧಿ
'ಮಾನವ ಕುಲವೇ ನನ್ನ ಕುಟುಂಬ
ಜಗತ್ತೇ' ನನ್ನ ಮನೆ ಎಂಬ ತತ್ವದವ
ಗಾಂಧೀಜಿ ಎಲ್ಲರ ಹಾಗೆ ಮನುಷ್ಯ
....
ಗಾಂಧೀಜಿ ಭೂಮಿಯ ಮೇಲಿನ ಸತ್ಯ ಮನುಷ್ಯ
ಭೂಮಿಗಾಗಿ, ರೊಟ್ಟಿಗಾಗಿ, ಬಟ್ಟೆಗಾಗಿ, ನೀರಿಗಾಗಿ
ಸ್ವಾತಂತ್ರ್ಯಕ್ಕಾಗಿ ಇದ್ದ ಅಭಾವ ನೀಗಿದ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೩೧೫)

ಗಾಂಧೀಜಿ "ಮಾನವ ಕುಲವೇ ನಮ್ಮ ಕುಟುಂಬ ಜಗತ್ತೇ ನನ್ನ ಮನೆ' ಎಂಬ ತತ್ವದಲ್ಲಿ ಬದುಕಿದ ಎಲ್ಲರಂತೆ ಸಾಮಾನ್ಯ ಮನುಷ್ಯ. ದೇಶದ ಜನತೆಗೆ ಮೂಲಭೂತ ಸೌಕರ್ಯಗಳಾದ ಅನ್ನ, ನೀರು, ಬಟ್ಟೆ, ವಸತಿ ಮತ್ತು ಭೂಮಿ ಇವುಗಳನ್ನು ನೀಗಿಸಿದ ಭೂಮಿಯ ಮೇಲಿನ ಸತ್ಯದ ಮನುಷ್ಯನೆಂದು ಪ್ರತಿನಿಧಿಸಲಾಗಿದೆ.

ಗಾಂಧೀಜಿ ಮಾನವೀಯ ಗುಣಗಳನ್ನು ಮೆರೆದವರು. ತಾನು ಪಾಲಿಸುವ ತತ್ವ ಆದರ್ಶಗಳಲ್ಲಿಯೇ ಕೊನೆಯವರೆಗೂ ಜೀವಿಸಿದ ವ್ಯಕ್ತಿ. ಅವರ ಜೀವಿತದ ಹಾದಿ ದುರ್ಗಮದಿಂದ ಕೂಡಿದುದು. ಅಂತಹ ಹಾದಿಯಲ್ಲಿ ನಡೆಯುವುದು ನಮ್ಮಿಂದ ಸಾಧ್ಯವಿಲ್ಲ. ಅದು ಗಾಂಧಿಯಿಂದ ಮಾತ್ರ ಸಾಧ್ಯವೆಂದು ಆರ್.ಜಿ. ಹಳ್ಳಿ ನಾಗರಾಜ ಅವರು 'ಗಾಂಧಿ ಅಜ್ಜನಿಗೆ' ಎಂಬ ಕವಿತೆಯಲ್ಲಿ ಹೀಗೆ ಕಂಡರಿಸಿದ್ದಾರೆ.

“ಅಜ್ಜ
ನನಗೂ ಹಂಗಿನ ಬದುಕು ಅಪ್ಪೋ ಆಸೆಯಿಲ್ಲ.
ನೀ ತಿಳಿದಿದ್ದ (ಹಲವು) ಸ್ವಾತಂತ್ರ್ಯದ ಅರ್ಥ ನಂಗಿನ್ನೂ ಗೊತ್ತಿಲ್ಲ.
ಏಕೆಂದರೆ ಹಾಗೆಂದರೇನು ಅನ್ನೋದೇ ಇನ್ನೂ ತಿಳದಿಲ್ಲ.
ಅದ್ಕೇ ಅಜ್ಜ.
ನಿನ್ನ ಆದರ್ಶದ ಬದುಕು ನಮಗೆ ಎಟುಕ್ತ ಇಲ್ಲ
ನಿನ್ನ ಕನಸಿನ ರಾಮರಾಜ್ಯ ಎಂದೂ ಆಗೊಲ್ಲ
ನಿನ್ನ ತಿಳ್ಕೊಳ್ಳೊ ಹೊತ್ಗೆ ನಾವಿಲ್ಲೇ ಇರೋಲ್ಲ.
ಅಲ್ವ ಅಜ್ಜ?”

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೩೨೨)

ಗಾಂಧೀಜಿ ಪರಕೀಯರ ದಬ್ಬಾಳಿಕೆಯಿಂದ ಮುಕ್ತಗೊಳಿಸಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟವರು. ಆದರೆ ಆ ಸ್ವಾತಂತ್ರ್ಯ ಯಾರಿಗೆ ಸಿಕ್ಕಿತು ಎಂಬುದು ಇನ್ನೂ ತಿಳಿಸಿಲ್ಲ ಎಂಬುದು ಕವಿ ತನ್ನ ಅಳಲನ್ನು ಇಲ್ಲಿ ತೋಡಿಕೊಂಡಿದ್ದಾರೆ. ಅದಕ್ಕೆ ಇರಬೇಕೇನೋ ಗಾಂಧೀಜಿಯ ಆದರ್ಶದ ಜೀವನ ಇಂದಿಗೂ ಯಾರಿಗೂ ಎಟುಕ್ತಿಲ್ಲ. ರಾಮರಾಜ್ಯದ ಕನಸು ನನಸಾಗುವುದು ಅಸಾಧ್ಯ. ಹಾಗಾಗಿ ಗಾಂಧೀಜಿಯನ್ನು ಸಂಕೀರ್ಣ ವ್ಯಕ್ತಿಯಾಗಿ ಕಂಡರಿಸಲಾಗಿದೆ.

ಇಂದಿನ ಕಾಲದಲ್ಲಿ ಗಾಂಧೀಜಿಯ ವ್ಯಕ್ತಿತ್ವ ಅಥವಾ ಅವರ ನೆನಪುಗಳನ್ನು ಗೋಡೆಯ ಮೇಲಿರುವ ಮೊಳೆಯಲ್ಲಿ ಅಡಗಿಸಿದ್ದೇವೆ. ಜನನ ಮತ್ತು ಮರಣ ಈ ಎರಡು ದಿನಗಳಲ್ಲಿ ಮಾತ್ರ ಗಾಂಧೀಜಿಯ ಫೋಟೋಗೆ ಚೈತನ್ಯ ತುಂಬುತ್ತೇವೆ. ಉಳಿದ ದಿನಗಳಲ್ಲಿ ಗಾಂಧಿ ಫೋಟೋಗೆ ಮೊಳೆಯೇ ಗತಿ ಎಂದು ನ.ಹ. ಕಟಗೇರಿ ಅವರು ‘ಮೊಳೆಯೇ ನೀನೇ ಧನ್ಯ’ ಕವಿತೆಯಲ್ಲಿ ಹೀಗೆ ಚಿತ್ರಿಸಿದ್ದಾರೆ.

“ಅಖಂಡ ಭಾರತದಲ್ಲಿ
ಯಾರಾದರೂ ಗಾಂಧಿಯನ್ನು
ಎತ್ತಿ ಹಿಡಿದಿದ್ದರೆ, ನೀನೊಬ್ಬನೆ
ಅದಕ್ಕೆ
ಮೊಳೆಯೇ ನೀನೇ ಧನ್ಯ

....

ನೀನಿಲ್ಲದಿದ್ದರೆ
ಗಾಂಧಿ ಇಲ್ಲ
ನಮಗೆ ಗಾಂಧಿ ಬೇಡ
ಅವನ ಫೋಟೋ ಮಾತ್ರ ಬೇಕು

ನೀ ಇದ್ದರೆ ಮಾತ್ರ
ಫೋಟೋ ಉಂಟು
ಅದಕ್ಕೆ ಮೊಳೆಯೇ ನೀನೆ ಧನ್ಯ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೩೨೩-೩೨೪)

ಈ ಅಖಂಡ ಭಾರತದಲ್ಲಿ ಗಾಂಧೀಜಿ ಕುರಿತು ಎಷ್ಟೋ ಅಧ್ಯಯನ ಕೇಂದ್ರಗಳಿವೆ. ಅವು ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನೆಗಳಲ್ಲಿ ತೊಡಗಿಕೊಂಡಿವೆ. ಆದರೆ ಎಷ್ಟು ಅಧ್ಯಯನಗಳನ್ನು ನಡೆಸಿದರೂ ಗಾಂಧೀಜಿಯನ್ನು ಹಿಡಿದಿಡಲು ನಮ್ಮಿಂದಾಗುತ್ತಿಲ್ಲ. ಸ್ವತಂತ್ರ ಭಾರತದಲ್ಲಿ ಗಾಂಧೀಜಿಯನ್ನು ಹಿಡಿದಿಡಲು ಮೊಳೆಯೇ ಸರಿ ಎಂದು ಕವಿ ಮೇಲಿನಂತೆ ವ್ಯಂಗ್ಯವಾಗಿ ಚಿತ್ರಿಸಿದ್ದಾರೆ. ಅದೇ ಸ್ವತಂತ್ರ ಭಾರತದ ಆಡಳಿತ ವ್ಯವಸ್ಥೆ ಹೇಗಿದೆ ಎಂದು ಸರಜೂ ಕಾಟ್ಕರ್ ಅವರು 'ಗಾಂಧಿ ಸಿಕ್ಕ' ಪದ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ.

"ರಾಮ ಸತ್ತಿದ್ದಾನೆ. ರಾಮರಾಜ್ಯವೂ ಸತ್ತು ಹೋಗಿದೆ
ರಾವಣನ ರಾಜ್ಯದಲ್ಲಿ ಲಕ್ಷ್ಮಣ ಶೂರ್ಪನಖಿಯರದ್ದೇ
ಸಂಭೋಗ....."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೮೩)

ಇಲ್ಲಿ ಗಾಂಧೀಜಿಯನ್ನು ರಾಮನಿಗೆ ಹೋಲಿಸಲಾಗಿದೆ. ದೇಶ ಸ್ವತಂತ್ರಗೊಂಡಾಗ ಗಾಂಧಿಯನ್ನು ಹತ್ಯೆಗೈಯಲಾಗಿದೆ. ಗಾಂಧೀಜಿ ಪೋಷಾಕು ಸರಳತೆಗೆ ಮಾದರಿಯಾಗುವ ಬದಲು ಫ್ಯಾಶನ್ ಆಗಿ ವಿಲಾಸ ಜೀವನಕ್ಕೆ ಪ್ರಾಮುಖ್ಯತೆ ನೀಡಲಾಯಿತು. ಇದರಿಂದ ಗಾಂಧೀಜಿಯ ತತ್ವ ಆದರ್ಶಗಳ ಕೊಂಡಿ ಒಂದೊಂದಾಗಿ ಕಳಚಿಕೊಳ್ಳಲಾರಂಭಿಸಿವೆ ಎಂದು ಅಭಿವ್ಯಕ್ತಿಸಲಾಗಿದೆ.

ಸತ್ಯಾನಂದ ಪಾತ್ರೋಟರು ಗಾಂಧೀಜಿಯವರನ್ನು ಕುರಿತು ಹಲವು ಕವಿತೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಬರಬ್ಯಾಡೋ ಅಜ್ಜಾ', 'ಪಂಜೆಯುಡಿಗೆಯ ಮುದುಕ', 'ಬೆಳಗಾದರೆ ಇದೆ ನಿನ್ನ ಜಯಂತಿ' ಮತ್ತು 'ಗಾಂಧಿ'. 'ಗಾಂಧಿ' ಎಂಬ ಕವಿತೆಯಲ್ಲಿ ಹೀಗೆ ಕಂಡರಿಸಿದ್ದಾರೆ.

"ಗಾಂಧಿ ಎಂದಕೆ
ಬರೀ
ರಕ್ತಮಾಂಸ ಎಲುವುಗಳ ಹಂದರವಲ್ಲ
ಎಲ್ಲರನು ಎಲ್ಲವನು
ಪ್ರೀತಿಸುವ ಅವನೊಬ್ಬ ಮನುಷ್ಯ
ಗಾಂಧಿ
ಯಾರನ್ನು ಮರೆಯಲಿಲ್ಲ
ಯಾರನ್ನು - ಯಾವುದನ್ನು
ಕಡಿಮೆಯೆಂದು ಭ್ರಮಿಸಿರಲಿಲ್ಲ

ಅದಕ್ಕೆ
ಗುಂಡಿಗೆ ಬಲಿಯಾಗಿರಬೇಕು ಅವನ ಆಯುಷ್ಯ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೫೫-೫೬)

'ಬೆಳಗಾದರೆ ಇದೇ ನಿನ್ನ ಜಯಂತಿ' ಎಂಬ ಕವಿತೆಯಲ್ಲಿ ಸತ್ಯಾನಂದ ಪಾತ್ರೋಟರು ಗಾಂಧೀಜಿಯವರ ತತ್ವಗಳನ್ನು ಮೇಲಿನ ನೋಟಕ್ಕೆ ಅನುಸರಿಸುತ್ತ ಒಳನೋಟದಲ್ಲಿ ಅವರ ತತ್ವಗಳಿಗೆ ಮಸಿ ಬಳಿಯುವ ಜನಗಳ ಚಿತ್ರಣವನ್ನು ಚಿತ್ರಿಸಿದ್ದಾರೆ.

"ನಿನ್ನ ಹೆಸರು ತತ್ವದ ಮೇಲೆ
ಕದ್ದು ಬಸಿರಾಗುವ ರಾವಣಾಸುರರು
ಏನೆಲ್ಲ ಮಾಡಿ ಮರೆಮಾಚಿ ಕ್ಷಣದಲ್ಲಿ
ತೊಡುವರು ಖಾದಿ ರಾತ್ರೋ ರಾತ್ರಿ
ತಾಯಿ ಮೊಲೆಯನೆ ಕೊಯ್ವ ಮಹಿಷಾಸುರರು
ಹಾಡಿದ್ದೆ ಹಾಡುವರು ಹೇಳಿದ್ದೆ ಹೇಳುವರು
ಎಷ್ಟು ಸಲೀಸಾಗಿದೆ ನೋಡು ಉದ್ಧಾರದ ಸೋಗು"

(ಸತ್ಯಾನಂದ ಪಾತ್ರೋಟ; ೧೯೯೦; ಪು. ೧೨)

ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ವ್ಯವಸ್ಥೆ ಭ್ರಷ್ಟವಾಗತೊಡಗಿತು. ಗಾಂಧೀಜಿ ಹೆಸರು ಮತ್ತು ತತ್ವಗಳು ಅಧಿಕಾರವನ್ನು ಹಿಡಿಯುವುದಕ್ಕೆ ಮಾತ್ರ ಬೇಕಾಗಿದೆ. ಖಾದಿ ತೊಟ್ಟು, ತಲೆಗೆ ಟೊಪ್ಪಿಗೆ ಹಾಕಿಕೊಂಡು ಬಹಿರಂಗದಲ್ಲಿ ಗಾಂಧೀಜಿಯನ್ನು ಅನುಕರಣೆ ಮಾಡಲಾಗುತ್ತದೆ. ಆದರೆ ಅಂತರಂಗದಲ್ಲಿ ರಾಜಕಾರಣಿಗಳೆಲ್ಲ ಭ್ರಷ್ಟರಾಗುತ್ತಿದ್ದಾರೆ. ಒಟ್ಟಾರೆ ಗಾಂಧೀಜಿಯ ತತ್ವಗಳು ಮೇಲಿನ ನೋಟಕ್ಕೆ ತೋರ್ಪಡಿಕೆಗೋಸ್ಕರ ಅನುಸರಿಸಲಾಗುತ್ತದೆ. ಅವುಗಳನ್ನು ನಿಜಜೀವನದಲ್ಲಿ ಅನುಸರಿಸಲು ಸಾಧ್ಯವಿಲ್ಲ ಎಂದು ವಿಡಂಬಿಸಿ ಚಿತ್ರಿಸಲಾಗಿದೆ.

ಬರಗೂರು ರಾಮಚಂದ್ರಪ್ಪನವರು 'ಮಹಾತ್ಮರು' ಎಂಬ ಕವಿತೆಯಲ್ಲಿ ಗಾಂಧೀಜಿಯನ್ನು ಹೀಗೆ ಚಿತ್ರಿಸಿದ್ದಾರೆ.

"ಇದ್ದಾಗ ಕಣ್ಣಿಗೆ ಕ್ಷಣ ಮಾತ್ರವೂ ಬೀಳದೆ ಸತ್ತಾಗ
ಸರ್ಕಲ್ಲು, ಪಾರ್ಕುಗಳ ಮಧ್ಯೆ ಎದ್ದು ನಿಲ್ಲುವವರು
ಕಂಡ ಕಂಡವರ ಕೈಯ ಚಲಾವಣೆಗೆ ಸಿಕ್ಕಿ
ನಾಣ್ಯವಾಗುವರು"

(ರಾಮಚಂದ್ರಪ್ಪ ಬರಗೂರು; ೨೦೦೧; ಪು. ೩೯)

ಗಾಂಧೀಜಿ ಬದುಕಿದ್ದಾಗ ಪ್ರಚಾರವನ್ನು ಬಯಸಿರಲಿಲ್ಲ. ಆದರೆ ಅವರು ಮರಣ ಹೊಂದಿದ ನಂತರ ಅವರ ಹೆಸರು ಮತ್ತು ವೇಷಗಳನ್ನು ಬಳಸಿಕೊಂಡು ಹಣ ಸಂಪಾದನೆಯಲ್ಲಿ ಇಂದಿನ ಜನರು ಮುಂದಾಗಿದ್ದಾರೆ ಹಾಗೂ ಅವರ ಪ್ರತಿಮೆಯನ್ನು ಸರ್ಕಲ್ಲು, ಪಾರ್ಕುಗಳಲ್ಲಿ ನಿಲ್ಲಿಸಿ

ತಮ್ಮ ಹಿತಕ್ಕಾಗಿ ಅವಕಾಶವಾದಿಗಳು ಬಳಸಿಕೊಳ್ಳುತ್ತಿದ್ದಾರೆ. ಹಾಗಾಗಿ ಇಂದಿನ ಕಾಲದಲ್ಲಿ ಗಾಂಧೀಜಿಯ ಹೆಸರು ಮತ್ತು ವೇಷಗಳು ಹಣ ಸಂಪಾದನೆಗೆ ಉಪಯೋಗಕ್ಕೆ ಬರುತ್ತಿವೆ ಎಂದು ಚಿತ್ರಿಸಿದ್ದಾರೆ.

ಅಲ್ಲಮಪ್ರಭು ಬೆಟ್ಟದೂರರು ಗಾಂಧೀಜಿಯನ್ನು ಕುರಿತು 'ತಾತನುದ್ದೇಶಿಸಿ', 'ಗುಲಾಬಿ ಮಂದಿರ' ಮತ್ತು 'ಗಾಂಧಿ' ಎಂಬ ಕವಿತೆಗಳನ್ನು ರಚಿಸಿದ್ದಾರೆ. 'ತಾತನುದ್ಧೇಶಿಸಿ' ಕವಿತೆಯಲ್ಲಿ ಗಾಂಧೀಜಿಯನ್ನು ಹೀಗೆ ಕಂಡರಿಸಿದ್ದಾರೆ.

"ನಿನ್ನ ತತ್ವಕ್ಕೆ ಮನ್ನಣೆ ಕೋಡೋದು ಅಂದರೆ ನಿನ್ನ ಮೂರ್ತಿ ಸ್ಥಾಪಿಸೋದು
ನಿನ್ನ ಮೂರ್ತಿ ಸ್ಥಾಪಿಸೋದು ಅಂದರೆ ನಿನ್ನ ದೇವರ ಮಾಡೋದು
ನಿನ್ನ ದೇವರ ಮಾಡೋದು ಅಂದರೆ ನಿನ್ನ ಮನುಷ್ಯತ್ವ ಅಲ್ಲಗಳೆಯೋದು
ನಿನ್ನ ಮನುಷ್ಯತ್ವ ಅಲ್ಲಗಳೆಯೋದು ಅಂದರೆ ಗೋಡಸೇನ ಬಂಧುಗಳಾಗೋದು"

(ಅಲ್ಲಮಪ್ರಭು ಬೆಟ್ಟದೂರು(ಸಂ); ೧೯೭೭; ಪು. ೩೩)

ಗಾಂಧೀಜಿಯನ್ನು ಮನುಷ್ಯನನ್ನಾಗಿ ಅರ್ಥ ಮಾಡಿಕೊಳ್ಳದೆ ಮತ್ತು ಅವರ ತತ್ವಗಳನ್ನು ಪರಿಪಾಲಿಸದೆ ಅವರನ್ನು ದೇವರನ್ನಾಗಿ ಮಾಡುವ ಮೂಲಕ ಅವರ ಹೆಸರಿನಲ್ಲೇ ಹಿಂಸಾಚಾರ ನಡೆಸುವುದು ಅವರ ಹೆಸರಿಗೆ ಮಸಿ ಬಳಿದಂತೆ ಆಗುತ್ತದೆ. ಹಾಗಾಗಿ ಗಾಂಧೀಜಿಯನ್ನು ಸರ್ಕಲ್‌ಗಳಲ್ಲಿ, ಪಾರ್ಕ್‌ಗಳಲ್ಲಿ ಮತ್ತು ಸರ್ಕಾರಿ ಕಛೇರಿಗಳಲ್ಲಿ ಮೂರ್ತಿಯನ್ನಾಗಿ(ಪ್ರತಿಮೆ)ರಿಸದೇ ಅವರ ತತ್ವಗಳನ್ನು ಹಾಗೂ ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಬೆಟ್ಟದೂರರು 'ಗಾಂಧಿ' ಎಂಬ ಮತ್ತೊಂದು ಕವಿತೆಯಲ್ಲಿ ಗಾಂಧೀಜಿಯವರ ತತ್ವಗಳನ್ನು, ಅವರ ಮಾನವೀಯ ಗುಣಗಳನ್ನು ಜನರು ಹೇಗೆ ದುರುಪಯೋಗಪಡಿಸಿಕೊಳ್ಳುತ್ತಾರೆ ಎಂಬುದನ್ನು ಹೀಗೆ ಚಿತ್ರಿಸಿದ್ದಾರೆ.

"ಗಾದಿಗೇರುವುದೇ ಈಗ ಗಾಂಧೀವಾದ
ಮೋಸವೋ ಪಾಪವೋ
ಹಿಂಸೆಯೋ ಅಹಿಂಸೆಯೋ
ಕಾಲು ಹಿಡಿಯುವುದೋ, ಕೈ ಹಿಡಿಯುವುದೋ
ತಲೆ ತುರಿಸುವುದೋ, ನಾಲಿಗೆ ಕಚ್ಚುವುದೋ
ಯಾವುದೋ ಬಗೆಯಿಂದ ಸೀಟು
ಹಿಡಿಯಬೇಕು. ಹೋದರೂ ಹೋದಾವು ಒಂದಿಷ್ಟು
ಹರಿದೀತು ಸಿಂದಿ"

(ಅಲ್ಲಮಪ್ರಭು ಬೆಟ್ಟದೂರು(ಸಂ); ೧೯೭೭; ಪು. ೩೫)

ಗಾಂಧೀಜಿಯ ಆದರ್ಶಗಳು ಮತ್ತು ಚಿಂತನೆಗಳು ಈ ಹೊತ್ತಿನ ಜಾಗತೀಕರಣ ಹಾಗೂ ಖಾಸಗೀಕರಣದ ನೀತಿಗಳಿಗೆ ಉತ್ತರವಾಗಿ ನಿಲ್ಲಬಹುದೇ ಎನ್ನುವ ನೀರಿಕ್ಷೆ ಸತೀಶ್ ಕುಲಕರ್ಣಿ ಅವರು 'ಗಾಂಧೀಗಿಡ' ಕವಿತೆಯಲ್ಲಿ ಹೀಗೆ ಚಿತ್ರಿಸಿದ್ದಾರೆ.

"ಮೂಕ ಕಾವ್ಯದ
ಪ್ರತೀಕದ ಗಿಡ
ನಿತ್ಯ ಕೊಡಲಿಗೆ
ಬಡವರಿಗೆ ಚಕ್ಕೆ
ಕೊಡುವ ಗಾಂಧೀಗಿಡ
ಬೇರು ಸತ್ತಿಲ್ಲ
ಮತ್ತೊಮ್ಮೆ ಈ
ನೆಲದ ಮಾತಾಗಬಹುದೆ
ಹೇಳು ಗಾಂಧೀಗಿಡ"

(ಸತೀಶ್ ಕುಲಕರ್ಣಿ; ೨೦೦೧; ಪು. ೨೮)

ಗಾಂಧೀಜಿ ನಾಟಿದ ಸ್ವಾತಂತ್ರ್ಯದ ಗಿಡ ಮುಗಿಲೆತ್ತರಕ್ಕೆ ಬೆಳೆದಂತೆ ನೆರಳನ್ನು ಬಯಸಿ ಪಕ್ಷಿಗಳು, ಪ್ರಾಣಿಗಳು ಮತ್ತು ಸರಿಸೃಪಗಳು ಬಯಸಿ ಬಂದವು. ಆದರೆ ಭ್ರಷ್ಟಾಚಾರದ ರಾಜಕಾರಣಿಗಳು ಸ್ವಾತಂತ್ರ್ಯದ ಪಕ್ಷಿಯನ್ನೇ ಬೇಟೆಯಾಡುವ ಬೇಟೆಗಾರರಾದರು. ದಿಕ್ಕಿಲ್ಲದೆ ಸ್ವಾತಂತ್ರ್ಯದ ಪಕ್ಷಿ ಬೇರೆ ಕಡೆ ಹಾರಿ ಹೋಗಬೇಕಾದ ದುಃಸ್ಥಿತಿ ನಿರ್ಮಾಣವಾಗುತ್ತಿದೆ. ಹಾಗಾಗಿ ಇಂತಹ ಫಲ ಕೊಡದ ಸ್ವಾತಂತ್ರ್ಯ ಗಿಡದ ಬೇರುಗಳು ಇನ್ನೂ ಸತ್ತಿಲ್ಲ. ಅವುಗಳನ್ನು ಪುನಃ ಚಿಗುರಿಸಲು ಗಾಂಧೀಜಿಯ ಆದರ್ಶಗಳು, ಚಿಂತನೆಗಳು ಬೆಳಕಿಗೆ ಬರಲಿ ಎಂದು ಅಭಿಪ್ರಾಯಿಸಿದ್ದಾರೆ.

ಜಗದೀಶ ಮಂಗಳೂರುಮಠ ಅವರು 'ದೀಪ ನಂದಿದೆ' ಎಂಬ ಕವಿತೆಯಲ್ಲಿ ಗಾಂಧೀಜಿಯನ್ನು ಹೀಗೆ ಚಿತ್ರಿಸಿದ್ದಾರೆ.

"ಕೊಲೆಯಾಯಿತು ಗಾಂಧಿ ನಿನ್ನ
ನನ್ನ ಹೂಭಾವಗಳ ಬಣ್ಣಗಳ ಕಲ್ಪನೆಗಳ
ಕನಸುಗಳ ಕೊಲೆಯಾಗುವುದು
ಕೂಗುವಾಗಲೆಲ್ಲ ನಿನ್ನ ಜಯಕಾರಗಳ
....
ಅಂತೆಯೇ ನಿನ್ನ ಅಹಿಂಸೆಗೆ ಪ್ರತಿಭಟನೆಗೆ
ಕನಸುಗಳಿಗೆ ಕಾಮಣಿಯ ಬಣ್ಣ ಬಳಿದಿದ್ದೇವೆ.
ಆದರೂ ನಾವು ಅಕ್ಷರ ಕಲಿತಿದ್ದೇವೆ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೯೫)

ಗಾಂಧೀಜಿ ಎಷ್ಟೇ ದೀನ-ದುರ್ಬಲರಿಗೆ ಬೆಳಕಾದರೂ, ಅಹಿಂಸೆಯ ಸಾಕಾರ ಮೂರ್ತಿಯಾದರೂ ಕೊನೆಗೆ ಹಿಂಸೆಯಿಂದಲೇ ಬಲಿಯಾದದ್ದನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ.

ದಲಿತ-ಬಂಡಾಯ ಕವಿಗಳು ಗಾಂಧೀಜಿಯವರನ್ನು ಒಂದು ಮೌಲ್ಯವಾಗಿ ಪ್ರತಿನಿಧಿಸಿದ್ದಾರೆ. ಅವರ ಸಿದ್ಧಾಂತಗಳ ಜೊತೆಗೆ ಜೀವನ ಮತ್ತು ವ್ಯಕ್ತಿತ್ವಗಳಿಗೆ ವಿಶೇಷತೆಗಳನ್ನು ತಮ್ಮ ಕಾವ್ಯಗಳಲ್ಲಿ

ಅಭಿವ್ಯಕ್ತಿಸಿದ್ದಾರೆ. ಕೆಲವೊಮ್ಮೆ ಕವಿಗಳು ಗಾಂಧೀಜಿಯ ವೈಯಕ್ತಿಕ ಬದುಕಿನ ಆದರ್ಶಗಳನ್ನು ಹಾಗೂ ಅವರ ಹೋರಾಟದ ಅಸ್ತ್ರಗಳನ್ನು ತಮ್ಮ ಕಾವ್ಯಗಳಲ್ಲಿ ಹಿಡಿದಿಟ್ಟಿದ್ದಾರೆ. ಕೆಲವರು ಗಾಂಧೀಜಿಯ ಆದರ್ಶಗಳು, ತತ್ವಗಳು ಸಮಕಾಲೀನ ಬದುಕಿನ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವುದನ್ನು ವಿಡಂಬಿಸಿದ್ದಾರೆ ಮತ್ತು ವ್ಯಂಗ್ಯವಾಗಿ ಚಿತ್ರಿಸಿದ್ದಾರೆ. ಇಲ್ಲಿ ಗಾಂಧಿ ಕುರಿತ ತಾತ್ವಿಕ ಚಿಂತನೆಗಳಿವೆ. ಕಟುವಿಮರ್ಶೆಗಳಿವೆ. ಬಹುಶಃ ನವ್ಯೋತ್ತರ ಚಿಂತನೆಗಳು ಎಂದಿನಂತೆ ಉಪಮೆಗಳನ್ನು ಹೊಂದಿರುವ ಕಾವ್ಯಗಳೆನಿಸದೆ ವಾಸ್ತವ ಚಿತ್ರಣದ ಅನಾವರಣ ಹಾಗೂ ವಾಸ್ತವ ಕುರಿತ ಗೊಂದಲಗಳಿಗೆ ಪ್ರಶ್ನೆ ರೂಪವಾಗಿ ಹೊರಹೊಮ್ಮಿವೆ.

ಯಾವ ಪಂಥಕ್ಕೂ ಸೇರದೇ ಸಮನ್ವಯ ಕವಿಗಳು ಎಂದು ಗುರುತಿಸಿಕೊಂಡಿರುವ ಸಿ.ಪಿ.ಕೆ.ಯವರು 'ಗಾಂಧೀಜಿಗೆ' ಎಂಬ ಕವಿತೆಯಲ್ಲಿ ಗಾಂಧೀಜಿಯವರನ್ನು ಪುರಾಣ ವ್ಯಕ್ತಿಗಳ ಮೌಲ್ಯಗಳಿಗೆ ತುಲನೆ ಮಾಡಿ ಅವರಿಗಿಂತಲೂ ಗಾಂಧೀ ಒಂದು ಕೈ ಮೇಲು ಎಂದು ವ್ಯಕ್ತಪಡಿಸಿದ್ದಾರೆ.

> "ಕೊಡಲಿ ಕೋದಂಡ ಚಕ್ರಗಳನ್ನು ಹಿಡಿಯದೆ,
> ಕಂಬವನ್ನೊಡೆದು ಮೂಡಿ ವಿಜೃಂಭಿಸದೆ,
> ಭೂಮ್ಯಾಕಾಶಗಳನ್ನು ಹೆಜ್ಜೆಗಳಿಂದ ಮುಚ್ಚದೆ,
> ನಟ್ಟಿರುಳಿನಲ್ಲಿ ಮಡದಿ ಮಕ್ಕಳನ್ನು ಬಿಟ್ಟೋಡದೇ
> ಅವರೆಲ್ಲರ ಹೆಗಲೇರಿ, ತಲೆ ಮೆಟ್ಟಿ,
> ಮಾನವತೆಗೆ ಮಾನ ತಂದ ಮಹಿಮ ನೀನು;
> ಮರ್ತ್ಯಕ್ಕೆ ಕೋಡು ಮೂಡಿಸಿದ ಮೋಡಿಕಾರ ನೀನು!
> ಅಯ್ಯಾ, ನೀನು ಬಸವನ ಹಾಗೆ ಕಸ ತೆಗೆದು ಹೋದೆ;
> ಮತ್ತೆಲ್ಲಿ ಬಿದ್ದಿದೆ ಕಾಣು, ತಿಪ್ಪೆ!
> ನೀನು ಗಳಿಸಿಟ್ಟುದನ್ನೆಲ್ಲ ಕಳೆದು, ಮತ್ತೆ ನಮ್ಮದು
> ತಿರುಪೆ!"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೩೩;-೧೩೪)

ಪರಶುರಾಮನಂತೆ ಕೊಡಲಿ ಹಿಡಿಯದೆ, ಉಗ್ರನರಸಿಂಹನಂತೆ ಕಂಬವನ್ನೊಡೆಯದೆ, ವಾಮನನಂತೆ ಭೂಮ್ಯಾಕಾಶಗಳನ್ನು ಹೆಜ್ಜೆಗಳಿಂದ ಮುಚ್ಚದೆ, ಹರಿಶ್ಚಂದ್ರನಂತೆ ನಡುರಾತ್ರಿಯಲ್ಲಿ ಮಡದಿ ಮಕ್ಕಳನ್ನು ಬಿಟ್ಟು ಹೋಗದೆ ಅವರೆಲ್ಲರಿಗಿಂತ ಮಾನವೀಯತೆಯ ಪರಕಾಷ್ಠತೆಯನ್ನು ಮೆರೆದ ಮಹಿಮನಂತೆ ಗಾಂಧಿಯನ್ನು ಪ್ರತಿನಿಧಿಸಲಾಗಿದೆ. ಡಾ. ಶ್ರೀನಿವಾಸ ಕುಲಕರ್ಣಿ ಅವರು ತಮ್ಮ "ಬಾಪೂಗೆ!" ಎಂಬ ಕವಿತೆಯಲ್ಲಿ ಗಾಂಧೀಜಿಯವರ ಅಸಾದೃಶ್ಯ ವ್ಯಕ್ತಿತ್ವವನ್ನು ಹೀಗೆ ಪ್ರತಿನಿಧಿಸಿದ್ದಾರೆ.

> "ನಿನ್ನ ಬಡಕಲು ದೇಹದೆದೆ ಗೂಡಿನಲಿ
> ಅದೆಂಥ ಭೋರ್ಗರೆವ ಕಡಲು

ಅಟ್ಟಹಾಸದ ಸಾಮ್ರಾಜ್ಯಶಾಹಿ ಹಡಗು
ಗುಟಕರಿಸಿ ರಸಾತಳಕ್ಕಿಳಿಯಿತು
ನಿನ್ನ ಕಂಗಳಲಿ ಅದೆಂಥ
ಸೂರ್ಯಕಾಂತಿ, ಚಂದ್ರನ ಮಾರ್ದವತೆ
ಅದರೊಳು ಮಿಂದು ಮಾನವತೆ
ಬೆಳಗಿ ಪುನೀತವಾಯಿತು.
ನಿನ್ನ ಚಿತ್ತದಲಿ ಅದೆಂಥ ಗಟ್ಟಿತನ
ಭುವಿಯನ್ನೇ ಸತ್ಯ ಎತ್ತಿ ಹಿಡಿಯಿತು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೪೭)

ಬ್ರಿಟೀಷ್ ಅಟ್ಟಹಾಸದ ಸಾಮ್ರಾಜ್ಯಶಾಹಿ ಆಡಳಿತ ಯಂತ್ರವು ಗಾಂಧೀಜಿಯ ಬಡಕಲು ದೇಹದ ಮೌಲ್ಯಕ್ಕೆ ಗುಟಕರಿಸಿ ರಸಾತಳಕ್ಕೆ ಇಳಿದು ಶರಣಾಗಿ ದೇಶವನ್ನು ಬಿಟ್ಟು ತೊಲಗಿತು. ಇದೆಲ್ಲ ಗಾಂಧೀಜಿಯಲ್ಲಿರುವ ಅಸಾದೃಶ್ಯವಾದ ತತ್ವ, ಮೌಲ್ಯಗಳೇ ಕಾರಣವೆಂದು ವ್ಯಕ್ತಪಡಿಸಲಾಗಿದೆ.

ಗಾಂಧೀಜಿ ಬ್ಯಾರಿಸ್ಟರ್ ಆಗಲು ಇಂಗ್ಲೆಂಡ್‌ಗೆ ವಿದ್ಯಾಭ್ಯಾಸಕ್ಕೆ ಹೋದರು. ನಂತರ ವಕೀಲಿ ವೃತ್ತಿಯನ್ನು ಮುಂದುವರೆಸಲು ದಕ್ಷಿಣ ಆಫ್ರಿಕಾಗೆ ತೆರಳಿದರು. ಅಲ್ಲಿನ ಜನರ ಮೇಲೆ ಆಗುತ್ತಿರುವ ಅನ್ಯಾಯ, ಶೋಷಣೆ, ದಬ್ಬಾಳಿಕೆಗಳ ವಿರುದ್ಧ ಹೋರಾಟ ನಡೆಸಿದರು. ನಂತರ ಭಾರತಕ್ಕೆ ಬಂದು ಇಲ್ಲಿನ ಪರದಾಸ್ಯದ ವಿರುದ್ಧ ಅಹಿಂಸಾತ್ಮಕ ರೀತಿಯಲ್ಲಿ ಹೋರಾಡಿ ಭಾರತಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟರು ಎಂದು ಕೆ.ನ. ಶಿವತೀರ್ಥನ್ ಅವರು 'ಬಾಪು' ಎಂಬ ಕವಿತೆಯಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ.

"ಕಡಲ ಅಲೆ ಮೇಲೆ ದೂರ ಯಾನ ಈ ಪೋರ
ಅಲ್ಲಿ ಊರುಕೇರಿ ದಾರಿ ಎಲ್ಲಾ ಅಚ್ಚರಿ ಹೊಸತು
ದಿಕ್ಕು ತಪ್ಪಿದರೆ ದಿಕ್ಕಾಗಿ ಕಾಡಿದ್ದು ಉಳಿಸಿದ್ದು
ಹರಿಶ್ಚಂದ್ರ-ರಸಿಕ ಇನ್ನಿತರ ಮಾನವೀಯ ಒಳತೋಟಿ
ದಂಡಿ ಹಿಡಿದ ಸತ್ಯಾಗ್ರಹಿ ಅಚಲ ಹಿಮಾಚಲ
ಯಾವ ಕಾಣ್ಕೆಯೊ ಕಾಣೆ ಈ ನಾಡಿಗೆ ಕಡೆಗೂ ಬಿಡುಗಡೆ
ಎಚ್ಚರ ತಪ್ಪಿದ ಮಂದಿಗೆ ಸದಾ ದಾಸ್ಯ ಎಲ್ಲಿಯ ಬಿಡುಗಡೆ!"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೫೫)

ಇಂಗ್ಲೆಂಡಿನ ವಿದ್ಯಾಭ್ಯಾಸದಲ್ಲಿ ಗಾಂಧೀಜಿ ಅಲ್ಲಿನ ಪಾಶ್ಚಾತ್ಯ ಮಾದರಿಗೆ (ಉಡುಪು, ಆಹಾರ ಪದ್ಧತಿ ಇತ್ಯಾದಿ) ಮಾರುಹೋಗಿ ದಿಕ್ಕು ತಪ್ಪುತ್ತಿದ್ದಾಗ ಅವರನ್ನು ಪುನಃ ಸ್ಥಿತಿಪ್ರಜ್ಞೆಗೆ ತಂದದ್ದು ಆತನ ಮೇಲೆ ಪ್ರಭಾವ ಬೀರಿದ ಹರಿಶ್ಚಂದ್ರ ನಾಟಕ, ಭಾಗವತ ಮತ್ತು ತನ್ನ ತಾಯಿಗೆ ಕೊಟ್ಟ ಮಾತುಗಳು. ನಂತರ ಭಾರತಕ್ಕೆ ಬಂದು ದಂಡಿ ಸತ್ಯಾಗ್ರಹದಿಂದ ಹೋರಾಟವನ್ನು

ಪ್ರಾರಂಭಿಸಿದರು. ಹಲವು ಸತ್ಯಾಗ್ರಹ, ಹೋರಾಟಗಳಿಂದ ಭಾರತಕ್ಕೆ ಕೊನೆಗೂ ಬಿಡುಗಡೆ ಸಿಕ್ಕಿತು. ಆದರೆ ಎಚ್ಚರ ತಪ್ಪಿದ ಮಂದಿಗೆ ಮಾತ್ರ ಇಂದಿಗೂ ಸದಾ ದಾಸ್ಯದಲ್ಲಿಯೇ ಮುಳುಗಬೇಕಾಗಿದೆ ಎಂದು ಚಿತ್ರಿಸಲಾಗಿದೆ.

ಶಿವಶರಣ ಪಾಟೀಲ ಜಾವಳಿ ಅವರು ತಮ್ಮ 'ನೀನುಂಟು ನಾವುಂಟು' ಎಂಬ ಕವಿತೆಯಲ್ಲಿ ವಿಡಂಬನ ರೀತಿಯಲ್ಲಿ ಗಾಂಧಿಯನ್ನು ಪ್ರಶ್ನಿಸುತ್ತಿದ್ದಾರೆಯೋ ಎಂಬಂತೆ ಭಾಸವಾಗುತ್ತಿದೆ.

"ಈಶ್ವರ ಅಲ್ಲಾ ತೇರೇನಾಮ!
ಎಂದು, ದಿನಾ ಹಾಡುತ್ತಿದ್ದೆಯಲ್ಲ
ನೀನು ಉತ್ತಮ ಹಿಂದುವೂ ಅಲ್ಲ
ಉತ್ತಮ ಮುಸಲ್ಮಾನನೂ ಅಲ್ಲ
ನೌಖಾಲಿಯಲಿ ಕಲ್ಕತ್ತೆಯಲಿ
ದೇಶದ ನಗರನಗರಗಳಲ್ಲಿ
ಮಾರಣಹೋಮವ ಹೂಡಿ
ಹೇಗೆ ತೋರಿಸಿಕೊಟ್ಟೆವು ನಾವು"

ಹಿಂದೂ-ಮುಸಲ್ಮಾನರ ಜಾತಿ ವರ್ಗಸಂಘರ್ಷದಲ್ಲಿ ಮಾರಣಹೋಮ ಹೂಡಿ ನಾ ಮುಂದು ತಾ ಮುಂದು ಆಗ ಕೈ ಕೈ ಹಿಡಿದು ಕೈ ಕೈ ಹೊಡೆದು ಗಹಗಹಿಸಿ ನಕ್ಕೆವು ನಾವು ಎಂದು ಹೇಳುತ್ತಾ ಮುಂದುವರೆದು.

'ಅಹಿಂಸಾ ಅಹಿಂಸಾ' ಎಂದು ಎಷ್ಟು ಹಿಂಸಾಕೊಡುತ್ತಿದ್ದೆ?
ಹಿಂಸೆಯನ್ನು ಅಹಿಂಸೆಯಿಂದ ಎದುರಿಸಬೇಕೆಂದು
ಹೇಗೆ ಎದೆಯುಬ್ಬಿಸಿ ಹೇಳುತ್ತಿದ್ದೆ?
ನಿನ್ನದೆಲ್ಲಾ ತಪ್ಪೆಂದು
ನಮ್ಮ ಗೋಡ್ಸೆ ಹೇಗೆ ಗುಂಡಿಟ್ಟು ಹೊಡೆದ
'ಥಾಡ್ ಥಾಡ್ ಥಾಡ್' ಎಂದು
ಉಬ್ಬಿಸಿದ ನಿನ್ನ ಎದೆಗೆ
ಹೇಗೆ ಜಯಭೇರಿ ಹೊಡೆದೆವು ನಾವು!

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೫೭)

ಗಾಂಧೀಜಿಯವರ ತತ್ತ್ವಾದರ್ಶಗಳಾದ ಸತ್ಯ, ಅಹಿಂಸೆ, ಸತ್ಯಾಗ್ರಹ ಮುಂತಾದವುಗಳು ಪ್ರಸ್ತುತ ದಿನಮಾನದಲ್ಲಿ ಯಾವ ಕೆಲಸಕ್ಕೆ ಬಾರದವು. ಅಹಿಂಸೆಯ ಬದಲಾಗಿ ಹಿಂಸೆ, ಸತ್ಯದ ಬದಲಾಗಿ ಅಸತ್ಯ, ಅನ್ಯಾಯಗಳು ತಾಂಡವವಾಡುತ್ತಿವೆ ಎಂದು ವ್ಯಕ್ತಪಡಿಸಿದ್ದಾರೆ.

ಗಾಂಧೀಜಿ ಹೋದ ಸ್ಥಳಗಳೆಲ್ಲ ಪುಣ್ಯಕ್ಷೇತ್ರವಾಯಿತು. ಜಾತಿ-ಮತಗಳ ಬಂಧನವು ಕಳಚಿದವು. ಸಂಸಾರ-ಸನ್ಯಾಸ ಅವೆರಡಕ್ಕೂ ಅವರಿಂದ ಅರ್ಥ ಬಂದವು. ಜೀವನದುದ್ದಕ್ಕೂ ಎಲ್ಲರನ್ನು

ಸಮಾನವಾಗಿ ಕಾಣುತ್ತಾ ಒಳಿತನ್ನೇ ಬಯಸಿದ ಪುಣ್ಯಾತ್ಮನೆಂದು ಶಾಂತರಸರು 'ಗಾಂಧಿ ಎಂಬುವ ಹೆಸರು' ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಕೆಟ್ಟುದನು ಕಂಡರಿಯ ಒಳಿತೊಂದನೇ ಬಲ್ಲ
ಲೇಸಗೈಯುತ ಸವೆದು ಶ್ರೀಗಂಧವಾದ
How dangerous it is to be too good
ಜ್ಞಾನಿಯೊಬ್ಬನು ಹೀಗೆ ಮನಗರಗಿ ನುಡಿದ
....
ಭಾರತದ ಹಣೆಯಲ್ಲಿ ಬರೆದ ದುರ್ಲಿಖಿತವನು
ತೊಡೆದುಹಾಕಿದ ಧೀರ ವೀರ ಸಂತ
ಸಂಸಾರ ಸನ್ಯಾಸ ಎರಡಕ್ಕೂ ಅವನಿಂದ
ಬೆಲೆ ಬಂತು ಅವನೆಂಥ ಪುಣ್ಯವಂತ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೧೧೯-೧೨೦)

ಭಾರತದ ಕೆಟ್ಟ ಹಣೆಬರಹವನ್ನು ಬದಲಾಯಿಸಿದ ವೀರ, ಧೀರ ಮತ್ತು ಒಬ್ಬ ಮಹಾನ್ ಸಂತನಾಗಿ ಗಾಂಧಿಯನ್ನು ಪ್ರತಿನಿಧಿಸಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ತಂದ, ಜ್ಞಾನ-ಸಂಪದ-ಸಿದ್ಧಿ ಗಂಗಾವತರಣಕ್ಕೆ ಕೈಮುಗಿದು ಪ್ರಾರ್ಥನೆಗೆ ನಿಂತ ಮಹಾತ್ಯಾಗಿಯಾಗಿ ಚಿತ್ರಿಸಿದ್ದಾರೆ.

ಸಿದ್ದಣ್ಣ ಮಸಳಿ ಅವರು ಗಾಂಧೀಜಿ ಕತ್ತಲಲ್ಲಿರುವ ಮನೆ(ದೇಶ)ಗಳಿಗೆ ಬೆಳಕಾಗಿ ಬಂದವರು. ಬಾನಂಗಳದಲ್ಲಿ ಮಿನುಗುವ ಚಂದ್ರನಂತೆ ಮತ್ತು ಜನರ ಉದ್ಧಾರಕ್ಕಾಗಿ ತನ್ನ ದೇಹವನ್ನೇ ಸವೆಸಿದ ಸ್ಥಿತಪ್ರಜ್ಞ ಪುಣ್ಯಪುರುಷನೆಂದು 'ಶುಭೋದಯ' ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಬೆಳಕಿಲ್ಲದೀ ಮನೆಗೆ ಬೆಳಕಾಗಿ ಬಂದನಿವ
ಚಿಕ್ಕೆಯಂಗಳದಿ ಚಂದ್ರಾಮ ಚೆಲುವ!
ದಳದಳವೇರಿ ಕಳೆಯೇರಿ
ಇರುಳ ಮಲ್ಲಿಗೆಯರಳು ಬೆಳುದಿಂಗಳು
....
ನಮ್ಮ ಉದ್ಧಾರಕ್ಕೆ ದೇಹ ಸವೆಸಿದನಿವನು
ಸ್ಥಿತಪ್ರಜ್ಞ ಓ ಪುಣ್ಯಪುರುಷ
ದೀನ ದಲಿತರ ಎದೆಯ ಮಾನಸದಿ ವಿಹರಿಸುವ
ಶ್ವೇತ ಪದ್ಮಸ್ನೇಹಿ ರಾಜಹಂಸ....."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೭೭)

ಗಾಂಧೀಜಿಯನ್ನು ಭೂಮಂಡಲವು ಇರುಳಿನಲ್ಲಿರುವಾಗ ಬೆಳದಿಂಗಳನ್ನು ಬೀರುವ ಚಂದ್ರನಂತೆ, ದೀನದಲಿತರ ಮನಸಲ್ಲಿ ಸದಾಕಾಲ ವಿಹರಿಸುವ ರಾಜಹಂಸನಂತೆ ಪ್ರತಿನಿಧಿಸಲಾಗಿದೆ.

ದೇವೇಂದ್ರಕುಮಾರ ಹಕಾರಿ ಅವರು ಗಾಂಧೀಜಿ ಸ್ವಾತಂತ್ರ್ಯ ಹೋರಾಟಕ್ಕೆ ಹಲವಾರು ರಚನಾತ್ಮಕ ಕಾರ್ಯಗಳನ್ನು ರೂಪಿಸಿ ಹೋರಾಟವನ್ನು ನಡೆಸಿದರು. ಅದಕ್ಕೆ ಗಾಂಧಿ ಕಾಲದ ಜನತೆ ತುಂಬಾ ಉತ್ಸಾಹದಿಂದ ಪ್ರೋತ್ಸಾಹ ನೀಡಿ ಚಳುವಳಿಯಲ್ಲಿ ಭಾಗವಹಿಸುತ್ತಿದ್ದರು. ಗಾಂಧಿ ತನ್ನ ಬಡಕಲು ದೇಹದಲ್ಲೂ ನಾಡನ್ನೆಲ್ಲಾ ಸುತ್ತಾಡಿದ್ದಾರೆ. ಆದರೆ ಈಗ ಗಾಂಧಿಯ ನಂತರದ ಜನತೆ ಗಾಂಧೀ ತತ್ವಗಳನ್ನು, ಆದರ್ಶಗಳನ್ನು ಗಾಂಧಿ ಕಾಲದ ಜನತೆ ಪ್ರೋತ್ಸಾಹಿಸಿದಷ್ಟು, ಆರಾಧಿಸಿದಷ್ಟು ಮೈಗೂಡಿಸಿಕೊಂಡಿಲ್ಲ ಎಂಬುದನ್ನು ಹಕಾರಿಯವರು 'ಗಾಂಧೀಜಿ ಕಂಡ ಕನಸು' ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಅಜ್ಜ ನಿನ್ನ ನೋಡಿದೊಡನೆ ನಗೆಯು ಬರುವುದು
ಆ ದಾರಿ
ಬಾಲ್ಯದಿಂದಲೂ ತಾನು ನಡೆದ ದಾರಿ
ಅಲ್ಲಲ್ಲಿ ಬರುತ್ತಿದ್ದ
ರಿ
ಏ
ಆ
ಆ
ಇ
ಳು
ವು
ಅದ ಹತ್ತಿ ಇಳಿದಾಗ ಅಲ್ಲಿಯೇ ಕೈಮಾಡಿ
ಕರೆವ ಮಠ, ಕೆರೆಯ, ಕೆರೆ ದಂಡೆ
ಹೊಂಗೆ ಹಾಸಿದ ತಂಪು
ಇದು ಎಲ್ಲ ಆಗ -
ಈಗ?
ಈಗಲೋ ಎಲ್ಲವೂ ಮಟಾ ಮಾಯ
'ಮಾಯದೆಲ್ಲವ್ವ ನಿನ್ನಾಟ ಬಲ್ಲವರಾರು?'
ದೂರದಾ ದಾರಿ...."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೯೨-೯೩)

ಗಾಂಧೀ ಕಾಲದಲ್ಲಿದ್ದ ಗಾಂಧಿ ತತ್ವಗಳಿಗೆ, ಆದರ್ಶಗಳಿಗೆ ಮತ್ತೆ ಗಾಂಧಿ ತೋರಿಸಿದ ದಾರಿಯಲ್ಲಿ ನಡೆಯುವ ಮನಸ್ಥಿತಿಯುಳ್ಳವರು ಈಗ ಸಿಗುವುದಿಲ್ಲ. ಈಗ ಮನುಷ್ಯನ ಜೊತೆಗೆ ಕಾಲವೂ ಬದಲಾಗಿ ಹೋಗಿದೆ ಎಂಬುದಾಗಿ ಚಿತ್ರಿಸಿದ್ದಾರೆ.

ಬಿ.ಎ. ಸನದಿ ಅವರು ಕಾಲ ಸ್ಥಿತ್ಯಂತರಗೊಂಡಿರುವುದನ್ನು 'ನಾವೂ ನಿನ್ನವರು' ಕವಿತೆಯಲ್ಲಿ ಹೀಗಿ ಚಿತ್ರಿಸಿದ್ದಾರೆ.

"ಕಾಲ ಕೆಟ್ಟಿತು ಗೊತ್ತೇ,
ಅವರವರ ಕಾಯಕದಿ ಶ್ರದ್ಧೆಯೆಂಬುದಿಲ್ಲ
ಶಾಲೆಯಲಿ ಶಿಕ್ಷಕರು ನಮ್ಮ ಮಕ್ಕಳಿಗೆಲ್ಲ
ತೀಡಿಸುವರೆ ಇಲ್ಲವೋ ನಿನ್ನ ಕಿತ್ತೆ!
ಏನು ಕೇಳಿದರೂನು ಬಾಯಿ ತೆರೆಯುವುದಿಲ್ಲ ಈ ಮಕ್ಕಳು...!
ಆ ನಮ್ಮ ಬಾಲ್ಯದಲಿ
ಕಲಿತ ಮಾತುಗಳೆಲ್ಲ ಇಂದಿಗೂ ನೆನಪಿಹವು
ನಿನ್ನ ಘನ ತತ್ವಗಳ ಕನಸಿನೊಳಗೂ ಕೇಳು
ಚಾಚು ತಪ್ಪದೆ ಪಾಠ ಒಪ್ಪಿಸುವೆವು."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೮೮)

ಹಳೇ ಕಾಲದ ಶಿಕ್ಷಕರು ಗಾಂಧೀಜಿಯ ಆದರ್ಶದ ಜೀವನವನ್ನು ಮಕ್ಕಳ ಕಣ್ಣಿಗೆ ಕಟ್ಟುವ ಹಾಗೆ ಬೋಧಿಸುತ್ತಿದ್ದರು. ಆದರೆ ಈಗಿನ ಶಿಕ್ಷಕರು ನೀರಸವಾದ ರೀತಿಯಲ್ಲಿ ಬೋಧಿಸಿ ಗಾಂಧೀಜಿಯ ತತ್ವಗಳು, ಆದರ್ಶಗಳ ಪರಿಚಯವೇ ಇಲ್ಲದ್ಹಾಗೆ ಮಾಡುತ್ತಿದ್ದಾರೆ. ಈಗ ಗಾಂಧೀಜಿ ಮತ್ತು ಗಾಂಧೀಜಿಯ ಆದರ್ಶಗಳು ಕಣ್ಮರೆಯಾಗುತ್ತಾ ಹೋಗುತ್ತಿವೆ ಎಂದು ಚಿತ್ರಿಸಿದ್ದಾರೆ.

ಸೋಮಶೇಖರ ಇಮ್ರಾಪುರ ಅವರು ಗಾಂಧೀಜಿಯವರ ವ್ಯಕ್ತಿತ್ವದ ಆದರ್ಶದ ಬೆಳೆ ಪ್ರಸ್ತುತ ದಿನಮಾನದಲ್ಲಿ ನೆಲಕಚ್ಚುತ್ತಿವೆ ಎಂದು "ಹುಟ್ಟಬಾರದಾಗಿತ್ತು ಗಾಂಧಿ" ಎಂಬ ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಭಾವ ಭಾವಗಳ ನೂರು ಮುಖ ಬೆಳೆದು
ಕರಿಮೋಡಗಳ ತೊಳೆದು
ಜುಳುಜುಳುಕು ತೀಡಿ
ನಾಡಿನೆದೆ ಹರ ಮೂಡಿ ಕಸಕಡ್ಡಿ ಸೋಸಿ
ಕಸುವು ಗೊಬ್ಬರ ಹರವಿ
ಪ್ರೀತಿ ಜೇನು ಮಳೆ ತಂಪು ನೀಡಿ
ಬದುವು ಇಲ್ಲದ ಹೊಲಕೆ ಕೂರಿಗೆಯ ಹಾಕಿ
ಬಿತ್ತೇ ಬಿತ್ತಿದ ಭಾವೈಕ್ಯ ಬೀಜ"

(ಸೋಮಶೇಖರ ಇಮ್ರಾಪುರ; ೧೯೯೧; ಪು. ೩೮)

ದೇಶದಲ್ಲಿರುವ ಜಾತಿ, ಮತ, ಧರ್ಮಗಳ ಸಂಘರ್ಷಗಳಿಂದ ಕೂಡಿದ ಜನತೆಯನ್ನೆಲ್ಲಾ ಒಂದೇ ತಾಯಿಯ ಮಕ್ಕಳು ಎಂಬ ಭಾವವನ್ನು ಬೆಸೆದರು. ಜನರಲ್ಲಿರುವ ಹಿಂಸೆ, ದ್ವೇಷ, ಸ್ವಾರ್ಥದ ಕರಿಮೋಡಗಳನ್ನೆಲ್ಲ ತೊಳೆದು, ದುರ್ನಡತೆ, ದುರಾಚಾರಗಳನ್ನು ಕಿತ್ತು ಹಾಕಿ ಅಪಾರ ಎದೆಗಳಲ್ಲಿ ದೇಶಭಕ್ತಿ, ಸಹೋದರತೆ, ಅಹಿಂಸೆ, ತ್ಯಾಗ, ಸೇವಾಭಾವದ ಕಸುವು ತುಂಬಿದರು. ಜಾತಿ, ಮತ, ಧರ್ಮಗಳ ಬದುವುಗಳಿಲ್ಲದ ಹೊಲಕ್ಕೆ ಭಾವೈಕ್ಯದ ಬೀಜ ಬಿತ್ತಿದರು ಎಂದು ವ್ಯಕ್ತಪಡಿಸಿದ್ದಾರೆ."

ಸಿ.ಪಿ.ಕೆ. ಅವರು "ಗಾಂಧೀ ಜಯಂತಿಯನ್ನು ನೆನೆದು" ಎಂಬ ಕವಿತೆಯಲ್ಲಿ ಗಾಂಧೀಜಿಯವರ ಮಹೋನ್ನತ ವ್ಯಕ್ತಿತ್ವದ ವಿಶಾಲತೆಯನ್ನು ಹೀಗೆ ಪ್ರತಿನಿಧಿಸಿದ್ದಾರೆ.

"ನಿನ್ನನ್ನು ನಾನು ಕಂಡವನಲ್ಲ ಬಾಪು;
ಆದರೂ ನಿನ್ನ ನೆರಳಿನಲ್ಲೆ ನಿಂತಿದ್ದೇನೆ!
ನೀನು ಈ ನೆಲದ ಮೇಲು ಪದರವನ್ನಷ್ಟೇ ಹೀರಿ,
ಬೆಳೆದ ಪರಂಗಿಯಲ್ಲ;
ಆಳಕ್ಕೆ ಬೇರಿಳಿಸಿ, ಜಲಮೂಲವನ್ನೇ ಹೀರಿ,
ಅಂತಸ್ಸತ್ವವನ್ನೆಲ್ಲ ಅರಗಿಸಿಕೊಂಡು
ದೇಶೋ ವಿಶಾಲವಾಗಿ ಬೆಳೆದು ನಿಂತ ವಟ ವೃಕ್ಷ"

(ಸಿ.ಪಿ.ಕೆ.; ೧೯೭೭; ಪು. ೭೬)

ಗಾಂಧೀಜಿ ಈ ದೇಶದಲ್ಲಿ ಹುಲ್ಲುಗರಿಕೆಯ ಹಾಗೆ ಭೂಮಿಯ ಮೇಲ್ಪದರಲ್ಲಷ್ಟೇ ಹಬ್ಬಿ ಬೆಳೆದವರಲ್ಲ. ಅವರು ಈ ದೇಶದ ಸಂಸ್ಕೃತಿಯ ಅಂತಃಸತ್ವದ ಆಳಕ್ಕೆ ಬೇರಿಳಿಸಿ ಅದರ ಎಲ್ಲ ಸತ್ವವನ್ನು ಮೈಗೂಡಿಸಿಕೊಂಡು ವಿಶಾಲ ಆಲದ ವೃಕ್ಷವಾಗಿ ಬೆಳೆದವರು ಮತ್ತು ದುಃಖಿತರಿಗೆ, ಶೋಷಿತರಿಗೆ, ದುರ್ಬಲರಿಗೆ ಕಾರುಣ್ಯದ ನೆರಳು ನೀಡಿದವರು ಎಂದು ಚಿತ್ರಿಸಲಾಗಿದೆ.

ಗಾಂಧೀಜಿ ವಿಶ್ವರೂಪವನು ತಳೆದು ಸಂಚರಿಸಿದಲ್ಲೆಲ್ಲ ಜಾತಿ, ಮತ, ಭೇದಗಳ ಸಕಲ ಬಂಧನಗಳು ಕಳಚಿ ಹೋದವು ಎಂಬುದನ್ನು ಶಾಂತರಸರು 'ಗಾಂಧಿ ಎಂಬುವ ಹೆಸರು' ಕವಿತೆಯಲ್ಲಿ ಗಾಂಧೀಜಿಯ ಮೌಲ್ಯಗಳನ್ನು ಕಾವ್ಯವಾಗಿಸಿದ್ದಾರೆ.

"ಎಲ್ಲಿ ನೋವಿದ್ದಲ್ಲಿ ದುಃಖವಿದ್ದೆಡೆಯಲ್ಲಿ
ಕಣ್ಣೀರು ಹರಿವಲ್ಲಿ ಪ್ರತ್ಯಕ್ಷನೀತ
ಎದೆಗುದಿಯ ಮೈದಡವಿ ಸಂಕಟದ ತಲೆಸವರಿ
ಕಳವಳದ ಜೀವಕ್ಕೆ ತಂಪೆರೆದನೀತ
ಯಾರ ಪಾಪವೆ ಇರಲಿ ತನಗೆ ಪ್ರಾಯಶ್ಚಿತ್ತ
ಸರ್ವ ಜೀವದ ಶುದ್ಧಿಗಾಗಿ ಉಪವಾಸ
ಬಂಧನದ ಸೆರೆಯಿಂದ ಬಿಡುಗಡೆಯ ಬಿಡಿಸಲಿಕೆ
ಏಸೊ ವರ್ಷವು ತನಗೆ ಜೇಲುವಾಸ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೬೯)

ಗಾಂಧೀಜಿಯವರು ಅಸಮಾನತೆ, ಅನ್ಯಾಯ, ಶೋಷಣೆ ಮತ್ತು ಅಮಾನುಷ ಆಚರಣೆಗಳ ನೋವಿನಲ್ಲಿ ಸಿಲುಕಿರುವ ಜನಗಳ ಚೈತನ್ಯದ ಚಿಲುಮೆಯಾಗಿದ್ದರು. ಸರ್ವ ಜನಗಳ ಶಾಂತಿಯ, ನೆಮ್ಮದಿಯ ಬದುಕಿಗಾಗಿ ಉಪವಾಸ ವ್ರತಗಳನ್ನು(ಸತ್ಯಾಗ್ರಹ) ಆಚರಿಸಿದರು. ದೇಶದ ಬಂಧ ವಿಮೋಚನೆಗಾಗಿ, ಜನಗಳ ನಿರಾಂತಕದ ಬದುಕಿಗಾಗಿ ಹಲವಾರು ವರ್ಷಗಳ ಕಾಲ ಜೈಲುವಾಸವನ್ನು ಅನುಭವಿಸಿ ಪರರಹಿತದಲ್ಲಿ ಪರಮಾತ್ಮನನ್ನು ಕಾಣುವವನು ಎಂದು ಅಭಿವ್ಯಕ್ತಿಸಲಾಗಿದೆ.

ಜಯಪ್ರಕಾಶ ಮಾವಿನಕುಳಿ ಅವರು 'ಗಾಂಧಿಗೆ ಕೊನೇ ನಮಸ್ಕಾರ' ಕವಿತೆಯಲ್ಲಿ ಗಾಂಧೀಜಿ ಒಬ್ಬ ಸ್ವದೇಶಿಯ ಹರಿಕಾರನೆಂಬಂತೆ ಕಂಡರಿಸಿದ್ದಾರೆ -

"ಗಾಂಧಿ - ಏನಂದಿರಿ ಗಾಂಧಿ!
ಚರಕದ ಚಕ್ರದಹತ್ತಿ
ಸಾಮ್ರಾಜ್ಯಕ್ಕೆ ಇಟ್ಟಿತಲ್ಲ ಬತ್ತಿ!
ಬಿಟ್ಟುಬಿಡಿ-ಊಟ, ಬಟ್ಟೆ, ಭಾಷೆ
ಬಿಟ್ಟು ಓಡುವವರು ನಮ್ಮದೇಶದಾಚೆ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೩೦೪)

ಗಾಂಧೀಜಿ ನಮ್ಮ ದೇಶದ ಆರ್ಥಿಕ ಅಭಿವೃದ್ಧಿ ಚರಕದಲ್ಲಿ ಅಡಗಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಆ ಚರಕವನ್ನು ಸ್ವದೇಶೀಯ ಅಸ್ತ್ರವಾಗಿ ಬಳಸಿಕೊಂಡು ಬ್ರಿಟೀಷರ ವಿರುದ್ಧ ಹೋರಾಡಿದರು. ಇಷ್ಟೇ ಅಲ್ಲದೇ ವಿದೇಶಿ ವಸ್ತ್ರಗಳನ್ನು ಸುಡುವುದು, ಮಾತೃಭಾಷೆಯ ಪ್ರೋತ್ಸಾಹ, ಯಂತ್ರಗಳ ನಿಷೇಧ ಮುಂತಾದ ಕಾರ್ಯಗಳನ್ನು ಕೈಗೊಂಡು ಬ್ರಿಟೀಷರನ್ನು ಎದುರಿಸಿದ ವೀರನಂತೆ ಇಲ್ಲಿ ಪ್ರತಿನಿಧಿಸಲಾಗಿದೆ.

ಗಾಂಧೀಜಿ ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಬಡವರ ಪರವಾಗಿ ಆಲೋಚನೆಯನ್ನಿಟ್ಟು ಕೊಂಡವರು. ಅವರಿಗೆ ಮೂಲಭೂತ ಸೌಕರ್ಯಗಳ ಜೊತೆಗೆ ಮೂಲಭೂತ ಹಕ್ಕುಗಳು ಸಲ್ಲಬೇಕೆಂದು ಬಿಡುವಿಲ್ಲದೆ ಪ್ರಯತ್ನಪಟ್ಟವರು. ಅಂತಹ ಕರುಣಾಮಯಿಯ ಈ ನಾಡಿನಲ್ಲಿ ಬಡವರ ಸ್ಥಾನ ಹೇಗಿದೆ ಎಂಬುದನ್ನು ಕವಿ ನಾಗೇಶ ರಾಂಪೂರ ಅವರು 'ಗಾಂಧಿ ನಾಡಿನಲ್ಲಿ' ಕವಿತೆಯಲ್ಲಿ ಹೀಗೆ ಚಿತ್ರಿಸಿದ್ದಾರೆ.

"ಇಲ್ಲಿ
ಬಡವ ಬದುಕುವುದೇ ಇಲ್ಲ.
'ಅಕ್ಷರ ಕ್ರಾಂತಿ' ಯಾತ್ರೆಯ ಹೆಸರಿನಲಿ
ಲಕ್ಷಗಳ ಕೊಳ್ಳೆಹೊಡೆವ
ಸೋಗಲಾಡಿಗಳ ನಾಡಿನಲಿ
ಬಡವ ಕಲಿಯುವುದೇ ಇಲ್ಲ.

....

ಮಹಾತ್ಮಾ, ನಿನ್ನನ್ನೇ ಹುತಾತ್ಮನನ್ನಾಗಿಸಿದ
ಆತ್ಮಘಾತುಕರ ಆರ್ಯಾವರ್ತದಲಿ
ಬಡವ ಬಾಳುವುದೂ ಇಲ್ಲ
ಹೀಗೇ ಮುಂದುವರೆದರೆ
ತಾಳುವುದೂ ಇಲ್ಲ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೩೦೬)

ಬಡವರ ಪಾಲಿಗೆ ಗಾಂಧೀಜಿ ದೇವರಂತೆ ಕಂಡಿದ್ದಾರೆ. ಸರಳ ಶೈಲಿಯಲ್ಲಿ ಜೀವನ ನಡೆಸಿದ ಗಾಂಧೀಜಿ ಬಡವರ ಪರವಾಗಿ, ದಲಿತರ ಪರವಾಗಿ ಕಾಳಜಿ ವಹಿಸಿದ್ದಾರೆ. ಆದರೆ ಈಗ ಭಾವೈಕ್ಯತೆಯ ಹಾಡು ಹಾಡುತ್ತಲೇ ಜಾತಿ ಪ್ರತ್ಯೇಕತೆಯ ಗುಂಡು ಹಾರಿಸುವ ಭಯೋತ್ಪಾದಕರೆ ಹೆಚ್ಚಾಗಿದ್ದಾರೆ ಮತ್ತು ಶಿಕ್ಷಣದ ಹೆಸರಿನಲ್ಲಿ ಲಕ್ಷ ಲಕ್ಷ ಹಣವನ್ನು ಕೊಳ್ಳೆ ಹೊಡೆಯುವರು. ಗಾಂಧೀಜಿ ಎಂಬ ದೇವರ ನಾಡಿನಲ್ಲಿ ಬಡವರು ಜೀವಿಸುವುದು ಕಷ್ಟವಾಗಿದೆ ಎಂದು ಚಿತ್ರಿಸಿದ್ದಾರೆ.

ಗಾಂಧೀಜಿ ಒಬ್ಬ ಅವತಾರ ಪುರುಷನೆಂದು ವೇಣುಗೋಪಾಲ ಕಾಸರಗೋಡು ಅವರು 'ನಾವು ಮತ್ತು ನೀನು' ಎಂಬ ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ನಮ್ಮೆಲ್ಲರ ಮಧ್ಯೆ ಹುಟ್ಟಿ
ನಮ್ಮ ಹಾಗೇ ಬೆಳೆದು
ನಮ್ಮೊಂದಿಗೇ ಇದ್ದೆ - ನಮ್ಮ ಮನಸ್ಸಾಕ್ಷಿಯಂತೆ
....
ಸ್ವಂತ ನೆಲದಲ್ಲಿ ನಿಂತು ತಲೆಯೆತ್ತಿ ನರುಗಂಪುಬೀರಿ
ಎಲ್ಲೆಂದರಲ್ಲಿ ವ್ಯಾಪಿಸಿದೆ ಜಗದಗಲ ನೆಲಮುಗಿಲ
ನಳೆದ ವಾಮನ ಪಾದ ಬೆಳೆಸುತ್ತ ತ್ರಿವಿಕ್ರಮನಾಗಿ
ಮಹಾಬಲಿಯ ಮೆಟ್ಟಿ ಮಹಾಬಲನಾದೆ, ಮಾನವನಾದೆ."
(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೩೧೦)

ಗಾಂಧೀಜಿ ನಮ್ಮ ಮಧ್ಯೆ ಸಾಮಾನ್ಯರಾಗಿ ಹುಟ್ಟಿ ಬೆಳೆದು, ತನ್ನ ಅತೀವ ಸಾಮರ್ಥ್ಯದಿಂದ ದುರ್ಗಮ ಮೋಹ ಕಂದಕಗಳನ್ನು ದಾಟಿ ಅಧಿಕಾರಗಳ ಆಕಾಂಕ್ಷೆ ಸ್ವಾರ್ಥ ಕೋಟೆಗಳನ್ನು ಪುಡಿ ಗುಟ್ಟಿ ಜನಮನ ಮುಟ್ಟಿ ಒಬ್ಬ ಅಸಾಮಾನ್ಯ ಮಹಾತ್ಮನಾದನು. ವಿದೇಶದಲ್ಲಿ ಶಿಕ್ಷಣ ಪಡೆದರೂ, ಪಾಶ್ಚಾತ್ಯ ಜೀವನ ಶೈಲಿಗೆ ಮಾರುಹೋಗದೆ ನಮ್ಮ ದೇಶಕ್ಕೆ ಮರಳಿದರು. ಇಲ್ಲಿನ ಪರಕೀಯರ ದಬ್ಬಾಳಿಕೆಯ ವಿರುದ್ಧ ಹೋರಾಡಲು ಜನತೆಯನ್ನು ಸಂಘಟಿಸಲು ದೇಶದುದ್ದಗಲಕ್ಕೂ ವಾಮನನಂತೆ ಪಾದಬೆಳೆಸಿ ಜನತೆಯನ್ನು ಸಂಘಟಿಸಿದ ಮಹಾಪುರುಷನಾದನು. ಹಾಗಾಗಿ ಗಾಂಧೀಜಿ ಇಲ್ಲಿ ವಾಮನನಂತೆ ಅವತಾರ ಪುರುಷನಂತೆ, ತ್ರಿವಿಕ್ರಮನಂತೆ, ಮಹಾಬಲನಂತೆ ಹಾಗೂ ಮಾನವತಾವಾದಿಯಂತೆ ಕಂಡಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಜೊತೆಗೆ ಗಾಂಧೀಜಿ ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳುವಳಿ, ವಿದೇಶಿ ವಸ್ತ್ರಗಳನ್ನು ಸುಡುವುದು ಮುಂತಾದ ಕಾರ್ಯಕ್ರಮಗಳು ಭಾರತದ ಜನತೆಯ ಆಶೋತ್ತರಗಳನ್ನು ಪ್ರತಿನಿಧಿಸುತ್ತವೆ. ಖಾದಿ ಬಟ್ಟೆ ದೇಶೀಯತೆಯನ್ನು ಪ್ರತಿನಿಧಿಸುತ್ತದೆ. ಇವೆಲ್ಲಾ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ತಿರುವು-ಮುರುವು ಆದವು ಎಂಬುದನ್ನು ಮಲ್ಲೇಪುರಂ ಜಿ. ವೆಂಕಟೇಶ ಅವರು 'ಸರ್ವೋದಯ ಮತ್ತು ಗಾಂಧೀಜಿ' ಎಂಬ ಕವಿತೆಯಲ್ಲಿ ಹೀಗೆ ಚಿತ್ರಿಸಿದ್ದಾರೆ.

"ದೇಶದ ತುಂಬಾ ಉದುಸಿ ಬಿಡುವ ಸಕಲಷ್ಟು ವೈಭವಗಳೂ
ಪುರಾತನ ಗುಡಿಗುಡಾರದ ತತ್ತ್ವ ಪ್ರಾಸಾಧನಗಳಲ್ಲಿ ನೀನು

ಮತ್ತೇ ಅವತರಿಸುವ ಸಂಗತಿ ನಮಗೇನು ಆಶ್ಚರ್ಯವಾಗಲಿಲ್ಲ
ಗಾಂಧೀಜಿ, ನಿನ್ನ ಅಸಹಕಾರದ ಮಹಿಮೆ, ಸರ್ವೋದಯದಲ್ಲಿ
ಅರಳಿದ್ದು-ಹೂಬಿಟ್ಟು ಘಮಘಮಿಸುವ ಮುನ್ನ
ಅದರ ಬೆಂಬೂದಿ ಮೂರ್ತದಿಂದ ಅಮೂರ್ತದಲ್ಲಿ ಹೊರಳಿ
ಮಣ್ಣಿಗಿರುವ ಹುಡಿಬಯಕೆ ಇನ್ನಾಲಗೆಯ ತತ್ತ್ವಸಾರವೇ:
ನಮಗೆ ಆಶ್ಚರ್ಯವಾಗುತ್ತದೆ. ನನ್ನ ಜನರ ನೆಲದ ಸ್ವಭಾವವೇ
ಹೀಗೆ ಏನೋ ಅಂತ. ನಿನಗೆ ದಿಗ್ಭ್ರಮೆಯಾಗಬಹುದು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೬೨)

ಗಾಂಧೀಜಿ ಸೌಹಾರ್ದತೆಯ ಕನಸನ್ನು ಕಂಡಿದ್ದರು. ಆ ಕನಸು ನನಸಾಗುವುದರೊಳಗಾಗಿ ಗಾಂಧೀಜಿ ಮೂರ್ತ ಸ್ವರೂಪದಿಂದ ಅಮೂರ್ತ ಸ್ಥಿತಿಯಲ್ಲಿ ಮಾಯವಾದರು. ಅವರ ಸರ್ವೋದಯದ ಮಾತು ಅವರ ಹಿಂದೆಯೇ ಗಾಳಿಯ ಮಾತಾಗಿ ಹೋಯಿತು ಎಂದು ಅಭಿಪ್ರಾಯವನ್ನು ಕಾವ್ಯವಾಗಿಸಿದ್ದಾರೆ.

ಸ್ವಾತಂತ್ರ ಭಾರತದಲ್ಲಿ ಗಾಂಧೀಜಿ ಒಂದು ವೇಳೆ ಬದುಕಿದ್ದರೆ ಇನ್ನೂ ಜೈಲಿನಲ್ಲಿ ಕಾಲ ಕಳೆಯುತ್ತ ಉಪವಾಸ ಸತ್ಯಾಗ್ರಹ ಮಾಡಿ ಜನವನ್ನೆಚ್ಚರಿಸಿ ಈ ವ್ಯವಸ್ಥೆಯನ್ನೇ ಅದಲು ಬದಲು ಮಾಡುತ್ತಿದ್ದ ಎಂದು ಶಿವಲಿಂಗಪ್ಪ ಭಾವಿಕಟ್ಟಿ ಅವರು 'ಗಾಂಧೀ ಸತ್ತದ್ದೇ ವಾಸಿ!' ಎಂಬ ಕವಿತೆಯಲ್ಲಿ ವಿವರಿಸುತ್ತಾರೆ.

"ಬಡವರನು ಎತ್ತಿಕಟ್ಟಿದ ಆರೋಪ ಬಂದು
ದೇಶದ್ರೋಹಿಯಾಗಿ ಆಜೀವ ಪರ್ಯಂತ
ಕಾಳಾಪಾನಿ....."

(ಚಂದ್ರಶೇಖರ ಪಾಟೀಲ ಮತ್ತು ಇತರರು;೧೯೯೮;ಪು. ೨೨೮)

ಗಾಂಧೀಜಿ ತಮ್ಮ ತತ್ವ - ಆದರ್ಶಗಳ ಮೂಲಕ ಇಡೀ ದೇಶದ ಜನತೆಯನ್ನು ಒಂದುಗೂಡಿಸಿದ ಆರೋಪದ ಮೇಲೆ ಈ ಸ್ವತಂತ್ರ ಭಾರತದಲ್ಲಿ ಅವರನ್ನು ದೇಶದ್ರೋಹಿಯಾಗಿ ಆಜೀವಪರ್ಯಂತ ಅಪರಾಧಿ ಸ್ಥಾನದಲ್ಲಿ ಕೂಡಿಸುತ್ತಿದ್ದರು. ಹಾಗಾಗಿ ಗಾಂಧಿ ಸತ್ತದ್ದೇ ವಾಸಿ! ಎಂದು ಕವಿ ಕವಿತೆಯಲ್ಲಿ ವಿಡಂಬಿಸಿದ್ದಾರೆ.

ಗಾಂಧೀಜಿ ಆದರ್ಶ ಜೀವನವನ್ನು ನಡೆಸಿದವರು. ಆದರೆ ಈ ಜನರು ಗಾಂಧೀಜಿಯು ಪಟ್ಟ ಶ್ರಮವನ್ನೆಲ್ಲಾ ಮರೆತು ಅವರ ಮೇಲೆ ನಾಟಕೀಯ ಭಾಷಣ ಮಾಡ್ತಾ ದೇಶವನ್ನು ಅವನತಿ ಸ್ಥಿತಿಗೆ ಕೊಂಡೊಯ್ಯುತ್ತಿರುವುದನ್ನು ಬಾಪುಗೌಡ ಪಾಟೀಲ ಅವರು 'ಕೊಲ್ಲಲೇ ಸಾಯಲೇ' ಎಂಬ ಕವಿತೆಯಲ್ಲಿ ಚಿತ್ರಿಸಿದ್ದಾರೆ.

ನಿನ್ನ ವ್ಯಕ್ತಿತ್ವಾನ
ಗುಣಿಸಿ,
ನಿನ್ನ ತತ್ತ್ವಗಳನ್ನು

ಭಾಗಿಸಿ, ಶೇಷ
ಶೂನ್ಯ ಮಾಡಾಕ್ಹತ್ತಾರ
ನಿನ್ನಂಥ ಹತ್ತು ಮಂದಿ
ಹುಟ್ಟಿ ಬಂದು ಉಪದೇಶಾ ಮಾಡಿದ್ರೂ
ಮತ್ತs ತಮ್ಮ ಹಗ್ಗಾ ತಿನ್ನೋ ಚಾಳೀ ಬಿಡೂದಿಲ್ಲ

(ಚಂದ್ರಶೇಖರ ಪಾಟೀಲ ಮತ್ತು ಇತರರು;೧೯೯೮;ಪು. ೨೩೮-೨೩೯)

ಗಾಂಧೀಜಿಯ ವ್ಯಕ್ತಿತ್ವ-ತತ್ತ್ವಗಳನ್ನು ಇಂದಿನ ಜನತೆ ಗಾಳಿಗೆ ತೂರಿ ತದ್ವಿರುದ್ಧವಾಗಿ ತಮ್ಮ ಜೀವನ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಗಾಂಧೀಜಿ ಪುನಃ ಹುಟ್ಟಿ ಬಂದು ತಮ್ಮ ಉಪದೇಶಗಳನ್ನು ನೀಡಿದರೂ ಅವನ್ನು ಕಿವಿಗೆ ಹಾಕಿಕೊಳ್ಳದ ಸ್ಥಿತಿ ನಮ್ಮ ಜನತೆಯದಾಗಿದೆ. ಹಾಗಾಗಿ ಗಾಂಧೀಜಿಯ ವ್ಯಕ್ತಿತ್ವ ತತ್ವಗಳು ಅಪಮೌಲ್ಯವಾಗುತ್ತಿರುವುದನ್ನು ಈ ಕವಿತೆ ಹೇಳುತ್ತದೆ.

ಗಾಂಧೀಜಿಯ ಆದರ್ಶಯುಕ್ತ ಜೀವನ ಮತ್ತು ಅವರ ತತ್ತ್ವ-ಚಿಂತನೆಗಳು ಬುದ್ಧಿಜೀವಿಗಳಿಗೆ ತಿರಸ್ಕಾರದ ಸರಕುಗಳಾಗಿದ್ದವು ಎಂಬುದನ್ನು ಮಹಾಬಲೇಶ್ವರ ಕಾಟ್ರಹಳ್ಳಿ ಅವರು 'ಅನಾಥ ದೇಹ ಪ್ರದರ್ಶನ' ಕವಿತೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

"ಹಿಂಬಾಲಕರಿಗೆ ಕೇಳಿಸದಷ್ಟು ಕ್ಷೀಣವಾಗಿತ್ತು
ತಾ ನಂಬಿದ ಆದರ್ಶಗಳೇಕಮೇವ
ಮಾದರಿ ಮಹಾತ್ಮನ ಮಿದುಳ ಗುಂಗುರು ಬಳ್ಳಿಯ
ತಂತುಗಳಲ್ಲಿ -
ಅಡಗಿದ್ದ ಚಿಂತನೆ
ಬುದ್ಧಿಜೀವಿಗಳ ತಿರಸ್ಕಾರದ ಸರಕಾಗಿತ್ತು.
ಹೀಗಾಗಬಾರದಿತ್ತು ಮಾನವೀಯತೆಯನ್ನೆಲ್ಲ
ಉಡಿಯಲ್ಲಿ ಕಟ್ಟಿಕೊಂಡು ಹಾರಿದ
ಮುದುಕನ ಸ್ಥಿತಿ - ಅನ್ನಿಸಿದ್ದು ಇತ್ತೀಚೆಗೆ"

(ಚಂದ್ರಶೇಖರ ಪಾಟೀಲ ಮತ್ತು ಇತರರು;೧೯೯೮;ಪು. ೨೬೯)

ಹೀಗೆ ಮಾನವೀಯತೆಯ ಪ್ರತಿರೂಪವಾದ ಗಾಂಧೀಜಿಯ ತತ್ತ್ವ-ಚಿಂತನೆಗಳು ಅವಸಾನದತ್ತ ಸಾಗುತ್ತಿರುವ ನೋವಿನ ಸಂಗತಿಯನ್ನು ಈ ಕವಿತೆ ಚಿತ್ರಿಸುತ್ತದೆ.

ಧರಣೇಂದ್ರ ಕುರಕುರಿ ಅವರು 'ಗಾಂಧಿ ಟೊಪ್ಪಿಗೆ' ಕವಿತೆಯಲ್ಲಿ ಗಾಂಧೀಜಿಯ ಟೊಪ್ಪಿಗೆಯನ್ನು ಸಾಂಕೇತಿಕವಾಗಿ ಬಳಸಿದ್ದಾರೆ. ಇಂದಿನವರು ಗಾಂಧೀಜಿಯ ಟೊಪ್ಪಿಗೆಯ ಹೆಸರಿನಲ್ಲಿ ಏನೆಲ್ಲಾ ಮೋಸ, ವಂಚನೆ, ಭ್ರಷ್ಟಾಚಾರ ಮಾಡಬಹುದು ಎಂಬುದನ್ನು ವಿಡಂಬಿಸಿದ್ದಾರೆ.

"ಈ ಟೊಪ್ಪಿಗೆಯ ಕೆಳಗಿರುವುದು
ನಮ್ಮ ತಲೆ
ನಿನ್ನದಲ್ಲ

ನಿನಗಾರು ಹೇಳಿದರು
ನಮಗೆ ತಲೆಯೇ ಇಲ್ಲವೆಂದು;
ಇದೇನು ಬರಿ 'ಸ್ಟ್ಯಾಂಡು'
ಎಂದೆಯಾ?
ಮೋಸ, ಭ್ರಷ್ಟಾಚಾರ
ಕೊಳಕು ವಸ್ತುಗಳ ತುಂಬಿ
ಶೆರೆಯ ಭಟ್ಟಿ ತೆಗೆಯುವ
ಹರವಿ
ನಮ್ಮ ತಲೆ
....
ನಿನ್ನ ಸಿದ್ಧಾಂತದ
ಕನಸುಗಳನ್ನೆಲ್ಲ
ನೀ ತೆಗೆದೊಗೆದ ಟೊಪ್ಪಿಗೆಯಲ್ಲೇ ಮುಚ್ಚಿ
ಇಡುತ್ತೇವೆ"

(ಚಂದ್ರಶೇಖರ ಪಾಟೀಲ ಮತ್ತು ಇತರರು;೧೯೮೮;ಪು. ೨೭೧-೨೭೨)

ಹೀಗೆ ಗಾಂಧೀಜಿಯ ತತ್ವ-ಸಿದ್ಧಾಂತಗಳು ಗಾಂಧೀ ಟೊಪ್ಪಿಗೆಯ ಹೆಸರಿನಲ್ಲಿ ಅಪಮೌಲ್ಯವಾಗುತ್ತಿರುವುದನ್ನು, ಸ್ವತಂತ್ರ ಭಾರತದಲ್ಲಿ ಗಾಂಧೀಜಿಯ ತತ್ವ-ಆದರ್ಶಗಳಿಂದ ದೇಶ ಸೇವೆ ಮಾಡುವುದು ಸುಲಭವಿಲ್ಲವೆಂದು ಕವಿ ಹೇಳಿದ್ದಾರೆ.

೩.೫. ಮಹಿಳೆಯರ ಕಾವ್ಯಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

ಗಾಂಧೀಜಿಯವರು ಸ್ತ್ರೀ ಸ್ವಾತಂತ್ರ್ಯದ ಮತ್ತು ಸಮಾನತೆಯ ಬದುಕಿಗಾಗಿ ಚಿಂತಿಸಿದ್ದಾರೆ. ಪುರುಷರಷ್ಟೇ ಸ್ತ್ರೀಗೆ ಎಲ್ಲಾ ವಿಧದಲ್ಲೂ ಮತ್ತು ಎಲ್ಲಾ ಕ್ಷೇತ್ರಗಳಲ್ಲೂ ಸಮಾನ ಹಕ್ಕು ಇರಬೇಕು ಎಂದು ಆಲೋಚಿಸಿದ್ದಾರೆ. ಗಾಂಧೀಜಿಗೆ ಮಹಿಳೆ ಕರುಣಾಮಯಿ ಮತ್ತು ತ್ಯಾಗದ ಮೂರ್ತಿಯಾಗಿ ಕಂಡಿದ್ದಾಳೆ. ಸ್ವಾತಂತ್ರ್ಯ ಹೋರಾಟಗಳಲ್ಲಿ ಹಾಗೂ ದೇಶದ ಏಳಿಗೆಗಾಗಿ ಸ್ತ್ರೀ-ಪುರುಷರಿಬ್ಬರೂ ಶ್ರಮಿಸಬೇಕೆಂದು ಬಯಸುತ್ತಿದ್ದರು. ಪುರುಷ ಲೇಖಕರಂತೆ ಮಹಿಳಾ ಲೇಖಕಿಯರು ಗಾಂಧೀಜಿಯವರನ್ನು ತಮ್ಮ ಕಾವ್ಯಗಳಲ್ಲಿ ಭಿನ್ನ ವಿಭಿನ್ನವಾಗಿ ಪ್ರತಿನಿಧಿಸಲು ಪ್ರಯತ್ನಿಸಿದ್ದಾರೆ. ಹಾಗಾಗಿ ಮಹಿಳೆಯರು ಗಾಂಧೀಜಿಯವರನ್ನು ಯಾವ ಯಾವ ರೀತಿಯಲ್ಲಿ ಕಂಡರಿಸಲು ಪ್ರಯತ್ನಿಸಿದ್ದಾರೆ ಎಂಬುದನ್ನು ಇಲ್ಲಿ ನೋಡಲಾಗಿದೆ.

ಎಂ.ಎಸ್. ವೇದಾ ಅವರು 'ಪುಟ್ಟ ಪುಢಾರಿಗೊಂದು ಉಪದೇಶ' ಎಂಬ ಕವಿತೆಯಲ್ಲಿ ಗಾಂಧೀಜಿಯನ್ನು ಹೀಗೆ ಚಿತ್ರಿಸಿದ್ದಾರೆ.

"ಅಯ್ಯೋ ಮಗು
ಬಿಡ್ತು ಎನ್ನು
ಏಕೆ ಗಾಂಧಿಯಾಗಬೇಕೆನ್ನುವೆ?

ಮಗು ಆಗದಿರು ನೀನು ಗಾಂಧಿ
ಸತ್ಯ ಅಹಿಂಸೆ ಶಾಂತಿ
ಯಿಂದ ನಡೆಸುವ ಕ್ರಾಂತಿ
ಬರೀ ಭ್ರಾಂತಿ ಕಾಣಯ್ಯ
ಸತ್ಯಾಗ್ರಹ ಉಪವಾಸ
ಪ್ರಾಯಶ್ಚಿತ್ತ ಪ್ರಾಯೋಪದೇಶ
ಕೆಲಸಕ್ಕೆ ಬಾರದ್ದು ಕೇಳಯ್ಯ
....
ಹಾಗೆಂದು ಗಾಂಧಿಯಿಲ್ಲದೆ ನಿನ್ನ
ಹಾದಿ ಸುಗಮವೆಂದು ಭಾವಿಸದಿರು
ತೊಡು ಗಾಂಧಿ ನೂತ ಖಾದಿ
ಏರಬಹುದು ವರ್ಷಗಳಲ್ಲೇ ಅಧಿಕಾರದ ಗಾದಿ
....
ಗುಂಡಿಗೇ ಗುಂಡಿಗೆ ಕೊಟ್ಟ
ಗಂಡೆದೆಯವನಲ್ಲವೇ
ನಿನ್ನ ಹೆಂಬೇಡಿತನವನ್ನೂ
ಸಹಿಸುತ್ತದೆ ಆ ಗಟ್ಟಿ ಎದೆ."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೩೨-೨೩೩)

ಗಾಂಧೀಜಿ ಅನುಸರಿಸುತ್ತಿದ್ದ ಸತ್ಯ, ಅಹಿಂಸೆ, ಶಾಂತಿ ಎಂಬ ತತ್ವಗಳು ಮತ್ತು ಉಪವಾಸ, ಸತ್ಯಾಗ್ರಹಗಳು ಇವೆಲ್ಲಾ ಕೇವಲ ಭಾಷಣದ ವಸ್ತುಗಳಾಗಿವೆ. ಯಾಕೆಂದರೆ ಅವುಗಳ ವಿರುದ್ಧ ದಿಕ್ಕಿನಲ್ಲಿ ದೇಶದ ರಾಜಕೀಯ ಪರಿಸ್ಥಿತಿ ಇದೆ. ಹಾಗಾಗಿ ಗಾಂಧೀಜಿ ತತ್ವಗಳು ಅನುಷ್ಠಾನದಲ್ಲಿ ನಿರುಪಯೋಗವಾಗಿವೆ ಎಂದು ಚಿತ್ರಿಸಿದ್ದಾರೆ.

ಪ್ರತಿಭಾ ನಂದಕುಮಾರ ಅವರು ಹಿಂಸೆ ಮತ್ತು ಅಹಿಂಸೆಗಿರುವ ಸಂಬಂಧವನ್ನು ತಮ್ಮ 'ಗನ್ನು ಮತ್ತು ಗಾಂಧಿ' ಎಂಬ ಕವಿತೆಯಲ್ಲಿ ಹೀಗೆ ಚಿತ್ರಿಸಿದ್ದಾರೆ.

'ಬೋ ಪರಾಕು ಗಾಂಧಿ ಮಹಾತ್ಮನಿಗೆ ಶಾಂತಿ ದೂತನಿಗೆ
ಬೋ ಫರಕಿನ ಷಹೀದನಿಗೆ ಏನಿಲ್ಲದ ಫಕೀರನಿಗೆ
ಗುಂಡಿಗೂ ಗಾಂಧಿಗೂ ಎಲ್ಲಿಲ್ಲದ ನಂಟು
ಗನ್ನಿಗೂ ಗಂಟಿಗೂ ಸಂಬಂಧವುಂಟು
....
ಇಂದಿಗೂ ಗನ್ನು ವಿವಾದಗಳ ಚೆಂಡು
ಗುಂಡು ಹಾಕುವ ಮೊದಲೇ ಚೆದುರಿತು ದಂಡು
....

ಗನ್ನಿರಲಿ ಗಂಟಿರಲಿ ವಿವಾದಗಳಿರಲಿ
ಗಾಂಧಿ ನಗೆ ಮಾಸದಿರಲಿ ಪರ್ಸು ತುಂಬಿ ತುಳುಕಲಿ
ಅಂದಿಗೂ ಇಂದಿಗೂ ಗಾಂಧಿರಾಜ್ಯ
ಆದರೂ ಬಗೆಹರಿದಿಲ್ಲ ವ್ಯಾಜ್ಯ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೪೨)

ಗಾಂಧೀಜಿ ಅಹಿಂಸೆಯ ನೆರಳಲ್ಲಿ ಬದುಕಿದವರು. ಅಹಿಂಸೆಯನ್ನು ದೇಶಕ್ಕೆ ಸಂದೇಶವಾಗಿ ನೀಡಿದರು. ಅಂತಹ ಅಹಿಂಸಾವಾದಿಯನ್ನು ಗುಂಡಿಟ್ಟು ಸಾಯಿಸಲಾಯಿತು. ಆದರೂ ಗಾಂಧೀಜಿ ಪಾಲಿಸಿಕೊಂಡು ಬಂದ ತತ್ವಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ಇಂದಿನ ಸಮಸ್ಯೆಗಳಿಗೆ ಗಾಂಧೀಜಿಯ ತತ್ವಗಳು ಪರಿಹಾರಗಳೆನಿಸಿದರೂ ಅವುಗಳನ್ನು ಅನುಸರಿಸಲಾಗದ ಸ್ಥಿತಿಯಲ್ಲಿ ನಾವಿದ್ದೇವೆ ಎಂದು ಚಿತ್ರಿಸಲಾಗಿದೆ.

ಲತಾ ಗುತ್ತಿಯವರು ಗಾಂಧೀಜಿಯವರನ್ನು ಕುರಿತು ತಮ್ಮ 'ಬಾ ಮತ್ತೊಮ್ಮೆ...' ಎಂಬ ಕವಿತೆಯಲ್ಲಿ ಹೀಗೆ ವಿವರಿಸಿದ್ದಾರೆ.

"ಪಕ್ಷಗಳು ಕುದಿಯುತಿವೆ ರಾಜಕೀಯ ಕುಲುಮೆಯಲಿ
ರೂಪ ಆಕಾರಕ್ಕೆ ಬರದೆ ಮತ್ತೆ ಮತ್ತೆ
ಬೀಳುತಲಿದೆ ಅಸತ್ಯದ ಕುಲುಮೆಯೊಳಗೆ
ಸುತ್ತಿಗೆ ಹಿಡಿದು ಮತ್ತೊಮ್ಮೆ
ಬರಬಾರದೇ ನೀನು ಕಮ್ಮಾರನಾಗಿ
....
ಬರುತ್ತಿಲ್ಲ ಈಗ ಸಾಂತ್ವನಕ್ಕೆ
ನಿನ್ನ ಸತ್ಯದ ಅಹಿಂಸೆಯ ಮಾತುಗಳು
ಅರ್ಥೈಸುವ ಬಸವ ಧರ್ಮಕ್ರಾಂತಿ
ನಿನ್ನ ನಿತ್ಯ ಅಹಿಂಸೆಗಳ ಕ್ರಾಂತಿಗಳೆಲ್ಲ ಹೋದವೆಲ್ಲಿ
....
ಸಮಯ ಸಾಧಕರಿಗೆ ಪಕ್ಷಾಂತರಿಗಳನೆಲ್ಲ
ಚಿಲುಮೆಯಗ್ನಿಯಲಿ ಹಾಕು ಸುಡು
ಕುಲುಮೆಯಲಿ ಕಾಯಿಸಿ ಕರಗಿಸಿ
ಸುತ್ತಿಗೆಯಿಂದ ಹೊಡೆ ಹೊಡೆದು
ರೂಪ ಕೊಡಲು ಮತ್ತೊಮ್ಮೆ ಬಾ
ದೇಶಕ್ಕೆ ಕಮ್ಮಾರನಾಗಿ
ಕೇಳಿಸಲಿ ಮತ್ತೊಮ್ಮೆ ಆ
ಚಮ್ಮಟ ಧ್ವನಿ ದೇಶದೊಳಹೊರಗೆಲ್ಲ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೩೨೮-೩೨೯)

ಲತಾ ಗುತ್ತಿಯವರು ಗಾಂಧೀಜಿಯ ತತ್ವಗಳು ಕೇವಲ ಆದರ್ಶಗಳಾಗಿವೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಸ್ವತಂತ್ರ ಭಾರತದ ರಾಜಕೀಯ ಪಕ್ಷಗಳು ಅಗತ್ಯದ ಕುಲುಮೆಯಲಿ ಜಾತಿ-ಮತಗಳ ಹೆಸರಿನಲ್ಲಿ ಪಕ್ಷಗಳನ್ನು ಕಟ್ಟಿ ದೇಶದ ಭವಿಷ್ಯವನ್ನು ಹಾಳು ಮಾಡುತ್ತಿವೆ. ಹಾಗಾಗಿ ದೇಶದ ಭವಿಷ್ಯ ಅಸತ್ಯದ ಕುಲುಮೆಯಲಿ ಕರಗದ ಹಾಗೆ ತಡೆಯಲು ಸುತ್ತಿಗೆ ಹಿಡಿದು ಮತ್ತೊಮ್ಮೆ ಬರಬಾರದೇ ನೀನು ಕಮ್ಮಾರನಾಗಿ ಎಂದು ಚಿತ್ರಿಸಿದ್ದಾರೆ.

ಎಸ್. ಮಾಲತಿ ಅವರು "ಗಾಂಧೀಜಿಯಿಂದ ಗಾಂಧಿಯವರೆಗೆ ಮತ್ತು ಈಗ?" ಎಂಬ ಕವಿತೆಯನ್ನು ಹೀಗೆ ಚಿತ್ರಿಸಿದ್ದಾರೆ -

"ನಿಜವಾದ ಗಾಂಧೀವಾದಿಗಳು
ನಿಜವಾದ ಸ್ತ್ರೀವಾದಿಗಳು
ನಿಜವಾದ ಕಾಂಗ್ರೆಸ್ಸಿಗರು
ನಮ್ಮ ದೇಶದಲ್ಲಿ ಇದ್ದಾರೆಯೇ?
ಯಾಕೆಂದರೆ,
ಗಾಂಧೀಜಿ ಗುಂಡಿಗೆ ಬಲಿಯಾದರು
ಇಂದಿರಾಗಾಂಧಿ ಗುಂಡಿಗೆ ತುತ್ತಾದರು
ರಾಜೀವಗಾಂಧಿ ಬಾಂಬಿನಲ್ಲಿ ಸಿಡಿದರು
ಮತ್ತೇ,
ಮಾನವೀಯತೆಯ ಪ್ರಶ್ನೆ,
ಇಲ್ಲವೆನ್ನಿಸುತ್ತಿದೆ....."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೩೩೦)

ಗಾಂಧೀಜಿಯ ಕಾಲದಲ್ಲಿ ಸತ್ಯ, ಅಹಿಂಸೆ, ಪ್ರಾಮಾಣಿಕತೆ ಮುಂತಾದ ಮಾನವೀಯ ಗುಣಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿದ್ದರು. ಇಂತಹ ಮಾನವೀಯ ಗುಣಗಳನ್ನು ಮೈಗೂಡಿಸಿಕೊಂಡ ಗಾಂಧೀಜಿಯನ್ನು ಅನುಸರಿಸುವ ನಿಜವಾದ ಗಾಂಧೀವಾದಿಗಳು, ಪ್ರಾಮಾಣಿಕವಾಗಿ ದೇಶ ಸೇವೆಗಾಗಿಯೇ ಹುಟ್ಟಿಕೊಂಡ ಕಾಂಗ್ರೇಸ್‌ನಂಥ ಪಕ್ಷಗಳು ನಮ್ಮ ದೇಶದಲ್ಲಿ ಇಂದು ಕಾಣಸಿಗದು. ಹಾಗಾಗಿ ಮಾನವೀಯತೆಯ ಪ್ರಶ್ನೆ ಇಲ್ಲವೆನಿಸುತ್ತದೆ ಎಂದು ಮಾಲತಿಯವರು ವಿಡಂಬಿಸಿದ್ದಾರೆ.

ಶೈಲಾ ವಸಂತ ಅವರು ಗಾಂಧೀಜಿಯನ್ನು ಕುರಿತು "ನಟ್ಟಿರುಳ ಸದ್ದು" ಎಂಬ ಕವಿತೆಯನ್ನು ರಚಿಸಿದ್ದಾರೆ. ಶೈಲಾ ವಸಂತ ಅವರು ಗಾಂಧೀಜಿಯ ಅಗಲಿಕೆಯನ್ನು ಪುನಃ ಪುನಃ ಸ್ಮರಿಸಬೇಕೆಂದು ನಿರೀಕ್ಷಿಸುತ್ತಾರೆ.

"ಎಲ್ಲೋ ಕೇಳುತ್ತಿದೆ ಸದ್ದು
ಟಕಟಕ ಟಕಟಕ.....
ಯಾರು ಕೋಲೂರಿ ನಡೆಯುತ್ತಾರೆ

ಈ ಅಪರಾತ್ರಿಯಲ್ಲಿ
ಗಡಿಯಾರದಂತೆ ನಿಖರವಾಗಿ
....
ಎಪ್ಪತ್ತರ ಅಪ್ಪ
ಅರವತ್ತರ ಅಮ್ಮ
ಅಥವಾ..........
ಅಥವಾ ನಾನು ಮರೆತ ಗಾಂಧಿ?"
(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೩೧೭-೩೧೮)

ಗಾಂಧೀಜಿ ಚಿಕ್ಕಂದಿನಲ್ಲಿ ಕಳ್ಳತನ ಮಾಡುವುದು, ಬೀಡಿ ಸೇದುವುದು, ಮಾಂಸ ತಿನ್ನುವುದು ಹೀಗೆ ಮುಂತಾದ ತಪ್ಪುಗಳನ್ನು ಮಾಡಿ ಅವುಗಳಿಂದ ಪರಿವರ್ತನೆಗೊಂಡು ಪಶ್ಚಾತ್ತಾಪ ಪಟ್ಟಿದ್ದಾರೆ. ಮುಂದೆ ಮಾನವೀಯ ಗುಣಗಳನ್ನು ಮೈಗೂಡಿಸಿಕೊಂಡು ಸನ್ಮಾರ್ಗದಲ್ಲಿ ನಡೆದು ಮಹಾತ್ಮರಾದರು ಎಂದು ಡಾ. ಎಚ್.ಎಸ್. ಸುಜಾತ ಅವರು 'ಮಹಾತ್ಮ' ಎಂಬ ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಕಿರಿಯಂದು ಅರಿಯದೆ ಮಾಡಿದ ತಪ್ಪಿಗೆ
ತೀವ್ರವ್ಯಾಕುಲದ ಪರಿ,
ಮುಂದಿನ ದಿನಗಳ ನೀಲನಕ್ಷೆಯನು
ಅಂದೇ ಕಂಡುಕೊಂಡ ಅಚ್ಚರಿ

ಸಂಕಲ್ಪ, ಕ್ರಿಯೆಗಳು ಒಂದಾದ ಜಾಣ್ಮೆ
ಸಹಧರ್ಮಿಣಿಯನ್ನು ಸಹಕರ್ಮಿಣಿಯನ್ನಾಗಿಸಿಕೊಂಡ ಕೌಶಲ
ಸತ್ಯಾಗ್ರಹದ ವಿನೂತನ ಅಸ್ತ್ರಪ್ರಯೋಗದಿಂದ
ಮುನ್ನಿನೆಲ್ಲ ಶಸ್ತ್ರಗಳನ್ನು ನಿರ್ವೀರ್ಯಗೊಳಿಸಿದ ಚಾತುರ್ಯ
ನಾಡ ಬಿಡುಗಡೆಯ ನಂತರ
ವಿಭಜನೆಯ ಮೂಕನೋವನ್ನು ಸಹಿಸಿದ ನಿರ್ವಿಕಾರ
ಎದುರಾಳಿಯ ತಪ್ಪಿಗೆ ತಾನೇ ನೋಯುವ ಆತ್ಮಶಕ್ತಿ
ವಾದ ಮಾಡಲು ಬಂದವರು ಮಾತಿಲ್ಲದೇ ಪರಾರಿ."
(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೩೧೪)

ಬಾಲ್ಯದ ತಪ್ಪುಗಳಿಂದ ಪರಿವರ್ತನೆಗೊಂಡು ಯೌವನದಲ್ಲಿ ನೈತಿಕ ಗುಣಗಳನ್ನು ಮೈಗೂಡಿಸಿ ಉತ್ತಮ ಸಾಧನೆಗೈದು ಮಹಾಪುರುಷರಾದರು. ಗಾಂಧೀಜಿ ತನ್ನ ತತ್ವ ಆದರ್ಶಗಳಂತೆ ನಡೆದುಕೊಂಡರು. ಭಾರತ - ಪಾಕಿಸ್ತಾನ ವಿಭಜನೆಯಾದಾಗ ಮೂಕ ಮನಸ್ಸಿನಿಂದ ತನ್ನ ನೋವನ್ನು ಸಹಿಸಿಕೊಂಡ ಕಾಮಧೇನುವಿನಂತಹ ನಿರ್ವಿಕಾರರೆಂದು ಚಿತ್ರಿಸಲಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಭಾರತ ಕಗ್ಗತ್ತಲೆಯಲ್ಲಿ ಮುಳುಗಿತ್ತು. ಗಾಂಧೀಜಿಯ ಆಗಮನದಿಂದ ದೇಶದಲ್ಲಿ ಒಂದು ಸಂಚಲನವೇ ಮೂಡಿಬಂದಿತ್ತು ಎಂದು ಡಾ. ವಿಜಯಶ್ರೀ ಸಬರದ ಅವರು 'ಗಾಂಧೀಜಿ ನೆನಪುಗಳು' ಎಂಬ ಕವಿತೆಯಲ್ಲಿ ಕಂಡರಿಸಿದ್ದಾರೆ.

"ಹೆಪ್ಪುಗಟ್ಟಿದ
ಕಾರ್ಗತ್ತಲಿನಲ್ಲಿ
ಚಂದ್ರನಂತೆ ಮೂಡಿ
ಜನಮನದಲ್ಲಿ ಬೆಳಕಾದ
ಸತ್ಯ - ಅಹಿಂಸೆ
ಸ್ವತಂತ್ರತೆ - ಮಾನವೀಯತೆಯ
ಮಂತ್ರವ ಮೊಳಗಿಸಿ
ಶಾಂತಿ ಬೀಜವ ಬಿತ್ತಿದ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೬೮; ಪು. ೩೦೮)

ಇಲ್ಲಿ ಗಾಂಧೀಜಿಯನ್ನು ಕಗ್ಗತ್ತಲೆಯಲ್ಲಿ ಮೂಡಿಬಂದ ಚಂದ್ರನಂತೆ, ಸತ್ಯ, ಅಹಿಂಸೆ, ಸ್ವತಂತ್ರತೆ ಮುಂತಾದ ಮಾನವೀಯ ಗುಣಗಳಿಂದ ಶಾಂತಿಯನ್ನು ಸ್ಥಾಪಿಸಿದ ಶಾಂತಿಯ ಹರಿಕಾರನಾಗಿ ಇಲ್ಲಿ ಚಿತ್ರಿಸಿದ್ದಾರೆ.

ಎಂ. ಸರಸ್ವತಿಗೌಡ ಅವರು ಸಹ ಗಾಂಧೀಜಿಯ ತತ್ವಗಳನ್ನು ಈ ರೀತಿ ಚಿತ್ರಿಸಿದ್ದಾರೆ.

"ಗಾಂಧಿ ನೀ ತುಂಬ ಪುಣ್ಯಾತ್ಮ
ಉಗುಳು ನುಂಗಿದರೆ ಶಾಂತಿ
ಉಸಿರು ಬಿಟ್ಟರೆ ಅಹಿಂಸೆ
ಹೆಜ್ಜೆ ಮುಂದಿಟ್ಟರೆ ಧರ್ಮ
ಮಂತ್ರ ಜಪಿಸುತ್ತ ಕೊನೆಗೂ ಗಳಿಸಿದೆ
....
ಗುಂಡಿನೇಟಿಗೆ ಬಲಿಯಾದೆ
ನಿಜ ನೀನೊಬ್ಬ ಕಲಿಭೀಮ ರಘುರಾಮ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೬೮; ಪು. ೩೦೧)

ಶಾಂತಿ, ಅಹಿಂಸೆ, ಸತ್ಯ ಹಾಗೂ ಧಾರ್ಮಿಕ ಮನೋಭಾವಗಳು ಗಾಂಧೀಜಿಗೆ ರಕ್ತಗತವಾಗಿಯೇ ಬಂದಂತಹವು. ಬುದ್ಧನು ಅಹಿಂಸೆಯನ್ನು ಸಾರಿ ಹೋದನು. ಅದನ್ನು ಗಾಂಧಿ ಕಾರ್ಯರೂಪಕ್ಕೆ ತಂದು ಜೀವಿಸಿ ತೋರಿಸಿದರು. ಹಾಗಾಗಿ ಗಾಂಧಿ ಒಬ್ಬ ಕಲಿಯುಗದ ಕಲಿಭೀಮ ರಘುರಾಮನೆಂದು ಪ್ರತಿನಿಧಿಸಿದ್ದಾರೆ.

ಬಿ.ಟಿ. ಲಲಿತಾನಾಯಕ್ ಅವರು "ನಾನು ನಿನ್ನಂಗ ಅಜ್ಜ" ಎಂಬ ಕವಿತೆಯಲ್ಲಿ ಗಾಂಧೀಜಿಯವರೊಂದಿಗೆ ಸಮೀಕರಿಸಿಕೊಂಡು ಹೀಗೆ ಪ್ರತಿನಿಧಿಸಿದ್ದಾರೆ.

"ದೇಶಕ್ಕಾಗಿ ದುಡಿದವ ನೀ
ವೇಷ ಬಲು ಸರಳ

ಅಹಿಂಸೆ ನಿನ್ನ ಮಂತ್ರ
ಸತ್ಯ ಭಗವಂತ

ನನ್ನ ನಿನ್ನೊಳಗೆ ಕೂದಲೆಳೆ ಫರಕು
ಸತ್ಯದ ಜೋಡಿ ಸಂಪರ್ಕ ಬೆಳೆಸೈತೆ
ಉಳಿದೆಲ್ಲಾ ಬಾಳಾಟ ಬರೋಬ್ಬರಿ ಸಾಗೈತೆ

ಜಾತಿ ಭೇದ ತೋರಿದಳಂತ
ಹೆಂಡತಿಯ ದಂಡಿಸಿದವ ನೀ
ನಾನು ಅಷ್ಟೇ ಅಜ್ಜ
"ಅಪ್ಪನ ಮನಿಯೇ ಬೇರೆ
ತಾ ತಾ ಎಂಬುದು ತರವೇ?"

ಎಂದಾಕೆ ಒದರಾಡಿದಾಗ
ಬಾರುಕೋಲಲಿ ಬಡಿದವನು
ದಮ್ಮಯ್ಯ ಎಂದರೂ ಬಿಡದವನು
ಆದರೆ
'ಬಾ' ಮಂತನಸ್ಥರ ಮಗಳು
ನೀ ಹೇಳಿದಕೆ ಹೂಂ ಗುಟ್ಟಿದಳು
ನನ್ನಾಕೆ ಘನ ಬೆರಕೆ
ಸುಟುಗೊಂಡು ಸತ್ತಳು"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೧೨-೨೧೩)

ಗಾಂಧೀಜಿ ತನ್ನ ತತ್ವಾದರ್ಶಗಳ ಮೂಲಕ ಸರಳವಾಗಿ ಬದುಕಿದವರು. ಜಾತ್ಯಾತೀತವನ್ನು ತಿಳಿದವರು. ಅವರ ಪತ್ನಿ ಕಸ್ತೂರಬಾ ಜಾತಿಭೇದ ಮಾಡಿದ್ದಕ್ಕೆ ದಂಡಿಸಿದವರು ಮತ್ತು ಆಶ್ರಮದ ಅತಿಥಿಗಳ ಮಲವನ್ನು ಹೋರಿಸಿದವರು. ಆದರೆ ಕಸ್ತೂರಬಾ ಎಂದೂ ತನ್ನ ನಿಲುವನ್ನು ಅಥವಾ ನಿರ್ಧಾರವನ್ನು ತಳೆಯದೆ ಗಾಂಧೀಜಿಯನ್ನು ಅನುಸರಿಸಿದಳು. ಹಾಗಾಗಿ ಗಾಂಧೀಜಿ ತನ್ನ ವೈಯಕ್ತಿಕ ಜೀವನಕ್ಕೆ ಮಹತ್ವ ಕೊಡದೆ, ತನ್ನ ಕುಟುಂಬದ ಸದಸ್ಯರನ್ನು ಲಕ್ಷಿಸದೆ ಬಡಜನರ ಹಿತಕ್ಕೋಸ್ಕರ ಬದುಕಿದರು. ಹಾಗಾಗಿ ಗಾಂಧೀಜಿಯನ್ನು ಜಾತ್ಯಾತೀತೆಯ ಅವತಾರ ಪುರುಷನಂತೆ ಪ್ರತಿನಿಧಿಸಲಾಗಿದೆ.

ಡರ್ಬಾನ್‌ನಿಂದ ಪ್ರಿಟೋರಿಯಾಗೆ ರೈಲಿನಲ್ಲಿ ಗಾಂಧೀಜಿ ಪ್ರಯಾಣ ಹೊರಟರು. ಫಸ್ಟ್‌ಕ್ಲಾಸ್ ರೈಲ್ವೆ ಟಿಕೆಟ್ ಕೊಂಡು ರೈಲು ಹತ್ತಿದರು. ರೈಲು ರಾತ್ರಿ ೯ ಗಂಟೆಗೆ ನೆಟಾಲಿನ ರಾಜಧಾನಿ ಮೆರಿಟ್ಸ್ ಬರ್ಗ್ ನಿಲ್ದಾಣಕ್ಕೆ ಬಂದು ತಲುಪಿತು. ಗಾಂಧೀಜಿ ಕುಳಿತಿದ್ದ ಪ್ರಥಮ ದರ್ಜೆಯ ಡಬ್ಬಿಯ "ಟ್ರಾನ್ಸ್‌ವಾಲ್‌ನ ರಾಜಧಾನಿ ಪ್ರಿಟೋರಿಯಾದಲ್ಲಿ ದಾದಾ ಅಬ್ದುಲ್ಲಾ, ಸೇಠ್‌ರ ಕೋರ್ಟು

ವಿವಾದ ನಡೆಯುತ್ತಿತ್ತು. ಆ ಅಬ್ದುಲ್ಲಾ ಅವರ ಕೇಸಿನ ವಿವರವು ಗುಜರಾತಿ ಭಾಷೆಯಲ್ಲಿದ್ದವು. ಅವುಗಳನ್ನು ಗುಜರಾತಿಯಿಂದ ಇಂಗ್ಲೀಷಿಗೆ ಭಾಷಾಂತರಿಸಲು ಗಾಂಧೀಜಿಯವರನ್ನು ನೇಮಿಸಲಾಗಿತ್ತು. ಇದರ ಸಲುವಾಗಿ ಗಾಂಧೀಜಿ ಡರ್ಬಾನಿನಿಂದ ಪ್ರಿಟೋರಿಯಾಗೆ ರೈಲಿನಲ್ಲಿ ಪ್ರಯಾಣ ಹೊರಟರು. ಪ್ರಯಾಣಕ್ಕೆ ಫಸ್ಟ್‌ಕ್ಲಾಸ್ ಟಿಕೆಟ್ ಕೊಂಡು ರೈಲು ಹತ್ತಿದರು. ರಾತ್ರಿ ೯ಕ್ಕೆ ನೆಟಾಲಿನ ರಾಜಧಾನಿ ಕುಳಿತಿದ್ದ ಪ್ರಥಮ ದರ್ಜೆ ಡಬ್ಬಿಗೆ ಬಿಳಿಯ ಪ್ರಯಾಣಿಕ ಕುಳಿತುಕೊಳ್ಳಲು ಬಂದನು. ಆ ಪ್ರಯಾಣಿಕ 'ಕಪ್ಪು ಮನುಷ್ಯ' ಗಾಂಧೀಜಿ ಕುಳಿತಿದ್ದನು ನೋಡಿ ತಕ್ಷಣ ರೈಲ್ವೆ ಅಧಿಕಾರಿಯನ್ನು ಕರೆತಂದು ಪ್ರತಿಭಟಿಸಿದ. ಗಾಂಧೀಜಿಯೂ ಕೂಡ ತಾನು ಈ ಪ್ರಥಮ ದರ್ಜೆ ಡಬ್ಬಿಯಿಂದ ಇಳಿಯುವುದಿಲ್ಲವೆಂದು ಪ್ರತಿಭಟಿಸಿದರು. ಅದರಿಂದ ರೈಲ್ವೆ ಅಧಿಕಾರಿ ಪೋಲಿಸರನ್ನು ಕರೆತಂದು ಆ ಡಬ್ಬಿಯಿಂದ ಗಾಂಧೀಜಿಯನ್ನು ಹೊರಕ್ಕೆ ತಳ್ಳಿದರು"(ಪ್ರಾಣೇಶ್‌ರಾವ್. ಬಿ.ಆರ್.; ೧೯೯೯; ಪು. ೨೧-೨೨). ಇದರಿಂದ ಇಡೀ ರಾತ್ರಿ ಗಾಂಧೀಜಿ ಮೆರಿಟ್ಸ್‌ಬರ್ಗ್ ನಿಲ್ದಾಣದಲ್ಲಿ ಕೊರೆಯುವ ಚಳಿಯಲ್ಲಿ ಏಕಾಂಗಿಯಾಗಿ ಕುಳಿತರು. ಅದರಿಂದ ಗಾಂಧೀಜಿಯವರಲ್ಲಿ ಹೋರಾಟದ ಮನೋಭಾವ ಬೆಳೆಯಿತು ಎಂಬುದನ್ನು ಸವಿತಾ ನಾಗಭೂಷಣರು ತಮ್ಮ 'ಗಾಂಧಿ ಹುಟ್ಟಿದ್ದು...' ಎಂಬ ಕವಿತೆಯನ್ನು ಚಿತ್ರಿಸಿದ್ದಾರೆ.

"ಗಾಂಧಿ ಹುಟ್ಟಿದ್ದು
ನೆಟಾಲಿನ ರಾಜಧಾನಿಯಾದ
ಮೆರಿಟ್ಸ್‌ಬರ್ಗ್‌ನಲ್ಲಿ
ರೈಲ್ವೆ ಪ್ಲಾಟ್‌ಫಾರಂನಲ್ಲಿ
ಚೆಲ್ಲಾಪಿಲ್ಲಿಯಾದ
ಹಾಸಿಗೆಪೆಟ್ಟಿಗೆ ಕಾಗದಗಳ ನಡುವೆ !!

ಅಪರಾತ್ರಿ
ಹೊರಗೆ ಅಸಾಧ್ಯ ಚಳಿ
ಒಳಗೆ ಜ್ವಾಲಾಮುಖಿ
....
ಸತ್ಯ ಪ್ರೇಮ ಅಹಿಂಸೆಯ
ದೀಕ್ಷೆ ಪಡೆದದ್ದು
ಎಲ್ಲಾ ಆ ಕ್ಷಣದಲ್ಲಿ....."

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; ಪು. ೨೮೯)

ಗಾಂಧೀಜಿ ಅವರ ಜೀವನದ ದಿಕ್ಕುದೆಸೆಯನ್ನು ಬದಲಾಯಿಸಿದ ಆ ರಾತ್ರಿ ಅದೊಂದು ಪರ್ವ ರಾತ್ರಿ, ಅನ್ಯಾಯದ ವಿರುದ್ಧ ಹೋರಾಟ ಮಾಡಲೇಬೇಕೆಂದು ದಿಟ್ಟ ಪ್ರತಿಜ್ಞೆ ಮಾಡಿದ ರಾತ್ರಿ, ಅಹಿಂಸೆಯ ಪ್ರಯೋಗಕ್ಕೆ ಅಣಿ ಮಾಡಿದ ಪರ್ವಕಾಲ ಅದು. ಗಾಂಧಿ ಜೀವನದ

ಅತ್ಯಂತ ನಿರ್ಣಾಯಕ ಆ ದಿನ. ಮೋಹನದಾಸನಿಂದ ಗಾಂಧಿ ಆದದ್ದು ಆ ದಿನದಿಂದಂದು ಇಲ್ಲಿ ಚಿತ್ರಿಸಲಾಗಿದೆ.

ಗಾಂಧೀಜಿ ಬದುಕಿರುವವರೆಗೆ ಸರಳ ಜೀವನ ನಡೆಸಿದರು. ಯಾವುದೇ ಆಸ್ತಿ - ಅಂತಸ್ತು, ಅಧಿಕಾರ - ಪದವಿಗಳನ್ನು ಬಯಸಲಿಲ್ಲ. ಆದರೆ ಅವರ ಮರಣದ ನಂತರ ಗಲ್ಲಿಗಲ್ಲಿಗೂ ಅವರ ಹೆಸರು, ಪ್ರತಿಮೆಗಳನ್ನು ಮತ್ತು ಮಂದಿರಗಳನ್ನು ಕಟ್ಟಿ ಆಚರಿಸುವರು. ಆದರೆ ಮನೆಗಳಲ್ಲಿ, ಮನಸ್ಸಿನಲ್ಲಿ ನೆಲೆಸಲಿಲ್ಲ ಎಂಬುದನ್ನು ಸರೋಜ ಇಟ್ಟಣ್ಣವರರು 'ಗಾಂಧಿ' ಎಂಬ ಕವಿತೆಯಲ್ಲಿ ಗಾಂಧಿಯನ್ನು ಹೀಗೆ ಚಿತ್ರಿಸಿದ್ದಾರೆ.

"ಇದ್ದಾಗಲೇ
ಯಾವುದಕ್ಕೂ
ಅಪೇಕ್ಷಿಸದ ಗಾಂಧಿಯನ್ನು
ಗಾಂಧಿ ಭವನ
ಗಾಂಧಿ ನಗರ
ಗಾಂಧಿ ಬಜಾರ
ಎಂದೆಲ್ಲ ಹೊರಗೇ
ನೇತಾಡುವ ಬಾಪೂಜಿ
ಎಂದೂ ನಮ್ಮ ಮನ ಮನೆ ಅಂಗಡಿಗಳೊಳಗೆ
ಬರಲೇ ಇಲ್ಲ
ಮನಮಂದಿರದಲ್ಲಿ ನೆಲೆಸಲೇಯಿಲ್ಲ"

(ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೮೮; ಪು. ೨೬೪)

ಗಾಂಧೀಜಿ ಇರುವುದು ಸಾರ್ವಜನಿಕ ಸ್ಥಳಗಳಲ್ಲಿ, ಭವನಗಳಲ್ಲಿ, ನಗರದ ಸರ್ಕಲ್‌ಗಳಲ್ಲಿ; ಆದರೆ ಕೆಲವು ಸ್ವಾತಂತ್ರ್ಯ ಹೋರಾಟಗಾರರ ಮನೆಗಳನ್ನು ಹೊರತುಪಡಿಸಿ ಉಳಿದ ಸಾಮಾನ್ಯರ ಮನೆಗಳಲ್ಲಿ ಗಾಂಧೀಜಿ ಎಂದೂ ನೆಲಸಲೇ ಇಲ್ಲ.

ಬಿ.ಎಸ್. ನಾಗರತ್ನಕುಮಾರಿ ಅವರು 'ಗಾಂಧೀ ತಾತನಿಗೆ' ಎಂಬ ಕವಿತೆಯಲ್ಲಿ ಗಾಂಧೀಜಿಯ ತತ್ವಗಳನ್ನು ಪಾಲಿಸದೆ ಅವುಗಳನ್ನು ಕೇವಲ ಪುಸ್ತಕದಲ್ಲಿ ಬರೆದಿಡುವ ಆದರ್ಶ ವಾಕ್ಯಗಳಾಗಿವೆ. ಗಾಂಧೀಜಿಯನ್ನು ಕೂಡ ಅಲಂಕಾರಿಕ ವಸ್ತುವಾಗಿಸಿಕೊಂಡಿದ್ದೇವೆ ಎಂದು ಹೀಗೆ ವಿಷಾದಿಸಿದ್ದಾರೆ.

"ಅಪ್ಪಾ, ಗಾಂಧಿತಾತ
ನಿನ್ನ ಶತಾಬ್ದಿ ಸಮಿತಿಯ
ಪ್ರಕಟಣೆಯ ನೋಡಿದೆ.
....
ಉಣುವಲ್ಲಿ ಉಡುವಲ್ಲಿ ನಿನ್ನ ನೆನೆದು
ಶಾಂತಿಸತ್ಯದ ನಿನ್ನ ರೆಕ್ಕೆಗಳ ಬಿಗಿದು

ಹಣೆಗೆ ಕಟ್ಟಿದ್ದೇವೆ ರಕ್ಷೆಯಪಟ್ಟಿ
ಗಾಂಧೀಭವನದ ಗರ್ಭಗುಡಿಯೊಳಗಿಟ್ಟು
ನಿನ್ನ ಪೂಜಿಸಿ,
ದಿನವೂ ಹೇಳುತ್ತೇವೆ ಮಂತ್ರ;
'ಗಾಂಧೀ ಜೀರ್ಣೋಭವ
ಇನ್ನೆಲ್ಲಿ ನಮ್ಮ ಪರಾಭವ"
(ಅದೇ; ಪು. ೨೭೫)

ಸತ್ಯ, ಶಾಂತಿ, ಅಹಿಂಸೆ ಇನ್ನಿತರ ಗಾಂಧಿಯ ಆದರ್ಶಗಳನ್ನು ಪುಸ್ತಕಗಳಿಗೆ ಬರೆದು ಸೀಮಿತಗೊಳಿಸಿದ್ದೇವೆ. ಗಾಂಧೀಜಿಯನ್ನು ಪ್ರತಿಯೊಂದು ಕ್ಷೇತ್ರದಲ್ಲಿ ನೆನೆದು ಆತನಿಗೊಂದು ಭವನವೊಂದು ನಿರ್ಮಿಸಿದ್ದೇವೆ. ಆ ಭವನದ ಗರ್ಭಗುಡಿಗೆ ಸೀಮಿತಗೊಳಿಸಿದ್ದೇವೆಂದು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಮಾಧವಿ ಭಂಡಾರಿ ಅವರು ಗಾಂಧಿಯನ್ನು ತಮ್ಮ 'ಗಾಂಧೀ ಜನ್ಮದಿನದಂದು' ಎಂಬ ಕವಿತೆಯಲ್ಲಿ ಹೀಗೆ ಚಿತ್ರಿಸಿದ್ದಾರೆ.

"ಗಾಂಧೀ ಮಹಾತ್ಮಾ, ಪುಣ್ಯಾತ್ಮಾ
ನಿನ್ನ ಹುಟ್ಟು ಹಬ್ಬ
ಮತ್ತೊಮ್ಮೆ ಹುಟ್ಟಿ ಬಾ -
ಎನ್ನುತ್ತಿದ್ದಾರೆ.
....
ಅಷ್ಟು ಪುರುಸೋತ್ತಿಲ್ಲ ಎಂದು
ಒಂದು ವೇಳೆ
ಹೂವೇರಿಸುತ್ತಿದ್ದಾಗ
ರಾಜಘಾಟಿನಲ್ಲಿಯೇ
ನೀ ಎದ್ದೆ ಎಂದರೆ
ಹರಿಯಿಂದ ಗಿರಿತನಕದ ಜನ
ನಿನ್ನ ದೊಣ್ಣೆಯನ್ನೇ ಕಸಿದು
ನಿನಗೇ ಬೀಸುತ್ತಾರೆ.
(ಅದೇ; ಪು. ೨೨೦)

ಗಾಂಧೀಜಿಯ ಜಯಂತಿಯನ್ನು ವರ್ಷಕ್ಕೊಮ್ಮೆ ಆಚರಿಸುತ್ತಾರೆ. ಪ್ರತಿ ಜಯಂತಿಗೂ ಮತ್ತೊಮ್ಮೆ ಹುಟ್ಟಿ ಬಾ ಎಂದು ಉದ್ಗರಿಸುತ್ತಾರೆ. ಒಂದು ವೇಳೆ ಹುಟ್ಟಿ ಬರಲು ಇನ್ನೂ ಇಪ್ಪತ್ತೊಂದು ವರ್ಷಗಳು ಬೇಕಾಗುತ್ತವೆ. ಇಂದಿನ ಕಾಲದಲ್ಲಿ ಅಧಿಕಾರ ಬೇಕಿದ್ದರೆ ದೊಡ್ಡ ಶ್ರೀಮಂತರ ಮನೆಯಲ್ಲೇ ಹುಟ್ಟಬೇಕು. ಒಂದು ವೇಳೆ ಸಾಮಾನ್ಯ ವರ್ಗದಲ್ಲೇ ಹುಟ್ಟಿದರೆ ನಿನ್ನ ಆದರ್ಶ ತತ್ವಗಳಿಗೆ ಬೆಲೆ ಸಿಗದು. ಅಷ್ಟೇ ಅಲ್ಲ ಕಾಡು ಜನರಿಂದ ನಗರವಾಸಿ ಜನರವರೆಗೂ ನಿನ್ನ ದೊಣ್ಣೆಯನ್ನು ಕಸಿದು ನಿನಗೇ ಬೀಸುತ್ತಾರೆ. ಇಂದಿನ ಪ್ರಸ್ತುತ ಕಾಲದಲ್ಲಿ ಗಾಂಧೀಜಿಯ

ಆದರ್ಶಗಳಿಗೆ, ತತ್ವಗಳಿಗೆ ಮಾನ್ಯತೆಯಿಲ್ಲ. ಅವು ಕೇವಲ ಪುಸ್ತಕದಲ್ಲಿ ಸೇರಿಸಲು ಮತ್ತು ಭಾಷಣ ಮಾಡಲು ಮಾತ್ರ ಸೀಮಿತವೆಂದು ಈ ಕವಿತೆಯಲ್ಲಿ ಚಿತ್ರಿಸಿದ್ದಾರೆ.

ಸ್ತ್ರೀಯ ಮನಸ್ಸು ಸ್ತ್ರೀಗೆ ಅರ್ಥವಾಗುವಂತೆ ಇಲ್ಲಿ, ಲೇಖಕಿ ಶಶಿಕಲಾ ವೀರಯ್ಯಸ್ವಾಮಿ ಅವರು ಕಸ್ತೂರಬಾ ಅವರ ಮನಸ್ಸಿನ ಅಳಲನ್ನು ಮತ್ತು ಗಾಂಧೀಜಿಯಿಂದ ಅನುಭವಿಸಿದ ನೋವು ಸಂಕಟವನ್ನು ತಮ್ಮ 'ಕಸ್ತೂರಿಯ ಕಂಪು' ಎಂಬ ಕವಿತೆಯಲ್ಲಿ ಹೀಗೆ ಚಿತ್ರಿಸಿದ್ದಾರೆ.

"ಪ್ರೀತಿಯ ಗೆಳತೀ,
ಸಂಪಾದಕರು ಕೇಳಿದರೆಂದು
ನೀನು ಗಾಂಧೀಜಿಯ ಬಗ್ಗೆ ಬರೆಯುತ್ತಿದ್ದೀಯಲ್ಲ
ಆದರೆ ಮೋಹಕ್ಕೆ ದಾಸಾನುದಾಸನಾಗಿದ್ದವನು
ಮಹಾತ್ಮನಾಗಿ ಮುಗಿಲುದ್ದ ಬೆಳೆದಾಗ
ಕಾಮವಳಿದ ಕಸ್ತೂರಿಯ ಕಂಪಾದೆ? ನಾನಾಗ
ಈ ಪರಿಮಳದಲ್ಲೇ ಅರಳಿ ಹೆಮ್ಮರವಾದ
ಇವನ ನೆಲದಡಿಯ ಬೇರು ನಾನಲ್ಲವೇ?
ಹಲವು ಹನ್ನೊಂದು ಪ್ರಯೋಗಗಳಿಗೆ
ಪಶುಬಲಿಯಾದವಳು ನಾನು
ಪಶುಪತಿಯಂತೆ ಪೂಜೆಗೊಂಡವನು ಅವನು
....
ಎಳೆಯ ಬಾಲೆಯನ್ನೆಳೆತಂದು
ಎಡೆಬಿಡದೆ ಹಿಂಡಿ-ಹಿಪ್ಪಿ ಮಾಡಿದ ಇವನು
ಕಾಮಕಸ್ತೂರಿಯ ಕಂಪು ಕಂಪಿಸುವಾಗ ಕೈ ಬಿಟ್ಟನಲ್ಲ!
ಕರೆವಾಗಲೂ, ತೊರೆವಾಗಲೂ ನನ್ನ
ನೊಂದು ಮಾತು ಕೇಳಿದನೇನಿ ಮಹಾತ್ಮ?"

(ಅದೇ; ಪು. ೨೦೦)

ಲೇಖಕಿ ಈ ಕವಿತೆಯನ್ನು ವಿಶಿಷ್ಟ ರೀತಿಯಲ್ಲಿ ರಚಿಸಿದ್ದಾರೆ. ಕಸ್ತೂರಬಾ ಅವರ ಮನಸ್ಸಿನ ವೇದನೆಯನ್ನು ಅಕ್ಷರರೂಪಕ್ಕೆ ಇಳಿಸಿದ್ದಾರೆ. ಪುರುಷನ ಗೆಲುವಿನ ಹಿಂದೆ ಹೆಣ್ಣು ಇರುತ್ತಾಳೆ ಎಂಬುದಕ್ಕೆ ಕಸ್ತೂರಬಾ ನಿದರ್ಶನವಾಗಿದ್ದಾಳೆ. ಗಾಂಧೀಜಿ ಕೈಗೊಳ್ಳುವ ಪ್ರಯೋಗಗಳನ್ನು ಮೊದಲು ಕಸ್ತೂರಬಾ ಅವರ ಮೇಲೆ ಪ್ರಯೋಗಿಸಿ ಅದು ಸಫಲವಾದ ಮೇಲೆ ಜನತೆಗೆ ಅನುಸರಿಸಲು ಹೇಳುವರು. ಹಾಗಾಗಿ ಕಸ್ತೂರಬಾ ಗಾಂಧೀಜಿಯ ಮನೆಯಲ್ಲಿ ಬಲಿಪಶು. ಗಾಂಧೀಜಿ ಪಶುಪತಿಯಂತೆ ಚಿತ್ರಿಸಲಾಗಿದೆ. ಇತಿಹಾಸ ಪುಟಗಳಲ್ಲಿ ಗಾಂಧೀಜಿಯ ಹೆಸರು ಮಾತ್ರ ಸೇರಿದೆಯೇ ಹೊರತು ಕಸ್ತೂರಬಾ ಅವರ ಹೆಸರು ಎಲ್ಲೂ ಹೆಚ್ಚು ಸೇರಿಲ್ಲ. ಹಾಗಾಗಿ ಗಾಂಧೀಜಿ ಕಸ್ತೂರಬಾ ಅವರನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಂಡಿದ್ದಾರೆ. ಅವಳನ್ನು ಮಾತು ಬರುವ ಮೂಕಿಯನ್ನಾಗಿಸಿದ್ದಾರೆ ಎಂದು ಕಾವ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ತನ್ನ ಜೀವ ಮತ್ತು ಜೀವನವನ್ನು ಮೀಸಲಿಟ್ಟವರು. ಹೊಟ್ಟೆ ತುಂಬ ಉಣ್ಣದೆ, ಮೈತುಂಬಾ ಬಟ್ಟೆ ಹಾಕದೇ ಹೋರಾಡಿದರು. ಗಾಂಧೀಜಿ ಕಂಡ ರಾಮರಾಜ್ಯ ರಾವಣರ ಪಾಲಾಗಿದೆ. ಸತ್ಯ ಅಹಿಂಸೆಯನ್ನು ಬೋಧಿಸಿದ ಗಾಂಧಿ ಇಂದು ಹುಟ್ಟಿ ಬಂದರೆ ಅವರೇ ಇವರಿಗೆಲ್ಲ ಗುಂಡು ಹಾರಿಸುತ್ತಾನೆ ಎಂದು 'ಸರಸ್ವತಿ ಚಿಮ್ಮಲಗಿ' ಅವರು 'ಗಾಂಧೀ' ಎಂಬ ಕವಿತೆಯಲ್ಲಿ ಕಂಡರಿಸಿದ್ದಾರೆ.

"ಪಾಪ! ನಮ್ಮ ಸಲುವಾಗಿ ಅಂದು
ಹೊಟ್ಟೆ ತುಂಬ ಉಣಲಿಲ್ಲ
ಉಡಲಿಲ್ಲ ಅಂತ ಕೇಳಿದಾಗ
ಹಸಿವು ಹಿಂಗಿ ಹೋಗತದ

ಇವತ್ತು ಅವನ ಭಕ್ತರೆಲ್ಲ ಕೂಡಿ
ಅವನ ಹೆಸರ್ಲೆಬಟ್ಟೆ ಹಾಕಿ
ಹೊಟ್ಟಿ ಬೆಳೆಸಿದ್ದು ನೋಡಿ
ಮೈ ಉರದಂಗ ಆಗತದ
ಆ ನಮ್ಮ ತಾತ
ಸ್ವಾತಂತ್ರ್ಯ ತಂದು ಕೊಟ್ಟು
ಸುಖವಾಗಿ ಇರ್ರಿ ಅಂತ ಹೇಳಿಹ್ವಾದ
....
ಮತ್ತ
ಆತ ಹೇಳಿದ ಮಾತ ಕೇಳಿ
ಇವರಿಗೆ ಹಿಂಸೆ ಆಗತದ
ಅವನ ಸತ್ಯ ಇವರಿಗೆಲ್ಲ
ಚುಚ್ಚು ಮುಳ್ಳ ಆಗೇದ
ಅವನ ಮಾತಂತೂ
ಗಾಳ್ಯಾಗ ತೇಲಿ ಹೋಗ್ಯಾವ.....

(ಅದೇ; ಪು. ೧೯೦-೧೯೧)

ಸ್ವಾತಂತ್ರ್ಯಕ್ಕಾಗಿ ಉಪವಾಸ ಸತ್ಯಾಗ್ರಹಗಳನ್ನು ಮಾಡಿದರು ಗಾಂಧೀಜಿ. ಇಂದು ಗಾಂಧಿ ಅನುಯಾಯಿಗಳು (ಸ್ವಾತಂತ್ರ್ಯ ಹೋರಾಟಗಾರರು) ಅಥವಾ ಗಾಂಧಿ ಭಕ್ತರು ಗಾಂಧೀಜಿಯ ಹೆಸರಲ್ಲೇ ಹೊಟ್ಟೆ ತುಂಬಿಸಿಕೊಳ್ಳುವುದು, ಮನೆಯನ್ನು ಕೊಳ್ಳುವುದು ಮತ್ತು ವಿದೇಶಿ ವಸ್ತ್ರಗಳನ್ನು ತೊಡುವಂಥ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿದ್ದಾರೆ. ಆದರೆ ಗಾಂಧೀ ಹೇಳಿದ ಸತ್ಯ, ಅಹಿಂಸೆಗಳು ಇಂದು ಅವರಿಗೆ ಹಿಂಸೆ ಎನಿಸುತ್ತವೆ. ಗಾಂಧಿ ಹೇಳಿದ ಮಾತುಗಳನ್ನು ಗಾಳಿಗೆ ತೂರಿ ಬಿಡುತ್ತಿದ್ದಾರೆ. ಸೆರೆಸೇಂದಿ ಅಂಗಡಿಗಳಲ್ಲಿ ಗಾಂಧಿ ಫೋಟೋ ನೇತಾಡುತ್ತಿದೆ. ಗಾಂಧೀಜಿಯ ಹೆಸರು, ಫೋಟೋ ಮತ್ತು ತತ್ವಾದರ್ಶಗಳು ಇಂದು ದುಡಿಮೆಯ ವಸ್ತುಗಳಾಗಿವೆ ಎಂದು ವಿವರಿಸಿದ್ದಾರೆ.

ಕೆ. ಶರೀಫಾ ಅವರು 'ಗಾಂಧಿಗೊಂದು ಪ್ರಶ್ನೆ' ಎಂಬ ಕವಿತೆಯಲ್ಲಿ ಗಾಂಧೀಜಿಯನ್ನು ಹೀಗೆ ಕಟೆದಿದ್ದಾರೆ.

"ಗಾಂಧಿ,
ಸತ್ತು ಹೋಗಿರುವ ಗಾಂಧಿ
ನೀನೂ ಒಬ್ಬ ಮನುಷ್ಯ
ಭೇದ ಭಾವವ ಅಳಿಸಲು
ಹರಿಜನೋದ್ಧಾರದ
ಮಾತುಗಳನ್ನುದುರಿಸಿದ ಗಾಂಧಿ
....
ಈ ದೇಶದ ಚರಿತ್ರೆಯಲಿ
ಗುಡಿಸಲುಗಳ ಸುಡಿಸಿಕೊಂಡು
ಜೀವಂತ ಬೇಯಿಸಿಕೊಂಡ!
ದುಡಿಮೆಯನು ಮಾಡಿಕೊಂಡ
ಜನತೆ;
ಗಾಂಧಿ, ಗಾಂಧಿಗಳ ಬಗ್ಗೆ
ಸತ್ಯ ಅರಿಯುವದು?
ಸರಿಯಲ್ಲವೇ ಗಾಂಧಿ?"

(ಅದೇ; ಪು. ೨೫೩-೨೫೪)

ಸ್ವಾತಂತ್ರ್ಯ ಹೋರಾಟದ ಜೊತೆಗೆ ಗಾಂಧೀಜಿ ಭಾರತದ ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಅವರು ದಲಿತರ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸಿದರು. ಹಾಗಾಗಿ ಇಲ್ಲಿ ಗಾಂಧೀಜಿಯನ್ನು ಹರಿಜನೋದ್ಧಾರನಾಗಿ, ಸಮಾನತೆಯ ಪ್ರತಿಪಾದಕನಾಗಿ, ದುಡಿವ ವರ್ಗದ ಜನತೆಯ ಮಾನವೀಯತೆಯನ್ನು ಮೆರೆದ ಎಲ್ಲರ ತಂದೆಯಾಗಿ ಪ್ರತಿನಿಧಿಸಲಾಗಿದೆ.

"ಭಾರತೀಯ ಮಹಿಳೆಯರು ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗುವುದು ಗಾಂಧೀಜಿಯವರಿಗೆ ಬೇಡವಾಗಿತ್ತು. ಭಾರತೀಯ ನಾರಿಯರಿಗೆ ಸೀತೆ-ಸಾವಿತ್ರಿಯರು ಮಾದರಿಯಾಗಬೇಕು ಎಂದು ಬಾಪೂಜಿ ಪದೇ ಪದೇ ಹೇಳುತ್ತಿದ್ದರು. ಆದರೆ, ಬಾಪುವಿಗೆ ಹೆಣ್ಣು ಮಕ್ಕಳು ತಮ್ಮ ನಡೆನುಡಿಗಳಲ್ಲಿ ಭಾರತೀಯತೆಯನ್ನು ಮೈಗೂಡಿಸಿಕೊಳ್ಳಬೇಕೆಂದು ಕಾಳಜಿಯಿತ್ತೇ ಹೊರತು ಅವರು ಕಂದಾಚಾರಿಗಳಾಗಿ ಉಳಿಯುವುದು ಬೇಕಿರಲಿಲ್ಲ. ರಾಜಕೀಯ, ಸಾಮಾಜಿಕ ಮತ್ತು ಬದುಕಿನ ವಿವಿಧ ರಂಗಗಳಲ್ಲಿ ಮಹಿಳೆಯರು ಮುಂದೆ ಬರಬೇಕು ಎನ್ನುವುದು ಅವರ ಆಸೆಯಾಗಿತ್ತು"(ಶ್ರೀಧರ. ಬಿ.ವಿ.; ೨೦೦೮; ಪು. ೩೨೫). ಸ್ವದೇಶಿ ಚಳುವಳಿಯ ಯಶಸ್ಸಿಗೆ ಮಹಿಳೆಯರೂ ದುಡಿಯಬೇಕೆಂದು ಆಗಾಗ ತಮ್ಮ ಭಾಷಣಗಳಲ್ಲಿ, ಲೇಖನಗಳಲ್ಲಿ ಒತ್ತಾಯಿಸುತ್ತಿದ್ದರು. ಸಮಾಜದಲ್ಲಿ ಮಹಿಳೆಯರಿಗಿದ್ದ

ಸ್ಥಾನಮಾನಗಳ ಬಗ್ಗೆ ಗಾಂಧೀಜಿಯವರಿಗೆ ತೃಪ್ತಿಯಿರಲಿಲ್ಲ. ಅವರ ಸ್ಥಿತಿಗತಿಯ ಸುಧಾರಣೆಯ ಅಗತ್ಯವನ್ನು, ಜೊತೆಗೆ ಮಹಿಳೆಯರು ತಮ್ಮ ಬದುಕನ್ನು ಹೇಗೆ ಉತ್ತಮಪಡಿಸಿಕೊಳ್ಳಬಹುದು ಎನ್ನುವುದರ ಬಗ್ಗೆ ತಮ್ಮ ಲೇಖನ, ಭಾಷಣಗಳಲ್ಲಿ ಸೂಚಿಸುತ್ತಿದ್ದರು. ಹಾಗಾಗಿ ನಮ್ಮ ಭಾರತೀಯ ಮಹಿಳೆಯರು ಗಾಂಧೀಜಿಯವರ ತತ್ವಗಳಿಂದ, ಸಿದ್ಧಾಂತಗಳಿಂದ ಪ್ರಭಾವಿತರಾದರು. ಜೊತೆಗೆ ಸಾರಸ್ವತ ಲೋಕದಲ್ಲಿ ತಮ್ಮ ತಮ್ಮ ಅಭಿವ್ಯಕ್ತಿ ಮಾಧ್ಯಮ(ಸಾಹಿತ್ಯ ಪ್ರಕಾರಗಳಲ್ಲಿ)ಗಳಲ್ಲಿ ಕಂಡರಿಸಿದ್ದಾರೆ. ಎಲ್ಲಾ ಮಹಿಳಾ ಲೇಖಕರು ಗಾಂಧೀಜಿಯನ್ನು ಒಂದೇ ದೃಷ್ಟಿಕೋನದಲ್ಲಿ ನೋಡದೆ ವಿಭಿನ್ನ (ಆಯಾಮ) ದೃಷ್ಟಿಕೋನದಲ್ಲಿ ಪ್ರತಿನಿಧಿಸಿದ್ದಾರೆ. ದೇಶದ ರಾಜಕೀಯದ ಮಹಾದಂಡನಾಯಕನಾಗಿ, ಸ್ವಾತಂತ್ರ್ಯ ಹೋರಾಟದ ಸೂತ್ರಧಾರನಾಗಿ, ಅಸ್ಪೃಶ್ಯರನ್ನು ಮತ್ತು ಮಹಿಳೆಯರನ್ನು ಸಮಾನವಾಗಿ ಕಾಣುವ ತಂದೆಯಾಗಿ, ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಸಮಸ್ಯೆಗಳನ್ನು ನಿವಾರಿಸಲು ಚಿಂತಿಸಿದ ಮಹಾನ್ ತತ್ವಜ್ಞಾನಿಯಾಗಿ, ಸಶಸ್ತ್ರಧಾರಿಗಳಾದ ಬ್ರಿಟೀಷರನ್ನು ಎದುರಿಸಲು, ಅವರ ದಬ್ಬಾಳಿಕೆಯನ್ನು ಪ್ರತಿಭಟಿಸಲು ಅಹಿಂಸೆಯ ಅಸ್ತ್ರವನ್ನು ರೂಪಿಸಿದ ಅಹಿಂಸಾವಾದಿಯಾಗಿ - ಹೀಗೆ ಭಿನ್ನ ಭಿನ್ನ ದೃಷ್ಟಿಕೋನದಲ್ಲಿ ಲೇಖಕಿಯರು ಗಾಂಧೀಜಿಯನ್ನು ಪ್ರತಿನಿಧಿಸಿದ್ದಾರೆ.

ಲೇಖಕಿಯರು ಗಾಂಧೀಜಿಯನ್ನು ಅತ್ಯಂತ ಆಪ್ತಭಾವದಲ್ಲಿಯೇ ಕಂಡರಿಸಿದ್ದಾರೆ. ಲೇಖಕಿಯರ ಸಂವೇದನೆಗಳು ಪುರುಷರಿಗಿಂತ ಭಿನ್ನ. ಅಪ್ಪಾ, ಗಾಂಧಿ ತಾತ ಎಂದು ಅಕ್ಕರೆ, ಅಂತಃಕರಣದ ಭಾವಗಳನ್ನು ಬಿಂಬಿಸುತ್ತಲೇ ಗಾಂಧೀಭವನ... ಇತ್ಯಾದಿ ಎನ್ನುತ್ತಲೇ ಎಂದೂ ನಮ್ಮ ಮನ ಮನೆ ಅಂಗಡಿಗಳೊಳಗೆ ಬರಲೇ ಇಲ್ಲ. ಮನಮಂದಿರದಲ್ಲಿ ನೆಲೆಸಲೇ ಇಲ್ಲ ಎಂದು ಅತ್ಯಂತ ತೀಕ್ಷ್ಣವಾಗಿ(ಖಾರವಾಗಿ) ಪ್ರತಿಕ್ರಿಯಿಸುವ ಬಗೆಯಾಗಿಯೂ ಕಾಣಸಿಗುತ್ತವೆ. ಇಷ್ಟೆಲ್ಲ ಹೇಳಿದ ಮೇಲೂ ಮನೆಗೆ ಬರಲೇ ಇಲ್ಲ ಎನ್ನುವ ಆತ್ಮೀಯ ತಕರಾರೂ ಇದೆ. ಭಾವನೆಗಳನ್ನು ಹತ್ತಿಯಂತೆ ನೈಜವಾಗಿ ಬಿಡಿಸಿ, ಬಂದ ಕಳೆ ಕಸಗಳನ್ನು ಸ್ವಚ್ಛಗೊಳಿಸಿ ಅದನ್ನು ಮತ್ತೆ(ಆಪ್ತಗೊಳಿಸುವ) ತಮ್ಮದಾಗಿಸಿಕೊಳ್ಳುವ ತುಡಿತ ಹೆಚ್ಚು ಕವಿತೆಗಳಲ್ಲಿ ಕಾಣಬರುತ್ತದೆ.

ಒಟ್ಟಿನಲ್ಲಿ ಕಾವ್ಯ ಪ್ರಕಾರ ಗಾಂಧೀಜಿಯವರನ್ನು ದೈವ ಮತ್ತು ಆಪ್ತಭಾವದಿಂದಲೇ ಕಂಡಿದೆ. ತಮ್ಮ ಅಸಹನೆ, ವ್ಯವಸ್ಥೆಯ ಶೈಥಿಲ್ಯವನ್ನು ಕಟುವಾಗಿ ಟೀಕಿಸಿದರೂ ಅದು ಅವರ ಪ್ರಭಾವಳಿಯ ಚರ್ಚೆಯೇ ಹೊರತು ಮೂಲ ಮೂರ್ತಿಗಲ್ಲ. ಗಾಂಧೀಜಿಯವರನ್ನು ಕಾವ್ಯ ಗುಣಗಾನ ಮಾಡಿದೆ. ಆ ಗುಣಗಾನಕ್ಕೆ ಧಕ್ಕೆ ಒದಗಿದ ಸಂದರ್ಭದಲ್ಲಿ ಆ ಪರಿಸ್ಥಿತಿಯನ್ನು ಕಟುವಾಗಿ ಟೀಕಿಸಿದೆ. ಒಂದೆರೆಡು ಪದ್ಯಗಳು ಆಕ್ರೋಶ ವ್ಯಕ್ತಪಡಿಸಿದರೂ ಸ್ಥಾಯಿಭಾವ ಪೂಜ್ಯವಾಗಿದೆ.

❖❖❖

ಅಧ್ಯಾಯ : ನಾಲ್ಕು

ಕಾದಂಬರಿಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

ಅಧ್ಯಾಯ : ನಾಲ್ಕು

ಕಾದಂಬರಿಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

ಇಂದಿನ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಅತ್ಯಂತ ಪ್ರಭಾವಶಾಲಿಯೂ, ಜನಪ್ರಿಯವೂ ಆಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಇಂಗ್ಲೀಷ್(ಪಾಶ್ಚಿಮಾತ್ಯ) ಸಾಹಿತ್ಯದ ಪ್ರೇರಣೆಯಿಂದ ಹೊಸಗನ್ನಡದಲ್ಲಿ ಸಣ್ಣಕಥೆ, ಪ್ರಬಂಧ, ಭಾವಗೀತೆ, ಜೀವನ ಚರಿತ್ರೆ ಮೊದಲಾದ ಹೊಸ ಪ್ರಕಾರಗಳು ಹುಟ್ಟಿಕೊಂಡಂತೆ ಈ ಕಾದಂಬರಿ ಪ್ರಕಾರ ಅಸ್ತಿತ್ವ ಪಡೆಯಿತು. "ಕೈಗಾರಿಕಾ ಕ್ರಾಂತಿ, ಬಂಡವಾಳಶಾಹಿ ಪ್ರಭುತ್ವ ಮತ್ತು ಮಧ್ಯಮವರ್ಗದ ಉದಯ ಇವು ಯುರೋಪಿನಲ್ಲಿ ಕಾದಂಬರಿಯ ಉದಯಕ್ಕೆ ಕಾರಣವಾದಂತೆ, ಭಾರತೀಯ ಸಂದರ್ಭದಲ್ಲಿ ಬ್ರಿಟೀಷರ ಆಗಮನ, ವಸಾಹತುಶಾಹಿ ಪ್ರಭುತ್ವ, ಇಂಗ್ಲೀಷ್ ಶಿಕ್ಷಣ - ಆಧುನಿಕತೆಗಳಿಂದ ದೇಶದ ಜನತೆ ಸುಶಿಕ್ಷಿತರಾಗಿ ತಯಾರಾದುದು ಕಾದಂಬರಿ ಹುಟ್ಟಿಗೆ ಕಾರಣವಾಯಿತು. ಈ ಕಾರಣದಿಂದ ಉಂಟಾದ ಹೊಸ ಸಂವೇದನೆ ಹೊಸ ಅನುಭವ ಹೊಸ ವಿಚಾರಗಳು ಸಾಮಾಜಿಕ - ಸಾಂಸ್ಕೃತಿಕ ಮತ್ತು ಒಟ್ಟಾರೆ ಸಮಕಾಲೀನ ಸ್ಥಿತಿಗತಿಯ ಸ್ವವಿಮರ್ಶೆಗೆ ಎಡೆಮಾಡಿಕೊಟ್ಟ ಸಂದರ್ಭದಲ್ಲಿ ಅದಕ್ಕೆ ತಕ್ಕ ಅಭಿವ್ಯಕ್ತಿ ಮಾಧ್ಯಮವಾಗಿ ಬಂದದ್ದು ಕಾದಂಬರಿ"(ಮ್ಯಾಗೇರಿ. ಪಿ.ಜೆ; ೨೦೦೮; ಪು. ೬೯). ಕಥೆ, ಶೈಲಿ, ನಿರೂಪಣೆ, ವರ್ಣನೆಯ ಚಮತ್ಕೃತಿ, ರಸ ಮೊದಲಾದ ದೃಷ್ಟಿಗಳಿಂದ ಕಾದಂಬರಿ ಜನರ ಮನವನ್ನು ಸೂರೆಗೊಂಡಿತು.

"ಸಾಮಾಜಿಕ ಸುಧಾರಣೆ, ಹೊಸ ವಿಚಾರಧಾರೆ, ಕೈಗಾರೀಕರಣಗಳ ಜೊತೆ ಜೊತೆಗೆ ಪರೋಕ್ಷವಾಗಿ ಬ್ರಿಟೀಷರ ಬಿಗಿ ಹಿಡಿತ ಹೆಚ್ಚುತ್ತ ಹೋದಂತೆ ಅದನ್ನು ಸಮರ್ಥವಾಗಿ ಎದುರಿಸಿ ಸ್ವಾತಂತ್ರ್ಯವನ್ನು ಪಡೆಯಬೇಕೆಂಬ 'ಹಂಬಲ ಛಲ' ಜನಸಾಮಾನ್ಯರಲ್ಲಿ ಮೊಳೆತು ತನ್ಮೂಲಕ ಅದು ಶೀಘ್ರದಲ್ಲಿ ಗಟ್ಟಿಯಾದ ರಾಷ್ಟ್ರೀಯ ಶಕ್ತಿಯಾಗಿ ಬೆಳೆಯುವ ಲಕ್ಷಣಗಳನ್ನು ಪ್ರಕಟಿಸಿತು. ಹೀಗೆ ಅದು ರಾಷ್ಟ್ರೀಯತೆಯ ಉಗಮದ ಕಾಲವೂ ಆಗಿದೆ. ಈ ರಾಷ್ಟ್ರೀಯತೆಯ ಜೊತೆ ಜೊತೆಗೆ ಇನ್ನೊಂದು ಸಂಘರ್ಷವನ್ನು ಕಾಣಬಹುದು. ಅದೆಂದರೆ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ವಿಚಾರಗಳ ನಡುವಿನ ಸಂಘರ್ಷ. ಈ ಸಂಘರ್ಷದಿಂದ ಸಾಮಾಜಿಕ ಜೀವನವು ಹೆಚ್ಚು ಹೆಚ್ಚು ಕ್ರಿಯಾಶೀಲವೂ, ಜಾಗೃತವೂ ಆಯಿತು"(ಗಂಗಾನಾಯಕ. ಕೆ.ಎನ್.(ಸಂ); ೨೦೧೧; ಪು. ೯). ಈ ಒಂದು ಸ್ಥಿತಿಗತಿಯನ್ನು ಅಂದಿನ ಸಾಹಿತ್ಯ ಕೃತಿಗಳೇ ತೋರಿಸಿಕೊಡುತ್ತವೆ.

ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದ ಬಳಿಕ ಅವರ ಆದರ್ಶಗಳು ಲೇಖಕರನ್ನು ಪ್ರಭಾವಿಸಿದವು. ಗಾಂಧೀಜಿಯವರ ನಿರಾಡಂಬರ, ನೇರ, ಸರಳ ಜೀವನ, ರಾಷ್ಟ್ರಪ್ರೇಮಿಗಳಿಗೆ, ಚಿಂತಕರಿಗೆ ಹಾಗೂ ಸಾಹಿತಿಗಳಿಗೆ ಆದರ್ಶವಾದವು. ಚರಕ ಸಂಘಗಳು, ಹರಿಜನೋದ್ಧಾರ, ಖಾದಿ ಪ್ರಚಾರ, ಪಾನನಿರೋಧ ಮುಂತಾದವುಗಳನ್ನು ಕುರಿತು ಗಾಂಧೀಜಿಯವರು ಕೈಗೊಂಡ ರಚನಾತ್ಮಕ ಕಾರ್ಯಕ್ರಮಗಳು ಸಾರಸ್ವತ ಲೋಕವನ್ನು ಪ್ರಭಾವಿಸಿದವು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ದೇಶದಲ್ಲಿ ಬ್ರಿಟೀಷರ ವಿರುದ್ಧ ಚಳುವಳಿಗಳು ನಡೆದವು. ಆ ಚಳುವಳಿಗಳಿಂದ ಸ್ಫೂರ್ತಿಗೊಂಡು, ಸ್ವಾತಂತ್ರ್ಯವನ್ನು ಕುರಿತು ಬರೆದಂತೆ, ಗಾಂಧೀಜಿಯನ್ನು, ಗಾಂಧೀಜಿಯ ಆದರ್ಶಗಳನ್ನು ಮತ್ತು ಅವರ ತತ್ವಗಳನ್ನು ಕುರಿತು ಸಾಹಿತಿಗಳು ಅನೇಕ ಕಾದಂಬರಿಗಳನ್ನು ರಚಿಸಿದರು. ಅವುಗಳನ್ನು ಅಧ್ಯಯನದ ಅನುಕೂಲಕ್ಕಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ - ಬಂಡಾಯ ಹಾಗೂ ಮಹಿಳಾ ರಚನೆ ಎಂದು ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ. ಆದಾಗ್ಯೂ ಈ ವರ್ಗೀಕರಣದಲ್ಲಿ ಕಾದಂಬರಿಕಾರರನ್ನು ಗೆರೆಕೊರೆದಂತೆ ಇದೇ ಪಂಥದವರೆಂದು ಹೇಳುವುದು ಕಷ್ಟಸಾಧ್ಯ. ಆದರೂ ಅವರ ಒಟ್ಟು ಕೃತಿಗಳ ಧೋರಣೆಯನ್ವಯ ಈ ಪಂಥದವರು ಎಂದು ಗುರುತಿಸಬಹುದಾಗಿದೆ. ಇಷ್ಟಾದರೂ ಅವರ ಗಾಂಧೀಜಿ ಕುರಿತ ಸೃಜನೆಯಲ್ಲಿ ಅವರ ಒಟ್ಟು ಧೋರಣೆಯು ಬದಲಾದ ಹಾಗೆ ಕಾಣಿಸುತ್ತದೆ. ಹಾಗಾಗಿ ಇಲ್ಲಿ ಲೇಖಕರು ಕೆಲವೊಂದು ಸಂದರ್ಭಗಳಲ್ಲಿ ತಮ್ಮ ಪಂಥೀಯ ಧೋರಣೆಗಳಿಂದ ಪಲ್ಲಟಗೊಂಡಿರುವಂತೆ ಕಾಣಿಸುತ್ತಾರೆ. ಇದು ಕೆಲವೊಮ್ಮೆ ಅಧ್ಯಯನದ ಇತಿಮಿತಿಯಾಗಿ ಗೋಚರಿಸುತ್ತದೆ.

೪.೧. ನವೋದಯ ಕಾದಂಬರಿ

ನವೋದಯ ಕಾದಂಬರಿಕಾರರು ದೇಶ - ಭಾಷೆಗಳ ಕುರಿತ ಸ್ವಾಭಿಮಾನ, ಸ್ವಾತಂತ್ರ್ಯದ ಉತ್ಕಟ ಆಕಾಂಕ್ಷೆ, ಕಾರ್ಯ ಹಾಗೂ ಐತಿಹಾಸಿಕ ಪ್ರಜ್ಞೆಯನ್ನು ಮೂಡಿಸುವ ಉದ್ದೇಶದಿಂದ ಕೃತಿ ರಚಿಸಿದರು. ತಮ್ಮ ಕೃತಿಗಳಿಂದ ರಾಷ್ಟ್ರಪ್ರೇಮವನ್ನು ಹೆಚ್ಚಿಸುವ ಉದ್ದೇಶವನ್ನಿರಿಸಿಕೊಂಡಿದ್ದರು. ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ ಬಳಿಕ ಕನ್ನಡ ಕಾದಂಬರಿಕಾರರಿಗೆ ರಾಷ್ಟ್ರಪ್ರಜ್ಞೆಯ ಗಾಳಿ ನೇರವಾಗಿಯೇ ಬೀಸತೊಡಗಿತು. ಹಾಗಾಗಿ ನವೋದಯ ಕಾಲಘಟ್ಟದ ಕಾದಂಬರಿಕಾರರು ಗಾಂಧೀಜಿಯನ್ನು ಯಾವ ಯಾವ ಬಗೆಯಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದಾರೆ ಎಂಬುದನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ. ನವೋದಯ ಮತ್ತು ಗಾಂಧಿಯುಗ ಎರಡೂ ಒಂದೇ ಕಾಲಘಟ್ಟವಾಗಿದ್ದರಿಂದ ಗಾಂಧೀಜಿಯವರು ನವೋದಯ ಕಾಲದ ಸಾಹಿತಿಗಳನ್ನು ನೇರವಾಗಿ ಪ್ರಭಾವಿಸಿದ್ದಾರೆ. ಹಾಗಾಗಿ ನವೋದಯ ಕಾಲದ ಸಾಹಿತಿಗಳು ಗಾಂಧೀಜಿಯವರನ್ನು ಹಾಗೂ ಅವರ ಆದರ್ಶಗಳನ್ನು ಕುರಿತು ಹೆಚ್ಚಿನ ಪ್ರಮಾಣದಲ್ಲಿ ಕಾದಂಬರಿಗಳನ್ನು ರಚಿಸಿರುವುದು ಕಾಣಬರುತ್ತವೆ. ಅವುಗಳಲ್ಲಿ ಪ್ರಮುಖವಾಗಿ ವಿ.ಎಂ. ಇನಾಂದಾರ್ ಅವರು ಮೂರಾಬಟ್ಟೆ(೧೯೪೬), ವಿಜಯಯಾತ್ರೆ(೧೯೪೮), ಮಿರ್ಜಿ ಅಣ್ಣಾರಾಯರ ಪ್ರತಿ ಸರಕಾರ(೧೯೪೭), ಭಸ್ಮಾಸುರ(೧೯೪೯), ರಾಷ್ಟ್ರಪುರುಷ(೧೯೪೭), 'ಹದಗೆಟ್ಟ ಹಳ್ಳಿ'(೧೯೬೫), ಬೆಟಗೇರಿ ಕೃಷ್ಣಶರ್ಮರ 'ಸುದರ್ಶನ'(೧೯೩೩),

ರಂ.ಶ್ರೀ. ಮುಗಳಿ ಅವರ 'ಕಾರಣ ಪುರುಷ'(೧೯೩೯), 'ಅನ್ನ'(೧೯೪೮), ಶಿವರಾಮ ಕಾರಂತ ಅವರು ಮರಳಿ ಮಣ್ಣಿಗೆ(೧೯೪೨), ಔದಾರ್ಯದ ಉರುಳಲ್ಲಿ(೧೯೪೬), ನಾವು ಕಟ್ಟಿದ ಸ್ವರ್ಗ(೧೯೮೦), ಗೊಂಡಾರಣ್ಯ(೧೯೫೪), ಕಡೆಂಗೋಡ್ಲು ಶಂಕರ ಭಟ್ಟರ 'ಈ ಪೀಳಿಗೆ', ಭಾರತೀಸುತ ಅವರ ಸಾಧನ ಕುಟೀರ(೧೯೪೦), ಅರ್ಚಕ ವೆಂಕಟೇಶ ಅವರ ಚಲೋ ದಿಲ್ಲಿ (೧೯೪೬), ಜಡಭರತ ಅವರ ಧರ್ಮಸೆರೆ(೧೯೩೫), ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಮೆರವಣಿಗೆ(೧೯೪೭), ಶ್ರೀರಂಗ ಅವರ ವಿಶ್ವಾಮಿತ್ರನ ಸೃಷ್ಟಿ(೧೯೩೪) ಹೀಗೆ ಇನ್ನೂ ಮುಂತಾದ ಕಾದಂಬರಿಗಳನ್ನು ನವೋದಯ ಸಾಹಿತಿಗಳು ಗಾಂಧೀಜಿಯವರ ತತ್ವ-ಚಿಂತನೆಗಳಿಂದ ಪ್ರಭಾವಿತಗೊಂಡು ರಚಿಸಿದ್ದಾರೆ. ಪ್ರಮುಖವಾಗಿ ನವೋದಯ ಕಾದಂಬರಿಕಾರರು ಗಾಂಧೀಜಿಯವರನ್ನು ಹೇಗೆ ಕಂಡರಿಸಿದ್ದಾರೆ ಎಂಬುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ವಿ.ಎಂ. ಇನಾಂದಾರರು ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯನ್ನೆ ವಸ್ತುವಾಗಿಸಿಕೊಂಡು ಮೂರಾಬಟ್ಟೆ ಕಾದಂಬರಿ ರಚಿಸಿದರು. ಗಾಂಧೀಜಿಯ ಧ್ಯೇಯಾದರ್ಶಗಳನ್ನು ಬಲವಾಗಿ ನಂಬಿದ ಶಾಮಣ್ಣನೆಂಬ ಬಡ ಯುವಕನ ಜೀವನ ಮೂರಾಬಟ್ಟೆಯಾದುದನ್ನು ಈ ಕಾದಂಬರಿ ವಿವರಿಸುತ್ತದೆ. ಶಾಮಣ್ಣ, ರಾಮಣ್ಣ ಬಾಲ್ಯ ಸ್ನೇಹಿತರು. ರಾಮಣ್ಣ ಸುಖ ಜೀವನವನ್ನೇ ಬಯಸುವವನು. ಶಾಮಣ್ಣ ಅಪ್ಪಟ ದೇಶಪ್ರೇಮಿ, ಜನಸೇವಕ. ಗಾಂಧಿ ಆದರ್ಶಗಳ ಪರಿಪಾಲಕನು. ರಾಮಣ್ಣ ತನ್ನ ಸಾಮರ್ಥ್ಯದಿಂದ ಮುಂಬಯಿಯಲ್ಲಿ ವಕೀಲನಾಗುತ್ತಾನೆ. ಅದರ ಜೊತೆಗೆ ನಿರ್ಮಲೆ ಎಂಬ ಯುವತಿಯ ಪ್ರೀತಿಯನ್ನು ಗಳಿಸಿಕೊಳ್ಳುತ್ತಾನೆ. ಶಾಮಣ್ಣ ಕೆಲಸದ ನಿಮಿತ್ತ ಮುಂಬಯಿಯಲ್ಲಿರುವ ತನ್ನ ಬಾಲ್ಯ ಸ್ನೇಹಿತ ರಾಮಣ್ಣನಲ್ಲಿಗೆ ಹೋಗುತ್ತಾನೆ. ಆಗ ಅಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಬ್ರಿಟೀಷರ ವಿರುದ್ಧ ಭಾಷಣ ಮಾಡುತ್ತಾನೆ. ಅದಕ್ಕೆ ಜೈಲು ಸೇರುತ್ತಾನೆ. ಮದುವೆ ಪೂರ್ವದಲ್ಲೇ ನಿರ್ಮಲೆ ರಾಮಣ್ಣನಿಂದ ಗರ್ಭವತಿಯಾಗುತ್ತಾಳೆ. ಅದಕ್ಕೆ ಅವನನ್ನು ತಿರಸ್ಕರಿಸುತ್ತಾಳೆ. ರಾಮಣ್ಣ ಅವಳಿಲ್ಲದೆ ಜೀವನ ಶೂನ್ಯವೆಂದು ಹತಾಶೆಗೊಳಗಾಗುತ್ತಾನೆ. ಶಾಮಣ್ಣ ತಾಯಿಗೋಸ್ಕರ ತನ್ನ ಆದರ್ಶವನ್ನು ಬಲಿಕೊಟ್ಟು ಕ್ಷಮೆ ಪತ್ರ ಬರೆದುಕೊಡುತ್ತಾನೆ. ಕೊನೆಗೂ ತನ್ನ ತಾಯಿಯ ದರ್ಶನವಾಗದೆ ಅತ್ತ ಆದರ್ಶವನ್ನು ಉಳಿಸಿಕೊಳ್ಳಲಾಗದೆ ಇರುವ ಸಂದರ್ಭದಲ್ಲಿ ಕಾದಂಬರಿ ಅಂತ್ಯವಾಗುತ್ತದೆ.

ಇಲ್ಲಿನ ಕಥೆ ಸ್ವಾತಂತ್ರ್ಯಪೂರ್ವದ ಸನ್ನಿವೇಶಕ್ಕೆ ಸಂಬಂಧಿಸಿದೆ. ೧೯೪೨ರ ರಾಷ್ಟ್ರೀಯ ಆಂದೋಲನ ಇದರ ವಸ್ತುವಾಗಿದೆ. ಗಾಂಧೀಜಿಯ ಮರಣದ ನಂತರದಲ್ಲಿ ಜನಿಸಿದವರೆಲ್ಲ ಅವರನ್ನು ಪವಾಡ ಪುರುಷರನ್ನಾಗಿ ಕಾಣುತ್ತೇವೆ. "ಆದರೆ ಅವರ ಸಮಕಾಲೀನರಾಗಿ ಬಾಳಿದವರಿಗೆ, ನಾಡಿನ ಜೀವನಾಡಿಗಳಲ್ಲಿ ಅವರು ತುಂಬಿದ ಚೈತನ್ಯದ ಪ್ರತ್ಯಕ್ಷನುಭವಗಳಾಗಿದ್ದವರಿಗೆ, ಆ ವ್ಯಕ್ತಿತ್ವದ ಪ್ರಭಾವ ಕೇವಲ ಒಂದು ಬುದ್ಧಿ ಗೋಚರವಾದ ವಿಷಯವಾಗಿರಲಿಲ್ಲ. ಈ ಮಾತನ್ನು ಗಾಂಧೀಜಿಯವರ ವಿಷಯದಲ್ಲಿ ಹೇಗೆ ಹೇಳಬಹುದೋ ಹಾಗೆಯೇ ಅವರ ನೇತೃತ್ವದಲ್ಲಿ ನಡೆದ ಆಂದೋಲನಗಳ ವಿಷಯದಲ್ಲಿ ಹೇಳಬಹುದು. ಅಂದು ಬದುಕಿದ್ದವರಿಗೆ ಗಾಂಧೀಜಿ

ಪ್ರಭಾವ ಒಂದು ಪ್ರತ್ಯಕ್ಷಾನುಭವವಾಗಿದ್ದ ಹಾಗೆ ಅವರು ಮುನ್ನಡೆಸಿದ ದೇಶ ಕಾರ್ಯವೂ ಒಂದು ಪ್ರತ್ಯಕ್ಷಾನುಭವವಾಗಿತ್ತು. ಆದರೆ ಅವುಗಳ ಮಹತ್ವ ಅವು ಪ್ರತ್ಯಕ್ಷಾನುಭವಗಳಾಗಿದ್ದವು ಎನ್ನುವುದಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಆ ಪ್ರತ್ಯಕ್ಷಾನುಭವದ ಹಿನ್ನೆಯಲ್ಲಿ ಒಂದು ಜಾಗೃತವಾದ ಪ್ರೇರಣೆ ಕೆಲಸ ಮಾಡುತ್ತಿತ್ತು. ಅವರು ಸಾಕ್ಷಾತ್ಕರಿಸಿದ ಆದರ್ಶ ಒಲಿದು ದೊರೆದ ಆದರ್ಶ ಮಾತ್ರವಾಗಿ ಉಳಿಯದೆ ತಮ್ಮ ಕೃತಿಯಲ್ಲಿ ವ್ಯಕ್ತವಾಗಿ ಉಳಿದವರ ಕೃತಿಯಲ್ಲಿಯೂ ವ್ಯಕ್ತವಾಗುವಂತೆ ಒಂದು ಜೀವರಸ ಪ್ರೇರಣೆಯಾಗಿ ಕೆಲಸ ಮಾಡಬಲ್ಲ ಸಾಮರ್ಥ್ಯವನ್ನು ಪಡೆದಿತ್ತು. ನಾಡಿನ ಬಗೆಯಲ್ಲಿ ನಿಸ್ವಾರ್ಥ ನಿಷ್ಠೆಯನ್ನು ಮೂಡಿಸಿ ವ್ಯಕ್ತಿಗಿಂತ ದೇಶ ದೊಡ್ಡದು, ಅದರ ಮುನ್ನಡೆಯನ್ನು ಸಾಧಿಸುವಲ್ಲಿ ಯಾವ ತ್ಯಾಗವೂ ದೊಡ್ಡದಲ್ಲ ಎಂಬ ತಿಳಿವನ್ನೇ ರಾಜಕೀಯದ ತಳಹದಿಯನ್ನಾಗಿಸಿ ಕೊಂಡ ದೇಶಪ್ರೇಮ ಒಂದು ಅನ್ವರ್ಥಕವಾದ ಮಾತಾಗಿದ್ದಿತು. ಸ್ವಭಾವತಃ ಆದರ್ಶವಾದಿಯಾದ ರಾಮಣ್ಣನಂಥ ಒಂದು ಪಾತ್ರ ಅಂಥ ಆವೇಶಕ್ಕೆ ಸಿಕ್ಕಿ ಬೀಳುವುದರಲ್ಲಿ ಇಡೀ ಒಂದು ತಲೆಮಾರು ಎಂಥ ಪ್ರಬಲವಾದ ಪ್ರೇರಣೆಗೊಳಗಾಯಿತು. ತಮತಮಗೆ ಸಾಧ್ಯವಾದ ರೀತಿಯಲ್ಲಿ ಸಾಧ್ಯವಾದಷ್ಟರಮಟ್ಟಿಗೆ ವೈಯಕ್ತಿಕವಾದ ಹಿತಾಸಕ್ತಿಗಳನ್ನು ಕಡೆಗಣಿಸಿ ತನಗಿಂತ ಹಿರಿದಾದ ಒಂದು ಆದರ್ಶದ ಸಾಧನೆಯಲ್ಲಿ ಪಾಲ್ಗೊಳ್ಳುವಂತಾಯಿತು ಎನ್ನುವುದರ ಸೂಚನೆ ಅಲ್ಲಿ ಸಿಕ್ಕುತ್ತದೆ. ಆಂದೋಲನದ ರಾಜಕೀಯದ ಹಿನ್ನೆಲೆಯಲ್ಲಿ ಆದರ್ಶಗಳು ಕೆಲಸ ಮಾಡುತ್ತಿದ್ದವು, ಸಾಮಾನ್ಯರ ಜೀವನವನ್ನು ಅವು ರೂಪಿಸಬಲ್ಲವಾಗಿದ್ದವು ಎಂಬ ಮಾತು ಕೂಡ ಇಂದು, ಇಂದಿನ ಸನ್ನಿವೇಶದಲ್ಲಿ ಒಂದು ಚಾರಿತ್ರಿಕ ಮಹತ್ವವನ್ನುಳ್ಳ ಸಂಗತಿಯಾಗಿಯೇ ಕಾಣುತ್ತಿದೆ. ಅಂಥ ಪ್ರೇರಣೆ ಇಂದು ಸಂಪೂರ್ಣವಾಗಿ ಕಣ್ಮರೆಯಾಗಿ ಹೋಗಿದ್ದರಿಂದ ಅಂಥ ನಿಸ್ವಾರ್ಥ ಪ್ರೇರಣೆಯಿಂದ ಶಕ್ತಿಯನ್ನು ಪಡೆದ ರಾಷ್ಟ್ರೀಯ ಆಂದೋಲನ ಸ್ವಾತಂತ್ರ್ಯ ಸಾಧನೆಯಲ್ಲಿ ಸಫಲವಾಯಿತಾದರೂ ಸ್ವಾತಂತ್ರ್ಯ ಸಿದ್ಧಿಸಿದ ಅನಂತರದಲ್ಲಿ ತನ್ನ ಕೆಲಸ ಮುಗಿಯಿತು ಎಂದುಕೊಂಡಂತೆ ಅಂಥ ಪ್ರೇರಣೆ ಅಲ್ಪಾವಧಿಯಲ್ಲಿಯೇ ಕಣ್ಮರೆಯಾಯಿತೆನ್ನುವುದನ್ನು ಸಾರಿ ಹೇಳುತ್ತವೆ.

ಸ್ವಾತಂತ್ರ್ಯ ಬಂದ ಆರು ತಿಂಗಳೊಳಗಾಗಿಯೇ ಗತಿಸಿದ ಗಾಂಧೀಜಿಯವರು ದೇಶದ ಮುನ್ನಡೆಗೆ ಅನಿವಾರ್ಯವಾಗಿದ್ದ, ಅದುವರೆಗೆ ಅವರು ಒದಗಿಸಿದ, ನಿಸ್ವಾರ್ಥ ಪ್ರೇರಣೆಯನ್ನೂ ತಮ್ಮೊಡನೆ ಕೊಂಡೊಯ್ದರು ಎನ್ನುವಂತಾಗಿದೆ. ಅಂಥ ಆದರ್ಶದಿಂದ ಪ್ರೇರಣೆ ಪಡೆದ ಶಾಮಣ್ಣನಂಥ ಪಾತ್ರಗಳು ಇಂದಿನ ಪರಿಸರದಲ್ಲಿ ಅವಾಸ್ತವ, ಅವ್ಯವಹಾರಿಕ ಎಂದೆನ್ನಬಹುದಾದ ಮಟ್ಟಿಗೆ ವ್ಯಕ್ತಾತೀತವಾದ ನಿಷ್ಠೆಗಳು ಇಳಿಮುಖವಾಗಿವೆ. ಅಂಥ ನಿಷ್ಠೆಗಳನ್ನು ನಾವು ಮತ್ತೆ ಪುನರುಜ್ಜೀವಿಸಿಕೊಳ್ಳದೆ ಯಾವ ಒಂದು ಕ್ಷೇತ್ರದಲ್ಲಿಯೂ ಮುನ್ನಡೆ ಸಾಧ್ಯವಿಲ್ಲ" (ಇನಾಂದಾರ. ವಿ.ಎಂ.; ೧೯೯೩; ಪು. ಮುನ್ನುಡಿ) ಎಂದು ವಿ.ಎಂ. ಇನಾಂದಾರ ಅವರು ತಮ್ಮ ಮೂರಾಬಟ್ಟೆ ಕಾದಂಬರಿಯ ಮುನ್ನುಡಿಯಲ್ಲಿ ಹೇಳಿದ್ದಾರೆ. ಒಂದು ಕಾಲಕ್ಕೆ ಸಾರ್ವತ್ರಿಕವಾಗಿ ಜಾಗೃತಿಯನ್ನು ಸಾಧಿಸಿದ ನಿಷ್ಠೆ, ರಾಜಕೀಯದ ಜೀವನಾಡಿಯಾಗಿ ಸಫಲತೆಯನ್ನು ಪಡೆದ ದೇಶಪ್ರೇಮ ಇವತ್ತು ಇಲ್ಲವಾಗಿಸಿರುವುದರ ದೃಷ್ಟಿಯಿಂದ ಕಾದಂಬರಿಯ ಸನ್ನಿವೇಶಗಳು ಹೆಚ್ಚು ಮಹತ್ವವನ್ನು

ಪಡೆಯುತ್ತವೆಂದು ಹೇಳಬಹುದು. ಗಾಂಧೀಜಿಯ ಆದರ್ಶಗಳನ್ನು, ಸತ್ವಗಳನ್ನು ಶಾಮಣ್ಣ ಪ್ರತಿನಿಧಿಸುತ್ತಾನೆ. ಹಾಗಾಗಿ "ವೆಂಕಪ್ಪ ಮಾಸ್ತರರಿಗೆ ಅವನು ಮರಿ ಗಾಂಧಿಯಾಗಿಯೇ ಕಾಣುತ್ತಿದ್ದ" (ಅದೇ; ಪು. ೨೬). ಹೊಲಗಳಲ್ಲಿ ಕೆಲಸವಿಲ್ಲದಿದ್ದಾಗ ಮನೆಯಲ್ಲಿ ನೂಲಬೇಕೆಂದು ಶಾಮಣ್ಣ ಹೇಳುತ್ತಿದ್ದ. "ಇದೇನಪ್ಪಾ ಒಳ್ಳೇ ಸಣ್ಣ ಗಾಂಧೀ ಬಂದ್ಹಾಂಗ ಆಗೇತಿ ಊರಾಗ; ಆತು, ಮೂರು ದಿನಾ ಮಾತಾಡಿ ನಾಕನೇ ದಿನಾ ಸುಮ್ಮಗಾಗತಾನ"(ಅದೇ; ಪು. ೩೭). ಎಂದು ಊರಿನ ಜನ ಪಿಸುಗುಡುತ್ತಾರೆ. ಹೀಗೆ ಜನರ ಸಹಕಾರವಿಲ್ಲದೆ ಶಾಮಣ್ಣನ ಮನಸ್ಸಿನಲ್ಲಿ ಅವಿಶ್ವಾಸ ತಲೆದೋರುತ್ತದೆ. ಆದರೂ ತನಗೆ ತಾನೇ ಸಮಾಧಾನ ಹೇಳಿಕೊಳ್ಳುತ್ತ "ನೂರಿನ್ನೂರು ವರ್ಷಗಳ ಅಧಃಪತನವಿದು. ಬೆಳಗಾಗುವುದರಲ್ಲಿ ಜಗತ್ತನ್ನೇ ಬದಲಾಯಿಸಲಾದೀತೆ? ಅಜ್ಞಾನದ ಕತ್ತಲೆಯಲ್ಲಿ ಮೂರು ತಲೆಮಾರೋ ಹತ್ತು ತಲೆಮಾರೋ ಮುಳುಗಿದ್ದವರಿಗೆ ಬೆಳಕೊಂದು ಕನಸೇ ಸರಿ. ಆದರೂ ಬೆಳಕೆಂಬುದುದೊಂದು ದೊಡ್ಡ ಕೆಲಸವಾದಂತೆ"(ಅದೇ; ಪು. ೩೭) ಎಂದು ಯೋಚಿಸಿ ಶಾಮಣ್ಣ ತನ್ನ ಅವಿಶ್ವಾಸದಿಂದ ದೂರ ಉಳಿಯಲು ಪ್ರಯತ್ನಿಸುತ್ತಾನೆ. ನಿಸ್ವಾರ್ಥ ಮನೋಭಾವದಿಂದ ಚಳುವಳಿಯಲ್ಲಿ ಧುಮುಕಿದವರಿಗೆ ಎದುರಾಗಬಹುದಾದ ಸಮಸ್ಯೆ, ಅಡೆತಡೆಗಳನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಗಾಂಧೀಜಿ ರಾಷ್ಟ್ರಮಟ್ಟದ ಸಮಸ್ಯೆಗಳನ್ನು ಎದುರಿಸಿದಾಗ ಶಾಮಣ್ಣ ತನ್ನ ದೇವನೂರಿನಲ್ಲಿ ಸಮಸ್ಯೆಗಳನ್ನು ಎದುರಿಸಿ ನಿಲ್ಲುತ್ತಾನೆ. ಗಾಂಧೀಜಿ ಎದುರಿಸಿದ ತನ್ನ ಕೌಟುಂಬಿಕ ಸಂಬಂಧ ಮತ್ತು ದೇಶದ ಸಂಬಂಧ ಇವೆರಡರ ತಾಕಲಾಟದಲ್ಲಿ ಉದ್ದೇಶ, ಆದರ್ಶಗಳನ್ನು ಬಿಡದೆ ಗಾಂಧೀಜಿ ಸಫಲನಾಗಿ ಕೊನೆಗೆ ಹತರಾಗುತ್ತಾನೆ. ಆದರೆ ಶಾಮಣ್ಣ ಇವೆರಡರ ತಾಕಲಾಟದಲ್ಲಿ ತನ್ನ ಆದರ್ಶಗಳನ್ನು ಬೀದಿಪಾಲು ಮಾಡುತ್ತಾನೆ ಮತ್ತು ದುರ್ಬಲಗೊಳ್ಳುತ್ತಾನೆ. ವೈಯಕ್ತಿಕ ಹಿತಾಸಕ್ತಿಗಳನ್ನು ಕಳೆದಲ್ಲದೆ ಯಾರೂ ಗುರಿ ಸೇರಲಾರರು ಎಂಬುದು ಇಂದಿನ ಪೀಳಿಗೆಯ ಅಭಿಪ್ರಾಯ. ಕಟ್ಟಾ ಆದರ್ಶವಾದಿ ಶಾಮಣ್ಣನೇ ದೇಶಸೇವೆಗೆ ವಿಮುಖವಾದ ಹಾಗೆಯೇ ಎಷ್ಟೋ ಭಾರತೀಯ ದೇಶಭಕ್ತರು ತಮ್ಮ ವೈಯಕ್ತಿಕ ಆಕಾಂಕ್ಷೆಗಳಿಗೆ ಬಲಿಯಾಗುತ್ತಾರೆ. ಹಾಗಾಗಿ ಗಾಂಧೀಜಿ ದಿಟ್ಟ ಹೋರಾಟಗಾರ. ನೈತಿಕ ಜವಾಬ್ದಾರಿಗಳನ್ನು ಹೊತ್ತ ವೀರಯೋಧ. ಗಾಂಧೀಜಿಯ ಆದರ್ಶಗಳು ಆಕಾಶದಷ್ಟು ಎತ್ತರವಾದಂಥವು. ಅವುಗಳನ್ನು ಅನುಸರಿಸಲು, ಮೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಗಾಂಧಿಗೆ ಗಾಂಧಿಯೇ ಸರಿಸಾಟಿ ಎಂದು ಹೇಳಬಹುದಾಗಿದೆ.

ಇನಾಂದಾರ್ ಅವರು ೧೯೪೮ರಲ್ಲಿ ವಿಜಯಯಾತ್ರೆ ಕಾದಂಬರಿಯನ್ನು ರಚಿಸಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸತರಲ್ಲಿ ಈ ಕಾದಂಬರಿಯನ್ನು ಇನಾಂದಾರರು ಬರೆದಿದ್ದಾರೆ. ಇದು ಸ್ವಾತಂತ್ರ್ಯೋತ್ಸವದ ಆಚರಣೆಯ ತವಕದಲ್ಲಿ ತನ್ನ ಅಂತ್ಯವನ್ನು ಕಂಡುಕೊಳ್ಳುವ ಒಬ್ಬ ಸಾಮಾನ್ಯ ಸ್ವಾತಂತ್ರ್ಯ ಹೋರಾಟಗಾರನ ದುರಂತ ಕಥೆಯಾಗಿದೆ. ೧೯೪೭ ಆಗಸ್ಟ್ ೧೪ರ ಬೆಳಿಗ್ಗೆ ಪ್ರಾರಂಭಗೊಂಡು ೧೫ರ ಸಂಜೆಯೊಳಗೆ ಮುಕ್ತಾಯಗೊಳ್ಳುವ ಈ ಕಾದಂಬರಿಯ ವಸ್ತುವಿಗೆ ಕಾಲದ ಪರಿಮಿತಿ ಇದ್ದರೂ ಅನುಭವಗಳ ವಿಸ್ತಾರವಿದೆ.

ಕಥಾನಾಯಕ ವಿಜಯ ವಿದ್ಯಾರ್ಥಿ ದೆಸೆಯಿಂದಲೇ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಮುನ್ನುಗ್ಗಿ ಮೂರು ಸಲ ತುರಂಗ(ಜೈಲು)ವಾಸವನ್ನು ಅನುಭವಿಸಿ ಕರುಳುಬೇನೆಯಿಂದ ಅನಾರೋಗ್ಯ

ಪೀಡಿತನಾಗಿ ಆಸ್ಪತ್ರೆಯಲ್ಲಿ ಒಂಭತ್ತು ತಿಂಗಳು ಇರುವನು. ಅದೇ ಆಸ್ಪತ್ರೆಯಲ್ಲಿ ಆತನ ಸಹಪಾಠಿ ಹಾಗೂ ತನ್ನ ಪ್ರೇಯಸಿ ಮನೋರಮೆ ಡಾಕ್ಟರಳಾಗಿರುತ್ತಾಳೆ. ಸ್ವಾತಂತ್ರ್ಯ ಚಳುವಳಿಯಂತಹ ವಿಷಮ ಪರಿಸ್ಥಿತಿಯಲ್ಲಿಯೂ ಬದುಕಬೇಕೆಂದು ಮನಸ್ಸಿದ್ದರೂ ಬದುಕಲು ಬಿಡದಂತಹ ಕರುಳುಬೇನೆಯು ವಿಜಯನನ್ನು ನಿರಾಶಾದಾಯಕನನ್ನಾಗಿಸುತ್ತದೆ. ೧೯೪೭ ಆಗಸ್ಟ್ ೧೫ರ ಸಂಜೆ ಸ್ವಾತಂತ್ರ್ಯದ ವಿಜಯ ಯಾತ್ರೆಯ ಎದುರು ಸಾಗಿದ ವಿಜಯನ ಅಂತ್ಯಯಾತ್ರೆಯಿಂದ ಕೊನೆಗೆ ಉಸಿರುಗಟ್ಟಿಸುವಂತಹ ಪರಿಸ್ಥಿತಿಯಲ್ಲಿಯೇ ಲೇಖಕರು ಕಾದಂಬರಿಯನ್ನು ಅಂತ್ಯಗೊಳಿಸಿದ್ದಾರೆ.

"ವಿಜಯಯಾತ್ರೆ ನಾಡಿಗೆ ಸ್ವಾತಂತ್ರ್ಯ ಬಂದ ಹೊಸತರಲ್ಲಿ ಬರೆದ ಕಾದಂಬರಿ. 'ಮೂರಾ ಬಟ್ಟೆ'ಯಲ್ಲಿಯ ಹಿನ್ನೆಲೆ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ, ಅದರಲ್ಲಿಯೂ ನಲವತ್ತೆರಡರಲ್ಲಿ ನಡೆದ ಚಳುವಳಿಗೆ, ರಾಷ್ಟ್ರೀಯ ಜೀವನದಲ್ಲಿ ಒಂದು ಮಹಾಪ್ರವಾಹವಾಗಿ ಹರಿದು ಬಂದು ಅಲ್ಲಿಯ ನಾಯಕನಂತ ಅನೇಕರನ್ನು ಕೊಚ್ಚಿಕೊಂಡು ಹೋದ ಧ್ಯೇಯ ನಿಷ್ಠೆಗೆ ಸಂಬಂಧಿಸಿದ್ದು" ಎಂದು ಇನಾಂದಾರರು ವಿಜಯಯಾತ್ರೆಯ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ(ಇನಾಂದಾರ. ವಿ.ಎಂ.; ೧೯೯೧; ಪು. ಪ್ರಸ್ತಾವನೆ) .

"ಗಾಂಧೀಜಿಯವರು ಬೋಧಿಸುತ್ತಿದ್ದ ಆದರ್ಶವಾದವನ್ನು ವ್ಯವಹಾರಿಕ ರಾಜಕೀಯದಲ್ಲಿ ಹೊಂದಿಸಿಕೊಂಡು ಹೋಗುವುದು ಕಷ್ಟ ಎಂಬ ವಿಚಾರ ಧೋರಣೆಯನ್ನು ರಾಜಕೀಯದ ಮುಂದಾಳುಗಳು ಸ್ವಾತಂತ್ರ್ಯ ಬರುವ ಮೊದಲೇ ಹಲವಾರು ಸನ್ನಿವೇಶಗಳಲ್ಲಿ ವ್ಯಕ್ತಪಡಿಸಿದ್ದರು. ಹಾಗೆಂದೇ ಗಾಂಧೀಜಿಯವರು ತಾವು ರಾಷ್ಟ್ರೀಯ ಸಂಸ್ಥೆಯ ಸಾಮಾನ್ಯ ಸದಸ್ಯನೂ ಅಲ್ಲ. ಆದ್ದರಿಂದ ತಮ್ಮ ಮಾತಿಗೆ ಯಾವ ಅಧಿಕಾರವೂ ಇರಬೇಕಿಲ್ಲ ಎಂದು ಹತ್ತು ಸಲ ಹೇಳಿದ್ದರು. ಆದರೆ ಅವರು ನಾಯಕತ್ವವನ್ನು ಒಪ್ಪದೆ ವಿಧಿ ಇರಲಿಲ್ಲ, ಒಪ್ಪಿಕೊಂಡರು. ಆದರೆ ಅವರ ನಾಯಕತ್ವವನ್ನು ಒಪ್ಪಿಕೊಂಡ ನಾಯಕರೇ ಅವರ ಆದರ್ಶಗಳಿಂದ ದೂರವಾದರು. ದೂರವಾಗುತ್ತಲೇ ನಡೆದರು. ಇದರ ಪರಿಣಾಮವೆಂದರೆ ಸ್ವಾತಂತ್ರ್ಯದಿಂದ ಗಾಂಧೀಜಿಯವರೇ ದೂರವಾಗುವಂತಾಯಿತು. ಜಾತೀಯತೆಯನ್ನು ತೊಡೆದುಹಾಕಬೇಕೆಂದು ತಮ್ಮ ಜೀವನದ ಉದ್ದಕ್ಕೂ ದುಡಿದ ಮಹಾತ್ಮರಿಗೆ ಜಾತೀಯತೆಯನ್ನಾಧರಿಸಿ ನಡೆದ ದೇಶದ ವಿಭಜನೆಯ ಮೂಲಕ ಬಂದ ಸ್ವಾತಂತ್ರ್ಯದಿಂದ ಎಂಥ ನಿರಾಶೆಯಾಗಿರಬೇಡ? ಸಂಕುಚಿತ ಅನುಕೂಲಕ್ಕಾಗಿ ಆದರ್ಶವನ್ನು ಬಲಿಯಾಗಿಸಿದವರು ರಾಜ್ಯಾಧಿಕಾರವನ್ನು ಯಾವ ರೀತಿಯಲ್ಲಿ ಬಳಸಿಯಾರು, ಏನಾದರೂ ಅದನ್ನವರು ತಾವು ಅಪೇಕ್ಷಿಸಿದ ಅಥವಾ ಕನಸು ಕಂಡ ರೀತಿಯಲ್ಲಿ ಬಳಸಲಾರರು ಎಂಬ ಸಂದೇಹಗಳು ಅವರನ್ನು ನೋಯಿಸಿದ್ದರೆ ತಾವು ನಿರಾಕೃತರು ಎಂಬ ಭಾವನೆ ಅವರಲ್ಲಿ ಬೆಳೆದಿದ್ದರೆ, ಅದೊಂದು ಸೋಜಿಗದ ವಿಷಯವೆನ್ನಬೇಕಿಲ್ಲ. ಸ್ವಾತಂತ್ರ್ಯ ಬಂದ ಆರು ತಿಂಗಳುಗಳ ಒಳಗಾಗಿಯೇ ದ್ವೇಷದ ಗುಂಡಿಗೆ ಬಲಿಯಾಗಿ ಹೋದ ಅವರು ಬದುಕಿಯೇ ಇದ್ದಿದ್ದರೆ ಸ್ವತಂತ್ರ ಭಾರತದಲ್ಲಿಯ ರಾಜ್ಯಾಧಿಕಾರದ ರೀತಿ-ನೀತಿಗಳ ವಿರುದ್ಧ ಎಷ್ಟು ಬಗೆಯಲ್ಲಿ ಸತ್ಯಾಗ್ರಹವನ್ನು ಹೂಡಬೇಕಾಗುತ್ತಿತ್ತು ಎನ್ನುವುದು ಊಹೆಗೆ ಸೇರಿದ ವಿಷಯ. ಒಂದು ಮಾತ್ರ ಸತ್ಯ ಅಹಿಂಸೆಯ

ತತ್ವವನ್ನಾಧರಿಸಿದ ಗಾಂಧೀಜಿಯವರ ಸತ್ಯಾಗ್ರಹ ದೇಶಕ್ಕೆ ಸ್ವಾತಂತ್ರ್ಯ ಬರುವಂತೆ ಮಾಡಿತು. ಆದರೆ ಬಂದ ಸ್ವಾತಂತ್ರ್ಯ ಅವರನ್ನು ಹಾಗೂ ಅವರ ಜೀವನದರ್ಶನವನ್ನು ಜನರಿಂದ ದೂರವಾಗಿಸಿತು. ರಾಜಕೀಯ ಆದರ್ಶಕ್ಕಿಂತ ರಾಜಕೀಯ ಅಧಿಕಾರ ದೊಡ್ಡದಾಗುತ್ತ ನಡೆಯಿತು. ಈ ಬೆಳವಣಿಗೆ ನಿಜವಾದ ಗಾಂಧಿ ಭಕ್ತರಲ್ಲಿ ವಂಚನೆಯನ್ನು, ಒಂದು ಬಗೆಯ ವಿಫಲ ಭಾವನೆಯನ್ನು ಮೂಡಿಸಿತೆನ್ನುವುದು ಸ್ವಾಭಾವಿಕವೇ"(ಅದೇ; ಪು. ೯-೧೦) ಎಂದು ಕಾದಂಬರಿಕಾರರು ಅಭಿಪ್ರಾಯಿಸಿದ್ದಾರೆ.

ಕಾದಂಬರಿಯಲ್ಲಿಯ ಕೇಂದ್ರ ಪಾತ್ರ ಇಂಥ(ವಿಜಯ) ಒಬ್ಬ ಗಾಂಧಿ ಭಕ್ತ. ತನಗಿಂತ ದೇಶ ದೊಡ್ಡದು, ದೇಶ ಪಡೆಯಬೇಕಾದ ಸ್ವಾತಂತ್ರ್ಯ ಎಲ್ಲಕ್ಕಿಂತ ಹೆಚ್ಚಿನದು ಎಂದು ತಿಳಿದವನಾದ್ದರಿಂದ ತನ್ನದೆಲ್ಲವನ್ನು ತೊರೆದು, ಕಾರಾಗೃಹದಲ್ಲಿ ಕಷ್ಟಗಳನ್ನು ಅನುಭವಿಸಬೇಕಾದರೂ ತನ್ನ ಧ್ಯೇಯ ನಿಷ್ಠೆಯನ್ನು ಕಳೆದುಕೊಳ್ಳದೆ ನಿಸ್ವಾರ್ಥ ಬುದ್ಧಿಯಿಂದ ದುಡಿದವ. ಇಲ್ಲಿಯ ಕಥೆ ಅವನ ವ್ಯಥೆಯ ಕಥೆಯೂ ಹೌದು. "ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹವನ್ನು ಹೂಡುವುದರಲ್ಲಿದ್ದರು. ತನಗೆ ತಿಳಿಯದೇ ಗಾಂಧೀಜಿಯವರ ನೇತೃತ್ವದಲ್ಲಿ ಯುವಕರು ಮುನ್ನುಗ್ಗಿ ಯುವಕರ ಒಗ್ಗಟ್ಟನ್ನು ದೇಶದೆದುರು ಎತ್ತಿತೋರಿಸುವುದೇ ಮೊದಲ ಕರ್ತವ್ಯ ಎಂದು"(ಅದೇ; ಪು. ೩೦) ಗಾಂಧೀಜಿಯವರು ಯುವಕರನ್ನು ಸಂಘಟಿಸುವ ಹಾಗೂ ಯುವಕರ ಉತ್ಸಾಹದ ಮೂಲ ಮಂತ್ರವಾಗಿದ್ದರು. "ದೇಶ ಹತ್ತು ಪಾಲಾಗಿದ್ದರೂ ಅಡ್ಡಿಯಿರಲಿಲ್ಲ. ಸ್ವಾತಂತ್ರ್ಯ ಕೊನೆಗೆ ಒಮ್ಮೆ ಸಿಕ್ಕಿತೆಂದು. ಆದರೆ ಬಂದ ಸ್ವಾತಂತ್ರ್ಯದ ಅರ್ಥವನ್ನು ಕೂಡ ತಿಳಿಯದಷ್ಟು ತಿಳಿಗೇಡಿಯಾಗಿ ನಡೆದುಕೊಳ್ಳುತ್ತಿದೆಯಲ್ಲಾ ನಮ್ಮ ಜನ? ಇದಕ್ಕಾಗಿ ನಮ್ಮ ಶ್ರಮ ವ್ಯರ್ಥವಾಯಿತು ಎನಿಸುತ್ತದೆ"(ಅದೇ; ಪು. ೪೧). ಹೇಗಾದರೂ ಸರಿ, ಎಂಥದಾದರೂ ಸರಿ, ಸ್ವಾತಂತ್ರ್ಯ ಬಂದರೆ ಸಾಕು ಎಂಬ ಮುಂದಾಳುಗಳ ಧೋರಣೆಗಳಲ್ಲಿ ಮೊದಲಿನ ಧ್ಯೇಯನಿಷ್ಠ ಸಂಕಲ್ಪಗಳಿಗೆ ಅವಕಾಶವಿಲ್ಲದಾಯಿತು. ದೇಶ ಇಬ್ಭಾಗವಾಗಿ, ಸುಖ ಸಮೃದ್ಧಿಯ ಅರುಣೋದಯವನ್ನು ಮುನ್ನೋಡುತ್ತಿದ್ದ ಜನ ಜಾತೀಯತೆಯ ದಳ್ಳುರಿಯನ್ನು ಎದುರಿಸಬೇಕಾಯಿತು. ನಿಧಾನವಾಗಿಯಾದರೂ ಸ್ಪಷ್ಟವಾಗಿ ಕಾಣಿಸಿಕೊಂಡ ಮುಂದಾಳುಗಳ ಧೋರಣೆಗಳಲ್ಲಿಯ ಸಮಯೋಚಿತ ಪರಿವರ್ತನೆಗಳು ಗಾಂಧೀಜಿಯವರು ಹಾಗೂ ಅವರ ನಿಷ್ಠಾವಂತ ಅನುಯಾಯಿಗಳು ಒಂದು ಕಡೆಯಾದರೆ ಮಹಾತ್ಮರ ಹೆಸರನ್ನು ಹೇಳುತ್ತಲೇ ಅವರ ಆದರ್ಶಗಳಿಂದ ದೂರವಾಗಿ ಸ್ವತಂತ್ರ ಭಾರತದ ಆಡಳಿತದಲ್ಲಿ ಅಧಿಕಾರ ಸ್ಥಾನಮಾನಗಳನ್ನು ಪಡೆದವರು ಇನ್ನೊಂದು ಕಡೆಯಾಗುವಂತೆ ಸ್ವಾತಂತ್ರ್ಯೋದಯದ ಸಮಯದಲ್ಲಿಯೇ ಸನ್ನಿವೇಶವನ್ನು ರೂಪಿಸಿದವು. ಅಂದಿನ ಸಂದರ್ಭದಲ್ಲಿ ಅನೇಕ ನಿಷ್ಠಾವಂತ ದೇಶಸೇವಕರು, ಅಂದರೆ ನಿಜವಾಗಿಯೂ ದೇಶದ ಸ್ವಾತಂತ್ರ್ಯಕ್ಕಾಗಿ, ಏಳ್ಗೆಗಾಗಿ ತಮ್ಮದೆಲ್ಲವನ್ನೂ ಬಿಟ್ಟುಕೊಟ್ಟವರು, ಜೀವವನ್ನು ಕೊಡಲು ಸಿದ್ಧರಾಗಿದ್ದವರು, ಒಂದು ಬಗೆಯ ವಿವೇಚನೆಗೆ, ವಿಫಲ ಭಾವನೆಗೆ ಒಳಗಾಗಬೇಕಾಯಿತು. "ಬಂದ ಸ್ವಾತಂತ್ರ್ಯವನ್ನು ಈ ಜನ ಹೇಗೆ ಬಳಸಿಯಾರು ಎಂಬ ಬಗೆಯಲ್ಲಿ ಗಾಂಧೀಜಿಯವರ ಮನಸ್ಸಿನಲ್ಲಿಯೇ ಆತಂಕಗಳಿದ್ದವು.

ದೆಹಲಿಯಲ್ಲಿ ಸ್ವತಂತ್ರ ಭಾರತದ ಧ್ವಜ ಮೇಲಕ್ಕೇರುತ್ತಿದ್ದಾಗ ಮಹಾತ್ಮರು ಅಲ್ಲಿರಲಿಲ್ಲ. ಜನಗಳ ಮನಸ್ಸಿನಲ್ಲಿ ಹತ್ತಿಕೊಂಡ ಜಾತೀಯ ದ್ವೇಷದ ಜ್ವಾಲೆಗಳನ್ನು ನಂದಿಸುವುದಕ್ಕಾಗಿ ಅವರು ನೌಖಾಲಿಯಲ್ಲಿ ಪಾದಯಾತ್ರೆಯನ್ನು ಕೈಗೊಂಡಿದ್ದರು. ಮಾತ್ರವಲ್ಲ, ಮೊದಲ ಸ್ವಾತಂತ್ರ್ಯ ದಿನದಂದು ಪ್ರಾಯಶ್ಚಿತ್ತವೆಂಬಂತೆ ಅವರು ಉಪವಾಸವನ್ನಾಚರಿಸಿದರು. ಅವರಿಗಾದ ನಿರಾಶೆಯ ಆಳವನ್ನು ಅವರು ನೊಂದ ಬಗೆಯನ್ನು, ಅವರ ಅಂದಿನ ಉಪವಾಸ ಸಂಕೇತಿಸುತ್ತದೆ"(ಅದೇ; ಪು. ೯). ಕೊನೆಗೆ ದುಷ್ಕರ್ಮಿಗಳ ಗುಂಡಿಗೆ ಬಲಿಯಾಗಿ ದೇಶದ ಜನತೆಯ ಮನಸ್ಸಿನಲ್ಲಿ ಲೀನವಾದರು. ಇದೇ ರೀತಿಯ ಮನಸ್ಥಿತಿಯನ್ನು ಹೊಂದಿದ್ದ ವಿಜಯನು ಬಂಧನದಿಂದ ಮುಕ್ತವಾದ ಈ ದೇಶವನ್ನು ಜನ ಹೇಗೆ ನಡೆಸಿಕೊಂಡು ಹೋಗುವರು ಎಂದು ಯೋಚಿಸುತ್ತಾ "ಸ್ವಾತಂತ್ರ್ಯ ಸಿಕ್ಕಿತು, ದೇಶ ಹೋಯಿತು"(ಅದೇ; ಪು. ೪೦) ಎಂದು ಗಾಂಧೀಜಿಯಂತೆ ಆತಂಕಗಾರನಾಗಿದ್ದಾನೆ. "ಮಹಾತ್ಮರು ಹೇಳಿದ ಮಾತನ್ನು ಇಂದು ಯಾರು ಕೇಳುತ್ತಿದ್ದಾರೆ? ಅವರ ಅನುಯಾಯಿಗಳಾಗಿ ಜೀವ ಸವೆಸಿದ ಕೆಲವು ವ್ಯಕ್ತಿಗಳನ್ನು ಬಿಟ್ಟು, ಅವರಿಂದ ವೈಯಕ್ತಿಕ ರೀತಿಯಲ್ಲಿ ಬದುಕಿನಲ್ಲಿಯ ಬೆಳಕನ್ನು ಕಂಡವರ ಹೊರತು, ಯಾರು ಅವರ ಮಾತನ್ನು ನಡೆಸುತ್ತಿದ್ದಾರೆ?"(ಅದೇ; ಪು. ೪೨) ಎಂದು ಆವೇಶಭರಿತವಾಗಿ ಮಮ್ಮಲ ಮರುಗುವನು.

"ಒಂದೆಡೆ ಕಾಂಗ್ರೆಸಿಗೂ ಮಹಾತ್ಮರಿಗೂ ಅವ್ಯಕ್ತ ಭಿನ್ನಾಭಿಪ್ರಾಯವಿದೆ. ಆ ಭಿನ್ನಾಭಿಪ್ರಾಯವಿದ್ದು ದಕ್ಕಾಗಿಯೇ ಕಾಂಗ್ರೆಸ್ಸಿನ ಆಡಳಿತದಲ್ಲಿ ಏಕಸೂತ್ರತೆ ಇಲ್ಲದಾಗಿದೆ(ಅದೇ; ಪು. ೪೩). ಜನಹಿತದ ಆದರ್ಶವನ್ನು ಅಡಿಪಾಯವಾಗಿರಿಸಿಕೊಂಡು ಬೆಳೆದ ಕಾಂಗ್ರೆಸ್ ಸ್ವಾತಂತ್ರ್ಯ ಬಂದ ಕೂಡಲೇ ಸ್ವಾತಂತ್ರ್ಯ ಬಂದದ್ದು ತನ್ನ ಮೂಲಕವೇ. ಆದ್ದರಿಂದ ಮುಂದಿನ ಆಡಳಿತಕ್ಕೆ ತಾನೇ ಉತ್ತರಾಧಿಕಾರಿ ಎಂದು ಇಂದಿಗೂ ಬಗೆದುಕೊಂಡು ಬರುತ್ತಿದೆ. 'ಮಹಾತ್ಮರು ಆದರ್ಶ ಪುರುಷರು. ಅಹಿಂಸೆಯಂಥ ದೊಡ್ಡ ತತ್ವಕ್ಕಾಗಿ ದೇಹವನ್ನು ಸವೆಯಿಸಿದವರು. ಅವರ ತತ್ವ ಉಚ್ಚವಾದಷ್ಟೇ ಅದರ ಆಚರಣೆ ಕಠಿಣ. ಪ್ರತಿನಿತ್ಯದ ರಾಜ್ಯದ ಆಡಳಿತದ ಅನುಕೂಲ ಅನಾನುಕೂಲಗಳಲ್ಲಿ ತತ್ವದ ಮಾತಿಗೆ ನೇತುಬಿದ್ದರೆ ಕಾರ್ಯಭಾರ ನಡೆಯುವುದೇ ಸಾಧ್ಯವಾಗಲಿಕ್ಕಿಲ್ಲ ಎಂಬುದು ಇಂದಿನ ರಾಜಕೀಯದ ಮನೋಧೋರಣೆಯಾಗಿದೆ. "ದೇಶದ ಹಿತಸಾಧನೆಗೊಂಡು ಸಾಧನವಾಗಬೇಕಿದ್ದ ಆಡಳಿತಾಧಿಕಾರವೇ ಸಾಧಿಸಬೇಕಾದ ಸಿದ್ಧಿಯಾಯಿತು. ಈ ಪರಿವರ್ತನೆ ಹೆಜ್ಜೆ ಹೆಜ್ಜೆಗೂ ಗಾಂಧೀಜಿಯವರ ಹೆಸರನ್ನು ಮುಂದುವರೆಸಿಕೊಂಡೇ ಬಂದಿರುವುದು ಒಂದು ಕ್ರೂರ ಚಾರಿತ್ರಿಕ ವಿಪರ್ಯಾಸ"ವಾಗಿದೆ. ಇಂದು ಗ್ರಾಮೋದ್ಯೋಗಗಳ ವಿಚಾರದಲ್ಲಿ, ಮೂಲ ಶಿಕ್ಷಣದ ವ್ಯವಸ್ಥೆಯ ವಿಚಾರದಲ್ಲಿ, ದೇಶದಲ್ಲಿ ಯಾಂತ್ರೀಕರಣದ ವಿಚಾರದಲ್ಲಿ, ಜಾತೀಯತೆಯ ವಿಚಾರದಲ್ಲಿ, ಅಹಿಂಸೆಯ ವಿಚಾರದಲ್ಲಿ ಆಡಳಿತ(ಸರಕಾರ) ವ್ಯವಸ್ಥೆ ಹಾಗೂ ಗಾಂಧೀಜಿಯವರಿಂದ ದೂರ ದೂರ ಹೋಗುತ್ತಲಿವೆ. ಗಾಂಧೀಜಿಯವರನ್ನು ನಂಬಿ ನಡೆದವರು, ನಡೆದು ನೊಂದವರು ಅಸಹಾಯಕ ಸಾಕ್ಷಿಗಳಾಗಿಯೇ ಉಳಿಯಬೇಕಾಯಿತು ಎಂದು ಇನಾಂದಾರರು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

"ಕನ್ನಡ ಸಾಹಿತ್ಯ ದಿಗ್ಗಜರಲ್ಲಿ ಒಬ್ಬರಾದ ಶಿವರಾಮ ಕಾರಂತರು ಚಲನಶೀಲ ಮತ್ತು ಸರ್ವಸಮಾನತೆಯ ಸಮಾಜವೊಂದರ ಕನಸನ್ನು ಕಾಣುತ್ತಾ ಅದನ್ನು ನಿರಂತರ

ಜೀವಂತವಾಗಿಟ್ಟುಕೊಂಡು ಬಂದವರು. ಆ ಕನಸನ್ನು ನನಸು ಮಾಡಲು ತಮ್ಮ ಕಾಲೇಜು ವಿದ್ಯಾಭ್ಯಾಸವನ್ನು ಧಿಕ್ಕರಿಸಿ ಬ್ರಿಟೀಷರ ವಸಾಹತುಶಾಹಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತುವುದರ ಮೂಲಕ ತಮ್ಮನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ತಮ್ಮ ಕಾಲೇಜು ಶಿಕ್ಷಣದ ಆರಂಭದಲ್ಲಿಯೇ ಮಹಾತ್ಮ ಗಾಂಧೀಜಿ ಮತ್ತು ರವೀಂದ್ರನಾಥ ಠಾಕೂರರ ಪ್ರಭಾವಕ್ಕೆ ಒಳಗಾದರು"(ಮುನಿಯಪ್ಪ; ೨೦೦೫; ಪು. ಪ್ರಸ್ತಾವನೆ). ಗಾಂಧಿವಾದದ ಆದರ್ಶಗಳಿಂದ ಹೊರಗುಳಿಯದಿದ್ದರೂ ಗಾಂಧಿವಾದವು ಕಾರಂತರ ಸಂವೇದನೆಗಳನ್ನು ರೂಪಿಸಿದ ಪ್ರಮುಖ ಅಂಶಗಳಲ್ಲಿ ಒಂದಾದರೂ ಅವರು ಗಾಂಧಿವಾದವನ್ನು ಸೈದ್ಧಾಂತಿಕ ಲೋಕಗ್ರಹಿಕೆಯ ಮಿತಿಗಳನ್ನು ಮೀರಿ, ಗಾಂಧೀಜಿಯವರ ಹೇಳಿಕೆಗಳನ್ನು ಪ್ರಶ್ನಾತೀತವಾಗಿ ನೋಡುವುದರ ಮೂಲಕ ಸ್ವತಂತ್ರವಾಗಿ ಬೆಳೆದರು. ಈ ಹಿನ್ನೆಲೆಯಲ್ಲಿ ಕಾರಂತರ ಕಾದಂಬರಿಗಳು ಹೆಚ್ಚು ಕುತೂಹಲಕಾರಿಯಾಗಿವೆ. "ಶಿವರಾಮ ಕಾರಂತರಿಗೆ ಗಾಂಧೀಜಿ ಭೂತ ಬೆನ್ನು ಹತ್ತಿತ್ತು. ಖಾದಿ ಚಳುವಳಿ, ಹರಿಜನೋದ್ಧಾರ ಎಂದು ತಲೆ ಮೇಲೆ ಖಾದಿ ಬಟ್ಟೆಯನ್ನು ತಲೆಯೊಳಗೆ ಗಾಂಧೀಜಿ ಹೆಣೆದ ಕನಸುಗಳನ್ನು ಹೊತ್ತು ಹಳ್ಳಿಗಾಡನ್ನು ಸುತ್ತಿದವರು. ಎಳೆತನ ಕಳೆಯುತ್ತಿದ್ದಂತೆ ಗಾಂಧೀಜಿ ಅಥವಾ ಬೇರೆ ಹಿರಿಯರು ಹೇಳಿದ್ದೇ ತನ್ನ ವಿಚಾರಗಳಾಗಬೇಕಿಲ್ಲ ಅನ್ನೋ ಅರಿವು ಮೂಡಿ ಸ್ವಯಂ ಅನುಭವ ಭಾವನೆಗಳ ಆಧಾರದ ಮೇಲೆ ಸ್ವಂತ ವಿಚಾರಗಳನ್ನು ರೂಢಿಸಿಕೊಳ್ಳುತ್ತಾ ಬಂದರು"(ನಾಗಭೂಷಣ. ಡಿ.ಎಸ್.; ೧೯೯೦; ಪು. ೪೯).

"ನಾನು ೧೯೨೧ರ ಸಮಾರಿಗೆ ಅಸಹಕಾರ ಚಳುವಳಿಗೆ ಸ್ವಾತಂತ್ರ್ಯ ಉದಯದ ತನಕ ಸಾಗಿದ ನನ್ನ ಸ್ವಂತ ಬದುಕಿನ ಮತ್ತು ಅದನ್ನು ಸುತ್ತುವರಿದ ಸಾಮಾಜಿಕ ವ್ಯಕ್ತಿ, ಸಂಸ್ಥೆ, ರೀತಿ-ನೀತಿಗಳ ಅನುಭವಗಳ ಪ್ರತೀಕ ಇದು. ಆರಂಭದಲ್ಲಿ ನನ್ನ ಜೊತೆಗೆ ಅಲೆದಾಡಿದ ಮೂವರು ಮಿತ್ರರ ನೆನಪು ಅದರಿಂದ ಹುಟ್ಟಿದೆ. ಕುಂದಾಪುರ ತಾಲೂಕಿನಲ್ಲಿ ಮಿಂಚಿ ಮಾಯವಾದ ಅಸಹಕಾರದ ಪ್ರತಿಬಿಂಬ ಅದರಲ್ಲಿದೆ. ನನ್ನ ಹತಾಶ ಕನಸುಗಳೂ ಅದರಲ್ಲಿ ತುಂಬಿವೆ. ನನ್ನ ತಾರುಣ್ಯದಲ್ಲಿ ಕುಂದಾಪುರ, ಉಡುಪಿ ತಾಲ್ಲೂಕುಗಳಲ್ಲಿ ಸಂಭವಿಸಿದೊಂದು ನೆರೆ ಹಾವಳಿ ಸಾರ್ವಜನಿಕರ ಬದುಕನ್ನು ಕಂಗಾಲುಗೊಳಿಸಿದ ಕತೆ ಇಲ್ಲಿದೆ. ರಾಜಕೀಯ ಬಿರುಗಾಳಿಗೆ ಸಿಲುಕಿ, ಮನೆಮಾರುಗಳನ್ನು ಕಳೆದುಕೊಂಡ ಶಿರ್ಸಿ, ಸಿದ್ಧಾಪುರ ಜನರ ಮರೆಯಲಾರದ ನೆನಪು ಸಂಕಟಗಳ ಇತಿಹಾಸ, ಅವರ ಮಕ್ಕಳು ಅನುಭವಿಸಿದ ಕಷ್ಟ, ಕಾರ್ಪಣ್ಯಗಳ ಚಿತ್ರವನ್ನು ಇಲ್ಲಿ ಬಣ್ಣಿಸಿದ್ದೇನೆ" (ಶಿವರಾಮ ಕಾರಂತ.ಕೆ.; ೨೦೦೮; ಪು. ಮುನ್ನುಡಿ) ಎಂದು ಕಾರಂತರೇ ತಮ್ಮ 'ಔದಾರ್ಯದ ಉರುಳಲ್ಲಿ'ಯ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಹಾಗಾಗಿ ಇಲ್ಲಿ ಬರುವ ರಾಧಾಕೃಷ್ಣನ ಪಾತ್ರವೇ ಶಿವರಾಮ ಕಾರಂತರಾಗಿದ್ದಾರೆ. ಸದಾನಂದ ಮತ್ತು ಸಖಾರಾಮ ಕಾರಂತರ ಮಿತ್ರರಾಗಿದ್ದಾರೆ ಎಂದು ಹೇಳಬಹುದು.

ಕಾರಂತರು 'ಔದಾರ್ಯದ ಉರುಳ'ಲ್ಲಿ ಕಾದಂಬರಿಯನ್ನು ೧೯೪೭ರಲ್ಲಿ ರಚಿಸಿದ್ದಾರೆ. ಇಲ್ಲಿ ಸ್ವಾತಂತ್ರ್ಯಪೂರ್ವ ಭಾರತದ ಸ್ಥಿತಿಗತಿಯನ್ನು ಮತ್ತು ಕನ್ನಡ ನಾಡಿನ ಸ್ಥಿತಿಗತಿಯನ್ನು ರಾಜಕೀಯ ಹಿನ್ನೆಲೆಯಲ್ಲಿ ಗುರುತಿಸುತ್ತಾರೆ. ಈ ಕಾದಂಬರಿಯ ನಾಯಕ ರಾಧಾಕೃಷ್ಣನ ಪಾತ್ರದ ಮೂಲಕ

ಗಾಂಧೀಜಿಯನ್ನು ಪ್ರತಿನಿಧಿಸಿದ್ದಾರೆ. ರಾಧಾಕೃಷ್ಣ ಬಿ.ಎ. ಓದುತ್ತಿದ್ದಾಗ ಗಾಂಧೀಜಿಯವರ ಸ್ವರಾಜ್ಯ ಚಳುವಳಿಯ ಪ್ರಭಾವಕ್ಕೆ ಒಳಗಾಗಿ ವ್ಯಾಸಂಗವನ್ನು ಅರ್ಧಕ್ಕೆ ನಿಲ್ಲಿಸಿ ದೇಶ ಸೇವೆಗೆ ತೊಡಗಿಸಿಕೊಳ್ಳುತ್ತಾನೆ. ಅವನ ಗೆಳೆಯ ಸುಖರಾಯ ಉಪಾಧ್ಯಾಯನಾಗಿ ತಿಂಗಳಿಗೆ ಐವತ್ತು ರೂಪಾಯಿಗಳನ್ನು ಸಂಪಾದಿಸುತ್ತಿದ್ದ. ಮಂಗಳೂರಿಗೆ ಗಾಂಧೀಜಿ ಬಂದಾಗ ಅವರ ವಿಚಾರ ಮತ್ತು ಭಾಷಣಗಳಿಂದ ಪ್ರಭಾವಿತನಾಗಿ ತನ್ನ ಉದ್ಯೋಗವನ್ನು ಕೈಬಿಡುತ್ತಾನೆ. ರಾಧಾಕೃಷ್ಣನ ಮತ್ತೋರ್ವ ಸ್ನೇಹಿತ ಸದಾನಂದ ಕಮ್ತಿ ಕುಂದಾಪುರದ ಶ್ರೀಮಂತ ಕುಟುಂಬಕ್ಕೆ ಸೇರಿದವನು. ಇವನು ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ಮುಂಬೈಯಲ್ಲಿನ ವೈದ್ಯಕೀಯ ಶಿಕ್ಷಣವನ್ನು ನಿಲ್ಲಿಸಿ ರಾಷ್ಟ್ರೀಯ ಚಳುವಳಿಯಲ್ಲಿ ಧುಮುಕಲು ನಿರ್ಧರಿಸುವನು. ಹೀಗೆ ಮೂವರು ಗೆಳೆಯರು ಸೇರುತ್ತಾರೆ. "ನಿತ್ಯವೂ ಸಂಜೆ ಕುಂದಾಪುರ ಮೈದಾನಿನಲ್ಲಿ ನಿಂತು ಸ್ವರಾಜ್ಯ, ಸ್ವದೇಶಿಗಳ ಮೇಲೆ ಉಪನ್ಯಾಸ ಹೂಡಿದರು. ಊರ ಜನ ಮೂರನೆಯ ಬಾರಿಗೂ ಅದನ್ನೇ ಅದನ್ನೇ ಕೇಳಲು ತವಕಿಸಿ ಬಂದರು. ಈ ಮೂವರೂ ಪೊಲೀಸು ತೋಳಗಳ ಬಾಯಿಗೆ ಎದುರಾದ ಕುರಿಗಳಂತೆ ಕಾಣಿಸಿತು ಜನಕ್ಕೆ. ಎಲ್ಲರೂ ಅವರನ್ನೂ ಕನಿಕರಿಸುವವರೇ! "ಹೋಗಲಿ! ಹಿಂದುಸ್ಥಾನಕ್ಕೆ ಒಬ್ಬ ಗಾಂಧಿಯಾದರೆ ನಮ್ಮ ಕುಂದಾಪುರಕ್ಕೆ ಮೂವರು"(ಅದೇ; ಪು. ೧೩) ಎಂಬ ಹೆಮ್ಮೆ ತಾಳಿದರು. ಅವರ ಉಪನ್ಯಾಸಗಳನ್ನು ಮೆಚ್ಚಿ ಹೊಗಳಿದರು.

ಗಾಂಧೀಜಿಯ ಸಂದೇಶಗಳ ಪ್ರಚಾರದ ಜವಾಬ್ದಾರಿಯನ್ನು ರಾಧಾಕೃಷ್ಣನು ತನ್ನ ಸ್ನೇಹಿತರೊಂದಿಗೆ ಕೂಡಿಕೊಂಡು ಹೊತ್ತನು. ಅವುಗಳನ್ನು ಪೇಟೆಯ ಜನರ ಮುಂದೆ ಸಾರಿದರೆ ಯಾವ ಫಲ ಸಿಗುವುದಿಲ್ಲವೆಂದು ತಿಳಿದು, ಹಳ್ಳಿಗಳಲ್ಲಿ ಸಂಚರಿಸಿದನು. ಗಾಂಧೀಜಿ ಹಾಕಿಕೊಟ್ಟ ರಚನಾತ್ಮಕ ಕಾರ್ಯಕ್ರಮಗಳಾದ ಕಾಯಿದೆ ಭಂಗ, ಕಂದಾಯ ನಿರಾಕರಣೆ, ಅಸಹಕಾರ ಮುಂತಾದವುಗಳ ಮೂಲಕ ಹಳ್ಳಿಗಳ ಜನರನ್ನು ಸ್ವಾತಂತ್ರ್ಯ ಸಮರಕ್ಕೆ ತಯಾರಿಸಲು ತಮ್ಮ ವಾಕ್‌ಸಾಮರ್ಥ್ಯದ ಮೂಲಕ ಆ ಮೂರು ಜನ ಸ್ನೇಹಿತರು ಹೊರಟರು. ಆದರೆ ಕೊನೆಗೆ ಸಖಾರಾಮ ಮತ್ತು ಸದಾನಂದರು ರಾಧಾಕೃಷ್ಣನನ್ನು ಅರ್ಧದಲ್ಲಿಯೇ ಬಿಟ್ಟು ಈ ಗ್ರಾಮೋದ್ಧಾರದ ಪೇಚಾಟ ಸಾಕೆಂದು ತಿಳಿದು ಹಿಂದಕ್ಕೆ ಓಡಿ ಹೋಗುತ್ತಾರೆ. ರಾಧಾಕೃಷ್ಣ ಮಾತ್ರ ಗಾಂಧೀಜಿಯಂತೆ ದೃಢ ಮನಸ್ಸಿನವನಾದುದರಿಂದ ತನ್ನ ನಿರ್ಧಾರವನ್ನು ಬದಲಿಸದೆ ಮುಂದುವರಿಯುತ್ತಾನೆ. ಕಾದಂಬರಿಯಲ್ಲಿ ರಾಧಾಕೃಷ್ಣ ಗಾಂಧೀಜಿಯನ್ನು ಪ್ರತಿನಿಧಿಸುತ್ತಾನೆ.

ರಾಧಾಕೃಷ್ಣ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲು ಬೈಂದೂರಿಗೆ ಹೊರಡುತ್ತಾನೆ. ಅಲ್ಲಿ ಆ ಹಳ್ಳಿಯ ಜನರಿಂದ ನಿರೀಕ್ಷಿಸಿದ ಫಲ ರಾಧಾಕೃಷ್ಣನಿಗೆ ದೊರಕುವುದಿಲ್ಲ. ಬೈಂದೂರಿನಲ್ಲಿ ಯಾರೂ ಕಾಂಗ್ರೆಸ್ಸಿಗೆ ಸೇರುವ, ಸ್ವರಾಜ್ಯಕ್ಕಾಗಿ ಆರ್ಥಿಕ ಸಹಾಯ ಮಾಡುವ ಉತ್ಸಾಹಿಗಳು ಸಿಗುವುದಿಲ್ಲ. ಗಾಂಧೀಜಿಯವರು ಹೇಳಿದಂತೆ ಬ್ರಿಟೀಷ್ ಸರಕಾರದ ಕೆಲಸವನ್ನು ಬಿಟ್ಟು ಹೊರಬಂದರೆ ಮಾತ್ರ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯ. ಆದರೆ ಡಾ. ಕೃಷ್ಣಪ್ಪನವರು ರಾಧಾಕೃಷ್ಣನಿಗೆ "ನಾನೂ

ಬಿಡಬಹುದಿತ್ತು. ನಮ್ಮ ಶಾಂತಿಯನ್ನು, ಮಕ್ಕಳನ್ನು ಕಾಡಿಗೆ ಅಟ್ಟಿದ ಮೇಲೆ"(ಅದೇ; ಪು. ೩೮). ಎಂದು ಹೀಗೆ ಹೆಚ್ಚಿನ ಸರಕಾರಿ ನೌಕರರಿಗೆ ಸ್ವರಾಜ್ಯಕ್ಕಿಂತ ಅವರ ಸಂಸಾರದ ರಕ್ಷಣೆ-ಪೋಷಣೆ ಪ್ರಮುಖವಾಗುತ್ತಿತ್ತು. ಹೀಗೆ ರಾಧಾಕೃಷ್ಣ ಗಾಂಧೀಜಿಯವರ ಉಪದೇಶಗಳನ್ನು ಕೇಳುವವರು ಸಿಗುತ್ತಿದ್ದರೇ ವಿನಃ ಅವುಗಳನ್ನು ಕಾರ್ಯರೂಪಕ್ಕೆ ತರುವವರು ಸಿಗುತ್ತಿರಲಿಲ್ಲ. ಇನ್ನು ಕೆಲವರು ಗಾಂಧೀಜಿಯ ಅಹಿಂಸೆಯಿಂದ ಸ್ವರಾಜ್ಯ ಸಿಗುತ್ತದೆಂಬ ನಂಬಿಕೆ ಕಳಕೊಂಡಿದ್ದರು.

ರಾಧಾಕೃಷ್ಣ ತನ್ನ ಸಂಬಂಧಿ ಡಾ. ಕೃಷ್ಣಪ್ಪನೊಡನೆ "ಗಾಂಧಿಯವರು ಅಂದಿಲ್ಲವೇ, ನೂಲುವುದರಿಂದ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ ಇವುಗಳಿಂದ "ನೂಲುವ ಜನಗಳೂ ಇದ್ದಾರೆ ಬೇರೆ ದೇಶದಲ್ಲಿ. ಹೊಲೆಯರಿಲ್ಲದ ಊರುಗಳೂ ಉಂಟು. ಅವೆಲ್ಲ ಸ್ವತಂತ್ರ ದೇಶಗಳೆಂದು ತಿಳಿಯಲೂ ಬೇಕಿಲ್ಲ. ಸ್ವತಂತ್ರವಾಗಿರುವ ರಾಷ್ಟ್ರಗಳಲ್ಲಿ ಕುಡುಕತನ, ಬಡತನದ ರಾಜ್ಯಗಳೇ ಅಧಿಕ. ಒಂದಕ್ಕೊಂದು ಸಂಬಂಧವಿಲ್ಲ. ನೀನು ಚರಿತ್ರೆ ಓದುವವನೇ? ಕತ್ತಿ ಹಿಡಿಯದೆ ಯಾವ ರಾಜ್ಯವೂ ಸ್ವಾತಂತ್ರ್ಯ ಗಳಿಸಿಲ್ಲ. ಹಾಗೆ ಮಾಡುವ ತನಕ ನಮ್ಮ ವೈರಿ ಓಡುವುದೂ ಇಲ್ಲ. ನಮ್ಮ ವೈರಿಗಳಿಗಿಂತ ಹೆಚ್ಚಾಗಿ ನಾವು ಕಾದಬಲ್ಲೆವಾದರೆ ಸ್ವಾತಂತ್ರ್ಯ, ಇಲ್ಲವಾದರೆ ದಾಸ್ಯ".

"ಹಾಗಾದರೆ ಗಾಂಧೀಜಿಯವರ ಅಹಿಂಸಾವಾದ ನಿರರ್ಥಕವೇ?"

'ಅಹಿಂಸೆಯೇ? ಮನುಷ್ಯ ಸ್ವಭಾವವನ್ನು ತಿಳಿಯದ ಮಾತದು. ಅಡುಗೂಲಜ್ಜಿ, ಉಪವಾಸ ಮಾಡಿಕೊಂಡು ಸ್ವರ್ಗ ಗಳಿಸುತ್ತೇನೆ ಎಂದು ತಿಳಿದುಕೊಂಡ ಹಾಗಿದೆ. ಆ ಕತೆ"(ಅದೇ; ಪು. ೬೭). ಎಂದು ಈ ಇಬ್ಬರು ಚರ್ಚಿಸುತ್ತಾರೆ. ಕೃಷ್ಣಪ್ಪ ಸಶಸ್ತ್ರಗಳ ಮೂಲಕ ಸ್ವಾತಂತ್ರ್ಯ ಪಡೆಯಲು ಸಾಧ್ಯವೆಂದು ಹೇಳಿದರೆ ರಾಧಾಕೃಷ್ಣ ಗಾಂಧೀಜಿಯವರ ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ಗಳಿಸಲು ಸಾಧ್ಯವೆಂದು ಅಭಿಪ್ರಾಯಿಸುತ್ತಾನೆ. ಆದರೆ ರಾಧಾಕೃಷ್ಣನ ಆಸೆ - ಕನಸುಗಳಿಗೆ ದಯಾನಂದರಾಯರು ಮಾತ್ರ ಪ್ರೋತ್ಸಾಹದಿಂದ ಮಾರ್ಗದರ್ಶನ ಮಾಡಿದರು.

ಪ್ರಭುದೇವ ಎಂಬ ಒಬ್ಬ ಪತ್ರಕರ್ತನು ರಾಧಾಕೃಷ್ಣನ ಸಮಾಜ ಸೇವೆಯ ಹೆಸರಿನಲ್ಲಿ ತನ್ನ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುತ್ತಾ ಬಂದನು. ನಿಸ್ವಾರ್ಥ ಪರನಾದ ರಾಧಾಕೃಷ್ಣನು ಗಾಂಧೀ ತತ್ವಗಳ ಮೇಲೆ ನಂಬಿಕೆ, ಶ್ರದ್ಧೆಯನ್ನಿರಿಸಿದ್ದಕ್ಕೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಬೇಕಾಯಿತು. ಯಾವುದೇ ಸಮಾಜಕ್ಕೆ ಅಲ್ಪ ಅವಧಿಯಲ್ಲಿ (ತಾತ್ಕಾಲಿಕವಾಗಿ) ಅಗತ್ಯತೆಗಳನ್ನು ಪೂರೈಸಬಲ್ಲ ಅಂಶಗಳೇ ಮುಖ್ಯವಾಗುತ್ತವೇ ಹೊರತು ಗಾಂಧೀಜಿಯವರ ಗುಣಾತ್ಮಕ ವಿಚಾರಧಾರೆಗಳು ಸುದೀರ್ಘವಾಗಿ ಫಲ ನೀಡುವ ಅಂಶಗಳಿಗೆ ಬೆಲೆ ಸಿಗಲಾರದು. ಹಾಗಾಗಿ ಗಾಂಧೀಜಿಯವರ ತತ್ವಗಳಿಗೆ - ವಿಚಾರಗಳಿಗೆ ಹೆಚ್ಚಿನ ಸ್ಥಳಾವಕಾಶ ಕಡಿಮೆ. ಗಾಂಧೀಜಿಯವರನ್ನು ಅನುಸರಿಸಿದರೆ ಹಲವು ಕಷ್ಟಗಳಿಗೆ, ನೋವುಗಳಿಗೆ ಅಥವಾ ಉರುಳಲ್ಲಿ ಸಿಲುಕಬೇಕಾಗುತ್ತದೆ ಎಂದು ರಾಧಾಕೃಷ್ಣನ ಮೂಲಕ ಚಿತ್ರಿಸಿದ್ದಾರೆ.

ಸ್ವಾತಂತ್ರ್ಯ ನಂತರದ ಕಾರಂತರ "ಗೊಂಡಾರಣ್ಯ", "ನಾವು ಕಟ್ಟಿದ ಸ್ವರ್ಗ", "ಅದೇ ಊರು, ಅದೇ ಮರ" ಕಾದಂಬರಿಗಳಲ್ಲಿ ನೇರವಾಗಿ ಗಾಂಧೀಜಿಯವರ ಪ್ರಭಾವವಿಲ್ಲದೇ ಹೋದರೂ, ಸ್ವಾತಂತ್ರ್ಯ, ರಾಜಕೀಯಕ್ಕೆ ಸಂಬಂಧಪಟ್ಟಿರುವುದರಿಂದ ಗಾಂಧೀಜಿ ತತ್ವ ಆದರ್ಶಗಳನ್ನು

ಕುರಿತಂತೆ ವಿಶ್ಲೇಷಣೆ ಮಾಡಲು ಸಾಧ್ಯವಿದೆ. ಹಾಗಾಗಿ ಮೇಲಿನ ಮೂರು ಕಾದಂಬರಿಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಕಾರಂತರು ಒಟ್ಟು ನಲವತ್ತೈದು ಕಾದಂಬರಿಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ. ಅವರ 'ಗೊಂಡಾರಣ್ಯ' ಒಂದು ರಾಜಕೀಯ ವಸ್ತುವನ್ನು ಒಳಗೊಂಡ ಕಾದಂಬರಿ. ಇದು ಇಂದಿನ ಕಾಲಕ್ಕೆ ಅನ್ವಯಿಸುವ ಒಂದು ರಾಜಕೀಯ ಕಾದಂಬರಿ. ಸ್ವಾತಂತ್ರ್ಯೋದಯದಿಂದ ತೊಡಗಿ ಸುಮಾರು ಹದಿನೈದು ವರ್ಷಗಳ ವ್ಯಾಪ್ತಿಯುಳ್ಳದ್ದು. ವ್ಯಕ್ತಿಗಳು ನನ್ನ ಗುರಿಯಾಗಿಲ್ಲ. ರಾಜಕೀಯದಲ್ಲಿ ನಲಿದಾಡುವ ಜನಗಳ ಅಯೋಗ್ಯತೆ, ಕುಂದುಕೊರತೆ, ಅಪ್ರಾಮಾಣಿಕತೆ ಮೊದಲಾದ ಗುಣಗಳೇ ಇಲ್ಲಿ ಟೀಕೆಗೆ ಗುರಿಯಾಗಿರುವುದರಿಂದ, ಗೊಂಡಾರಣ್ಯವೆಂಬ ಕಾಲ್ಪನಿಕ ಸಂಸ್ಥಾನವನ್ನು ನಿರ್ಮಿಸಿಕೊಂಡು, ಅದರ ರಾಜಕೀಯ ಚಿತ್ರಣ ಅಥವಾ ಸ್ಥಿತಿಗತಿಯನ್ನು ಚಿತ್ರಿಸಲು ತೊಡಗಿದ್ದೇನೆ. ಇಲ್ಲಿ ಕಾಣುವ ಜನರು, ಮುಖಂಡರು, ನಡವಳಿಕೆ, ಪರಿಸ್ಥಿತಿಯೆಲ್ಲವೂ ನಮ್ಮ ಭಾರತದಲ್ಲಿ ಎಲ್ಲೆಂದರಲ್ಲಿ ಕಾಣಬಹುದಾದುವೇ" ಎಂದು ಕಾರಂತರು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ (ಶಿವರಾಮ ಕಾರಂತ.ಕೆ.; ೨೦೦೮; ಪು. ಮುನ್ನುಡಿ). ಇಲ್ಲಿನ ರಾಜಕೀಯ ಪಕ್ಷಗಳು ಕಾಲ್ಪನಿಕವಾದವೇ ಆದರೂ ಅವು ತೋರಿಸಿಕೊಡುವ ಮುಖ್ಯ ಸಮಸ್ಯೆ - ಪ್ರಜಾಪ್ರಭುತ್ವದಲ್ಲಿ ಸುಲಭವಾದ ಯಶಸ್ಸಿಗಾಗಿ ಜನರೋ ಅಥವಾ ಪಂಗಡಗಳೋ ಹಿಡಿಯುವ ವಾಮಮಾರ್ಗ, ಅಸತ್ಯ ಮಾರ್ಗ, ಹಿಂಸಾ ಮಾರ್ಗಗಳು, ಗಾಂಧೀಜಿಯವರ ತತ್ವಾದರ್ಶಗಳೆಲ್ಲವನ್ನು ತೂರಿಬಿಡುವ ಪಾತ್ರಗಳಾಗಿವೆ. ತಮ್ಮ ವೈಯಕ್ತಿಕ ಜೀವನವನ್ನು ಭದ್ರಗೊಳಿಸಲು ರಾಜಕೀಯ ನಾಯಕರು ಗಾಂಧೀಜಿಯ ಚಿಂತನೆಗಳನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳುತ್ತಾರೆ. ಅದರೆ ಅವುಗಳನ್ನು ನಿಜವಾಗಿಯೂ ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಲಾರರು. ವ್ಯವಹಾರಿಕ ರಾಜಕಾರಣಕ್ಕೆ ಎದುರಾಗಿ ನಿಂತು ಬಲಿಯಾಗುವ ಅಥವಾ ಪ್ರತಿ ವ್ಯವಹಾರಿಕ ರಾಜಕಾರಣಕ್ಕೆ ಇಳಿಯುವ ಪಾತ್ರಗಳು ಉಂಟು. ಉದಾಹರಣೆಗೆ ಅರುಣಾಚಲಯ್ಯ ಮತ್ತು ಕಾಂಚನಮಾಲೆ. ಸೇತುರಾಯ ಸಮಾಜವಾದಿ ಘೋಷಣೆಗಳನ್ನು ಕೂಗುತ್ತಾ, ಶ್ರಮಜೀವಿಗಳ ಮತ್ತು ಹಿಂದುಳಿದವರ ಪ್ರತಿನಿಧಿಯಾಗುತ್ತಾನೆ. ಆದರೆ ಇವನು ಐಷಾರಾಮಿ ಜೀವನಕ್ಕೆ ಬಾಯಿಬಿಡುತ್ತಾನೆ. ಇತರರ ಆಸ್ತಿಯನ್ನು ಕಬಳಿಸಲು ಹಾತೊರೆಯುತ್ತಾನೆ. ಜೊತೆಗೆ ಬಂಡವಾಳಗಾರರೊಂದಿಗೆ ಶಾಮೀಲಾಗುತ್ತಾನೆ. ಸೇತುರಾಯನು ಮತ್ತು ಔದಾರ್ಯ ಉರುಳಲ್ಲಿನ ಪ್ರಭುದೇವ ಈ ಇಬ್ಬರು ಒಂದೇ ವ್ಯಕ್ತಿತ್ವವನ್ನು ಹೊಂದಿದ್ದು, ಗಾಂಧಿ ಚಿಂತನೆಗಳನ್ನು ತಮ್ಮ ಬಂಡವಾಳಗಳನ್ನಾಗಿಸಿಕೊಂಡು ಪ್ರಬಲರಾಗುತ್ತಾ ಹೋಗುತ್ತಾರೆ.

ಗಾಂಧಿವಾದಿಯಾದ ಅರುಣಾಚಲಯ್ಯ ನಿಸ್ವಾರ್ಥದಿಂದ ದುಡಿದು ಇದ್ದುದನ್ನು ತ್ಯಾಗ ಮಾಡಿ ಜನ ಪ್ರೀತಿಯನ್ನು ಗಳಿಸುತ್ತಾನೆ. ಈತನು ವಾಮನರಾಯನಂತೆ, ಸ್ವಾರ್ಥಪರತೆಯಿಂದ ಕೂಡಿದ ರಾಜಕಾರಣಿಯಲ್ಲ. ಜಾತಿ, ಕೋಮುಗಳ ವಿರುದ್ಧ ಗಾಂಧೀಜಿಯ ಆದರ್ಶಗಳ ನೆರಳಿನಲ್ಲಿ ಹೋರಾಡುವವನು. ಸಮಾಜದಲ್ಲಿರುವ ಕೊಳೆಯನ್ನು, ಜಡತೆಯನ್ನು, ಮೋಸ, ಲಂಚ ಮತ್ತು ವಂಚನೆ ಇತ್ಯಾದಿಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಗಾಂಧೀಜಿಯ ತತ್ವಗಳಿಂದ

ಮಾತ್ರ ಸಾಧ್ಯವೆಂದು ತಿಳಿದವನು. ಹಾಗಾಗಿ ಗೊಂಡಾರಣ್ಯದ ಅಭಿವೃದ್ಧಿಗೆ ನಿಸ್ವಾರ್ಥದಿಂದ ದುಡಿಯುವನು.

ಸ್ವಾತಂತ್ರ್ಯನಂತರದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಗಾಂಧೀಜಿಯವರ ಹಲವಾರು ಕನಸುಗಳು ಭಗ್ನಗೊಂಡಿರುವುದನ್ನು ಕಾರಂತರು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಚುನಾವಣೆಯಲ್ಲಿ ನಡೆಯುವ ಅಕ್ರಮಗಳು, ರಾಜಕೀಯ ನಾಯಕರ ಸ್ವಾರ್ಥಪರತೆ, ಲಂಚಗುಳಿತನ ಅರುಣಾಚಲಯ್ಯ ಮತ್ತು ಕಾಂಚನಮಾಲೆಯವಳಂಥ ದಕ್ಷ, ಪ್ರಾಮಾಣಿಕ, ರಾಜಕೀಯ ನಾಯಕರ ಕಗ್ಗೊಲೆ ಇತ್ಯಾದಿಗಳನ್ನು ಕಾಣಬಹುದು.

ವಿ.ಎಂ. ಇನಾಂದಾರ್ ಅವರು ಗೊಂಡಾರಣ್ಯ ಕಾದಂಬರಿಯನ್ನು ಕುರಿತು "ನಾಡಿನಲ್ಲಿನ ಸಮಕಾಲೀನ ರಾಜಕೀಯ ಪ್ರವೃತ್ತಿಗಳನ್ನು ಮನಸ್ಸಿನಲ್ಲಿರಿಸಿಕೊಂಡೇ ಕಾರಂತರು ಈ ಕಾದಂಬರಿಯನ್ನು ಬರೆದಿದ್ದಾರೆಂದು ಯಾರು ಹೇಳಿಕೊಡಬೇಕಾಗಿಲ್ಲ. ಕಾದಂಬರಿ ಚಿತ್ರಿಸುವ ರಾಜ್ಯ ಕಲ್ಪನೆಯಾದರೂ ಅಲ್ಲಿಯ ಸನ್ನಿವೇಶವನ್ನು ಸಾಧ್ಯವಾಗಿಸುವಂತಹ ಪ್ರವೃತ್ತಿಗಳು ನಮ್ಮ ಸುತ್ತಮುತ್ತಲಿನಲ್ಲಿಯೇ ಅದೇ ರೀತಿಯಲ್ಲಿ ಬೆಳೆಯಬಹುದೆಂಬ ಸೂಚನೆಯನ್ನು ಕೊಡುತ್ತಿದ್ದವು. ಕಾದಂಬರಿಯನ್ನು ಬರೆದು ಪ್ರಕಟಿಸಿದ ನಂತರ ಎರಡೂವರೆ ದಶಕಗಳ ಅವಧಿಯಲ್ಲಿ ಕಾದಂಬರಿ ಕಾಲ್ಪನಿಕವಾಗಿ ಕಂಡದ್ದನ್ನು ದೇಶದಲ್ಲಿಯ ವಾಸ್ತವ ಸ್ಥಿತಿ ನಿಜವಾಗಿಸಿದೆ. ಕಾದಂಬರಿಕಾರರು ವಿಡಂಬನೆಯ ದೃಷ್ಟಿಯಿಂದ ತಮ್ಮ ಕಲ್ಪನೆಯಲ್ಲಿ ಕಂಡು ಚಿತ್ರಿಸಿದ್ದು ಇಂದು ವಸ್ತುಸ್ಥಿತಿಯ ಯಥಾರ್ಥ ಚಿತ್ರಣವೆನ್ನುವಂತಾಗಿದೆ. ಗೊಂಡಾರಣ್ಯ ಕಲ್ಪನೆಯ ಕೂಸಾದರೂ ಅದರ ಪ್ರವಾದಿಯ ಭವಿಷ್ಯ ದರ್ಶನ ಸಿದ್ಧಿಸಿದೆ, ಕಲ್ಪನೆಗಿಂತ ಸತ್ಯ ವಿಚಿತ್ರ ಎನ್ನುತ್ತಾರೆ; ಇಪ್ಪತ್ತೇಳು ವರ್ಷಗಳ ಅವಧಿಯಲ್ಲಿ ವಿಚಿತ್ರವಾಗಿ ಇಲ್ಲಿ ಕಲ್ಪನೆಯೇ ಸತ್ಯವಾಗಿದೆ"(ಇನಾಂದಾರ.ವಿ.ಎಂ.; ೧೯೮೨; ಪು. ೬೫-೬೬) ಎಂದು ಅಭಿಪ್ರಾಯಪಡುತ್ತಾರೆ.

ವಿ. ಸೀತಾರಾಮಯ್ಯನವರೂ ಸಹ ಗೊಂಡಾರಣ್ಯ ಕಾದಂಬರಿ ಕುರಿತು "ನಮ್ಮ ನಾಡಿನ ರಾಜಕೀಯದ ಕೆಸರಿನ ಒಂದು ವಾಸ್ತವ ಚಿತ್ರ. ಒಳಸಂಚು, ದೌಷ್ಟ್ಯ, ಸ್ವಾರ್ಥಾಭಿಲಾಷೆ, ಅಧಿಕಾರ ಲಾಲಸೆ ಮುಂತಾದ ದುರ್ವ್ಯಾಪರಗಳನ್ನು ಬಹುವಾಗಿರುವ ರಾಜಕೀಯ ರಂಗದ ಸ್ವಾರ್ಥ ಕೃಪಣತೆಗಳ ಒಂದು ಸಾಂಕೇತಿಕ ಚಿತ್ರ. ಇಂಥ ಜೀವನದಲ್ಲಿ ಅರ್ಥವೇನಿದೆ? ಆದರ್ಶವೇನಿದೆ? ಸಾರ್ವಜನಿಕ ಸೇವಾಕಾಂಕ್ಷೆ ಎಲ್ಲಿದೆ? ಎಂದು ಕಾರಂತರು ಸವಾಲು ಹಾಕಿದ್ದಾರೆ. ಅವರ ಮನಸ್ಸು ಮುನಿದ ಮೇಲೆ ಇನ್ನೂ ಹೇಗೆ ವ್ಯಗ್ರವಾಗಿ ಅಸಹನಶೀಲವಾಗಿರಬಲ್ಲದೆನ್ನುವುದಕ್ಕೆ ಈ ಕೃತಿ ಸಾಕ್ಷಿ. ಮನುಷ್ಯರ ಕ್ರೌರ್ಯದಿಂದಲೂ, ಅಧಿಕಾರ ಲಾಲಸೆ ಮತ್ತು ವಂಚನೆಯ ನಗ್ನಸತ್ಯದಿಂದಲೂ ಈ ಕಾದಂಬರಿಗೆ ಗೊಂಡಾರಣ್ಯವೆಂಬ ಹೆಸರು ಸಾರ್ಥಕವಾದೀತು" (ಸೀತಾರಾಮಯ್ಯ.ವಿ.; ೧೯೬೩; ಪು. ೧೬) ಎಂದು ರಾಜಕೀಯ ವ್ಯವಸ್ಥೆಯನ್ನು ಪ್ರಸ್ತುತ ಸಂದರ್ಭಕ್ಕೆ ಅನ್ವಯ ಮಾಡಿಕೊಂಡು ಈ ರೀತಿ ಅರ್ಥಪೂರ್ಣ ಮಾತುಗಳನ್ನು ಹೇಳಿದ್ದಾರೆ.

ಕಾರಂತರು 'ಅದೇ ಊರು, ಅದೇ ಮರ' ಕಾದಂಬರಿಯನ್ನು ೧೯೭೭ರಲ್ಲಿ ರಚಿಸಿದ್ದಾರೆ. ಈ ಕಾದಂಬರಿಯ ಮುನ್ನುಡಿಯಲ್ಲಿ ಕಾರಂತರು "ಇದು ಒಂದು ಸಣ್ಣ ಊರಿನ ಕಥೆ, ಅಲ್ಲಿಯ ಜನಜೀವನವನ್ನು ಸಂಕೇತಿಸುವ ವಸ್ತು, ಅಲ್ಲಿನ ಬೃಹತ್ ಆಲದ ಮರ, ಅದರ ಆರಂಭದ ಚಿತ್ರ, ಕಂಪನಿ ಸರ್ಕಾರ ವಿಕ್ಟೋರಿಯಾ ರಾಣಿಗೆ ಈ ದೇಶವನ್ನು ಹಸ್ತಾಂತರಿಸಿದ ಕಾಲ. ಅನಂತರದ್ದು ನಾಲ್ಕು ತಲೆಮಾರುಗಳು ಸಂದ ಬಳಿಕ ಬರುವ ಸ್ವಾತಂತ್ರ್ಯ ದಿನ, ಮೂರನೆಯ ಅಂಕ, ನಿನ್ನೆ - ಮೊನ್ನೆ ಅಥವಾ ಇವತ್ತು. ನನ್ನ ಜಿಲ್ಲೆಯ ಕಾಲ್ಪನಿಕ ಊರೊಂದನ್ನು ಆರಿಸಿ ಅಲ್ಲಿ ಬಾಳಿದ ಕೆಲವು ವ್ಯಕ್ತಿಗಳಿಂದ ಅಂದಂದಿನ ಸಮೂಹ ಜೀವನದ ಚಿತ್ರ ಕೊಡುವ ಪ್ರಯತ್ನ ಮಾಡಿದ್ದೇನೆ. ಆರ್ಥಿಕ ಅವನತಿಯಿಂದ ಉನ್ನತಿಗೆ ಹಾಯುತ್ತಿರುವ ವಾತಾವರಣದಲ್ಲಿ ನೈತಿಕ ಉನ್ನತಿಯಿಂದ ಅವನತಿಗೆ ಜನರು ಇಳಿಯುತ್ತಿರುವ ಕಥೆ" ಎಂದು ಹೇಳಿದ್ದಾರೆ(ಶಿವರಾಮ ಕಾರಂತ.ಕೆ.; ೧೯೭೭; ಪು. ಮುನ್ನುಡಿ).

'ಅದೇ ಊರು, ಅದೇ ಮರ' ಇದು ಮೂರು ತಲೆಮಾರುಗಳನ್ನು ಒಳಗೊಂಡ ಕಾದಂಬರಿ. ಮೊದಲ ತಲೆಮಾರಿನ ಜನರು ಹೆಚ್ಚು ದಾನ, ಧರ್ಮ, ದೇವರು ಮತ್ತು ನಂಬಿಕೆಗಳ ನೆರಳಿನಲ್ಲಿ ಬದುಕನ್ನು ನಡೆಸುವವರಾಗಿದ್ದಾರೆ. ಎಲ್ಲಾ ಊರುಗಳಲ್ಲಿರುವಂತೆ ವಿವಿಧ ಜಾತಿಯ, ವಿವಿಧ ಸ್ವಭಾವದ, ವಿವಿಧ ದೇವರುಗಳನ್ನು ನಂಬಿದ ಜನರು ವಟಪುರದಲ್ಲಿ ಇದ್ದರು. ಊರಿಗೆ ಬೆಂಕಿ ಬಿದ್ದಾಗ ಎಲ್ಲರೂ ಒಟ್ಟಾಗಿ ಸೇರಿ ನಂದಿಸುವರು. ಮನೆಗಳನ್ನು ಕಳೆದುಕೊಂಡವರಿಗೆ ಸಾಹುಕಾರ ಮರ್ತಪ್ಪಯ್ಯ ಮನೆ ಕಟ್ಟಿಕೊಳ್ಳುವವರೆಗೆ ಆಹಾರ ಧಾನ್ಯಗಳನ್ನು ಒದಗಿಸುವನು. ಮರ್ತಪ್ಪಯ್ಯನ ಶತ್ರುವಾಗಿದ್ದ ಮಂಗೇಶ ಶಾನುಭೋಗರು ಮನೆ ಕಳೆದುಕೊಂಡವರಿಗೆಲ್ಲ ಉಚಿತವಾಗಿ ಬಟ್ಟೆಯನ್ನು ಕೊಡುತ್ತೇನೆ ಎಂದು ಆಶ್ವಾಸನೆಯನ್ನು ನೀಡುತ್ತಾನೆ. ತಿಮ್ಮಪ್ಪನಂತಹ ಜನರ ಹಿತಾಸಕ್ತಿಯಿಂದ ಬ್ರಾಹ್ಮಣರು ವೆಂಕಟರಮಣ ದೇವಾಲಯವನ್ನು ನಿರ್ಮಿಸುತ್ತಾರೆ. ಈ ದೇವಾಲಯಕ್ಕೆ ಹೆಚ್ಚಿನ ಖರ್ಚು ವೆಚ್ಚವನ್ನು ಮಂಗೇಶಯ್ಯ ಮತ್ತು ಮರ್ತಪ್ಪಯ್ಯನವರು ಭರಿಸುತ್ತಾರೆ. ವಟಪುರಕ್ಕೆ ಬರಗಾಲ ಬಂದಾಗಲೂ ಜಾತಿ-ಮತಗಳೆನ್ನದೆ ಆ ಊರಿನ ರಾಮಭಟ್ಟರು ಮತ್ತು ವೈಕುಂಠ ಪ್ರಭುಗಳು ಸಹಾಯ ಮಾಡುತ್ತಾರೆ.

ಅದೇ ರೀತಿಯಲ್ಲಿ ವಟಪುರದ ಮುಂದಿನ ತಲೆಮಾರಿನ ಕಥೆ ಮತ್ತೊಂದು ರೀತಿಯಾದದ್ದು. ಈಗ ಶಾಮಭಟ್ಟರಾಗಲೀ, ಅವರ ಸಮಕಾಲೀನರಾಗಲೀ, ಅಲ್ಲಿ ಯಾರೂ ಉಳಿದಿರುವುದಿಲ್ಲ. ಅದೇ ರೀತಿ ವಟಪುರದ ಹಿಂದಿನ ತಲೆಮಾರಿನ ಜನರ ಬದುಕಿಗೆ ಆಶ್ರಯ ತಾಣವಾಗಿದ್ದ ವಟವೃಕ್ಷದ ಕಥೆಯು ಮೊದಲಿಗಿಂತ ಬೇರೆಯೇ ಆಗುತ್ತದೆ. ಮನುಷ್ಯನ ಆಸೆ ಆಕಾಂಕ್ಷೆಗಳಿಗೆ ಮಿತಿಯಿಲ್ಲದಂತಾಗುತ್ತದೆ.

ಸ್ವಾತಂತ್ರ್ಯ ಉದಯದ ಆರಂಭ ಕಾಲಕ್ಕೆ ವಟಪುರದ ಸ್ವರೂಪ ಬಹಳಷ್ಟರಮಟ್ಟಿಗೆ ಬದಲಿಸುತ್ತದೆ. ವಿದ್ಯಾಭ್ಯಾಸವನ್ನು ಪಡೆದು ಹೆಚ್ಚು ಪ್ರಜ್ಞಾವಂತರಾಗುತ್ತಾರೆ. ಆರ್ಥಿಕ ಸ್ಥಿತಿ ಸುಧಾರಿಸುತ್ತದೆ.

ವ್ಯಾಪಾರ, ವಾಣಿಜ್ಯ ವ್ಯವಹಾರಗಳು ಕೂಡ ಮೊದಲಿಗಿಂತ ಸುಧಾರಿಸುತ್ತದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗಿದ್ದ ಗಾಂಧಿ ಗೋಪಾಲನ ವಟಪುರದ ಜನರ ಜೀವನದಲ್ಲಿ ಉಂಟಾಗಿದ್ದ ಈ ಬದಲಾವಣೆಗಳಿಗೆ ಸಾಕ್ಷಿಯಾಗುತ್ತಾನೆ.

"ಗೋಪಾಲಯ್ಯನವರು ಗಾಂಧಿಯವರ ಪ್ರಭಾವ ಮತ್ತು ಪ್ರೇರಣೆಗಳಿಗೆ ಎಷ್ಟರಮಟ್ಟಿಗೆ ಒಳಗಾಗಿದ್ದಾರೆಂದರೆ ಅವರು ಸ್ವಾತಂತ್ರ್ಯ ಬರುವ ಮೊದಲು, ಬಂದ ಮೇಲೆಯೂ ಗಾಂಧೀಜಿಯ ಮೇಲಿನ ತಮ್ಮ ಭಕ್ತಿಯನ್ನು ಕಳೆದುಕೊಂಡವರಲ್ಲ. ಗಾಂಧೀಜಿಯ ಪ್ರೇರಣೆ ಗೋಪಾಲಯ್ಯನ ಜೀವನವನ್ನೇ ಬದಲಿಸಿತು. ಗಾಂಧೀಜಿ ಉಪವಾಸ ಮಾಡಿದಾಗಲೆಲ್ಲ ಅವರೂ ಉಪವಾಸ ಮಾಡುತ್ತಿದ್ದರು. ಗಾಂಧೀಜಿ ಉಪ್ಪು, ಹುಳಿ ಬಿಟ್ಟರೆ ಇವರೂ ಬಿಟ್ಟರು. ಪುಣ್ಯಕ್ಕೆ ಅವರ ಊರುಗಳಲ್ಲಿ ಆಡುಗಳಿಲ್ಲದ್ದರಿಂದ ಇನ್ನೂ ಗೋಪಾಲಯ್ಯ ಎಮ್ಮೆಯ ಹಾಲನ್ನೇ ಕುಡಿಯುತ್ತಿದ್ದಾರೆ....."(ಅದೇ; ಪು. ೧೯೯-೨೦೦). ಹೀಗೆ ಗಾಂಧೀ ಗೋಪಾಲಯ್ಯನವರು ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯದ ಉದಯ ಮತ್ತು ಸ್ವಾತಂತ್ರ್ಯೋತ್ತರದ ಸನ್ನಿವೇಶವನ್ನು ವಿಭಿನ್ನ ನೆಲೆಗಳಲ್ಲಿ ಕಂಡವರಾಗಿ ಗಾಂಧೀಜಿಯನ್ನು ಪ್ರತಿನಿಧಿಸುವವರಂತೆ ಕಾಣಿಸಿಕೊಳ್ಳುತ್ತಾರೆ.

ಹೀಗೆ ಈ ಕಾದಂಬರಿ ಮುಖ್ಯವಾಗಿ ಗಾಂಧಿಯುಗದಲ್ಲಿ ವಟಪುರದ ಜನತೆ ಪ್ರಾಮಾಣಿಕತೆ, ಮಾನವೀಯತೆ, ನಿಸ್ವಾರ್ಥ ಇತ್ಯಾದಿ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವ ಚಿತ್ರಣವಿದೆ. ಗಾಂಧಿಯುಗದ ನಂತರದಲ್ಲಿನ ಜನತೆ ಮನುಷ್ಯ ಸಂಬಂಧಗಳ ವಿಘಟನೆ, ಲಂಚಗುಳಿತನ, ಭ್ರಷ್ಟಾಚಾರ, ಸ್ವಾರ್ಥಪರತೆ ಇತ್ಯಾದಿಗಳನ್ನು ಚಿತ್ರಿಸುತ್ತದೆ. ಹಾಗಾಗಿ ಗಾಂಧೀಜಿ ಒಬ್ಬ ಮಾನವೀಯತೆಯ ಸಾಕಾರಮೂರ್ತಿಯಾಗಿ ಹಾಗೂ ಅವರ ತತ್ವಗಳು ಕ್ರಮಬದ್ಧ(ನೈತಿಕ) ಜೀವನದ ದಾರಿದೀಪಗಳಾಗಿವೆ ಎಂದು ಪ್ರತಿನಿಧಿಸಿದ್ದಾರೆ.

'ನಾವು ಕಟ್ಟಿದ ಸ್ವರ್ಗ' ಕಾದಂಬರಿಯನ್ನು ಕಾರಂತರು ೧೯೮೦ರಲ್ಲಿ ರಚಿಸಿದ್ದಾರೆ. ಕಾರಂತರು ತಮ್ಮ ರಾಜಕೀಯ ವಿಚಾರಗಳನ್ನು ಪ್ರಧಾನವಾಗಿಟ್ಟುಕೊಂಡು ರಚಿಸಿದ್ದಾರೆಂದು ಈ ಕಾದಂಬರಿಯ ಮುನ್ನುಡಿಯ ಮಾತುಗಳನ್ನು ಆಧರಿಸಿ ಹೇಳಬಹುದು.

ಶಿವರಾಮ ಕಾರಂತರು ತಮ್ಮ ಕೃತಿಯ ಮುನ್ನುಡಿಯಲ್ಲಿ ಕಾದಂಬರಿಯ ವಸ್ತುವನ್ನು ಕುರಿತು ಹೀಗೆ ಹೇಳುವರು. "ಸಾಹಿತಿಯಾದ ನಾನು, ದೇಶದ ಯಾವತ್ತೂ ಜೀವನವನ್ನು ಕಲಕುತ್ತಿರುವ ನೀಚ ರಾಜಕೀಯವನ್ನು ಕಂಡು ಕೊರಗುತ್ತಿದ್ದೆ. ನನ್ನ ವ್ಯಕ್ತಿಗತ ಜೀವನದ ಶಾಂತಿ, ಸಮಾಧಾನಗಳನ್ನು ಈ ಚಿಂತೆ ನಿತ್ಯವೂ ಕೆಡಿಸುತ್ತಾ ಬಂದಿದೆ. ಮುಂದಣ ತಿಂಗಳುಗಳಲ್ಲಿ ದೇಶ ನಿಷ್ಠೆಯನ್ನು ಸ್ವಾರ್ಥಕ್ಕೆ ಬಲಿ ಕೊಡುವ ಜನಗಳಿಂದ ಎಂಥ ವಿಷಮಯ ವಾತಾವರಣ ಎದುರಾಗಿದೆ ಎಂಬ ನೋವಿಗೆ ಸಾಕ್ಷಿಯಾಗಿದ್ದೇನೆ. ಅಂಥ ಮಾನಸಿಕ ಒತ್ತಡ ನನ್ನನ್ನು ಕಾಡಿದ್ದರಿಂದ ಈ ಹೊರೆಯನ್ನು ಇಳಿಸಲು ಈ ವ್ಯಂಗ್ಯ ಕಾದಂಬರಿಯನ್ನು ಬರೆದಿದ್ದೇನೆ..... ಅದನ್ನು ಬರೆದು ಮುಗಿಸಿದ ಎರಡು ತಿಂಗಳ ನಂತರ ದೇಶದಲ್ಲಿ ನಡೆದ ಘಟನೆಗಳನ್ನು ನೋಡಿದಾಗ, ನನ್ನೀ ಕಾದಂಬರಿಯ ವ್ಯಂಗ್ಯ ಏನೇನು ಸಾಲದು ಎಂದು ತಿಳಿಯುವಂತಾಯಿತು.

ಆದರೂ ನಮ್ಮ ರಾಜಕೀಯಕ್ಕೆ ಅಂಟಿದ ರೋಗ ಯಾವುದು? ಅದನ್ನು ಬೆಳೆಯಿಸಲು ಸ್ವಾರ್ಥಿಗಳಾದ ಪ್ರಜೆಗಳು ಎಷ್ಟೊಂದು ಕಾರಣರು ಎಂಬುದನ್ನು ಈ ಕಾದಂಬರಿ ಬಿಂಬೀಸಿತು"(ಶಿವರಾಮ ಕಾರಂತ.ಕೆ.; ೨೦೦೬; ಪು. ಮುನ್ನುಡಿ) ಎಂದು ಹೇಳಿದ್ದಾರೆ.

ಕಾರಂತರು ನಿರೂಪಕರಂತೆ, ಪತ್ರಕರ್ತ ರಂಗಣ್ಣನ ಪಾತ್ರದಲ್ಲಿ ಕಂಡುಬರುತ್ತಾರೆ. ಈ ಕಾದಂಬರಿ ಸ್ವಾತಂತ್ರ್ಯಾನಂತರದ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆ ಸಮಾಜ ಮತ್ತು ರಾಷ್ಟ್ರವನ್ನು ಹೇಗೆ ಪರಿವರ್ತಿಸಿದೆ ಎಂಬುದನ್ನು ಕುರಿತು ಹೇಳುವ ಕಾದಂಬರಿ. ಇಲ್ಲಿನ ಸಾಮಾಜಿಕ, ರಾಜಕೀಯ ವಿಚಾರಗಳನ್ನು ಹಲವಾರು ದೃಷ್ಟಿಕೋನಗಳಿಂದ ರಂಗಣ್ಣನ ಪಾತ್ರದ ಮೂಲಕ ಚಿತ್ರಿಸಲಾಗಿದೆ.

ಮುಂಬಯಿಯಿಂದ ಸ್ವಾತಂತ್ರ್ಯದ ಉತ್ಸವಕ್ಕೆಂದು ಚಂಪಲಾಪುರಕ್ಕೆ ಬಂದಿರುವ ರಂಗಣ್ಣನಿಗೆ, ಸ್ನೇಹಿತ ಶ್ಯಾಮಣ್ಣ ಅದರ ಸಂದರ್ಭವನ್ನು ವಿವರಿಸುವನು. ತಮ್ಮ ಜನ್ಮಭೂಮಿಯಲ್ಲಿ ಸ್ವಾತಂತ್ರ್ಯ ಉತ್ಸವವನ್ನು ನಡೆಯಿಸಲು ಬಂದ ಅಂದಿನ ಮಹಾಸಭೆಯ ಅಧ್ಯಕ್ಷರಾಗಿ ಕುಳಿತವರನ್ನು ತೋರಿಸಿ "ಅವರೇ ದೇವೇಂದ್ರಪ್ಪ! ಎಂದು ತಿಳಿಸಿದೆ. ಅವರಲ್ಲವಾದರೆ ಬೆಣದಲ್ಲಿ ಇಂತಹ ಸಭೆ ನಡೆಯುತ್ತಿರಲಿಲ್ಲ. ಸ್ವಾತಂತ್ರ್ಯವನ್ನು ತಂದುಕೊಟ್ಟವರು ಗಾಂಧೀಜಿ. ಈ ಮಾತನ್ನು ದೇವೇಂದ್ರಪ್ಪನವರು ಆ ದಿನದ ಸಭೆಯಲ್ಲಿ ಸಾರಿದರು. ಮುಂದೆ ಅವರು ಅಂತಹ ಮಾತನ್ನು ಇನ್ನಿತರ ಸಭೆಗಳಲ್ಲಿ ಹೇಳಹೋಗಲಿಲ್ಲ. ಮುಂದೆ ನಮ್ಮ ಪುಡಾರಿಗಳೆಂಬುವರು ಅಪಾರ ತ್ಯಾಗ ಮಾಡಿ, ಅದ್ಭುತ ಕಷ್ಟ ಸಹಿಸಿ, ಹುತಾತ್ಮರ ರಕ್ತದಿಂದ ನೆಲವನ್ನು ತೊಯ್ಯಿಸಿ ಸ್ವಂತ ಬೆನ್ನುಗಳನ್ನು ಪೊಲೀಸರ ಲಾಠಿಗಳಿಗೆ ಒಪ್ಪಿಸಿ, ಕಾರಾಗೃಹವನ್ನು ಸೇರಿ ಕಂಗೆಟ್ಟು ಬ್ರಿಟೀಷರನ್ನು ಬಗ್ಗು ಬಡಿದು, ಸ್ವಾತಂತ್ರ್ಯದೇವಿಯನ್ನು ಎಳೆದು ತಂದ ವೀರಭಟರು ನಾವು ಎಂದ ಹಲವರು ಅಪ್ಪಣೆ ಕೊಡಿಸಿದ ಭಾಷಣಗಳನ್ನು ನಾನು ಓದಿದ್ದೆ. ಯಾಕೆ ಈ ಮಾತನ್ನು ಹೇಳುತ್ತೇನೆಂದರೆ ಗಾಂಧೀಜಿ ಅಹಿಂಸಾವಾದಿಗಳು. ಅವರಿಗೆ ನಮ್ಮೂರಿನ ಬೆಣ, ಅಸಂಖ್ಯ ಹುಂಜಗಳ ನೆತ್ತರಿನಿಂದ ತೊಯ್ದದ್ದು ಎಂದು ತಿಳಿದಿದ್ದರೆ, ಆ ಸಭೆಯನ್ನು ನಡೆಯಿಸಲು ಅವರು ಬೇರೆ ಸ್ಥಳವನ್ನು ಸೂಚಿಸುತ್ತಿದ್ದರೋ ಏನೋ!"(ಅದೇ; ಪು. ೩೨-೩೩) ಎಂದು ಸ್ವಾತಂತ್ರ್ಯಪೂರ್ವದಲ್ಲಿ ಸ್ವಾತಂತ್ರ್ಯ ಚಳುವಳಿ ಮತ್ತು ಹೋರಾಟಗಳಲ್ಲಿ ಭಾಗವಹಿಸಿದ್ದ ದೇವೇಂದ್ರಪ್ಪ ಸಭೆಯಲ್ಲಿ ಗಾಂಧೀಜಿಯವರ ಪ್ರಮುಖ ಪಾತ್ರವನ್ನು ಕುರಿತಂತೆ ಹೇಳುವರು. ಸ್ವಾತಂತ್ರ್ಯಪೂರ್ವದ ಜನತೆ ಹೆಚ್ಚಿನ ಪ್ರಮಾಣದಲ್ಲಿ ಅಹಿಂಸಾ ಮಾರ್ಗವನ್ನು ತುಳಿದರೆ, ಸ್ವಾತಂತ್ರ್ಯ ನಂತರದಲ್ಲಿನ ಜನತೆ ಅದಕ್ಕೆ ವಿರುದ್ಧವಾಗಿ ಹಿಂಸಾ ಮಾರ್ಗ, ವಾಮಮಾರ್ಗಗಳನ್ನು ಹಿಡಿಯುವುದರ ಬಗ್ಗೆ ಗಾಂಧಿವಾದಿಯಾದ ದೇವೇಂದ್ರಪ್ಪ ತನ್ನ ದುಃಖವನ್ನು ವ್ಯಕ್ತಪಡಿಸುತ್ತಾನೆ.

ದೇವೇಂದ್ರಪ್ಪನನ್ನು ಕುರಿತು ಪತ್ರಕರ್ತ ರಂಗಣ್ಣ "ದೇಶದ ಐವತ್ತು ಕೋಟಿ ಜನರ ಉದ್ಧಾರ ನಿಮ್ಮ ಪಕ್ಷದವರಿಂದ ಸಾಧ್ಯವೇ ಎಂದು ಪ್ರಶ್ನಿಸುವನು. ಆಗ ದೇವೇಂದ್ರಪ್ಪ ಆ ಸಂದರ್ಭದಲ್ಲಿ ಒಂದು ದೃಷ್ಟಿಯಿಂದ ಆ ಮಾತನ್ನು ಹೇಳಿದ್ದು ನಿಜ. ಹಾಗೆ ಅದನ್ನು ಗಾಂಧೀಜಿಯವರಿಂದ ಕಲಿತಂತಹದು. ರಾಮರಾಜ್ಯವನ್ನು ಸ್ಥಾಪಿಸಬೇಕೆಂಬ ಅವರ ಧ್ಯೇಯವೇ

ನನ್ನದು ಅನ್ನಿಸಿತ್ತು. ಆದರೆ ಈಗ ಅಂದು ಹೇಳಿದ ಮಾತುಗಳು ವಾಸ್ತವಿಕತೆಗಿಂತ ಹೆಚ್ಚಾಗಿ ಉತ್ಪ್ರೇಕ್ಷೆಯಿಂದ ಕೂಡಿದಂತವುಗಳು ಎಂದು ಪ್ರತಿಯೊಬ್ಬರಿಗೂ ಅರ್ಥವಾಗುತ್ತದೆ. ರಜತೋತ್ಸವ ಕಾರ್ಯಕ್ರಮದಲ್ಲಿ ದೇವೇಂದ್ರಪ್ಪನವರು ಸಭೆಯನ್ನು ಕುರಿತು ಹೇಳುವ ಮಾತುಗಳು ಸ್ವಾತಂತ್ರ್ಯ ನಂತರದ ನಿರಾಸೆಯನ್ನು ಬಿಂಬಿಸುತ್ತದೆ. ಇನ್ನೂ ಹೆಚ್ಚು ಮಾತುಗಳಿಂದ ನಿಮ್ಮನ್ನು ದಣಿಸುವ ಇಷ್ಟ ನನಗಿಲ್ಲ. ಗಾಂಧೀಜಿಯವರು ಭಾರತ ದೇಶದಲ್ಲಿ ರಾಮರಾಜ್ಯವನ್ನು ಕಟ್ಟಬೇಕೆಂಬ ಹಂಬಲವನ್ನು ತೊಟ್ಟದ್ದುಂಟು. ಈಗ ಎಣಿಕೆ ಹಾಕುವಾಗ ಅದು ನನ್ನ ಕಾಲಕ್ಕೆ ಮಾತ್ರವಲ್ಲ. ನನ್ನ ಮೊಮ್ಮಕ್ಕಳ ಕಾಲಕ್ಕೂ ಆ ರಾಮರಾಜ್ಯ ಎಂಬುದು ಬರಲಾರದು. ಅದಕ್ಕೆ ಮುಖ್ಯ ಕಾರಣವೆಂದರೆ ನಾನು ಮತ್ತು ನೀವು"(ಅದೇ; ಪು. ೧೯೩-೧೯೫) ಎಂದು ದೇವೇಂದ್ರಪ್ಪ ಗಾಂಧೀಜಿಯ ಕನಸುಗಳು ಕನಸುಗಳಾಗಿಯೇ ಉಳಿಯುವುದನ್ನು ಅಥವಾ ಉಳಿಯುತ್ತಿರುವುದನ್ನು ವ್ಯಕ್ತಪಡಿಸಿದ್ದಾನೆ.

ಇಲ್ಲಿ ಗಾಂಧೀಜಿಯವರ ವ್ಯಕ್ತಿತ್ವ ಹಾಗೂ ಅವರ ಆದರ್ಶಗಳು ಯಾರಿಗೂ ಬೇಕಾಗಿಲ್ಲ. ಆ ಮಹಾತ್ಮನ ಹೆಸರಿನ ಕವಚ ಬೇಕಾಗಿದೆ. ಅವರ ಆದರ್ಶಗಳ ಕವಚ ಬೇಕಾಗಿದೆ. ಅವುಗಳನ್ನು ಪಾಲಿಸುವುದಾಗಲಿ ಮತ್ತು ಅನುಷ್ಠಾನಗೊಳಿಸುವುದಾಗಲಿ ಬೇಕಾಗಿಲ್ಲ ಎಂಬುದನ್ನು ಈ ಕಾದಂಬರಿ ವಿವರಿಸಿದೆ.

'ಮಗಳ ಮದುವೆ' ಇದೊಂದು ಆನಂದಕಂದ ಅವರ ಸಾಮಾಜಿಕ ಕಾದಂಬರಿ. ೧೯೩೦ರಲ್ಲಿನ ಭಾರತದ ರಾಜಕೀಯ ಚಳುವಳಿಯ ವಾತಾವರಣವನ್ನು ಹಿನ್ನೆಲೆಯಾಗಿಟ್ಟುಕೊಂಡು ರಚಿಸಲಾಗಿದೆ. ಉತ್ತರ ಕರ್ನಾಟಕದ ಅಂದಿನ ಜನಜೀವನದ ಚಿತ್ರದ ವಿವಿಧ ಮಾದರಿಗಳನ್ನು ಇದರಲ್ಲಿ ನಿರೂಪಿಸಿದ್ದಾರೆ. ಈ ಕಾದಂಬರಿಯ ಕಥಾವಸ್ತುವಿನ ಕಾಲ ಪರಿಮಿತಿಯ ತಂತ್ರವು ೨೪-೨೫ ದಿನಗಳಿಗಿಂತ ಹೆಚ್ಚಾಗಿ ಇಲ್ಲ. ಗಾಂಧೀಜಿಯವರನ್ನು 'ಮಗಳ ಮದುವೆ' ಕಾದಂಬರಿಯ ಮುಖ್ಯ ಭೂಮಿಕೆಯಾಗಿ ಚಿತ್ರಿಸಿಲ್ಲ. ೧೯೩೦ರ ಭಾರತದ ರಾಜಕೀಯ ಕಾಲದ ವಸ್ತುವನ್ನು ಹೊಂದಿರುವುದರಿಂದ ಅಲ್ಲಲ್ಲಿ ಗಾಂಧೀಜಿಯನ್ನು ತರಲಾಗಿದೆ.

ರಂಗಣ್ಣ ಸ್ವಭಾವತಃ ಸೌಮ್ಯವಾದಿ. ಈತನು ಅಪ್ಪಟ ಮಹಾತ್ಮ ಗಾಂಧೀಜಿಯವರ ನಿಃಸೀಮ ಭಕ್ತ. ಗಾಂಧೀಜಿ ಸಂಪಾದಿಸಿದ 'ಯಂಗ್ ಇಂಡಿಯಾ' ಪತ್ರಿಕೆಯನ್ನು ವಾರ ವಾರವೂ ಶ್ರದ್ಧೆಯಿಂದ ಓದುವನು. "ಗಾಂಧೀಜಿಯವರು ಬರೆದ ಗ್ರಂಥಗಳನ್ನೆಲ್ಲ ಆತನ ಅಭ್ಯಾಸದ ಟೇಬಲ್ಲಿನ ಮೇಲೆ ನೋಡಬಹುದಾಗಿದ್ದಿತು. ಅದೇ ಟೇಬಲಿನ ಮೇಲೆ ಕನ್ನಡಿಯ ಕಟ್ಟಿನಲ್ಲಿ ಹಾಕಿದ ಮಹಾತ್ಮ ಗಾಂಧೀಜಿಯವರ ಛಾಯಾಚಿತ್ರವೊಂದಿದ್ದು, ರಂಗಣ್ಣ ಅದಕ್ಕೆ ನಿತ್ಯವೂ ಹೂಗಳನ್ನೇರಿಸಿ ಪೂಜಿಸುತ್ತಿದ್ದನು. ಆತನ ಗಾಂಧಿ ಸಾಹಿತ್ಯವಾಚನದ ಹಂಬಲವೇ, ಪ್ರೀವಿಯೆಸ್ ಪರೀಕ್ಷೆಯಲ್ಲಿ ಮೊದಲನೆಯ ವರ್ಷ ಅವನನ್ನು ನಪಾಸ್ ಮಾಡಿತೆಂದು ಜನ ಮಾತಾಡುತ್ತಿದ್ದರು" (ಆನಂದಕಂದ.; ೨೦೦೫; ಪು. ೪೭). ಹೀಗೆ ಗಾಂಧೀತತ್ವ ಜ್ಞಾನದಿಂದ ಸಂಸ್ಕಾರಗೊಂಡ ರಂಗಣ್ಣನಲ್ಲಿ ಯಾವ ಸ್ಪರ್ಧೆ - ಮತ್ಸರಗಳನ್ನೂ ಹುಟ್ಟಿಸುವುದಿಲ್ಲ.

"ಮಹಾತ್ಮ ಗಾಂಧೀಜಿಯವರು ಉಪ್ಪಿನ ಕಾಯಿದೆಯನ್ನು ಮುರಿಯುವ ಸತ್ಯಾಗ್ರಹವನ್ನು ಘೋಷಿಸಿ, ದಂಡಿಯಲ್ಲಿ ಬಂಧಿತರಾಗಿ ಕೆಲವೇ ದಿನಗಳಾಗಿವೆ; ಹಿಂದೆ ನಡೆಯಿಸಿದ ಉಗ್ರವಾದ ಕಾನೂನು ಭಂಗದ ಚಳುವಳಿಯನ್ನು ಒಮ್ಮೆಲೇ ಉಪಸಂಹರಿಸಿಕೊಂಡು, ಇದೀಗ ಉಪ್ಪನ್ನು ಮನೆ - ಮನೆಯಲ್ಲಿ ಮಾಡಿ ಮಾರಾಟ ಮಾಡುವ ಸಾಂಕೇತಿಕ ಕಾನೂನು ಭಂಗ ಚಳುವಳಿಯನ್ನು ಪ್ರಾರಂಭಿಸುದುದ್ದಕ್ಕಾಗಿ, ಗಾಂಧಿಯವರನ್ನು ಅನೇಕರು ಬೀಳುವಗಳೆಯುತ್ತಲಿದ್ದಾರೆ. ಈ ಚಳವಳಿಯ ಚೇಷ್ಟೆಯೆಬ್ಬಿಸಿ ನಗೆಯಾಟವಾಡುವ ಹಿರಿಯರಿಗೂ ಕೊರತೆಯಿರಲಿಲ್ಲ. ಗಾಂಧಿಯವರ ಏಕನಿಷ್ಠ ಅನುಯಾಯಿಗಳನೇಕರಿಗೂ ಈ ಸಾಂಕೇತಿಕ ಕಾನೂನು ಭಂಗದ ಚಳುವಳಿಯ ಅರ್ಥ ಸರಿಯಾಗಿ ಆಗಿರಲಿಲ್ಲ. ಆದರೂ ಗಾಂಧೀಜಿಯವರ ವಿಷಯದಲ್ಲಿರುವ ಅಚಲ ಶ್ರದ್ಧೆ ಮೂಲಕ, ಅವರ ಮಾತಿನಂತೆ ನಡೆದುಕೊಳ್ಳಲು ಸಿದ್ಧರಾಗಿದ್ದರು. ಸರಕಾರವು ಕೂಡ ಈ ಚಳುವಳಿಯ ಅರ್ಥವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳದೆ, ಅದರ ಕಡೆಗೆ ಔದಾಸೀನ್ಯದಿಂದಲೇ ನೋಡುತ್ತಿದ್ದಿತಾದರೂ ಗಾಂಧೀಜಿಯವರ ರಾಜಕೌರ್ಯ ಚಮತ್ಕೃತಿಯ ಅನುಭವ ಅದಕ್ಕಿದ್ದುದರಿಂದ, ದೇಶದ ಎಲ್ಲ ಕಡೆಯ ಆಡಳಿತ ಅಧಿಕಾರಗಳಿಗೂ ಪೂರ್ವ ಜಾಗೃತಿಯ ಗುಪ್ತಸೂಚನೆಗಳನ್ನು ಕಳುಹಿದ್ದಿತು" (ಅದೇ; ಪು. ೪೪). ನಮ್ಮ ಭಾರತೀಯರ ಸ್ವಭಾವವೇ ಮತ್ತೊಬ್ಬರನ್ನು ಆಶ್ರಯಿಸುವುದು. ಅದಕ್ಕಾಗಿ ಗಾಂಧೀಜಿಯ ಮುಂದಾಳುತನ ಬೇಕಾಯಿತು. ಇದನ್ನು ಬ್ರಿಟೀಷರು ಗ್ರಹಿಸಿದ್ದರಿಂದ ಯಾವುದೇ ಚಳುವಳಿಯ ಆರಂಭದಲ್ಲಿ ಗಾಂಧೀಜಿಯನ್ನು ಬಂಧಿಸುತ್ತಿದ್ದರು. ಕೆಲವು ಮಂದಿ ಉಪ್ಪಿನ ಕಾಯಿದೆ ಭಂಗ ಚಳುವಳಿಯಲ್ಲಿ ಭಾಗವಹಿಸಿದರೆ, ಕೆಲವು ಜನ 'ಇದೊಂದು ಹುಚ್ಚು', ಉಪ್ಪಿನ ಕಾಯಿದೆ ಭಂಗ ಮಾಡಿದ ತಕ್ಷಣ 'ಸ್ವರಾಜ್ಯ' ಬರುತ್ತದೆಯೋ? ಎಂಬುದಾಗಿ ಮೂಗು ಮುರಿದು ಗಾಂಧಿ ಮಾತುಗಳನ್ನು ಕೇಳುವವರು ಹುಂಬರು ಎಂಬ ಭಾವನೆ ಉಳ್ಳವರು ಗಾಂಧಿ ಕಾಲದಲ್ಲಿದ್ದರು ಎಂದು ವಿಶದಪಡಿಸಿದ್ದಾರೆ.

ರಂ.ಶ್ರೀ. ಮುಗಳಿ ಅವರು ೧೯೩೪ರಲ್ಲಿ 'ಬಾಳುರಿ' ಕಾದಂಬರಿಯನ್ನು ಪ್ರಕಟಿಸುವುದರ ಮೂಲಕ ಕಾದಂಬರಿ ಕ್ಷೇತ್ರದಲ್ಲಿ ಬಾಳುರಿ, ಕಾರಣ ಪುರುಷ, ಅನ್ನ ಮತ್ತು ಅಗ್ನಿವರ್ಣ ಎಂಬ ನಾಲ್ಕು ಕಾದಂಬರಿಗಳನ್ನು ರಚಿಸಿದ್ದಾರೆ. ೧೯೮೬ರಲ್ಲಿ ಪ್ರಕಟವಾದ ಅಗ್ನಿವರ್ಣ ಕಾದಂಬರಿಯನ್ನು ಬಿಟ್ಟರೆ ಉಳಿದ ಮೂರು ಕಾದಂಬರಿಗಳು ಸ್ವಾತಂತ್ರ್ಯಪೂರ್ವದಲ್ಲಿ ಅಂದರೆ ಗಾಂಧೀಯುಗದ ಪರಿಸರದಲ್ಲಿ ರಚಿತವಾದವುಗಳು. ಸಹಜವಾಗಿ ಅವುಗಳಲ್ಲಿ ಅಂದಿನ ತರುಣ ಪೀಳಿಗೆಯಲ್ಲಿದ್ದ ಭಾವಾವೇಶ, ದೇಶಪ್ರೇಮ, ನಾಡ ಅಭಿಮಾನ, ಬಡತನ, ನಿರುದ್ಯೋಗಗಳಲ್ಲಿ ಸಿಕ್ಕಿ ನರಳುವ ಜನರನ್ನು ಕುರಿತ ಅನುಕಂಪ, ಆತಂಕಗಳು ವ್ಯಕ್ತವಾಗಿವೆ. ಮುಖ್ಯವಾಗಿ ಗಾಂಧಿಯುಗದ ಬಾಳಿಗೊಂದು ಆದರ್ಶ ಬೇಕೆಂಬ ಹಂಬಲವನ್ನು ಈ ಮೂರು ಕಾದಂಬರಿಗಳ ನಾಯಕರೂ ವ್ಯಕ್ತಪಡಿಸುತ್ತಾರೆ.

'ಅನ್ನ' ಕಾದಂಬರಿಯ ನಾಯಕ ಅಮೃತನು ತನ್ನ ಎಂ.ಬಿ.ಬಿ.ಎಸ್. ವಿದ್ಯಾಭ್ಯಾಸವನ್ನು ಗಾಂಧೀಜಿಯ ಪ್ರಭಾವದಿಂದ ತೊರೆದು ಬಂಗಾಳದ ಅಂತೆಯೇ ಬಿಜಾಪುರ ಪ್ರದೇಶದ

ಕಾಲೀಚರಣಪುರಕ್ಕೆ ಬಂದು ಕ್ಷಾಮ ಪೀಡಿತರ ಸೇವೆಯಲ್ಲಿ ತೊಡಗಿಕೊಳ್ಳುತ್ತಾನೆ. ಅಮೃತನು ಗಾಂಧೀಜಿಯ ವಿಚಾರಧಾರೆಗಳನ್ನು ಅನುಸರಿಸುವನು. ಕಾಲೀಚರಣಪುರ ಮಠದ ಸ್ವಾಮೀಜಿ ಸುಧೀರನು ಅವರಿಗೆ ಹೋಗಲು ಮನೆ ಎಲ್ಲಿದೆ ಎಂದು ಹೇಳುತ್ತಾನೆ. ಕ್ಷಾಮಪೀಡಿತ ಜನರಲ್ಲಿ ಗುಣಮುಖರಾದವರನ್ನು ಮನೆಗೆ ಕಳಿಸಿ ಎಂದು ಆದೇಶಿಸುತ್ತಾರೆ. ಅದಕ್ಕೆ ಕೇದಾರನು "ಹೀಗೆಂದು ಕೊನೆಯವರೆಗೆ ಇಲ್ಲಿ ಧ್ವಜ ಊರಿದರೆ ಹೇಗೆ? ಯಾರು ಅವರಿಗೆ ಹೊಟ್ಟೆಗೆ ಹಾಕುವವರು?" ಎಂದು ಹೇಳುತ್ತಾನೆ. ಗಾಂಧಿವಾದಿಯಾದ ಅಮೃತನು ಈ ಸಮಸ್ಯೆಗೆ ಗಾಂಧೀಮಾರ್ಗದಲ್ಲಿ ಪರಿಹಾರವನ್ನು ಹೀಗೆ ಸೂಚಿಸುತ್ತಾನೆ. "ಗುಣ ಹೊಂದಿದ ಗಂಡಸು ಹೆಂಗಸರಿಗೆ ಚರ್ಕಾ(ಚರಕ) ಕೊಟ್ಟು ಅವರ ಕಡೆಯಿಂದ ನೂಲಿಸಿ ನೂತಕಷ್ಟು ಕೂಲಿ ಕೊಡಬೇಕು ಅಥವಾ ಅಷ್ಟು ಆಹಾರವನ್ನು ಅವರಿಗೆ ಕೊಡಬೇಕು".

"ಗಾಂಧಿಯ ಆಶ್ರಮವಾದರೇನು ತಪ್ಪಾಯಿತು? ಅದು ಹಿಂದೂಸ್ಥಾನದ ಒಂದು ಪವಿತ್ರ ಕ್ಷೇತ್ರ. ಚರ್ಕಾದ ಧ್ವನಿಯೆಂದರೆ ನಮ್ಮ ದರಿದ್ರ ದೇಶಕ್ಕೆ ತಾರಕಮಂತ್ರ".

"ಸದ್ಯದ ಯುಗದಲ್ಲಿ ಸಾವಿರಾರು ಜನಗಳಿಗೆ ಉದ್ಯೋಗವೊಂದನ್ನು ಕಲ್ಪಿಸಿಕೊಟ್ಟು ಅವರಿಗೆ ಹೊಟ್ಟೆಗೆ ಹಾಕಿದ್ದು ಚರ್ಕಾ ಅಲ್ಲವೇ ಸ್ವಾವಲಂಬನದ ತತ್ವವನ್ನು, ಸ್ವದೇಶಿಯ ವ್ರತವನ್ನು ಕಲಿಸಿದ್ದು ಚರ್ಕಾ ಅಲ್ಲವೇ? ಖಾದಿಯೆ ಸ್ವರಾಜ್ಯದ ತಳಹದಿಯೆಂದೂ ಚರ್ಕಾದ ಚಕ್ರದಿಂದ ಪರಚಕ್ರವನ್ನು ಸದೆಬಡಿಯಬಹುದೆಂದೂ ಗಾಂಧೀಜಿಯವರು ಹೇಳಿದ್ದು ಸತ್ಯವಾಗಿಲ್ಲವೇ" (ರಾಘವೇಂದ್ರರಾವ್.ಎಚ್.ಎಸ್.(ಸಂ); ೨೦೧೩; ಪು. ೫೬) ಎಂದು ಅಮೃತನ ಪಾತ್ರದ ಮೂಲಕ ಮುಗಳಿಯವರು ಗಾಂಧೀ ಮಾರ್ಗದಲ್ಲಿ ಸಮಸ್ಯೆಗಳು ಪರಿಹಾರ ಹುಡುಕಲು ಪ್ರಯತ್ನಿಸಿದ್ದಾರೆ.

"ಗಾಂಧೀಜಿಯವರು ಪ್ರಾಚೀನ ಭಾರತದ ಸಾರಸಂಗ್ರಹವಾದ ಹೊಸ ಧರ್ಮದ ಸಂಕೇತವಾಗಿದ್ದಾರೆ. ಆದರೆ ಅವರ ಆ ಎತ್ತರ ಇಂದಿನ ಸರ್ವವ್ಯಾಪಿಯಾದ ನಾಗರಿಕತೆಯ ಕೆಳಮಟ್ಟಕ್ಕೆ ಹೆಚ್ಚಾಗುತ್ತದೆ. ಅಂತೇ ಎಷ್ಟೋ ಸಲ ಅವರ ಸತ್ಯ ಅಹಿಂಸೆಯ ಆಭಾಸ ಅವರ ಕಣ್ಮುಂದೆ ನಡೆಯುತ್ತದೆ. ಗಾಂಧೀಜಿಯವರ ಗ್ರಾಮರಾಜ್ಯದ ಸ್ವಾಯತ್ತತೆ ಹೊಸ ಯುಗದಲ್ಲಿ ಶುದ್ಧ ಸ್ವರೂಪದಲ್ಲಿ ಉಳಿಯಬಾರದು"(ಅದೇ; ಪು. ೫೮). ಎಂದು ಅಮೃತನು ವ್ಯಕ್ತಪಡಿಸುತ್ತಾನೆ. ಚರಕ ನಾಲ್ಕು ಜನರಿಗೆ ಹೊಟ್ಟೆಗೆ ಹಾಕಿದೆ, ದೇಶಕ್ಕೆ ಬಟ್ಟೆ ನೀಡಿದೆ. ಆದರೆ ಚರಕ ಯಂತ್ರದ ಕೂಡ ಅದು ಹೇಗೆ ಹೋರಾಡಬಲ್ಲದು? ರಾಕ್ಷಸನೊಂದಿಗೆ ಕೂಸು ಕುಸ್ತಿಯಾಡಿದಂತೆ ಆಗುತ್ತದೆ. ಯಂತ್ರವನ್ನು ಇಲ್ಲವಾಗಿಸುವುದಾಗಲಿ ಅಲ್ಲಗಳೆಯುವುದಾಗಲಿ ಅಸಾಧ್ಯ, ಅಸಮಂಜಸ. ಯಂತ್ರದೊಡನೆ ಲೋಭ, ಧನಸಂಚಯ, ಬಂಡವಾಳಗಾರಿಕೆ, ವರ್ಗಕಲಹ ತಲೆಯೆತ್ತಿದೆ. ಇವಕ್ಕೆ ಸರಿಯಾದ ಉತ್ತರ ಸಾಮ್ಯತೆಯಿಂದ ಕೂಡಿದ ಗಾಂಧಿಮಾರ್ಗವೆಂದು ಮುಗಳಿಯವರು ವ್ಯಕ್ತಪಡಿಸಿದ್ದಾರೆ.

ಶ್ರೀರಂಗರು ನಾಟಕಕಾರರೆಂದೇ ಪ್ರಸಿದ್ಧರಾಗಿದ್ದರೂ ಕಾದಂಬರಿಗಳಲ್ಲಿ ಅವರು ಮಾಡಿದ ಸಾಧನೆ ಸಾಮಾನ್ಯವಾದದ್ದಲ್ಲ. ೧೯೩೩ರಲ್ಲಿ ಪ್ರಕಟವಾದ ವಿಶ್ವಾಮಿತ್ರನ ಸೃಷ್ಟಿಯಿಂದ ಮರಣೋತ್ತರ ಪ್ರಕಟಣೆಯಾದ ಶಾಮರಾಯನ ಸತ್ಯ(೧೯೮೭)ದವರೆಗೆ ಹದಿಮೂರು ಕಾದಂಬರಿಗಳನ್ನು ಬರೆದಿದ್ದಾರೆ.

ಶ್ರೀರಂಗರು ವಿಷ ಚಕ್ರವ್ಯೂಹ(೧೯೬೭)ದಲ್ಲಿ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಸ್ಥಿತಿಯ ಇನ್ನೊಂದು ಆಯಾಮವನ್ನು ಗುರುತಿಸಿದ್ದಾರೆ. "ಗಾಂಧೀ ಕಾಲದವನಾದ ಗಾಂಧೀ ಭಕ್ತನಾದ ತಂದೆ; ಇಂದಿನ ಕಾಲದ ಯುವಕನಾದ ಅವನ ಮಗ. ಪರಸ್ಪರರಿಗೆ ಅರ್ಥವಾಗುವಂತೆ ಇಬ್ಬರ ವಿಚಾರ ಸೃಷ್ಟಿಗಳು ಸಂಘರ್ಷದಲ್ಲಿ ತೊಡಗಿದುದು ಇದರಲ್ಲಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ತಲೆದೋರಿದ ತಲೆಮಾರುಗಳ ಅಂತರವನ್ನು ಈ ಕಾದಂಬರಿ ವಿವರಿಸುತ್ತದೆ. ಅಪ್ಪಟ ಗಾಂಧೀವಾದಿಯಾದ ರಾಯರು ಅವರ ಗೆಳೆಯ ಪಾಂಡಪ್ಪ ಹಳೆಯ ತಲೆಮಾರನ್ನು ಪ್ರತಿನಿಧಿಸಿದರೆ, ರಾಯರ ಮಗ ಕುಮಾರ ಹಾಗೂ ಅವನ ಗೆಳತಿ ವಿಮಲಾ ಹೊಸ ತಲೆಮಾರನ್ನು ಪ್ರತಿನಿಧಿಸುತ್ತಾರೆ. ಆದರೆ ಕಾದಂಬರಿಯಲ್ಲಿ ನಡೆಯುವ ಸಂಘರ್ಷ ಈ ತಲೆಮಾರುಗಳಲ್ಲಿರದೆ ಭ್ರಷ್ಟ ಮುಂದಾಳುಗಳಲ್ಲಿ ಹಾಗೂ ತರುಣರಲ್ಲಿವೆ. ಈ ಪ್ರತಿಭಟನೆ ನಿಸರ್ಗದ ಒಂದು ಕ್ರಮ ಎಂದು ಅದನ್ನು ರಾಯರು ಹಾಗೂ ಪಾಂಡಪ್ಪ ಒಪ್ಪಿಕೊಳ್ಳುತ್ತಾರೆ.

ರಾಯರು ಮತ್ತು ಅವರ ಮಗ ಕುಮಾರನ ನಡುವೆ ಈ ಸಂಭಾಷಣೆ ನಡೆಯುತ್ತದೆ. "ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದ ಅನ್ಯಾಯ ಎನ್ನಿಸಿತು. ಹಾಗೆ ಹೇಳಿದರು; ಹೇಳಿದರೂ ಬ್ರಿಟೀಷರು ಕೇಳಲಿಲ್ಲ, ಅದಕ್ಕೆ ತಮಗೆ ಸರಿ ಎನ್ನಿಸಿದ್ದನ್ನು ಗಾಂಧಿಯವರು ಮಾಡಿದರು;

'ಒಬ್ಬರೇ?'

'ಒಬ್ಬರೇ ಮಾಡಿದರು. ಅವರ ಆ ಧೈರ್ಯ ನೋಡಿ ನಮಗೂ ಅದನ್ನ ಮಾಡಬೇಕು ಅನ್ನಿಸಿತು. ಒಬ್ಬರನ್ನ ನೋಡಿ ಒಬ್ಬರು. ಪ್ರತಿಯೊಬ್ಬರೂ ತಂತಮ್ಮ ಮನಸ್ಸಿನಿಂದ, ಇನ್ನೊಬ್ಬರು ಹೇಳಿದರು ಅಂತ ಅಲ್ಲ. ಪ್ರತಿಭಟಿಸಿ ನಿಂತರು. ಚಳವಳಿ ಸುರುವು ಆಯ್ತು'.

'ಅಂದರೆ ಗಾಂಧಿ ಹೇಳಿದಾಂಗ ನೀವು ಕೇಳಲಿಲ್ಲ?' 'ಅವರು ಇನ್ನೊಬ್ಬರಿಗೆ ಹೇಳುತ್ತಿದ್ದಿಲ್ಲ. ಅಂದ ಮ್ಯಾಲೆ ಕೇಳೋದೆಲ್ಲಿಂದ ಬಂತು?' 'ಮೋಜಪ್ಪ ಇದು! ಇಂಥಾ ಲೀಡರನ ಕೇಳಿಯೇ ಇಲ್ಲ!' 'ಅದಕೇ ನಮ್ಮ ಸುದೈವ ಅಂತೀನಿ, ನಾವು ಕೇಳಿದೆವಿಷ್ಟೆ ಅಲ್ಲ, ನೋಡಿದೆವು. ನಮ್ಮ ಜೀವನ ಸಾರ್ಥಕ ಅನ್ನಿಸಿತು"(ಆಮೂರ.ಜಿ.ಎಸ್.(ಸಂ); ೨೦೦೫; ಪು. ೪೧೩-೪೧೪) ಎಂದು ಗಾಂಧೀಜಿಯವರನ್ನು ಮೊದಲನೆ ತಲೆಮಾರಿನವರು ಸ್ವಾತಂತ್ರ್ಯ ಹೋರಾಟದ ಮಹಾನಾಯಕನಾಗಿ, ಹೋರಾಟದ ಹಿಂದಿರುವ ಅಸದೃಶವಾದ ಶಕ್ತಿಯಾಗಿ ಆರಾಧಿಸುತ್ತಿದ್ದರು.

"ಎಲ್ಲಿ ಸತ್ಯ, ಅಹಿಂಸೆಗಳಿಗಾಗಿ ಜಾಗ ಇದ್ದಿರಲಿಲ್ಲ, ಎಲ್ಲಿ ಮುಚ್ಚು-ಮರೆ-ಮೋಸ-ಕೊಲೆ-ಸುಲಿಗೆ ಇವುಗಳ ಸಂಬಂಧ ಇದ್ದಿತು. ಅಲ್ಲಿ ಗಾಂಧೀಜಿಯವರದು ಸಂಬಂಧ ಇರುತ್ತಿರಲಿಲ್ಲ. ಅಷ್ಟೇ ಅಲ್ಲ, ವಿರೋಧ ಇರ್ತಿತ್ತು"(ಅದೇ; ಪು. ೪೨೨) ಎಂದು ರಾಯರು ತಮ್ಮ ಮಗ ಕುಮಾರನಿಗೆ ಹೇಳುತ್ತಾರೆ. ಸತ್ಯ, ಅಹಿಂಸೆ, ನಿಸ್ವಾರ್ಥತೆಯ ಪ್ರತೀಕವಾಗಿ ಇಲ್ಲಿ ಗಾಂಧೀಜಿಯನ್ನು ಚಿತ್ರಿಸಲಾಗಿದೆ.

'ಪುರುಷಾರ್ಥ' ಕಾದಂಬರಿ ೧೯೨೦ರ ಆಗಸ್ಟ್ ೧ಕ್ಕೆ ಲೋಕಮಾನ್ಯ ತಿಲಕರ ವೀರಮರಣ, ಸ್ಮಶಾನ ಯಾತ್ರೆಯಿಂದ ಮೊದಲಾಗಿ ೧೯೪೭ ಆಗಸ್ಟ್ ೧೫ಕ್ಕೆ ಅದೇ ಮುಂಬೈಯಲ್ಲಿ ನಡೆಯುವ ಸಡಗರದ ವೈಭವದ ಮೆರವಣಿಗೆಯವರೆಗೆ ನಡೆದ ಸ್ವಾತಂತ್ರ್ಯ ಹೋರಾಟದ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ಪ್ರಥಮ ಸ್ವಾತಂತ್ರ್ಯೋತ್ಸವದ ಸಂಭ್ರಮದ ಮೆರವಣಿಗೆಯ ವರ್ಣನೆ, ವರ್ಣನೆಯ ಕೆಲಕೆಲವು ಸನ್ನಿವೇಶಗಳಿಗೆ ಫ್ಲಾಶ್‌ಬ್ಯಾಕ್ ರೂಪದಲ್ಲಿ ಹಿಂದಿನ ಗಾಂಧೀಜಿ ಯುಗದ ಸ್ವಾತಂತ್ರ್ಯ ಹೋರಾಟದ ಸನ್ನಿವೇಶಗಳು ತೆರೆದುಕೊಳ್ಳುತ್ತವೆ. "ಪುರುಷಾರ್ಥ ಕಾದಂಬರಿ ಇತಿಹಾಸ ನಿರ್ಮಿಸಿದ ಗಾಂಧೀಯುಗಕ್ಕೆ ಹೇಳಿದ ಮಂಗಳವಾಗಿದೆ"(ಕುಲಕರ್ಣಿ. ಎನ್ಕೆ; ೧೯೮೯; ಪು. ೧೧) ಎಂದು ಎನ್ಕೆ ಅವರು ಅಭಿಪ್ರಾಯಿಸಿದ್ದಾರೆ. ಗಾಂಧೀಜಿಯ ಪ್ರಭಾವಕ್ಕೆ ಒಳಗಾದ ಶ್ರೀರಂಗರು ಅವರು ಹೇಗೆ ಮಹಾತ್ಮ ಆದರು ಎಂಬುದನ್ನು ತಮ್ಮ 'ಶೋಕಚಕ್ರ' ನಾಟಕದಲ್ಲಿ ಚಿತ್ರಿಸಿದಂತೆ 'ಪುರುಷಾರ್ಥ'ದಲ್ಲಿ ಸಾಂದ್ರವಾದ ಬುದ್ಧಿ-ಭಾವನೆಗಳ ಸಂಗಮದಿಂದ ನಿರೂಪಿಸಿದ್ದಾರೆ.

೧೯೪೭ ಆಗಸ್ಟ್ ೧೫ರಂದು ಮಾಧವನು ತನ್ನ ಉಳಿದ ಮಿತ್ರರಾದ ಶ್ರೀಧರ, ಅನಂತ, ಹಮ್ಮೂ ಇವರೆಲ್ಲರ ಸ್ನೇಹ ಸೂತ್ರದಲ್ಲಿ ತನ್ನ ಹಿಂದಿನ ನೆನಪುಗಳನ್ನು ಸ್ಮರಿಸಿಕೊಳ್ಳುವುದೇ ಈ ಕಾದಂಬರಿಯ ವಸ್ತು. ಇದರ ನಿರೂಪಣೆಯ ತಂತ್ರ ಸ್ವಾತಂತ್ರ್ಯೋತ್ಸವದ ವರ್ಣನೆ, ಆ ವರ್ಣನೆಗೆ ಒಬ್ಬೊಬ್ಬ ಮಿತ್ರನ ದೃಷ್ಟಿಯಲ್ಲಿ ೧೯೨೦ರಿಂದ ೧೯೪೭ರವರೆಗೆ ನಡೆದ ಚಳುವಳಿಯ ಚಿತ್ರ, ನಾಲ್ವರ ದೃಷ್ಟಿಯಲ್ಲಿ ನಾಲ್ಕು ಬಗೆಯ ನಿರೂಪಣೆ ಇದೆ.

ಮಾಧವ - ಹಮ್ಮೂರಲ್ಲಿ ನಡೆಯುವ ಸಂಭಾಷಣೆಯಲ್ಲಿ ಕಾದಂಬರಿಕಾರರು ಗಾಂಧೀಜಿಯನ್ನು ಹೀಗೆ ಚಿತ್ರಿಸಿದ್ದಾರೆ. "ಗಾಂಧೀಜಿ ಅಹಿಂಸೆ ಬೋಧಿಸಿದ್ದು ನಮ್ಮ ಕೈಯಲ್ಲಿ ಶಸ್ತ್ರಗಳಿಲ್ಲ ಎಂಬ ಕಾರಣದಿಂದಾಗಿ", ಆದರೆ ಪೋಲೀಸರ, ಸಾರ್ಜಂಟರ ಕಾರ್ಯ, ಆಳರಸರ ದೌರ್ಜನ್ಯಗಳನ್ನು ಕಣ್ಣಾರೆ ಕಂಡು ಪೆಟ್ಟು ತಿಂದ ಮಾಧವ ಈಗ ಹಿಂಸೆಗಿಳಿಯಬೇಕೆಂದು ಹಮ್ಮೂನ ಮುಂದೆ ಹೇಳಿದಾಗ ಹಮ್ಮೂ ಕ್ಷಣಹೊತ್ತು ನಡುಗಿ ಹೋಗುತ್ತಾನೆ. ಅಂತೆಯೇ ಮಾಧವನಿಗೆ ಅಹಿಂಸೆಯ ಬದಲು ಹಿಂಸೆಯನ್ನೇ ಕೈಕೊಳ್ಳಬೇಕೆಂಬ ಬದಲೀ ವಿಚಾರ ಮೂಡಿದೆ, ಲಾಠಿಯ ಪೆಟ್ಟುತಿಂದ ತಲೆಯಲ್ಲಿ, ಸಾರ್ಜಂಟನ ಮೇಲೆ, ಪೊಲೀಸರ ಮೇಲೆ ಕೈಯೆತ್ತಬೇಕೆಂಬ ಆವೇಶ ಮೂಡಿದೆ. ಭುಜದ ಮೇಲೆ ಪೆಟ್ಟು ತಿಂದ ಕೈಯನ್ನು ಹಮ್ಮೂ ಪ್ರಶ್ನಿಸುತ್ತಾನೆ :

"ಮಾಧೂ, ಸ್ವಯಂ ಸೇವಕರೆ ಬುದ್ಧಿಪೂರ್ವಕ ಹೊಡೆಸಿಕೊಳ್ಳುವಾಗ ಹೊರಗಿನಿಂದ ನಾವೂ, ನೀವೂ ವಿಚಾರ ಮಾಡಿ ಉಪಯೋಗವೇನು"?

"ಆ ಮಾತು ತಪ್ಪು ಹಮ್ಮೂ ನನಗೂ ಮೊದಲು ಹಾಗೇ ಅನ್ನಿಸುತ್ತಿತ್ತು. ನಿಃಶಸ್ತ್ರ ಪ್ರತೀಕಾರ, ಅಹಿಂಸೆ ಇವು ವಿದಾಯಕ ತತ್ವ ಅಂತ ತಿಳಿದಿದ್ದೆ".

"ಅಂದ್ರೆ? ಈಗ ಹೋಯಿತೇನು ನಿನ್ನದು ಗಾಂಧಿಯ ಮೇಲಿನ ವಿಶ್ವಾಸ"?

"ವಿಶ್ವಾಸ ಹೋಗಲಿಲ್ಲ, ಜ್ಞಾನ ಬಂದಿದೆ ಅಂತ ಹೇಳಬಹುದು. ಗಾಂಧಿಯವರು ಈ ಮಾತನ್ನು ಹೇಳಿದ್ದಕ್ಕೆ ಕಾರಣ ಏನು ಅಂಬೋದು ಈಗ ನನಗೆ ತಿಳಿದಿದೆ. ನಮಗೆ ಶಸ್ತ್ರ ಇಲ್ಲ,

ನಾವು ಹೇಡಿಗಳು ಅದಕ್ಕೆ ನಮ್ಮದು ನಿಃಶಸ್ತ್ರ ಪ್ರತಿಕಾರ ಇರಬೇಕು. ಅಹಿಂಸಾ ಇರಬೇಕು ಅಂತ ಯಾಕೆ ಹೇಳಿರಬಾರದು ಗಾಂಧಿಯವರು"(ಶ್ರೀರಂಗ; ೧೯೪೭; ಪು. ೫೦) ಎಂದು ಗಾಂಧಿವಾದಿಯಾದ ಮಾಧವನು ಹೀಗೆ ವ್ಯಕ್ತಪಡಿಸುತ್ತಾನೆ.

ಅನಂತ - ಹಮ್ಮೂರಲ್ಲಿ ನಡೆಯುವ ಸಂಭಾಷಣೆಯಲ್ಲಿ ಗಾಂಧೀಜಿಯ ತತ್ವಗಳನ್ನು ಶ್ರೀರಂಗರು ಹೀಗೆ ಚಿತ್ರಿಸುತ್ತಾರೆ :

"....ಮುಖ್ಯಮಂತ್ರಿ ಯಾರು? ಹಾಂ - ನಿನ್ನ ಗೆಳೆಯ ಮಾಧವ! ಅಹುದಲ್ಲೊ" ತಾನೂ ನಕ್ಕಿದ

"ಮಾಧವ? ಅನಂತಾ, ಮಾಧವನ ಜಾತಿಯ ದೇಶಭಕ್ತರ ಯುಗ ಮುಗಿಯಿತು".

ಅನಂತ ನಗೆಯಿಂದ ಕೇಳಿದ "ಈಗ ಯಾವ ಯುಗ ಪ್ರಾರಂಭವಾಗುವುದು?"

ಹಮ್ಮೂನು ಉಪನ್ಯಾಸದ ಠೀವಿಯಲ್ಲಿಯೇ ಪ್ರಾರಂಭಿಸಿದ. "ಅನಂತಾ, ಸತ್ಯ - ಅಹಿಂಸೆ- ಸ್ವಾರ್ಥ ತ್ಯಾಗ - ರಾಮರಾಜ್ಯ ಇದೆಲ್ಲಾ ಒಂದಾನೊಂದು ಕಾಲದಲ್ಲಿ ತತ್ತ್ವವಾಗಿದ್ದುವು. ಆ ಕಾಲದ ಅವಶೇಷ ಆಗಿದ್ದಾನೆ ಮಾಧೂ, ಈಗ ಯಶಸ್ಸು - ಶಕ್ತಿ - ರಾಜಕೀಯ ಅಧಿಕಾರ- ಬಹುಮತ ರಾಜ್ಯ ಇವುಗಳ ಕಾಲ ಬಂದಿದೆ"(ಅದೇ; ಪು. ೫೫). ಗಾಂಧಿಯುಗದ ವಿಚಾರಧಾರೆಗಳು ಒಂದೊಂದಾಗಿ ಕಳಚಿಕೊಳ್ಳುತ್ತಿವೆ. ಗಾಂಧಿಯುಗದ ಹಳೆಬೇರುಗಳಿಂದ ಸಂಸ್ಕರಣೆಗೊಂಡು ಚಿಗುರಿದ ಎಲೆಗಳು ಆಧುನಿಕ ಗಾಳಿಯ ಕ್ರಿಮಿಕೀಟಗಳ ಬಾಧೆಯಿಂದ ತತ್ತರಿಸುತ್ತಿವೆ ಎಂದು ವಿಶದಿಕರಿಸಲಾಗಿದೆ. ಬರಲಿರುವ ಸ್ವಾತಂತ್ರ್ಯ ಭಾರತವನ್ನು ಒಂದು ರಾಷ್ಟ್ರವನ್ನಾಗಿ ಕಟ್ಟುವ ಅರ್ಹತೆಯನ್ನು ಒಬ್ಬನೂ ಪಡೆದುಕೊಳ್ಳಲಿಲ್ಲ. ನಾಲ್ವರೂ ಭಾವಾವೇಶದಲ್ಲಿ ಬೆಳೆದರಲ್ಲದೆ ಅಗತ್ಯಕ್ಕೆ ಜ್ಞಾನಾವೇಶವನ್ನು ತಳೆಯಲೇ ಇಲ್ಲ, ಗಾಂಧೀ ಚಿಂತನೆಗಳನ್ನು ಮುನ್ನೆಲೆಗೆ ಅಥವಾ ಮುಂದಿನ ಪೀಳಿಗೆಗೆ ಪಸರಿಸಲೇ ಇಲ್ಲವೆಂದು ಕಾದಂಬರಿಕಾರರು ಅಭಿವ್ಯಕ್ತಪಡಿಸಿದ್ದಾರೆ. "ಕುಮಾರ ಸಂಭವ"(೧೯೪೯) ಕಾದಂಬರಿಯಲ್ಲಿ ಶ್ರೀರಂಗರು ಗಾಂಧೀಜಿಯನ್ನು ಅವತಾರ ಪುರುಷನಾಗಿ, ಶಕ್ತಿಯಾಗಿ ಕೊನೆಗೆ ಆ ಶಕ್ತಿ ನಿಶ್ಯಕ್ತಗೊಳ್ಳುವುದಾಗಿ ಚಿತ್ರಿಸಿದ್ದಾರೆ. ವಿಶ್ವಾಮಿತ್ರನ ಸೃಷ್ಟಿಯನ್ನು ಕೂಡ ಗಾಂಧಿಯ ಪ್ರಭಾವದಿಂದಲೇ ರಚಿಸಿದ್ದಾರೆ.

ಕಡೆಂಗೋಡ್ಲು ಶಂಕರ ಭಟ್ಟರು ಗಾಂಧೀಜಿಯ ಪ್ರಭಾವಕ್ಕೊಳಗಾದವರು. ಇವರು ತಮ್ಮ 'ಈ ಪೀಳಿಗೆ' ಕಾದಂಬರಿಯಲ್ಲಿ ಗಾಂಧೀಜಿಯನ್ನು ಭಕ್ತಿ-ನಿಷ್ಠೆಯ ಸ್ವರೂಪವಾಗಿ ಚಿತ್ರಿಸಿದ್ದಾರೆ. ಎರಡನೆಯ ಮಹಾಯುದ್ಧದ ಕಾಲದ ಹಿನ್ನೆಲೆಯಲ್ಲಿ ಆಗಿನ ಎಲ್ಲ ರಾಜಕೀಯ ಆರ್ಥಿಕ ವಿಪ್ಲವಗಳ ನಡುವೆ ಮಧ್ಯಮ ವರ್ಗದ ಸಂಸಾರವೊಂದು ವಿಚಿತ್ರ ಗತಿಗಳಲ್ಲಿ ನಡೆದ ಚಿತ್ರಣ ಈ ಕಾದಂಬರಿಯಲ್ಲಿದೆ. ಕುಟುಂಬದ ಹಿರಿಯ ಮಾಧವ ಪುರಾಣಿಕರು ಬ್ರಿಟಿಷ್ ಸರಕಾರದ ನೌಕರರು; ಬ್ರಿಟೀಷ್ ನಿಷ್ಠರು. ಅವರ ಮೊದಲ ಮಗ ಗೋಪಾಲಕೃಷ್ಣ ರಾಷ್ಟ್ರಸಭೆ ಸೇರಿಕೊಂಡು ಚಳವಳಿಗಾರರ ಮುಖಂಡನಾಗುತ್ತಾನೆ. ಎರಡನೆ ಮಗ ಗಂಗಾಧರ ಶಾಲೆಯಲ್ಲಿ(ಓದಿನಲ್ಲಿ) ಹಿಂದಾದರೂ ದೇಹದಾರ್ಢ್ಯ ಹೆಚ್ಚಿಸಿಕೊಂಡು ವ್ಯಾಯಾಮಾದಿಗಳಲ್ಲಿ ಆಸಕ್ತ, ಮೂರನೇ ಮಗ ಸದಾನಂದ ಸೌಮ್ಯವಾದಿಯಾಗಿರುತ್ತಾನೆ.

ಯುದ್ಧ ಕಾಲದಲ್ಲಿ ಗಂಗಾಧರ ಸೈನ್ಯ ಸೇರಿ ನೇತಾಜಿಯವರ ಐ.ಎನ್.ಎ.(I.N.A.)ಯೊಡನೆ ಕೂಡಿಕೊಂಡನು. ಯುದ್ಧ ಕಾಲದ ನಾನಾ ಸಮಿತಿಗಳಲ್ಲಿ ಸೇರಿ ಮಾಧವ ಪುರಾಣಿಕರು ಕೆಲಸ ಮಾಡಿದರೆ ಈ ಮೂವರು ಮಕ್ಕಳು ಮೂರು ದಾರಿಗಳಲ್ಲಿ ನಡೆದರು. ಪ್ರಾಮಾಣಿಕತೆ, ರಾಜಕೀಯ ತಂತ್ರಗಾರಿಕೆ, ವಸಾಹತುಶಾಹಿ ಭಯ ಆತಂಕಗಳು, ಯುದ್ಧ ಕಾಲವನ್ನು ಲಾಭಕ್ಕಾಗಿ ಪರಿವರ್ತನೆ ಮಾಡಿಕೊಂಡ ವ್ಯಾಪಾರಿವರ್ಗ, ಸ್ವಹಿತ ಸಾಧಕರು ರಾಜಕೀಯ ಮೇಲಾಟ ಮತ್ತು ಪ್ರಾಮಾಣಿಕರನ್ನು ಮೂಲೆಗೆ ತಳ್ಳುವ ಪ್ರಯತ್ನ, ಕಮ್ಯೂನಿಸ್ಟರೂ ಸೇರಿದಂತೆ ರಾಜಕೀಯದವರ ಕುಟೀಲ ನೀತಿಗಳು ಇವೆಲ್ಲವೂ ಈ ಕಾದಂಬರಿಯಲ್ಲಿ ಚಿತ್ರಿತವಾಗಿವೆ.

ಕಡೆಂಗೋಡ್ಲು ಶಂಕರ ಭಟ್ಟರು ಈ ಕಾದಂಬರಿಯಲ್ಲಿ ಶುದ್ಧ ಗ್ರಾಂಥಿಕ ಭಾಷೆ(ದಕ್ಷಿಣ ಕನ್ನಡದ ಭಾಷೆ; ಅಂದರೆ ಬರವಣಿಗೆಯ ಭಾಷೆ)ಯನ್ನು ಬಳಸಿದ್ದಾರೆ. ಸಂಸ್ಕೃತ ಪದಗಳನ್ನು ಉಪಯೋಗಿಸಿದ ಕನ್ನಡವಾದರೂ ಎಲ್ಲಿಯೂ ಆಡಂಬರಕ್ಕೆ ಎಡೆಮಾಡಿಕೊಟ್ಟಂತಿಲ್ಲ; ಅತಿವರ್ಣನೆಯಿಲ್ಲ; ಸಂಭಾಷಣೆಯಲ್ಲಿ ಗ್ರಾಮ್ಯ ಅಥವಾ ದೇಶೀಯ ವಿಧಾನಗಳಿಲ್ಲ. ನಿರೂಪಣೆಯಂತು ಭಾಷೆಗೂ ಸಂಭಾಷಣೆಯ ಭಾಷೆಗೂ ವ್ಯತ್ಯಾಸವಿಲ್ಲ. ಉಚ್ಚಾರಣೆಯ ವೈಚಿತ್ರವನ್ನು ತೋರಿಸುವ ಪ್ರಯತ್ನವನ್ನು ಮಾತ್ರ ಒಂದೆರಡು ವ್ಯಕ್ತಿಗಳ ಮಾತುಗಳಲ್ಲಿ ಹೇಳಿದ್ದಾರೆ.

"ಗಾಂಧಿಮತವಾದಿಗಳಾದರೂ ಅದಕ್ಕೆ ವಿರೋಧವಾಗದ ರೀತಿಯಲ್ಲಿ ಶರೀರವನ್ನು ಯುದ್ಧ ಕಾರ್ಯ ಸನ್ನಾಹಕ್ಕೂ ಮನಸ್ಸನ್ನು ಅಹಿಂಸೆಗೂ ಸಮರ್ಪಿಸಬಹುದಲ್ಲ? ಏಕೆ ಬಾರದು? ಎಂದು ತಿಳಿಯದೆ ಪುರಾಣಿಕರು ಕ್ಷುಭಿತಚಿತ್ತರಾದರು"(ಪಾದೇಕಲ್ಲು ವಿಷ್ಣುಭಟ್ಟ(ಸಂ); ೨೦೦೪; ಪು. ೬೧೭). ಬ್ರಿಟಿಷ್ ನಿಷ್ಠರಾದ ಮಾಧವ ಪುರಾಣಿಕರು ತಮಗೆ ಗೊತ್ತಿಲ್ಲದೆ ಗಾಂಧಿ ತತ್ವಗಳ ಕಡೆಗೆ ಮನಸ್ಸನ್ನು ಹರಿಸುತ್ತಾರೆ. ಗಾಂಧಿ ಚಿಂತನೆಗಳಲ್ಲಿರುವ ಪ್ರಬಲವಾದ ಶಕ್ತಿಯನ್ನು ಮನಗಾಣುತ್ತಾರೆ. ದೇಶಭಕ್ತಿ - ಬ್ರಿಟಿಷ್‌ನಿಷ್ಠೆ ಇವೆರಡರಿಂದ ಪುರಾಣಿಕರು ದ್ವಂದ್ವಕ್ಕೆ ಒಳಗಾಗುತ್ತಾರೆ. ಆದರೆ ಕೊನೆಯಲ್ಲಿ ಗಾಂಧೀ ಮಾರ್ಗದಲ್ಲಿ ದೇಶಸೇವೆಗೆ ನಿಲ್ಲುತ್ತಾರೆ. ತಿಪ್ಪಯ್ಯ ಪುರಾಣಿಕರೊಂದಿಗೆ ಮಾತನಾಡುತ್ತಾ ಹೀಗೆ ಹೇಳುತ್ತಾನೆ: "ಇಲ್ಲಿ ಒಂದು ಸಂಗ್ತಿಯಿದೆ ಸ್ವಾಮಿ, ಹಿಟ್ಲರ್ ಮನುಷ್ಯನಲ್ಲ; ದಾನವ..... ಎಂದು ಬಿಳಿ ಮನುಷ್ಯರು ಹೇಳುತ್ತಾರಲ್ಲ..... ಅದೆಲ್ಲ ಶುದ್ಧ ಸುಳ್ಳು ಸ್ವಾಮಿ.... ಅವರಂಥ ದೇವತಾಮನುಷ್ಯ ಯಾರೂ ಇಲ್ಲವಂತೆ..... ಇದ್ದರೂ ನಮ್ಮ ಗಾಂಧಿಯೊಬ್ಬರು"(ಅದೇ; ಪು. ೬೪೫). ಹಿಟ್ಲರ್‌ಗಿಂತ ಈ ಬ್ರಿಟಿಷ್ ಜನರು ತುಂಬಾ ಅಪಾಯಕಾರಿಗಳು. ಇಂಥ ಅಪಾಯದ ಜನತೆಯನ್ನು ನಿಃಶಸ್ತ್ರಗಳಿಂದ ಸದೆಬಡಿಯಲು ಬಂದ ಗಾಂಧೀಜಿಯನ್ನು ಒಬ್ಬ ದೇವತಾಮನುಷ್ಯನಂತೆ ಪ್ರತಿನಿಧಿಸಿದ್ದಾರೆ.

ಪುರಾಣಿಕರು ಮತ್ತು ಸರ್ವೋತ್ತಮ ಸೆಟ್ಟರ ನಡುವಿನ ಸಂಭಾಷಣೆ ಹೀಗಿದೆ. "ಈಗಿನ ಕಾಲದಲ್ಲಿ ಹೀಗೆಯೇ ಆಗಬೇಕಷ್ಟೆ. ಸತ್ಯ..... ಅಹಿಂಸೆ..... ಎಂದರೆ ಅಲ್ಲಿ ನಡೆದೀತು?" ಎಂದು ಪುರಾಣಿಕರು ಸೆಟ್ಟರ ತಂತ್ರ ಕೌಶಲಕ್ಕೆ ತಲೆದೂಗಿದರು.

"ಹಾಗಿದ್ದರೂ ಜನರಿಗೆ ಗಾಂಧಿ ಮೋಹ ಬಹಳ....ನಾವೂ ಕೆಲವೊಮ್ಮೆ ಗಾಂಧಿ ಹುಚ್ಚು ಹಿಡಿಸಿಕೊಳ್ಳಬೇಕಾಗಿದೆ.

"ನಿರ್ವಾಹವಿಲ್ಲ..... ಇದು ಕುಹಕ ಪ್ರಪಂಚ".

"ಬಲ್ಲವರೇ ಬಲ್ಲರು ಬೆಲ್ಲದ ಸವಿಯ.... ಎಂದು ಹೇಳಿದ ಹಾಗೆ ತಂತ್ರದ ಶಕ್ತಿಯನ್ನು ಬಲ್ಲವರೇ ಬಲ್ಲರು".

"ಚಾಣಾಕ್ಯನಿಂದ ಒಂದು ದಿನ ಪಾಠ ಕಲಿತಿದ್ದರೆ ಗಾಂಧಿ ಹೀಗೆ ಸತ್ಯ - ಸತ್ಯ ಎಂದು ಸಾಯುತ್ತಿರಲಿಲ್ಲ" ಎಂದು ಪುರಾಣಿಕರು ಮೇಳ ಕೂಡಿಸಿದರು"(ಅದೇ; ಪು. ೬೨೬-೬೨೭). ಈ ಮೇಲಿನ ಸಂಭಾಷಣೆಯಂತೆ ಬ್ರಿಟೀಷ್ ಅನುಯಾಯಿಯಾದ ಪುರಾಣಿಕರಿಗೆ ಗಾಂಧೀಜಿ ಅನುಕಂಪದ ಪ್ರತೀಕವಾಗಿ ಕಾಣುತ್ತಾರೆ. ಗಾಂಧೀಜಿಯವರ ತತ್ವಗಳಿಂದ ಎದುರಾಳಿಗಳಿಗೆ ಕೆಲವು ದೃಷ್ಟಿಗಳಿಂದ ಲಾಭದಾಯಕರವಾಗುತ್ತವೆ ವಿನಃ ನಷ್ಟ-ಕಷ್ಟಗಳಾಗುವುದಿಲ್ಲ. ಹಾಗಾಗಿ ಗಾಂಧೀಜಿಯವರನ್ನು ದೈವಸಂಭೂತನಾಗಿ ಇಲ್ಲಿ ಕಾದಂಬರಿಕಾರರು ಚಿತ್ರಿಸುತ್ತಾರೆ.

ಈ ದೇಶದ ರಾಜಕಾರಣದಲ್ಲಿ ಗಾಂಧೀ ತತ್ವಗಳ ಅನುಷ್ಠಾನ ಅಗತ್ಯವೆಂಬ ಮನೋಭಾವದಿಂದ ಕಡಿದಾಳ್ ಮಂಜಪ್ಪನವರು 'ಪಂಜರವಳ್ಳಿಯ ಪಂಜು' ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಪರಿಸರವನ್ನು ಒಳಗೊಂಡ ಮೂರು ತಲೆಮಾರಿನ ಕಥೆಯನ್ನು ಹೊಂದಿದೆ. ಗಿರಿಯಪ್ಪ ಗೌಡರು, ಅವರ ಮಗ ಸಿದ್ದಣ್ಣ, ಅವನ ಮಗ ಮೋಹನ -ಇವರೊಡನೆ ಮೋಹನನ ತಾಯಿ ಚನ್ನಮ್ಮ ಆಕೆಯ ಅತ್ತೆ ಈರಮ್ಮ ಇವರ ಜೀವನದ ಸಫಲ ಜೀವನದ ಸಂಘರ್ಷಣೆಯ ಕಥೆ, ಸಂಘರ್ಷಣೆಯ ಕಾರಣವು ಸುತ್ತಲಿನ ಸಮಾಜದ ತದ್ವಿರೋಧಿ ಶಕ್ತಿಗಳು ಇದು ಮಲೆನಾಡಿನ ಏಳುಬೀಳಿನ ಚರಿತ್ರೆಯ ದರ್ಶನವನ್ನು ಮಾಡಿಸುತ್ತದೆ.

ಭೂಮಾಲೀಕ ಗಿರಿಯಪ್ಪ ಗೌಡರು ತನ್ನ ತಮ್ಮನ ಕುಟಿಲತೆ ಮತ್ತು ಕೆಂಗಣ್ಣಿಗೆ ಗುರಿಯಾಗಿ ಮನೆಯನ್ನು ತೊರೆದು ಗೇಣಿದಾರರ ಬಾಳಿಗೆ ಇಳಿದು ಸ್ವಾವಲಂಬಿ ಜೀವನ ನಡೆಸುತ್ತಾನೆ. ತನ್ನ ಮಗ ಪುಟ್ಟನನ್ನು ಕೊಂದ ಹುಲಿಯ ಬೇಟೆಯಲ್ಲಿ ಗಿರಿಯಪ್ಪ ಗೌಡರು ತಮ್ಮ ಪ್ರಾಣವನ್ನೂ ಬಲಿ ಕೊಡುತ್ತಾರೆ. ಅವರ ಮಗ ಸಿದ್ದಣ್ಣನು ಗೇಣಿದಾರರಲ್ಲಿ ಗೌರವವಂತನಾಗಿ ತಲೆಯೆತ್ತಲಿರುವಾಗ ಅವನ ಸತ್ವ ಪರೀಕ್ಷೆ ಮಗ ಮೋಹನನ ದಸ್ತಗಿರಿ ಮತ್ತು ಸಾಮಾಜಿಕ ರಾಜಕೀಯಕ್ಕೆ ಬಲಿಯಾಗುತ್ತಾನೆ. ಮೋಹನ ಉನ್ನತ ಶಿಕ್ಷಣ ಪಡೆದು ಗಾಂಧಿ ತತ್ವಗಳಿಗೆ ಜೋತುಬಿದ್ದು ಸಮಾಜದ ಉದ್ಧಾರ, ದಲಿತರ ಏಳಿಗೆಗಾಗಿ ಶ್ರಮಿಸಿ ರಾಜಕೀಯದ ತಾಮಸಕ್ಕೆ ಬಲಿಯಾಗುತ್ತಾನೆ. ಇದು ಈ ಕಾದಂಬರಿಯ ಸಾರಾಂಶವಾಗಿದೆ.

ಮೋಹನನು ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ಪತ್ರಿಕೆಗಳಲ್ಲಿ ಬರುತ್ತಿದ್ದ ಗಾಂಧೀಜಿಯವರ ಲೇಖನಗಳನ್ನು ಮತ್ತು ಭಾಷಣಗಳನ್ನೂ ತಪ್ಪದೇ ಓದುತ್ತಿದ್ದನು. ಗಾಂಧೀಜಿಯವರು ಜನತೆಯ ಮುಂದಿಟ್ಟ ಆದರ್ಶಗಳು ಮೋಹನನನ್ನು ಸಂಪೂರ್ಣವಾಗಿ ಮನಸೆಳೆದವು. ಕಾಲೇಜು ವ್ಯಾಸಂಗ ಪೂರೈಸಿದ ನಂತರ ತಾನೂ ಸಹ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರಿ ದೇಶಸೇವೆ ಮಾಡಬೇಕೆಂದು ನಿರ್ಧರಿಸುತ್ತಾನೆ. ಬೇಸಿಗೆ ರಜಕ್ಕೆ ಊರಿಗೆ ಬಂದಾಗ ತನ್ನ ವಯಸ್ಸಿನ ಯುವಕರನ್ನು ಸೇರಿಸಿ

ಅವರಿಗೆ ಕಾಂಗ್ರೆಸ್ಸಿನ ಉದ್ದೇಶಗಳನ್ನೂ, ಗಾಂಧೀಜಿಯವರ ಉಪದೇಶಗಳನ್ನೂ ವಿವರಿಸುತ್ತಿದ್ದನು. "ಅಂದು ಅಸಹಕಾರದ ಅಸಾಧಾರಣ ಕಾಲವಾಗಿತ್ತು. ಎಲ್ಲಿಯೂ ಕಾಣದ, ಎಂದೂ ಕೇಳದ ಹೊಸದೊಂದು ಕ್ರಾಂತಿಯನ್ನು ಪ್ರಾರಂಭಿಸಿದ್ದರು. ಸತ್ಯ ಅಹಿಂಸೆಗಳೇ ಅವರ ಕ್ರಾಂತಿಗೆ ಅಸ್ತ್ರಗಳಾಗಿದ್ದವು. ಮಹಾತ್ಮರು ಅಜ್ಞಾನದ ಅಂಧಕಾರದಲ್ಲಿ ಗುಲಾಮಗಿರಿಯ ಜಡನಿದ್ರೆಯಲ್ಲಿ ಮಲಗಿದ್ದ ಈ ದೇಶದ ಜನತೆಯನ್ನು ಚೇತನಗೊಳಿಸಿ, ಅವರಲ್ಲಿ ಹೊಸದೊಂದು ಸ್ಫೂರ್ತಿಯನ್ನು ತುಂಬಿದ್ದರು. ಮಂಕುಬೂದಿಯನ್ನೆರಚಿದ ಮಾಟಗಾರನಿಗೆ ಶರಣು ಹೊಂದಿದವರಂತೆ, ಈ ದೇಶದ ಜನರು ಪವಾಡಪುರುಷರಾದ ಮಹಾತ್ಮರನ್ನು ಹಿಂಬಾಲಿಸಿದ್ದರು. ದೇಶಾಭಿಮಾನ, ಸತ್ಯ, ಶಾಂತಿ, ಶಿಸ್ತು, ಅಹಿಂಸೆ ಮುಂತಾದ ಭಾವನೆಗಳು ದೇಶದ ಆದ್ಯಂತ ಆಕ್ರಮಿಸಿ ಅವರ ಹೃದಯವನ್ನು ಸೂರೆಗೊಂಡಿತ್ತು"(ಮಂಜಪ್ಪ ಕಡಿದಾಳ್; ೧೯೫೪; ಪು. ೭೩). ಹೀಗೆ ಕಾದಂಬರಿಕಾರರು ಗಾಂಧಿಯನ್ನು ಎಂದೂ ಕಾಣದ, ಕೇಳದ ಹೊಸದೊಂದು ಕ್ರಾಂತಿಯನ್ನು ಆರಂಭಿಸಿದ ಕ್ರಾಂತಿಕಾರನಾಗಿ, ತನ್ನ ಕ್ರಾಂತಿಗೆ ಸತ್ಯ, ಅಹಿಂಸೆಗಳೇ ಅಸ್ತ್ರವಾಗಿಸಿಕೊಂಡ ಒಬ್ಬ ಮಹಾನ್ ಅಹಿಂಸಾವಾದಿಯಾಗಿ, ಬ್ರಿಟೀಷರನ್ನು ಸತ್ಯ-ಅಹಿಂಸೆಗಳ ಮೂಲಕ ದೇಶದಿಂದ ಹೊರಗಟ್ಟಿದ ಪವಾಡಪುರುಷನಾಗಿ ಪ್ರತಿನಿಧಿಸಿದ್ದಾರೆ.

ಬೆಳ್ಳೇಗೌಡರು ಒಮ್ಮೆ ಸಿದ್ದಣ್ಣನೊಡನೆ ಮಾತನ್ನಾಡುತ್ತಿದ್ದಾಗ "ಅವ ಯಾರೋ ಗಾಂಧಿ ಅಂತೆ. ಹೊಲೆ ಹದಿನೆಂಟು ಜಾತಿ ಉಂದ್ಯಾಡೂಕೆ ಹೊಲ್ಟಾನಂತೆ. ಏನ್ಪಂತೋ ಕಾಲ ನಮ್ಮಪ್ಪಾ? ನಮ್ಮಾಳು ಸಿದ್ದ ಕುರುದೆ ಕರಿಯನೂ ಕಾಂಗ್ರೇಸಂತೆ! ಆ ಮುಂದೆ ಕುರುದೆ ನಿನ್ಮಗ್ನ ಜೋತೆಗೇ ಇರತಾನೆ. ಜಾತಿಗೀತಿಯಲ್ಲಾ ಬಿಟ್‌ಹೊಡ್ದೇನೋ ಸಿದ್ದ"(ಅದೇ; ಪು. ೭೬) ಎಂದು ಹೇಳಿದನು. ದೇಶ ಕಟ್ಟಬೇಕಾದರೆ, ಜನತೆಯನ್ನು ಸಂಘಟಿಸಬೇಕಾದರೆ ದೇಶದಲ್ಲಿ ಬೆಳೆದು ನಿಂತಿರುವ ಸಾಂಕ್ರಾಮಿಕ ರೋಗದಂತಹ ಜಾತೀಯತೆಯನ್ನು ಕಿತ್ತೆಸೆಯುವ ಗಾಂಧೀಜಿಯನ್ನು ಜಾತ್ಯಾತೀತನಾಗಿ, ಮಾನವತಾವಾದಿಯಾಗಿ ಚಿತ್ರಿಸಿದ್ದಾರೆ.

ಪವಿತ್ರಪುರದಲ್ಲಿ ನಡೆಯುತ್ತಿದ್ದ ಅಂದಿನ ರಾಜಕಾರಣದಲ್ಲಿ ಗಾಂಧಿ ತತ್ವಗಳಿಗೆ ಬೆಲೆಯಿರಲಿಲ್ಲ. ಗಾಂಧೀಜಿಯವರ ಉಪದೇಶದಂತೆ ನಡೆಯುತ್ತಿದ್ದ ಮೋಹನನಿಗೆ ದುಷ್ಟ(ದುರ್ಜನರು) ಶಕ್ತಿಗಳು ಕೊಡುತ್ತಿದ್ದ ಕಷ್ಟಗಳನ್ನು ನೋಡಿ ಮೋಹನನ ಸ್ನೇಹಿತ ಮೂರ್ತಿ ಈ ರೀತಿ ವ್ಯಕ್ತಪಡಿಸುತ್ತಾನೆ. "ಮೋಹನ್, ಗಾಂಧೀ ತತ್ವದ ಹೆಸರಿನಲ್ಲಿ ನೀನು ನಡೆಯಿಸುತ್ತಿರುವ ರಾಜಕಾರಣದಿಂದ ನಿನ್ನನ್ನು ನಂಬಿದವರೆಲ್ಲರೂ ನಿರ್ನಾಮವಾಗುತ್ತಿದ್ದಾರೆ. 'ದಡ್ಡರಿಗೆ ದೊಣ್ಣೆ ಪೆಟ್ಟು ಜಾಣರಿಗೆ ಮಾತಿನ ಪೆಟ್ಟು' ಅನ್ನುವ ಹಾಗೆ ಸತ್ಯ ಅಹಿಂಸೆಗಳು ಸುಸಂಸ್ಕೃತರನ್ನು ವಶಪಡಿಸಿಕೊಳ್ಳುವ ಸಾಧನಗಳೇ ಹೊರತು ಮೃಗಗಳಂತಿರುವವರನ್ನು ಗೆಲ್ಲುವ ಅಸ್ತ್ರಗಳಲ್ಲ. ...... ಗಾಂಧೀಜಿಯವರು ಆಂಗ್ಲೇಯರ ವಿರುದ್ಧ ಸತ್ಯ ಅಹಿಂಸೆಗಳ ಹೋರಾಟವನ್ನು ನಡೆಸಿದರು. ಆಂಗ್ಲೇಯರು ಸುಸಂಸ್ಕೃತರಾದ್ದರಿಂದ ಸತ್ಯ ಅಹಿಂಸೆಗಳಿಗೆ ತಲೆಬಾಗಿ ನಮಗೆ ಸ್ವರಾಜ್ಯವನ್ನು ಕೊಟ್ಟರು"(ಅದೇ; ಪು. ೧೧೧) ಎಂದು ಸತ್ಯ

ಅಹಿಂಸೆಗಳು ಸುಸಂಸ್ಕೃತರನ್ನು ವಶಪಡಿಸಿಕೊಳ್ಳುವ ಸಾಧನಗಳಾಗಿರುವುದರಿಂದ ಅವುಗಳನ್ನು ಸಂಪೂರ್ಣವಾಗಿ ನಂಬಿ ಆಚರಿಸುವ ಮತ್ತು ಆಚರಿಸಲು ಪ್ರಚೋದಿಸುವ ಗಾಂಧೀಜಿಯವರು ಸಂಸ್ಕೃತಿಯ ಪ್ರತೀಕವಾಗಿರುವಂತೆ ಕಂಡರಿಸಿದ್ದಾರೆ.

ಹೀಗೆ ಕಡಿದಾಳ್ ಮಂಜಪ್ಪನವರು ತಮ್ಮ ಪಂಜರವಳ್ಳಿಯ ಪಂಜು ಕಾದಂಬರಿಯಲ್ಲಿ ಗಾಂಧೀಜಿಯವರನ್ನು ಸತ್ಯ, ಅಹಿಂಸೆಗಳನ್ನು ಪರಿಪಾಲಿಸುವಾಗ ಎಲ್ಲೂ ವಿಚಲಿತರಾಗದೆ ಸಂಪೂರ್ಣವಾಗಿ ತಮ್ಮ ಜೀವನದುದ್ದಕ್ಕೂ ಆಚರಿಸಿದ ಮೊದಲಿಗರಾಗಿ, ಮಹಾನ್ ವ್ಯಕ್ತಿಯಾಗಿ ವ್ಯಕ್ತಪಡಿಸಿದ್ದಾರೆ ಮತ್ತು ಸತ್ಯ - ಅಹಿಂಸೆ ತತ್ವಗಳು ಸುಸಂಸ್ಕೃತರಲ್ಲಿ ನೆಲೆಸಿರುತ್ತವೆ ಎಂಬ ಕಡಿದಾಳ್ ಮಂಜಪ್ಪನವರ ಉಲ್ಲೇಖದಿಂದ ಗಾಂಧೀಜಿ ಸಂಸ್ಕೃತಿಯ ಭಾಗವಾಗಿದ್ದಾರೆ ಎಂದು ಗ್ರಹಿಸಬಹುದು. ಒಟ್ಟಾರೆ ಈ ಕಾದಂಬರಿಯಲ್ಲಿ ಗಾಂಧೀಜಿಯವರನ್ನು ಜಾತ್ಯಾತೀತನಾಗಿ, ಸಂಸ್ಕೃತಿಯ ಆರಾಧಕನಾಗಿ, ಮಹಾನ್ ಅಹಿಂಸಾವಾದಿಯಾಗಿ ಮತ್ತು ಸಂಘಟಕರಾಗಿ ಕಾಣಲಾಗಿದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಮೆರವಣಿಗೆ ಕಾದಂಬರಿ ಸ್ವಾತಂತ್ರ್ಯಪೂರ್ವ ಭಾರತದ ಕಥೆಯನ್ನು ಒಳಗೊಂಡಿದೆ. ಆದರೆ ಇಲ್ಲಿ ಸುಸಂಬದ್ಧವಾದ ಒಂದು ಕಥೆ, ಕೇಂದ್ರ ಘಟನೆ, ಕೇಂದ್ರ ಪಾತ್ರಗಳು ಇಲ್ಲದೆ ಅನೇಕ ವಿಚಾರಗಳ ಮೆರವಣಿಗೆ ನಡೆದಿರುವುದು ಕಂಡು ಬರುತ್ತದೆ. ಸ್ವಾತಂತ್ರ್ಯಪೂರ್ವದ ಅಂದಿನ ಸಮಾಜದಲ್ಲಿ ಬೇರುಬಿಟ್ಟಿದ್ದ ಹಾಗೂ ಎದ್ದು ಕಾಣುತ್ತಿದ್ದ ಸಾಮಾಜಿಕ, ಆರ್ಥಿಕ ವೈಷಮ್ಯ - ವಿಕೃತಿಗಳು, ಶೈಕ್ಷಣಿಕ ಅವ್ಯವಸ್ಥೆಗಳು, ನ್ಯಾಯಾಂಗ ಮತ್ತು ಪೊಲೀಸ್ ವ್ಯವಸ್ಥೆಯ ವಿಡಂಬನಾತ್ಮಕ ಸ್ಥಿತಿಗಳು, ಧಾರ್ಮಿಕ ವಿರೋಧಾಭಾಸಗಳು, ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು ಇವೆಲ್ಲಾ ಈ ಕಾದಂಬರಿಯಲ್ಲಿ ಅನಾವರಣಗೊಳ್ಳುತ್ತಾ ಹೋಗುತ್ತವೆ. ಈ ಅಧ್ಯಯನ ನಿರ್ದಿಷ್ಟ ಉದ್ದೇಶಗಳನ್ನು ಹೊಂದಿದ್ದರಿಂದ ಈ ಕಾದಂಬರಿಯಲ್ಲಿ ಗೊರೂರವರು ಗಾಂಧೀಜಿಯವರನ್ನು ಕಂಡರಿಸಿದುದನ್ನು ಗಮನಿಸಲಾಗಿದೆ.

ಗೊರೂರವರು ಸ್ವತಃ ಗಾಂಧೀಜಿಯವರ ಕರೆಯಿಂದ ಆಕರ್ಷಿತರಾಗಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವತಃ ಭಾಗವಹಿಸಿದ ಅನುಭವ ಉಳ್ಳವರಾಗಿದ್ದುದರಿಂದ, ಅದರ ಎಲ್ಲ ಆಯಾಮಗಳನ್ನು ಎಳೆ ಎಳೆಯಾಗಿ ಬಿಡಿಸಿ ಈ ಕಾದಂಬರಿಯಲ್ಲಿ ತೋರಿಸಿದ್ದಾರೆ. “ಸ್ವಾತಂತ್ರ್ಯ ಸಂಗ್ರಾಮದ ಸ್ವರೂಪವನ್ನು ಇಷ್ಟು ಚೆನ್ನಾಗಿ ಮೈಗೂಡಿಸಿಕೊಂಡಿರುವ ಕೃತಿ ನಮ್ಮಲ್ಲಿ ಅಪರೂಪ”(ಗುರುದತ್ತ ಪ್ರಧಾನ್, ೨೦೦೬; ಪುಟ ೪೨-೪೩) ಎಂಬ ಎನ್. ಬೋರಲಿಂಗಯ್ಯನವರ ಮಾತುಗಳನ್ನು ಪ್ರಧಾನ ಗುರುದತ್ತ ಅವರು ‘ಗೊರೂರು ರಾಮಸ್ವಾಮಿ ಅಯ್ಯಂಗಾರ್’ ಎಂಬ ತಮ್ಮ ಸಂಪಾದನ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

“ಗಾಂಧಿ ಗಾಂಧಿ ಎಂಬ ಹೆಸರು ೨ - ೩ ವರುಷಗಳಿಂದ ಸುಮಾರಾಗಿ ಕೇಳುತ್ತಿದ್ದದ್ದು ನಿತ್ಯಾ ಎಲ್ಲೆಲ್ಲೂ ಮಂತ್ರದಂತೆ ಉಚ್ಚಾರವಾಗತೊಡಗಿತು. ಹಳ್ಳಿ ಹಳ್ಳಿಗಳಲ್ಲಿಯೂ ‘ಅದ್ಯಾರೋ ಗಾಂಧಿಯಂತೆ. ಕಂಪನಿ ಸರ್ಕಾರ ಒಂದು ಕಡೆಯಿಂದ ಸೋಲು ಒಪ್ಪಿಕೊಳ್ಳುತ್ತಾ ಇದೆ’ ಎಂಬ ಕೂಗು ಕೇಳುತ್ತಿದ್ದಿತು.

ವಿದ್ಯಾರ್ಥಿಗಳ ಉತ್ಸಾಹ ಅಸಾಧ್ಯವಾಗಿದ್ದಿತು. ಅದುವರೆಗೆ ಗಾಂಧಿಯವರ ಮುಖವನ್ನು ಕೂಡ ನೋಡದಿದ್ದವರಿಗೆಲ್ಲಾ ಗಾಂಧೀಜಿಯವರು ಅವತಾರ ಪುರುಷರು ಎಂಬುದರಲ್ಲಿ ಸಂದೇಹವಿಲ್ಲವೆಂದು ಕೊಂಡು ಅವರ ಕೊಂಡಾಟದಲ್ಲಿ ತೊಡಗಿದರು"(ರಾಮಸ್ವಾಮಿ ಅಯ್ಯಂಗಾರ್ ಗೊರೂರು; ೧೯೮೧, ಪುಟ ೩೩೫) ಎಂದು ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರು ವಿದ್ಯಾರ್ಥಿಗಳನ್ನು ಪ್ರಭಾವಿಸಿದುದನ್ನು ಕುರಿತು ಗೊರೂರವರ ಮಾತುಗಳು ಅತ್ಯಂತ ಅರ್ಥಪೂರ್ಣವೆನಿಸಿವೆ. ೧೯೨೦ರಲ್ಲಿ ಬಾಲಗಂಗಾಧರ ತಿಲಕರು ಸ್ವರ್ಗಸ್ಥರಾದ ನಂತರ ಗಾಂಧೀಜಿಯ ಹೆಸರು ದೇಶದಲ್ಲಿ ಎಲ್ಲೆಲ್ಲೂ ಮಂತ್ರದಂತೆ ಕೇಳತೊಡಗಿತು. ಆ ಸಂದರ್ಭದಲ್ಲಿ ಗಾಂಧೀಜಿ ಅವತಾರ ಪುರುಷರಾಗಿ ಕಂಡಿದ್ದರು. ವಿದ್ಯಾರ್ಥಿಗಳು ಗಾಂಧೀಜಿಯ ಅವತಾರದ ಲೀಲೆಗಳ ಬಗ್ಗೆ ಚರ್ಚಿಸತೊಡಗಿದರು. "ಭಾರತ ಭಾಗ್ಯ ವಿಧಾತಾ, ಭಾರತದ ಮಂಗಳ ಕರ್ತ ಮಹಾತ್ಮಾಗಾಂಧೀ, ಈ ದೇಶದ ಅನೇಕ ಶತಮಾನಗಳ ನಿದ್ರೆಯನ್ನು ಪರಿಹರಿಸಿ ಇದಕ್ಕೆ ಚೈತನ್ಯವನ್ನು ಕೊಟ್ಟಿದ್ದಾನೆ. ಈ ಸತ್ತ ದೇಶಕ್ಕೆ ಜೀವವನ್ನು ತುಂಬಿದ್ದಾನೆ. ಇಂತಹ ಮಹಾತ್ಮಾ ಈಗ ಶಾಲೆಗಳನ್ನು ಬಿಟ್ಟು ವಿದ್ಯಾರ್ಥಿಗಳು ಬನ್ನಿ ಎನ್ನುತ್ತಿದ್ದಾರೆ" (ರಾಮಸ್ವಾಮಿ ಅಯ್ಯಂಗಾರ್ ಗೊರೂರು, ೧೯೮೧; ಪುಟ ೩೩೬) ಎಂದು ಕಾದಂಬರಿಕಾರರು ಗಾಂಧೀಜಿಯವರನ್ನು ಭಾರತದ ಮಂಗಳಕರ್ತನಾಗಿ, ಜಡತ್ವ ದೇಶಕ್ಕೆ ಜೀವ ತುಂಬಿದ ಚೈತನ್ಯರಾಗಿ ಇದ್ದವರು ಎಂಬಂತೆ ಕಂಡರಿಸಿದ್ದಾರೆ.

ಗಾಂಧೀಜಿಯವರ ಕರೆಗೆ ಓಗೊಟ್ಟು ಉತ್ಸಾಹದಿಂದ ಮುನ್ನುಗ್ಗಿ ಬಂದ ಯುವಕರನ್ನು ಗಾಂಧೀಜಿಯವರು ಹಿಂದಿರುಗಿಸುತ್ತಿದ್ದರು. ನಿಮ್ಮ ಊರುಗಳಿಗೆ ಹೊರಟುಹೋಗಿ, ಅಲ್ಲಿ ರಚನಾತ್ಮಕ ಕಾರ್ಯಕ್ರಮದಲ್ಲಿ ತೊಡಗಿರಿ. ಖಾದಿಯ ತಯಾರಿಕೆ, ಅಸ್ಪೃಶ್ಯತೆ ನಿವಾರಣೆ, ಹಿಂದೂ ಮುಸ್ಲಿಂ ಐಕ್ಯ, ಪಾನನಿರೋಧ, ಗ್ರಾಮ ನಿರ್ಮಲೀಕರಣ, ವಯಸ್ಕರ ವಿದ್ಯಾಭ್ಯಾಸ ಇತ್ಯಾದಿ ಕಾರ್ಯಕ್ರಮಗಳಲ್ಲಿ ತೊಡಗಿ ಎಂದು ಹೇಳುತ್ತಿದ್ದರು. "ಶಾಲೆ, ಕಾಲೇಜುಗಳನ್ನು ಬಿಟ್ಟು ಬರುತ್ತಿದ್ದ ವಿದ್ಯಾರ್ಥಿಗಳಿಗೆ ಈ ಸಂದೇಶ ಬಹು ಸಣ್ಣದಾಗಿ ತೋರಿತು. ಹಾಗೆ ರಚನಾತ್ಮಕ ಕಾರ್ಯಕ್ರಮದಲ್ಲಿ ತೊಡಗಿ ಕೆಲಸ ಮಾಡುವ ಶಕ್ತಿ ಅನೇಕ ವಿದ್ಯಾರ್ಥಿಗಳಿಗೆ ಇರಲಿಲ್ಲ. ನೆಟ್ಟಗೆ ಯುದ್ಧಭೂಮಿಗೆ ಹೋಗಿ ಸಿಪಾಯಿಯಾಗುವುದೂ, ಎದುರಾಳಿಯ ಗುಂಡಿಗೆ, ಗುಂಡಿಗೆ ಒಡ್ಡುವುದೂ ಸುಲಭ. ಆದರೆ ರಚನಾತ್ಮಕ ಕಾರ್ಯಕ್ರಮದಲ್ಲಿ ತೊಡಗುವುದು ಬಹಳ ಸಾಹಸದ ಕೆಲಸ. ಅದಕ್ಕೆ ಬಹಳ ಸಹನೆಯೂ, ಆಸಕ್ತಿಯೂ, ಎಲೆಯ ಮರೆಯ ಹೂವಿನಂತೆ ಇದ್ದುಕೊಂಡು ಕೆಲಸ ಮಾಡುವ ನಮ್ರಭಾವವೂ ಬೇಕಾಗುತ್ತದೆ. ಪಾಪ ಉತ್ಸಾಹದಿಂದ, ಆಕಾಶಕ್ಕೆ ಹಾರಿ ಹೋಗುವ ಸುರುಬತ್ತಿಯಂತೆ ವಿದ್ಯುತ್ ಚೈತನ್ಯವುಳ್ಳವರಾಗಿ ಗಾಂಧೀಯವರ ಬಳಿಗೆ ಬಂದ ವಿದ್ಯಾರ್ಥಿಗಳು, ಅವರಿಂದ ರಚನಾತ್ಮಕದ 'ಸಾಧುವಾದ' ಸಂದೇಶಗಳನ್ನು ತೆಗೆದುಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಹಿಂದಿರುಗಿದರು"(ರಾಮಸ್ವಾಮಿ ಅಯ್ಯಂಗಾರ್ ಗೊರೂರು, ೧೯೮೧; ಪುಟ ೩೩೮-೩೩೯). ಹೀಗೆ ಶಾಲಾ ಕಾಲೇಜುಗಳನ್ನು ಬಿಟ್ಟು ಗಾಂಧೀಜಿ ಆಶ್ರಮಕ್ಕೆ ಯುವಕರು ನುಗ್ಗುವುದನ್ನು ಗಾಂಧೀಜಿಯವರೇ ಸ್ವತಃ ನಿಯಂತ್ರಿಸುತ್ತಿದ್ದರು. ತಮ್ಮ ಹಳ್ಳಿಯಲ್ಲಿಯೇ ಉಳಿದು ರಚನಾತ್ಮಕ ಕಾರ್ಯಕ್ರಮಗಳನ್ನು

ನಿರ್ವಹಿಸುವುದರ ಮೂಲಕ ಚಳುವಳಿಗೆ ಯಶಸ್ಸನ್ನು ತಂದುಕೊಡಬೇಕೆಂದು ಗಾಂಧೀಜಿಯವರ ಅಭಿಮತವಾಗಿತ್ತು.

ಅಹಮದಾಬಾದ್ ಆಶ್ರಮವನ್ನು ನೋಡದೆ ಇರುವ ಗಾಂಧಿ ಭಕ್ತರ ಸಂಖ್ಯೆ ಬಹಳ ಕಡಿಮೆ. ಕಾಶಿ, ರಾಮೇಶ್ವರ ಕ್ಷೇತ್ರಗಳಂತೆ ಭಾರತಕ್ಕೆ ಅದೂ ಒಂದು ಪುಣ್ಯ ಕ್ಷೇತ್ರ. ಆಶ್ರಮದ ಸಮೀಪದಲ್ಲೇ ಹರಿಯುತ್ತಿರುವ ಸಾಬರಮತಿ ನದಿ ಆಶ್ರಮಕ್ಕೆ ಶೋಭೆಯನ್ನು ತರುತ್ತಿತ್ತು. "ಹೊಸದಾಗಿ ಆಶ್ರಮವನ್ನು ಹೋಗಿ ನೋಡುವವರಿಗೆ ಮೊದಲು ಅಲ್ಲಿ ಕಾಣುತ್ತಿದ್ದುದು ಹತ್ತಿ, ನೂಲು, ನೆಯ್ಗೆ ಅವುಗಳ ಹೊರತು ಮತ್ತೇನೂ ಇಲ್ಲ. ಅದೊಂದು ನೆಯ್ಗೆಯ, ಕೈ ಕೆಲಸದ ಸಣ್ಣ ಕಾರ್ಖಾನೆ, ಖಾದಿಯ ದೇವಸ್ಥಾನ; ಅದರ ದೇವರು ಗಾಂಧೀ" (ರಾಮಸ್ವಾಮಿ ಅಯ್ಯಂಗಾರ್ ಗೊರೂರು, ೧೯೮೧; ಪುಟ ೩೩೯-೩೪೦) ಎಂದು ಗೊರೂರರು ಗಾಂಧಿಯನ್ನು ದೈವ ಸ್ವರೂಪಿಯಾಗಿ ಭಾರತ ಭಾಗ್ಯ ವಿಧಾತನಾಗಿ ಚಿತ್ರಿಸಿದ್ದಾರೆ.

"ಸರ್ಕಾರದವರು ಮಹಾತ್ಮಾ ಗಾಂಧೀಜಿಯವರನ್ನು ಅಹಮ್ಮದಾಬಾದಿನಲ್ಲಿ ೧೯೨೨ನೇ ಇಸವಿ ಮಾರ್ಚ್, ೧೩ನೇ ತಾರೀಖು ದಸ್ತಗಿರಿ ಮಾಡಿದರು. ಆ ವಿಚಾರಣೆಯನ್ನು ಎರಡು ಸಾವಿರ ವರುಷಗಳ ಕೆಳಗೆ ನಡೆದ ಏಸುಕ್ರಿಸ್ತನ ವಿಚಾರಣೆಗೆ ಹೋಲಿಸಬಹುದಾಗಿದ್ದಿತು. ವಿಚಾರಣೆಯನ್ನು ನೋಡಲು ನೆರೆದಿದ್ದವರಲ್ಲಿ ಕೆಲವರು 'ಏಸುವನ್ನು ಶಿಕ್ಷಿಸಿದ ಸರ್ಕಾರಕ್ಕೂ ಈ ಸರ್ಕಾರಕ್ಕೂ ಏನೂ ವ್ಯತ್ಯಾಸವಿಲ್ಲ. ಗಾಂಧೀಯವರಿಗೂ, ಏಸುವಿಗೂ ಏನೂ ವ್ಯತ್ಯಾಸವಿಲ್ಲ' ಎಂದು ತಮ್ಮ ತಮ್ಮಲ್ಲಿ ಹೇಳಿಕೊಳ್ಳುತ್ತಿದ್ದರು"(ರಾಮಸ್ವಾಮಿ ಅಯ್ಯಂಗಾರ್ ಗೊರೂರು; ೧೯೮೧;ಪುಟ ೩೪೩). ಇಲ್ಲಿಯೂ ಸಹ ಕಾದಂಬರಿಕಾರರು ಗಾಂಧೀಜಿಯವರನ್ನು ದೈವಸದೃಶ್ಯನಾದ ಏಸುಕ್ರಿಸ್ತನಿಗೆ ಹೋಲಿಸಿ ವಿಶದಪಡಿಸಿದ್ದಾರೆ. ಹೀಗೆ ಕಾದಂಬರಿಯನ್ನು ತಾತ್ಪೂರ್ವಕವಾಗಿ ಗಮನಿಸಿದಾಗ ಗೊರೂರವರು ಗಾಂಧೀಜಿಯವರನ್ನು ಆರಾಧಕ ನೆಲೆಯಲ್ಲಿ ಪರಿಭಾವಿಸಿ ದೈವಸದೃಶವಾಗಿ ವಿಶದಪಡಿಸಿದ್ದಾರೆ.

ಮಿರ್ಜಿ ಅಣ್ಣಾರಾಯರು ಪ್ರಮುಖ ಗಾಂಧೀವಾದಿಗಳು. ಗಾಂಧಿಯವರಿಂದ ಪ್ರಭಾವಿತರಾದವರು. ಗಾಂಧಿ ಮತ್ತು ರಾಷ್ಟ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಭಸ್ಮಾಸುರ, ರಾಷ್ಟ್ರಪುರುಷ, ಹದಗೆಟ್ಟ ಹಳ್ಳಿ, ಪ್ರತಿ ಸರಕಾರ ಹೀಗೆ ಮುಂತಾದ ಕಾದಂಬರಿಗಳನ್ನು ರಚಿಸಿದ್ದಾರೆ.

'ಭಸ್ಮಾಸುರ' ಇದು ಅತ್ಯಂತ ಚಿಕ್ಕ ಕಾದಂಬರಿ. ಸ್ವಾತಂತ್ರ್ಯ ಚಳವಳಿಯ ಮತ್ತೊಂದು ಮುಖವನ್ನು ಪರಿಚಯಿಸುತ್ತದೆ. ಅಹಿಂಸಾಮೂರ್ತಿಯಾದ ಮಹಾತ್ಮ ಗಾಂಧಿ ಹಿಂಸೆಯ ರಾಕ್ಷಸರಿಂದ ಹತರಾದ ಮಹಾದುರಂತದ ನಂತರ ಉದ್ಭವಿಸಿದ ವಿಷಮಯ ಪ್ರಸಂಗವೇ ಈ ಕಾದಂಬರಿಯ ವಸ್ತು. "ಗಾಂಧೀ ಹತ್ಯೆಯಿಂದಾಗಿ ದೇಶಕ್ಕೆ ದೇಶವೇ ತಬ್ಬಲಿಯಾದಂತಾಯಿತು. ದುಃಖ ದುಮ್ಮಾನ ಕಂಬನಿಗಳೊಡನೆ ದ್ವೇಷ, ತ್ವೇಷ, ಕ್ರೋಧಗಳು ಹೆಡೆಯೆತ್ತಿದ್ದವು. ಸನ್ನಿವೇಶವು ಜಾತಿಯ ಬಣ್ಣ ಪಡೆದು ಗಾಂಧಿ ಹತ್ಯೆ ಬ್ರಾಹ್ಮಣೇತರರಲ್ಲಿ ಭಸ್ಮಾಸುರ ಆವೇಶಕ್ಕೆ ದಾರಿ ಮಾಡಿಕೊಟ್ಟಿತು. 'ಕೆಲವು ಕಡೆಗೆ (ವಿಶೇಷವಾಗಿ ಸಾಂಗ್ಲಿ - ಕೊಲ್ಲಾಪುರ ಸಾತಾರಗಳ ಕಡೆಗೆ) ಬ್ರಾಹ್ಮಣರ ಮನೆಗಳನ್ನು ಸುಡುವುದು ಸುಲಿಯುವುದು, ಇಂಥ ಹೇಯ ಕೃತ್ಯಗಳನ್ನು ಮಾಡಿದರು. ಸ್ವಾರ್ಥ ವೈಯಕ್ತಿಕ

ದ್ವೇಷಾಸೂಯೆಗಳು ತಮ್ಮ ಕೆನ್ನಾಲೆಗಳನ್ನು ಚಾಚಿದವು. ಈ ಕರಾಳ ಪರಿಸ್ಥಿತಿಯ ಚಿತ್ರಣ 'ಭಸ್ಮಾಸುರ', ಪುರಾಣ ಕಥೆಗಳಲ್ಲಿ ಭಸ್ಮಾಸುರನು ಶಿವನಿಂದ ವರ ಪಡೆದು ಲೋಕ ಕಂಟಕನಾದನೆಂದು ಹೇಳಲಾಗಿದೆಯಷ್ಟೆ, ಅದೇ ರೀತಿ ಅರ್ಧಮರ್ಧ ಕಾಂಗ್ರೆಸ್ಸಿಗರು ತಾವು ಸ್ವಾತಂತ್ರ್ಯವನ್ನು ಸಂಪಾದಿಸಿದ ವೀರರೆಂದು ಭಾವಿಸಿ ಜನತೆಯಲ್ಲಿಯ ಗಾಂಧಿನಿಷ್ಠೆಯ ದುರುಪಯೋಗ ಮಾಡಿಕೊಂಡು ಭಸ್ಮಾಸುರನಂತೆ ವರ್ತಿಸಿದರು" (ಶಿವಾನಂದ ಗಾಳಿ; ೧೯೯೫; ಪು. ೫೬-೫೭). ಇದೀಷ್ಟು ಕ್ಲುಪ್ತ ಚಿತ್ರಣವನ್ನು ಈ ಕಾದಂಬರಿ ನೀಡುತ್ತದೆ. ಗಾಂಧೀಜಿ ಧರ್ಮವನ್ನು, ಜಾತಿಯನ್ನು ಮೀರಿ ಮಾನವೀಯ ಗುಣಗಳನ್ನು ಬೆಳೆಸಿಕೊಂಡ ಅಹಿಂಸಾಮೂರ್ತಿಯನ್ನಾಗಿ ಇಲ್ಲಿ ವ್ಯಕ್ತಗೊಳಿಸಲಾಗಿದೆ.

ಮಿರ್ಜಿ ಅಣ್ಣಾರಾಯರ 'ರಾಷ್ಟ್ರಪುರುಷ' ಎಂಬ ಕಾದಂಬರಿ ಗಾಂಧೀಜಿ ಅಥವಾ ಯಾವುದೇ ವ್ಯಕ್ತಿಯ ನಾಯಕತ್ವದ ಕಥೆಯನ್ನು ನಿರೂಪಿಸದೆ, 'ಅಜಿತ'ನೆಂಬ ಕಾಲ್ಪನಿಕ ನಾಯಕ ಪಾತ್ರದ ಮೂಲಕ ದೇಶದ ಸ್ವಾತಂತ್ರ್ಯ ಇತಿಹಾಸವನ್ನು ಒಂದು ಸಾಕ್ಷಿ ಚಿತ್ರದಂತೆ ಹೆಣೆದಿದೆ. "ಅಜಿತ ಎಂಬ ಜೈನ ಯುವಕ ಜಯತುನಬಿ ಎಂಬ ಮುಸಲ್ಮಾನ ತರುಣಿಯಲ್ಲಿ ಪ್ರೇಮಾಸಕ್ತನಾದರೂ ಮುಂದೆ ಆಕೆಯನ್ನು ಕೈಹಿಡಿಯಲು ಸಾಧ್ಯವಾಗದೇ ಹೋಗುತ್ತಾನೆ. ಈ ಪ್ರೇಮ ವೈಫಲ್ಯವೂ ಅತ್ಯಂತ ಸಮರ್ಪಕವೇ ಆಗಿ ಸಮರ್ಥ ರೀತಿಯಲ್ಲಿ ಚಿತ್ರಿತವಾಗಿದೆ. ಈ ಭಾವೈಕ್ಯದ ಸಾಂಕೇತಿಕ ಪ್ರಸಂಗವು ಭಾರತ ಸ್ವಾತಂತ್ರ್ಯದ ಖಂಡ ಸಾಧನೆಯ ಕತೆಯಾಗಿ ಪರಿಣಮಿಸಿದೆ. ಅಜಿತ-ಜಯತುನಬಿ ಪ್ರೇಮ ಕಥೆ ಭಾರತ - ಪಾಕಿಸ್ತಾನಗಳ ನಿರ್ಮಾಣದಂತೆ, ಅಖಂಡ ಭಾರತವು ಎರಡು ಖಂಡಗಳಾಗಿ ವಿಭಾಗಿಸಲ್ಪಟ್ಟಿದರ ಸಂಕೇತವಾಗಿದೆ.

ಭಾರತದ ಸ್ವಾತಂತ್ರ್ಯದ ಹೋರಾಟದಲ್ಲಿ ಲೋಕಮಾನ್ಯ ತಿಲಕರ ಮುಂದಾಳತ್ವದಲ್ಲಿ ಪ್ರಚಂಡ ಶಕ್ತಿಯು ನಿರ್ಮಾಣವಾಗಿ ಅಖಂಡ ಜಾಗೃತಿಯು ಒಂದು ಕ್ರಾಂತಿಯಾಗಿ ಪ್ರಜ್ವಲಿಸಿತು. ಮುಂದೆ ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಪುಟಿದೆದ್ದ ಪ್ರಜಾಶಕ್ತಿ ಮುಖ್ಯವಾಗಿ ಮೂರು ನಾಲ್ಕು ಹಂತಗಳಲ್ಲಿ ಸ್ವಾತಂತ್ರ್ಯ ದೊರಕುವ ತನಕ ೧೯೨೦, ೧೯೩೦, ೧೯೪೦, ೧೯೪೨ರಲ್ಲಿ ವಿವಿಧ ಮುಖವಾಗಿ ಹೋರಾಟ ನಡೆಯಿತು. ಹೀಗೆ ಕಾಣಿಸಿಕೊಂಡ ಚಳುವಳಿಯು ರಾಷ್ಟ್ರಶಕ್ತಿಯಾಗಿ ಗಾಂಧೀಜಿ ಪ್ರಖರವಾಗಿ ಮುಂದುವರೆದರು"(ಅದೇ; ಪು. ೫೦-೫೧). ಅಪ್ಪಟ ಗಾಂಧಿವಾದಿಗಳಾಗಿದ್ದ ಮಿರ್ಜಿ ಅಣ್ಣಾರಾಯರು ತಮ್ಮ ಕೃತಿಗಳಲ್ಲಿ ಗಾಂಧೀಜಿಯನ್ನು ರಾಷ್ಟ್ರದ ಶಕ್ತಿಯಾಗಿ ಪ್ರತಿನಿಧಿಸಿದ್ದಾರೆ.

ಹೀಗೆ ಕಾದಂಬರಿಗಳಲ್ಲಿ ನವೋದಯ ಕಾದಂಬರಿಗಾರರು ಗಾಂಧೀಜಿಯವರನ್ನು ಕಂಡರಿಸಲು ಪ್ರಯತ್ನಿಸಿದ್ದಾರೆ. ಒಟ್ಟಾರೆಯಾಗಿ ನವೋದಯ ಕಾದಂಬರಿಕಾರರು ಗಾಂಧೀಜಿಯನ್ನು ಸಮಾಜದಲ್ಲಿರುವ ಅಂಕುಡೊಂಕುಗಳನ್ನು ತಿದ್ದುವ ಮಹಾನಾಯಕನಾಗಿ, ಮಾರ್ಗದರ್ಶಕನಾಗಿ, ಒಂದು ಶಕ್ತಿಯಾಗಿ ಹಾಗೂ ಎಲ್ಲಾ ಸಮಸ್ಯೆಗಳಿಗೂ ಗಾಂಧೀಜಿ ತತ್ವಗಳಲ್ಲಿ ಪರಿಹಾರವನ್ನು ಸೂಚಿಸುವ ದೈವಿಸಂಭೂತ ನಾಗಿ, ಎಲ್ಲರನ್ನು ಭಾವಿಸಿಕೊಳ್ಳುವ ಮಾನವತಾವಾದಿಯಾಗಿ, ಎಲ್ಲಾ ಧರ್ಮಗಳನ್ನು ಸಮಾನವಾಗಿ ಕಾಣುವ ದಾರ್ಶನಿಕನಾಗಿ ಆರಾಧಿಸಿದ್ದಾರೆ.

೪.೨. ಪ್ರಗತಿಶೀಲ ಕಾದಂಬರಿ

ಕನ್ನಡ ಕಾದಂಬರಿಗಳ ಚರಿತ್ರೆಯಲ್ಲಿ ಪ್ರಗತಿಶೀಲ ಕಾದಂಬರಿಗಳದ್ದು ರೋಚಕವಾದ ಅಧ್ಯಾಯ. ಆ ಕಾಲಘಟ್ಟದಲ್ಲಿ ಬರೆಯತೊಡಗಿದ ಪ್ರಮುಖ ಲೇಖಕರು ಚಳುವಳಿಯ ಕಾಲಗರ್ಭದಲ್ಲಿ ಸಿಲುಕಿ ದಶಕಗಳು ಕಳೆದರೂ ಬರವಣಿಗೆಯನ್ನು ನಿಲ್ಲಿಸಲಿಲ್ಲ. ಹಾಗೆನೇ ವಿಭಿನ್ನ ಹಾದಿ ತುಳಿದರು. ತಮ್ಮ ಆಶಯ ಆಕೃತಿಗಳಲ್ಲಿ ಬದಲಾವಣೆ ಮಾಡಿಕೊಳ್ಳದೇ ಬರೆಯುತ್ತಾ ಹೋದವರು ಕೆಲವರಿದ್ದರೆ, ತಮಗೆ ಸಮಕಾಲೀನವಾದ ಇತರೆ ಚಳುವಳಿಗಳೊಂದಿಗೆ ಅರ್ಥಪೂರ್ಣವಾದ ಸಂವಾದ ನಡೆಸಿಕೊಂಡು ಬಂದವರು ಕೆಲವರಿದ್ದಾರೆ. ಪ್ರತಿಗಾಮಿಯೆಂದು ಕರೆಯಬಹುದಾದ ಕೃತಿಗಳನ್ನು ರಚಿಸಿದವರು ಇದ್ದಾರೆ. ವ್ಯಾಸರಾಯ ಬಲ್ಲಾಳರ ಹೆಜ್ಜೆ, ಚದುರಂಗರ 'ಹೆಜ್ಜಾಲ' ಕಾದಂಬರಿಗಳ ಹರವು ಇದೆ. ನಲವತ್ತರಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿ ಕನ್ನಡ ಸಾಹಿತ್ಯದ ಹೊಸ ತಿರುವಿಗೆ, ಲವಲವಿಕೆಗೆ, ವಾಗ್ವಾದಕ್ಕೆ ಕೇಂದ್ರಬಿಂದುವಾಯಿತು. ತ.ರಾ.ಸು., ನಿರಂಜನ, ಬಸವರಾಜ ಕಟ್ಟೀಮನಿ, ಚದುರಂಗ, ನಾಡಿಗೇರ ಕೃಷ್ಣರಾಯ, ಬೀchi, ಮಿರ್ಜಿ ಅಣ್ಣಾರಾಯ, ರಾವ್‌ಬಹದ್ದೂರ, ಶಂಕರ ಮೊಕಾಶಿ ಪುಣೇಕರ ಮುಂತಾದವರು ಈ ಚಳವಳಿಯ ಮುಂಚೂಣಿಯಲ್ಲಿದ್ದರು. ಪ್ರಗತಿಶೀಲ ಸಾಹಿತ್ಯ ಚಳವಳಿ ಜನಸಾಮಾನ್ಯರ ಬದುಕನ್ನು ಸಾಹಿತ್ಯ ವಲಯದಲ್ಲಿ ತಂದಿತು. ಸಾಹಿತ್ಯ, ಸೌಂದರ್ಯಗಳ ನೆಲೆಯನ್ನು ಜನಜೀವನದ ಬದುಕಿನಲ್ಲಿ ಕಾಣಲು ಪ್ರಯತ್ನಿಸಿತು. ಭಾಷೆಯ ಬಿಗಿಯನ್ನು ಕಡಿಮೆ ಮಾಡಿ ಜನಸಾಮಾನ್ಯರ ಕಡೆಗೆ ಹೊರಳಿತು.

ಸಂಪ್ರದಾಯ ಮನೋಭಾವ, ಮೂಢನಂಬಿಕೆ, ಜನಸಾಮಾನ್ಯರ ಶೋಷಣೆ ಮುಂತಾದುವನ್ನು ನೆಲಸಮ ಮಾಡಿ, ಅಲ್ಲಿ ಹೊಸ ಸಮಾಜದ ನಿರ್ಮಾಣದ ಆಸೆ - ಆಕಾಂಕ್ಷೆಗಳನ್ನು ಪೂರ್ಣಗೊಳಿಸುವ ದೃಷ್ಟಿಯಿಂದ ಮಾನವತಾವಾದ ಮೇಲುಗೈ ಪಡೆಯಿತು. "ಭಾರತೀಯ ಸಂಸ್ಕೃತಿಯ ಪುನರುತ್ಥಾನದ ಒತ್ತಾಸೆ ಹೆಚ್ಚಿದಂತೆ, ಗಾಂಧೀಜಿಯ ಪ್ರಭಾವ ವಲಯ ವಿಸ್ತರಿಸಿದಂತೆ, ಕರ್ನಾಟಕತ್ವದ ಕಲ್ಪನೆ ರೂಪ ತಳೆದಂತೆ ಪ್ರಗತಿಶೀಲ ಸಾಹಿತ್ಯದ ಚಳವಳಿಯ ಕಾವು ಕ್ರಮೇಣ ಕಡಿಮೆಯಾಯಿತು" (ಸಿದ್ಧಲಿಂಗಯ್ಯ.ಜಿ.ಎಸ್. ಮತ್ತು ಇತರರು(ಸಂ); ೨೦೦೧; ಪು. ೨೮೦).

ತ.ರಾ.ಸು. ಸ್ವಾತಂತ್ರ್ಯ ಸಂಗ್ರಾಮವನ್ನು ಹತ್ತಿರದಿಂದ ನೋಡಿದವರು. ಅನಂತರ ಅದರಲ್ಲಿ ಭಾಗವಹಿಸಿ ಸೆರಮನೆವಾಸವನ್ನು ಅನುಭವಿಸಿದವರು. ಹಾಗಾಗಿ ಗಾಂಧೀಜಿಯವರನ್ನು ಹತ್ತಿರದಿಂದ ಕಂಡಿರಬಹುದು. ತ.ರಾ.ಸು. ಹಲವಾರು ಐತಿಹಾಸಿಕ, ಸಾಮಾಜಿಕ ಕಾದಂಬರಿಗಳನ್ನು ರಚಿಸಿದ್ದಾರೆ. ಅವರ 'ರಕ್ತತರ್ಪಣ' ಒಂದು ಅರ್ಥದಲ್ಲಿ ಚಾರಿತ್ರಿಕ ಕಾದಂಬರಿ ಎಂದು ಹೇಳಬಹುದು. ೧೯೪೨ರ ಆಗಸ್ಟ್ ಹೋರಾಟ ಇದರ ವಸ್ತು. ಸ್ವಾತಂತ್ರ್ಯದ ಹಂಬಲವನ್ನು ಹೊತ್ತ ತರುಣನೊಬ್ಬ ಹಳ್ಳಿಯೊಂದಕ್ಕೆ ಕಾಲಿಟ್ಟದ್ದರಿಂದ ಅವರ ಬದುಕಿನ ಸ್ವರೂಪವೇ ಬದಲಾಗಿ ಹೋಗುತ್ತದೆ.

ಚಂದ್ರಶೇಖರನ ಆಗಮನದಿಂದ ಸೋಮಲಾಪುರದ ಜತೆಯಲ್ಲಿ ಸುಪ್ತವಾಗಿದ್ದ ದೇಶಪ್ರೇಮವನ್ನು ಬಡಿದೆಬ್ಬಿಸುತ್ತಾನೆ. ಹಾಗಾಗಿ ಚಂದ್ರಶೇಖರ ಗಾಂಧೀಜಿಯ ಪ್ರತಿನಿಧಿಯಾಗಿದ್ದಾನೆ. ನಂತರ ಆ

ಹಳ್ಳಿಯ ಯುವಕರನ್ನು, ಹಿರಿಯರನ್ನು, ಸ್ತ್ರೀಯರನ್ನು ಗಾಂಧೀಜಿಯವರ ಹೋರಾಟದ ಮಾರ್ಗಗಳಲ್ಲಿ ಚಂದ್ರಶೇಖರ ಅವರನ್ನೆಲ್ಲಾ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವನು. ಚಂದ್ರಶೇಖರನು ಆ ಹಳ್ಳಿಯ ಜನತೆಗೆ ಗಾಂಧೀಜಿಯ ಜೀವನದ ಕಥೆಯನ್ನು ಹೇಳುವಾಗ ತಾನೂ ಕಣ್ಣೀರಿಟ್ಟು, ಕೇಳುವವರ ಕಣ್ಣು ತೇವವಾಗುವ ಹಾಗೆ ಮಾಡುತ್ತಿದ್ದ. "ಗೌರಜ್ಜಿಯಂತೂ ಗಾಂಧೀಜಿಗೆ ಬಿಡುಗಡೆಯಾದರೆ ಸತ್ಯನಾರಾಯಣನ ವ್ರತ ಮಾಡಿಸುತ್ತೇನೆಂತ ವ್ರತತೊಟ್ಟಿದ್ದಳು" (ತ.ರಾ.ಸು.; ೨೦೦೬; ಪು. ೨೧). ಹಾಗಾಗಿ ಹಳ್ಳಿಯ ಜನ ಗಾಂಧೀಜಿಯವರನ್ನು ಆದರ್ಶ ಪುರುಷನಾಗಿ ಕಾಣುತ್ತಾರೆ. ಅವರಿಗೋಸ್ಕರ ಎಂತಹ ತ್ಯಾಗಕ್ಕೂ ಸಿದ್ಧವಾಗಿದ್ದಾರೆ ಎಂದು ಈ ಕಾದಂಬರಿ ವಿವರಿಸುತ್ತದೆ. ಪರದೇಶಿಗಳು ನಮ್ಮ ದೇಶವನ್ನು ಆಕ್ರಮಿಸಿಕೊಂಡು, ನಮ್ಮನ್ನೆಲ್ಲಾ ಗುಲಾಮರನ್ನಾಗಿ ಮಾಡಿದ್ದಾರೆ. "ಈ ದೇಶ ನಮ್ಮದು. ನೀವು ಹೊರಗಿನಿಂದ ಬಂದ ಮಾರಿಗಳು. ಬಿಟ್ಟು ಹೋಗಿ, ತೊಲಗಿ ಎಂದು ಹೇಳುತ್ತಿದೆ ಕಾಂಗ್ರೆಸ್. ನಮ್ಮದನ್ನು ನಮಗೆ ಕೊಡಿ ಎಂದುದಕ್ಕಾಗಿಯೇ ಸಾವಿರಾರು ಜನರ ಪ್ರಾಣ ಹೀರಿದೆ ಈ ಪರದೇಶಿ ಮಾರಿ; ಕೋಟ್ಯಾಂತರ ಜನರನ್ನು ಕಳ್ಳಕಾಕರಂತೆ ಜೈಲಿಗಟ್ಟಿದೆ; ಲಾಠಿ ಬಂದೂಕಿನೇಟುಗಳ ಮಳೆಗೆರೆದು ನಮ್ಮ ಭೂಮಿಯನ್ನು ನೆತ್ತರಿನಲ್ಲಿ ನೆನೆಸಿದ್ದಾರೆ. ಇದುವರೆಗೂ ಇವರಿಗೆ ಒಳ್ಳೆಯ ಮಾತಿನಲ್ಲಿ ಹೇಳಿದ್ದಾಯಿತು. ಅಣ್ಣ ಅಪ್ಪ ಎಂದದ್ದಾಯಿತು. ಆದರೆ ರಕ್ತಹೀರಿ ಕೊಬ್ಬಿದ ಈ ತೋಳಗಳು ಒಳ್ಳೆಯ ಮಾತಿಗೆ ಬಗ್ಗಿಯಾವೇ? ಈಗ ಬುದ್ಧಿ ಕಲಿಸಬೇಕಾಗಿದೆ. ಆದ್ದರಿಂದಲೇ ಗಾಂಧೀಜಿ ಒಳ್ಳೆ ಮಾತಿನಲ್ಲಿ ಹೋಗಿ ಎನ್ನುವುದನ್ನು ಬಿಟ್ಟು, ನಾಯಿಯನ್ನು 'ಹಚಾ' ಎನ್ನುವ ಹಾಗೆ "ಭಾರತ ಬಿಟ್ಟು ತೊಲಗಿ" ಎಂದು ಹೇಳಿದ್ದಾರೆ. ಹಾಗಾಗಿ ಗಾಂಧೀಜಿ ಹೇಳಿದಾಗೆ ಕೇಳಬೇಕು..... ಗಾಂಧೀಜಿ ಹೇಳಿದಾಗೆ ಅಹಿಂಸೆಯಿಂದಿರಬೇಕು; ಶಿಸ್ತಿನಿಂದಿರಬೇಕು. ಪ್ರಾಣ ಹೋದರೂ ಮುಂದಿಟ್ಟ ಹೆಜ್ಜೆ ಹಿಂದಿಡಬಾರದು"(ಅದೇ; ಪು. ೩೨-೩೩) ಎಂದು ಚಂದ್ರಶೇಖರ ಹಳ್ಳಿಗರಿಗೆ ಗಾಂಧೀಜಿಯ ಹೋರಾಟದ ಅಸ್ತ್ರಗಳನ್ನು ತಿಳಿಸುತ್ತಾನೆ. ಗಾಂಧೀಜಿಯವರನ್ನು ದೇಶಕ್ಕೆ ಒಬ್ಬ ಮಹಾನಾಯಕ ಎಂಬಂತೆ ಇಲ್ಲಿ ಚಿತ್ರಿಸಲಾಗಿದೆ. ಗಾಂಧೀಜಿ ಪ್ರಮುಖ ಪಾತ್ರವಾಗಿ ಕಾದಂಬರಿಯಲ್ಲಿ ಎಲ್ಲೂ ಕಾಣಬರುವುದಿಲ್ಲ. ಗಾಂಧೀಜಿಯ ಮಾತುಗಳನ್ನು, ಚಿಂತನೆಗಳನ್ನು ಚಂದ್ರಶೇಖರ ಪಾತ್ರದ ಮೂಲಕ ತ.ರಾ.ಸು. ಅವರು ವ್ಯಕ್ತಪಡಿಸಿದ್ದಾರೆ. ಗಾಂಧೀಜಿಯನ್ನು ಇಲ್ಲಿ ಆದರ್ಶೀಯ ನೆಲೆಯಲ್ಲಿ ಪ್ರತಿಪಾದಿಸಿದ್ದಾರೆ.

ವ್ಯಾಸರಾಯ ಬಲ್ಲಾಳರು ಪ್ರಗತಿಶೀಲರಲ್ಲಿ ಪ್ರಮುಖರು. ಇವರು ಗಾಂಧೀಜಿಯನ್ನು ಹೆಜ್ಜೆ..., ಹೇಮಂತಗಾನ ಕಾದಂಬರಿಗಳಲ್ಲಿ ಮುಖ್ಯ ಭೂಮಿಕೆಯಲ್ಲಿಟ್ಟುಕೊಂಡು ರಚಿಸಿದ್ದಾರೆ. "ಭಾರತದ ರಾಜಕೀಯ ಇತಿಹಾಸದ ಗತಿಗೆ ಸ್ಪಂದಿಸುತ್ತ ಬಂದ ಸಾಮಾಜಿಕ ಪರಿವರ್ತನೆಗಳಿಗೆ ಒಂದು ಸೃಜನಶೀಲ ಚೌಕಟ್ಟನ್ನು ಒದಗಿಸುವ ಆಶಯದ ಕೃತಿ ನನ್ನ 'ಹೆಜ್ಜೆ...' ನನ್ನ 'ಹೇಮಂತಗಾನ', 'ಬಂಡಾಯ' ಕಾದಂಬರಿಗಳ ನಂತರ ರಾಜಕೀಯವೆನಿಸಬಹುದಾದ ವಸ್ತುವನ್ನು ಆರಿಸಿಕೊಂಡ ಕಾದಂಬರಿ ಇದು. ನಾವು ರಾಷ್ಟ್ರಪಿತನೆಂದು ಗೌರವಿಸುತ್ತಿರುವ ಮಹಾತ್ಮ ಗಾಂಧಿ ತನ್ನ ಜೀವಿತಾವಧಿಯಲ್ಲಿ ವ್ಯಕ್ತಿಯಾಗಿಯೂ, ನೈತಿಕತೆಯ ಎಚ್ಚರ ತರುವ ಶಕ್ತಿಯಾಗಿಯೂ, ಭಾರತೀಯರ

ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕ ನಡೆವಳಿಕೆಗಳನ್ನು ತಟ್ಟುತ್ತ ಬಂದ ಬಗೆ, ಮುಂದೆ ಭಾರತದ ದೀರ್ಘಕಾಲದ ವರ್ತಮಾನದ ಇತಿಹಾಸ ಕಂಡುಕೊಂಡ ತಿರುವುಗಳು, ಮೂಡಿಸಿದ ಹೆಜ್ಜೆಗಳು, ಇವುಗಳಿಗೆ ಕಾದಂಬರಿಯ ರೂಪ ಕೊಡಬೇಕು ಎನ್ನುವ ನನ್ನ ಆಸೆಯ ಮೊದಲ ಹೆಜ್ಜೆ, ಈ ಹೆಜ್ಜೆ... ಮಹಾತ್ಮಾಗಾಂಧಿ ತನ್ನ ರಚನಾತ್ಮಕ ಕಾರ್ಯಕ್ರಮಗಳ ಕುರಿತು ಪ್ರಚಾರದ ಆಸಕ್ತಿಯಿಂದ ದಕ್ಷಿಣ ಭಾರತಕ್ಕೆ ಬಂದ ಮೂವತ್ತರ ದಶಕದಿಂದ, ಜನವರಿ ೩೦, ೧೯೪೮ರಂದು ಅವರ ಹತ್ಯೆಯಾದ ತನಕದ ಕಾಲವನ್ನು 'ಹೆಜ್ಜೆ...'ಯ ಕಥಾನಕದ ವ್ಯಾಪ್ತಿಗೆ ಒಳಪಡಿಸಿದ್ದೇನೆ" (ವ್ಯಾಸರಾಯ ಬಲ್ಲಾಳ; ೨೦೦೦; ಪು. ಮುನ್ನುಡಿ) ಎಂದು ವ್ಯಾಸರಾಯ ಬಲ್ಲಾಳರು ತಮ್ಮ 'ಹೆಜ್ಜೆ"..." ಕಾದಂಬರಿಯ ಮುನ್ನುಡಿಯಲ್ಲಿ ಹೇಳಿದ್ದಾರೆ.

ಈ ಕಾದಂಬರಿ ಬ್ರಾಹ್ಮಣ ಕುಟುಂಬದ ಸಂಪ್ರದಾಯ ಮತ್ತು ಗಾಂಧಿವಾದದ ನಡುವಿನ ಸಂಘರ್ಷವನ್ನು ಬಿಂಬಿಸುತ್ತದೆ. ಇಲ್ಲಿ ಸಾವಿತ್ರಿಯ ಸ್ತ್ರೀ ಪಾತ್ರದ ಮೂಲಕ ಗಾಂಧೀಜಿಯವರನ್ನು, ಗಾಂಧೀ ಚಿಂತನೆಗಳನ್ನು ಕಾದಂಬರಿಕಾರರು ಅನಾವರಣಗೊಳಿಸುತ್ತಾರೆ. ಹಾಗಾಗಿ ಸಾವಿತ್ರಿ ಈ ಕಾದಂಬರಿಯ ಮುಖ್ಯವಾಹಿನಿಯಾಗಿದ್ದಾಳೆ. ಸಂಪ್ರದಾಯಸ್ಥರಾದ ಶ್ರೀಕಂಠಶಾಸ್ತ್ರಿಗಳ ಎರಡನೆಯ ಸೊಸೆ ಈ ಸಾವಿತ್ರಿ. ಈಕೆ ವಿದ್ಯಾವಂತೆ. ಹಿಂದಿ - ಇಂಗ್ಲೀಷ್ ಎರಡನ್ನು ಬಲ್ಲವಳು. ಗಾಂಧೀಜಿ ರಚನಾತ್ಮಕ ಕಾರ್ಯಕ್ರಮಗಳ ಪ್ರಚಾರಕ್ಕೆ ಉಡುಪಿಗೆ ಬಂದಾಗ ತನ್ನ ಚಿಕ್ಕಪ್ಪನ ಜೊತೆಯಲ್ಲಿ ಹೋಗಿ ಗಾಂಧೀಜಿಯನ್ನು ಪ್ರತ್ಯಕ್ಷವಾಗಿ ಕಂಡು ಹೂಮಾಲೆಯನ್ನು ಹಾಕುತ್ತಾಳೆ. ಅವರ ದರ್ಶನದಿಂದಲೇ ಗಾಂಧೀಜಿಯ ಆರಾಧಕಳಾಗಿ ಮಹಾ ಗಾಂಧಿಭಕ್ತೆಯಾಗುತ್ತಾಳೆ. ಬ್ರಾಹ್ಮಣರಾದ ಶ್ರೀಕಂಠಶಾಸ್ತ್ರಿಗಳಿಗೆ ಗಾಂಧೀಜಿ ಎಂದರೆ ವಿರೋಧ. ಯಾಕೆಂದರೆ "ಹೊಲೆಯರನ್ನೆಲ್ಲ ದೇವಸ್ಥಾನಕ್ಕೆ ಹೋಗೋ ಹಾಗೆ ಏನೇನೋ ಕುತಂತ್ರ ಮಾಡುವ ಗಾಂಧಿ(ಅದೇ; ಪು. ೧೦) ಎಂದು. ಶಾಸ್ತ್ರಿಯವರ ಮಡದಿ "ಎಲ್ಲಿಂದ ಬಂದನೋ ಈ ಗಾಂಧಿ- ನಮ್ಮ ಸಂಸ್ಕಾರಗಳನ್ನೆಲ್ಲ ಹಾಳುಗೆಡವೋದಕ್ಕೆ... ಸತ್ಯಾಗ್ರಹಾಂತೆ..... ಸತ್ಯ ಇವನಿಗೊಬ್ಬನಿಗೇ ತಿಳಿದಿರೋ ಹಾಗೆ. ಇದೆಲ್ಲ ದುರಾಗ್ರಹ..... ಗುರುವಾಯೂರು ದೇವಸ್ಥಾನಕ್ಕೂ ಹೊಲೆಯರು ಹೋಗಬೇಕು, ಇಲ್ಲವಾದರೆ ಉಪವಾಸ ಅಂತ ಇದಕ್ಕೆ ಬೆದರಿಕೆ ಬೇರೆ.... ತಿರುವಾಂಕೂರಿನ ಅನಂತಶಯನ ದೇವಸ್ಥಾನಕ್ಕೂ ಹಾಗೇ ಅಂತೆ. ನಮ್ಮ ಏಕಾದಶಿ ವ್ರತ ಇವನಿಗೆ ಹಟದ ಒಂದು ಅಸ್ತ್ರವಾಗಿದೆ. ಅದಕ್ಕೆ ಉಪವಾಸ, ಇದಕ್ಕೆ ಉಪವಾಸ. ಇಲೆಕ್ಶನ್ ಅಂತೆ, ಪಿಲೆಕ್ಶನ್ ಅಂತೆ. ಅದಕ್ಕೂ ಉಪವಾಸ. ಸರಕಾರದ ವಿರುದ್ಧ ಉಪವಾಸ... ಆ ಫರಂಗಿ ಜನ ಇದಕ್ಕೆಲ್ಲ ಹೆದರ್ರೋತಾರೆಯೇ?"(ಅದೇ; ಪು. ೧೩) ಎಂದು ಗಾಂಧೀಜಿಯನ್ನು ಮೂದಲಿಸುತ್ತಾಳೆ.

ವಿದ್ಯಾಧರ ಗಾಂಧಿಭಕ್ತಳಾದ ತನ್ನ ಹೆಂಡತಿ ಸಾವಿತ್ರಿಯಿಂದ ಪ್ರಭಾವಗೊಂಡು ಬದಲಾವಣೆಯನ್ನು ಹೊಂದುತ್ತಾನೆ. ತನ್ನ ಶಿಕ್ಷಕ ವೃತ್ತಿಧರ್ಮವನ್ನು ವಿಸ್ತರಿಸಿಕೊಂಡು ಕೆಂಚ ಹಾಗೂ ಇನ್ನಿತರ ಹರಿಜನ ಮಕ್ಕಳಿಗೆ ವಿದ್ಯೆ ಕಲಿಸುತ್ತಾನೆ ಮತ್ತು ಗಾಂಧಿಟೋಪಿ ಕೊಡಿಸುತ್ತಾನೆ. ಇಲ್ಲಿ ಗಾಂಧಿ ಟೋಪಿ ಬದಲಾವಣೆಯ ಸಂಕೇತವಾಗಿ ಬಂದಿದೆ. ಸಂಪ್ರದಾಯವನ್ನು ಮುರಿಯುವ ಹಾಗೂ ಹರಿಜನರ ಉದ್ಧಾರ ಮಾಡುವ ಸಂಕೇತವಾಗಿ ಗಾಂಧಿಟೋಪಿಯನ್ನು ಪ್ರತಿಪಾದಿಸಿದ್ದಾರೆ.

ಹೀಗೆ ಸಂಪ್ರದಾಯಸ್ಥ ಮನೆಯನ್ನು ಸಾವಿತ್ರಿಯ ಮೂಲಕ ಗಾಂಧೀ ಚಿಂತನೆಗಳು ಪ್ರವೇಶಿಸಿ ಆ ಮನೆಯ ಮೌಢ್ಯತೆಗಳನ್ನು ಒಂದೊಂದಾಗಿ ಕಳಚುತ್ತಾಳೆ. ಸಾವಿತ್ರಿ ವಿದ್ಯಾಧರ ಮನೆಯವರ ವಿರೋಧ ಎದುರಿಸಿ ಮುಂಬಯಿಗೆ ಬರುತ್ತಾರೆ. ೧೯೪೨ರ ಚಲೇಜಾವ್ ಚಳವಳಿಯಲ್ಲಿ ವಿದ್ಯಾಧರ ಪೊಲೀಸರ ಗುಂಡಿಗೆ ಬಲಿಯಾಗುತ್ತಾನೆ. ೧೯೪೮ರಲ್ಲಿ ಗಾಂಧಿಯನ್ನು ಕೊಂದ ಸುದ್ದಿ ಕೇಳಿ ಸಾವಿತ್ರಿ ದಿಕ್ಕು ತೋಚದವಳಾಗುತ್ತಾಳೆ. ಅದೇ ಸಂದರ್ಭಕ್ಕೆ ಅವಳ ಮಾವ ಶ್ರೀಕಂಠಶಾಸ್ತ್ರಿಗಳು ತಮ್ಮ ಕುಟುಂಬದವರ ಅಸ್ಥಿಯನ್ನು ತರುತ್ತಾರೆ. ಅವರ ವೇಷಭೂಷಣದಲ್ಲಿ ಗಾಂಧೀಜಿಯವರು ಆವರಿಸಿಕೊಂಡಿರುತ್ತಾರೆ. ತಲೆಯ ಮೇಲೆ ಗಾಂಧೀ ಟೋಪಿಯನ್ನು ಧರಿಸುತ್ತಾರೆ. ಸಾವಿತ್ರಿ ತನ್ನ ಮಾವನನ್ನು ನೋಡಿ "ಗಾಂಧಿ ಇನ್ನಿಲ್ಲ ಮಾವಯ್ಯ. ಗಾಂಧಿ ಇನ್ನಿಲ್ಲ.... ಟೋಪಿ ಮಾತ್ರ ಉಳಿದಿದೆ"(ಅದೇ; ಪು. ೪೮೮) ಎನ್ನುತ್ತಾಳೆ. ಇಲ್ಲಿ ಶಾಸ್ತ್ರಿಗಳು ತಂದ ಚಿತಾಭಸ್ಮ ಗಾಂಧೀಜಿಯನ್ನು ವಿರೋಧಿಸಿದವರ ಅಂತ್ಯವನ್ನು ಮತ್ತು ಮೌಢ್ಯ ಸಂಪ್ರದಾಯದ ಅಂತ್ಯವನ್ನು ಸಂಕೇತಿಸುತ್ತದೆ. ಗಾಂಧಿ ಟೋಪಿ ಮಾನವೀಯ ಗುಣಗಳು, ಮೌಢ್ಯ ಸಂಪ್ರದಾಯದ ಬದಲಾವಣೆಯ ಸಂಕೇತವಾಗಿ ಚಿತ್ರಿಸಲಾಗಿದೆ. ಹಾಗಾಗಿ ಗಾಂಧೀಜಿ ಇಲ್ಲಿ ನೈತಿಕತೆಯ ಎಚ್ಚರ ತರುವ ಶಕ್ತಿಯಾಗಿ ಪ್ರತಿಪಾದಿತಗೊಂಡಿದ್ದಾರೆ. ವಿದ್ಯಾಧರನ ಓದು, ಚಿಂತನೆಗಳು ಅವನನ್ನು ಗಾಂಧೀ ಪರಿಸರಕ್ಕಿಂತ ಭಿನ್ನವಾಗಿಯೇ ಮಾಡಿವೆ. "ಸ್ವಾತಂತ್ರ್ಯ ಗಳಿಕೆಗೆ ಬರೀ ಗಾಂಧೀಮಾರ್ಗವೇ ಸಾಕೇ" ಎಂಬ ಪ್ರಶ್ನೆಯು ಅವನನ್ನು ಬಾಧಿಸುತ್ತದೆ. ಆದರೆ ಗಾಂಧಿಯನ್ನು ನೆಚ್ಚಿಕೊಂಡ ಸಾವಿತ್ರಿಗೆ ಆ ಬಗೆಯ ಪರಕೀಯತೆ ಇಲ್ಲ- ಗಾಂಧೀಯ ತತ್ವಗಳು ಬಹುಮಟ್ಟಿಗೆ ಭಾರತೀಯ ಮೌಲ್ಯಗಳಲ್ಲೇ ಬೇರೂರಿದ್ದವೆಂಬ ಕಾರಣದಿಂದ ಇರಬಹುದು. ವಿದ್ಯಾಧರನಿಗೆ ಗಾಂಧಿಯ ಅಹಿಂಸಾವಾದದಲ್ಲಿ ಸಂಪೂರ್ಣ ನಂಬಿಕೆ ಇಲ್ಲ. ಸಾವಿತ್ರಿ ಗಾಂಧಿ ತತ್ವಗಳನ್ನು ಪ್ರಶ್ನಿಸದೆ ಶ್ರದ್ಧಾಭಕ್ತಿಗಳಿಂದ ಸ್ವೀಕರಿಸಿದವಳು. ವಿದ್ಯಾಧರನಿಗೆ ಅಹಿಂಸಾ ಮಾರ್ಗ ಅತೀ ನಿಧಾನಗತಿ, ಬ್ರಿಟೀಷರನ್ನು ಭಾರತದಿಂದ ಓಡಿಸಲು ಕಮ್ಯುನಿಸಂ ಸರಿಯಾದ ಮಾರ್ಗವೆಂದು ತಿಳಿಯುತ್ತಾನೆ. ಬ್ರಿಟೀಷರು ನಮ್ಮ ಸಾಮಾಜಿಕ, ಜಾತೀಯ ಕಟ್ಟುಪಾಡುಗಳ ವ್ಯವಸ್ಥೆಯಲ್ಲಿ ಕೈಹಾಕುವುದಿಲ್ಲವೆಂದು, ನಮ್ಮ ಮತಾಚಾರಗಳನ್ನು ಯಾವ ತೊಂದರೆಯೂ ಇಲ್ಲದೆ ನಡೆಸಿಕೊಂಡು ಹೋಗಬಹುದೆಂದು ನಮ್ಮ ದೇಶದ ಸಂಪ್ರದಾಯಸ್ಥ ಜನತೆ ನಂಬಿದ್ದರು. ಆದರೆ ಬ್ರಿಟೀಷರು ಜಾತೀಯತೆಯ ಏಣಿಶ್ರೇಣಿಗಳ ಲಾಭ ಪಡೆಯುತ್ತಿರುವುದು ನಮ್ಮ ಜನರ ಕಲ್ಪನೆಗೆ ತಿಳಿಯುತ್ತಿರಲಿಲ್ಲ. ಅಂಥ ಸಂದರ್ಭದಲ್ಲಿ ವೈಯಕ್ತಿಕ, ಸಾಮಾಜಿಕ, ರಾಜಕೀಯ ವಿಚಾರಗಳಿಗೆಲ್ಲ ಗಾಂಧೀಜಿ ಸಂಬಂಧ ಕಲ್ಪಿಸಿ ತಿಳಿಯಪಡಿಸಲು ಪ್ರಯತ್ನಿಸಿದರು. ಸ್ವಾತಂತ್ರ್ಯದ ಹೆಸರಿನಲ್ಲಿ ನಮ್ಮ ಕುಲವನ್ನೆಲ್ಲ ಹಾಳು ಮಾಡಲು ಹೊರಟಿರುವವನು ಗಾಂಧಿ ಎಂದು ಆ ಕಾಲದ ಆಚಾರವಂತರ ಆಕ್ರೋಶಕ್ಕೆ ಕಾರಣರಾದರು. ಆದರೆ, ಈ ಕಾದಂಬರಿಗಳ ಕಡೆಯಲ್ಲಿ ಅಂತಹ ಆಚಾರವಂತರೂ ಗಾಂಧೀಜಿಯ ಪ್ರಭಾವದಿಂದ ಬದಲಾಗುವುದನ್ನು ಚಿತ್ರಿಸಲಾಗಿದೆ. ಅದಕ್ಕೆ ಉದಾ:- ಗಾಂಧಿ ಸತ್ತ ದಿನ ಮುಂಬಯಿಗೆ ಬಂದು ಇಡೀ ಜನಸ್ತೋಮ ಕಣ್ಣೀರಿಡುವುದನ್ನು ಕಂಡ ಶಾಸ್ತ್ರಿಗಳಿಗೆ ಗಾಂಧಿಯ ಹಿರಿತನದ ಅರಿವಾಗಿ 'ಸುಮ್ಮಗೆ ಮಹಾತ್ಮ ಅಂತ ಕರೀತಾರೆಯೇ" ಎನ್ನುತ್ತಾರೆ.

ವ್ಯಾಸರಾಯ ಬಲ್ಲಾಳರ ಮತ್ತೊಂದು ಕಾದಂಬರಿ 'ಹೇಮಂತಗಾನ'. ಇದೊಂದು ಕುಟುಂಬ ಕೇಂದ್ರಿತ ಕಾದಂಬರಿ. ಸಾಮಾಜಿಕವಾದದ ಎಲ್ಲ ಬಗೆಯ ಚಿಂತನೆ, ಆಂದೋಲನ, ಕ್ರಾಂತಿಗಳು ಕುಟುಂಬದ ಒಳಗೆ ಲೀನವಾಗಿ ಬಿಡುತ್ತವೆ. ಇಲ್ಲಿನ ಪಾತ್ರಗಳು ಸಾಮಾಜಿಕ ಗುರುತಿಸುವಿಕೆಗೆ ಹಾತೊರೆಯುತ್ತವೆ. 'ಹೇಮಂತಗಾನ' ಕಾದಂಬರಿಯ ವಸ್ತು ನೇರವಾಗಿ ಕುಟುಂಬಕ್ಕೆ ಸಂಬಂಧಿಸಿದೆ. ಇದು ೧೯೫೪ರಲ್ಲಿ ಪ್ರಕಟಗೊಂಡಿದೆ. ಇದರ ಮುಖ್ಯ ಆಶಯ ಸ್ವಾತಂತ್ರ್ಯದ ಆದರ್ಶ. ಸ್ವಾತಂತ್ರ್ಯಕ್ಕಾಗಿ ನಡೆಯುವ ಹೋರಾಟದ ಚಿತ್ರಣವಿಲ್ಲಿದೆ. ಬ್ರಿಟೀಷರ ಅಧೀನತೆಯಿಂದ ಸ್ವಾತಂತ್ರ್ಯ ಪಡೆಯುವ, ಬಡತನದಿಂದ ಮುಕ್ತರಾಗಿ ಸ್ವತಂತ್ರರಾಗುವ, ಅಜ್ಞಾನದ ವಿರುದ್ಧ ಹೋರಾಟ ನಡೆಸಿ ಬಿಡುಗಡೆಗೆ ಹೋರಾಡುವ ಕಥೆ ಹೊಂದಿದೆ. ಅನಂತ, ಭಾರತಿ, ಇಂದಿರಾ, ರಾಜೀವ ಇವರಿಗೆ ಆಗುವ ಹಾನಿ, ಅಘಾತಗಳು 'ಕಹಳೆ' ಪತ್ರಿಕೆಯ ಮೂಲಕ ಸೋಮಯಾಜಿಗಳ ಬದುಕು ಎದುರಿಸುವ ಸವಾಲುಗಳು, ಇದರ ಜೊತೆಗೆ ದೇಶದ ವಿಭಜನೆಯ ನಂತರದಲ್ಲಿ ಸಂಭವಿಸುವ ಕೋಮು ಗಲಭೆ, ಕೊಲೆ - ಸುಲಿಗೆಗಳ ತಾಂಡವ, ಮನುಷ್ಯರ ಸ್ವಾರ್ಥ, ಬಡತನ, ಅಸಮಾನತೆ ಮೊದಲಾದ ವಾಸ್ತವಗಳು; ಇವುಗಳನ್ನು ಮೀರಿ ನಿಲ್ಲುವ ಆದರ್ಶ ಇಂತಹ ಸಂಕ್ರಮಣ ಸ್ಥಿತಿಯಲ್ಲಿರುವ ಒಂದು ಸಮಾಜದ ಕರಾಳ ಚಿತ್ರ ಈ ಕಾದಂಬರಿಯಲ್ಲಿ ಕಾಣಿಸುತ್ತದೆ.

ಸ್ವಾತಂತ್ರ್ಯ ಹೋರಾಟದಲ್ಲಿ ತನ್ನನ್ನು ತೊಡಗಿಸಿಕೊಂಡು ಬಿ.ಎ. ಮುಗಿಸಲಾರದೆ, ಜೈಲು ಸೇರಿ ಹೊರಬಂದ ಅನಂತನಿಗೆ ಹೆಂಡತಿ ತನ್ನೆಲ್ಲ ಹೋರಾಟ ಕಾರ್ಯಗಳಿಗೆ ಶಕ್ತಿಯಾಗಿ ನಿಲ್ಲಬೇಕೆಂದು ನಿರೀಕ್ಷಿಸುತ್ತಾನೆ. ಹಾಗೆಯೇ ಇಂದಿರೆಯ ಪರಿಚಯವಾದ ನಂತರ ಅವಳಲ್ಲಿ ತನ್ನ ಹೋರಾಟಕ್ಕೆ ಬೆಂಬಲವಾಗಿ ನಿಲ್ಲಬಲ್ಲಂತಹ ಆಸರೆಯ ವ್ಯಕ್ತಿತ್ವವನ್ನು ಅವಳಲ್ಲಿ ಗುರುತಿಸಿ ಅವಳೇ ತನ್ನ ಜೀವದ ಜೀವ ಎಂದುಕೊಳ್ಳುತ್ತಾನೆ. ಆದರೆ ಅನಂತನ ಈ ಇಬ್ಬರ ಮಹಿಳೆಯರ ನಿರೀಕ್ಷೆಗಳು ಬೇರೆಯೇ ಆಗಿದ್ದರಿಂದ ಅನಂತ ಸೋಲುತ್ತಾನೆ.

ಅನಂತನ ಹೆಂಡತಿ ಭಾರತಿ ತನ್ನ ಗಂಡನೊಡನೆ ಮುಂಬೈಯಲ್ಲಿ ತನ್ನದೇ ಆದ ಸುಂದರ ಸಂಸಾರ ಹೂಡುವ ಆಸೆ ಹೊತ್ತು ಬರುತ್ತಾಳೆ. ಅವಳ ನಿರೀಕ್ಷೆಯ ಮುಂದೆ ಗಂಡನ ಹೋರಾಟದ ಬದುಕಿನ ಭಾಷೆ ಅವಳಿಗೆ ಅರ್ಥವಾಗುವುದಿಲ್ಲ. ತಾನು ಗರ್ಭಿಣಿ ಎಂದಾಗಲೂ ಸಂತೋಷ ತೋರಿಸದ ಗಂಡನಿಂದಾಗಿ ಅವಳ ನಿರೀಕ್ಷೆಗಳೆಲ್ಲಾ ಕುಸಿಯುತ್ತವೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಆತ್ಮಾರ್ಪಣೆ ಮಾಡಿಕೊಂಡ ಕೇಶವನ ವಿಧವೆ ಇಂದಿರೆಯ ವ್ಯಕ್ತಿತ್ವದಿಂದ ಅನಂತ ಆಕರ್ಷಿತನಾಗುತ್ತಾನೆ. ಇಂದಿರೆ ತೋರಿಸಿದ ಸಲಿಗೆಯನ್ನು ಅಪಾರ್ಥ ಮಾಡಿಕೊಂಡ ಅನಂತ ವರ್ತಿಸುವ ರೀತಿಯು ಅವರಿಬ್ಬರ ನಡುವೆ ಕಂದಕವನ್ನು ಸೃಷ್ಟಿ ಮಾಡಿತಲ್ಲದೆ ಅವರ ಆದರ್ಶ ಹೋರಾಟಕ್ಕೂ ಪೆಟ್ಟು ಕೊಡುತ್ತದೆ. ಆದರ್ಶದ ಹೋರಾಟದಲ್ಲಿ ಆಯುಧಗಳಾಗಿ ದುಡಿದ ಕೇಶವ, ರಾಜೀವ ಮತ್ತು ಅನಂತ ಅವರುಗಳ ಮರಣಕ್ಕೆ ಇಂದಿರೆ ಪ್ರತಿಕ್ರಿಯಿಸುವ ರೀತಿ ಅವಳ ಜೀವನದ ಬದ್ಧತೆಯನ್ನು ಪ್ರಕಟಿಸುತ್ತದೆ. ಇಂತಹ ಸಶಕ್ತ ಪಾತ್ರವಾದ 'ಇಂದಿರೆ' ಬಲ್ಲಾಳರ ಹೆಜ್ಜೆ.... ಕಾದಂಬರಿಯಲ್ಲಿನ 'ಸಾವಿತ್ರಿ'ಯ ಪಾತ್ರವನ್ನು ಮುಂದುವರೆಸುತ್ತದೆ ಎಂದೆನಿಸುತ್ತದೆ.

ಈ ಕಾದಂಬರಿಯಲ್ಲಿ ಇಂದಿರೆ ಒಬ್ಬ ಸಶಕ್ತ ಗಾಂಧಿ ಭಕ್ತಳು. ಅನಂತ ಬಾಲ್ಯದಲ್ಲಿಯೇ ಅಂದರೆ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಿನಿಂದ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಿಗೆ ಪ್ರಭಾವಿತನಾಗಿ ಬಿ.ಎ. ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ ಚಳವಳಿಗೆ ಧುಮುಕಿದನು. ಸ್ವಾತಂತ್ರ್ಯ ಬಂದ ಆರು ತಿಂಗಳಿನಲ್ಲಿ ಗಾಂಧೀಜಿಯವರ ಹತ್ಯೆ ನಡೆದ ಸುದ್ದಿಯನ್ನು ಇಂದಿರೆಯಿಂದ ಸುಧಾರಿಸಿಕೊಳ್ಳುವುದು ಕಷ್ಟವಾಗುತ್ತದೆ. ಅನಂತನ ಎದುರಿಗೆ ಇಂದಿರೆ ಬಾಪುವನ್ನು ಗುಂಡಿಕ್ಕಿ ಕೊಂದಿದ್ದಾರಂತೆ - ಇವೊತ್ತು ಸಂಜೆ, ಐದೂವರೆಗೆ, ಬಹಳ ಪ್ರಯಾಸದಿಂದ ಇಂದಿರೆ ಆ ಮಾತನ್ನು ಹೇಳಿದಳು. ಆದರೆ ಪುನಃ ದುಃಖಕ್ಕೆ ಬಂದು ಆಕೆಗೆ ಮಾತನಾಡುವುದು ಕಷ್ಟವಾಯಿತು. ಅನಂತ ನಿಂತಲ್ಲಿಯೇ ಕುಸಿದು ಬಿದ್ದ. ಬಾಪೂ ಇನ್ನಿಲ್ಲ! ಬಾಪುವಿನ ಕೊಲೆ!! ಗ್ರಾಮರಾಜ್ಯದ, ಸ್ವತಂತ್ರ ಭಾರತದ ಸಮಾನಾವಕಾಶದ ಸುಂದರ ಭಾರತದ ಕನಸು ಕಾಣುತ್ತಿದ್ದ ಸ್ವಾತಂತ್ರ್ಯ ಮಂದಿರದ ಮಹಾನ್ ಶಿಲ್ಪಿ ಇನ್ನಿಲ್ಲ!" (ವ್ಯಾಸರಾಯ ಬಲ್ಲಾಳ; ೨೦೦೫; ಪು. ೨೨೩) ಎಂದು ಹೇಳುತ್ತಾಳೆ. ಅಂದು ಇಡೀ ಭಾರತ ದೇಶ ದುಃಖದ ಸಾಗರದಲ್ಲಿ ಮುಳುಗಿದ್ದುದನ್ನು ಕಾದಂಬರಿಕಾರರು ವಿವರಿಸಿದ್ದಾರೆ. ಇಲ್ಲಿ ಗಾಂಧೀಜಿಯನ್ನು ಗ್ರಾಮರಾಜ್ಯದ, ಸ್ವತಂತ್ರ ಭಾರತದ, ಸಮಾನತೆಯಿಂದ ಕೂಡಿದ ಭವ್ಯ ಭಾರತದ ಮಹಾನ್ ಶಿಲ್ಪಗಾರನಾಗಿ ಪ್ರತಿನಿಧಿಸಿದ್ದಾರೆ. ದೇಶದಲ್ಲಿರುವ ಮೂಢನಂಬಿಕೆ, ಅನಾಚಾರ, ದುರಾಡಳಿತ, ಬ್ರಿಟೀಷರ ದಬ್ಬಾಳಿಕೆ - ಅಟ್ಟಹಾಸ, ಜಾತೀಯತೆ ಮುಂತಾದವುಗಳನ್ನು ಗಾಂಧೀಜಿ ತನ್ನ ಸತ್ಯ-ಅಹಿಂಸೆಯಂತಹ ಉಳಿಗಳಿಂದ ಕಟೆದು ಭಾರತ ಸುಂದರ ಶಿಲ್ಪವಾಗಿ ಪೂರ್ಣಗೊಳ್ಳುವ ಮೊದಲೇ ಆ ಮಹಾನ್ ಶಿಲ್ಪಿಯನ್ನು ಹತ್ಯೆಗೈಯಲಾಗಿದೆ ಎಂದು ಈ ಕಾದಂಬರಿ ವಿವರಿಸುತ್ತದೆ.

"ಒಂದು ಮಾನವ ಹೃದಯದ, ಮಾನವತೆಯ ಪ್ರತಿಮೂರ್ತಿಯನ್ನು ಕಳೆದುಕೊಂಡ ನಷ್ಟದ ನೋವು - ಯಂತ್ರಕ್ಕೆ ಕೂಡ ವ್ಯಾಪಿಸಿತ್ತು. ರಾಷ್ಟ್ರೀಯ ಬಿಡುಗಡೆಯ ಹೋರಾಟದಲ್ಲಿ ಪ್ರಧಾನ ಪಾತ್ರ ವಹಿಸಿದ್ದ ಮಹಾಶಹರ ಮುಂಬಯಿ - ರಾಷ್ಟ್ರಪಿತ ಕಣ್ಮರೆಯಾದಾಗ ಕೂಗಿಕೊಳ್ಳದೆ ಇದ್ದಿತೇ? ಮರಣವಿಲ್ಲದ ಅಮರಚೇತನದ ಕಳೇಬರದ ಕೊನೆಯ ಸಂಸ್ಕಾರ ವಿಧಿ"(ಅದೇ; ಪು. ೨೩೦) ಎಂದು ಕಾದಂಬರಿಕಾರರು ಗಾಂಧೀಜಿಯವರ ಮರಣದಿಂದ ಸ್ವತಂತ್ರ ಭಾರತದ ಜನತೆಯ ದುಃಖ - ನೋವು, ಅನಾಥ ಪ್ರಜ್ಞೆಯನ್ನು ಮತ್ತು ಗಾಂಧೀಜಿಯವರನ್ನು ನೆನೆಯುವಿಕೆಯನ್ನು ವಿವರಿಸುತ್ತಾರೆ. ಕಾದಂಬರಿಕಾರರು ಗಾಂಧಿಯನ್ನು ಇಲ್ಲಿ ಮಾನವತೆಯ ಪ್ರತಿಮೂರ್ತಿಯಾಗಿ, ದೇಶದ ರಾಷ್ಟ್ರಪಿತನಾಗಿ, ಮರಣವಿಲ್ಲದ ಅಮರಚೇತನನಾಗಿ ಚಿತ್ರಿಸಿದ್ದಾರೆ.

ಇಂದಿರೆಯ ತಂದೆ ಸಂಜೀವರಾಯರು ಮಗಳೊಂದಿಗೆ ಗಾಂಧಿಯ ಕುರಿತು ಹೀಗೆ ಸಂಭಾಷಿಸುತ್ತಾರೆ. "ಬಾಪು ಒಂದು ರಾಜಕೀಯ ಕ್ರಾಂತಿಯ ಪರಿಣಾಮಕಾರಿ ಸಾಧನ. ಆ ಕಾರಣ, ನನಗೆ ಅವರಲ್ಲಿ ಗೌರವ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವಿಚಾರ ಕ್ರಾಂತಿಗೆ ಬಾಪೂ ಕಾರಣರಾದರು. ಹಾಗಾಗಿ ರಾಜಕೀಯ ಕ್ರಾಂತಿಯ ಮೂಲಪುರುಷರಾದರು. ಆದರೆ ಮುಂದಿನ ಆರ್ಥಿಕ ಕ್ರಾಂತಿಯ ಅವತಾರಪುರುಷ, ನಮ್ಮ ಬಡ ಜನತೆಯ ನಡುವಿನಿಂದ ಎದ್ದು ಬರಬೇಕಷ್ಟೆ"

(ಅದೇ; ಪು. ೨೩೪) ಎಂದು ನುಡಿಯುತ್ತಾರೆ. ಗಾಂಧೀಜಿ ರಾಜಕಾರಣದಲ್ಲಿ 'ನೈತಿಕ ರಾಜಕೀಯದ ಪ್ರತೀಕವಾಗಿದ್ದರು. ವಿಚಾರ ಕ್ರಾಂತಿಗೆ ಗಾಂಧೀಜಿ ಸದಾ ಮುಕ್ತರಾಗಿದ್ದರು. ಗಾಂಧೀಜಿ ಇತರ ಕ್ಷೇತ್ರಗಳಲ್ಲಿ ತಮ್ಮ ಹಿಡಿತ ಸಾಧಿಸಿದಂತೆ ಈ ರಾಜಕೀಯ ಕ್ರಾಂತಿಗೆ ಮೂಲಪುರುಷರಾಗಿದ್ದರು ಎಂದು ಕಾದಂಬರಿಕಾರರು ವಿವರಿಸಿದ್ದಾರೆ.

ಈ ಕಾದಂಬರಿ ಕೆಲವು ಚಾರಿತ್ರಿಕ ಸತ್ಯಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಅವುಗಳಲ್ಲಿ ಕಾಂಗ್ರೆಸ್, ದೇಶದ ವಿಭಜನೆಗೆ ಒಪ್ಪಿಕೊಳ್ಳುವುದು, ದೇಶ ವಿಭಜನೆಯ ನಂತರ ಕೋಮು ಗಲಭೆ, ಗಾಂಧೀಜಿಯವರ ಕೊಲೆ, ಕಾರ್ಮಿಕರ ಹೋರಾಟ, ಸೋಶಿಯಲಿಸ್ಟರು ಕಾಂಗ್ರೆಸ್ ತೊರೆಯುವುದು, ಇವು ಕಾದಂಬರಿಯುದ್ದಕ್ಕೂ ಒಂದಕ್ಕಿಂತ ಹೆಚ್ಚು ಸಾರಿ ಪ್ರಸ್ತಾಪಕ್ಕೆ ಬರುತ್ತವೆ.

ಹೀಗೆ ಈ ಕಾದಂಬರಿ ಸ್ವಾತಂತ್ರ್ಯಪೂರ್ವದಿಂದ ಸ್ವಾತಂತ್ರ್ಯೋತ್ತರದವರೆಗೆ ಕೌಟುಂಬಿಕ ಪರಿಸರದಲ್ಲಾದ ಬದಲಾವಣೆ, ಸಾಮಾಜದಲ್ಲಿ, ರಾಜಕೀಯದಲ್ಲಾದ ಬದಲಾವಣೆಗಳನ್ನು ಹಲವು ಸ್ತರಗಳಲ್ಲಿ ಚಿತ್ರಿಸುತ್ತಾ ಹೋಗುತ್ತದೆ. ಒಟ್ಟಿನಲ್ಲಿ ಗಾಂಧೀಜಿ ಕಾದಂಬರಿಯಲ್ಲಿ ರಾಜಕೀಯ ಕ್ರಾಂತಿಯ ಮೂಲಪುರುಷರಾಗಿ ಮಾನವೀಯತೆಯ ಪ್ರತಿಮೂರ್ತಿಯಾಗಿ, ಮರಣವೇ ಇಲ್ಲದ ಅಮರ ಚೇತನವಾಗಿ ಸ್ವತಂತ್ರ ಭಾರತದ ಮಹಾನ್ ಶಿಲ್ಪಿಯಾಗಿ ಕಂಡರಿಸಲಾಗಿದೆ.

ಅ.ನ.ಕೃ. ಅವರು 'ಅಮರ ಆಗಸ್ಟ್' ಕಾದಂಬರಿ ೧೯೪೨ರ ಕ್ರಾಂತಿಯನ್ನು ಕುರಿತಾಗಿದೆ. ಈ ಕಾದಂಬರಿಯ ನಿರೂಪಣಾ ತಂತ್ರ ಸಿಂಹಾವಲೋಕನ ಕ್ರಮಾದಿಯಲ್ಲಿ ಸಾಗುತ್ತದೆ. ನಂದಿ ಗ್ರಾಮ ಈ ಕಾದಂಬರಿಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಪುಟ್ಟಸ್ವಾಮಿ ಮತ್ತು ಮಾನಪ್ಪನವರು ಗಾಂಧೀಜಿಯವರನ್ನು ಪ್ರತಿಪಾದಿಸುತ್ತಾರೆ. ಇವರು ದೇಶದ ಸ್ವಾತಂತ್ರ್ಯದ ಕುರಿತು ಹಳ್ಳಿ ಹಳ್ಳಿಗಳ ಜನತೆಗೆ ತಿಳಿಸಿ ಎಚ್ಚರಿಸುತ್ತಾರೆ. ಗಾಂಧೀಜಿಯವರ ಅಹಿಂಸಾ ಮಾರ್ಗ ಮತ್ತು ಅಸಹಕಾರ ಮಾರ್ಗದಲ್ಲಿ ತಮ್ಮ ಕಾರ್ಯಾಚರಣೆಯನ್ನು ಮುಂದುವರೆಸುತ್ತಾರೆ. ಗಾಂಧೀಜಿಯವರ ಆದರ್ಶಗಳನ್ನು ಪರಿಪಾಲಿಸುವ ಈ ತರುಣರು ನಂದಿ ಗ್ರಾಮದಲ್ಲಿ ಹರಿಜನೋದ್ಧಾರ, ಜನಜಾಗೃತಿ, ಅಕ್ಷರಾಭ್ಯಾಸ ಹೀಗೆ ಮುಂತಾದ ವಿಧಾಯಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ. ಇದರಿಂದ ಹರಿಜನರು ಮದ್ಯಪಾನ, ಮಾಂಸಹಾರ ತ್ಯಜಿಸುವುದರಿಂದ ಹರಿಜನ ಕೇರಿ ಶುಚಿತ್ವದಂಥ ಬದಲಾವಣೆ ಹೊಂದುತ್ತದೆ. ೧೯೪೨ರಲ್ಲಿ ಗಾಂಧೀಜಿ 'ಮಾಡು ಇಲ್ಲವೆ ಮಡಿ' ಚಳವಳಿಗೆ ಕರೆಕೊಟ್ಟಾಗ ನಂದಿ ಗ್ರಾಮದಲ್ಲಿ ಪುಟ್ಟಸ್ವಾಮಿ -ಮಾನಪ್ಪನನವು ಸೇವಾದಳವನ್ನು ಸಿದ್ಧಪಡಿಸುತ್ತಾರೆ. ಆಗಸ್ಟ್ ೯ ರಂದು ಗಾಂಧೀಜಿಯ ಬಂಧನವಾದ್ದರಿಂದ ಇಡೀ ದೇಶ ರಣರಂಗವಾಗುತ್ತದೆ. ಆಗ ದೇಶದ ಯುವಶಕ್ತಿ ಈ ೧೯೪೨ರ ಚಳುವಳಿಯಲ್ಲಿ ಕೆಚ್ಚೆದೆಯಿಂದ ಭಾಗವಹಿಸುತ್ತಾರೆ. ಹಾಗಾಗಿ ಗಾಂಧೀಜಿ ಈ ಕಾದಂಬರಿಯಲ್ಲಿ ಯುವಜನರ ಒಂದು ಶಕ್ತಿಯಾಗಿ ವ್ಯಕ್ತಗೊಳ್ಳುತ್ತಾರೆ.

ಗಾಂಧೀಜಿ "ಕ್ರಾಂತಿಯನ್ನು ಶಾಂತಿ, ಸಮನ್ವಯದ ಹಿಡಿತದಲ್ಲಿಟ್ಟು ರಕ್ತಪಾತವನ್ನು ತಡೆದರು. ಕಾರಣವಿಷ್ಟೇ ಬಾಪೂ ಲೆನಿನಂನಂತೆ ಕೇವಲ ರಾಜಕಾರಣ ಪಟುವಲ್ಲ. ಧರ್ಮ ರಕ್ಷಕರೂ

ಆಗಿದ್ದರು. ನಮ್ಮ ದೇಶದಲ್ಲಿ ಸಾಮಾನ್ಯ ಮನುಷ್ಯನ ಆರ್ಥಿಕ ದೆಸೆ ಸುಧಾರಿಸಿ, ಅವನು ಅನ್ನ, ವಸತಿ, ವಸ್ತ್ರಗಳಿಗೆ ಚಿಂತೆ ಮಾಡದಂತಾಗಬೇಕು ಎಂಬುದು ಗಾಂಧೀಜಿಯವರ ಇಚ್ಛೆ. ಸಾಮಾನ್ಯ ಮನುಷ್ಯನ ಆರ್ಥಿಕ ದೆಸೆ ಸುಧಾರಿಸಬೇಕಾದರೆ ಅವನ ಪರಾವಲಂಬನೆ ಹೋಗಬೇಕು. ಖಾದಿ ತಕ್ಕಮಟ್ಟಿಗೆ ಅವನ ಒಂದು ಸಮಸ್ಯೆಯನ್ನಾದರೂ ಪರಿಹರಿಸುತ್ತದೆ"(ಅ.ನ.ಕೃ.; ೧೯೫೦; ಪು. ೫೯). ಹೀಗೆ ಗಾಂಧೀಜಿ ಜನಸಾಮಾನ್ಯರನ್ನು ಕುರಿತು ಯೋಚಿಸುವ ಮಾನವತಾವಾದಿಯಾಗಿ, ಶಾಂತಿ ಸಮಾನತೆಗಳನ್ನು ಹೊಂದಿದ ಅಹಿಂಸಾ ಮೂರ್ತಿಯಾಗಿ, ರಾಜಕೀಯ ನೀತಿಯ ಜೊತೆಗೆ ಧರ್ಮ ರಕ್ಷಕರಾಗಿ, ಬಡವರನ್ನು ಆರ್ಥಿಕ ಸ್ಥಿತಿಯಿಂದ ಸುಧಾರಣೆಗೆ ತರುವ ಆರ್ಥಿಕ ತಜ್ಞರಾಗಿ ಪ್ರತಿಪಾದಿತಗೊಂಡಿದ್ದಾರೆ.

ಸ್ವಾತಂತ್ರ್ಯ ಬಂದ ಮೇಲೆ ೧೯೪೨ರ ಹೋರಾಟವನ್ನು ಕುರಿತು ಕೆಲವು ಕಾದಂಬರಿಗಳು ಕನ್ನಡದಲ್ಲಿ ರಚನೆಗೊಂಡಿವೆ. ಅವುಗಳಲ್ಲಿ ಬಸವರಾಜ ಕಟ್ಟೀಮನಿ ಅವರ 'ಮಾಡಿ ಮಡಿದವರು' ಕಾದಂಬರಿ ಪ್ರಮುಖವೆನಿಸಿದೆ. ಈ ಕಾದಂಬರಿಯಲ್ಲಿ ೧೯೪೨ರ ಘರ್ಷಣೆ ಅಪೂರ್ವವೆನಿಸಿದೆ. ಇಂತಹ ಘರ್ಷಣೆಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿ ಹೋರಾಡಿ ಮಡಿದವರ, ಮಡಿಯದೇ ಉಳಿದವರ, ಹೋರಾಟಗಾರರನ್ನು ವಿರೋಧಿಸಿದವರ ಹಾಗೂ ಹೋರಾಡದೇ ತಲೆತಪ್ಪಿಸಿಕೊಂಡವರ ಪಾತ್ರಗಳನ್ನು ಇಲ್ಲಿ ಚಿತ್ರಿಸಲಾಗಿದೆ.

ಈ ಕಾದಂಬರಿ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪಾತ್ರವನ್ನು, ಅವರ ತ್ಯಾಗ-ನಿಷ್ಠೆ-ಸಹನೆಗಳನ್ನು ಸೊಗಸಾಗಿಯೇ ಚಿತ್ರಿಸುತ್ತದೆ. ಹಿಂಸೆಯ ವಿಷಯದಲ್ಲಿ ಹಳ್ಳಿಗರು ಗಾಂಧೀವಾದಕ್ಕೆ ಪೂರ್ತಿ ನಿಷ್ಠರಾಗಿಲ್ಲ. ಬ್ರಿಟಿಷ್ ಸತ್ತೆಯನ್ನುರುಳಿಸಲು ಬಂದೂಕು ಎತ್ತುವುದು ತಪ್ಪೇನಲ್ಲ ಎಂಬ ಅವರ ನಿಲುವು, ಅವರ ಜೀವನದ ಸನ್ನಿವೇಶಗಳೇ ಕಲಿಸಿದ ಪಾಠವಾಗಿರುವುದರೊಂದಿಗೆ ಗಾಂಧೀವಾದದ ಅರ್ಥಪೂರ್ಣ ವಿಮರ್ಶೆಯೂ ಹೌದು" ಎಂದು ಆರ್ಕೆ ಮಣಿಪಾಲ ಅವರು "ಕನ್ನಡ ಪ್ರಗತಿಶೀಲ ಸಾಹಿತ್ಯ: ಸ್ಥೂಲಚಿತ್ರ" ಎಂಬ ವಿಮರ್ಶಾ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ (ಮಣಿಪಾಲ ಆರ್ಕೆ; ೨೦೦೬; ಪು. ೧೦೫).

೧೯೪೨ರ ಚಳವಳಿಯ ನಾಯಕನಾದ ಗಾಂಧೀಜಿಯನ್ನು ಬ್ರಿಟೀಷ್ ಸರಕಾರ ಬಂಧಿಸಿ ಸೆರೆಮನೆಯಲ್ಲಿಡುತ್ತದೆ. ಕಲ್ಲಾಪುರದ ಹಿರಿಯನಾದ ಮುದುಕ ಬಾಳಪ್ಪ ಶೇಖರನನ್ನು ಕೇಳುತ್ತಾನೆ.

> "ಗಾಂಧೀ ಮಾರಾಜನ್ನ ಎಲ್ಲಿಟ್ಟಾರಂತಪ್ಪಾ ಶೇಖರಣ್ಣ?"
>
> "ಎಲ್ಲಿಟ್ಟಾರೋ ಏನೊ, ಇನ್ನೂ ಸುದ್ದಿ ಗೊತ್ತಾಗಿಲ್ಲ, ಅಜ್ಜಾ" - ಎಂದ ಶೇಖರ.

ಮುದುಕ ಬಾಳಪ್ಪನ ಮುಖದಲ್ಲಿ ಕಳವಳದ ಕಾರ್ಮೋಡ ಕವಿದುಕೊಂಡಿತು. ಮೊದಲಿನಿಂದಲೂ ಅವನಿಗೆ ಗಾಂಧಿ ಎಂದರೆ ತುಂಬಾ ಪ್ರೀತಿ, ತಮ್ಮ ಮೇಲೆಲ್ಲ ದರ್ಪದಿಂದ ಅಧಿಕಾರ ನಡೆಸಿ ಪೀಡಿಸುತ್ತಿದ್ದ ಆ ಕೆಂಪು ಮೋರೆಯ ಜನರ ಸರಕಾರದ ವಿರುದ್ಧ ಚಳವಳಿ ಹೂಡಿದ್ದ ಗಾಂಧಿಯ ಅಭಿಮಾನದ ವ್ಯಕ್ತಿಯಾಗಿದ್ದ. ಸಂಗೊಳ್ಳಿ ರಾಯಣ್ಣನೇ ಗಾಂಧಿಯ ರೂಪದಲ್ಲಿ ಮತ್ತೆ

ಹುಟ್ಟಿ ಬಂದಿರುವೆನೆಂದು ಆತ ತಿಳಿದುಕೊಂಡಿದ್ದ. ತನ್ನ ವೈರಿಗಳಾದ ಇಂಗ್ಲೀಷ್‌ರನ್ನು ದೇಶದಿಂದ ಹೊರಗೆ ಅಟ್ಟುವುದಕ್ಕಾಗಿ ಅವ್ವ ಚೆನ್ನವ್ವಳೆ ಗಾಂಧಿಯನ್ನು ಹರಸಿ ಕಳುಹಿಸಿರುವಳೆಂದು ಆತ ನಂಬಿಕೊಂಡಿದ್ದ. ...ಗಾಂಧೀಜಿ ಉಪವಾಸ ಮಾಡುವ ಸುದ್ದಿ ತಿಳಿದಾಗಲೆಲ್ಲ ಅವನೂ ಅನ್ನ-ನೀರು ಬಿಟ್ಟು ಅವರಿಗೆ ದೀರ್ಘಾಯಷ್ಯ ದೊರೆಯಲೆಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದ. ಅವರು ಸೆರೆಮನೆಗೆ ಹೋದಾಗ ದಿನವೂ ಬಸವಣ್ಣನ ಗುಡಿಗೆ ಹೋಗಿ ಕೈಮುಗಿದು "ನಮ್ಮಪ್ಪ, ಗಾಂಧೆಪ್ಪನ್ನ ನೆಟ್ಟಾಗೆ ಇಡು, ದೇವರೇ!" ಎಂದು ಬೇಡಿಕೊಳ್ಳುತ್ತಿದ್ದ"(ಬಸವರಾಜ ಕಟ್ಟೀಮನಿ; ೨೦೧೩; ಪು. ೪೬). ಹೀಗೆ ಗಾಂಧೀಜಿ ಜನಮಾನಸದಲ್ಲಿ ನೆಲೆಸಿದ ಅಭಿಮಾನದ ವ್ಯಕ್ತಿ ಮತ್ತು ಶಕ್ತಿಯಾಗಿದ್ದರು. ಬಡವರ ಪಾಲಿನ ಬಂಧುವಾಗಿ, ಬಡವರ ಬಗ್ಗೆ ಚಿಂತಿಸುತ್ತಾ ದೇಶದ ಸ್ವಾತಂತ್ರ್ಯಕ್ಕೆ ಹೋರಾಡುವ ರಾಣಿ ಚೆನ್ನಮ್ಮನನ್ನೇ ಹೊತ್ತುಬಂದ ದೈವೀಪುರುಷನನ್ನಾಗಿ ಚಿತ್ರಿಸಲಾಗಿದೆ.

ಗಾಂಧೀಜಿಯನ್ನು ಬಂಧಿಸಿದ ಸಂದರ್ಭದಲ್ಲಿ ಶೇಖರ ತನ್ನ ಯುವ ತಂಡದೊಂದಿಗೆ ಬ್ರಿಟೀಷ್ ಸರಕಾರದ ಯಂತ್ರ ಮುರಿಯುವುದಕ್ಕೆ ಮುಂದಾಗುತ್ತಾನೆ. ಸ್ಟೇಶನ್ ಸುಡುವುದು, ಪೂಲು ಒಡೆಯುವುದು, ವಿದ್ಯುತ್ ಕಂಬಗಳನ್ನು ಕಡಿಯುವುದು. ದಪ್ತರು ಚಾವಡಿ ಸುಡುವುದು, ಟಪಾಲು ಲೂಟಿ ಮಾಡುವುದು, ರಸ್ತೆ ಸಂಪರ್ಕ ಕಡಿದು ಹಾಕುವುದರ ಮೂಲಕ ಬ್ರಿಟೀಷ್ ಸರಕಾರವನ್ನು ನಿಷ್ಕ್ರಿಯಗೊಳಿಸಲು ಪ್ರಯತ್ನಿಸಿದರು. ಅದಕ್ಕೆ ಕಾಂಗ್ರೆಸ್ ನಾಯಕರಾದ ಶಾಮರಾಯರು ಈ ತರುಣರ ವಿಧ್ವಂಸಕ ಕೃತ್ಯಗಳನ್ನು ಆಕ್ಷೇಪಣೆ ಮಾಡಿ ಗಾಂಧೀಜಿಯ ತತ್ವಗಳ ವಿರುದ್ಧ ನೀವು ಹೋರಾಡುತ್ತಿರುವುದನ್ನು ಹೀಗೆ ಎಚ್ಚರಿಸುತ್ತಾರೆ :

"ಪರದೇಶೀಯರ ವಿರುದ್ಧ ಬಂಡೆದ್ದ ಪ್ರತಿಯೊಂದು ದೇಶದೊಳಗೂ ಕ್ರಾಂತಿಕಾರರು ಇಂಥ ವಿಧ್ವಂಸಕ ಕೃತ್ಯ ಮಾಡಿದ್ದಾರೆ.... ಆದರೆ ಬೇರೆ ಎಲ್ಲಾ ದೇಶಗಳಿಗೂ ಹಿಂದೂಸ್ಥಾನಕ್ಕೂ ಇರುವ ವ್ಯತ್ಯಾಸವನ್ನು ಮಾತ್ರ ನಾವು ಮರೆಯಬಾರದು. ಅವರು ನಡೆಸಿದ ಸ್ವಾತಂತ್ರ್ಯ ಚಳವಳಿಗಳಿಗೂ ಗಾಂಧೀಜಿ ನಡೆಸಿದ ಚಳವಳಿಗೂ ಇರುವ ಭೇದವನ್ನು ನಾವು ಮರೆಯಬಾರದು. ಸ್ವಾತಂತ್ರ್ಯಕ್ಕಾಗಿ ಎಂಥ ಕೃತ್ಯ ಮಾಡುವುದಕ್ಕೂ ಅವರು ಹಿಂಜರಿಯುವುದಿಲ್ಲ. ಆದರೆ ಗಾಂಧೀಜಿಯವರ ದಾರಿ ಹಾಗಲ್ಲ. ಸತ್ಯ, ಅಹಿಂಸೆಗಳ ಆಧಾರದ ಮೇಲೆ ಅವರ ಚಳವಳಿ ರೂಪಗೊಂಡದ್ದು. ನಮ್ಮ ಚಳವಳಿಯಲ್ಲಿ ಸ್ವಲ್ಪ ಕೂಡಾ ಹಿಂಸೆಗೆಡೆಯಿರಬಾರದು ಅಂತ ಅವರ ಹಟ....."

"ನಾವೇನು ಹಿಂಸಾ ಮಾಡಲಿಲ್ಲ ರಾಯರೆ?" ಎಂದ ಶೇಖರ. "ಮಾಡಿರಲಿಕ್ಕಿಲ್ಲ. ಆದರs ಗಾಂಧೀ ತತ್ವದ ದೃಷ್ಟಿಯಿಂದ ಈ ವಿಧ್ವಂಸಕ ಕೃತ್ಯಗಳು ಹಿಂಸೆಯೇ. ಈ ಬಂದೂಕು; ಈ ಗುಂಡು; ಈ ಪಿಸ್ತೂಲು, ಈ ಬಾಂಬೂ....(ಅದೇ; ಪು. ೧೭೧-೧೭೨) ಎಂದು ಗಾಂಧೀಜಿಯ ಚಳುವಳಿಯೊಳಗೆ ಈ ಶಸ್ತ್ರಾಸ್ತ್ರಗಳಿಗೆ ಜಾಗ ಇಲ್ಲ, ವಿಧ್ವಂಸಕ ಕೃತ್ಯಗಳ ಬಗ್ಗೆ ಯೋಚಿಸುವುದೇ ಒಂದು ಹಿಂಸೆ ಎಂದು ಗಾಂಧೀಜಿಯ ಅಭಿಮತವಾಗಿದೆ. ಹಾಗಾಗಿ ಗಾಂಧೀಜಿ ಇಲ್ಲಿ ಅಹಿಂಸಾತ್ಮಕ ಹೋರಾಟದ ಪ್ರತೀಕವಾಗಿ ಚಿತ್ರಿತವಾಗಿದ್ದಾರೆ.

ಬಸವರಾಜ ಕಟ್ಟೀಮನಿ ಅವರು "ಸ್ವಾತಂತ್ರ್ಯದೆಡೆಗೆ" ಎಂಬ ಇನ್ನೊಂದು ಕಾದಂಬರಿಯನ್ನು ರಚಿಸಿದ್ದಾರೆ. ೧೯೪೨ರ ಚಳುವಳಿಯ ವಸ್ತುವನ್ನು ಒಳಗೊಂಡಿರುವ 'ಮಾಡಿ ಮಡಿದವರು' ಕಾದಂಬರಿ "ಈ ಸ್ವಾತಂತ್ರ್ಯದೆಡೆಗೆ ಕೃತಿಯ ಎರಡನೆಯ ಭಾಗವೆಂದು ಹೇಳಲು ಸಾಧ್ಯವಿಲ್ಲವಾದರೂ ಸ್ವಾತಂತ್ರ್ಯದೆಡೆಗೆ ಕೃತಿಯೇ ಅಲ್ಲಿ ಮುಂದುವರೆದಿದೆ ಎಂದು ಹೇಳಲಡ್ಡಿಯಿಲ್ಲ" ಎಂದು ಕಟ್ಟಿಮನೀಯವರೇ ತಮ್ಮ ಕೃತಿಯ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ(ಬಸವರಾಜ ಕಟ್ಟೀಮನಿ; ೨೦೧೧; ಪು. ಮುನ್ನುಡಿ). ಬ್ರಿಟೀಷ್ ಸರಕಾರದ ಪ್ರತಿಭಟನೆಯ ಹಿನ್ನೆಲೆಯಲ್ಲಿ ಈ ಕಾದಂಬರಿ ರಚನೆಗೊಂಡಿದೆ.

ವಿಜಯಾ ವಿಶ್ವತಿರಂಗಾಪ್ಯಾರಾ
ಝೆಂಡಾ ಉಂಚಾ ರಹೇ ಹಮಾರಾ'

ಎಂಬ ಧ್ವಜಗೀತೆಯ ಮೂಲಕ ಪೊಲೀಸ್ ಸಿಪಾಯಿ ಮಗ ಶೇಖರನಲ್ಲಿ ಸ್ವಾತಂತ್ರ್ಯ ಹೋರಾಟದ ಭಾವನೆ ಮೊಳಕೆಯೊಡೆದು ಅದು ಹೆಮ್ಮರವಾಗಿ ಬೆಳೆದುದನ್ನು ಇಲ್ಲಿ ಚಿತ್ರಿಸಲಾಗಿದೆ. ಶೇಖರನ ಪಾತ್ರದ ಮೂಲಕ ಜನರಲ್ಲಿ ಗಾಂಧೀಜಿಯವರ ತತ್ತ್ವಾದರ್ಶಗಳು ಜಾಗೃತಗೊಳ್ಳುತ್ತಾ ಹೋಗುತ್ತವೆ. ಶೇಖರ ತನ್ನ ಸ್ವಾತಂತ್ರ್ಯ ಹೋರಾಟವನ್ನು ತನ್ನ ತಂದೆಯ ಪೊಲೀಸ್‌ಗಿರಿಯಿಂದಲೇ ಪ್ರತಿಭಟಿಸಿ ಮೊದಲು ಮಾಡುತ್ತಾನೆ. ಗಾಂಧಿ ಟೋಪಿಯ ಸಲುವಾಗಿ ಮನೆಯನ್ನು ತೊರೆದು ಕಿತ್ತೂರಿನ ಸಮೀಪದ ಕಲ್ಲಾಪುರವನ್ನು ಆ ಹಳ್ಳಿಯ ರೈತ ಮಲ್ಲಣ್ಣನ ಎತ್ತಿನಗಾಡಿ ಮೂಲಕ ಸೇರುತ್ತಾನೆ. ಆ ಹಳ್ಳಿಯು ಅವನ ಸ್ವಾತಂತ್ರ್ಯ ಚಳುವಳಿಯ ಕೇಂದ್ರಸ್ಥಾನವಾಗುತ್ತದೆ.

ಕಲ್ಲಾಪುರದ ರೈತರು ಬೆಳಗಾವಿಯಿಂದ ರಾತ್ರಿ ಎತ್ತಿನಬಂಡಿಯಲ್ಲಿ ಬರುವಾಗ ಹಲವಾರು ಲಾವಣಿಗಳನ್ನು ಹಾಡಿಕೊಂಡು ಬರುವಾಗ, ಆ ಲಾವಣಿಗಳಲ್ಲಿ ಗಾಂಧೀಜಿಯವರನ್ನು ಕುರಿತಾದ ಒಂದು ಲಾವಣಿ ಇದೆ. ಆ ಲಾವಣಿ ಇಂತಿದೆ.

"ಎಂಥಾ ಶ್ಯಾಣ್ಯಾ ಮಹಾತ್ಮಾ ಗಾಂಧಿ
ಹಿಂದೂಸ್ಥಾನಕ ಅವನೇ ತಂದಿ!

ಖಾದಿಯ ಉಡಿರೆಂದ, ಖಾದಿಯ ತೊಡಿರೆಂದ
ಕಾಯ್ದೇ ಭಂಗಾವ ಮಾಡಿರೆಂದ
ಕೂಡಿಸ್ಯಾನ ವಾನರ ದಂಡ
ಹಿಡಿಸ್ಯಾನ ಕೈಯಾಗ ಝೆಂಡ
ಗದಗಮಿಸಿಬಿಟ್ಟಾನ ಇಂಗ್ಲೆಂಡ
ಹಿಂದೂಸ್ಥಾನ ಸ್ವಾತಂತ್ರ್ಯ
ಗಾಂಧಿ ಹೇಳ್ಯಾನ ಒಂದೇ ಮಂತ್ರ
ನೂಲಂತ್ಹೇಳ್ಯಾನ ನಮ್ಮ ಜಂತ್ರ

ಸರ್ಕಾರಿ ಚಾಕರಿ ಕೊರಕಲಿಗ್ಹಾಕಿರಿ
ತಿರುಕೊಂಡು ತಿನ್ನೋರು ಲೇಸೆಂದ!
ಎಂಥಾ ಶ್ಯಾಣ್ಯಾ ಮಹಾತ್ಮಾ ಗಾಂಧಿ
ಹಿಂದೂಸ್ಥಾನಕ ಅವನೇ ತಂದಿ!"

(ಅದೇ; ಪು. ೩೯-೪೦).

ಎಂದು ಆ ಹಳ್ಳಿಯ ಸರಳ ಜೀವಿಗಳ ಗಾಂಧೀ ಭಕ್ತಿ, ದೇಶ ಪ್ರೀತಿಗಳನ್ನು ಕಂಡು ಶೇಖರ ಚಕಿತನಾದ. ಗಾಂಧೀಜಿಯ ತತ್ವಗಳು, ವಿಚಾರಗಳು ಅಶಿಕ್ಷಿತ ವಲಯದಲ್ಲಿ ಒಡಮೂಡಿರುವುದು ಗಾಂಧೀಜಿ ಅವರ ಮೇಲೆ ಮಹಾನಾಯಕನಾಗಿ, ಹಿಂದೂಸ್ಥಾನದ ತಂದೆಯಾಗಿ ಪ್ರಭಾವ ಬೀರಿರುವುದನ್ನು ಚಿತ್ರಿಸಲಾಗಿದೆ. ಗಾಂಧೀಜಿಯವರನ್ನು ಬ್ರಿಟೀಷ್ ಸರಕಾರವು ಬಂಧಿಸಿರುವುದನ್ನು ಕುರಿತು ಮಾತನಾಡುತ್ತಾ ಅವರ ದೇಶಭಕ್ತಿಯ ಸಂವೇದನೆಯನ್ನು ಹೀಗೆ ತೋಡಿಕೊಳ್ಳುತ್ತಾರೆ:

"ಈ ಕೆಂಪು ಮೋತೀ ಸರಕಾರದ ಕಾಲ ತುಂಬಿ ಬಂದೈತಿ. ಅದಕ್ಕೆ ಏನೋ ಗಾಂಧೆಪ್ಪನ್ನ ಹಿಡಿಯೂ ಬುದ್ಧಿ ಬಂದಿರಬೇಕದಕ್ಕ!"

"ಎಂದಾರೆ ಹಾಳಾಗಿ ಹೋಗ್ತಾರೋ ಏನೋ ಈ ಮಂಗ್ಯಾ ಸೂಳಿ ಮಕ್ಕಳು ನಮ್ಮ ದೇಶಾ ಬಿಟ್ಟು! ಅವರು ಓಡಿ ಹೋದಾಗs ನಮ್ಮ ಚೆನ್ನವ್ವಗ ಸಮಾಧಾನ ಆದೀತು!"

"ಇನ್ನೇನು ತಡಾ ಇಲ್ಲ ಬಿಡು. ಸಂಗೊಳ್ಳಿ ರಾಯಣ್ಣ ಹುಟ್ಟಿ ಬಂದಂಗ ಬಂದಾನ ನಮ್ಮಪ್ಪ ಈ ಗಾಂಧೆಪ್ಪ! ಈ ಕೆಂಪು ಮೋತೀ ಸರ್ಕಾರನ್ನ ಒದ್ದ ಹೊರಗ ಹಾಕ್ತಾನ!" (ಅದೇ; ಪು. ೪೦-೪೧) ಗಾಂಧೀಜಿ ಈ ಜನತೆಗೆ ಒಂದು ಹೋರಾಟದ ಶಕ್ತಿಯಾಗಿದ್ದಾರೆ. ಆ ಶಕ್ತಿಯನ್ನು ಹಿಡಿದಿದ್ದಕ್ಕೆ ಬ್ರಿಟೀಷರಿಗೆ ಕೇಡುಗಾಲ ತಪ್ಪಿದ್ದಲ್ಲವೆಂದು ಹಳ್ಳಿಯವರ ಮತವಾಗಿದೆ. ವೀರ ಸಂಗೊಳ್ಳಿ ರಾಯಣ್ಣನಂತೆ ಗಾಂಧಿಯು ಕೂಡ ಒಬ್ಬ ದೇಶದ ಸ್ವಾತಂತ್ರ್ಯಕ್ಕೆ ಹೋರಾಡುವ ವೀರನಾಗಿದ್ದಾನೆ ಎಂದು ವ್ಯಕ್ತಪಡಿಸಲಾಗಿದೆ.

ಸ್ವಾತಂತ್ರ್ಯ ವೀರನಾದ ಗಾಂಧೀಜಿಯ ಸನ್ಮಾರ್ಗದಲ್ಲೇ ಶೇಖರನು ಸಾಗಿ ಕಲ್ಲಾಪುರದಲ್ಲಿ ನೆಲೆಸುತ್ತಾನೆ. ಆ ಹಳ್ಳಿಯ ಜನತೆಗೆ ಅಕ್ಷರ ಜ್ಞಾನ, ಸ್ವಚ್ಛ ಗ್ರಾಮವಾಗಿ, ದೇಶದ ಪ್ರಚಲಿತ ಘಟನೆಗಳ ಅರಿವು ಮೂಡಿಸುವುದು ಮುಂತಾದ ರೀತಿಯಲ್ಲಿ ಕಲ್ಲಾಪುರ ಗ್ರಾಮ, ಸುಭೀಕ್ಷೆಗಾಗಿ, ಜನತೆಯನ್ನು ಸುಶಿಕ್ಷಿತರನ್ನಾಗಿ ಮಾಡಲು ಪ್ರಯತ್ನಿಸುತ್ತಾನೆ. ಇದಕ್ಕೆಲ್ಲಾ ಕಾರಣ ಗಾಂಧೀಜಿ, ಗಾಂಧೀಜಿಯ ಗಾಳಿಯೆಂದು ಶೇಖರ ಹೇಳುತ್ತಾನೆ. ಅನಕ್ಷರತೆ ಕಡೆಯಿಂದ ಅಕ್ಷರತೆಯ ಕಡೆಗೆ, ಮೌಢ್ಯತೆಯಿಂದ ವಿಚಾರಶೀಲತೆ ಕಡೆಗೆ ಕೊಂಡೊಯ್ಯುವ ದಾರ್ಶನಿಕನಾಗಿ ಗಾಂಧೀಜಿಯನ್ನು ಪ್ರತಿನಿಧಿಸಲಾಗಿದೆ.

ಕೋ. ಚೆನ್ನಬಸಪ್ಪ ಅವರು ಪ್ರಗತಿಶೀಲರಲ್ಲಿ ಪ್ರಮುಖರು. ಸ್ವಾತಂತ್ರ್ಯ ಹೋರಾಟಗಾರರು ಮತ್ತು ಪ್ರಸಿದ್ಧ ವಕೀಲರು. ಇವರು ಒಬ್ಬ ನಿಷ್ಠಾವಂತ ಗಾಂಧಿವಾದಿಗಳು. ಗಾಂಧೀಜಿಯವರು

ಸ್ವಾತಂತ್ರ್ಯ ಹೋರಾಟಕ್ಕೆ ಜನತೆಯನ್ನು ಸಂಘಟಿಸಲು ಮತ್ತು ನಿರ್ದೇಶಿಸಲು ಕರ್ನಾಟಕಕ್ಕೆ ಬಂದು ಹೋದ ಸಮಗ್ರ ಚಿತ್ರಣವನ್ನು ತಮ್ಮ 'ಬೇಡಿ ಕಳಚಿತು ದೇಶ ಒಡೆಯಿತು' ಎಂಬ ಬೃಹತ್ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ದೇಶದ ಸ್ವಾತಂತ್ರ್ಯ ಹೋರಾಟದ ಮಹಾನಾಯಕನಾಗಿ ಗಾಂಧೀಜಿಯವರನ್ನು ಕೋಚೆಯವರು ಪ್ರತಿನಿಧಿಸಿದ್ದಾರೆ. ಬಳ್ಳಾರಿ, ಹಂಪಿ, ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರು, ಹರಪನಹಳ್ಳಿ, ಹರಿಹರ ಹಾಗೂ ದಾವಣಗೆರೆ ಹೀಗೆ ಹಲವಾರು ಪ್ರದೇಶಗಳಲ್ಲಿ ಸತ್ಯ, ಅಹಿಂಸೆಗಳ ಮೂಲಕ ಗಾಂಧೀಜಿ ಹರಿಜನೋದ್ಧಾರ, ಮದ್ಯಪಾನ ನಿಷೇಧ, ಕರನಿರಾಕರಣೆ ಮುಂತಾದ ರಚನಾತ್ಮಕ ಕಾರ್ಯಕ್ರಮಗಳೊಂದಿಗೆ ಜನತೆಯನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಅಣಿಗೊಳಿಸಿದ ಮಹಾನಾಯಕನಾಗಿ ಈ ಕಾದಂಬರಿಯಲ್ಲಿ ವಿವರಿಸಿದ್ದಾರೆ.

ಗಾಂಧೀಜಿ ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರಚಾರಕ್ಕೋಸ್ಕರ ದೇಶದುದ್ದಗಲಕ್ಕೂ ಸಂಚರಿಸಿದಂತೆ ಕರ್ನಾಟಕಕ್ಕೂ ಆಗಮಿಸಿದರು. ಇಲ್ಲಿನ ಜನತೆ ಗಾಂಧೀಜಿಯ ತತ್ವಾದರ್ಶಗಳನ್ನು ಬಹುವಾಗಿ ಮೆಚ್ಚಿಕೊಂಡು ಪಾಲಿಸಲು ಮುಂದಾದರು. "ಗಾಂಧಿ ತಿರುಗಿ ಬೀಳುಬ್ಯಾಡ್ರೀ, ಹೊಡೆದರೆ ಹೊಡೆಸಿಕೊಳ್ಳಿ, ಹಿಂಸೆ ಮಾತ್ರ ಮಾಡಬ್ಯಾಡಿ ಅಂತ ಹೇಳ್ತಾರಂತೆ..... ಅದೆಂತಾ ಧೈರ್ಯ ಮಾರಾಯಾ!"(ಚೆನ್ನಬಸಪ್ಪ ಕೋ.; ೨೦೦೧; ಪು. ೨೪) ಎಂದು ಗಾಂಧೀಜಿಯ ಅಹಿಂಸಾತ್ಮಕ ಮನೋಭಾವ ಹಳ್ಳಿಗಾಡಿನ ಜನರಲ್ಲಿ ನೆಲೆನಿಂತಿರುವುದನ್ನು ಮನಗಾಣಬಹುದಾಗಿದೆ. "ಆ ಗಾಂಧಿ ಉಪ್ಪು ಸಹಿತ ತಿನ್ನೋದಿಲ್ಲವಂತೆ. ಬರೀ ಮೇಕೆ ಹಾಲು ಕುಡ್ಕಂಡು ಬದುಕಿದಾನಂತೆ! ಯಾವಾಗ್ಲೊ ಒಂದು ಹಿಡಿ ನೆಲಗಡಲೆ ಬೀಜ ತಿಂದು ಜೀವಿಸ್ತಾನಂತೆ...." ಈ ದೇಶದಲ್ಲಿ ಹೊಟ್ಟೆಗಿಲ್ಲದೆ ಜನ ಸಾಯ್ತಾ ಇರುವಾಗ ತಾನು ಹೊಟ್ಟೆ ತುಂಬ ಉಣ್ಣೋದು ನಾಚಿಕೆಯಂತೆ! ಬಟ್ಟೆಯಿಲ್ದೆ ಬರೀ ಮೈಲಿ ಜನ ಕಷ್ಟಪಡುವಾಗ ತಾನು ಮೈ ತುಂಬ ಬಟ್ಟೆ ಉಡೋದು ಅನ್ಯಾಯ ಅಂತ ಮೈತುಂಬ ಬಟ್ಟೆ ಉಡೋದಿಲ್ಲ ಅಂತ ವ್ರತ ತಗೊಂಡಿದಾರಂತೆ ಗಾಂಧಿ"(ಅದೇ; ಪು. ೨೪). ಎಂದು ಗಾಂಧೀಜಿಯ ವೇಷಭೂಷಣ, ಆಹಾರ ಪದ್ಧತಿ, ಅವರ ವ್ಯಕ್ತಿತ್ವ, ನಾಯಕತ್ವದ ಗುಣ ಮತ್ತು ಅವರ ಆದರ್ಶಗಳು ಹಳ್ಳಿಯ ಜನರಲ್ಲಿ ಕಿವಿಯಿಂದ ಕಿವಿಗೆ ಬಾಯಿಯಿಂದ ಬಾಯಿಗೆ ಹಬ್ಬಿ ಸುದ್ದಿಯಾದರು. "ಮಾದಿಗರ ಕಾಳವ್ವ : ಎಣ್ಣ ಸರಾಯಿ ಕುಡಿಬ್ಯಾಡ್ರಿ ಅಂತ ಏಳೋ ಆ ಮಾತ್ಮ ನಮ್ಮಪ್ಪ ದೇವರಂಗ ಬಂದಾನ. ಆ ದೇವ್ರನ್ನ ಬಂದು ನಮ್ಮ ಜನ ಕುಡಿಯೋದ್ನ ಬಿಡಿಸಿದ್ರೆ ಬಾಳ್ವೇವು ಏಸು ಪಸಂದಾದೀತು..."(ಅದೇ; ಪು. ೨೫) ಎಂದು ಹಳ್ಳಿಯ ಜನರಿಗೆ ಗಾಂಧೀ ದೇವರಾಗಿ, ಮಹಾತ್ಮನಾಗಿ ಕಾಣುತ್ತಾರೆ. ಇವರ ಪಾನನಿರೋಧ, ಅಸ್ಪೃಶ್ಯತಾ ನಿವಾರಣೆ, ಹರಿಜನರಿಗೆ ದೇವಾಲಯಗಳಿಗೆ ಪ್ರವೇಶ, ಸಮಾನತೆ ಮುಂತಾದವು ಕೃತಿಗಳಲ್ಲಿ(ವಿಚಾರಶೀಲವಾಗಿ) ಸುಧಾರಣೆಗಳಾಗಬೇಕಾದ ಸಂಗತಿಗಳಾಗಿವೆ.

ಹೀಗೆ ಎಲ್ಲೆಲ್ಲಿಂದಲೋ ಸುದ್ದಿ ಹರಿದುಬಂದಿತು. ಪಟ್ಟಣಗಳಲ್ಲಿ ಮಾತ್ರವಲ್ಲದೆ ಹಳ್ಳಿ ಹಳ್ಳಿಗಳಲ್ಲೂ ಮಕ್ಕಳು, ಮುದುಕರು, ಮಹಿಳೆಯರು, ಬಡವರು ಬಲ್ಲಿದರು ಎಲ್ಲರ ಮನಸ್ಸಿನಲ್ಲಿ ಗಾಂಧೀಜಿ ನೆಲೆನಿಂತರು. ರಾಜಕೀಯದ ಗಂಧ ಗಾಳಿ ಇಲ್ಲದ ಎಂಥ ಅನಕ್ಷರಸ್ಥರ ನಾಲಿಗೆಯ ಮೇಲೂ

ಗಾಂಧಿ ಹೆಸರು ಅಚ್ಚಳಿಯದೆ ನಲಿದಾಡುವಂತಾಯಿತು. ಹೀಗಾಗಿ ಗಾಂಧಿಯನ್ನು ಅಸ್ಪೃಶ್ಯ ಜನಾಂಗದವರಿಗೆ ದೇವರಾಗಿ, ಪವಾಡ ಪುರುಷನಾಗಿ, ದೇಶವನ್ನು ಬಂಧನದಿಂದ ಮುಕ್ತಗೊಳಿಸುವವನಾಗಿ, ರಾಜಕೀಯ ಮಹಾ ನೇತಾರನಾಗಿ ಆದರ್ಶೀಯ ನೆಲೆಯಲ್ಲಿ ಕೋಚೆ ಅವರು ಚಿತ್ರಿಸಿದ್ದಾರೆ.

೧೯೩೦ರ ಮೇ ೫ ರಂದು ಸೂರತ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪಿಸ್ತೂಲು ಹಿಡಿದ ಇಬ್ಬರು ಪೊಲೀಸ್ ಅಧಿಕಾರಿಗಳು ಬಂದೂಕು ಹಿಡಿದು ಮೂವತ್ತು ಜನ ಪೊಲೀಸ್ ಪಡೆಯೊಡನೆ ದಂಡಿ ಗ್ರಾಮದಲ್ಲಿ ಗಾಂಧಿ ಮಲಗಿದ್ದ ಗುಡಿಸಲಿನ ಸುತ್ತ ಕೈದು ಮಾಡಲು ಸುತ್ತುವರೆದರು. ಗಾಂಧಿಯನ್ನು ಹಿಡಿಯಲು ಬಂದಿದ್ದ ಬ್ರಿಟಿಷ್ ಅಧಿಕಾರಿ ಗಾಂಧಿ ಮಲಗಿದ್ದಲ್ಲಿಗೆ ಹೋಗಿ "ಮೋಹನ ಕರ್ಮಚಂದ ಗಾಂಧಿ ನೀವೇನೋ?" ಎಂದು ಕೇಳಿದ. "ನಿಮಗೆ ನಾನು ಬೇಕೊ?" ಗಾಂಧಿ ಮೃದುವಾಗಿ ಕೇಳಿ ಪ್ರಾತಃವಿಧಿಗಾಗಿ ಕೊಂಚಕಾಲ ಕೊಡಿ!" ಎಂದು ಕಾಲಾವಕಾಶವನ್ನು ಪಡೆದು ಪ್ರಾತಃವಿಧಿಗಳನ್ನು ಪೂರೈಸಿಕೊಂಡರು. ಗಾಂಧಿಯ ಶಿಷ್ಯರು ಆತ್ಮೀಯವಾಗಿ ಅವರನ್ನು ಬೀಳ್ಕೊಟ್ಟರು. ಗಾಂಧಿಯನ್ನು ಕರೆದೊಯ್ದ ಲಾರಿ ಕಣ್ಮರೆಯಾದ ಮೇಲೆ ಮೀರಾ ಬಹೆನ್ ಹೀಗೆ ಆಲೋಚಿಸುತ್ತಾರೆ. "ಒಂದು ಹಸುವಿಗಿಂತಲೂ ಮೃದುವಾದ, ಕೈಯಲ್ಲಿ ಕೈದು ಕರವಾಲ ಒಂದು ಸಣ್ಣ ಕೋಲೂ ಇಲ್ಲದ ಈ ಬರಿಮೈ ಬಚ್ಚು ಬಾಯಿ ಮುದುಕನನ್ನು ಹಿಡಿಯಲು ಮೂವತ್ತು ಜನ ಪೊಲೀಸರು! ಮೂವರು ಅಧಿಕಾರಿಗಳು!! ಈ ಒಬ್ಬ ನಿರಾಯುಧ ಅಹಿಂಸಾ ಪ್ರವಾದಿಯ ಬಲ ಮೂವತ್ತು ಮೂರು ಆಯುಧ ಪ್ರಾಣಿಗಳಿಗಿಂತಲೂ ಬಲ!! ಯಾವ ಆಯುಧವೂ ಇಲ್ಲದ ಈ ಒಬ್ಬಾತ ಮೂವತ್ತು ಮೂರು ಆಯುಧ ಪ್ರಾಣಿಗಿಂತ ಬಲಶಾಲಿ!"(ಅದೇ; ಪು. ೩೮೪) ಈ ಮಾತುಗಳು ಗಾಂಧೀಜಿಯ ಸಾಮರ್ಥ್ಯವನ್ನು ತಿಳಿಸುತ್ತದೆ. ಅಹಿಂಸಾ ಪ್ರವಾದಿಯಾದ ಗಾಂಧಿ ಅಸಂಖ್ಯ ಸೈನ್ಯ ಬಲಗಳಿಗೆ ಸಮವೆಂದು, ಬ್ರಿಟೀಷರನ್ನು ಎದುರಿಸುವ ಒಬ್ಬ ವೀರಯೋಧನಾಗಿ ಚಿತ್ರಿಸಲಾಗಿದೆ.

೧೯೪೨ರ ಸ್ವಾತಂತ್ರ್ಯ ಚಳುವಳಿಯಲ್ಲಿ ಬ್ರಿಟೀಷರ ಕ್ರೂರವಾದ ದಬ್ಬಾಳಿಕೆಗೆ ಒಳಗಾಗಿ ಅಸುನೀಗಿದ ವಿದ್ಯಾರ್ಥಿ ನಾಯಕನ ಕಥಾನಕವನ್ನು ವಸುದೇವ ಭೂಪಾಲನಂ ಅವರು ತಮ್ಮ 'ಆಂದೋಲನ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಈ ಕಾದಂಬರಿಯ ನಾಯಕ ವಿದ್ಯಾರ್ಥಿ ವೀರೇಂದ್ರನು ಮೈಸೂರು ಪ್ರಾಂತ್ಯದ ವಿದ್ಯಾರ್ಥಿಗಳನ್ನು ಆಂದೋಲನಕ್ಕೆ ಸಂಘಟಿಸುತ್ತಾನೆ. ಆರಂಭದಲ್ಲಿ ಅಹಿಂಸಾತ್ಮಕವಾಗಿ ಹೋರಾಟ ನಡೆಸಿದ ಈ ವಿದ್ಯಾರ್ಥಿಗಳು ಪೊಲೀಸರ ದೌರ್ಜನ್ಯ, ಲಾಠಿಚಾರ್ಜು ಇತ್ಯಾದಿ ಕಾರಣಗಳಿಂದ ಹಿಂಸಾತ್ಮಕ ಹೋರಾಟಕ್ಕೆ ತಿರುಗುತ್ತಾರೆ. ೧೯೪೨ರ ಚಳವಳಿಯಲ್ಲಿ ಗಾಂಧಿ ತತ್ವಗಳಿಗೆ ವಿರುದ್ಧವಾದ ಹಿಂಸಾ ಪ್ರವೃತ್ತಿಯ ಹಾದಿಯಲ್ಲಿ ನಡೆದು 'ಸುಭಾಷ್‌ಚಂದ್ರಬೋಸ್ ಕೀ ಜೈ' ಎಂಬ ಘೋಷಣೆಯ ಮೂಲಕ ತಮ್ಮ ಹೋರಾಟವನ್ನು ಮುಂದುವರಿಸುತ್ತಾರೆ.

ಬಿಸಿ ರಕ್ತದ ಈ ಯುವಕ ವಿದ್ಯಾರ್ಥಿಗಳು, ಗಾಂಧೀಜಿಯ ತತ್ವಗಳಲ್ಲಿರುವ ಸುಪ್ತಶಕ್ತಿಯನ್ನು ಅರಿಯಲಾರದಂತಾದರು. ಆಲೋಚನಾ ಶಕ್ತಿಯನ್ನು ಕಳೆದುಕೊಂಡು ಹಿಂಸೆಯ

ದಾಸಾನುದಾಸರಾಗುತ್ತಾರೆ. ಆದರೆ ವಿದ್ಯಾರ್ಥಿನಿಯರು ಗಾಂಧೀಜಿಯವರನ್ನು ಅರ್ಥೈಸಿಕೊಂಡ ಬಗೆ ಹಾಗೂ ಅವರ ಆಲೋಚನಾಶಕ್ತಿಯನ್ನು ಇಲ್ಲಿ ಮೆಚ್ಚಿಕೊಳ್ಳಬೇಕಾಗಿದೆ. ನಂಜಿನಿ ಎಂಬ ವಿದ್ಯಾರ್ಥಿನಿಯು ಯುವಕ ವಿದ್ಯಾರ್ಥಿಗಳನ್ನು ಉದ್ದೇಶಿಸಿ "ಈಗ ಸರಕಾರದ ಕೇಂದ್ರಗಳನ್ನು ನಾಶ ಮಾಡಿದರೆ ನಾಳೆ ನೀವೇ ಸರಕಾರವನ್ನು ನಡೆಸಬೇಕಾಗಿ ಬರುವಾಗ ಇವನ್ನೆಲ್ಲಾ ಪುನಃ ನಿರ್ಮಾಣ ಮಾಡಬೇಕಲ್ಲವೆ? ಎಷ್ಟೊಂದು ವೃಥಾ ಖರ್ಚು. ಈಗ ನೀವು ವಿನಾಶ ಕೃತ್ಯದಲ್ಲಿ ಪುನಃ ನಿರ್ಮಾಣಕ್ಕೆ ಬೇಕಾಗುವಷ್ಟೇ ಶ್ರಮವಹಿಸುತ್ತಿದ್ದೀರಿ. ಇದ್ದ ಮನೆಯನ್ನು ಗೆಲ್ಲಲು ಅದನ್ನು ಸುಟ್ಟು ಮತ್ತೆ ಕಟ್ಟುವುದು ಎಂತಹ ಬುದ್ಧಿವಂತಿಕೆ? ವ್ಯಕ್ತಿಯೊಬ್ಬನನ್ನು ಸ್ವಾಧೀನಪಡಿಸಿಕೊಳ್ಳಲು ಅವನನ್ನು ಮೊದಲುಗೊಂಡ ನಂತರ ಜೀವ ತುಂಬಲು ವೃಥಾ ಶ್ರಮಪಡುವುದೇ? ತರಂಗದಲ್ಲಿರುವ ಗಾಂಧೀಜಿ ಕೊನೆಗೆ ಹೊರಬಂದ ಮೇಲೆ ಹಿಂಸಾಯುತವಾದ ಈ ವಿನಾಶ ಕೃತ್ಯಗಳ ಬಗ್ಗೆ ಕೇಳಿ ಎದೆಯೊಡೆದುಕೊಳ್ಳುತ್ತಾರಷ್ಟೇ. ಇಪ್ಪತ್ತು ವರ್ಷಗಳಿಗಿಂತ ಹೆಚ್ಚಾಗಿ ಅಹಿಂಸೆಯನ್ನು ಬೋಧಿಸುತ್ತಿರುವ ರಾಷ್ಟ್ರೀಯ ನಾಯಕನ ಹೆಸರಿನಲ್ಲಿ ಈ ಕೃತ್ಯಗಳನ್ನು ನಡೆಸುವುದು ಸರಿಯೇ?"(ಅದೇ; ಪು. ೫೮) ಎಂಬ ನಂಜಿನಿ ವಿದ್ಯಾರ್ಥಿನಿಯ ಮಾತುಗಳು ಗಾಂಧೀಜಿಯ ಅಂಹಿಸಾ ತತ್ವವನ್ನು ಪ್ರತಿನಿಧಿಸುತ್ತವೆ. ಯುವಕರಿಗಿಂತ ಯುವತಿ(ಸ್ತ್ರೀ)ಯರು ಗಾಂಧಿ ತತ್ವಗಳಲ್ಲಿ ಹೆಚ್ಚು ನಂಬಿಕೆಯನ್ನಿರಿಸಿಕೊಂಡವರೆಂಬುದು ಇದರಿಂದ ತಿಳಿಯುತ್ತದೆ.

ಪ್ರಗತಿಶೀಲ ಕಾದಂಬರಿಕಾರರು ಹೆಚ್ಚಾಗಿ ೧೯೪೨ರ ಚಳುವಳಿಯನ್ನು ಆಧರಿಸಿಕೊಂಡು ಕೃತಿಗಳನ್ನು ರಚಿಸಿದ್ದಾರೆ. ನವೋದಯದವರು ಗಾಂಧೀಜಿಯನ್ನು ಆರಾಧಕ ಭಾವವಾಗಿ ಒಪ್ಪಿಕೊಂಡಂತೆ, ಪ್ರಗತಿಶೀಲರೂ ಒಪ್ಪಿಕೊಂಡು ಜೊತೆಗೆ ಅವರ ತತ್ವ-ಆದರ್ಶಗಳನ್ನು ಪ್ರಯೋಗಶೀಲತೆಗೆ ಒಳಪಡಿಸಿ ನೋಡುವುದನ್ನು, ಆದರ್ಶೀಯ ನೆಲೆಯಲ್ಲಿ ಕಾಣುವುದನ್ನು ಬೆಳೆಸಿಕೊಂಡರು. ನಮ್ಮ ದೇಶವನ್ನು ಪರಕೀಯರಿಂದ ರಕ್ಷಿಸಲು ಬಂದ ಅವತಾರ ಪುರುಷನಾಗಿ ಪ್ರತಿನಿಧಿಸಿದರು. ಹಳ್ಳಿಯ ಜನರಿಗೆ ದೇವರಾಗಿ, ಮಹಾತ್ಮನಾಗಿ ಗಾಂಧೀಜಿ ಪ್ರತಿಪಾದಿತಗೊಂಡಿದ್ದಾರೆ. ಪ್ರಗತಿಶೀಲ ಲೇಖಕರ ಗುರಿ ಸಾಹಿತ್ಯವು ನಮ್ಮ ಜನತೆಯ ಸಂಸ್ಕೃತಿ, ಆಶಯ, ಸುಖ-ದುಃಖಗಳ ಕನ್ನಡಿಯಾಗಬೇಕೆಂಬ ಉದ್ದೇಶ ಹೊಂದಿದ್ದರಿಂದ ಹರಿಜನರು, ಸ್ತ್ರೀಯರು, ಕೂಲಿಕಾರ್ಮಿಕರ ಬಗೆಗಿನ ಗಾಂಧೀಜಿಯ ಆಲೋಚನೆ, ಚಿಂತನೆಗಳನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ಸ್ತ್ರೀಯರಿಗೆ, ಬಡ ಕೂಲಿಕಾರರಿಗೆ, ದಲಿತರಿಗೆ ಗಾಂಧಿ ದೇವರಾಗಿ, ಪವಾಡಪುರುಷನಾಗಿ ಕಾಣಿಸಿದ್ದಾರೆ. ಚಳುವಳಿಕಾರರಿಗೆ ಸಂಘಟಕಕಾರನಾಗಿ, ವಿದ್ಯಾವಂತ ಜನತೆಗೆ ಮಾರ್ಗದರ್ಶಕನಾಗಿ ಕಂಡಿದ್ದಾರೆ. ವಸುದೇವ ಭೂಪಾಲಂ ಅವರು ತಮ್ಮ ಆಂದೋಲನ ಕಾದಂಬರಿಯಲ್ಲಿ ಯುವಕ ವಿದ್ಯಾರ್ಥಿಗಳಿಗೆ ಗಾಂಧಿ ಬಂಡವಾಳಗಾರರ ಏಜೆಂಟ್ ಎಂಬುದಾಗಿ ಚಿತ್ರಿಸಿದ್ದಾರೆ.

೧೯೩೦ರ ದಶಕದ ಕೊನೆಯ ಹೊತ್ತಿಗೆ ಭಾರತವನ್ನು ಪ್ರವೇಶಿಸಿದ ಪ್ರಗತಿಶೀಲ ಚಳವಳಿ ಮುಂದೆ ಎರಡು ದಶಕಗಳ ಕಾಲ ಹೆಚ್ಚು ಕ್ರಿಯಾಶೀಲವಾಗಿ ಬೆಳೆದು ಬಂದಿತು. ೫೦ರ ದಶಕದಲ್ಲಿ ಈ ಸಂಘಟನೆ ಎರಡು(ಅ.ನ.ಕೃ. ಬಣ, ನಿರಂಜನರ ಬಣ) ಬಣಗಳಾಗಿ ರೂಪ ತಾಳಿತು. ಇದರ ಪರಿಣಾಮವಾಗಿ ಪ್ರಗತಿಶೀಲರ ಹುಮ್ಮಸ್ಸು ತಗ್ಗಿತು. ಇಂಥ ಹೊತ್ತಿನಲ್ಲಿ ತಲೆಯೆತ್ತಿದ ನವ್ಯ ಚಳವಳಿ ಹೊಸ ಹೊಸ ಆಯಾಮಗಳಿಗೆ ಹುಡುಕಾಟವನ್ನು ಆರಂಭಿಸಿತು.

೪.೩. ನವ್ಯ ಕಾದಂಬರಿ

ಪ್ರಗತಿಶೀಲ ಚಳವಳಿಯ ನಂತರ ಈ ನವ್ಯ ಚಳವಳಿ ಆರಂಭವಾಯಿತು. ಇದರ ಹುಟ್ಟನ್ನು ಅಧ್ಯಯನದ ಅನುಕೂಲಕ್ಕೋಸ್ಕರ ೧೯೫೦ ಎಂದು ಗುರುತಿಸುತ್ತೇವೆ. ಕಾದಂಬರಿ ಪ್ರಕಾರವನ್ನು ಆವಾಹಿಸಿಕೊಳ್ಳುವ ಎಲ್ಲ ಪ್ರಯತ್ನಗಳು, ಪ್ರಯೋಗಗಳು ಆ ಹೊತ್ತಿಗೆ ಯಶಸ್ವಿಯಾಗಿ ನಡೆದು ಕಾದಂಬರಿ ತನ್ನದೇ ಆದ ಭದ್ರವಾದ ಹಾದಿಯನ್ನು ಕಂಡುಕೊಂಡಿತ್ತು. "ವಸಾಹತುಶಾಹಿಯ ಪರಿಣಾಮಗಳು, ಸುಧಾರಣಾವಾದಿ ಚಳವಳಿಯ ಪ್ರತಿಫಲನಗಳು, ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಮೂಡಿಬಂದ ವಿಚಾರಗಳು, ಹೊಸ ವಿದ್ಯಾಭ್ಯಾಸದ ಪ್ರಭಾವ ಮತ್ತು ಪರಿಣಾಮಗಳು, ದೇಶೀಯ ಮತ್ತು ಪರಕೀಯ ಸಂಸ್ಕೃತಿಗಳ ಮುಖಾಮುಖಿಯ ಫಲವಾಗಿ ಹುಟ್ಟಿಕೊಂಡ ವಿಚಾರಧಾರೆಯ ಫಲ - ಇತ್ಯಾದಿಯಾಗಿ ಹಲವು ಕಾಲಬದ್ಧ ಪರಿಣಾಮಗಳನ್ನು ಅರಗಿಸಿಕೊಳ್ಳುವ ಹೊಸ ಸಂವೇದನೆ ಈ ಕಾಲ ಪಡೆದುಕೊಂಡಿತು"(ನಾಯಕ.ಜಿ.ಎಚ್.(ಸಂ); ೨೦೦೯; ಪು. ೧೯೫).

"ಕನ್ನಡದ ಪ್ರಮುಖ ಚಳವಳಿಗಳಾದ ಪ್ರಗತಿಶೀಲ ಮತ್ತು ನವ್ಯ ಚಳವಳಿಗಳು ನವೋದಯ ಸಂವೇದನೆಯ ಜೊತೆ ಏಕಕಾಲಕ್ಕೆ ಕ್ರಿಯಾಶೀಲವಾಗಿದ್ದುದನ್ನೂ ಈ ಕಾಲಘಟ್ಟ ತೋರಿಸುತ್ತದೆ. ಈ ಚಳವಳಿಗಳಿಗೆ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಸೇರಿದ, ಈ ಚಳವಳಿಗಳಿಂದ ಪ್ರಭಾವಿತರಾದ ಬರಹಗಾರರು ಕ್ರಿಯಾಶೀಲರಾಗಿ ಉತ್ಸಾಹದಿಂದ ಕೃತಿಗಳನ್ನು ರಚಿಸಿದ ಇತಿಹಾಸವನ್ನು ಈ ಕಾಲಘಟ್ಟ ಹೇಳುತ್ತದೆ"(ಅದೇ; ಪು. ೧೯೫). ಹೀಗಾಗಿ ನವೋದಯದ ಮುಂದುವರಿಕೆ, ಪ್ರಗತಿಶೀಲರ ಹುರುಪು ಮತ್ತು ನವ್ಯದ ಹೊಸ ಹೊಸ ಪ್ರಯೋಗಗಳು ಈ ಕಾಲಘಟ್ಟದಲ್ಲಿ ಕಾಣಿಸುತ್ತವೆ. ಇನ್ನೂ ಹುಟ್ಟದ, ಭ್ರೂಣಾವಸ್ಥೆಯಲ್ಲಿದ್ದ ದಲಿತ ಬಂಡಾಯ ಚಳವಳಿಯ ಚಹರೆಗಳೂ ಈ ಕಾಲಘಟ್ಟ ತೋರಿಸುತ್ತದೆ ಎಂದು ಜಿ.ಪಿ. ಬಸವರಾಜು ಅವರು ಅಭಿಪ್ರಾಯಿಸಿದ್ದಾರೆ. ಹೀಗಾಗಿ ೧೯೫೦ರ ಹೊತ್ತಿನಲ್ಲಿ ತಲೆ ಎತ್ತಿದ ನವ್ಯ ಚಳವಳಿ ಹೊಸ ಹೊಸ ಅಭಿವ್ಯಕ್ತಿಗಾಗಿ ಹುಡುಕಾಟ ಆರಂಭಿಸಿತು.

೧೯೫೦ರ ದಶಕದಲ್ಲಿ ಚಳವಳಿಯಾಗಿ ಬೆಳೆದ ನವ್ಯ ಸಾಹಿತ್ಯಕ್ಕೆ ಪ್ರೇರಣೆ, ಪ್ರಧಾನವಾಗಿ ಪಾಶ್ಚಿಮಾತ್ಯ ಸಾಹಿತ್ಯ ಮಾದರಿಗಳಿಂದಲೇ ದೊರಕಿತು. "ನವ್ಯರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ, ಹೊಸ ಸಾಹಿತ್ಯ ಸಂದರ್ಭ, ಪರಿಕಲ್ಪನೆಗಳನ್ನು ಸೃಷ್ಟಿಸಿಕೊಂಡರು. ಭಾಷೆಯನ್ನು ಹೆಚ್ಚು ಸೃಜನಶೀಲವಾಗಿ, ಚೈತನ್ಯಪೂರ್ಣವಾಗಿ ಬಳಸಿಕೊಂಡರು; ಸ್ವಾನುಭವದ ಪ್ರಾಮಾಣಿಕತೆಗೆ ನಿಷ್ಠರಾಗಿ ಅಭಿವ್ಯಕ್ತಿಯನ್ನು ಕಂಡುಕೊಳ್ಳಲು ಪ್ರಯತ್ನಿಸಿದರು"(ಅದೇ; ಪು. ೧೯೭) ಎಂಬುದು ಜಿ.ಪಿ. ಬಸವರಾಜು ಅವರ ಅಭಿಮತ. ಈ ಮೂಲಕ ನವ್ಯ ಸಾಹಿತ್ಯಕಾರರು ಅಭಿವ್ಯಕ್ತಿಯ ಸೂಕ್ಷ್ಮಾತಿಸೂಕ್ಷ್ಮಗಳನ್ನು ಸಾಧಿಸಿದರು. ಇದರ ಫಲವಾಗಿ ವಿಭಿನ್ನ ರೀತಿಯ ತಂತ್ರ, ಭಾಷೆ, ಬಂಧ, ನಿರೂಪಣೆ, ಶೈಲಿಗಳನ್ನು ತಮ್ಮ ಕೃತಿಗಳಲ್ಲಿ ಆವಾಹಿಸಿಕೊಂಡರು. ಪ್ರತಿಮಾವಿಧಾನ, ಸಂಕೇತಗಳ ಬಳಕೆ, ಶಿಲ್ಪಸೌಂದರ್ಯಕ್ಕೆ ಒತ್ತು, ಬಂಧಗಳಲ್ಲಿ ಬಿಗಿ ಇತ್ಯಾದಿ ಅಂಶಗಳಿಗೆ ಹೆಚ್ಚಿನ ಮಹತ್ವ ಪ್ರಾಪ್ತವಾಯಿತು. ನವ್ಯರ ಇಂಗ್ಲಿಷ್ ಸಾಹಿತ್ಯ ಅಧ್ಯಯನದ ಕಾರಣದಿಂದಾಗಿ ಪಾಶ್ಚಿಮಾತ್ಯ

ಚಿಂತನೆಯ ಅಸ್ತಿತ್ವವಾದ, ಆಧುನಿಕ ಮನಶ್ಶಾಸ್ತ್ರದ ಫಲಿತಗಳು, ಅಸಂಗತತೆ ಮೊದಲಾದ ಸಿದ್ಧಾಂತಗಳ ಪ್ರಭಾವಗಳು ತಮ್ಮ ಕೃತಿಗಳಲ್ಲಿ ನೇರವಾಗಿಯಲ್ಲದಿದ್ದರೂ ಛಾಯಾರೂಪದಲ್ಲಾದರೂ ಕಾಣಿಸಿದ್ದಾರೆ.

ನವ್ಯ ಕಾದಂಬರಿಕಾರರಲ್ಲಿ ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಕುಸುಮಾಕರ, ಎ.ಕೆ. ರಾಮಾನುಜನ್, ಎಸ್.ಎಲ್. ಭೈರಪ್ಪ, ಪ.ಸು. ಭಟ್ಟ, ನಾ. ಮೊಗಸಾಲೆ, ಗಿರಿ, ಕಾಮರೂಪಿ ಮೊದಲಾದವರನ್ನು ಪ್ರಮುಖವಾಗಿ ಗುರುತಿಸಬಹುದಾಗಿದೆ. ಇವರು ತಮ್ಮ ಸೃಜನಶೀಲ ಕೃತಿ ಕಾದಂಬರಿಗಳಲ್ಲಿ ಗಾಂಧೀಜಿಯನ್ನು ಹೇಗೆ, ಯಾವ ಬಗೆಯಲ್ಲಿ ಕಂಡರಿಸಲು ಪ್ರಯತ್ನಿಸಿದ್ದಾರೆ ಎಂಬುದನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪ.ಸು. ಭಟ್ಟ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಕ್ರಾಂತಿಕಾರನೊಬ್ಬನ ಹೋರಾಟದ ಕಥೆಯನ್ನು 'ಆತ್ಮಾರ್ಪಣೆ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಇದು ಮಂದಗಾಮಿ, ತೀವ್ರಗಾಮಿಗಳ ಚಳವಳಿಗಳನ್ನು ಹಾಗೂ ಸ್ವಾತಂತ್ರ್ಯ ಸಂಗ್ರಾಮದ ವಿವಿಧ ಹಂತಗಳನ್ನು ಚಿತ್ರಿಸುತ್ತದೆ. ಇವೆಲ್ಲ ಜೈಲಿನಲ್ಲಿರುವ ಅಜಯನ ಕಣ್ಣ ಮುಂದೆ ಬಿಚ್ಚಿಕೊಳ್ಳುತ್ತವೆ. ೧೯೩೧ ಮಾರ್ಚ್ ೨೩ರಂದು ಲಾಹೋರ್ ಜೈಲಲ್ಲಿ ಭಗತ್‌ಸಿಂಗ್, ರಾಜಗುರು, ಸುಖ್‌ದೇವರನ್ನು ಗಲ್ಲಿಗೇರಿಸಲಾಗುತ್ತದೆ. ಇದರಿಂದ ಬ್ರಿಟೀಷ್ ದಬ್ಬಾಳಿಕೆಯ ವಿರುದ್ಧ ಪ್ರತಿಭಟನೆ ನಡೆದು ಇದರಲ್ಲಿ ಕುಶಿರಾಮ್ ಎಂಬ ಯುವಕ ಬ್ರಿಟೀಷರ ಗುಂಡಿಗೆ ಹತನಾಗುತ್ತಾನೆ. ೧೯೧೯ರಂದು ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ನೂರಾರು ಜನರ ಮಾರಣ-ಹೋಮ ನಡೆಯುತ್ತದೆ. ಕಾಕೋರಿ ಮತ್ತು ಲಕ್ನೋಗಳ ನಡುವೆ ಆಲಮ್ ರೈಲ್ವೇ ಸ್ಟೇಷನ್ನಿನ ಹತ್ತಿರ ಹಣದ ಟ್ರೆಜರಿಯನ್ನು ಕ್ರಾಂತಿಕಾರರು ಲೂಟಿ ಮಾಡುತ್ತಾರೆ. ಸೈಮನ್ ಕಮಿಷನ್‌ನ್ನು ವಿರೋಧಿಸುವುದು, ಪೊಲೀಸರ ಆಕ್ರೋಶಕ್ಕೆ ಲಾಲಾ ಲಜಪತರಾಯ್‌ರ ಮರಣ, ಮೇಜರ್ ಸೂರ್ಯಸೇನನ ನಾಯಕತ್ವದಲ್ಲಿ ಸುಮಾರು ೧೨೫ ಮಂದಿ ಕ್ರಾಂತಿವೀರರು ಚಿತಗಾಂಗ್ ಶಸ್ತ್ರಾಗಾರದ ಮೇಲೆ ದಾಳಿ ನಡೆಸುವುದು. ಹೀಗೆ ಕ್ರಾಂತಿಕಾರರ ಹೋರಾಟದ ಕಿಚ್ಚು ಬ್ರಿಟಿಷರ ಅಟ್ಟಹಾಸವನ್ನು ಸದೆಬಡಿಯುವ ಪ್ರಯತ್ನಗಳು ಈ ಕಾದಂಬರಿಯಲ್ಲಿ ಮೂಡಿಬಂದಿದೆ. ಈ ಎಲ್ಲಾ ಹೋರಾಟಗಳು ಗಾಂಧೀಜಿ ಭಾರತಕ್ಕೆ ಬರುವ ಮೊದಲೇ ಮೊಳಕೆಯೊಡೆದು ಕ್ರಿಯಾಶೀಲಗೊಂಡಿದ್ದವು. ಇಂಥ ಕ್ರಾಂತಿಕಾರಿಗಳನ್ನು ನಿಯಂತ್ರಿಸುವುದೇ ಗಾಂಧೀಜಿಗೆ ಒಂದು ಹೋರಾಟವಾಗಿರಬಹುದು.

ಭಾರತ ಬ್ರಿಟೀಷರ ಕೈಸೆರೆಯಿಂದ ಬಿಡುಗಡೆ ಹೊಂದಬೇಕಾದರೆ "ಹೋರಾಟವೊಂದೇ ಹಾದಿ - ಹಿಂಸೆಯೇ ಅಸ್ತ್ರ ಎಂದು ತಿಳಿದಿದ್ದ ದೇಶ ಪ್ರೇಮಿಗಳಿಗೆ ಈಗ ಹೊಸತೊಂದು ಹಾದಿಯನ್ನು ತೋರಿಸಲಾಯಿತು. ದಕ್ಷಿಣ ಆಫ್ರಿಕದಲ್ಲಿ ಅಹಿಂಸಾತ್ಮಕ ಹೋರಾಟವನ್ನು ನಡೆಸಿ ವಿಜಯ ಗಳಿಸಿದ ಮೋಹನದಾಸ ಕರಮಚಂದ ಗಾಂಧಿ ಭಾರತಕ್ಕೆ ಬಂದಿದ್ದರು"(ಪ.ಸು. ಭಟ್ಟ; ೧೯೬೭; ಪು. ೨೯). ಇದರಿಂದ ಗಾಂಧೀಜಿಯವರ ಆಗಮನದಿಂದ ಭಾರತದಲ್ಲಿ ಅಹಿಂಸಾತ್ಮಕ

ಚಳುವಳಿ ಮೊದಲಾಯಿತು. ಗಾಂಧಿಯನ್ನು ಒಬ್ಬ ಅಹಿಂಸೆಯ ಪ್ರವಾದಿಯಾಗಿ ಕಾಣಲಾಗಿದೆ. ಅಹಿಂಸೆಯನ್ನು ಕುರಿತು ಗಾಂಧೀಜಿ "ಕೆಲವೇ ಕೆಲವು ಮಂದಿಯ ಹೋರಾಟದ ಕಾಲ ಆಗಿಹೋಯಿತು. ಮಹಾಜನತೆಯೇ ಲಕ್ಷ ಸಂಖ್ಯೆಯಲ್ಲಿ ಸಂಘಟಿತವಾಗಿ, ತಮ್ಮ ಬೇಡಿಕೆಯನ್ನು ಮುಂದುವರೆಸಿ ಹೋರಾಡಬೇಕು. ಕೆಲವರ ಹಿಂಸೆಗಿಂತ ಬಹುಜನ ಸಮುದಾಯದ ಅಹಿಂಸೆಯೇ ಸೂಕ್ತವಾದ, ಖಚಿತವಾದ ಅಸ್ತ್ರ"(ಅದೇ; ಪು. ೩೦) ಎಂದರು. ಗಾಂಧೀಜಿಯವರ ಆಲೋಚನೆ ಬಹು ವಿಶಾಲವಾದದ್ದು. ಹಿಂಸೆ ಕ್ಷಣಿಕವಾದ ಸುಖವನ್ನು ನೀಡಿ ದೀರ್ಘಕಾಲ ದುಃಖವನ್ನು ನೀಡುತ್ತದೆ. ಆದರೆ ಅಹಿಂಸೆ ಕ್ಷಣಿಕ ಕಾಲ ನೋವನ್ನು ನೀಡಿದರೂ ದೀರ್ಘವಾದ ಒಳಿತನ್ನು ಬಯಸುತ್ತದೆ. ಹಾಗಾಗಿ ಗಾಂಧಿ ಅಹಿಂಸೆಯನ್ನು ಪಾಲಿಸುತ್ತಾ ಬಂದರು.

ಅಮೃತಸರದಲ್ಲಿ ೧೯೧೯ರ ಏಪ್ರಿಲ್ ೧೩ನೇ ತಾರೀಖು ಪಂಜಾಬ್ ಪ್ರಾಂತ್ಯದ ಗವರ್ನರ್ ಜನರಲ್ ಡಾಯರ್‌ನು ಜನಸಮೂಹದ ಮೇಲೆ ಮಿಲಿಟರಿಯ ಗುಂಡಿನ ಮಳೆ ಸುರಿಸಿ ಸ್ಮಶಾನವಾಗಿಸಿದನು. ಇದಕ್ಕೆ ಬೇಸತ್ತ ಗಾಂಧೀಜಿ "ಇಂಥ ಸರಕಾರದೊಡನೆ ನಮಗೆ ಯಾವುದೇ ಸ್ನೇಹವೂ ಬೇಡ, ಸಹಕಾರವೂ ಬೇಡ"(ಅದೇ; ಪು. ೩೧) ಎಂದು ಕರೆ ನೀಡಿದರು. ದೇಶದ ಮೂಲೆ ಮೂಲೆಗಳಲ್ಲೂ ಪರದೇಶಿ ಬಟ್ಟೆಗಳನ್ನು, ವಸ್ತುಗಳನ್ನು ಬಹಿರಂಗವಾಗಿ ಸುಟ್ಟು ಹಾಕುವ ಚಳವಳಿ ನಡೆಯಿತು. ಸ್ವದೇಶಿ ವಸ್ತುಗಳು, ಖಾದಿ ಬಟ್ಟೆ ಬಳಸುವ ಕಾರ್ಯ ಆರಂಭವಾಯಿತು. ಇದರಿಂದ ಪ್ರತಿಯೊಬ್ಬರ ಮನೆಗೂ ಸ್ವದೇಶಿ ಚಳವಳಿ ಪ್ರವೇಶಿಸಿತು. ಖಾದಿ, ಚರಕ, ದೇಶಿಯ ಶಾಲೆಗಳು ಆರಂಭವಾದವು. ಹೀಗೆ ಹೊಸ ಹಾದಿಯನ್ನು ತೋರಿಸಿದ ಸ್ವದೇಶಿಯ ಮತ್ತು ಸ್ವಾವಲಂಬನೆ ಜೀವನದ ಹರಿಕಾರರಾದರು.

ದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಘೋಷಣೆಗಳು ದಿನೇದಿನೇ ಮುಗಿಲೆತ್ತರಕ್ಕೆ ದಾಟುತ್ತಿರುವಾಗ ಎಲ್ಲರ ಗುರಿ ಒಂದೇ ಸ್ವಾತಂತ್ರ್ಯ ಪಡೆಯಬೇಕು ಎಂದು. ಆದರೆ ಮಾರ್ಗ ಭಿನ್ನ. ಯುವಕರು ತಕ್ಷಣ ಸ್ವಾತಂತ್ರ್ಯ ಸಾಧಿಸಬೇಕೆಂಬ ಬಿಸಿರಕ್ತದ ಹುಮ್ಮಸ್ಸಿನವರು. ಉಳಿದವರು ಅಹಿಂಸೆಯಿಂದ, ಶಾಂತಿ; ಸತ್ಯಗಳ ತಳಹದಿಯ ಮೇಲೆ ಗುರಿ ಸಾಧಿಸಬೇಕೆನ್ನುವವರು. ಗಾಂಧೀಜಿ ಹೀಗೆ ಸಾರುತ್ತಾರೆ "ಸ್ವಾತಂತ್ರ್ಯಕ್ಕೆ ಎಷ್ಟು ಬೆಲೆ ಕೊಟ್ಟರೂ ಕಡಿಮೆ. ಅದು ಪಂಚಪ್ರಾಣ, ಜೀವದುಸಿರು, ಬದುಕಲಿಕ್ಕೆ ಮನುಷ್ಯ ಏನು ತಾನೇ ಕೊಡಲಾರ?" ಎಂದು.

ಭಾರತದ ಸ್ವಾತಂತ್ರ್ಯಕ್ಕಾಗಿ ನಾನು ಬದುಕಿದ್ದೇನೆ. ಅದಕ್ಕಾಗಿ ಬೇಕಾದರೆ ಸಾಯುತ್ತೇನೆ. ಏಕೆಂದರೆ ಅದು ಸತ್ಯದ ಅಂಶ. ನಾನು ಭಾರತದಲ್ಲಿ ಹುಟ್ಟಿದೆ. ಅದರಿಂದ ಭಾರತದ ಸೇವೆ ಮಾಡಲು ನಾನು ಯೋಗ್ಯ"(ಅದೇ; ಪು. ೫೨) ಎಂದು ಗಾಂಧೀಜಿ ದೇಶದ ಜನತೆಯನ್ನು ಒಂದು ಕೈಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಅಹಿಂಸಾತ್ಮಕ ರೀತಿಯಲ್ಲಿ ಅಣಿಗೊಳಿಸುತ್ತಾ ಇನ್ನೊಂದು ಕೈಯಲ್ಲಿ ಬಿಸಿರಕ್ತದ ಯುವಕರನ್ನು ಹತೋಟಿಯಲ್ಲಿಟ್ಟುಕೊಳ್ಳುವ ಒಬ್ಬ ಮಹಾದಂಡನಾಯಕರಾದರು.

"ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯನ್ನು ಮೊಳಗಿಸಿದ ಲಾಹೋರಿನಲ್ಲಿ ಮುಸ್ಲಿಂಲೀಗ್ ಅಧಿವೇಶನ ನಡೆಯಿತು. ಪ್ರತ್ಯೇಕ ಪಾಕಿಸ್ತಾನವೇ ತಮ್ಮ ಗುರಿ ಎಂದು ಸಮ್ಮೇಳನ ಘೋಷಿಸಿತು.

ಇದನ್ನೇ ಕೇಳಿದ ಅಜಯನು ಆ ದಿವಸವಿಡೀ ಚಿಂತಾಗ್ರಸ್ತನಾಗಿ ಕುಳಿತ. ಸ್ವಾತಂತ್ರ್ಯ ಮಹಾ ಹೋರಾಟದ ಸಮಯದಲ್ಲಿಯೂ ಬ್ರಿಟೀಷರು ಜಾತೀಯತೆಯ ವಿಷಬೀಜವನ್ನು ನೆಡಲು ಸಮರ್ಥರಾಗಿದ್ದರು. ಆದರೆ ಭಾರತದಲ್ಲಿ ಹೊಸ ತಂತ್ರವನ್ನು ಉಪಯೋಗಿಸಿ ಮಹಾ ಹೋರಾಟ ಒಂದನ್ನು ಮಹಾತ್ಮಗಾಂಧಿ ನಡೆಸಿದ್ದರು. ಅಹಿಂಸೆಯ ಹೊಸ ಅಸ್ತ್ರದಿಂದ ಹಿಂಸೆಯನ್ನು ಎದುರಿಸಿ ಗಾಂಧೀಜಿ ನಿಂತಿದ್ದರು"(ಅದೇ; ಪು. ೧೮೭). ಇಂತಹ ವಿಷಯ ಪರಿಸ್ಥಿತಿಯಲ್ಲಿ ಗಾಂಧೀಜಿಯ ಸತ್ಯ - ಅಹಿಂಸೆಗಳು ಅಲುಗಾಡದೆ ಸ್ಥಿರವಾಗಿ ನಿಂತು ಜಯವನ್ನು ಸಾಧಿಸಲು ಪ್ರಮುಖ ಅಸ್ತ್ರಗಳಾದವು.

ಎಸ್.ಎಲ್. ಭೈರಪ್ಪ ಅವರು ತಮ್ಮ ದಾಟು ಕಾದಂಬರಿಯಲ್ಲಿ ವರ್ಣಾಶ್ರಮ ಅಥವಾ ಜಾತಿಪದ್ಧತಿ ಕುರಿತು ವ್ಯಕ್ತಪಡಿಸಿದ್ದಾರೆ. ಗ್ರಾಮ್ಯ ಭಾಷೆಯನ್ನು ಇಲ್ಲಿ ಬಳಸಿದ್ದಾರೆ. ಸತ್ಯಭಾಮ ಎಂಬ ಪ್ರಮುಖ ಪಾತ್ರದ ಮೂಲಕ ಆರಂಭಗೊಳ್ಳುವ ಇದು ವರ್ಣಸಂಕರದ ಸಾಧ್ಯತೆಗಳ ಘಟನೆಗಳ ಇಡೀ ಕಥೆ ಒಂದು ರೀತಿಯಲ್ಲಿ ಕ್ರಾಂತಿಯನ್ನು ಸೃಷ್ಟಿಸುತ್ತದೆ. ಕಾದಂಬರಿ ನಿರ್ದಿಷ್ಟ ದಾಟಿಯಲ್ಲಿ ಸಾಗುತ್ತಿರುವಾಗ ಮೋಹನದಾಸನು ಸತ್ಯಭಾಮೆಯನ್ನು ಸಂಧಿಸಿದಾಗ ಅಂತ್ಯವೂ ಸನಿಹದಲ್ಲಿ ಎಂಬ ಅರಿವು ಮೂಡಿಸಿಕೊಳ್ಳುತ್ತಾನೆ. ಮೋಹನದಾಸ ಎಷ್ಟೇ ಕ್ರಾಂತಿಕಾರಿ ಮನೋಭಾವದವನಾದರೂ 'ವ್ಯವಸ್ಥೆ'ಯೇ ವಾಸ್ತವದ ಮುಂದೆ ಕ್ರಾಂತಿ ಗೌಣವೆಂದು ತಿಳಿದು ದುಷ್ಕೃತ್ಯದ ಹಾದಿಯನ್ನು ಹಿಡಿಯುತ್ತಾನೆ. ಆದರೆ ಕ್ರಾಂತಿಯು ಎಂದೂ ಸಮಸ್ಯೆಯೊಂದಕ್ಕೆ ತಕ್ಷಣ ಪರಿಹಾರವಾಗಲಾರದು ಎಂಬ ಸಂದೇಶ ಸತ್ಯಭಾಮ ಹಾಗೂ ಗಾಂಧಿವಾದಿಯಾದ ಬೆಟ್ಟಯ್ಯನ ಪಾತ್ರಗಳ ಮೂಲಕ ವೇದ್ಯವಾಗುತ್ತದೆ. ಮಾದಿಗ ಜನಾಂಗದ ಬೆಟ್ಟಯ್ಯ ಗಾಂಧೀಜಿಯ ಪ್ರಭಾವದಿಂದ ಪರಿವರ್ತನೆಗೊಂಡು ಅಹಿಂಸೆಯ ಪರಿಪಾಲಕನಾಗುತ್ತಾನೆ. ಆದರೆ ಮೋಹನದಾಸ ಹಿಂಸೆಯ ಹಾದಿಯಲ್ಲಿ ನಡೆದು ತನ್ನ ಕ್ರಾಂತಿಯಲ್ಲಿ ವಿಫಲನಾಗಿ ಕೊನೆಗೆ ಹತನಾಗುತ್ತಾನೆ.

ಬೆಟ್ಟಯ್ಯ ಗಾಂಧೀಜಿಯ ಆಶ್ರಮಕ್ಕೆ ಹೋಗಿ ಬಂದಿದ್ದರಿಂದ ನೇರವಾಗಿ ಅವರ ಪ್ರಭಾವಕ್ಕೆ ಒಳಗಾಗಿದ್ದಾನೆ. ಆದರೆ ಸತ್ಯಭಾಮೆ ತನ್ನ ಇತಿಹಾಸ ಅಧ್ಯಯನ, ಅಧ್ಯಾಪನಗಳಿಂದ ಜಾತ್ಯಾತೀತಳಾಗಿ, ಧರ್ಮಾತೀತಳಾಗಿ ಬದುಕಲು ಆಲೋಚಿಸುತ್ತಾಳೆ. ತಾನು ಬ್ರಾಹ್ಮಣ ಜಾತಿಯವಳಾದರೂ ಮೇಲಗಿರಿಗೌಡರ ಮಗ ಶ್ರೀನಿವಾಸನನ್ನು ಮದುವೆಯಾಗಲು ನಿಶ್ಚಯಿಸುತ್ತಾಳೆ. ಆದರೆ ಕಾರಣಾಂತರಗಳಿಂದ ಕೈಗೂಡುವುದಿಲ್ಲ. ಬೆಟ್ಟಯ್ಯ ಗಾಂಧಿ ಆಶ್ರಮಕ್ಕೆ ಹೋಗಿ ಓದು ಬರಹ, ವಿವಿಧ ರೀತಿಯ ಸನ್ಮಾರ್ಗಗಳನ್ನು ಕಲಿತುಕೊಂಡು ಹೊಸ ಮನುಷ್ಯನಾಗುತ್ತಾನೆ. ಬ್ರಾಹ್ಮಣರೂ ನಾಚುವಂತೆ ದಿನಾ ಒಗೆದ ಬಟ್ಟೆಗಳನ್ನು ತೊಡುತ್ತಾನೆ. "ಪೆಟ್ಟಿಗೆಯಂತಹ ಚರಕದಲ್ಲಿ ನೂತ ನೇಯ್ದು ಖಾದಿ ಪಂಚೆ, ಜುಬ್ಬ ಅದರ ಮೇಲೆ ಮುಚ್ಚಿದ ಕಾಲರ್‌ಕೋಟು ತೊಟ್ಟು, ತಲೆಗೆ ಗಾಂಧಿ ಟೋಪಿ ಹಾಕುತ್ತಾನೆ. ...ಊರಿಗೆ ಬಂದಾಗಲೂ ಜಗಲಿಯ ಮೇಲೆ ಕೂತು ಎಳೆಬಿಸಿಲು ಕಾಯಿಸುತ್ತಾ ಪೆಟ್ಟಿಗೆ - ಚರಕದಲ್ಲಿ ನೂಲು ತೆಗೆಯುತ್ತಿದ್ದ"(ಭೈರಪ್ಪ.ಎಸ್.ಎಲ್.; ೨೦೦೪; ಪು. ೧೨೦). ಹೀಗೆ ಗಾಂಧಿ ಆಶ್ರಮಕ್ಕೆ ಹೋಗಿ ಬಂದಿದ್ದರಿಂದ ಬೆಟ್ಟಯ್ಯ ಕಗ್ಗಲ್ಲಿನ ಸುಂದರವಾದ ಶಿಲೆಯಾಗಿ

ಮಾರ್ಪಾಡುತ್ತಾನೆ. ವೇಷಭೂಷಣ, ಆಹಾರ ಮುಂತಾದ ರೀತಿಯಲ್ಲಿ ಸುಧಾರಿಸುತ್ತಾನೆ. ಮಾರಿಗೆ ಕೋಣವನ್ನು ಬಲಿ ಕೊಡುವುದನ್ನು ಬಹಿರಂಗವಾಗಿ ಅಲ್ಲದಿದ್ದರೂ ಅಂತರಂಗದಲ್ಲಿ ವಿರೋಧಿಸುತ್ತಾನೆ.

"ಮಾದೀಗ ಕೇರಿ ಹೊಲೆಗೇರಿಗಳಿಗೆ ಹರಿಜನ ಕಾಲೋನಿ ಅಂತ ಹೆಸರಿಟ್ಟು ಬೋರ್ಡ್ ಹಾಕಿದರು. ಆ ಜಾತಿಯ ಹೆಸರನ್ನೇ ಹರಿಜನರು ಅಂತ ಬದಲಾಯಿಸಿದರು. ಇವರೆಲ್ಲ ಹೇಳುವ ಗಾಂಧಿ ಮಹಾತ್ಮ ಇಟ್ಟ ಹೆಸರಂತೆ ಅದು. ಹರಿಜನ ಅಂದರೆ ದೇವರಿಗೆ ಸೇರಿದವರು. ಹಾಗಾದರೆ ನಾವೆಲ್ಲ ದೇವರಿಗೆ ಸೇರಿರದವರೋ? ಎಂದು ಊರಿಗೆ ಊರೇ ಇದನ್ನು ಪ್ರಶ್ನಿಸಿತು. ಗಾಂಧಿ ವೈಷ್ಣವ ಜಾತಿಯೋನು, ತಮ್ಮ ಜಾತಿಯ ಜನಸಂಖ್ಯೆ ಹೆಚ್ಚಿಸಿಕೊಳ್ಳಬೇಕು ಅಂತ ಈ ತಂತ್ರ ಮಾಡಿದ್ದಾನೆ. ಹಿಂದೆ ರಾಮಾನುಜಾಚಾರ್ಯರು ತಂತ್ರ ಮಾಡಿ, ಹೊಲೇರು ಮಾದಿಗರಿಗೆಲ್ಲ ನಾಮ ಹಾಕಿಸಿ ತಮ್ಮ ಜಾತಿ ಬೆಳೆಸಿಕೊಂಡ ಹಾಗೆ"(ಅದೇ; ಪು. ೧೨೦) ಎಂದು ಲಿಂಗಾಯತ ಮುಖಂಡರು ಗಾಂಧೀಜಿಯನ್ನು ಸಂಶಯಾತ್ಮಕವಾದ ರೀತಿಯಲ್ಲಿ ನೋಡುತ್ತಾರೆ. "ಬೆಟ್ಟಯ್ಯ ತನ್ನ ಮಗ ತಿಮ್ಮನ ಹೆಸರು ಮೋಹನದಾಸ ಎಂದು ಮಾಡಿದ. ಮಗಳು ಗುಡ್ಡಿಗೆ ಮೀರಾ ಎಂದು ಹೆಸರಿಟ್ಟ.... ಗಾಂಧಿ ಮಹಾತ್ಮನ ಹುಟ್ಟು ಹೆಸರು ಮೋಹನದಾಸ ಅಂತಲಂತೆ. ಬೆಟ್ಟಯ್ಯ ಅವನ ಗುರುವಿನ ಹೆಸರನ್ನು ಮಗನಿಗೆ ಇಟ್ಟಿದ್ದಾನೆ"(ಅದೇ; ಪು. ೧೨೧). ಬೆಟ್ಟಯ್ಯ ಗಾಂಧೀಜಿಯನ್ನು ತನ್ನ ಜೀವಿತದ ಪೂರ್ಣ ಕಾಲವಾಗಿಸಿಕೊಂಡಿದ್ದಾನೆ. ಆದ್ದರಿಂದ ಬೆಟ್ಟಯ್ಯನಿಗೆ ಮಾತ್ರವಲ್ಲದೆ ಕೆಳವರ್ಗ(ಮಾದಿಗ)ದ ಎಲ್ಲಾ ಜನಾಂಗಕ್ಕೂ ಗಾಂಧೀ ಒಬ್ಬ ಗುರುವಾಗಿದ್ದಾರೆ ಎಂದು ವಿವರಿಸಲಾಗಿದೆ. ಒಟ್ಟಾರೆಯಾಗಿ ಗಾಂಧೀಜಿಯನ್ನು ಅಂಧಕಾರದ ವ್ಯವಸ್ಥೆಯನ್ನು ಬದಲಾಯಿಸುವ ಹರಿಕಾರನಾಗಿ, ವೈಚಾರಿಕ ಚಿಂತಕನಾಗಿ ಚಿತ್ರಿಸಲಾಗಿದೆ.

ನವ್ಯ ಕಾದಂಬರಿಕಾರರು ನೇರವಾಗಿ ಅಥವಾ ಅನೇರವಾಗಿ ಗಾಂಧೀಜಿಯನ್ನು ಕುರಿತು ಕೃತಿ ರಚನೆ ಮಾಡಿದುದು ಅತೀ ವಿರಳ. ಎಲ್ಲೋ ಒಂದು ಕಡೆ ಸಂಕೇತಗಳ(ಗಾಂಧೀತತ್ವ)ನ್ನು ಬಳಸಿ ಪಾತ್ರಗಳ ಮೂಲಕ ಗಾಂಧಿಯನ್ನು ವ್ಯಕ್ತಪಡಿಸಲು ಪ್ರಯತ್ನಿಸಿದ್ದಾರೆ. ಇಡೀ ಒಂದು ವ್ಯವಸ್ಥೆಗೆ ಪರಿಹಾರವನ್ನು ಸೂಚಿಸುವ ಶಕ್ತಿಯಾಗಿ, ವ್ಯಕ್ತಿಯಾಗಿ ಗಾಂಧಿಯನ್ನು ಪ್ರತಿನಿಧಿಸಿದ್ದಾರೆ ಮತ್ತು ವಿಮರ್ಶಾಪ್ರಜ್ಞೆಯ ನೆಲೆಯಲ್ಲಿ ಕಂಡರಿಸಿದ್ದಾರೆ. "ನವ್ಯ ಕಾದಂಬರಿಗಳ ಅತಿಮುಖ್ಯ ಲಕ್ಷಣಗಳೆಂದರೆ ಪರಕೀಯ ಪ್ರಜ್ಞೆ, ಏಕಾಂಗಿತನ ನಿರರ್ಥಕತೆ"(ನಾಗಣ್ಣ. ಡಿ.; ೨೦೦೫; ಪು. ೧೭೦) ಎಂದು ತ.ಸು. ಶಾಮರಾಯರು ಗುರುತಿಸಿರುವಂತೆ ನವ್ಯರು ಸದ್ಯದ ಸಮಸ್ಯೆಗಳಿಗೆ ತತ್‌ಕ್ಷಣ ಪರಿಹಾರ ಹುಡುಕಲು ಹಲವು ಪ್ರತಿಮೆ, ಸಂಕೇತಗಳ ತಂತ್ರಗಳನ್ನು ಬಳಸಿದರೇ ಹೊರತು ರಾಷ್ಟ್ರನಾಯಕರ ಬಗೆಗೆ, ಕಾದಂಬರಿ ರಚನೆಗೆ ಮಾಡಿದುದು ಕಡಿಮೆ ಎಂದು ಹೇಳಬಹುದು. ಪ್ರಸಿದ್ಧ ರಾಷ್ಟ್ರನಾಯಕ(ಗಾಂಧೀ, ಅಂಬೇಡ್ಕರ್ ಮುಂತಾದ)ರುಗಳಿಗಿಂತ ಸಾಮಾನ್ಯ ಮನುಷ್ಯನ ಮನಸ್ಸಿನ ಸೂಕ್ಷ್ಮ ಪದರುಗಳನ್ನು, ಒಳತೋಟಗಳನ್ನು ಅನಾವರಣ ಮಾಡಲು ಪ್ರಯತ್ನಿಸಿದ್ದಾರೆ.

೪.೪. ದಲಿತ - ಬಂಡಾಯ ಕಾದಂಬರಿ

ಗಾಂಧೀಜಿಯವರನ್ನು ಕುರಿತು ದಲಿತ ಲೇಖಕರೇ ರಚಿಸಿದ ಕಾದಂಬರಿಗಳು ದೊರಕದಿರುವ ಕಾರಣದಿಂದ ಒಟ್ಟಾರೆ ದಲಿತ ಬಂಡಾಯ ಧೋರಣೆಗಳುಳ್ಳ ಕಾದಂಬರಿಗಳನ್ನು ವಿವರಿಸಿಕೊಳ್ಳಲಾಗಿದೆ. ಹಾಗಾಗಿ ದಲಿತ ಬಂಡಾಯ ಧೋರಣೆಯಲ್ಲಿಯೇ ಅಧ್ಯಾಯವನ್ನು ನಿರೂಪಿಸಲಾಗುತ್ತಿದೆ. ಸಾವಿರಾರು ವರ್ಷಗಳಿಂದ ರಾಜಕೀಯ, ಆರ್ಥಿಕ ಗುಲಾಮಗಿರಿಯ ಜೊತೆಗೆ ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾದ ಕೆಳವರ್ಗ(ದಲಿತ) ಜನಾಂಗಕ್ಕೆ ವಸಾಹತುಶಾಹಿ ಪ್ರವೇಶದಿಂದ ಅಕ್ಷರ ಕಲಿಯುವ ಅವಕಾಶ ಲಭಿಸಿದ ನಂತರ ಮಾಧ್ಯಮದ ಮೂಲಕ ತನ್ನ ಹಿಂದಿನ ಚಾರಿತ್ರ್ಯವನ್ನು ಅರ್ಥೈಸಿಕೊಳ್ಳಲು ಮತ್ತು ತನ್ನ ಅನುಭವಾತ್ಮಕ ಭಾವನೆಗಳನ್ನು ಲಿಖಿತ ರೂಪದಲ್ಲಿ ಅಭಿವ್ಯಕ್ತಿಸುವ ಮಾರ್ಗವೇ ದಲಿತ - ಬಂಡಾಯ ಸಾಹಿತ್ಯ ಚಳುವಳಿಯ ಉಗಮಕ್ಕೆ ಕಾರಣವಾಯಿತು. ಇದು ಮಹಾರಾಷ್ಟ್ರದಲ್ಲಿ ಪ್ಯಾಂಥರ್ ಚಳುವಳಿ, ಕರ್ನಾಟಕದಲ್ಲಿ ದಲಿತ ಚಳುವಳಿಯಾಗಿ ಮೂಡಿಬಂದವು. ಕರ್ನಾಟಕದ ದಲಿತ ಬರಹಗಾರರು ೧೯೭೬ ಡಿಸೆಂಬರ್ ೧೮ ಮತ್ತು ೧೯ರಂದು ಮೊದಲ ಬಾರಿಗೆ ಭದ್ರಾವತಿಯಲ್ಲಿ ಕರ್ನಾಟಕ ದಲಿತ ಲೇಖಕರ ಮತ್ತು ಚಿಂತಕರ, ಕಲಾವಿದರ ಸಮ್ಮೇಳನ ನಡೆಸಿದರು. ಇದೇ ಸಂದರ್ಭದಲ್ಲಿ ಶೂದ್ರ ಹಾಗೂ ಮೇಲ್ಜಾತಿಯ ಕೆಳವರ್ಗದ ಬರಹಗಾರರು ಸ್ವಾತಂತ್ರ್ಯೋತ್ತರ ಭಾರತದ ಸಮಾಜದ ಜನವಿರೋಧಿ, ಜೀವವಿರೋಧಿ ಮೌಲ್ಯಗಳನ್ನು ಹಾಗೂ ಕನ್ನಡ ಸಾಹಿತ್ಯದ ಸ್ಥಗಿತ ಮೌಲ್ಯಗಳನ್ನು ಪ್ರತಿಭಟಿಸಿ ದಲಿತ-ಬಂಡಾಯ ಸಾಹಿತ್ಯಕ್ಕೆ ಚಲನಶೀಲ ರೂಪ ಕೊಡುವ ಯತ್ನ ನಡೆಸಿದರು.

'ಇದು ಆಧುನಿಕ ಕನ್ನಡ ಸಾಹಿತ್ಯದ ಒಂದು ಮಹತ್ವದ ಘಟ್ಟವಾಗಿದ್ದು, 'ದಲಿತ-ಬಂಡಾಯ' ಎಂಬ ಎರಡು ಸಾಹಿತ್ಯ ಪರಿಕಲ್ಪನೆಗಳ ಮನೋಧರ್ಮವು ವಸ್ತು, ಅನುಭವ, ಸಂವೇದನೆ, ಅಭಿವ್ಯಕ್ತಿ ಕ್ರಮ ಮೌಲ್ಯಗಳು ಎಂಬಿತ್ಯಾದಿಯ ದೃಷ್ಟಿಯಿಂದ ಭಿನ್ನವಾಗಿದ್ದರೂ, ಆಶಯ ಮತ್ತು ಚಾರಿತ್ರಿಕ ದೃಷ್ಟಿಯಿಂದ ಅವುಗಳು ಒಂದಕ್ಕೊಂದು ಪೂರಕ ಸಂಬಂಧವನ್ನು ಸ್ಥಾಪಿಸಿಕೊಂಡಿರುವ ಒಂದು ನಾಣ್ಯದ ಎರಡು ಮುಖಗಳಾಗಿವೆ"(ನಾಗಣ್ಣ. ಡಿ.; ೨೦೦೫; ಪು. ೧೭೩). ಅಂತೆಯೇ ಕನ್ನಡ ಪರಂಪರೆಯ ಹಿನ್ನೆಲೆಯಲ್ಲಿ ಒಂದು ಮಹತ್ವದ ಸ್ಥಾನಮಾನಗಳನ್ನು ಹೊಂದಿದ್ದು, ಇಪ್ಪತ್ತನೆಯ ಶತಮಾನದ ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ಅಧಿಕೃತವಾಗಿ ಕಾಣಿಸಿಕೊಳ್ಳುವ ಮೂಲಕ ಇಡೀ ಕನ್ನಡ ಸಾಹಿತ್ಯಕ್ಕೊಂದು ಈ ದಲಿತ - ಬಂಡಾಯ ಹೊಸ ತಿರುವನ್ನು ಕೊಟ್ಟವು. "ದಲಿತ, ಅಸ್ಪೃಶ್ಯ ಎಂಬ ಪದಕ್ಕೆ 'ಹರಿಜನ' ಎಂಬ ಪದವನ್ನು ಮಹಾತ್ಮ ಗಾಂಧೀಜಿಯವರು ಬಳಕೆಗೆ ತಂದರು ಎಂದು ಹೇಳಲಾಗುತ್ತದೆ. ಆದರೆ ೧೭ನೇ ಶತಮಾನದಲ್ಲೇ ಹರಿದಾಸರು ಅಸ್ಪೃಶ್ಯರನ್ನು ಹರಿಜನ ಎಂದು ಕರೆದರು. ಇತಿಹಾಸದಲ್ಲಿ ಹುದುಗಿ ಹೋಗಿದ್ದ ಈ ಪದವನ್ನು ಮಹಾತ್ಮ ಗಾಂಧೀಜಿಯವರು ಮತ್ತೆ ಬಳಕೆಗೆ ತಂದರು"(ಅದೇ; ಪು. ೧೭೬). ಹೀಗೆ ದಲಿತ, ಅಸ್ಪೃಶ್ಯರ ಬಗ್ಗೆ ಕಾಳಜಿ, ಅನುಕಂಪ, ಮಾನವೀಯತೆಯನ್ನು ತೋರಿಸಿದ ಮಹಾತ್ಮ ಗಾಂಧೀಜಿಯವರನ್ನು ದಲಿತ-ಬಂಡಾಯ ಕಾದಂಬರಿಕಾರರು ಯಾವ ಬಗೆಯಲ್ಲಿ ತಮ್ಮ ಕಾದಂಬರಿಗಳಲ್ಲಿ ಕಂಡರಿಸಲು ಪ್ರಯತ್ನಿಸಿದ್ದಾರೆ ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ದೇವನೂರು ಮಹದೇವ, ಮ.ನ. ಜವರಯ್ಯ, ಕುಂ. ವೀರಭದ್ರಪ್ಪ, ಬರಗೂರು ರಾಮಚಂದ್ರಪ್ಪ, ಚೆನ್ನಣ್ಣ ವಾಲೀಕಾರ, ಹೊರೆಯಾಲ ದೊರೆಸ್ವಾಮಿ, ಆರ್.ವಿ. ಭಂಡಾರಿ, ಬೆನಕನಹಳ್ಳಿ ಜಿ. ನಾಯಕ, ಕೃಷ್ಣಮೂರ್ತಿ ಹನೂರು, ಕಾಳೇಗೌಡ ನಾಗವಾರ, ಮುಳ್ಳೂರು ನಾಗರಾಜ, ಅರವಿಂದ ಮಾಲಗತ್ತಿ ಹೀಗೆ ಹಲವರನ್ನು ದಲಿತ ಮತ್ತು ಬಂಡಾಯ ಕಾಲಘಟ್ಟದ ಕಾದಂಬರಿಕಾರರೆಂದು ಗುರುತಿಸಿಕೊಳ್ಳುತ್ತೇವೆ.

ಇವರೆಲ್ಲ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯನ್ನು, ಪುರೋಹಿತಶಾಹಿಯನ್ನು, ಜಮೀನ್ದಾರಿ ಪದ್ಧತಿ, ಬಂಡವಾಳಶಾಹಿ ಪದ್ಧತಿಯನ್ನು, ಲಿಂಗಾಧಾರಿತ ಸಾಮಾಜಿಕ ಅಸಮಾನತೆಯನ್ನು, ಕೋಮು - ಗಲಭೆಯನ್ನು, ಅಧಿಕಾರಶಾಹಿಯ ಸರ್ವಾಧಿಕಾರವನ್ನು ವಿರೋಧಿಸಿ ಜನಪರ ಕಾಳಜಿ ವಹಿಸಿ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಕೃತಿಗಳ ರಚನೆ ಕೈಗೊಂಡರು. ದಲಿತ ಮತ್ತು ಬಂಡಾಯ ಕಾಲಘಟ್ಟದಲ್ಲಿ ಗಾಂಧೀಜಿಯನ್ನು ಪರಿಭಾವಿಸಿದ ಅಥವಾ ಕಂಡರಿಸಿದ ಬಗೆಯನ್ನು ಇಲ್ಲಿ ನೋಡಲಾಗುತ್ತಿದೆ.

ನಾಗತಿಹಳ್ಳಿ ಚಂದ್ರಶೇಖರ ಅವರು ಬಾಲ್ಯದಲ್ಲಿಯೇ ಸ್ವಾತಂತ್ರ್ಯ ಹೋರಾಟದ ಕತೆಗಳ ಬಗ್ಗೆ, ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಕುತೂಹಲವನ್ನು ಹೊಂದಿದ್ದರು. 'ವಲಸೆ ಹಕ್ಕಿಯ ಹಾಡು' ಎಂಬ ಕಾದಂಬರಿಯಲ್ಲಿ ಒಬ್ಬ ಸ್ವಾತಂತ್ರ್ಯ ಹೋರಾಟಗಾರನ(ಸ್ವಾತಂತ್ರ್ಯೋತ್ತರ ಭಾರತದಲ್ಲಿ) ಜೀವನ, ಸಂವೇದನೆಗಳನ್ನು ಕುರಿತು ಚಿತ್ರಿಸಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರನಾದ ಕೆಂಚೇಗೌಡರು ಒಬ್ಬ ಅಪ್ಪಟ ಗಾಂಧಿವಾದಿ. ಶುಭ್ರವಾದ ಖಾದಿ ಬಟ್ಟೆ, ಗಾಂಧಿ ಟೋಪಿಯನ್ನು ಧರಿಸುತ್ತಿದ್ದರು. ತಮ್ಮ ಸ್ವಗ್ರಾಮವಾದ ಸಿ.ಎಂ. ಕೊಪ್ಪಲುವಿನಲ್ಲಿ ನೆಲೆಸಿರುತ್ತಾರೆ. ಈ ಹಳ್ಳಿಯ ಮೇಲೆ ಹೈವೆ(ಹೆದ್ದಾರಿ) ಹಾದು ಹೋದ ಕಾರಣ ಆಧುನಿಕತೆಯ ಗಾಳಿ ಬೀಸತೊಡಗಿತು. ಕೆಂಚೇಗೌಡರು ಗಾಂಧಿ ಜೊತೆ ಜೈಲುವಾಸವನ್ನು ಅನುಭವಿಸಿ ಬಂದಿದ್ದರು. ಸಬರಮತಿ ಆಶ್ರಮದಲ್ಲಿ ಗಾಂಧೀಜಿಯ ಆಪ್ತ ಒಡನಾಡಿ ಆಗಿದ್ದರು. ಹಾಗಾಗಿ ಕೆಂಚೇಗೌಡರು ಗಾಂಧೀಜಿ ತತ್ತ್ವಾದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ತಮ್ಮ ಹಳ್ಳಿಯಲ್ಲಿ ಕೆಂಚೇಗೌಡರು ಜನತೆಗೆ ಕುಡಿಯುವ ನೀರಿನ ಬಾವಿಯನ್ನು ತೋಡಿಸಿಕೊಟ್ಟಿದ್ದಾರೆ. ಹರಿಜನರಿಗೆ ಆರು ಎಕರೆ ಜಮೀನು ದಾನ ಕೊಟ್ಟಿದ್ದಾರೆ. ಮಾಧ್ಯಮಿಕ ಶಾಲೆಗೆ ಕಟ್ಟಡ ಕಲ್ಪಿಸಿಕೊಟ್ಟ ಮಹಾ ಉದಾರವಾದಿ ಹಾಗೂ ಮಾನವತಾವಾದಿಯಾಗಿದ್ದಾರೆ. ಊರಿಗೆ ಮುಖಂಡನಾಗಿ, ಸಮಸ್ಯೆಗಳಿಗೆ (ಪಂಚಾಯ್ತಿ) ಪರಿಹಾರಗಳನ್ನು ಸೂಚಿಸುವ ತೀರ್ಪುಗಾರರೂ ಸಹ ಆಗಿದ್ದಾರೆ. ತನ್ನ ಹಳ್ಳಿಯ ಮಾರ್ಗದರ್ಶಕರೂ ಸಹ ಆಗಿದ್ದಾರೆ. ಆದರೆ ತನ್ನ ಮನೆಯ ಸಮಸ್ಯೆಗಳನ್ನು ಅಥವಾ ಮಗನ (ಸ್ವತಂತ್ರ) ಕುಡಿತವನ್ನು, ದುರ್ನಡತೆಯನ್ನು ತಿದ್ದುವಲ್ಲಿ ಅಸಮರ್ಥರಾಗಿದ್ದಾರೆ. ಗಾಂಧೀಜಿ ತನ್ನ ಹಿರಿಮಗ ಹರಿಲಾಲನನ್ನು ತಿದ್ದುವಲ್ಲಿ ಹೇಗೆ ಸೋತರೋ ಹಾಗೇ ಕೆಂಚೇಗೌಡರದು ಅದೇ ಪರಿಸ್ಥಿತಿಯಾಗಿದೆ. ಒಟ್ಟಿನಲ್ಲಿ ಗಾಂಧೀಜಿಯ ಕುಟುಂಬವನ್ನೇ ಈ ಕಾದಂಬರಿ ಪ್ರತಿನಿಧಿಸುತ್ತದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ದಿನ ಆಚರಿಸಲು, ಭಾರತದ ಬಾವುಟವನ್ನು ಹಾರಿಸಲು ಕೊಪ್ಪಲು ಮಾಧ್ಯಮಿಕ ಶಾಲೆಯ ಮುಖ್ಯಸ್ಥ ಸುಬ್ಬೇಗೌಡ ಉದಾಸೀನ ತೋರಿಸುತ್ತಾರೆ. ಈ ಸಮಾರಂಭಕ್ಕೆ ಗಾಂಧಿವಾದಿಯಾದ ಕೆಂಚೇಗೌಡರನ್ನು ಅತಿಥಿಯಾಗಿ ಆಹ್ವಾನಿಸಿದ್ದರು. ಶಾಲಾ ಮುಖ್ಯಸ್ಥರ ಬೇಜವಾಬ್ದಾರಿ, ಉದಾಸೀನತೆಯಿಂದ ಕೆಂಚೇಗೌಡರು "ಇವತ್ತು ರಾಷ್ಟ್ರಧ್ವಜ ಹಾರ್‍ಸಿ ಝುಂಡಾ ಉಂಚಾ ಹೇಳ್ದೆ ಇದ್ರೆ ಭಾರತಾಂಬೆ ಮೆಚ್ತಾಳಾ? ಗಾಂಧಿ ಆತ್ಮಕ್ಕೆ ಶಾಂತಿ ಸಿಕ್ಕುತ್ತಾ?"(ಚಂದ್ರಶೇಖರ ನಾಗತಿಹಳ್ಳಿ; ೨೦೦೮; ಪು. ೫) ಎಂದು ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ಹೇಗೋ ಧ್ವಜಾರೋಹಣ ನಡೆಸಿದರು. ನಂತರ ಮಕ್ಕಳೊಂದಿಗೆ ಊರೊಳಗೆ ಮೆರವಣಿಗೆ ತೆಗೆಯುವುದು ಕೆಂಚೇಗೌಡರ ರೂಢಿಯಾಗಿತ್ತು. ದೇಶಭಕ್ತರ ಫೋಟೋಗಳೊಂದಿಗೆ ಜೈಕಾರ ಕೂಗುತ್ತಾ ನಾಡಗೀತೆಗಳನ್ನು ಹೇಳುತ್ತಾ ಸಾಗುವುದು ಈ ಮೆರವಣಿಗೆಯ ಉದ್ದೇಶ. ದೈಹಿಕ ಶಿಕ್ಷಕ ಯಲ್ಲಯ್ಯನು "ಗಾಂಧೀ ಫೋಟೋ ಸಿಗಲಿಲ್ಲವೆಂದು ಸಾಯಿಬಾಬಾ, ಶನಿದೇವರು, ಧರ್ಮಸ್ಥಳ ಮಂಜುನಾಥ, ಈಶ್ವರ ಮುಂತಾದ ದೇವರ ಫೋಟೋಗಳನ್ನು ಹುಡುಗರ ಕೈಗೆ ಕೊಟ್ಟು ನಿಲ್ಲಿಸಿದ್ದನು"(ಅದೇ; ಪು. ೬). ಇದರಿಂದ ಕೆಂಚೇಗೌಡರಿಗೆ ಕಸಿವಿಸಿಯಾಯಿತು. ಗಾಂಧೀಜಿಯ ಚಿಂತನೆಗಳನ್ನು, ಆದರ್ಶಗಳನ್ನು ಪಾಲಿಸದಿದ್ದರೂ ಚಿಂತೆಯಿಲ್ಲ, ಅವರ ಫೋಟೋವನ್ನು ಮರೆಯುವಷ್ಟರಮಟ್ಟಿಗೆ ನಮ್ಮ ಜನತೆ ಮುಂದಾದರಲ್ಲವೆಂದು ಆತಂಕ ವ್ಯಕ್ತಪಡಿಸುತ್ತಾರೆ. ಸ್ವತಂತ್ರ ಭಾರತದಲ್ಲಿ ಗಾಂಧೀಜಿಯವರ ಅವಶ್ಯಕತೆ ಇಲ್ಲವೆಂದು ಈ ಸನ್ನಿವೇಶ ಧ್ವನಿಸುತ್ತದೆ

ಕೆಂಚೇಗೌಡರ ಉಪಕಾರ ಪಡೆದ ತನ್ನ ಹಳ್ಳಿಯ ಜನರು ಬೆನ್ನ ಹಿಂದೆ "ತನ್ನ ಮನೆ ಮಾತು ಮುಚ್ಚೋಕಾಗ್ದಿದ್ರೂ ಊರ್‍ಗೆಲ್ಲಾ ನ್ಯಾಯ ಹೇಳ್ತಾನೆ, ಕುಂಟನಿಗೆ ಎಂಟು ಚೇಷ್ಟೆ, ಗಾಂಧಿ ಜತೆ ಅದೇನ್ ಕಿಸಿದಿದ್ನೋ"(ಅದೇ; ಪು. ೧೬). ಇಂಥ ತಮಾಷೆ - ವ್ಯಂಗ್ಯ ಮಾತುಗಳನ್ನು ಆಡುತ್ತಾರೆ. ಗಾಂಧೀಜಿಯವರ ಕೌಟುಂಬಿಕ ಜೀವನವನ್ನು ಅವ್ಯಕ್ತ ರೀತಿಯಲ್ಲಿ ವ್ಯಂಗ್ಯ ಮಾಡಲಾಗಿದೆ. "ಗಾಂಧಿತನ ಏನು ಗಿಟ್ಟುವುದಿಲ್ಲ, ಏಸುತನ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಒಂದು ಕೆನ್ನೆಗೆ ಹೊಡೆದವನಿಗೆ ಇನ್ನೊಂದು ಕೆನ್ನೆ ಒಡ್ಡಿದರೆ ಅದಕ್ಕೂ ಬಾರಿಸುತ್ತಾರಲ್ಲ" (ಅದೇ; ಪು. ೧೬). ಗಾಂಧಿ ತತ್ವಗಳು ಒಂದೊಂದಾಗಿ ಕಳಚಿ ಹೋಗುತ್ತಿರುವುದನ್ನು ವ್ಯಕ್ತಪಡಿಸಲಾಗಿದೆ.

ದೇಶ ಸ್ವತಂತ್ರಗೊಂಡು ಭಾರತ - ಪಾಕಿಸ್ತಾನವೆಂದು ಇಬ್ಭಾಗವಾಯಿತು. ದೆಹಲಿಯಲ್ಲಿ ನೆಹರು ಪ್ರಧಾನಿಮಂತ್ರಿಯಾಗುವ ಮಹಾದಾಸೆಯಲ್ಲಿದ್ದರು. ಅವರ ಸಚಿವ ಸಂಪುಟದವರಿಗೆ ಯಾರಿಗೆ ಯಾವ ಖಾತೆಗಳನ್ನು ಹಂಚುವುದು ಎಂಬ ಹುನ್ನಾರಗಳು ಮಾಡುತ್ತಿದ್ದಾಗ "ಗಾಂಧಿ ಕಲ್ಕತ್ತದಲ್ಲೋ, ಅಹಮದಾಬಾದಿನಲ್ಲೊ, ಕೋಮುಗಲಭೆಗಳಾದ ಊರಿನಲ್ಲೋ, ರಣರಣ ಬಿಸಿಲಿನಲ್ಲಿ ತುಂಡುಬಟ್ಟೆ ಉಟ್ಟು ದಂಗೆಯಿಂದ ನೊಂದವರನ್ನು ಸಂತೈಸುತ್ತಿದ್ದರು"(ಅದೇ; ಪು. ೪೨). ದೇಶ ಸ್ವತಂತ್ರಗೊಂಡರೂ ಗಾಂಧಿ ಯಾವ ಅಧಿಕಾರ ಆಮಿಷಗಳಿಗೆ ಒಳಗಾಗದೆ ನಿಜವಾದ ದೇಶಪ್ರೇಮಿ. ನಿಸ್ವಾರ್ಥಪರ ರಾಗುತ್ತಾರೆ. ಅವರಿಗಿದ್ದ ದೇಶಪ್ರೇಮ, ಬಡವರ ಮೇಲಿನ ಪ್ರೀತಿ ವಾತ್ಸಲ್ಯಗಳಿಂದ ಮಾನವೀಯ ಮೌಲ್ಯಗಳ ಸಾಕಾರಮೂರ್ತಿಯಾಗುತ್ತಾರೆ. ಆದರೆ ಸ್ವಾತಂತ್ರ್ಯೋತ್ತರ ಭಾರತದ ಜನತೆ

ಗಾಂಧೀಜಿಯನ್ನು ಅರ್ಥೈಸಿಕೊಳ್ಳುವಲ್ಲಿ ಸೋಲುತ್ತಿದ್ದಾರೆ. ಅವರ ಬಗೆಗೆ ಋಣಾತ್ಮಕ ಮನೋಭಾವಗಳೇ ಹೆಚ್ಚಾಗುತ್ತವೆ. ಗಾಂಧಿಯನ್ನು - ಅವರ ತತ್ವಗಳನ್ನು ಟೀಕಿಸುವ ಧ್ವನಿಗಳೇ ಕಾಣುತ್ತವೆ. "ಹಳೇ ಕಾಲ್ದ ಮುದುಕನ್ನ ಕಟ್ಕೊಂಡು ಏನ್ ಸಾಧಿಸೋಕಾಯ್ತದೆ.....? ಇವತ್ತಿಗೇನ್ ಬೇಕು ಅದನ್ ನೋಡ್ಕೋಬೇಕು. ಇನ್ನೂ ಗಾಂಧಿ ಗಾಂಧಿ ಅಂತ ಕೂತ್ರೆ ಹಿಟ್ಟು ಹುಟ್ತದಾ?"(ಅದೇ; ಪು. ೭೮) ಎಂದು ಪಂಡ್ರಿಯು ತನ್ನ ತಾಯಿಗೆ ಗಾಂಧಿಯ ವಿಚಾರಶಕ್ತಿ ಇಂದಿನ ಕಾಲದಲ್ಲಿ ನಡೆಯುವುದಿಲ್ಲ ಎಂದು ಹೇಳುತ್ತಾನೆ.

ಗಾಂಧೀಜಿಯ ಚರಕ, ಖಾದಿ, ಸ್ವದೇಶಿ ಮುಂತಾದವೆಲ್ಲಾ ಮಾಯವಾಗಿ ಆಧುನಿಕತೆ ಪ್ರವೇಶಿಸಿದೆ. ಡಿಶ್ ಆಂಟೆನಾಗಳು, ಟಿ.ವಿ.ಗಳು, ಸಿಲ್ಕ್ ಮಾದರಿಯ ಬಟ್ಟೆಗಳು, ಇಂಗ್ಲೀಷ್ ಮಾಧ್ಯಮ ಶಾಲೆ, ಕಾನ್ವೆಂಟುಗಳು ಬಂದಿಳಿದುಬಿಟ್ಟಿವೆ. "ಯಾವ ಪತ್ರಿಕೆಯಲ್ಲೂ ಹಿಂಸೆ, ಅತ್ಯಾಚಾರ, ಭ್ರಷ್ಟಾಚಾರಿಗಳ ಸುದ್ದಿಗಳೇ ತುಂಬಿವೆ. ಸ್ವಾತಂತ್ರ್ಯ ಚಳುವಳಿಯನ್ನು ಕಂಡ ಎಲ್ಲ ಕೊಂಡಿಗಳು ಸತ್ತು ಹೋಗಿವೆ. ನಾನು ಕಡೆಯ ಕೊಂಡಿ ಇರಬಹುದು. ನನ್ನದೇ ಸ್ಥಿತಿಯಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಕುಟುಕು ಜೀವ ಹಿಡಿದು ಬದುಕಿದ್ದರು. ನಾವು (ಗಾಂಧಿವಾದಿಗಳು) ಯಾವ ಮೌಲ್ಯಗಳ ಪ್ರತಿಪಾದಕರಾಗಿದ್ದೇವೆ? ನಮ್ಮಗಳ ಬದುಕಿನ ಅರ್ಥವೇನು?"(ಅದೇ; ಪು. ೮೮) ಎಂದು ಸ್ವಾತಂತ್ರ್ಯ ಹೋರಾಟಗಾರ, ಗಾಂಧಿವಾದಿಯಾದ ಕೆಂಚೇಗೌಡರು ತಮ್ಮ ನೋವನ್ನು ತನ್ನ ಗೆಳತಿಗೆ ಪತ್ರದ ಮೂಲಕ ವ್ಯಕ್ತಡಿಸುತ್ತಾರೆ.

ನಾಗತಿಹಳ್ಳಿ ಚಂದ್ರಶೇಖರ ಅವರು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧೀಜಿ ತತ್ವಾದರ್ಶಗಳನ್ನು ಪಾಲಿಸಿ ನಡೆದ ಸ್ವಾತಂತ್ರ್ಯ ಹೋರಾಟಗಾರರ ದುಃಸ್ಥಿತಿಗಳನ್ನು ಈ ಕಾದಂಬರಿಯಲ್ಲಿ ಬಹು ವಾಸ್ತವವಾಗಿ ಚಿತ್ರಿಸಿದ್ದಾರೆ. ೭೦ರ ದಶಕದಿಂದೀಚೆಗೆ ಗಾಂಧೀಜಿಯ ತತ್ವಗಳು ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ. ಅವು ಕೇವಲ ಪುಸ್ತಕದಲ್ಲಿ ಬರೆದಿಡಲು ಮಾತ್ರ ಸೀಮಿತವಾಗಿವೆ. ಅವು ಇಂದು ಕಾರ್ಯೋನ್ಮುಖವಾಗುವುದಿಲ್ಲವೆಂದು ಈ ಕಾದಂಬರಿಯಲ್ಲಿ ವ್ಯಕ್ತಗೊಂಡಿವೆ. "ಬಾಲ್ಯದಲ್ಲಿ ಕತೆ ಕೇಳಲು ಕಿವಿಯನ್ನು ಬಾಯಿಯನ್ನು ಒಟ್ಟಿಗೇ ತೆರೆದಿರುತ್ತಿದ್ದ ನನಗೆ ಸ್ವಾತಂತ್ರ್ಯ ಹೋರಾಟದ ಕತೆಗಳು ಸದಾ ಕುತೂಹಲದ ಬಾಗಿಲು ತೆರೆಯುತ್ತಿದ್ದವು. ನನ್ನ ಸುತ್ತಲ ಹಳ್ಳಿಗಳಲ್ಲಿ ಅನೇಕ ಮಂದಿ ಹೋರಾಟಗಾರರಿದ್ದರು. ಮಹಾಭಾರತದ ಕುರುಕ್ಷೇತ್ರ ಯುದ್ಧ ಕಲ್ಪನೆಯನ್ನು ಈ ಹೋರಾಟದ ಕಲ್ಪನೆಯೊಂದಿಗೆ ಸಮೀಕರಿಸಿಕೊಳ್ಳುತ್ತಿದ್ದೆ. ನನ್ನ ಪ್ರಕಾರ ಬ್ರಿಟೀಷರು ಕೌರವರು, ಭಾರತೀಯರು ಪಾಂಡವರು, ಆಮೇಲೆ ತಿಳಿದದ್ದು; ಇವರೂ ಕೌರವರೇ ಎಂದು..... ಗತಕಾಲವನ್ನು ವೈಭವೀಕರಿಸಿ ತಮ್ಮ ಅಪಾರ ದೇಶಭಕ್ತಿಯನ್ನು ಕಂಬನಿಯನ್ನು ಸುರಿಸಿ ನಿರೂಪಿಸುವ, ಅಂದು ದೇಶ ಸೇವೆ ಮಾಡಿದ್ದಕ್ಕೆ ಇಂದು ತಡವಾಗಿ ಕೂಲಿ ವಸೂಲಿ ಮಾಡಿಕೊಳ್ಳುವವರದೇ ದೊಡ್ಡ ಗುಂಪು. ಇವರು ಕಣ್ಣೀರ್ಗರೆಯುವುದನ್ನು ನೋಡಿದಾಗ ನಮ್ಮ ದೇಶಕ್ಕೆ ಯಾಕಾದರೂ ಸ್ವಾತಂತ್ರ್ಯ ಬಂತೋ" ಎಂದು ನಾಗತಿಹಳ್ಳಿ ಚಂದ್ರಶೇಖರ ಅವರು ತಮ್ಮ ಕಾದಂಬರಿಯ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

ಬಾಳಾಸಾಹೇಬ ಲೋಕಾಪುರ ಅವರು ಹುತ್ತ ಕಾದಂಬರಿಯನ್ನು ರಚಿಸಿದ್ದಾರೆ. ಇದು ಒಂದು ರೀತಿಯಲ್ಲಿ ಗಾಂಧೀಜಿಯವರನ್ನೇ ಕುರಿತದ್ದು ಎಂದು ಹೇಳಿದರೂ ತಪ್ಪೇನಿಲ್ಲ. ಈ ಕಥೆ ನಡೆಯುವುದು "ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕೆಂಬ ಹೊಳೆಸಾಲ ದಂಡೆಯಲ್ಲಿ, ಕೃಷ್ಣೆ ಇಲ್ಲಿ ಹರಿದು ನದಿಯಾಗಿದ್ದಾಳೆ, ಸಂಸ್ಕೃತಿಯಾಗಿದ್ದಾಳೆ. ತನ್ನ ಒಡಲ ಉರಿಯಲ್ಲಿ ಅನೇಕ ಕತೆಗಳನ್ನು ತುಂಬಿಕೊಂಡಿರುವ ಈಕೆ ಎಲ್ಲಕ್ಕೂ ಮೂಕಸಾಕ್ಷಿಯಾಗಿದ್ದಾಳೆ. ಗಾಂಧೀಜಿ ತನ್ನ ಸೆರಗಿನ ಒಂದಂಚಿಗೆ ಬಂದು ಹೋದದ್ದು ಇವಳಿಗೆ ಗೊತ್ತಿಲ್ಲ. ಇವಳ ಉಡಿಯ ತಡೆಯಲ್ಲಿ ಬದುಕು ಮಾಡುವವರಿಗೆ ಅವನ ಆ ಬರುವಿಕೆ ಎಂದೂ ಕಾಡಲಿಲ್ಲ. ಇಲ್ಲಿ ಗಾಂಧಿ ಬಂದು ಹೋದ. ಒಂದು ಇತಿಹಾಸ ಸೃಷ್ಟಿಯಾಯಿತು. ಆದರೆ ಕೃಷ್ಣೆಯ ಈ ದಂಡೆಯಲ್ಲಿ ಅಂತಹ ಇತಿಹಾಸದ ಅರಿವಿಲ್ಲ. ಇಲ್ಲಿ ಬದುಕು ಕತೆಯಾಗುತ್ತಾ..... ಹಂತದಲ್ಲಿ ಈರ್ಷೆ, ಹೊಟ್ಟೆಕಿಚ್ಚು, ಸಾವಿಗೆ, ನೋವಿಗೆ ಆಧ್ಯಾತ್ಮದ ಅನುಭಾವಕ್ಕೆ, ಮನುಷ್ಯನ ಸಣ್ಣತನದ ಕ್ಷುದ್ರ ಆಶೆಗಳಿಗೆ.....ಹೀಗೆ ಬದುಕಿನ ಸಣ್ಣ ಸಣ್ಣ ಘಟನೆಗಳು ಚಿತ್ತಾರಗೊಳ್ಳುತ್ತವೆ. ಸ್ವಾತಂತ್ರ್ಯ ಸಂಗ್ರಾಮದ ಊರ್ಧ್ವ ಹೋರಾಟ ಈ ಜನರನ್ನು ತಟ್ಟುವುದಿಲ್ಲ. ಆ ಮಟ್ಟಿಗೆ ಇವರು ಸರ್ವಸ್ವತಂತ್ರರು. ತಮ್ಮ ಬದುಕಿಗೆ ಸರ್ವಾಧಿಕಾರಿಗಳು. ಗಾಂಧಿಗೆ ಗುಂಡು ಬಡಿದು ಆತ ನೆಲದ ಅಣುವಾದಾಗ ಒಂದು ಕ್ಷಣ ಇಲ್ಲಿ ಬದುಕು ನಿಶ್ಚಲಗೊಳ್ಳುತ್ತದೆ. ಸರ್ವಾಧಿಕಾರಿಗಳ ಈ ಪುಟ್ಟ ಜಗತ್ತು ಕೂಡಾ ಆಗ ಆ ಸಾವಿಗೆ ತಲ್ಲಣಿಸುತ್ತದೆ. ಅದು ಗಾಂಧಿಯೊಬ್ಬನ ಸಾವಲ್ಲ. ಇಡೀ ಮನುಕುಲದ ಆತ್ಮರೂಪ ನಿರಾತಂಕದ ಸಾವು"(ಬಾಳಾಸಾಹೇಬ ಲೋಕಾಪುರ; ೨೦೦೯; ಪು. ಲೇಖಕರ ನುಡಿ) ಎಂದು ಕಾದಂಬರಿಕಾರರೇ ಕಾದಂಬರಿಯ ಮೊದಲಿಗೆ ಹೇಳಿಕೊಂಡಿದ್ದಾರೆ. ಗಾಂಧೀಜಿ ಇಡೀ ಮನುಕುಲದ ಆತ್ಮರೂಪವೆಂಬಂತೆ ಪ್ರತಿನಿಧಿಸಿದ್ದಾರೆ. ಹಾಗಾಗಿ ಇದು ಗಾಂಧೀಜಿಯನ್ನು ಕುರಿತು ರಚನೆ ಮಾಡಲಾದ ಕೃತಿಯಾಗಿದೆ. "'ಹುತ್ತ' ಕಾದಂಬರಿ ಗ್ರಾಮೀಣ ಕೃಷಿಕ ಜೈನ ಸಮಾಜದ ಚಿತ್ರಣವನ್ನು ನೀಡುತ್ತದೆ. ಆದರೆ ಅದನ್ನು ಮೀರಿಕೊಂಡು ಅದು ಬದುಕಿನ ನಿಷ್ಠುರವಾದ ಶೋಧ ಮಾಡುತ್ತದೆ"(ಅದೇ; ಪು. ಬೆನ್ನುಡಿ) ಎಂದು ಡಾ. ರಹಮತ್ ತರೀಕೆರೆ ಅವರು ಕಾದಂಬರಿಯು ಬೆನ್ನುಡಿಯಲ್ಲಿ ತಿಳಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಕೃಷ್ಣಾ ನದಿ ದಂಡೆಯ ಒಂದು ಹಳ್ಳಿಯಲ್ಲಿ ಗಾಂಧಿ ಆ ದಿನಗಳಲ್ಲಿ ಹೇಗೆ ಕಂಡಿದ್ದ, ಅವರ ಪ್ರಭಾವ ಹೇಗಿತ್ತು ಎಂಬುದನ್ನು ಈ 'ಹುತ್ತ' ಕಾದಂಬರಿಯಲ್ಲಿ ವಿವರಿಸಿದ್ದಾರೆ. ದೇಶದ ಸ್ವಾತಂತ್ರ್ಯಕ್ಕೆ ಗಾಂಧೀಜಿ ಹೋರಾಡುತ್ತಿದ್ದರೆ ಈ ಹೊಳೆಸಾಲ ಹಳ್ಳಿ ಹಲವರ ಮೇಲಾಟಕ್ಕೆ, ದರ್ಬಾರಿಗೆ, ಅಸೂಯೆಗಳಿಗೆ, ವ್ಯಕ್ತಿ ಪ್ರತಿಷ್ಠೆಗೆ, ಸರ್ವಾಧಿಕಾರಕ್ಕೆ ಬಡಿದಾಡುತ್ತದೆ. ಜೈನರ ಕೇರಿಯಿಂದ 'ಅಹಿಂಸಾ ಪರಮೋ ಧರ್ಮಃ' ಎಂಬ ಘೋಷಣೆಗಳು ಕೇಳುತ್ತಿದ್ದರೆ ಅವರ ಬದುಕಿನ ಆಳದಿಂದ ಹಿಂಸೆಯ ತರಂಗಗಳು ಕೇಳಿ ಬರುತ್ತವೆ. ಗಾಂಧೀಜಿ ಅಹಿಂಸೆಯ ಅಸ್ತ್ರವನ್ನು ಬಳಸುತ್ತಿದ್ದರೆ ಈ ಹಳ್ಳಿಯ ಧುರೀಣರು ಕೊಲ್ಲುವ ಹತಾರಗಳನ್ನು ಕೊಳ್ಳುವುದೇ ಪರಮ ಧ್ಯೇಯವಾಗಿಸಿಕೊಂಡಿದ್ದಾರೆ.

ಈ ಹಳ್ಳಿಯ ಜನರಿಗೆ ಗಾಂಧೀಜಿಯ ಭೌತಿಕ ರೂಪ "ಆತ ರೇಶಿಮಿ ಪಟಕ ಸುತ್ತುತ್ತಾನೆ. ದಪ್ಪಮೀಸೆಯ ಅಜಾನುಬಾಹು ವ್ಯಕ್ತಿ. ಒಂದೇ ಏಟಿಗೆ ಹತ್ತೆಂಟು ಮಂದಿಯನ್ನು ಬಡಿದು ಕೊಲ್ಲುವಂತ ಶಕ್ತಿವಾನ. ಅವನಿಗೆ ಅಂಗ್ರೇಜಿ ಸರಕಾರ ಅಂಜಿ ಗಡಗಡ ನಡುಗುತ್ತದೆ"(ಅದೇ; ಪು. ೨) ಎಂದು ಹಳ್ಳಿಯ ಜನ ಗಾಂಧಿಯ ರೂಪವನ್ನು ಮನದಲ್ಲಿ ಚಿತ್ರಿಸಿಕೊಳ್ಳುತ್ತಾ ಗಾಂಧೀಜಿಯನ್ನು ನೋಡಲು ಬೆಳಗಾವಿಗೆ ಹೋಗುತ್ತಾರೆ. ಶಿವರುದ್ರ ಮತ್ತು ಆತನ ಇಬ್ಬರು ಸ್ನೇಹಿತರು "ವೇದಿಕೆಯ ಮೇಲೆ ಕೆಂಪನೆಯ ಗಿಡ್ಡ ವ್ಯಕ್ತಿ ಕೀರಲು ದನಿಯಲ್ಲಿ ತಿಳಿಯದ ಭಾಷೆಯಲ್ಲಿ ಭಾಷಣ ಮಾಡುವುದನ್ನು ನೋಡಿದರು. ತಮ್ಮ ಮಗ್ಗುಲಲ್ಲಿ ನಿಂತು ಆ ಭಾಷಣ ಕೇಳುತ್ತಿದ್ದ ಮಂದಿಯನ್ನು ಇವರು 'ಗಾಂಧೀಜಿ ಬಂದಿಲ್ಲಯ್ಯಾನ್ರಿ?' ಎಂದು ಕೇಳಿದರು. ಪ್ರಶ್ನೆ ಕೇಳಿಸಿಕೊಂಡ ವ್ಯಕ್ತಿ 'ಇವರೆ ಗಾಂಧೀಜಿ"(ಅದೇ; ಪು. ೧೬) ಎಂದ; ಈ ಮೂವರಿಗೆ ನಿರಾಶೆಯೇ ಆಯಿತು. ಆನೆಯಂತಹ ಶಕ್ತಿಯ ಅಜಾನುಬಾಹು ಗಾಂಧಿಯನ್ನು ಕಲ್ಪಿಸಿಕೊಂಡಿದ್ದ ಇವರಿಗೆ ಬಡಿಗೆ ಹಿಡಿದ ಮುದುಕನನ್ನು ಗಾಂಧಿ ಎಂದು ಮನಸ್ಸು ಒಪ್ಪಿಕೊಳ್ಳಲಿಲ್ಲ. ಆದರೆ "ಗಾಂಧಿ ಎಂಬ ವಿಚಿತ್ರ ಶಕ್ತಿಯೊಂದು ಉಪ್ಪಿನ ಸತ್ಯಾಗ್ರಹ ಮಾಡಿ ಭಾರತದ ಜೈಲುಗಳನ್ನು ಮಂದಿಯಿಂದ ತುಂಬಿಸಿತ್ತು. ಬೆಳಗಾವಿಗೆ ಬಂದು ಹೋದ ಗಾಂಧಿ ಎಂಬ ವ್ಯಕ್ತಿಯ ನಿಜವಾದ ಭೌತಿಕ ರೂಪ ಮಂದಿಗೆ ತಿಳಿದು ಹೋಗಿತ್ತು. ಈಗ ಗಾಂಧಿ ಅಜಾನುಬಾಹು ವ್ಯಕ್ತಿಯಲ್ಲ. ಟೋಪಿಗೆಯ ಫ್ಯಾಕ್ಟರಿಯ ಮಾಲೀಕನಲ್ಲ. ಅದೊಂದು ಸತ್ಯದ ತುಂಡು. ನಡೆದಾಡುವ ದರ್ಶನವಾಗಿ ಮಂದಿಯ ಮನಸ್ಸಿನಲ್ಲಿ ತುಂಬಿಕೊಂಡ ಒಂದು ಸಂವೇದನೆಯಾಗಿತ್ತು"(ಅದೇ; ಪು. ೧೭). ಹಾಗಾಗಿ ಗಾಂಧೀಜಿ ಇಲ್ಲಿ ಒಂದು ಶಕ್ತಿಯಾಗಿ, ಸತ್ಯದ ತುಂಡಾಗಿ, ನಡೆದಾಡುವ ದರ್ಶನವಾಗಿ, ಜನರ ಮನಸ್ಸಿನಲ್ಲಿ ನಿಂತಿರುವ ಸಂವೇದನೆಯಾಗಿ ಪ್ರತಿಪಾದಿತಗೊಂಡಿದ್ದಾರೆ.

ಗಾಂಧೀಜಿ ಬ್ರಿಟೀಷರಿಗೆ ಸಿಂಹಸ್ವಪ್ನವಾಗಿ ಕಾಡಿದವರು. ಅಂಥ "ಗಾಂಧಿಯೆಂಬ ಪ್ರಭುತ್ವ ವಿರೋಧಿ ದೇಶದ ಅನೇಕ ಜೈಲುಗಳಲ್ಲಿ ಇದ್ದು ಬರತೊಡಗಿದ. ...ಗಾಂಧಿ ಎಂದರೆ ಒಂದು ಸಮುದ್ರ, ಅದು ಆಳ ಮತ್ತು ಅಗಲ. ಅದನ್ನು ಬಗಸೆಯಲ್ಲಿ ಹಿಡಿಯಹೋದರೆ ಕೈಗೆ ಸಿಗುವುದು ಕೇವಲ ಉಪ್ಪು"(ಅದೇ; ಪು. ೩೨). ಗಾಂಧೀಜಿಯ ವ್ಯಕ್ತಿತ್ವ, ವಿಚಾರಗಳು ಸಮುದ್ರದ ಆಳ-ಅಗಲಗಳಷ್ಟು ವಿಸ್ತಾರವಾದವುಗಳು. ಅವುಗಳನ್ನು ಇಂದಿಗೂ ಮೀರಲು ಯಾರಿಂದ ಸಾಧ್ಯವಾಗಿಲ್ಲವೆಂದು ಇಲ್ಲಿ ವ್ಯಕ್ತಪಡಿಸಲಾಗಿದೆ.

ಹೊಳೆಸಾಲು ಹಳ್ಳಿಗೆ ಬಂದ ಶಾಲೆ ಮತ್ತು ಅದರ ಮಾಸ್ತರನ ಸಂದರ್ಭದಲ್ಲಿ ಗಾಂಧಿ ಪ್ರಸ್ತಾಪಗೊಳ್ಳುತ್ತಾರೆ. ಈ ಶಾಲೆಯನ್ನು ಮಕ್ಕಳು ಒಂದು ಜೈಲು ಎಂದು ಭಾವಿಸುತ್ತಾರೆ. ಇದು ಗಾಂಧೀಜಿಯ ಹುನ್ನಾರವೇ ಎಂದು ಪರಿಗಣಿಸುತ್ತದೆ. ಈ ಶಾಲೆಯ ಸಿದ್ದು ಮಾಸ್ತರ ಆಗಾಗ ಗಾಂಧಿಯ ಹೆಸರನ್ನು ಹೇಳುತ್ತಾನೆ. ಮಕ್ಕಳಿಗೆ ಗಾಂಧಿಯ ಸಂಗತಿಯನ್ನು ತಿಳಿಸಿಕೊಡುತ್ತಾನೆ. "ಗಾಂಧೀಜಿಯ ಫೋಟೋ ನೋಡಿದ ಹುಡುಗರು ಶಾಲೆಯನ್ನು ಸಹಿಸತೊಡಗಿದರು. ಒಂದು ಫೋಟೋ ಈ ರೀತಿಯ ಪರಿಣಾಮ ಮಾಡುವ ಪವಾಡಕ್ಕೆ ಮಾಸ್ತರ ಶಂಭೋ

ಎಂದ"(ಅದೇ; ಪು. ೧೧೮). ತಮ್ಮ ಮನೆಯ ಮುದುಕನಂತಿದ್ದ ಗಾಂಧೀಜಿಯ ಫೋಟೋವನ್ನು ನೋಡಿ ಮಕ್ಕಳು ಇಂತಹ ಹಣ್ಣು ಹಾಗಲ ಮುದುಕನನ್ನು ತಾವು ವಿನಾಕಾರಣ ದ್ವೇಷ ಮಾಡಿದ ಪಾಪಪ್ರಜ್ಞೆಯಿಂದ ಪಶ್ಚಾತ್ತಾಪಕ್ಕೊಳಗಾಗಿ ತಮ್ಮ ಮನಸ್ಸನ್ನು ಪರಿವರ್ತನೆ ಮಾಡಿಕೊಂಡರು. ಇದರಿಂದ ಮಕ್ಕಳು ಶಾಲೆಯನ್ನು ಸಹಿಸತೊಡಗಿದರು. ಹಾಗಾಗಿ ಗಾಂಧೀಜಿಯನ್ನು ಪವಾಡ ಪುರುಷನಾಗಿ ಚಿತ್ರಿಸಲಾಗಿದೆ.

"ಗಾಂಧೀಜಿಯ ಸಾವು ಇಡೀ ಹೊಳೆಸಾಲ ಊರಿಗೆ ಸೂತಕದ ವಾತಾವರಣವನ್ನುಂಟು ಮಾಡಿತು. ಏನನ್ನೋ ಕಳೆದುಕೊಂಡಂತಹ ಅನುಭವದ ಗ್ರಹಿಕೆಯಲ್ಲಿ ಮಂದಿ ಹಳಾಳಿ ಭಾವದಿಂದ ಓಡಾಡತೊಡಗಿದರು"(ಅದೇ; ಪು. ೧೭೩). ಆ ಹಳ್ಳಿಯ ಸದಸ್ಯರ ಸಾವಿಗಿಂತಲೂ ಗಾಂಧೀಜಿಯ ಸಾವು ತಲ್ಲಣದ ತರಂಗಗಳನ್ನು ಎಬ್ಬಿಸತೊಡಗಿತು. "ಗಾಂಧಿ ಎಂಬ ಮಾಂತ್ರಿಕ ಸತ್ತು ೫೪ ವರ್ಷಗಳು ಕಳೆದುಹೋಗಿವೆ. ಗಾಂಧಿ ತತ್ವಗಳಿಗೆ ಬದ್ಧವಾಗಿದ್ದ ಒಂದು ತಲೆಮಾರು ಕೂಡ ಕಣ್ಮರೆಯಾಗಿದೆ. ನಮ್ಮ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳನ್ನು ಗಮನಿಸಿದರೆ ಗಾಂಧಿ 'ಇನ್ನಿಲ್ಲ'ವಾಗಿ ಅದೆಷ್ಟೋ ಯುಗಗಳು ಕಳೆದಂತೆಯೂ ಅನ್ನಿಸುತ್ತದೆ. ಆದರೂ ಅಲ್ಲಿ, ಇಲ್ಲಿ ಮೂಲೆಗಳಲ್ಲಿ, ಹಳ್ಳಿಗಾಡುಗಳಲ್ಲಿ ಅಕ್ಷರಗಳ ಜೊತೆ ಮುಖಾಮುಖಿಯಾಗಿ ನಿಂತ ಒಬ್ಬೊಬ್ಬ ಲೇಖಕರಿಗೆ ಈ ಗಾಂಧಿ ಈಗಲೂ ಒಂದು ಗುಂಗಾಗಿ, ಮೌಲ್ಯವಾಗಿ, ಬದುಕಿನ ಸತ್ವವಾಗಿ ಕಾಡುತ್ತಿದ್ದಾರೆ"(ಅದೇ; ಪು. ಮುನ್ನುಡಿ) ಎಂದು ಜಿ.ಪಿ. ಬಸವರಾಜು ಅವರು ಕಾದಂಬರಿಯ ಮುನ್ನುಡಿಯಲ್ಲಿ ಹೇಳಿದ್ದಾರೆ. ಇದು ಸತ್ಯ. ಗಾಂಧೀಜಿ ಚಿಂತನೆಗಳು ನಿಂತ ನೀರಲ್ಲ, ಸದಾ ಹರಿಯುವಂತ ನೀರು. ಎಲ್ಲಾ ಕಾಲಕ್ಕೂ ಅವಶ್ಯಕ ಮತ್ತು ಪ್ರಸ್ತುತವೆನಿಸುತ್ತವೆ.

ಜಿ.ಬಿ. ಮಾದೇಶ ಅವರು ಗಾಂಧೀಜಿಯವರನ್ನು ಕುರಿತು 'ದಲಿತ ಗಾಂಧಿ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಯನ್ನು ಅಳಿದುಳಿದ ನಿಜ ಗಾಂಧಿಮಾರ್ಗೀಯರಿಗೆ ಹಾಗೂ ಮಾಡಿ ಮಡಿದ ಮಹನೀಯರಿಗೆ ಅರ್ಪಿಸಿದ್ದಾರೆ. ಇದರಿಂದಲೇ ತಿಳಿಯುತ್ತದೆ. ಕಾದಂಬರಿಕಾರರಿಗೆ ಗಾಂಧೀಜಿಯವರ ಮೇಲಿರುವ ಭಕ್ತಿ, ಶ್ರದ್ಧೆ, ಒಲವುಗಳು. ಜಿ.ಬಿ. ಮಾದೇಶ ಅವರು ತಮ್ಮ ಕಾದಂಬರಿಯ ಮೊದಲಿಗೆ ಹೀಗೆ ಹೇಳಿಕೊಂಡಿದ್ದಾರೆ. "ಗಾಂಧಿಯೆಂಬ ಮಹಾವೃಕ್ಷದ ಕೆಳಗೆ ಆಶ್ರಯ ಪಡೆದ ನಾವು ಅದರ ರೆಂಬೆಗಳನ್ನೇ ಒಂದೊಂದಾಗಿ ಕಡಿದು ಹಾಕುತ್ತಿದ್ದೇವೆನೋ ಎಂಬ ಭಾವ ಆವರಿಸಿದರೆ ಅದು ತನ್ನೊಬ್ಬನದೇ ಅನುಭವವಾಗಲಾರದು ಅನ್ನುವುದು ವರ್ತಮಾನದ ಸಂದರ್ಭಕ್ಕೆ ಸರಿ ಹೊಂದುವುದೆಂಬ ಭರವಸೆ ನನ್ನಲ್ಲಿ ಮೂಡಿದೆ.

ತುಂಬು ಕುಟುಂಬದ ಹಿರಿಯನೊಬ್ಬ ಜೀವನಪರ್ಯಂತ ದುಡಿದು ಎಲ್ಲರ ಏಳ್ಗೆಗೆ ಪಾತ್ರನಾಗಿ ನಂತರ ಎಲ್ಲರಿಂದಲೂ ಅವಜ್ಞೆಗೆ, ತಿರಸ್ಕಾರಕ್ಕೆ, ಗೇಲಿಗೆ ಒಳಗಾಗಿ ಹಿನ್ನೆಲೆಗೆ ಸರಿವ ವೃದ್ಧಾಪ್ಯದಂತಾಗಿದೆ ಗಾಂಧಿಯ ಸ್ಥಿತಿ.

ಗಾಂಧಿ, ಪರಂಪರೆಯ ಶಕ್ತಿಯೇ ಹೊರತು ಮೌಢ್ಯದ ಆಧಾರವಲ್ಲ. ಪರಂಪರೆಯನ್ನು ಸಮಷ್ಟಿ ದೃಷ್ಟಿಯಿಂದ ನೋಡಿದ ಗಾಂಧಿಯನ್ನು ವ್ಯಷ್ಟಿ ವ್ಯಾಖ್ಯಾನಗಳ ಅಡಿಯಲ್ಲಿ ನವಸಿದ್ಧಾಂತಗಳ

ಇರುಕಿನಲ್ಲಿ ಸಿಲುಕಿಸಿ ಅಲ್ಲಗಳೆಯುವ ನಾವೀನ್ಯ ವಿಧಾನವೊಂದು ಮೂಗಿನ ನೇರಕ್ಕೆ ಅನ್ವಯಿಸಿ, ಮೌಲ್ಯಮಾಪನಕ್ಕೆ ಹೊರಟಾಗ ಸತ್ಯ ಹಿಂಸೆಯಲ್ಲಿ ಸಿಲುಕಿ ಒದ್ದಾಡಿದಂತಾಗಿದೆ ಸದ್ಯದ ಸ್ಥಿತಿ.

ಎಲ್ಲಾ ಅಸ್ಮಿತೆ, ಇಸಂಗಳಿಂದ ಹೊರಬಂದು ಸಂಸ್ಕೃತಿಯ ಭಾಗವಾಗಿ ನೋಡುವ ದೃಷ್ಟಿಯಿಂದ ಮಾತ್ರ ಗಾಂಧಿಗಿರಿಗೆ ನ್ಯಾಯ ಒದಗಿಸಬಲ್ಲುದು ಅನ್ನುವುದು ನನ್ನ ಅಂಬೋಣ.

ಹಿಂಸೆಯಿಲ್ಲದ ಹೋರಾಟದಲ್ಲಿ ಸರಳವಾದ ಸತ್ಯಾಗ್ರಹದಲ್ಲಿ ತೊಡಗಿಸಿಕೊಂಡವರಿಗೆ ಆಗುವ ಹಿಂಸೆಯೆಷ್ಟು ಅನುಭವಿಸುವ ಕಾಠಿಣ್ಯವೆಷ್ಟು ನೋವೆಷ್ಟು ಎಂಬುದು ಅನುಭವ ವೇದ್ಯವಾದರಷ್ಟೇ ಸ್ಪಷ್ಟ.

ಅಂತರಂಗ - ಬಹಿರಂಗ ಶುದ್ಧಿಯ ಗಾಂಧೀ ಮಾರ್ಗೀಯರಿಗೆ ಸಿಗುವ ಮನ್ನಣೆ ಆಗುವ ನಿತ್ಯ ಅಪಮಾನ ಗೇಲಿಗೊಳಗಾಗುವ ಪರಿ ವರ್ತಮಾನದ ಸಮಾಜದಲ್ಲಿ ನಮ್ಮನ್ನು ಬೆಚ್ಚಿಸಿದರೂ ಅಂತಿಮವಾಗಿ ಸತ್ಯದ ಹುಡುಕಾಟದಲ್ಲಿ ಸಾಫಲ್ಯ ಗಳಿಸುತ್ತದೆ ಅನ್ನುವ ವಿವೇಕ, ತಾಳ್ಮೆ, ಚಿಂತನೆ ನಮ್ಮಲ್ಲಿ ಮೂಡಬೇಕು.

ಈ ಗಾಂಧಿಯನ್ನು ತಿರಸ್ಕರಿಸುವುದೆಂದರೆ ಇಡಿಯಾದ ಪರಂಪರೆಯ ಜ್ಞಾನವನ್ನೇ ತಿರಸ್ಕರಿಸಿದಂತೆ. ಬರೀ ಒಪ್ಪಿಕೊಳ್ಳುವುದೆಂದರೆ, ಕಂದಾಚಾರವನ್ನು ಅಪ್ಪಿಕೊಂಡಂತೆ ಆಗಬಾರದು. ಕಾಲದ ಬೆಳಕಿನಲ್ಲಿ ಪ್ರತಿಕ್ರಿಯಿಸುತ್ತಾ, ಪ್ರತಿಸ್ಪಂದಿಸುತ್ತಾ, ಚಿಕಿತ್ಸಕ ಮನೋಭಾವದ ಸಂವೇದನಾಶೀಲನಾ ಗುಣಧರ್ಮವೇ ಗಾಂಧಿಗಿರಿಯನ್ನು ಮತ್ತೆ ಮತ್ತೆ ಮೆಲುಕು ಹಾಕುವಂತೆ ಮಾಡಬಲ್ಲದು ಎಂಬುದು ನನ್ನ ಖಚಿತ ಅಭಿಪ್ರಾಯ"(ಮಾದೇಶ.ಜಿ.ವಿ.; ೨೦೧೩;ಪು. ಲೇಖಕರ ಮಾತುಗಳು).

ಈ ಅಭಿಪ್ರಾಯವನ್ನೇ ಮೇಳೈಸಿ ನಿಂತ ವಿಚಾರವಂತ ದಲಿತ ನಾಯಕನಾದ ಕಥಾನಾಯಕ ದೇವಿರಪ್ಪನ ಸಾಮಾಜಿಕ ಶೋಧನಾ ಕ್ರಿಯೆಗೆ ಅಡ್ಡಗಾಲಾಗುವ ಸ್ವಾರ್ಥಲೋಲುಪತೆ, ಉಂಟಾಗುವ ವ್ಯಗ್ರತೆ ಕ್ರೌರ್ಯ, ಮುಖಾಮುಖಿಯಾಗುವ ವಿಚಾರ, ವೈಚಾರಿಕ ಸಂಘರ್ಷದಿಂದೊಡಮೂಡುವ ಪರಿಹಾರೋಪಾಯ - ಹೀಗೆ ಸಾಲು ಸಾಲು ಘಟನೆಗಳ ಸಾಮಾಜಿಕ ಸಮಸ್ಯೆಗಳ ಬಲೆಯಲ್ಲಿ ಬಿದ್ದು ಎದ್ದು ಬರಲು ಬೇಕಾಗುವ ಚಮತ್ಕಾರಿಕೆ ಈ ಎಲ್ಲಕ್ಕೂ ಗಾಂಧಿವಾದದಲ್ಲಿ ಮದ್ದಿದೆಯೆ? ಎಂಬ ಪರೀಕ್ಷೆಗೆ ಒಡ್ಡಿಕೊಳ್ಳುವ ಕ್ರಮವೇ 'ದಲಿತ ಗಾಂಧಿ' ಕಾದಂಬರಿಯ ಕಥೆಯಾಗಿದೆ.

ದೇವಪುರವೆಂಬ ಊರಿನಲ್ಲಿ ದೇವೀರಪ್ಪ ವಾಸವಾಗಿರುತ್ತಾನೆ. ಸೌಹಾರ್ದಯುತವಾಗಿ ಆ ಊರಿನ ಜನರು ಬಾಳಬೇಕು; ಬದುಕಬೇಕು ಎಂದು ಆಶಿಸುವ ಜೀವ ದೇವೀರಪ್ಪನವರದು. ಆದರೆ ಗಾಂಧೀಜಿ ಅವರ ಆದರ್ಶಗಳನ್ನು ಪರಿಪಾಲಿಸುವ ಆತನ ರೀತಿಯನ್ನು ವಿರೋಧಿಸುವ ಅದೇ ಊರಿನ ದಲಿತ ಜನಾಂಗದವರು ದೇವಿರಪ್ಪನವರನ್ನು ತುಂಬಾ ಅವಮಾನಿಸುತ್ತಾರೆ. ಅಂಬೇಡ್ಕರ್ ಜಯಂತಿ ಸಭೆ ನಡೆಯುವಾಗ ಗಾಂಧೀಜಿ ಬಗ್ಗೆ ಅವಹೇಳನಕಾರಿ ಮಾತುಗಳನ್ನು ಹೀಗೆ ಹಾಡುತ್ತಾರೆ : "ಗಾಂಧಿ ಒಬ್ಬ ಮಹಾ ನಯವಂಚಕ. ಈ ದೇಶದ ಜನರ ಸಾಂಸ್ಕೃತಿಕ ನಾಡಿ ಬಡಿತವನ್ನು ಚೆನ್ನಾಗಿ ಅರಿತವನಾಗಿದ್ದ. ಹಾಗಾಗಿಯೇ ಆತ ದಲಿತರೆಡೆಗೊಂದು ಬಣ್ಣವಿಲ್ಲದೆ,

ಇಡೀ ದೇಶವನ್ನೇ ವಿಶಾಲವಾದ ವೇದಿಕೆ ಮಾಡಿಕೊಂಡು ನಾಟಕವಾಡಿದ ಮಹಾನ್ ಆಷಾಢಭೂತಿ ಪುರುಷ.....

ಹರಿಜನರೆಂದು ಕರೆದು ಅಸ್ಪೃಶ್ಯರನ್ನು ಅಪಮಾನ ಮಾಡಿದ. ಆದರೆ ಎಚ್ಚರ ಪ್ರಜ್ಞೆ ಇಲ್ಲದ ಅಸ್ಪೃಶ್ಯರು. ನಮ್ಮ 'ಹರಿ'ಯ ಕುಲದವರೆಂದು, ದೇವರ ಕುಲದವರೆಂದು ಸಂಭೋದಿಸಿ ಸನ್ಮಾನಿಸಿದ ಅಂತ ಸಂತೋಷಪಟ್ಟರೇ ಹೊರತು ಗಾಂಧಿಯನ್ನು ಅನುಮಾನಿಸಲೇ ಇಲ್ಲ.

"ಆತನಿಗೆ ನಿಜಕ್ಕೂ ಅಸ್ಪೃಶ್ಯರ ಬಗ್ಗೆ ಅನುಕಂಪ ಕಾಳಜಿ ಇದ್ದಿದ್ದರೆ ಅಂಬೇಡ್ಕರ್‌ರವರ ಸಲಹೆ ಸೂಚನೆಗಳನ್ನು ಪಾಲಿಸುತ್ತಿದ್ದರು. ದಲಿತರಿಗೆಂದೇ ಪ್ರತ್ಯೇಕ ಮತದಾನ ವ್ಯವಸ್ಥೆ-ದಲಿತ ಪ್ರತಿನಿಧಿಗಳ ದಲಿತರಿಂದಲೇ ಆಯ್ಕೆಗೊಳ್ಳಬೇಕೆಂಬ ಅಂಬೇಡ್ಕರ್ ವಾದವನ್ನು ಮನ್ನಿಸುತ್ತಿದ್ದರು. ಆದರೆ ಅದಕ್ಕೆ ವಿರುದ್ಧವಾಗಿ ಸಾಮಾನ್ಯ ಮತಕ್ಷೇತ್ರಗಳಲ್ಲೇ ಮೀಸಲು ನಿಗದಿಗೊಳಿಸಲು ಅನುವು ಮಾಡುತ್ತಿರಲಿಲ್ಲ. ದಲಿತರ ಮೂಗಿಗೆ ತುಪ್ಪ ಸವರಿ ನುಣ್ಣಗೆ ಒಳ್ಳೆಯ ಮಾತಾಡಿ ತಾನೊಬ್ಬ ದೊಡ್ಡ ಮಹಾನ್ ಸಮಾಜ ಸುಧಾರಕ, ಸ್ವಾತಂತ್ರ್ಯ ಹೋರಾಟಗಾರ ಎಂದು ಬಿಂಬಿಸಿಕೊಂಡ ಗಾಂಧಿ ನಿಜಕ್ಕೂ ಇಪ್ಪತ್ತನೆಯ ಶತಮಾನ ಕಂಡ ಮಹಾನ್ ನಾಟಕಕಾರ. ಗಾಂಧಿ ಧರ್ಮ-ಜಾತಿ ಇವುಗಳು ಆಧ್ಯಾತ್ಮದ ಭಾಗಗಳೆಂದೇ ಬಗೆದಿದ್ದರು. ...ಹಾಗಾಗಿಯೇ ಅವರು ಹಿಂದು ಧರ್ಮದ ಜಾತಿ ಪದ್ಧತಿಯನ್ನು ತೀವ್ರವಾಗಿ ಟೀಕಿಸಲಿಲ್ಲ. ವೈದಿಕ ಪರಂಪರೆಯ ಪೋಷಕರಾಗಿದ್ದುಕೊಂಡೇ ಅಸ್ಪೃಶ್ಯತೆ ನಿವಾರಣೆಯ ವೇಷ ತೊಟ್ಟ ಆಷಾಢಭೂತಿ"(ಅದೇ; ಪು. ೧) ಎಂದು ಸಿದ್ಧಲಿಂಗಸ್ವಾಮಿಗಳು ವೀರಾವೇಶದಿಂದ ಭಾಷಣ ಮಾಡಿದರು. ಈ ರೀತಿಯ ಮಾತುಗಳಿಂದ ಗಾಂಧೀವಾದಿ ದೇವೀರಪ್ಪನಿಗೆ ದುಃಖ -ಸಂಕಟಗಳಾದವು. ಇದಕ್ಕೆ ಪ್ರತಿಕ್ರಿಯೆಯಾಗಿ ದೇವೀರಪ್ಪನವರು "ಅಂಬೇಡ್ಕರ್ ಜೊತೆ ಅವರಿಗೆ ಕೆಲವಿಚಾರದಲ್ಲಿ ಭಿನ್ನಾಭಿಪ್ರಾಯವಿತ್ತೇ ಹೊರತು ಅಂಬೇಡ್ಕರ್‌ವಾದವನ್ನು ಅವರೆಂದೂ ತಿರಸ್ಕರಿಸಿರಲಿಲ್ಲ. ಪರಸ್ಪರರು ವಿರೋಧಿಗಳೂ ಆಗಿರಲಿಲ್ಲ. ದಲಿತರ ಸ್ಥಿತಿಗತಿಗಳ ಬಗ್ಗೆ ಮೊದಲು ಚರ್ಚೆಯಾಗಲಿ ಎಂದರು ಅಂಬೇಡ್ಕರ್. ಪ್ರಧಾನ ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಬೆಲೆ ನೀಡೋಣ ನಂತರ ಸಾಂಸ್ಕೃತಿಕ ದಾಸ್ಯದೆಡೆಗೆ ಮನ ಮಾಡೋಣ ಅಂದರು ಗಾಂಧೀಜಿ. ಅದರಲ್ಲಿ ತಪ್ಪೇನೂ ಇರಲಿಲ್ಲ. ಅಂಬೇಡ್ಕರದು ಏಕತ್ವವಾದ ಕಾರ್ಯಕ್ರಮ, ಗಾಂಧಿಯದು ಬಹುತ್ವವಾದದ ಕಾರ್ಯಕ್ರಮ. ಪರಕೀಯ ದಬ್ಬಾಳಿಕೆಯಿಂದ ಸರ್ವಸ್ವತಂತ್ರರಾಗದೇ ಉಳಿದ ಸ್ವಾತಂತ್ರ್ಯಕ್ಕೇನೂ ಬೆಲೆ-ನೆಲೆ ಇಲ್ಲ ಅಂತ ಗಾಂಧಿ ಮಹಾತ್ಮ ಮನಗಂಡಿದ್ದರು. ಇದರಲ್ಲಿ ತಪ್ಪು ಹುಡುಕುವಂಥದ್ದು ಏನಿದೆ?"(ಅದೇ; ಪು. ೪) ಎಂದು ನುಡಿದರು. ಅಂಬೇಡ್ಕರ್ ಅವರ ಆಲೋಚನೆ ಸರಿಯಾಗೇ ಇರಬಹುದು. ಅವರ ದೂರದೃಷ್ಟಿ ಮೆಚ್ಚಿಕೊಳ್ಳುವಂಥದ್ದು. ದಲಿತರಿಗೆ ಪ್ರತ್ಯೇಕ ಸ್ಥಾನಮಾನ ಬೇಕೆಂಬುದು ಸರಿ. ಆದರೆ ಅವರ ಬೇಡಿಕೆ ಆ ಪರಿಸ್ಥಿತಿಯಲ್ಲಿ ಸರಿಯಾದುದ್ದಲ್ಲವೆಂದು ಹೇಳಬಹುದು. ಯಾಕೆಂದರೆ ಬ್ರಿಟೀಷರು ಭಾರತದಲ್ಲಿ ಜಾತೀಯತೆಯ ವಿಷಬೀಜವನ್ನು ಬಿತ್ತಿ ಇಲ್ಲಿ ತಮ್ಮ ಪ್ರಭುತ್ವವನ್ನು ಸಂಪೂರ್ಣವಾಗಿ ಸ್ಥಾಪಿಸಿ ನೆಲೆಯೂರಬೇಕೆಂದು ಆಲೋಚಿಸುತ್ತಿದ್ದರು. ಇದರಿಂದ ಬ್ರಿಟೀಷ್ ದಾಸ್ಯದಿಂದ ಭಾರತವನ್ನು

ಬಿಡಿಸಿಕೊಳ್ಳಲು ಮೊದಲು ಪ್ರಯತ್ನಿಸಿದರು ಗಾಂಧೀಜಿ. ಅಂಬೇಡ್ಕರ್ ಅವರ ದಲಿತರ ಪ್ರತ್ಯೇಕ ಮತದಾನ ಬೇಡಿಕೆ ಈಡೇರಿದ್ದರೇ ಈ ಹೊತ್ತಿಗೆ ಮುಸ್ಲಿಮರಿಗೆ ಪ್ರತ್ಯೇಕ (ಪಾಕಿಸ್ತಾನ) ದೇಶವಾದಂತೆ ದಲಿತರಿಗೂ ಪ್ರತ್ಯೇಕ ದೇಶ, ಬ್ರಾಹ್ಮಣರಿಗೂ ಪ್ರತ್ಯೇಕ ದೇಶ, ಲಿಂಗಾಯತರಿಗೂ ಪ್ರತ್ಯೇಕ ದೇಶಗಳಾಗಿ ಭಾರತವನ್ನು ಹಂಚಬೇಕಾಗುತ್ತಿತ್ತು. ಹಾಗಾಗಿ ಆ ಸಂದರ್ಭದಲ್ಲಿ ಗಾಂಧೀಜಿಯವರ ಆಲೋಚನೆ ಸರಿಯಾದದ್ದು.

ಗಾಂಧೀಜಿ ಹಿಂದೂ ಧರ್ಮದ ಜಾತಿ ವ್ಯವಸ್ಥೆಯನ್ನು ಕುರಿತು "ಜಾತಿಯು ಸಂಯಮ ಸಾಧನೆಗೆ ಕಾರಣವಾದ್ದರಿಂದ ನಾನು ಅದನ್ನು ಪ್ರತಿಪಾದಿಸಿದೆ. ಆದರೆ ಇಂದಿನ ಜಾತಿ ವ್ಯವಸ್ಥೆಯಲ್ಲಿ ಅಂಥ ಸಂಯಮ ಕಾಣಲಾಗದು. ಅಲ್ಲಿ ಕೇವಲ ಮಿತಿಗಳಿವೆ. ಸಂಯಮವು ದಿವ್ಯವಾದದ್ದು; ಅದು ಸ್ವಾತಂತ್ರ್ಯವನ್ನು ಪಡೆಯಲು ಸಹಕಾರಿಯಾಗುತ್ತದೆ. ಚಿಕ್ಕಪುಟ್ಟ ಜಾತಿಯವರು ಒಂದು ದೊಡ್ಡ ಜಾತಿಯಲ್ಲಿ ಸಂಯೋಜನೆ ಹೊಂದಬೇಕು. ಇದರಿಂದ ಸನಾತನ ವರ್ಣವ್ಯವಸ್ಥೆಯನ್ನು ಪುನರ್‌ಸ್ಥಾಪನೆ ಮಾಡಬಹುದು"(ಅದೇ; ಪು. ೬). ಇಲ್ಲಿ ಗಾಂಧೀಜಿಯವರನ್ನು ವರ್ಣವ್ಯವಸ್ಥೆಯ ಪ್ರತಿಪಾದಕರಾಗದೆ ಕಸುಬು ಆಧಾರಿತ ವರ್ಗವ್ಯವಸ್ಥೆಯ ಪ್ರತಿಪಾದಕರಂತೆ ಚಿತ್ರಿಸಲಾಗಿದೆ. "ವಿಶಾಲಾರ್ಥದ ತಳಹದಿಯ ನೆಲೆಯಲ್ಲಿ ನಾವು ಮಹಾತ್ಮ ಗಾಂಧೀಜಿಯವರನ್ನು ಕಾಣಬೇಕು. ಆಗ ಮಾತ್ರ ಅವರು ಮನುಕುಲದ ಉದ್ಧಾರಕರಂತೆ ಕಾಣುತ್ತಾರೆ"(ಅದೇ; ಪು. ೨೬) ಎಂದು ಕಾದಂಬರಿಕಾರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

"ಕಾಮಾಲೆ ರೋಗದ ಇವರ ಹಳದಿ ಕಣ್ಣು ಮಹಾತ್ಮರನ್ನು ಬಿಡಲಿಲ್ಲ. ಬ್ರಹ್ಮಚರ್ಯ ಪ್ರಯೋಗಕ್ಕೊಡ್ಡಿದ ಮಹಾತ್ಮರನ್ನೂ ಸ್ತ್ರೀ ಖಯ್ಯಾಲಿ ಮನುಷ್ಯರಂತೆ ಚಿತ್ರಿಸುವ ವಿಕೃತಿಯ ಪ್ರಭೃತಿಗಳನ್ನು ನಾವು ಕಾಣುತ್ತಿಲ್ಲವೇ?"(ಅದೇ; ಪು. ೩೨) ಎಂದು ಗಾಂಧೀಜಿಯನ್ನು ಪ್ರತ್ಯಕ್ಷವಾಗಿ ಅಥವಾ ಹತ್ತಿರದಿಂದ ಅರಿಯಲಾರರು, ಅವರ ಬಗೆಗೆ ಸರಿಯಾಗಿ(ಅಭ್ಯಾಸ ಮಾಡದವರು) ತಿಳಿಯದವರು ಹೀಗೆ ಅವರನ್ನು ತಪ್ಪಾಗಿಸಿಕೊಳ್ಳುತ್ತಾರೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧಿ ಬಗೆಗೆ ಈ ರೀತಿಯ ಹಲವು ತಪ್ಪು ಭಾವನೆ, ಕಲ್ಪನೆಗಳು ಮೂಡುವುದನ್ನು ಕಾಣಬಹುದು. ಕಾದಂಬರಿಕಾರರು ಇಲ್ಲಿ ಗಾಂಧೀಜಿಯವರಿಗೆ ಎಲ್ಲೂ ಧಕ್ಕೆ ಆಗದ್ದಾಗೆ ಅವರನ್ನು ಆದರ್ಶೀಕೃತ ನೆಲೆಯಲ್ಲಿ ಪ್ರತಿನಿಧಿಸಿದ್ದಾರೆ. ದಲಿತ ಗಾಂಧಿ ಪಾತ್ರದ ದೇವೀರಪ್ಪನವರನ್ನು ಕೇಂದ್ರವಾಗಿಟ್ಟುಕೊಂಡು ಪ್ರಸ್ತುತ ಸಂದರ್ಭದ ನಿತ್ಯಜೀವನದಲ್ಲಿ ಘಟಿಸುತ್ತಿರುವ ಕಹಿ ಸತ್ಯಗಳನ್ನು ಎಳೆ ಎಳೆಯಾಗಿ ಕಾದಂಬರಿಕಾರರು ಬಿಡಿಸಿಟ್ಟಿದ್ದಾರೆ. ಪ್ರಸ್ತುತ ಸಮಾಜದಲ್ಲಿರುವ ಸಮಸ್ಯೆಗಳಿಗೆ, ಕಂದಾಚಾರಗಳಿಗೆ ಗಾಂಧಿ ತತ್ವಗಳನ್ನು ಮದ್ದಾಗಿ ಸ್ವೀಕರಿಸಿದರೆ ಗುಣವಾಗುವಲ್ಲಿ ನಿಧಾನಗತಿ ಕಾಣುತ್ತದೆ. ಆದರೆ ಆ ಮದ್ದು ಕೊನೆಯಲ್ಲಿ ದೀರ್ಘಕಾಲ ಆರೋಗ್ಯವಾಗಿ ಬಾಳುವುದಕ್ಕೆ ಹೆಚ್ಚು ಉಪಯುಕ್ತ. ತತ್‌ಕ್ಷಣ ಪರಿಹಾರಗಳನ್ನು ನಿರೀಕ್ಷಿಸುವುದು ಕಷ್ಟವೆಂದು ಇಲ್ಲಿ ವ್ಯಕ್ತಗೊಂಡಿದೆ.

ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ತುಳಿತಕ್ಕೊಳಗಾದ ಜನತೆಯನ್ನು ಕುರಿತು ದಲಿತ - ಬಂಡಾಯ ಸಾಹಿತ್ಯದ ಲೇಖಕರು ಆಲೋಚಿಸುತ್ತಾರೆ. ಸಮಾಜವನ್ನು,

ವ್ಯವಸ್ಥೆಯನ್ನು ವಿರೋಧಿಸುವುದಕ್ಕಿಂತ ಸಂವೇದನಾಶೀಲರಾಗಿ ಗ್ರಹಿಸಿ ಪ್ರಶ್ನಿಸುತ್ತಾರೆ. ಭ್ರಷ್ಟಾಚಾರವೇ ತುಂಬಿರುವ ಈ ಸಮಾಜದಲ್ಲಿ ಗಾಂಧೀಜಿಯ ತತ್ವಗಳು ಗಟ್ಟಿಯಾಗಿ ನಿಲ್ಲುವುದಿಲ್ಲವೆಂದು ಕಾದಂಬರಿಕಾರರು ಹೇಳಹೊರಟ್ಟಿದ್ದಾರೆ. ಕೆಲವೊಬ್ಬರು ತಮ್ಮ ಸ್ವಾರ್ಥಕ್ಕೆ ಗಾಂಧೀಜಿಯವರ ವಿಚಾರಗಳನ್ನು ಬಳಸಿಕೊಂಡರೇ ಇನ್ನು ಕೆಲವರು ನೇರವಾಗಿ ಟೀಕಿಸುತ್ತಾರೆ. ಉದಾ:- ಸ್ವಾರ್ಥಕ್ಕೆ ಪಂಡ್ರಿಯಂಥವರು. ಟೀಕೆಗೆ ಸಿದ್ಧಲಿಂಗಸ್ವಾಮಿಗಳಂಥವರು. ಗಾಂಧಿ ಮತ್ತು ಅಂಬೇಡ್ಕರ್ ವಿಚಾರಗಳನ್ನು ಮುಖಾಮುಖಿಯಾಗಿಸಿ ವರ್ಗ ಸಂಘರ್ಷಗಳು ಉಂಟಾಗುವುದರ ಬಗ್ಗೆ ವಿವರಿಸಿದ್ದಾರೆ. ಪ್ರಸ್ತುತ ಸಮಸ್ಯೆಗಳಿಗೆ ಗಾಂಧಿ ತತ್ವಗಳನ್ನು ಮದ್ದಾಗಿಸಿಕೊಂಡರೇ ಅವುಗಳಿಂದ ಚಿಕಿತ್ಸೆ ಬಹುಬೇಗ ಫಲಕಾರಿಯಾಗದು ಎಂಬುದು ತಿಳಿದುಬರುತ್ತದೆ. ಜನರು, ಸಮಾಜ, ವ್ಯವಸ್ಥೆ ಗಾಂಧಿ ಚಿಂತನೆಗಳಿಂದ ಕ್ರಮೇಣವಾಗಿ ದೂರ ಸರಿಯುತ್ತಾ ಹೋಗುತ್ತಿದ್ದಾರೆ ಎಂಬುದನ್ನು ದಲಿತ- ಬಂಡಾಯ ಕಾದಂಬರಿಕಾರರು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಸಮನ್ವಯ ಕಾದಂಬರಿಕಾರರೆಂದೇ ಹೆಸರಾದ ನಾ. ಡಿಸೋಜ ಅವರು 'ಗಾಂಧಿ ಬಂದರು' ಕಾದಂಬರಿಯನ್ನು ಅತ್ಯಂತ ಜಾಣ್ಮೆ ಹಾಗೂ ವಿಚಕ್ಷಣೆಯಿಂದ ರಚಿಸಿದ್ದಾರೆ. ಗಾಂಧಿ ಪ್ರಭಾವವನ್ನು ಒಂದು ಗ್ರಾಮೀಣ ಪರಿಸರದಲ್ಲಿ ಚಿತ್ರಿಸಲು ಹೊರಡುವ ಈ ಕಾದಂಬರಿ, ಕೇವಲ ಅಲ್ಲಿಗೇ ನಿಲ್ಲುವುದಿಲ್ಲ. ಅದು ಸ್ವಾತಂತ್ರ್ಯಾನಂತರದ ಬೆಳವಣಿಗೆಗಳನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುತ್ತದೆ. ಆದ್ದರಿಂದ ಕಾದಂಬರಿಯ ಉದ್ದಕ್ಕೂ ಬರುವ "ಗಾಂಧಿ ಬಂದರು, ಹೋದರು" ಎಂಬ ಮಾತಿನ ವಾಚ್ಯಾರ್ಥದ ಆಚೆಗಿನ ಧ್ವನಿ ಪ್ರಭಾವಕಾರಿ ಎನಿಸುತ್ತದೆ.

'ಅಂದವಾಡಿ' ಎಂಬ ಹಳ್ಳಿಗೆ ಆಕಸ್ಮಾತ್ತಾಗಿ ಗಾಂಧಿ ಭೇಟಿ ನೀಡುತ್ತಾರೆ. ಅದೇ ಸಮಯದಲ್ಲಿ ಭಾಷಣ ಮಾಡುತ್ತಾರೆ. ಊರಿನ ದೇವಸ್ಥಾನಕ್ಕೆ ಭೇಟಿ ನೀಡಿ ಎಂಬ ಗ್ರಾಮಸ್ಥರ ಮನವಿಗೆ ಗಾಂಧಿ ಹರಿಜನ ಪ್ರವೇಶವಿಲ್ಲದ ದೇವಸ್ಥಾನವನ್ನು ತಾನು ಪ್ರವೇಶಿಸುವುದಿಲ್ಲ ಎಂದು ಹೇಳುತ್ತಾರೆ.

"ಗಾಂಧೀ ವ್ಯಕ್ತಿತ್ವ ವ್ಯಾಖ್ಯಾನಕ್ಕೆ ಮೀರಿದ್ದು. ಆ ವ್ಯಕ್ತಿತ್ವವನ್ನು ಅರ್ಥೈಸಲು ಪ್ರಯತ್ನಿಸುವ ಮುಗ್ಧ ಗ್ರಾಮೀಣ ಜನರಿಗೆ, ಅದು ಇಡೀ ರಾಷ್ಟ್ರೀಯ ಆಂದೋಲನದ ಚಾಲಕ ಶಕ್ತಿಯಾಗಿ ತಿಳಿದುಬರುತ್ತದೆ. ಸ್ವಾತಂತ್ರ್ಯ ಹೋರಾಟದ ನಿಜವಾದ ಮಹತ್ವ ತಿಳಿಯದ ಹಳ್ಳಿಯ ಜನ, ಗಾಂಧಿ ಬಂದ ಮೇಲೆ, ತಮಗೆ ಅರಿವಿಲ್ಲದಂತೆಯೇ ಅದರ ನೆಲೆ - ಬೆಲೆಗಳೇನು ಎನ್ನುವುದನ್ನು ಮೆಚ್ಚಿಕೊಳ್ಳುತ್ತಾರೆ. ಹಳ್ಳಿಯ ಪ್ರತಿಯೊಬ್ಬ ವ್ಯಕ್ತಿಯೂ ಅವನು ಎಷ್ಟೇ ಪ್ರಮುಖನಾಗಿರಲೀ, ಆಗದೇ ಇರಲಿ, ಗಾಂಧಿ ಪ್ರಭಾವ ವಲಯವನ್ನು ಹೊಕ್ಕು ರಾಷ್ಟ್ರೀಯ ಚಳವಳಿಯ ಪ್ರವಾಹದಲ್ಲಿ ಧುಮುಕುತ್ತಾರೆ. ಅಂದವಾಡಿ ಶ್ಯಾಮರಾಯ, ಓಲೇಕಾರ ಈರಣ್ಣ, ಪೂಜಾರಿ ದತ್ತಾತ್ರೇಯ ಶಾಸ್ತ್ರಿ, ಅಂಗಡಿ ರಾಮಲಿಂಗಪ್ಪ, ಶ್ಯಾನುಭೋಗ ರಾಮಣ್ಣ - ಇವರೇ ಆ ವ್ಯಕ್ತಿಗಳು"(ಜಾಕೋಬ್ ಲೋಬೊ.ಸಿ.ಎಚ್.(ಸಂ); ೧೯೯೩; ಪು. ೯೮). ಹೀಗೆ ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯ ಗಾಳಿ ಅಂದವಾಡಿ ಹಳ್ಳಿಯ ಹಿರಿತಲೆಮಾರಿನ ಜನರನ್ನು ಬದಲಾಯಿಸುತ್ತದೆ. ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತ್ತದೆ.

ಆದರೆ ಈ ಕಾದಂಬರಿಯಲ್ಲಿನ ನಿಜವಾದ ವ್ಯಂಗ್ಯ ತೆಂಗಿನಮರದ ಪ್ರತಿಮೆಯಲ್ಲಿ ಅತ್ಯಂತ ಪ್ರಭಾವಕಾರಿಯಾಗಿದೆ. "ಗಾಂಧೀಜಿ ನೆಟ್ಟ ಈ ಮರ ಊರಿಗೇ ಒಂದು ಹೆಮ್ಮೆಯ ವಿಷಯವಾಗಬೇಕು. ಆದರೆ, ಕಾಲ ಕಳೆದಂತೆ, ಈ ತೆಂಗಿನಮರವೂ ಬೇರೆಯ ತೆಂಗಿನಮರಗಳ ಹಾಗೆಯೇ ಸ್ವಂತಿಕೆ ಕಳೆದುಕೊಂಡ ಮರವಾಗುತ್ತದೆ. ಅದಕ್ಕಿಂತ ಹೆಚ್ಚಾಗಿ, ಸೇಂದಿ ಕಂಟ್ರಾಕ್ಟರನ ಬುಂಡೆಗೆ ಪಕ್ಕಾಗುತ್ತದೆ. ಹೀಗೆ ಗಾಂಧಿ ನೆಟ್ಟ ಮರ, ಸೇಂದಿ ಕಂಟ್ರಾಕ್ಟರನ ಕೈಗೆ ಸಿಕ್ಕ ಸೇಂದಿ ಇಳಿಸುವ ಮರವಾಗುವುದು, ಇಡೀ ದೇಶದ ದುಃಸ್ಥಿತಿಯ ಪಕ್ವ ಚಿತ್ರಣವಾಗಿದೆ"(ಅದೇ; ಪು. ೧೦೦).

"ಗಾಂಧಿ, ಇಲ್ಲಿ ಗತಕಾಲದ ಸಾಧಕ ಅಲ್ಲ. ಆತನ ನಿರಾಕರಣೆ - ನಿಖರವಾದ ಮಾತುಗಳಲ್ಲಿ ನಡೆಯದಿದ್ದರೂ, ಜೀವನ ಮೌಲ್ಯದ ದೃಷ್ಟಿಯಿಂದ ಅದು ಮಹತ್ವಪೂರ್ಣವಾಗಿದ್ದು ಕಣ್ಣಿಗೆ ಹೊಡೆಯುತ್ತದೆ ಕೂಡ, ಗಾಂಧಿ ಇಂದಿಗೂ ಪ್ರಸ್ತುತ ಎಂಬ ಅಂಶವನ್ನು ಮನಗಾಣಿಸುತ್ತದೆ. ಹೀಗೆ ನೋಡಲು ಅವಕಾಶ ಮಾಡಿಕೊಡುವುದರ ಮೂಲಕವೇ 'ಗಾಂಧಿ ಬಂದರು' ಕೃತಿಯ ಲೇಖಕರು ತಮ್ಮ ಕಾದಂಬರಿಯ ಹರಹನ್ನು ವಿಸ್ತರಿಸುವಲ್ಲಿ ಸಮರ್ಥರಾಗಿದ್ದಾರೆ"(ಅದೇ; ಪು. ೧೦೧) ಎಂದು ವೇಣುಗೋಪಾಲ ಸೊರಬ ಅವರು 'ನಾ. ಡಿಸೋಜಾ ಅಭಿನಂದನ' ಗ್ರಂಥದಲ್ಲಿ ನುಡಿದ್ದಾರೆ. ಸಮಕಾಲೀನ ಜೀವನದಲ್ಲಿ ಈ ಗಾಂಧಿ ವಿರೋಧಾಭಾಸ ಕೂಡ ಕಥೆಯ ಮುಖ್ಯ ಕಾಳಜಿ ಆಗುತ್ತದೆ. ಆದ್ದರಿಂದಲೇ ಸಮಕಾಲೀನ ಪರಿಸ್ಥಿತಿಯೇ ಗಾಂಧಿಯ ಪ್ರಸ್ತುತತೆ ಅಥವಾ ಅದರ ನಿರಾಕರಣೆ ಹೇಗೆ ಪರಿಶೀಲಿಸಲ್ಪಡಬೇಕು ಎನ್ನುವ ಅಂಶವೂ ಇಡೀ ಕಾದಂಬರಿಯಲ್ಲಿ ಹಾಸುಹೊಕ್ಕಾಗಿ ಮತ್ತೆ ಮತ್ತೆ ಗಾಂಧಿ ಬರುವ ಪ್ರಸ್ತಾಪ, ಕಥೆಯ ಜೀವಾಳವಾಗಿದೆ. ಈ ಕಾದಂಬರಿಯಲ್ಲಿ ಒಂದು ತಲೆಮಾರು ಗಾಂಧಿಯನ್ನು ಆದರ್ಶೀಯವಾಗಿ ಕಂಡರೆ, ಮತ್ತೊಂದು ತಲೆಮಾರು ವ್ಯಂಗ್ಯವಾಗಿ, ಹಾಸ್ಯವಾಗಿ ಕಾಣುತ್ತದೆ. ಆದರೂ ಗಾಂಧೀಜಿಯ ತತ್ವಾದರ್ಶಗಳು ಪ್ರಸ್ತುತವಾದವುಗಳು ಎಂದು ಈ ಕಾದಂಬರಿ ಹೇಳಲು ಹೊರಟಿದೆ.

೪.೫. ಮಹಿಳೆಯರ ಕಾದಂಬರಿ

ಸ್ತ್ರೀಯನ್ನು ಅಸ್ಪೃಶ್ಯಳು ಎಂದು ಎರಡನೇ ದರ್ಜೆ ಪ್ರಜೆಯಾಗಿ ಸ್ವಾತಂತ್ರ್ಯ ನಂತರದಲ್ಲೂ ಕಾಣಲಾಗುತ್ತಿದೆ. ಈ ನಿಟ್ಟಿನಲ್ಲಿ ಮಹಿಳಾ ಬರಹಗಾರ್ತಿಯರು ಆಲೋಚಿಸತೊಡಗಿದ್ದಾರೆ. ಗಾಂಧಿಯುಗದಿಂದ ಇಂದಿನವರೆಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದು ತನ್ನ ಅನೇಕ ಮಿತಿಗಳ ನಡುವೆ ಸಾಹಿತ್ಯ ಕೃಷಿಯಲ್ಲಿ ತೊಡಗಿರುವ ಸಾಧನೆಯನ್ನು ತೋರಿಸುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿ ಸುಧಾರಣಾವಾದಿಗಳ ಹೋರಾಟದ ಫಲವಾಗಿ ಸಾಮಾಜಿಕ ಮೌಲ್ಯಗಳಲ್ಲಿ ಸ್ತ್ರೀಶಿಕ್ಷಣ - ಸ್ವಾತಂತ್ರ್ಯ - ಸಮಾನತೆಯ ಅವಕಾಶಗಳು ಸಿಕ್ಕ ನಂತರ ವ್ಯಕ್ತಿಗತವಾದ ಮೌಲ್ಯಗಳನ್ನು ಪಡೆಯಲು ಸ್ತ್ರೀ ಮುಂದಾಗಿದ್ದಾಳೆ. ಗಾಂಧೀಜಿಯ ಆಶಯದಂತೆ ಸ್ತ್ರೀ ವಿಮೋಚನೆಯ ನೆಲೆಯಲ್ಲಿ ಸಾಂಪ್ರದಾಯಿಕ ಅನಿಷ್ಟ ಪದ್ಧತಿಗಳನ್ನು ಖಂಡಿಸುವುದು, ಗಂಡು - ಹೆಣ್ಣಿನ ಸಂಬಂಧ ಕುರಿತು ವಿವೇಚಿಸುವುದು; ಸ್ತ್ರೀ ಶಿಕ್ಷಣ ಅಗತ್ಯದ ಅರಿವು ಮೂಡಿಸುವುದು; ವ್ಯಕ್ತಿ ಸ್ವಾತಂತ್ರ್ಯತೆಯನ್ನು

ಬಯಸುವುದು ನವೋದಯ ಸಾಹಿತ್ಯದಿಂದ ಹಿಡಿದು ದಲಿತ ಬಂಡಾಯ ಸಾಹಿತ್ಯದವರೆಗೆ ಸುಧಾರಣಾವಾದಿ ಮತ್ತು ವಾಸ್ತವವಾದಿ ನೆಲೆಯಲ್ಲಿ ಅಭಿವ್ಯಕ್ತಿ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವಂತೆ ಹಾಗೂ ಸಮಾನತೆಗಾಗಿ ಹೋರಾಡುವಂತೆ ಪ್ರೇರೇಪಿಸುವ ಕೃತಿಗಳನ್ನು ರಚಿಸಿದ್ದಾರೆ. ಗಾಂಧೀಜಿಯನ್ನು ಮಹಿಳಾ ಬರಹಗಾತರ್ದಿಯರು ಪೂಜ್ಯಭಾವದಿಂದ ಆನ್ವಯಿಕ ರೂಪದಲ್ಲಿ ಸ್ವೀಕರಿಸಿಕೊಂಡು ಬಂದಿದ್ದಾರೆ.

ಮಹಿಳಾ ಸಮಾನತೆಯ ಬಗ್ಗೆ ಗಾಂಧಿಯ ದೃಷ್ಟಿಕೋನ ವಿಶಿಷ್ಟವಾದುದು. ಎಲ್ಲಾ ಸಮಾಜ(ವರ್ಗ)ಗಳಲ್ಲಿ ಪುರುಷನೇ ಶ್ರೇಷ್ಠ ಎಂಬ ಪರಿಕಲ್ಪನೆ ಬೆಳೆದುಬಂದಿದೆ. ಪಾಲನೆ, ಪೋಷಣೆಗಳನ್ನು ನಿರ್ವಹಿಸುವ ಹೆಣ್ಣು ನಾಲ್ಕು ಗೋಡೆಗಳ ಒಳಗೆ ಬಂಧಿಯಾಗಿರುವುದು ಪರಂಪರೆಯಿಂದ ತಿಳಿದುಬರುತ್ತದೆ ಮತ್ತು ಇತಿಹಾಸದಲ್ಲಿ ದಾಖಲಾಗಿದೆ. ತೊಟ್ಟಿಲ ತೂಗುವ ಕೈ ಜಗತ್ತನ್ನು ಆಳಬಹುದೆಂಬ ಸತ್ಯ ಗಾಂಧೀಜಿಯವರಿಗೆ ಅರಿವಾಗಿತ್ತು. ಮಹಿಳೆಯರು ಸ್ವತಂತ್ರರಾಗಬೇಕಾದರೆ ಅವರು ಭಯವನ್ನು ಬಿಡಬೇಕು. ಸಂಪ್ರದಾಯಗಳು, ನಂಬಿಕೆಗಳು ಸಮಾಜದಲ್ಲಿ ಮಹಿಳೆಯರ ಧೈರ್ಯವನ್ನು ಕಸಿದಿವೆ. ಪುರುಷಪ್ರಧಾನ ಶಾಸ್ತ್ರ ಗ್ರಂಥಗಳನ್ನು ಪುನರ್ ಪರಿಷ್ಕರಿಸಬೇಕೆಂಬ ಗಾಂಧೀಜಿಯವರ ವಾದ ಸ್ತ್ರೀ ಬಗ್ಗೆ ಇರುವ ಕಾಳಜಿಯನ್ನು ತಿಳಿಸುತ್ತದೆ.

'ಸ್ತ್ರೀ ಅಬಲೆಯಲ್ಲ ಸಬಲೆ' ಎಂಬುದನ್ನು ತಿಳಿಸಿ, ರಾಷ್ಟ್ರ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರನ್ನು ತೊಡಗಿಸಿಕೊಂಡರು. ಮಹಿಳೆಯರು ರಾಜಕೀಯಕ್ಕೆ ಪ್ರವೇಶ ಮಾಡಬೇಕು ಎಂಬುದು ಅವರ ಆಶಯವಾಗಿತ್ತು. ಭಾರತದ ರಾಷ್ಟ್ರಪತಿ ಸ್ಥಾನಕ್ಕೆ ಹರಿಜನ ಮಹಿಳೆಯನ್ನು ಆಯ್ಕೆ ಮಾಡಬೇಕೆಂದು ಕನಸು ಕಂಡವರು. ಸತಿಪದ್ಧತಿ, ಬಾಲ್ಯವಿವಾಹ, ವಿಧವೆಯ ಶೋಷಣೆ, ವರದಕ್ಷಿಣೆ, ಭ್ರೂಣಹತ್ಯೆ ಇವು ಹೆಣ್ಣಿನ ಸೃಜನಶೀಲತೆಯನ್ನು ನಾಶಪಡಿಸುತ್ತವೆಂದು, ಅವರನ್ನು ಸಮಾಜದ ಮುಖ್ಯವಾಹಿನಿಗೆ ಬರುವುದರತ್ತ ಗಾಂಧಿ ಪ್ರೋತ್ಸಾಹಿಸಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ಅನೇಕ ಮಹಿಳೆಯರು ಅಹಿಂಸಾತ್ಮಕ ಹೋರಾಟಗಳಲ್ಲಿ ತೊಡಗಿದರು. ಸೆರೆಮನೆ ವಾಸವನ್ನು ಅನುಭವಿಸಿದರು. ಅನೇಕ ಸ್ತ್ರೀಯರು ಪರವಾದ ಚಳವಳಿಗಳು ಅಸ್ತಿತ್ವ ಪಡೆದುಕೊಂಡವು. ಇದರಿಂದ ಸ್ತ್ರೀಯರು ಗಾಂಧೀಜಿಯನ್ನು ಪೂಜ್ಯಭಾವದಿಂದ ಕಾಣತೊಡಗಿದರು.

ಎಚ್. ನಾಗವೇಣಿ ಅವರು ಗಾಂಧೀಜಿಯನ್ನು ಸಂಕೇತವಾಗಿರಿಸಿಕೊಂಡು 'ಗಾಂಧಿ ಬಂದ' ಕಾದಂಬರಿಯನ್ನು ರಚಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕರಾವಳಿ ಪ್ರದೇಶಕ್ಕೆ ಗಾಂಧಿ ಮೂರು ಬಾರಿ ಭೇಟಿ ನೀಡಿದರು. ಇದರಿಂದ ವಿಭಜಿತ ದಕ್ಷಿಣ ಕನ್ನಡದಲ್ಲಿ ಸಹಜವಾಗಿಯೇ ಗಾಂಧೀಜಿಯ ಪ್ರಭಾವ ತೀವ್ರವಾಗಿತ್ತು. ಗಾಂಧಿ ತತ್ವಗಳಿಂದ ಪ್ರಭಾವಿತರಾದ ಸ್ವಾತಂತ್ರ್ಯ ಹೋರಾಟಗಾರರು ಅಥವಾ ಗಾಂಧಿವಾದಿಗಳು ಈ ಪ್ರದೇಶದಲ್ಲಿ ಸುಧಾರಣೆಯ ಚಳುವಳಿಯನ್ನು ಆರಂಭಿಸಿದ್ದರು. ಕಾರ್ನಾಡು ಸದಾಶಿವರಾಯರು, ಕುದ್ಮಲ್ ರಂಗರಾಯರಂಥವರು ಶಿಕ್ಷಣ, ಸ್ತ್ರೀ ಸಮಾನತೆ, ಅಸ್ಪೃಶ್ಯತಾ ನಿವಾರಣೆಯಂಥ ಸುಧಾರಣೆಗಳನ್ನು ಚಳವಳಿಯ ಹಂತದಲ್ಲಿ ಆರಂಭಿಸಿದ್ದರು. ಇದು ಕರಾವಳಿಯ ಸಾಮಾಜಿಕ ಜೀವನದ ಮೇಲೆ ಪ್ರಭಾವ ಬೀರಿದೆ. ಇಲ್ಲಿನ ಸಾಮಾಜಿಕ

ಪರಿಸರದಲ್ಲಾದ ಬದಲಾವಣೆಗಳನ್ನು 'ಗಾಂಧಿ ಬಂದ' ಕಾದಂಬರಿ ಗಾಂಧಿಯ ಬರುವಿಕೆಯನ್ನು ತಂತ್ರವಾಗಿರಿಸಿ ವಿವರಿಸುತ್ತದೆ. ಇದು ಕಾದಂಬರಿಯ ಆಶಯವಾಗಿದೆ. ಗಾಂಧಿ ತತ್ವ-ಚಿಂತನೆಗಳು ಗ್ರಾಮೀಣ ಬದುಕಿನ ಮೇಲೆ ಬೀರಿದ ಪ್ರಭಾವವು ಕಾದಂಬರಿಯಲ್ಲಿ ವ್ಯಕ್ತವಾಗಿದೆ. "ಕನ್ನಡ ಕಾದಂಬರಿ ಲೋಕದ ವಿಸ್ತಾರ ಸಾರದಲ್ಲಿ ಈ ಕಾದಂಬರಿ ತುಳುನಾಡಿನ ಸಾಂಸ್ಕೃತಿಕ ಆತ್ಮಕಥನ ಇತಿಹಾಸವನ್ನು ಪ್ರತಿಬಿಂಬಿಸುವಂತದ್ದು ಎಂದು ನನ್ನ ಭಾವನೆ"(ನಾಗವೇಣಿ. ಎಚ್.; ೨೦೦೧; ಪುಟ ಮುನ್ನುಡಿ) ಎಂದು ಲೇಖಕಿಯೇ ಕಾದಂಬರಿಯ ಮೊದಲ ಮಾತಿನಲ್ಲಿ ಹೇಳಿಕೊಂಡಿದ್ದಾರೆ.

ಅದ್ರಾಮ-ದ್ರೌಪದಿಯ ಪ್ರೇಮ ಕಥೆ ಕಾದಂಬರಿಯ ಜೀವಾಳ. ತುಳುನಾಡಿನ ಸಾಮಾಜಿಕ ಬದುಕು ಬದಲಾವಣೆಯ ಹಾದಿಯನ್ನು ಗಾಂಧಿಯ ಸಂಕೇತದ ಮೂಲಕ ತುಳಿಯುವುದಕ್ಕೆ ಈ ಪ್ರೇಮಕಥೆ ಮಹತ್ವವಾಗುತ್ತದೆ. ಗಾಂಧಿಯ ಪ್ರಮುಖ ಮೌಲ್ಯಗಳಾದ ಹಿಂದೂ-ಮುಸ್ಲಿಂ ಸಾಮರಸ್ಯ, ಹೆಣ್ಣಿನ ಕುರಿತಾದ ಗೌರವ, ಧರ್ಮಕ್ಕಿಂತ ವ್ಯಕ್ತಿಯ ಗೌರವದ ಬದುಕು ಮುಖ್ಯ-ಇತ್ಯಾದಿ ತತ್ವಗಳು ಪ್ರೇಮ ಕಥೆಯ ಮೂಲಕ ವ್ಯಕ್ತವಾಗುತ್ತವೆ. ಗಾಂಧೀಜಿಯ ತತ್ವ ಮತ್ತು ಗಾಂಧಿಯ ಆಗಮನ ಈ ತುಳುನಾಡು ಪ್ರದೇಶದ ಜನರಲ್ಲಿ ಮೂಡಿಸಿದ ಸಂಚಲನ ಮತ್ತು ಪರಿವರ್ತನೆಯನ್ನು ಚಿತ್ರಿಸುವುದು ಕಾದಂಬರಿಯ ವೈಶಿಷ್ಟ್ಯವಾಗಿದೆ.

ಗಾಂಧಿಯ ಮೌಲ್ಯಗಳು ತುಳುನಾಡಿಗೆ ಪ್ರವೇಶವಾದಾಗ ಬ್ರಾಹ್ಮಣ - ಅಬ್ರಾಹ್ಮಣರ ಮಧ್ಯ ಸಂಘರ್ಷ ಉಂಟಾಯಿತು. ಆಳುಗಳು ತಮ್ಮ ಒಡೆಯರಾದ ಹೆಬ್ಬಾರರ ವಿರುದ್ಧ ಮಾತನಾಡಲು ಆರಂಭಿಸುತ್ತಾರೆ. ಮಾರಪ್ಪನು ಗಾಂಧಿ ತತ್ವಗಳನ್ನು ಅನುಷ್ಠಾನ ಮಾಡಲು ಊರೆಲ್ಲಾ ತಿರುಗುತ್ತಾನೆ. ಪಾನನಿರೋಧ ಕಾನೂನಿನ ಬಗ್ಗೆ ಜನರಿಗೆ ತಿಳಿಸುತ್ತಾನೆ. ಜನರಿಗೆ ಇದರ ಬಗ್ಗೆ ಅರಿವು ಮೂಡುತ್ತದೆ. ಹೆಬ್ಬಾರರ ಮನೆಗೆ ಹೋಗುವ ಕೆಲಸದಾಳುಗಳ ಸಂಖ್ಯೆ ಕಡಿಮೆಯಾಗುತ್ತದೆ. ಆ ಮೂಲಕ ಮೇಲ್ಜಾತಿ - ಕೆಳಜಾತಿಗಳ ಸಂಘರ್ಷಗಳಿಗೆ ಎಡೆ ಮಾಡುತ್ತದೆ.

ಗಾಂಧಿ ಮೌಲ್ಯಗಳನ್ನು ಪ್ರಸಾರ ಮಾಡಲು ಕಾರ್ನಾಡ್ ಸದಾಶಿವರಾಯರು ಗಾಂಧಿ ರೂಪದಲ್ಲಿ ಜನರಲ್ಲಿಗೆ ಬರುತ್ತಾರೆ. "ಆ ಪುಣ್ಯಾತ್ಮ ಸಿರಿವಂತರಲ್ಲಿ ಸಿರಿವಂತನಂತೆ ಗಾಂಧಿಯವರ ಹಾದಿ ತುಳಿಯಲು ಇಡೀ ಸಿರಿವಂತಿಕೆಯನ್ನು ಬಿಟ್ಟುಕೊಟ್ಟರಂತೆ. ಕೊರಗರು ಮತ್ತೊಂದು ಬೇರೆಯವರ ಎಂಜಲೆಲೆ ಮುಟ್ಟಬಾರದು ಎಂದು ಆಣೆ ಹಾಕಿಸಿದರಂತೆ. ಅವರನ್ನು ತಮ್ಮವರೆಂಬಂತೆ ಕೈ ಹಿಡಿದು ತಮ್ಮ ಮನೆಯೊಳಗೆ ಕರೆದೊಯ್ದು ಜೊತೆಯಲ್ಲಿ ಊಟ ಮಾಡಿಸಿದರಂತೆ" (ಅದೇ; ಪು. ೮೫). ಇಲ್ಲಿ ಸಾಮಾಜಿಕ ನೆಲೆಯಿಂದ ಜನರು ಒಟ್ಟಿಗೆ ಬಾಳುವ ಬಾಂಧವ್ಯದ ಚಿತ್ರಣವಿದೆ. ಗಾಂಧೀಜಿಯ ದೆಸೆಯಿಂದ ಅಸ್ಪೃಶ್ಯರು ಮೇಲ್ಜಾತಿಯ ಮನೆಯ ಒಳಗೆ ಪ್ರವೇಶಿಸುವ ಅಧಿಕಾರ ಸಿಕ್ಕಿದೆ. ಅಸ್ಪೃಶ್ಯರ ಬದುಕಿನಲ್ಲಿ ಸ್ಥಿತ್ಯಂತರಗಳು ಈ ಹಿನ್ನೆಲೆಯಲ್ಲಿ ಸಾಧ್ಯವಾಗುತ್ತದೆ. ಒಟ್ಟು ಈ ಕಾದಂಬರಿ ಗಾಂಧಿಯ ಸಮಾನತೆಯ ಮೌಲ್ಯವನ್ನು ಪ್ರತಿಪಾದಿಸುತ್ತದೆ.

ಬ್ರಾಹ್ಮಣ ಧರ್ಮದ ದ್ವಂದ್ವಗಳು ದ್ರೌಪದಿಯ ನೋವು ಅದ್ರಾಮನ ಬದುಕಿನಲ್ಲಿ ಬದಲಾವಣೆಯನ್ನು ಸೂಚಿಸುತ್ತದೆ. ದ್ರೌಪದಿಯು ತಾಯಿಯ ಹೊಡೆತಕ್ಕೆ ಜರ್ಜರಿತವಾಗಿದ್ದಾಳೆ.

ಈ ಸಂದರ್ಭದಲ್ಲಿಯೇ ತುಳುನಾಡಿಗೆ ಗಾಂಧಿ ಬರುವುದು ತಿಳಿಯುತ್ತದೆ. ಗಾಂಧಿಯ ಮೌಲ್ಯಗಳಲ್ಲಿ ಒಂದಾದ ವಿಧವಾ ವಿವಾಹ ಇಲ್ಲಿಂದ ಪೂರ್ಣರೂಪವನ್ನು ಪಡೆದುಕೊಳ್ಳುತ್ತದೆ. "ಜಾತಿಮತವನ್ನು ಗೋಡೆಯುರುಳಿಸಲು ಗಾಂಧೀಜಿಯವರು ಹಗಲಿರುಳು ದುಡಿಯುತ್ತಿದ್ದಾರೆ"(ಅದೇ; ಪು. ೭೯). ಇಲ್ಲಿ ಗಾಂಧೀಜಿಯ ಜಾತ್ಯಾತೀತತೆಯ ಮೌಲ್ಯವನ್ನು ಚಿತ್ರಿಸಲಾಗಿದೆ. ಬ್ರಾಹ್ಮಣಳಾದ ದ್ರೌಪದಿ ಮುಸ್ಲಿಮನಾದ ಅದ್ರಾಮರ ಮದುವೆ ನಡೆಯುತ್ತದೆ.

ಈ ಹಿನ್ನೆಲೆಯಲ್ಲಿ ದಾರು-ಮಾರಪ್ಪರು ಸಂಘರ್ಷ ಸಾಮರಸ್ಯಗಳನ್ನು ನಿರ್ಮಿಸುವ ಇನ್ನೆರಡು ಪಾತ್ರಗಳು. ದಾರು ಸುಂದರಿ. ಆದರೆ ಈಕೆಯು ಬಂಜೆಯೆಂದು ಸಮಾಜದೊಳಗೆ ಗುರುತಿಸಿಕೊಂಡವಳು. ಹೆಣ್ಣಿನ ಜೀವನವನ್ನು ಮದುವೆ, ಮಕ್ಕಳು ಜವಾಬ್ದಾರಿಯ ನೆಲೆಯಿಂದಲೇ ಸಮಾಜ ಗ್ರಹಿಸುತ್ತಾ ಬಂದಿದೆ. .....ಈಕೆಗೆ ಗರ್ಭಕೋಶವೇ ಇಲ್ಲ.....(ಅದೇ; ಪು. ೧೨೦) ಎಂದು ಸುತ್ತಲಿನ ಜನರ ಮಾತಿಗೆ ದಾರು ವಸ್ತುವಾಗುತ್ತಾಳೆ. ಈ ಸ್ಥಿತಿಯಿಂದ ಆಕೆ ಮದುವೆ ಆಗುವ ಹಾಗಿರಲಿಲ್ಲ. ಗಾಂಧಿ ತತ್ವಗಳನ್ನು ಅನುಷ್ಠಾನಗೊಳಿಸಲು ಸದಾ ತಮ್ಮನ್ನು ಕ್ರಾಂತಿಯಲ್ಲಿ ತೊಡಗಿಸಿಕೊಂಡವನು ಮಾರಪ್ಪ. ಸಾಮಾಜಿಕ ಕಾಳಜಿಯಿರುವ ಈತ ಈ ನೆಲೆಯಲ್ಲಿ ದಾರುವನ್ನು ಮದುವೆ ಆಗುತ್ತಾನೆ. ಗಾಂಧಿಯ ಮೌಲ್ಯವಾದ ಅನಿಷ್ಟ ನಿರ್ಮೂಲನೆಯನ್ನು ಅನುಷ್ಠಾನಕ್ಕೆ ತರುತ್ತಾನೆ.

ಅಸ್ಪೃಶ್ಯರ ಸಮಸ್ಯೆಯ ಆಲೋಚನೆಯು ಗಾಂಧಿ ಮೌಲ್ಯದಲ್ಲಿ ಬದಲಾಗುತ್ತಿದೆ. "....ಯಾಕೋ ಮನುಷ್ಯರೆಂದರೆ ಎಲ್ಲರೂ ಒಂದೇ; ಎಲ್ಲವೂ ನಾವು ಮಾಡಿಕೊಂಡಿರುವ ಭೇದ ಎಂದು ಗಾಂಧಿಯವರು ಹೇಳಿದ್ದಲ್ವಾ? ಆ ಜಾತಿ ಈ ಜಾತಿ ಯಾವುದು ಬೇರೆಯಲ್ಲ. ಎಲ್ಲಾ ಒಂದೇ ಮಾರಾಯಾ....."(ಅದೇ; ಪು. ೨೫೨) ಎಂದು ತೋಮಸನು ಹೇಳುತ್ತಾನೆ. ಜನರಿಗೆ ಜಾತಿಯ ಪೊಳ್ಳುತನದ ಬಗ್ಗೆ ಅರಿವು ಮೂಡಿದೆ. ಮನುಷ್ಯತ್ವವನ್ನು ಜಾತಿಗಿಂತ ಮುಖ್ಯವಾಗಿ ಇಲ್ಲಿ ಕಾಣಲಾಗಿದೆ. ಈ ಬದಲಾವಣೆಗೆ ಗಾಂಧಿ ಬರುವಿಕೆ ಒಂದು ಸಂಕೇತವಾಗಿದೆ.

ಸಮಾಜದ ಅನಿಷ್ಟ ಪದ್ಧತಿಗಳಾದ ಜಾತಿ, ಜೀತಪದ್ಧತಿಗಳನ್ನು ಬುಡಸಮೇತ ನಿರ್ನಾಮ ಮಾಡಲು ಗಾಂಧಿ ಸನ್ನದ್ಧರಾದರು. ಸತ್ಯ - ಅಹಿಂಸೆ ಮತ್ತು ಮಾನವ ಪ್ರೇಮದ ಒಂದು ಎಳೆಯ ಮೂಲಕ ತುಳುನಾಡ ಸಂಸ್ಕೃತಿ ನಿಂತಿದೆ ಎಂಬ ಸಂದೇಶ ಇಲ್ಲಿ ವ್ಯಕ್ತವಾಗಿದೆ. ಇದರಿಂದಲೇ ಗಾಂಧೀಜಿ ಮತ್ತು ಅವರ ತತ್ವಗಳು ಇಲ್ಲಿ ಪೂರಕವಾಗಿವೆ.

ಗುತ್ತಿನ ಮನೆಯವರು ಗಾಂಧಿ ನಿಧಿಗೆ ಅರ್ಪಿಸಿದ ಒಡವೆಗಳನ್ನು ತಮ್ಮಲ್ಲೇ ಇರಿಸಿಕೊಂಡು ಪುಟ್ಟಮ್ಮಕ್ಕನಿಗೆ ಕೊಟ್ಟು ವಂಚಕ ಬುದ್ಧಿಯನ್ನು ತೋರಿಸಿದ್ದರು. ಅಶಿಕ್ಷಿತ ಜನಾಂಗದವರೇ ಗಾಂಧೀಜಿಯವರಿಗೆ ನಿಷ್ಠೆ ಗೌರವ ತೋರಿಸುತ್ತಾರೆ. ಶಿಕ್ಷಿತ ಜನಾಂಗದವರಾದ ಹೆಬ್ಬಾರರಂಥವರಿಗೆ ಅವರ ಬಗ್ಗೆ ಕಾಳಜಿಯೇ ಇಲ್ಲ. ಗಾಂಧೀಜಿಯ ಬದಲಾವಣೆಗೆ ನಿಜವಾಗಿಯೂ ತಮ್ಮನ್ನು ಒಡ್ಡಿಕೊಂಡವರು ಮತ್ತು ಗಾಂಧೀಜಿಯಿಂದ ಪ್ರಭಾವಿತರಾದವರು ಈ ದೇಶದ ಬಡವರು, ದಲಿತರೇ ಹೊರತು ಮೇಲ್ವರ್ಗದವರಲ್ಲ ಎಂಬ ಸಂದೇಶವನ್ನು ಈ ಕಾದಂಬರಿ ನೀಡುತ್ತದೆ.

ಗಾಂಧಿಯು ವ್ಯಕ್ತಿಮೌಲ್ಯದ ಪ್ರತಿನಿಧಿಸುವಿಕೆಯಲ್ಲಿ ಮಿಲನ, ಸೇರುವಿಕೆ, ವಿಸ್ತರಿಸುವಿಕೆ, ಬಿಡುಗಡೆ, ಸ್ವಾವಲಂಬನೆ, ಸಹಜೀವನಗಳ ಸಂಕೇತವಾಗಿ ಈ ಕಾದಂಬರಿಯಲ್ಲಿ ಕಾಣಿಸಿಕೊಂಡಿದ್ದಾರೆ. ಒಗ್ಗಟ್ಟು, ದೇಶ, ಭಾಷೆ, ನೆಲ ಹೀಗೆ ವಿಶಾಲ ನೆಲೆಯಲ್ಲಿ ಇಲ್ಲಿ ಗ್ರಹಿತವಾಗಿದ್ದಾರೆ.

ಕಾಕೋಳು ಸರೋಜಾರಾವ್ ಅವರು ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಕೌಟುಂಬಿಕ ಪರಿಸರದಲ್ಲಿ ಆಗುವ ಬದಲಾವಣೆಯನ್ನು ಕುರಿತು 'ನಾನು ಭಾರತೀಯ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಕಾವೇರಿ ಮತ್ತು ರಮೇಶ್ ಕಾದಂಬರಿಯ ಕೇಂದ್ರ ಪಾತ್ರಗಳಾಗಿದ್ದಾರೆ. ಇವರು ಇಬ್ಬರೂ ಸ್ವಾತಂತ್ರ್ಯ ಹೋರಾಟಗಾರರು. ಕುಟುಂಬ ಪರಿಸರದಲ್ಲಿ ಸ್ವಾತಂತ್ರ್ಯದ ಗಾಳಿಯಿಂದ ಬ್ರಿಟೀಷ್ ಪ್ರಭುತ್ವದ ದೇಶೀಯ ಅಧಿಕಾರಿ ದೇಶಾಭಿಮಾನಿಯಾಗಿ ಪರಿವರ್ತನೆಗೊಳ್ಳುವುದನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಹಾಗಾಗಿ ಇದೊಂದು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಾಗಿಸಿ ಕೊಂಡ ಕಾದಂಬರಿಯಾಗಿದೆ. "'ನಾನು ಭಾರತೀಯ' ಈ ಕೃತಿ ಭಾರತ, ಮಹಾತ್ಮಾ ಗಾಂಧೀಜಿಯವರ ದೃಢೀಕರಣದಲ್ಲಿ ಅವರದೇ ಆದ ನೂತನ ಸಿದ್ಧಾಂತದ, ಅಪಾರ ಸಾತ್ವಿಕ ಶಕ್ತಿಯ ಬಲದ ಮೇಲೆ ಪ್ರಪಂಚದಲ್ಲಿಯೇ ಮೊಟ್ಟಮೊದಲನೆಯ ಬಾರಿ, ಅಹಿಂಸೆಯ ಸಿದ್ಧಾಂತದ ಪ್ರಯೋಗ ಮಾಡಿ ಯಶಸ್ವಿಯಾದಾಗ ಜಗತ್ತು ವಿಸ್ಮಿತವಾಯಿತು. ಈ ಸಿದ್ಧಾಂತವು ನಮ್ಮ ಭಾರತಕ್ಕೆ ಅನುಚಿತವಿಲ್ಲದಿದ್ದರೂ, ಜಗತ್ತಿಗೆ ಹೊಸದೆನಿಸಿತು.

ಗಾಂಧೀಜಿಯವರು ಭಾರತೀಯರಲ್ಲಿ ಅಹಿಂಸಾ ಸಿದ್ಧಾಂತವನ್ನು ತುಂಬಿದರು. ಸ್ವಾತಂತ್ರ್ಯ ಗಳಿಸಲು ನಡೆಸಿದ ಹೋರಾಟಗಳು, ಅವುಗಳಲ್ಲಿ ಭಾಗವಹಿಸಿದ್ದ ಕೆಲವರ ಚಿತ್ರಣವನ್ನು ಈ ಕಾದಂಬರಿಯಲ್ಲಿ ಸೂಕ್ಷ್ಮವಾಗಿ ವಿವರಿಸಲಾಗಿದೆ"(ಸರೋಜಾರಾವ್ ಕಾಕೋಳ್; ೧೯೯೮; ಪು. ಅರಿಕೆಯಿಂದ)ಎಂದು ಕಾಕೋಳು ಸರೋಜಾರಾವ್ ಅವರು ಕಾದಂಬರಿಯ ಅರಿಕೆಯಲ್ಲಿ ಹೇಳಿದ್ದಾರೆ. ವ್ಯಕ್ತಿಗಳ ಹೋರಾಟ ಸ್ವಾತಂತ್ರ್ಯ ಪ್ರಾಪ್ತಿಯ ವೈವಿಧ್ಯಮಯ ರೋಮಾಂಚನ ಕಾದಂಬರಿಯಾಗಿದೆ.

ಬ್ರಿಟೀಷ್ ಪ್ರಭುತ್ವದ ದೇಶೀಯ ಅಧಿಕಾರಿಯಾದ(ಡಿ.ಎಸ್.ಪಿ.) ಕಾವೇರಿಯ ಗಂಡ ರಾಯರು ಸ್ವಾತಂತ್ರ್ಯ ಚಳುವಳಿಯ ವಿರೋಧಿಯಾಗಿದ್ದರು. ತನ್ನ ಹೆಂಡತಿ ಕಾವೇರಿ ಮತ್ತು ಮಗಳು ಭಾರತಿ ಸ್ವಾತಂತ್ರ್ಯ ಚಳುವಳಿಯ ಹೋರಾಟಗಾರರು. ಚಳುವಳಿಯ ವಿರೋಧಿಯಾದ ರಾಯರು "ನಾನು ಈವತ್ತು ಈ ಒಂದು ಒಳ್ಳೇ ಸ್ಥಿತಿಗೆ ಬಂದಿರೋದು ಭಾರತೀಯರಿಂದಲ್ಲ. ನಮ್ಮ ವಿದೇಶಿ ಸರ್ಕಾರದಿಂದ. ಅನ್ನವಿಲ್ಲದೆ ಅಲೆಯುತ್ತಿದ್ದ ಭಿಕಾರಿಗೆ ಜೀವನದ ಮಾರ್ಗ ತೋರಿಸಿಕೊಟ್ಟರು"(ಅದೇ; ಪು. ೧೫). ಇದರಿಂದ ಅವರು ಭಾರತಮಾತೆಯ ಗೌರವವನ್ನು ಬ್ರಿಟೀಷರಿಗೆ ಬಿಟ್ಟುಕೊಟ್ಟಿದ್ದರು. ಮನೆಯಲ್ಲಿ ನಮ್ಮ ಭಾರತೀಯ ಹಿರಿಯ ನಾಯಕರ ಯಾವ ಭಾವಚಿತ್ರ ಹಾಕಲೂ ಅನುಮತಿಯಿಲ್ಲ(ಅದೇ; ಪು. ೨) ಎಂದು ಭಾರತಮಾತೆಯನ್ನು, ಸ್ವಾತಂತ್ರ್ಯದ ಚಳುವಳಿಯನ್ನು ವಿರೋಧಿಸುತ್ತಿದ್ದರು. ಇಂತಹ ಬ್ರಿಟೀಷ್ ಪ್ರಭುತ್ವದ ಅಧಿಕಾರಿಯಾದ ಗಂಡನನ್ನು ಚಳುವಳಿಗಾರರಿಗೆ ಸಹಾಯ ಮಾಡಲು ಮತ್ತು ಭಾರತೀಯನನ್ನಾಗಿ ಮಾಡುವಲ್ಲಿ ಕಾವೇರಿ ಮತ್ತು ಭಾರತೀಯರ ಪಾತ್ರ ಪ್ರಮುಖವೆನಿಸಿದೆ.

ಈ ಇಬ್ಬರೂ ತಾಯಿ - ಮಗಳು ಗಾಂಧೀಜಿಯ ತತ್ವಗಳನ್ನು ಪಾಲಿಸಿಕೊಂಡು ಚಳುವಳಿಯಲ್ಲಿ ಧುಮುಕಿದ್ದರು. "ಗಾಂಧೀಜಿ ಸ್ವಾತಂತ್ರ್ಯ ಗಳಿಸೋಕ್ಕಾಗಿ ತಮ್ಮ ಸುಖವನ್ನೆಲ್ಲಾ ತ್ಯಾಗ ಮಾಡಿ ಊಟ, ತಿಂಡಿ ನಿದ್ರೆ ನೀರಡಿಕೆಯನ್ನದೆ ಹೋರಾಡ್ತಾ ಇದ್ದಾರೆ"(ಅದೇ; ಪು. ೩೧) ಎಂದು ಗಾಂಧೀಜಿಯ ಆದರ್ಶಗಳನ್ನು ಪಾಲಿಸುತ್ತಾರೆ. "ಗಾಂಧೀಜಿಯ ಶಿಷ್ಯರಾಗಬಯಸುವವರು ಸಂಸಾರದ ಸುಖವನ್ನು ತ್ಯಾಗ ಮಾಡಬೇಕು ಭಾರತಿ. ಏಕೆಂದರೆ ಈ ವಿಷಯದಲ್ಲಿ ಭಾಗವಹಿಸುವವರು ಎಲ್ಲ ತ್ಯಾಗಕ್ಕೂ ಸಿದ್ಧರಿರಬೇಕು"(ಅದೇ; ಪು. ೩೬) ಎಂದು ರಮೇಶ ಭಾರತಿಗೆ ಗಾಂಧೀಜಿಯ ಶ್ರದ್ಧಾಸಕ್ತಿಗಳನ್ನು ಹೇಳುತ್ತಾನೆ. ಇಲ್ಲಿ ಗಾಂಧೀಜಿ ತ್ಯಾಗಮಯಿಯಾಗಿ ಪ್ರತಿಪಾದಿತಗೊಂಡಿದ್ದಾರೆ.

ನಂಜುಂಡ ಒಬ್ಬ ಸ್ವಾತಂತ್ರ್ಯ ಹೋರಾಟಗಾರ, ಗಾಂಧೀವಾದಿ. ಈತನ ತಾಯಿಯನ್ನು ಬ್ರಿಟೀಷ್ ಸರಕಾರದ ಡಿ.ಎಸ್.ಪಿ. ಅಧಿಕಾರಿಯಾದ ಕಾವೇರಿಯ ಗಂಡ ರಾಮರಾಯರು ತಮ್ಮ ಬಂದೂಕಿನಿಂದ ಹತ್ಯೆಗೈದಿದ್ದರು. ಇದಕ್ಕೆ ನಂಜುಂಡ ಪ್ರತಿಯಾಗಿ ಸೇಡು ತೀರಿಸಿಕೊಳ್ಳಲು ಬಂದಾಗ ಕಾವೇರಿಯೊಂದಿಗಿನ ಮಾತು ಹೀಗಿದೆ. "ಏನು ಮಾಡ್ಲಿ ತಾಯೀ. ನನ್ನ ಹಡೆದ ತಾಯಿನ್ನ ಕೊಂದವನನ್ನು ನಾನು ಸುಮ್ಮನೇ ಬಿಡಲೇ. ಅದಕ್ಕೆ ಮನಸ್ಸು ಬರ್ತಾಯಿಲ್ಲ. ಆದರೆ ಹಿಂದೂ ಸ್ತ್ರೀಗೆ ಇರೋ ಸೌಭಾಗ್ಯವನ್ನು ಅಳಿಸೋದು ಕಷ್ಟವಾಗಿದೆ. ಏನು ಮಾಡ್ಲಿ ನಾನು"(ಅದೇ; ಪು. ೬೦) ಎಂದು ಚಡಪಡಿಸಿದನು. ಇದಕ್ಕೆ ಕಾವೇರಿ "ಮಹಾತ್ಮ ಗಾಂಧೀಜಿಯವರ ಅಹಿಂಸಾ ತತ್ವ ಪರಿಪಾಲಿಸ್ತೀನಿಂತ ಹೇಳೋ ಗಾಂಧಿ ಶಿಷ್ಯರ ಬಾಯ್ನಲ್ಲಿ ಕೊಲೆ ದರೋಡೆಯ ಮಾತು ಬರಲೇಬಾರದು"(ಅದೇ; ಪು. ೬೦) ಎಂದು ಗಾಂಧೀಜಿಯ ಅಹಿಂಸಾವನ್ನು ನಂಜುಂಡನಲ್ಲಿ ಜಾಗೃತಗೊಳಿಸಿದಳು. ಇದರಿಂದ ನಂಜುಂಡ ಹಿಂಸೆಯನ್ನು ತೊರೆದು ಅಹಿಂಸೆಯನ್ನು ಪರಿಪಾಲಿಸಿ ರಾಮರಾಯನನ್ನು ಕೊಲ್ಲದೆ ತನಗೆ ತಾನೇ ಗುಂಡಿಟ್ಟುಕ್ಕೊಂಡು ಹತನಾದನು. ಇದರಿಂದ ಕಾವೇರಿ ಆತಂಕಗೊಂಡು ತನ್ನ ಗಂಡನ ಮೇಲೆ ಕೆಂಡಾಮಂಡಲವಾಗಿ "ಬ್ರಿಟಿಷರು ನಮ್ಮ ದೇಶದಲ್ಲಿ ಬಂದು ನಮ್ಮ ಮೇಲೆ ದಬ್ಬಾಳಿಕೆ ನಡೆಸಿ ನಮ್ಮನ್ನೇ ಗುಂಡಿಟ್ಟು ಕೊಲ್ಲೋಕ್ಕೆ ನಮ್ಮ ಜನರನ್ನೇ ಸಂಬಳಕ್ಕೆ ಇಟ್ಟಿದ್ದಾರೆ. ದೇಶಭಕ್ತರನ್ನು ಕೊಂದರೆ ಬಡ್ತಿ ಕೊಡುತ್ತಾರೆ, ಅವರ ಕೂಳಿಗೆ ಕೈಯೊಡ್ಡಿ ಅವರ ಅಪ್ಪಣೆಯಂತೆ ನಮ್ಮ ಜನರನ್ನೇ ಗುಂಡಿಕ್ಕಿ ಕೊಲ್ಲುತ್ತಿರುವ ನಮ್ಮ ಜನ ಪಶುಗಳೇ ಸರಿ" ಎಂದು ಗರಬಡಿದವಳಂತೆ ನುಡಿದು ಬ್ರಿಟೀಷರ ಅನ್ಯಾಯ, ದಬ್ಬಾಳಿಕೆ ಮತ್ತು ಅವರ ಸ್ವಾರ್ಥಪರತೆಯನ್ನು ಹೇಳಿ ಗಂಡನ ಬ್ರಿಟೀಷ್ ವ್ಯಾಮೋಹದ ಅಂಧಕಾರವನ್ನು ಕಳಚುತ್ತಾಳೆ. ಇದರಿಂದ ರಾಮರಾಯರು ಪರಿವರ್ತನೆಗೊಂಡು" ತಪ್ಪಾಯ್ತು..... ಕಾವೇರಿ ಈವತ್ತು ನೀನು ನನ್ನ ಕಣ್ಣು ತೆರೆಸಿದೆ. ಇಷ್ಟು ಕಾಲವೂ ಮೌನಗೌರಿಯಂತೆ ಯಾಕಿದ್ದೆ ಹೇಳು ..... ಇನ್ನೂ ಅನುಮಾನವೇ ಕಾವೇರಿ. ಇಂದಿನಿಂದ ನಾನು ಅಪ್ಪಟ ಭಾರತೀಯ..... ನಮ್ಮ ದೇಶಕ್ಕೆ ನನ್ನ ಸೇವೆಯೂ ಸೇರಲೀಂತ ನನ್ನ ಸಂಕಲ್ಪ....."(ಅದೇ; ಪು. ೬೫-೬೬) ಎಂದು ಒಬ್ಬ ಭಾರತೀಯನಾಗಿ ತನ್ನ ಮನಸ್ಸನ್ನು ಪರಿವರ್ತನೆ ಮಾಡಿಕೊಂಡನು. ದೇಶಸೇವೆಗೆ ಗಂಡು - ಹೆಣ್ಣು ಎನ್ನದೇ ಇಬ್ಬರೂ ಹೋರಾಡಬೇಕಾಗುತ್ತದೆ ಎಂದು ಗಾಂಧೀಜಿಯವರ ಮಾತು ಇಲ್ಲಿ ಪ್ರಸ್ತುತವೆನಿಸುತ್ತದೆ.

ರಮೇಶ ಸೀತಕೆಂಪನಹಳ್ಳಿಯ ಜನತೆಯನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸಂಘಟಿಸುವ ನಾಯಕನಾದನು. ಈತನು ಜನತೆಯಲ್ಲಿ "ಎಂತಹ ಕಷ್ಟವೇ ಬರಲಿ, ನಾವು ಹಿಂಸಾ ಕೃತ್ಯಕ್ಕೆ ಇಳಿಯಬಾರದು. ಅಹಿಂಸೆಯೇ ನಮ್ಮ ತತ್ವ (ಅದೇ; ಪು. ೭೮)ಎಂದು ಜನತೆಯಲ್ಲಿ ಗಾಂಧೀಜಿಯ ತತ್ವಗಳಲ್ಲೊಂದಾದ ಅಹಿಂಸೆಯ ಅಸ್ತ್ರದ ಮೂಲಕ ಸ್ವಾತಂತ್ರ್ಯ ಗಳಿಸುವ ಸಾಧ್ಯಸಾಧ್ಯತೆಗಳನ್ನು ತಿಳಿಸುತ್ತಿದ್ದನು. ದೇಶ ಮುಕ್ತಿಗಾಗಿ ಹೋರಾಡಿದ ಚಿತ್ತರಂಜನ್‌ದಾಸ್, ಲೋಕಮಾನ್ಯ ಬಾಲಗಂಗಾಧರ ತಿಲಕ್, ಗೋಪಾಲಕೃಷ್ಣ ಗೋಖಲೆ ಮುಂತಾದವರ ಸ್ಫೂರ್ತಿದಾಯಕ ಹಿನ್ನೆಲೆಯನ್ನು ಸೀತ ಕೆಂಪನಹಳ್ಳಿಯ ಜನತೆಗೆ ತಿಳಿಹೇಳಿದ್ದ. ಈ ಎಲ್ಲ ಪರಂಪರೆ ಇಂದು ಸಂದಣಿಸಿ ಸತ್ವಪೂರ್ಣವಾಗಿ ಮೂರ್ತಿವೆತ್ತಂತೆ "ಪೂಜ್ಯ ಗಾಂಧೀಜಿ ಸ್ವಾತಂತ್ರ್ಯ ಸಂಗ್ರಾಮವನ್ನು ಸತ್ಯ ಅಹಿಂಸೆಗಳ ಆಧಾರದ ಮೇಲೆ ರೂಢಿಸಿ ನಮಗೆಲ್ಲ ಮಾರ್ಗದರ್ಶನ ಮಾಡುತ್ತಿರುವುದು ಭಾರತ ವರ್ಷದ ಉಜ್ವಲ ಇತಿಹಾಸದ ಧನ್ಯತೆಯ ಪುಣ್ಯ ವಿಶೇಷವಲ್ಲದೆ ಮತ್ತೇನು"(ಅದೇ; ಪು. ೮೧) ಎಂದು ಅವನು ಹಳ್ಳಿಗರನ್ನು ಹುರಿದುಂಬಿಸುವನು. ಇದರಿಂದ ಹಳ್ಳಿಗರೆಲ್ಲರ ಮನಸ್ಸುಗಳು ಒಗ್ಗಟ್ಟಿನಿಂದ ದೇಶಸೇವೆಗೆ ಅಣಿಯಾಗುತ್ತಿದ್ದವು. ಕೊನೆಗೆ ಪೊಲೀಸ್ ಅಧಿಕಾರಿಯಾದ ರಾಮರಾಯರು ಬ್ರಿಟೀಷ್ ಪ್ರಭುತ್ವವನ್ನು ಧಿಕ್ಕರಿಸಿ ದೇಶಸೇವೆಗೆ ನಿಲ್ಲುತ್ತಾರೆ. ಸ್ವಾತಂತ್ರ್ಯ ಹೋರಾಟಗಾರ್ತಿಯಾದ ತನ್ನ ಮಗಳು ಭಾರತಿಯನ್ನು ನೆನೆದು "ನಾನು ಇಂದಿನಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಡುತ್ತೀನಿ ನಿನ್ನ ಆತ್ಮಕ್ಕೆ ಇದೇ ಈ ನಿರ್ಭಾಗ್ಯ ತಂದೆಯ ಶ್ರದ್ಧಾಂಜಲಿ"(ಅದೇ; ಪು. ೮೪) ಎಂದು ಸ್ವಗತವಾಗಿ ಮಾತನಾಡಿ ಕೊಳ್ಳುತ್ತಿದ್ದರು. ರಾಮರಾಯರು ಪೊಲೀಸ್ ಸಮವಸ್ತ್ರ ಧರಿಸದೇ ಖಾದಿ ಅಂಗಿ, ಪಂಚೆ.... ಸ್ವಾತಂತ್ರ್ಯ ಸಂಗ್ರಾಮದ ಸೇನಾನಿಯ ಸಮವಸ್ತ್ರದಂತೆ ಉಡುಪು ಧರಿಸುತ್ತಿದ್ದರು. ಅವರು ನಾನೂ ಭಾರತೀಯ ಎಂದು ಉದ್ಗರಿಸುತ್ತಿದ್ದರು. ಇದಕ್ಕೆಲ್ಲಾ ಮೂಲ ಗಾಂಧೀಜಿ. ಅವರ ತತ್ವಾದರ್ಶಗಳು ಇಡೀ ಭಾರತೀಯರ ಮನಸ್ಸುಗಳನ್ನು ಅಲ್ಲದೇ ಭಾರತೀಯ ಬ್ರಿಟೀಷ್ ಅಧಿಕಾರಿಗಳ ಮನಸ್ಸುಗಳನ್ನು ಬದಲಾಯಿಸಿದವು. ಇದರಿಂದ ಇಲ್ಲಿ ಗಾಂಧೀಜಿಯನ್ನು ಒಬ್ಬ ಪೂಜ್ಯರಾಗಿ, ಶಾಂತಿ, ಅಹಿಂಸೆಯ ಸ್ಥಾಪಕನಾಗಿ, ಮಾರ್ಗದರ್ಶಕನಾಗಿ ಪ್ರತಿನಿಧಿಸಲಾಗಿದೆ. ಸ್ತ್ರೀಯರು ಮೊದಲಿನಿಂದ ಇಂದಿನವರೆಗೆ ಆನ್ವಯಿಕಭಾವವಾಗಿ, ಪೂಜ್ಯಭಾವವಾಗಿ ಪ್ರತಿನಿಧಿಸುತ್ತಾ ಬಂದಿದ್ದಾರೆ.

ಕಾದಂಬರಿಗಳು ದೀರ್ಘ ಬರಹವನ್ನು ಅಪೇಕ್ಷಿಸುತ್ತವೆ. ಈ ಕಾದಂಬರಿಗಳಲ್ಲಿ ಗಾಂಧೀಜಿ ಯವರನ್ನು ಅವರ ವ್ಯಕ್ತಿತ್ವ, ಆದರ್ಶ ಮತ್ತು ಚಟುವಟಿಕೆಗಳನ್ನು ಉಲ್ಲೇಖಿಸಿದ್ದಾರೆ. ಒಟ್ಟಿನಲ್ಲಿ ಕಾದಂಬರಿ ಪ್ರಕಾರದಲ್ಲಿ ಗಾಂಧೀಜಿಯವರನ್ನು ಪವಾಡ ಪುರುಷನಾಗಿ, ಸಿದ್ಧಿಸಿದ ಮಹಾಮಾನವತ ವಾದಿಯಾಗಿ ಪ್ರತಿಪಾದಿಸಿದ್ದಾರೆ. ಸ್ವಾತಂತ್ರ್ಯೋತ್ತರ ಸಾಹಿತಿಗಳು ಗಾಂಧೀಜಿಯನ್ನು ವಿಮರ್ಶಿಸುತ್ತಾ ಮತ್ತು ಮುಖಾಮುಖಿಯಾಗಿಸುತ್ತಾ ಅವರ ತತ್ತ್ವಾದರ್ಶಗಳಲ್ಲಿ ಸಮಕಾಲೀನ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ.

❖❖❖

ಅಧ್ಯಾಯ : ಐದು

ಸಣ್ಣ ಕಥೆಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

೫.೧. ನವೋದಯ ಕಥೆ

೫.೨. ಪ್ರಗತಿಶೀಲ ಕಥೆ

೫.೩. ನವ್ಯ ಕಥೆ

೫.೪. ದಲಿತ-ಬಂಡಾಯ ಕಥೆ

೫.೫. ಮಹಿಳೆಯರ ಕಥೆ

ಅಧ್ಯಾಯ : ಐದು

ಸಣ್ಣ ಕಥೆಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

"**ಭಾ**ರತೀಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಕಥನ ಸಾಹಿತ್ಯಕ್ಕೆ ಬೇರೆ ಯಾವ ಸಂಸ್ಕೃತಿಯಲ್ಲಿಯೂ ಕಾಣದ ಪ್ರಾಶಸ್ತ್ಯ ದೊರಕಿದೆ ಹಾಗೂ ಇಲ್ಲಿ ದೊರೆತಿರುವ ಪ್ರಮಾಣದಲ್ಲಿ ಕಥನ ಸಾಹಿತ್ಯದ ಪ್ರಕಾರಗಳು ಬೇರೆಲ್ಲಿಯೂ ದೊರೆಯಲಾರವು. ವೇದ ಉಪನಿಷತ್ತುಗಳಲ್ಲಿ ಬರುವ ಕಥೆಗಳು, ಭಾಗವತ ಮೊದಲಾದ ಪುರಾಣಗಳು, ರಾಮಾಯಣ, ಮಹಾಭಾರತಗಳಂಥ ಇತಿಹಾಸ ಕಾವ್ಯಗಳು, ರಘುವಂಶದಂಥ ಮಹಾಕಾವ್ಯಗಳು, ಪಂಚತಂತ್ರ - ಹೀತೋಪದೇಶಗಳಂಥ ನೀತಿಕಥೆಗಳು, ಕಥಾ ಸರಿತ್ಸಾಗರ, ಶುಕ ಸಪ್ತಶತಿಗಳಂಥ ಪರಿಕಥೆಗಳು, ಬುದ್ಧ ಜಾತಕಗಳು ಜೈನ ಕಥಾಸಾಹಿತ್ಯ, ಭಾರತದ ಎಲ್ಲ ಭಾಷೆಗಳಲ್ಲಿಯೂ ದೊರೆಯುವ ಜಾನಪದ ಕಥೆಗಳು ಹೀಗೆ ಕಥನ ಪ್ರಪಂಚದ ವಿಸ್ತಾರವಿದೆ. ಇವೆಲ್ಲ ಕಥನದ ಬೇರೆ ಬೇರೆ ಮಾದರಿಗಳಾದ್ದರಿಂದ ಈ ಕಥನ ಪ್ರಪಂಚ ವಿಸ್ತಾರದೊಡನೆ ವೈವಿಧ್ಯವನ್ನೂ ಹೊಂದಿದೆ" (ಆಮೂರ. ಜಿ.ಎಸ್.; ೨೦೦೩; ಪು. ಪ್ರಸ್ತಾವನೆ).

ಈಗಿದ್ದ ರೂಪದಲ್ಲಿ ಕನ್ನಡ ಸಣ್ಣಕಥೆಗೆ ಪ್ರೇರಣೆ ಪಶ್ಚಿಮದಿಂದ ದೊರೆತುದುದು ನಿಜವಾದರೂ ಅದರ ಬೇರುಗಳು ಭಾರತೀಯ ಕಥನ ಪರಂಪರೆಯಲ್ಲಿರುವುದರಿಂದ ಸಣ್ಣಕಥೆಯನ್ನು ಕುರಿತ ಪಾಶ್ಚಿಮಾತ್ಯ ಕಲ್ಪನೆಗಳು ಪರ್ಯಾಪ್ತವಾಗಲಾರವು. ೧೯ನೇ ಶತಮಾನದ ಕೊನೆಗೆ ಪತ್ರಿಕೆಗಳ ಮುಖಾಂತರ ಇಂಗ್ಲೆಂಡಿನಲ್ಲಿ ಸಣ್ಣಕಥೆ ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿ ಬೆಳೆಯಿತು. "ಕನ್ನಡದಲ್ಲಿಯೂ ಕೂಡ ಸಣ್ಣಕಥೆಯನ್ನು ಪ್ರಚಾರಕ್ಕೆ ತರುವುದಕ್ಕೆ ಮಧುರವಾಣಿ, ಸುವಾಸಿನಿ, ಸಚಿತ್ರಭಾರತಗಳಂಥ ಪತ್ರಿಕೆಗಳು ಮುಂದಾದವು"(ಅದೇ; ಪು. ೩). ಪಾಶ್ಚಾತ್ಯರು ಸಣ್ಣಕಥೆಯನ್ನು ಒಂದು 'ಮೈನರ್ ಸಾಹಿತ್ಯ' ಪ್ರಕಾರವೆಂದು ನೋಡುತ್ತಾರೆ. ಆದರೆ ಕನ್ನಡದಲ್ಲಿ ಅದರ ಸ್ಥಾನ ಯಾವ 'ಮೇಜರ್' ಪ್ರಕಾರಕ್ಕಿಂತಲೂ ಕಡಿಮೆಯಿಲ್ಲ. ಸಾಮಾನ್ಯವಾಗಿ ಎಲ್ಲ ಪ್ರಮುಖ ಲೇಖಕರೂ ಕಥೆಗಳನ್ನು ಬರೆದಿದ್ದಾರೆ. ಅವರಲ್ಲಿ ಕಾದಂಬರಿಕಾರರಿದ್ದಾರೆ, ಕವಿಗಳಿದ್ದಾರೆ, ನಾಟಕಕಾರರೂ ಇದ್ದಾರೆ. ಕಥೆಗಳಿಂದಲೇ ತಮ್ಮ ಸಾಹಿತ್ಯ ಕೃಷಿಯನ್ನು ಪ್ರಾರಂಭಿಸಿದ ಬರಹಗಾರರೂ ಇದ್ದಾರೆ. ಕಥೆ ಪ್ರಕಾರದಲ್ಲಿಯೂ ಕೂಡ ನವೋದಯ, ನವ್ಯ ಇತ್ಯಾದಿ ಪಂಥಗಳು ಇದ್ದರೂ

ಗಾಂಧೀಜಿಯವರನ್ನು ಕುರಿತ ಸಾಹಿತ್ಯ ಸೃಷ್ಟಿಯಲ್ಲಿ ಪಂಥೀಯ ಧೋರಣೆಗಿಂತ ಗಾಂಧೀಜಿಯವರ ಪ್ರಭಾವ - ಪ್ರೇರಣೆಗಳೇ ಹೆಚ್ಚೆಂದು ಕಾಣಿಸುತ್ತವೆ. ಹಾಗಾಗಿ ಇಲ್ಲಿಯೂ ಕೂಡ ಕಥೆಗಾರರ ಧ್ಯೇಯ - ಧೋರಣೆಗಳಲ್ಲಿ ಕ್ವಚಿತ್‌ಬದಲಾವಣೆಯನ್ನು ಗಮನಿಸಬಹುದಾಗಿದೆ. ಹಾಗಾಗಿ ಅಧ್ಯಯನ ಚೌಕಟ್ಟಿನಲ್ಲಿ ಸ್ಪಷ್ಟೀಕರಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಆಧುನಿಕ ಕನ್ನಡ ಸಾಹಿತ್ಯದ ಮೊದಲನೆ ಕಾಲಘಟ್ಟ ನವೋದಯ. "ಶ್ರೀನಿವಾಸ(ಮಾಸ್ತಿ)ರಂಥ ಈ ಯುಗದ ಶ್ರೇಷ್ಠ ಕಥೆಗಾರರಲ್ಲಿ ಎದ್ದು ಕಾಣುವ ಗುಣ ಗಾಂಧೀಯುಗಕ್ಕೆ ಸಹಜವಾದ ಮಾನವೀಯತೆ. ಸಾವಯವ ಸಮಾಜ ಇನ್ನೂ ನಾಶವಾಗಿರದ ಆ ಕಾಲದಲ್ಲಿ ಮಾನವನ ದುಃಖ, ದೌರ್ಬಲ್ಯಗಳೊಡನೆ ಅವನ ಆಂತರಿಕ ಸಾಮರ್ಥ್ಯ ಹಾಗೂ ಮಾನವೀಯ ಬಾಂಧವ್ಯಗಳನ್ನು ಗುರುತಿಸುವುದು ನವೋದಯ ಕಥೆಗಾರರ ಮುಖ್ಯ ಆಸ್ಥೆಯಾಗಿತ್ತು. ಪೂರ್ವ ಸಂಸ್ಕೃತಿಯಲ್ಲಿನ ವಿಶ್ವಾಸವನ್ನು ಅವರಿನ್ನೂ ಕಳೆದುಕೊಂಡಿರಲಿಲ್ಲ. ಆದರೆ, ಸ್ವಾತಂತ್ರ್ಯ ನಂತರದ ಕಾಲದಲ್ಲಿ ಬರೆಯತೊಡಗಿದ ಯು.ಆರ್. ಅನಂತಮೂರ್ತಿ ಮೊದಲಾದ ನವ್ಯ ಲೇಖಕರಿಗೆ ಸಾಮಾಜಿಕ ಸಮಸ್ಯೆಗಳಿಗಿಂತ ವೈಯಕ್ತಿಕ ಸಮಸ್ಯೆಗಳೇ ಮುಖ್ಯವಾಗಿ ಕಂಡವು. ಪಾಶ್ಚಾತ್ಯ ಮೂಲದ ಅಸ್ತಿತ್ವವಾದ ಮೊದಲಾದ ತತ್ವ ಪ್ರಣಾಲಿಗಳ ಪ್ರಭಾವದಿಂದ ಅಸ್ಮಿತೆಯ ಶೋಧ, ಪೂರ್ಣತ್ವದ ಹಂಬಲ, ವ್ಯಕ್ತಿತ್ವದಲ್ಲಿಯ ಬಿರುಕುಗಳ ದರ್ಶನ, ಹೊಸ ಮೌಲ್ಯಗಳ ಅನ್ವೇಷಣೆ ಇವೇ ಅವರ ಕಥೆಗಳ ವಸ್ತುಗಳಾಗಿ ಕಾಣಿಸಿಕೊಂಡವು. ಪೂರ್ವ ಸಂಸ್ಕೃತಿಯತ್ತ ನೋಡುವ ಅವರ ದೃಷ್ಟಿ ಹೆಚ್ಚು ಕಡಿಮೆ ನಕಾರಾತ್ಮಕವಾಗಿದ್ದಿತು. ೧೯೭೦ರಿಂದ ಈಚೆಗೆ ಬರೆಯತೊಡಗಿದ ನವ್ಯೋತ್ತರ ತಲೆಮಾರಿನ ತೇಜಸ್ವಿ, ದೇವನೂರು ಮಹಾದೇವ, ಬೆಸಗರಹಳ್ಳಿ ರಾಮಣ್ಣ ಮೊದಲಾದ ಕಥೆಗಾರರ ಸಾಮಾಜಿಕ ಆಸ್ಥೆಗಳು ವೈಯಕ್ತಿಕ ನೆಲೆಯಲ್ಲಿ ಅಧಿಕೃತವಾಗುವ ಮೂಲಕ ಹೆಚ್ಚು ಪ್ರಾಮಾಣಿಕವಾಗಿ ಅವರ ಕೃತಿಗಳಲ್ಲಿ ಮೂಡಿಬಂದವು. ಈ ಕಥೆಗಾರರಿಗೆ ಅಸ್ತಿತ್ವವಾದಗಳಂಥ ವಿದೇಶಿ ಮೂಲದ ವಿಚಾರ ಪ್ರಣಾಲಿಗಳಿಗಿಂತ ಲೋಹಿಯಾವಾದ, ಅಂಬೇಡ್ಕರವಾದಗಳಂಥ ದೇಶೀವಾದಗಳೇ ಹೆಚ್ಚು ಆಕರ್ಷಕವೆನಿಸಿದವು"(ಅದೇ; ಪು. ೪-೫). ಹೀಗಾಗಿ ಸಣ್ಣಕಥೆ ಕಾದಂಬರಿಯ ತರುವಾಯ ಅತ್ಯಂತ ಜನಪ್ರಿಯವಾಯಿತು. ಕನ್ನಡದಲ್ಲಿ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದುಬಂದಿತು.

ಜೀವನ ದರ್ಶನದಲ್ಲಿ ನಿರೂಪಣಾ ವಿಧಾನದಲ್ಲಿ ತಂತ್ರ ವೈವಿಧ್ಯದಲ್ಲಿ ಮತ್ತು ಭಾಷೆಯ ಬಳಕೆಯಲ್ಲಿ ಸ್ಪಷ್ಟವಾದ ಮಜಲುಗಳನ್ನು ಕನ್ನಡದ ಸಣ್ಣ ಕಥೆ ಪ್ರಕಾರದಲ್ಲಿ ಗುರುತಿಸಿಕೊಳ್ಳಬಹುದು. "ಸರಳವೂ ಸಹಜವೂ ಸುಂದರವೂ ನೇರವೂ ಮಾನವೀಯವೂ ಆದ ಶ್ರೀನಿವಾಸರ 'ಸಾಂಪ್ರದಾಯಿಕ' ಮಾರ್ಗ; ಮಾರ್ಕ್ಸ್ - ಲೆನಿನ್ನರ ಸೌಮ್ಯವಾದದ ಪ್ರಭಾವದಿಂದ ಮತ್ತು ಸಮಕಾಲೀನ ಸಮಾಜದ ಆರ್ಥಿಕ, ರಾಜಕೀಯ ಅವ್ಯವಸ್ಥೆಯ ದಾರುಣತೆಯ ಪ್ರಚೋದನೆಯಿಂದ ಆವಿರ್ಭವಿಸಿದ ಆವೇಶ ಪೂರ್ವವೂ ಸುಧಾರಣಾತ್ಮಕವೂ ಸಮಸ್ಯಾ ಪ್ರಧಾನವೂ ಸಂವಾದಶೋಭಿತವೂ ಪ್ರತಿಕ್ರಿಯಾಶೀಲವೂ ಅತಿಶಯೋಕ್ತಿ ರಂಜಿತವೂ ಆದ 'ಪ್ರಗತಿಶೀಲ' ಮಾರ್ಗ; ಪಾತ್ರ ಪ್ರಧಾನವೂ ಮನೋವೈಜ್ಞಾನಿಕವೂ ಪ್ರತೀಕಾತ್ಮವೂ ಸಂಕೀರ್ಣವೂ ಪ್ರಯೋಗಶೀಲವೂ ವೈಚಾರಿಕವೂ ಪ್ರಜ್ಞಾಪೂರ್ವಕವೂ ಆದ

"ನವ್ಯಮಾರ್ಗ"(ಲಕ್ಕಪ್ಪಗೌಡ. ಎಚ್.ಜೆ.;೨೦೦೧; ಪು. ೧೦೦-೧೦೧). ಇದೇ ಧೋರಣೆಯನ್ನು ಹೊಂದಿದ್ದರೂ ಸ್ವಲ್ಪ ಭಿನ್ನವಾಗಿ ಸಮಾಜದ ಜೊತೆಗೆ ವ್ಯಕ್ತಿಯ(ಕೆಳವರ್ಗ) ವೈಯಕ್ತಿಕ ಸಮಸ್ಯೆಗಳನ್ನು ಅನಾವರಣಗೊಳಿಸುವ ದಲಿತ - ಬಂಡಾಯ, ಪುರುಷನಿಗಿಂತ ತಾನು ಯಾವುದರಲ್ಲೂ ಕಡಿಮೆ ಇಲ್ಲವೆಂದು ಸ್ತ್ರೀ ಕಥಾ ರಚನೆಯಲ್ಲಿ ತೊಡಗಿ ಸಫಲತೆಯನ್ನು ಸಾಧಿಸಿದಳು. ಇಂಥ ವಿಶಿಷ್ಟ ಪರಂಪರೆ ಹೊಂದಿದ ಕಥಾ ಪ್ರಕಾರವು ಗಾಂಧೀಜಿಯನ್ನು ಕಂಡರಿಸಿದ ಬಗೆಯನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ.

೫.೧. ನವೋದಯ ಕಥೆ

೧೯೨೦ರಿಂದ ಮುಂದಿನ ಕಾಲವನ್ನು ಗಾಂಧಿಯುಗವೆನ್ನಬಹುದು. "ಅದಕ್ಕಿಂತ ಮೊದಲು ವಸಾಹತುಶಾಹಿಯನ್ನು ರಾಜಕೀಯ - ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಎದುರಿಸಲು ತಿಲಕರು ಪ್ರಯತ್ನಿಸಿದರು. ಸತ್ಯಾಗ್ರಹ, ಅಸಹಕಾರ, ವಿದೇಶೀ ವಸ್ತ್ರ ಬಹಿಷ್ಕಾರ, ಕರವಿರೋಧ ಮತ್ತು ಜಾತಿ - ಧರ್ಮ ಸಾಮರಸ್ಯ, ಹಿಂದೂ ಮುಸ್ಲಿಂ ಸೋದರತೆ, ಮಹಿಳಾ ಶಿಕ್ಷಣ, ಅಸ್ಪೃಶ್ಯತಾ ನಿವಾರಣೆ - ಇವೇ ಮುಂತಾದ ಸಾಮಾಜಿಕ - ಸಾಂಸ್ಕೃತಿಕ, ರಾಜಕೀಯ ಕಾರ್ಯಕ್ರಮಗಳ ಮೂಲಕ ವಸಾಹತುಶಾಹಿ ಮತ್ತು ಜಡವಾಗಿದ್ದ ನಮ್ಮ ಸಾಮಾಜಿಕ ಸಂದರ್ಭವನ್ನು ಎದುರಿಸಲು ಗಾಂಧೀಜಿ ಪ್ರಯತ್ನಿಸಿದ್ದರು. ತಿಲಕ ಮತ್ತು ಗಾಂಧೀಜಿಯವರ ಪ್ರಭಾವ ನವೋದಯ ಸಾಹಿತಿಗಳ ಮೇಲಾಗಿರುವುದನ್ನು ಗುರುತಿಸಬಹುದು"(ನಾಯಕ. ಜಿ.ಎಚ್.(ಸಂ); ೨೦೦೦; ಪು. ೧೪೪-೧೪೫) ಎಂಬ ರಘುನಾಥರಾವ್ ಡಿ. ಅವರ ಮಾತನ್ನು ಒಪ್ಪಿಕೊಳ್ಳಬಹುದು.

ನವೋದಯ ಕಾಲಘಟ್ಟದಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಚಳವಳಿ, ಗಾಂಧೀಜಿಯವರ ವಿಚಾರಧಾರೆ, ಅಸ್ಪೃಶ್ಯತಾ ನಿವಾರಣೆಯ ಪ್ರಯತ್ನಗಳು, ಜಾತಿಪದ್ಧತಿಯ ವಿರುದ್ಧ ಎದ್ದ ದನಿಗಳು, ಸುಧಾರಣಾವಾದಿ ಕ್ರಿಯೆಗಳು ಇಲ್ಲಿನ ಕಥೆಗಳಲ್ಲಿ ಬರುತ್ತವೆ.

"ಪೇಜಾವರ ಸದಾಶಿವರಾಯರ ಕಥೆ 'ಮುದುಕಿ'. ಸ್ವಾತಂತ್ರ್ಯ ಹೋರಾಟ, ಗಾಂಧೀಜಿಯ ಪ್ರಭಾವ, ಜಾತಿಯ ಸಮಸ್ಯೆ, ಜೈಲು, ಪೊಲೀಸ್, ಮನೆ ತೊರೆಯುವ ಮಗ, ಕೌಟುಂಬಿಕ ಬಿಕ್ಕಟ್ಟು ಇತ್ಯಾದಿ"(ಅದೇ; ಪು. ೧೨) ಸಮಗ್ರ ಚಿತ್ರಣವನ್ನು ಈ ಕಥೆಯಲ್ಲಿ ನೀಡಿದ್ದಾರೆ.

ಪು.ತಿ. ನರಸಿಂಹಾಚಾರ್ ಅವರು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಪರಕೀಯರ ದಬ್ಬಾಳಿಕೆಯಿಂದ ಭಾರತದ ಬಾವುಟದ ರಕ್ಷಣೆಯ ಸನ್ನಿವೇಶವನ್ನಿಟ್ಟುಕೊಂಡು 'ಧ್ವಜ ರಕ್ಷಣೆ' ಎಂಬ ಕಥೆಯನ್ನು ರಚಿಸಿದ್ದಾರೆ. ಈ ಕಥೆಯ ನಾಯಕ ಮುಕುಂದ ಒಬ್ಬ ಸಾಮಾನ್ಯ ಆಫೀಸಿನ ಗುಮಾಸ್ತನಾಗಿದ್ದನು. ದೇಶದ ಅರಾಜಕತೆಯ ಬಗ್ಗೆ ಚಿಂತಿಸುತ್ತಿದ್ದ ಮತ್ತು ಗಾಂಧೀಜಿಯ ಆದರ್ಶಗಳು ಹಾಗೂ ಅವರ ನಿಲುವುಗಳ ಬಗ್ಗೆ ಒಲವು ತೋರಿಸುತ್ತಿದ್ದನು. ಒಂದು ಬಾಲ ಯುವಕರ ತಂಡವು ಭಾರತದ ಧ್ವಜವನ್ನಿಡಿದು ತಮ್ಮ ಹೋರಾಟವನ್ನು ಆರಂಭಿಸುತ್ತಾರೆ. ಆ ಹೋರಾಟವನ್ನು ಪೋಲೀಸರು ಹತ್ತಿಕ್ಕಿ ಯುವಕರನ್ನು ಲಾಠಿ ಏಟುಗಳಿಂದ ಸದೆಬಡಿಯಲು ಮುಂದಾದಾಗ

ಮುಕುಂದನಿಗೂ ಈ ಘಟನೆಗೂ ಸಂಬಂಧವಿಲ್ಲದಿದ್ದರೂ ಸಹ ಬಾವುಟದ ದೀನಾವಸ್ಥೆಯನ್ನು ನೋಡಿ ಕ್ಷುದ್ರನಾಗಿ ಪೊಲೀಸರ ಮೇಲೆ ಎರಗಿ ಧ್ವಜವನ್ನು ರಕ್ಷಿಸುತ್ತಾನೆ. ಈ ಘಟನೆಯಲ್ಲಿ ಮುಕುಂದನಿಗೆ ಮಾರಣಾಂತಿಕ ಹೊಡೆತಗಳು ಬಿದ್ದು ಆಸ್ಪತ್ರೆಯಲ್ಲಿ ಸಾಯುತ್ತಾನೆ. ಈತನ ಸಾವು ಆ ಸಮಾಜದಲ್ಲಿ ಪ್ರಮುಖವೆನಿಸದೇ ಸಂಬಂಧಿಕರಿಗೆ ಮಾತ್ರ ಸೀಮಿತವಾಗುತ್ತದೆ. ಧ್ವಜ ರಕ್ಷಣೆ ಹೋರಾಟದ ಯುವಕರು ಜೈಲಿನಿಂದ ಬಿಡುಗಡೆಯಾದ ನಂತರ ಮುಕುಂದನ ಗೋರಿಯ ಮೇಲೆ ಧ್ವಜವನ್ನು ಹಾರಿಸಿ ಗೌರವ ಸಲ್ಲಿಸುತ್ತಾರೆ. ಇವರಿಗೆಲ್ಲಾ ಮುಖ್ಯ ಆದರ್ಶ ಗಾಂಧೀಜಿ.

ಮುಕುಂದ ಸುಸಂಸ್ಕೃತ, ವಿದ್ಯಾವಂತ. ಆತನಿಗೆ ಸ್ವದೇಶ ಪ್ರೇಮವಿಲ್ಲದಿರಲಿಲ್ಲ. ಈತನ ದಿನಚರಿಯಲ್ಲಿ ಸ್ವದೇಶಿಯ ಚಳುವಳಿಯ ಸಂಚಾರಕ್ಕೆ ಅವಕಾಶವಿರಲಿಲ್ಲ ಅಷ್ಟೆ. ಪಹರೆ ಇರುವವನಿಗೆ ಖೈದಿಯ ಮೇಲೆ ಸದಾ ಎಚ್ಚರಿಕೆ ಇರುವ ಹಾಗೆ ಮುಕುಂದನಿಗೆ ಈ ಸ್ವದೇಶ ಪ್ರೇಮದ ಅರಿವು ಸದಾ ಇತ್ತು. ಭಾರತ ಮಾತೆಯನ್ನು ನೆನೆದುಕೊಂಡು ತಾನೂ ಆ ದೇವಿಯ ಸಂತಾನಗಳಲ್ಲಿ ಒಬ್ಬ ಎಂದೂ ಭಾವಿಸಿ ಕೊರಗುತ್ತಿದ್ದ. ಪಾಶ್ಚಾತ್ಯರ ಉತ್ತಮ ಸ್ಥಿತಿ, ಭಾರತೀಯರ ತೀರ ಹೀನವಾದ ಬಾಳು ಇದು ಇವನ ಆಲೋಚನಾ ವಿಷಯವಾಯಿತು. ಗಾಂಧೀಜಿ ದೇಶದ ಹೋರಾಟಗಾರರನ್ನು ಕುರಿತು "ಸ್ವತಂತ್ರರಂತೆ ವರ್ತಿಸಿರಿ - ದಾಸರಂತೆ ಬೇಡ' - ಮಹಾತ್ಮರು ಸೆರೆಮನೆಯಲ್ಲಿ ಅಂತರ್ಹಿತರಾಗುವುದಕ್ಕೆ ಮುಂಚೆ ಘೋಷಿಸಿದ ಈ ಮಾತು ಮುಕುಂದನ ಮನಸ್ಸಿನ ತುಂಬ ತುಂಬಿಕೊಂಡು ಅವನ ಮನಸ್ಸನ್ನು ಭಾವ - ಭಾರ - ನಮ್ರವಾಗಿ ಮಾಡಿತ್ತು" (ನರಸಿಂಹಾಚಾರ್. ಪು.ತಿ.; ೧೯೩೧; ಪು. ೯). ಸ್ವತಂತ್ರರಂತೆ ವರ್ತಿಸಿರಿ - ದಾಸರಂತೆ ಬೇಡ ಈ ಚರಣ ಮುಕುಂದನ ಟೈಪ್‌ರೈಟರಿನ(ಬೆರಳಚ್ಚು) ತಾಳಕ್ಕೆ ಪಲ್ಲವಿಯಾಯಿತು. ಈ ನುಡಿಗಳ ಸತತವಾದ ಆಘಾತದಿಂದ ಮುಕುಂದನ ಮನಸ್ಸು ಖಿನ್ನವಾಯಿತು.

"ಹುಡುಗರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇವೆ ಎಂದರೆ ದೊಡ್ಡವರು ಯಾಕೆ ಇದನ್ನು ವಿರೋಧಿಸುತ್ತಾರೆ? ಸ್ವಾತಂತ್ರ್ಯ ಸ್ವಾದುವೇ? ಸ್ವಾದುವಾದರೆ ಅದು ಏಕೆ ಈ ಸರ್ಕಾರಕ್ಕೆ ವಿಷದಂತೆ ವಿಷಮವಾಗಿ ತೋರುತ್ತದೆ? ವೃದ್ಧರಿಂದ ಯುವಕರಿಗೆ ಯಾವಾಗಲೂ ತೊಂದರೆ"(ಅದೇ; ಪು. ೧೧). ಈ ರೀತಿ ಮುಕುಂದ ಆಲೋಚಿಸುತ್ತಾನೆ. ಇಲ್ಲಿ ಗಾಂಧೀಜಿ ಇತರರಿಗಿಂತ ಭಿನ್ನವಾಗಿ ಪ್ರತಿಪಾದಿತಗೊಂಡಿದ್ದಾರೆ. ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧೀಜಿ ತಮ್ಮ ವಯಸ್ಸಿನವರಿಗಿಂತ ಹೆಚ್ಚಾಗಿ ಯುವಶಕ್ತಿಯನ್ನು ಅವಲಂಬಿಸಿದ್ದರು. ಬ್ರಿಟೀಷರ ದಬ್ಬಾಳಿಕೆಯನ್ನು ಅಂದಿನ ಜನತೆ ಬಲವಂತವಾಗಿಯಾದರೂ ಒಪ್ಪಿಕೊಂಡಿತ್ತು. ಆದರೆ ಅದೇ ಪರಿಸ್ಥಿತಿಯಲ್ಲಿದ್ದ ಗಾಂಧೀಜಿ ಭಿನ್ನವಾದ ಆಲೋಚನೆಯಿಂದ ಯುವಕರನ್ನು ಹೋರಾಟಕ್ಕೆ ಸಂಘಟಿಸಿ ಯುವಶಕ್ತಿಗೆ ಆದರ್ಶ ವ್ಯಕ್ತಿಯ ಜೊತೆಗೆ ಚಾಲಕ ಯಂತ್ರವಾಗಿ ಹೋರಾಟದ ಜವಾಬ್ದಾರಿಯನ್ನು ನಿರ್ವಹಿಸಿದರು. ಹೀಗಾಗಿ ಗಾಂಧೀಜಿ ಸ್ವಾತಂತ್ರ್ಯ ಹೋರಾಟಗಾರರೆಲ್ಲರಿಗೂ ಪ್ರೇರಕ ಶಕ್ತಿಯಾಗಿದ್ದರು. ಪು.ತಿ.ನ. ಅವರು ಆದರ್ಶೀಕೃತಭಾವದ ನೆಲೆಯಲ್ಲಿ ಗಾಂಧೀಜಿಯನ್ನು ಕಂಡರಿಸಿದ್ದಾರೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ೧೯೪೨ನೆಯ ಮಾಡು ಇಲ್ಲವೇ ಮಡಿ ಚಳುವಳಿಯಲ್ಲಿ ಬ್ರಿಟೀಷ್ ಸರಕಾರದ ಪೊಲೀಸ್ ಅಧಿಕಾರಿಯ ದೇಶಪ್ರೇಮ ಅಥವಾ ಆತನ ಮೂರ್ಖತನವನ್ನು ಕುರಿತು '೧೯೪೨ನೆಯ ಆಗಸ್ಟ್' ಎಂಬ ಕಥೆಯನ್ನು ರಚಿಸಿದ್ದಾರೆ. ಕಥೆಯಲ್ಲಿ ಗಾಂಧೀಜಿ ಎಲ್ಲೂ ಕಾಣಿಸಿಕೊಳ್ಳುವುದಿಲ್ಲ. ಆದರೆ ಅವರ ಹೋರಾಟದ ಪ್ರೇರಣೆ ಕಥಾ ನಾಯಕನ ಮೇಲೆ ಪ್ರಭಾವ ಬೀರಿದೆ. ಕಥಾನಾಯಕ ಹೇಮುಕಲಾನಿ ಒಬ್ಬ ಸ್ವಾತಂತ್ರ್ಯ ಯೋಧ. "ಇನ್ಸ್‌ಪೆಕ್ಟರ್ ಗುಂಡೂರಾಯನಿಗೆ ಸಾವಿರದ ಒಂಬೈನೂರ ಇಪ್ಪತ್ತರಿಂದಲೂ ಗಾಂಧಿ ಚಳುವಳಿ ಅನುಭವ. ೧೯೨೦, ೧೯೩೦, ೧೯೩೪, ೧೯೩೯ರ ಸತ್ಯಾಗ್ರಹಗಳಲ್ಲೆಲ್ಲ ಆತ ಯಶಸ್ವಿಯಾಗಿ ಬ್ರಿಟೀಷ್ ಪ್ರಭುಗಳ ಸೇವೆ ನಡೆಸಿ ತನ್ನ ಆಳ್ವಿಕೆಗೊಳಪಟ್ಟ ಪ್ರದೇಶದಲ್ಲಿ ಶಾಂತಿಯನ್ನು ಶಿಸ್ತನ್ನು ಸ್ಥಾಪಿಸಿದ್ದನು"(ರಾಮಸ್ವಾಮಿ ಅಯ್ಯಂಗಾರ್ ಗೊರೂರು; ೧೯೯೬; ಪು. ೫೩). ಇಂತಹ ಪ್ರಭಾವಶಾಲಿ ನಿಷ್ಠಾವಂತ ಪೊಲೀಸ್ ಅಧಿಕಾರಿಯನ್ನು ನಾಯಕ ಹೇಮುಕಲಾನಿ ತನ್ನ ತೀಕ್ಷ್ಣ ಬುದ್ಧಿಯಿಂದ ಬ್ರಿಟೀಷರನ್ನು ಗಾಂಧೀಜಿ ಮಣಿಸಿದ ಹಾಗೆ ಗುಂಡೂರಾಯನ ಮನಸ್ಸನ್ನು ಸ್ವಾತಂತ್ರ್ಯ ಹೋರಾಟಗಾರರಿಗೆ ಸಹಾಯ ಮಾಡುವ ಹಾಗೆ ಬದಲಿಸುತ್ತಾನೆ. ಪೊಲೀಸ್ ಅಧಿಕಾರಿ ತನಗೆ ತಿಳಿಯದೇ ಸ್ವಾತಂತ್ರ್ಯ ಯೋಧ ಹೇಮುಕಲಾನಿಗೆ ಸಹಾಯ ಮಾಡುತ್ತಾನೆ. ಗಾಂಧೀಜಿಯ ತೀಕ್ಷ್ಣಬುದ್ಧಿ, ಚಾಣಾಕ್ಷತೆಯನ್ನು ಇಲ್ಲಿನ ಕಥಾ ನಾಯಕ ಮೆರೆಯುತ್ತಾನೆ. ೧೯೪೨ರ ಮಾಡು ಇಲ್ಲವೇ ಮಡಿ ಚಳುವಳಿಯಿಂದ ಬ್ರಿಟೀಷರ ಸರ್ಕಾರದ ಯಂತ್ರವೇ ಕುಸಿದು ಬೀಳುತ್ತದೆ. ಹಾಗಾಗಿ ಗಾಂಧೀಜಿ ಇಲ್ಲಿ ತೀಕ್ಷ್ಣಮತಿಯನಾಗಿ, ಮಾತಿನಲ್ಲಿ(ಅಹಿಂಸೆ)ಯೇ ಬ್ರಿಟೀಷರನ್ನು ಮಣಿಸಿದ ಮೋಡಿಗಾರನಾಗಿ ಗೊರೂರು ಅವರು ಅಭಿವ್ಯಕ್ತಿಸಿದ್ದಾರೆ.

ನವೋದಯ ಬರಹಗಾರರು ಗಾಂಧೀಜಿಯನ್ನು ಕುರಿತು ಕಥೆಗಳನ್ನು ಬರೆದಿರುವುದು ಅತ್ಯಂತ ಕಡಿಮೆ. ಇವರು ಕಾವ್ಯ, ಕಾದಂಬರಿ ಮತ್ತು ಇತರ ಪ್ರಕಾರಗಳಲ್ಲಿ ಗಾಂಧಿಯನ್ನು ಕುರಿತು ಹೆಚ್ಚಾಗಿ ಬರೆದಿದ್ದಾರೆ. ಆದರೆ ಸಣ್ಣ ಕಥೆಗಳ ಪ್ರಮಾಣ ಕಡಿಮೆ. ಒಟ್ಟಾರೆಯಾಗಿ ಈ ಪಂಥದ ಬರಹಗಾರರು ಗಾಂಧೀಜಿಯನ್ನು ಆರಾಧಕಭಾವದಿಂದ ದೈವ ಸ್ವರೂಪಿಯಾಗಿ ಪ್ರತಿನಿಧಿಸಿದ್ದಾರೆ. ಗಾಂಧಿ ಕುರಿತ ಸಣ್ಣಕಥೆಗಳ ಪ್ರಮಾಣ ಈ ಪಂಥದಲ್ಲಿ ಕಡಿಮೆಯಾದ್ದರಿಂದ ಗಾಂಧೀಜಿಯನ್ನು ಅರ್ಥೈಸುವಲ್ಲಿ ಈ ಕಥೆ ಪ್ರಕಾರ ಇತರ ಪ್ರಕಾರಗಳಿಗಿಂತ ಹಿಂದೆ ಬಿದ್ದಿದೆ ಎಂಬುದು ಸ್ಪಷ್ಟವಾಗುತ್ತದೆ.

೫.೨. ಪ್ರಗತಿಶೀಲ ಕಥೆ

ಪ್ರಗತಿಶೀಲರ ಅವಧಿಯನ್ನು ೧೯೪೩ರಿಂದ ೧೯೪೮ ಎಂದು ಸಾರಸ್ವತ ಲೋಕವು ಗುರುತಿಸಿಕೊಂಡಿದೆ. ೧೯೫೦ರ ವೇಳೆಗೆ ನವ್ಯರ ಚಳವಳಿ ಆರಂಭವಾಗಿದ್ದರೂ ಪ್ರಗತಿಶೀಲರು ಇನ್ನೂ ಬರೆಯುತ್ತಿದ್ದರು. ಹಿಂದೆ ಆಗಿಹೋದ ಯಾವುದೇ ಚಳುವಳಿಗಿಂತ ಈ ಬರಹಗಾರರು ಓದುಗರ ವರ್ಗದ ಮೇಲೆ ಹೆಚ್ಚಿನ ಪ್ರಭಾವ ಬೀರಿದರು. ಪ್ರಗತಿಶೀಲ ಕಾಲಘಟ್ಟದಲ್ಲಿ ಕಾದಂಬರಿಗಳಿಗೆ ನೀಡಿದ ಮಹತ್ವವನ್ನು ಕಥೆಗಳಿಗೆ ನೀಡಲಿಲ್ಲ. ವಿರಾಮಗತಿಯ, ವಿವರಣಾತ್ಮಕವಾದ ಈ ಲೇಖಕರ

ಶೈಲಿಗೆ ಸಣ್ಣಕಥಾ ಮಾಧ್ಯಮ ಒಗ್ಗಲಿಲ್ಲ. ಆದರೂ ಚದುರಂಗ, ಕಟ್ಟೀಮನಿ, ನಿರಂಜನ, ವ್ಯಾಸರಾಯ ಬಲ್ಲಾಳ, ಕೋ. ಚೆನ್ನಬಸಪ್ಪ, ಅನಕೃ ಮುಂತಾದವರು ಈ ಅವಧಿಯಲ್ಲಿ ಮತ್ತು ಅನಂತರ ಅನೇಕ ಕಥೆಗಳನ್ನು ಬರೆದರು.

೧೯೫೦ರ ನಂತರ ಸಣ್ಣಕಥೆಯ ಅವನತಿ ಆರಂಭವಾಯಿತು ಎಂದು ಭಾವಿಸಿದ ಅ.ನ. ಕೃಷ್ಣರಾಯರು ಅದರ ಕಾರಣಗಳನ್ನು ವಿಶ್ಲೇಷಿಸಿದ್ದಾರೆ. "ಶ್ರಮಜೀವಿಗಳಲ್ಲಿ ತಲೆದೋರಿದ ಜಾಗೃತಿ, ಮಧ್ಯಮವರ್ಗದಲ್ಲಿ ತಲೆ ಹಾಕಿದ ನೂತನ ಸಮಸ್ಯೆಗಳು ಕಥೆಗಾರರ ಭಾವನೆಯ ಚೌಕಟ್ಟಿನ ಒಳಗೆ ಬಾರದೇ ಹೋದವು"(ಆಮೂರ.ಜಿ.ಎಸ್.; ೨೦೦೩; ಪು. ೯೫). ಇಂಥ ಸಮಸ್ಯೆ ಹಾಗೂ ಭಾವನೆಗಳನ್ನು ಅಭಿವ್ಯಕ್ತಿಸುವ ಮೂಲಕ ಪ್ರಗತಿಶೀಲ ಕಥೆಗಾರರು ಸಣ್ಣ ಕಥೆಗಳಲ್ಲಿ ಹೊಸ ಚೈತನ್ಯ ತುಂಬಿದರು.

"೧೯೫೦ರ ವೇಳೆಗೆ ಗಾಂಧಿ ಸತ್ತು ಹೋಗಿದ್ದರು. 'ನೆಹರು ಯುಗ' ಎಂದು ಒಂದು ಅವಧಿ ಇರುವುದಾದರೆ ಅದು ಆರಂಭವಾಗುತ್ತಿದ್ದ ಕಾಲ. ಗಾಂಧಿಯ ಆದರ್ಶಗಳ ಜೊತೆಗೆ ಬೆಳೆದ ನೆಹರು ಆಳ್ವಿಕೆಯ ಸಮಯದಲ್ಲೇ ಬೆಳೆದ ಲೋಹಿಯಾರವರ ಸಮಾಜವಾದ ಕರ್ನಾಟಕದ ಬರಹಗಾರರಲ್ಲಿ ಪ್ರಬಲವಾಗಿ ಪ್ರಭಾವ ಬೀರಿತ್ತು. ಈ ಅವಧಿಯಲ್ಲಿ ನಡೆದ ಚಳುವಳಿಯನ್ನು ಪ್ರಗತಿಶೀಲ ಚಳವಳಿ ಎಂದು ಕರೆಯಲಾಗಿದೆ"(ನಾಯಕ. ಜಿ.ಎಚ್.(ಸಂ); ೨೦೦೯; ಪು. ೧೩೨). ಎಂದು ಪ್ರೊ. ಎನ್.ಎಸ್. ರಘುನಾಥ್ ಅಭಿಪ್ರಾಯಿಸಿದ್ದಾರೆ. ಗಾಂಧಿ - ನೆಹರೂ ಮಾದರಿಗಳನ್ನು ಸುಭಾಸ್‌ಚಂದ್ರ ಬೋಸ್, ಜಯಪ್ರಕಾಶ್ ನಾರಾಯಣರಂಥವರು ವಿರೋಧಿಸಿದರೂ ಸಮಾಜವಾದಿ ವಿಚಾರಗಳ ಜೊತೆಗೆ ಅಸಹಕಾರ, ಸತ್ಯಾಗ್ರಹ, ಅಹಿಂಸೆಯನ್ನು ಒಪ್ಪಿಕೊಂಡ ಭಾವನೆಯಿಂದ ಗಾಂಧೀಜಿಯವರನ್ನು ಪ್ರಮುಖ ನಾಯಕರನ್ನಾಗಿ ಬೆಳೆಸಿದರು.

ಪ್ರಗತಿಶೀಲ ಕಾಲದ ಕಥೆಗಾರರಲ್ಲಿ ಪ್ರಮುಖವಾಗಿ ಅ.ನ.ಕೃ., ತ.ರಾ.ಸು., ನಿರಂಜನ, ಬಸವರಾಜ ಕಟ್ಟೀಮನಿ, ಚದುರಂಗ, ಅನಂತನಾರಾಯಣ ಮುಂತಾದವರನ್ನು ಗುರುತಿಸಬಹುದು. ಈ ಕಾಲದಲ್ಲಿ ರಚನೆಯಾದ ಕಥೆಗಳು ಗಾಂಧೀಜಿಯನ್ನು ಚಿತ್ರಿಸಿದ ಬಗೆಯನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಅ.ನ.ಕೃ. ಅವರು ೧೯೪೨ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಸಾಮಾನ್ಯ ಶಿಕ್ಷಕನ ಬಡಕುಟುಂಬವೊಂದು ಭಾಗವಹಿಸಿದ ಬವಣೆಯನ್ನು ಕುರಿತು 'ಜೈ ಹಿಂದ್' ಎಂಬ ಕಥೆಯನ್ನು ರಚಿಸಿದ್ದಾರೆ. ಈ ಕಥೆಯ ನಾಯಕ ಚಂದ್ರಣ್ಣ ಗಾಂಧೀಜಿಯ ತತ್ತ್ವಾದರ್ಶಗಳಿಂದ ಪ್ರೇರಿತಗೊಂಡವನು. ಈತನ ಹೆಂಡತಿ ಗಿರಿಜಾ ಕೂಡ ಗಾಂಧೀಜಿಯನ್ನು ಆದರ್ಶವಾಗಿರಿಸಿಕೊಂಡವಳು. ಚಂದ್ರಣ್ಣ ಬ್ರಿಟೀಷ್ ಆಡಳಿತದ ಅಧೀನದಲ್ಲಿರುವ ಶಾಲೆಯೊಂದರಲ್ಲಿ ಶಿಕ್ಷಕ ವೃತ್ತಿಯನ್ನು ಮಾಡುತ್ತಿದ್ದವನು. ಆ ಶಾಲೆಯ ನಿಯಮಗಳನ್ನು ಮತ್ತು ಮುಖ್ಯಸ್ಥನ ಕಿರುಕುಳಗಳನ್ನು ಗಾಂಧಿವಾದಿಯಾದ ಚಂದ್ರಣ್ಣನಿಗೆ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬ್ರಿಟೀಷರು ಭಾರತ ಬಿಟ್ಟು ತೊಲಗದಿದ್ದರೆ

ಜಗತ್ತಿನಲ್ಲಿ ಶಾಂತಿ ನೆಲೆಸುವುದಿಲ್ಲ ಎಂಬ ತತ್ವ ಎಲ್ಲರಿಗೂ ಮನದಟ್ಟಾಗಿತ್ತು. ಇದೇ ವಿಚಾರದ ಗುಂಗಿನಲ್ಲಿದ್ದ ಚಂದ್ರಣ್ಣ ಒಂದು ದಿನ ಶಾಲೆ ಮುಗಿಸಿಕೊಂಡು ಮನೆಗೆ ಬಂದ. ಚರಕದಿಂದ ನೂಲು ತೆಗೆಯುತ್ತ ಕುಳಿತಿದ್ದ. ಅವನ ಹೆಂಡತಿ ಗಿರಿಜಾ,

"ಇಂದೂ ಹೆಡ್‌ಮಾಸ್ತರೊಂದಿಗೆ ಜಗಳ ಕಾದುಕೊಂಡು ಬಂದಿರಾ?" ಎಂದು ಕೇಳಿದಳು.

"ಚೆನ್ನಾಗಿಯೇ ಕಾದುಕೊಂಡು ಬಂದಿದ್ದೇನೆ"

"ಏಕೆ?"

"ಖಾದಿ ಧರಿಸುವುದೇ ಅಪರಾಧವಂತೆ - ಇನ್ನೊಮ್ಮೆ ನಾನು ಗಾಂಧಿ ಹೆಸರೆತ್ತಿದರೆ ಡಿಸ್‌ಮಿಸ್ ಮಾಡುತ್ತಾರಂತೆ!"

"ನಿಮ್ಮ ಹೆಡ್‌ಮಾಸ್ತರ್ ಬ್ರಿಟೀಷ್ ಸಾಹೇಬರನ್ನು ಮೀರಿಸಿರುವಂತಿದೆ".

ಬ್ರಿಟಿಷರು - ಶೇಕಡ ನೂರು ಭಾಗ ಬ್ರಿಟೀಷರಾಗಿದ್ದರೆ,

ನಮ್ಮ ಹೆಡ್‌ಮಾಸ್ತರ್ ಶೇಕಡ ನೂರೊಂದು ಭಾಗ ಬ್ರಿಟೀಷರಾಗಿದ್ದಾರೆ".

"ಹೋಗಲಿ ಬಿಡಿ, ಆ ಮನುಷ್ಯನೊಂದಿಗೇನು ಮಾತು".

"ಗಾಂಧೀ, ನೆಹ್ರೂ ಅವರನ್ನು ಆ ಮನುಷ್ಯ ಬಾಯಿಗೆ ಬಂದಂತೆ

ಬಯ್ಯುತ್ತಿದ್ದರೆ, ಕೇಳಿಕೊಂಡು ನಾನು ಸುಮ್ಮನಿರಲೇ?"(ಚಂದ್ರಶೇಖರ.ಕೆ.ಬಿ.(ಸಂ); ೨೦೦೫; ಪು. ೫೪೯-೫೭೧).[೨]

ಹೀಗೆ ಗಾಂಧೀಜಿ - ನೆಹರೂ ಅವರಿಗೆ ಆ ಶಾಲಾ ಮುಖ್ಯಸ್ಥ ಅವಮಾನಿಸಿದ್ದರಿಂದ, ೧೯೪೨ರ ಚಳುವಳಿಯ ಜವಾಬ್ದಾರಿ ವಹಿಸಿಕೊಂಡ ಗುರುಲಿಂಗಯ್ಯನ ಮಾರ್ಗದರ್ಶನದಲ್ಲಿ ಚಂದ್ರಣ್ಣ ಆ ಶಾಲೆಗೆ ರಾಜೀನಾಮೆ ನೀಡಿದನು. ನಂತರ ೧೯೪೨ರ ಚಳವಳಿಯಲ್ಲಿ ಸೇರಿ ಜೈಲು ಪಾಲಾಗುತ್ತಾನೆ. ಕಾಂಗ್ರೆಸ್ಸಿಗೂ ಸರ್ಕಾರಕ್ಕೂ ನಡೆದ ತಾತ್ಕಾಲಿಕ ಒಪ್ಪಂದದಿಂದ ರಾಜಕೀಯ ಸೆರೆಯಾಳು ಅಡಿಯಲ್ಲಿ ಬಂಧನವಾಗಿದ್ದ ಚಂದ್ರಣ್ಣ ಬಿಡುಗಡೆಯಾಗುತ್ತಾನೆ. ಸೆಂಟ್ರಲ್ ಪೊಲೀಸ್ ಸ್ಟೇಷನ್ನಿನ ಮೇಲೆ ಕಾಂಗ್ರೆಸ್ ಬಾವುಟ ಸ್ಥಾಪಿಸಬೇಕೆನ್ನುವ ವಿದ್ಯಾರ್ಥಿಗಳ ಚಳವಳಿಯಲ್ಲಿ ಚಂದ್ರಣ್ಣ ಸೇರಿಕೊಂಡು, ಪೊಲೀಸರ ಗುಂಡಿಗೆ ಬಲಿಯಾದನು. ಕೊನೆಗೆ ಸ್ವಾತಂತ್ರ್ಯ ಹೋರಾಟಕ್ಕೆ ಹೋರಾಡಿದ ಹುತಾತ್ಮ ಚಂದ್ರಣ್ಣನೆಂದು ಜನರ ಬಾಯಲ್ಲಿ ನಿಲ್ಲುತ್ತಾನೆ. ಹೀಗೆ ಅ.ನ.ಕೃ. ಅವರು ಸಾಮಾನ್ಯ ಕುಟುಂಬವೊಂದರಲ್ಲಿ ಗಾಂಧೀಜಿ ಮತ್ತು ನಲವತ್ತೆರಡರ ಚಳವಳಿಯ ಪ್ರಭಾವದಿಂದ ಆದ ತಲ್ಲಣಗಳನ್ನು ಗುರುತಿಸುತ್ತಾರೆ. ಇಲ್ಲಿ ಗಾಂಧಿಯನ್ನು ಒಬ್ಬ ಆದರ್ಶಪುರುಷನಾಗಿಯೇ ಪ್ರತಿನಿಧಿಸಲಾಗಿದೆ.

ಅ.ನ.ಕೃ. ಅವರು ನಲವತ್ತೆರಡರ (ಭಾರತ ಬಿಟ್ಟು ತೊಲಗಿ) ಚಳವಳಿಯನ್ನು ಕುರಿತು 'ಗಿರಿಜವ್ವನ ರೊಟ್ಟಿ' ಎಂಬ ಮತ್ತೊಂದು ಕಥೆಯನ್ನು ರಚಿಸಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರ

'ದುಗ್ಗಪ್ಪ', ಪೊಲೀಸ್ ಇನ್‌ಸ್ಪೆಕ್ಟರ್ ಅಧಿಕಾರಿಯ ಹೆಂಡತಿಯಾದ 'ಗಿರಿಜವ್ವ' ಇವರಿಬ್ಬರದು ಈ ಕಥೆಯ ಪ್ರಮುಖ ಪಾತ್ರಗಳಾಗಿವೆ. ಇವರಿಬ್ಬರೂ ಗಾಂಧಿ ಆದರ್ಶಗಳನ್ನು ಬಲವಾಗಿ ನಂಬಿದ್ದರು. ಇನ್‌ಸ್ಪೆಕ್ಟರ್ ಗುರುಬಸಪ್ಪ ಕ್ರಾಂತಿಕಾರರನ್ನು, ಚಳುವಳಿಗಾರರನ್ನು ಹಿಡಿದು ಹಿಂಸಿಸಿ ತುರಾಯಿಗೆ ತಳ್ಳಿದರೆ ಹೆಂಡತಿ ಗಿರಿಜವ್ವ ಅವರನ್ನು ರಕ್ಷಿಸಲು ಸಹಾಯ ಮಾಡುತ್ತಾಳೆ. ಗಂಡ ಬ್ರಿಟಿಷ್ ನಿಷ್ಠನಾದರೆ ಹೆಂಡತಿ ಗಾಂಧಿ ಅನುಯಾಯಿ. ಕಥೆಯ ನಾಯಕ ದುಗ್ಗಪ್ಪ ಬ್ರಿಟಿಷ್ ಆಡಳಿತ ಯಂತ್ರವನ್ನು ಮುರಿಯುವ ವೀರಯೋಧನಾಗಿದ್ದಾನೆ.

೧೯೪೨ರಿಂದ ಭಾರತದ ರಾಜಕಾರಣ ಒಂದು ವಿಲಕ್ಷಣ ಸ್ವರೂಪವನ್ನು ತಾಳಿತ್ತು. ಅಂದಿನವರೆಗೆ ದೇಶ ನಾಯಕರ ಮಾತು ಕೇಳಿ ಅವರು ಹೇಳಿದಂತೆ ಮಾಡಿತ್ತು. "ಸ್ವರಾಜ್ಯ ಸಿಕ್ಕುವ ದಿನದ 'ಮೂಹೂರ್ತ' ಹೇಳಿ ಹೇಳಿ ಗಾಂಧೀಜಿಯವರು ಬೇಸತ್ತಿದ್ದರು. ಗಾಂಧೀಜಿಯ ಅಹಿಂಸಾ ತತ್ವವನ್ನು ಇಪ್ಪತ್ತು ವರ್ಷ ಕಾಲ ಆಚರಣೆಯಲ್ಲಿ ತಂದು, ತನುಮನ ಧನವನ್ನು ಸೂರೆಗೊಟ್ಟ ಜನಕ್ಕೆ ಅದರಲ್ಲಿ ನಂಬಿಕೆ ಕಡಿಮೆಯಾಗುತ್ತ ಬಂದಿತ್ತು. 'ಕತ್ತಿಯಿಂದ ಗೆದ್ದ ರಾಜ್ಯವನ್ನು ಕತ್ತಿಯಿಂದಲೇ ಉಳಿಸಿಕೊಳ್ಳುತ್ತೇವೆ' ಎಂದು ಸಾರಿದ ಸಾಮ್ರಾಜ್ಯಶಾಹಿ, ಕಲಿಯುಗದ ಗೌತಮನ ಪ್ರಿಯ ಮಾರ್ಗಕ್ಕೆ ಮಣಿಯುತ್ತದೆಯೇ? ಗಾಂಧೀ, ನೆಹರೂ, ಬೋಸರನ್ನು ಸಾಧಾರಣ ಕಳ್ಳಕಾಕರಂತೆ ಸೆರೆಹಿಡಿದು ಜನತೆಯ ಅಸಮಾಧಾನವನ್ನು ಹುಲ್ಲಿಗಿಂತಲೂ ಕಡೆಯಾಗಿ ಭಾವಿಸುತ್ತಿದ್ದ ಸರ್ಕಾರ 'ಅಹಿಂಸೆ'ಗೆ ಶರಣೆನ್ನುತ್ತದೆಯೇ?"(ಅದೇ; ಪು. ೪೬೩) ಎಂದು ಬ್ರಿಟೀಷರ ನಿಲುವನ್ನು ಕಥೆಗಾರರು ವ್ಯಕ್ತಪಡಿಸಿದ್ದಾರೆ.

ಬ್ರಿಟೀಷರ ಆಡಳಿತವನ್ನು ಅಲುಗಾಡಿಸಲು, ಉರುಳಿಸಲು ಭಾರತ ೧೯೪೨ರಲ್ಲಿ ನಿರ್ಧರಿಸಿತು. ಸಾಮಾನ್ಯ ಜನರು ಸಹ ಗಾಂಧೀಜಿಯವರ 'ಮಾಡು ಇಲ್ಲವೆ ಮಡಿ' ಕರೆಗೆ ಓಗೊಟ್ಟು ಕೆರಳಿ ನಿಂತರು. ಎಷ್ಟು ದಿನ ಈ ಕ್ಷಾಮ, ಈ ರೋಗ, ಈ ಅನ್ಯಾಯ, ಈ ಅತ್ಯಾಚಾರಗಳನ್ನು ಸಹಿಸುವುದು ಎಂದು ಜನ ಕ್ರಾಂತಿಗಿಳಿದರು. ಕ್ರಾಂತಿಯ ಕಿಡಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ವ್ಯಾಪಿಸಿತು. "ಬಾಳುವುದಾದರೆ ಮನುಷ್ಯರಂತೆ ಬಾಳೋಣ. ಸ್ವತಂತ್ರ ಭಾರತದಲ್ಲಿ ಉಸಿರಾಡೋಣ. ಈ ಶಿಖಂಡಿ ಬಾಳು ಸಾಕು ಸತ್ತರೂ ಚಿಂತೆಯಿಲ್ಲ. ಹೇಡಿಯ ಬಾಳುವೆ ಬೇಡ"(ಅದೇ; ಪು. ೪೬೩) ಎಂಬುದು ಕ್ರಾಂತಿಕಾರಿಗಳ ನಿಲುವು ಸ್ವಾತಂತ್ರ್ಯ ದೊರೆಯುವಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ನಿಲುವಿನ ಹಿಂದೆ ಗಾಂಧೀಜಿಯವರ ನೆರಳು ಇರುವುದನ್ನು ಮರೆಯಬಾರದು. ಈ ನೆರಳಿನಲ್ಲಿ ದುಗ್ಗಪ್ಪನ ಪಾತ್ರ ಪ್ರಮುಖವೆನಿಸುತ್ತದೆ.

ಬೆಳಗಾವಿ ಖಜಾನೆಗೆ ಸಾಗಿಸುತ್ತಿದ್ದ ಹಣವನ್ನು ದುಗ್ಗಪ್ಪ ಮತ್ತು ಆತನ ಗುಂಪಿನವರು ಹಾರಿಸುತ್ತಾರೆ. ಆ ಘಟನೆಯಲ್ಲಿ ಇನ್‌ಸ್ಪೆಕ್ಟರ್ ಗುರುಬಸಪ್ಪ ದುಗ್ಗಪ್ಪನ ಬಲಗೈಗೆ ಗುಂಡು ಹಾರಿಸುತ್ತಾನೆ. ರಕ್ತಸಿಕ್ತನಾದ ದುಗ್ಗಪ್ಪ ಇನ್‌ಸ್ಪೆಕ್ಟರ್ ಗುರುಬಸಪ್ಪನ ಹೆಂಡತಿಯಲ್ಲಿ ನಾವು ಗಾಂಧಿ ಜನವೆಂದು ಹೇಳಿ ಅವರ ಮನೆಯಲ್ಲಿ ಆಶ್ರಯ ಪಡೆದು ಹೋಗಿರುತ್ತಾನೆ. ಅದರ ಸುಳಿವು ತಿಳಿದುಕೊಂಡು ಗುರುಬಸಪ್ಪ ಹೆಂಡತಿ ಗಿರಿಜವ್ವಳನ್ನು ಜಬರ್ದಸ್ತ್ ಮಾಡಿ ಕೇಳುತ್ತಾನೆ. ಅದಕ್ಕೆ ಗಿರಿಜವ್ವಾ ಗಂಡನಿಗೆ ಪ್ರತಿಯಾಗಿ ಹೀಗೆ ಕೇಳುತ್ತಾಳೆ.

"ಅವರು ನಿಮಗೆ ಏನನ್ಯಾಯ ಮಾಡಿದ್ದಾರೆ ತಿಳಿಸಿ?"

"ಅನ್ಯಾಯವೇ - ಸರ್ಕಾರಕ್ಕೆ ದ್ರೋಹ ಮಾಡುತ್ತಿರುವುದು ಯಾವ ನ್ಯಾಯ".

"ಯಾರದೋ ಸರ್ಕಾರಕ್ಕೆ ನೀವೇಕೆ ದೇಹ ತೇಯಬೇಕು".

"ನಿನ್ನ ಸುಖವಾಗಿರಿಸುವುದಕ್ಕೆ"

"ನನಗಿಂಥ ಸುಖ ಬೇಡ. ಗಾಂಧೀ ಜನಗಳ ರಕ್ತದ ಮೇಲೆ ನನ್ನ ಸುಖ ಬೆಳಿಸಬೇಡಿ"(ಅದೇ; ಪು. ೪೬೮-೪೬೯) ಎಂದು ಗಾಂಧಿವಾದಿಯಾದ ಗಿರಿಜವ್ವ ತನಗೆ ತಿಳಿದ ಮಾತುಗಳಿಂದ ಗಂಡನ ಹಿಂಸಾತ್ಮಕ ಮನಸ್ಸನ್ನು ಬದಲಿಸಲು ಪ್ರಯತ್ನಿಸುತ್ತಾಳೆ.

ಮತ್ತೊಂದು ಘಟನೆಯಲ್ಲಿ ಗುರುಬಸಪ್ಪನ ಗುಂಡೇಟಿಗೆ ದುಗ್ಗಪ್ಪ ಬಲಿಯಾಗುತ್ತಾನೆ. ಪ್ರಾಣ ಹೋಗುವ ಸಮಯದಲ್ಲಿ ದುಗ್ಗಪ್ಪ ಗುರುಬಸಪ್ಪನನ್ನು ಹತ್ತಿರಕ್ಕೆ ಕರೆದು "ದಣ್ಯೇರೇ ನನ್ನ ಹಡೆದವ್ವ ಗಿರಿಜಾ ತಾಯಿ ಅನ್ನ(ರೊಟ್ಟಿ) ನೀಡಿ ಈ ಮಗನ್ನ ಕಾಪಾಡಿದರು. ಅವರಿಗೆ ನನ್ನ ಶರಣು ತಿಳಿಸಿಬಿಡಿ. ಮಗ ಯಾವ ಜನ್ಮಕ್ಕೂ ತಾಯಿ ಉಪಕಾರ ಮರೆಯಲ್ಲಾ ಎಂದು ತಿಳಿಸಿ"(ಅದೇ; ಪು. ೪೭೦) ಎಂದು ಹೇಳುತ್ತಾ ತನ್ನ ಪ್ರಾಣವನ್ನು ಬಿಡುತ್ತಾನೆ. ಇದರಿಂದ ಮನಃ ಪರಿವರ್ತಿತನಾದ ಗುರುಬಸಪ್ಪ ತನ್ನ ಕೆಲಸಕ್ಕೆ ರಾಜೀನಾಮೆ ನೀಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಸೇರಿಕೊಳ್ಳುತ್ತಾನೆ. ಗಿರಿಜವ್ವನ ಮೂಲಕ ಗಾಂಧೀಜಿಯವರ ಮಾನವತಾವಾದವನ್ನು ಚಿತ್ರಿಸಲಾಗಿದೆ. ಮಾನವೀಯತೆಗೆ ಗುರುಬಸಪ್ಪನಂತಹ ಕಠೋರ ಮನಸ್ಸಿನವ ತನ್ನ ಅಧಿಕಾರ ತ್ಯಜಿಸಿ ಪರಿವರ್ತನೆ ತಾಳಿದ್ದು ಬ್ರಿಟೀಷರು ಭಾರತವನ್ನು(ಗಾಂಧಿಯ ಅಹಿಂಸೆ, ಸತ್ಯ, ಮಾನವೀಯತೆ) ಬಿಟ್ಟು ಹೋದುದರ ಸಂಕೇತವಾಗಿದೆ ಎಂಬುದನ್ನು ಚಿತ್ರಿಸುತ್ತದೆ. ಹಾಗಾಗಿ ಗಾಂಧಿಯನ್ನು ಮಹಾ ಮಾನವತಾವಾದಿಯಾಗಿ, ಆದರ್ಶಪುರುಷನಾಗಿ ಪ್ರತಿನಿಧಿಸಲಾಗಿದೆ.

ಬಿಜಾಪುರದ ಹತ್ತಿರ ಬಿಜ್ಜರಗಿ ವಾಡೆಯಲ್ಲಿ ಯಲ್ಲಮ್ಮ ಗೌಡತಿ ಎಂಬ ಮಹಾಘಾಟಿ ಹೆಣ್ಣು ಇಂಗ್ಲಿಷರ (ಬಿಳಿಯರ) ಪಟಿಂಗತನವನ್ನು ಲೆಕ್ಕಿಸದೆ ತನ್ನ ಶ್ರೀಮಂತಿಕೆಯನ್ನು ಮರೆದ ಪ್ರಸಂಗವನ್ನು ಆರ್ಯ ಅವರು 'ಸ್ವಾತಂತ್ರ್ಯ ಸಂಗ್ರಾಮದಲ್ಲೊಂದು ಮಾಜಿಕನಲ್ ಪ್ರಸಂಗ' ಎಂಬ ಕಥೆಯನ್ನು ರಚಿಸಿದ್ದಾರೆ. ಈ ಕಥೆ ಯುರೋಪಿನ ಮೊದಲನೇ ಯುದ್ಧ ಪೂರೈಸಿ ಎರಡನೇ ಯುದ್ಧಕ್ಕೆ ಸಿದ್ಧಗೊಳ್ಳುತ್ತಿರುವ ಸಂಕ್ರಮಣ ಕಾಲವನ್ನು ಹೊಂದಿದೆ. ಜಮೀನ್ದಾರಿ ಕುಟುಂಬದ ಯಲ್ಲಮ್ಮ ಗೌಡತಿ ಬ್ರಿಟಿಷ್ ಕಲೆಕ್ಟರ್‌ನನ್ನು ಎದುರಿಸಿ ನಿಂತ ಪರಿಯನ್ನು ಚಿತ್ರಿಸುತ್ತದೆ. ಈ ಧೈರ್ಯಕ್ಕೆ, ಸಾಹಸಕ್ಕೆ ಗಾಂಧೀಜಿಯವರ ಹೋರಾಟವೇ ಪ್ರೇರಣೆ.

ಇಂಗ್ಲೀಷ್‌ನವರು ಪ್ರತಿದಿನ ಸಿಡಿಮಿಡಿಗೊಳ್ಳಲು ಕಾರಣ ಗಾಂಧೀಜಿ ಸ್ವಾತಂತ್ರ್ಯ ಹೋರಾಟಕ್ಕಿಳಿದು ಸತ್ಯಾಗ್ರಹ ಆರಂಭಿಸಿದ್ದರಿಂದ. ಗಾಂಧೀಜಿ ೧೯೨೦ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಅಸಹಕಾರ ಆಂದೋಲನದ ಕರೆ ಕೊಟ್ಟಿದ್ದರು. ಶಾಲಾ–ಕಾಲೇಜು, ಕೋರ್ಟು ವಿದೇಶೀ ಸೂಟುಬೂಟು ಇತ್ಯಾದಿ ಬಹಿಷ್ಕಾರ, ಖಿಲಾಫತ್ ಹೋರಾಟದಲ್ಲಿ ಅಂಚೆ - ಕಛೇರಿ, ಸಾರಿಗೆ

ವ್ಯವಸ್ಥೆ ಇಲ್ಲದ ಆ ಕಾಲದಲ್ಲಿ ಕಾಲುದಾರಿಯಿಲ್ಲದ ಕುಗ್ರಾಮದಲ್ಲೂ ಸಹ ಕಾಂಗ್ರೆಸ್ ಮೀಟಿಂಗು, ವೈಸರಾಯನ ಉಡಾಫೆ, ಫಿರಂಗಿಗಳ ಪಿತೂರಿ, ಮುಂಬಯಿಯ ದೊಂಬಿ ಇತ್ಯಾದಿ ಸುದ್ದಿ ಕೇಳಿ ರೋಸಿಹೋದ ಗೌಡತಿ "ಘಟಿಂಗ ಫಿರಂಗೀ ಡಾಯರ ಪಂಜಾಬು ದೇಶದ ಲಂಬಾರ್‌ಧಾರ ಶೇತಕೀ ರೈತರಿಗೆ ಏನ ಹಿಂಸಾ ಕೊಡತಾನ! ಬರಗಾಲದಾಗ ಗೇಣಿ ಒಡದು ವಸೂಲಿ ಮಾಡೂದು ಎಂಥಾ ಸರ್ಕಾರ! ಆ ಬಿಳೇ ಮಂಗ್ಯಾಗಳನ್ನು ಕುಂಡಿಗೆ ಒದ್ದು ಚೆಂಡ ಹಿಡಿದ ಹೊರಹಾಕಬೇಕ"(ಆರ್ಯ; ೨೦೦೦; ಪು. ೫೩-೫೪) ಎಂದು ಇಂಗ್ಲಿಷರು ವಿಧಿಸುವ ಸುಂಕವನ್ನು ವಿರೋಧಿಸಿ ಕೆಂಡಮಂಡಲವಾದಳು. ಗೌಡತಿ ೧೬೦೦ ಎಕರೆ ಜಮೀನಿನ ಒಡತಿಯಾದರೂ ಬಡವರ ಮೇಲೆ ಮಾನವೀಯ ಗುಣವುಳ್ಳವಳಾಗಿದ್ದಳು.

ಇಂಗ್ಲೀಷರ ಪ್ರತಿಷ್ಠೆಗೆ ಸಂಕೇತವಾದ 'ರೊಲ್ಸರ್ಯೊ' ಕಾರನ್ನು ಗೌಡತಿ ಬಾರಿ ಮೊತ್ತದ ಹಣವನ್ನು ಕೊಟ್ಟು ಖರೀದಿಸುತ್ತಾಳೆ. ಅದನ್ನು ಬೆಳಗಾವಿ ಕೋರ್ಟಿನ ಇಂಗ್ಲಿಷ್ ಜಡ್ಜ್, ಜಸ್ಟೀಸ ಜೂಲಿಯಸರ ಹತ್ತಿರ ದುಪ್ಪಟ್ಟು ಹಣವನ್ನು ಕೊಟ್ಟು ಹೀಗೆ ಇಂಜಕ್ಷನ್ನು ಆರ್ಡರನ್ನು ಬರೆಸುತ್ತಾಳೆ- "ಬಿಜ್ಜರಗಿ ಯಲ್ಲವ್ವ ಉರುಫ್ ಗೌರವ್ವ ಗೌಡತಿ, ನಾನು ರೊಲ್ಸರ್ಯೊ ಕಾರನ್ನು ಮೆಚ್ಚಿ ಗೌರವದಿಂದ ಮನೆಯಂಗಳದಲ್ಲಷ್ಟೇ ಇರಿಸಿ ಚಂದನೋಡಲು ಖರೀದಿಸಿದ್ದೇನೆ. ....ಮತ್ತೆ ಇದನ್ನು ಉಲ್ಲಂಘಿಸಿದವರು ಕಂಟೆಂಪ್ಟ್ ಆಫ್ ಕೋರ್ಟ್ ಎಂದು ಕ್ರಿಮಿನಲ್ ಕಾಯ್ದೆಯನ್ವಯ ಶಿಕ್ಷೆಗೆ ಅರ್ಹರಾಗುವರು" (ಅದೇ; ಪು. ೫೫). ಎಂದು. ಇದನ್ನು ತಿಳಿಯದ ಬಿಜಾಪುರದ ಕಲೆಕ್ಟರ್ ಲಂಡರಸನು ತಮ್ಮ ಪ್ರತಿಷ್ಠಿತ ರೊಲ್ಸರ್ಯೊ ಕಾರನ್ನು ವಶಪಡಿಸಿಕೊಳ್ಳಲು ಪೊಲೀಸ್ ಪಡೆ ಸಮೇತ ಬಿಜ್ಜರಗಿ ವಾಡೆಯಲ್ಲಿರುವ ಯಲ್ಲಮ್ಮ ಗೌಡತಿ ಮನೆಗೆ ತೆರಳುತ್ತಾನೆ. ತನ್ನ ಬಳಿಯಿದ್ದ ಕೋರ್ಟಿನ ಇಂಜೆಕ್ಷನ್ ಆರ್ಡರ್‌ನ್ನು ಅವನಿಗೆ ತೋರಿಸುತ್ತಾಳೆ. ಅದನ್ನು ನೋಡಿದ ಮೇಲೆ ಕಲೆಕ್ಟರ್ ತಬ್ಬಿಬ್ಬಾಗುತ್ತಾನೆ. ಬಂದ ದಾರಿಗೆ ಪ್ರಯೋಜನವಿಲ್ಲವೆಂದು ಹಿಂದಕ್ಕೆ ಹೋಗುತ್ತಾನೆ. ಆಗ ಇಂಗ್ಲೀಷ್‌ನವರ ದರ್ಪ, ಅಧಿಕಾರ ಮತ್ತು ಸಾಮ್ರಾಜ್ಯವನ್ನು ವಿರೋಧಿಸಲು "ರೊಲ್ಸರ್ಯೊ ಬಳಿ ಬಂದು, ತನ್ನೆರಡೂ ಕೈಗಳಿಂದ ಬೊಗಸೆ ಸೆಗಣಿ ಎತ್ತಿ ಕಾರಿನ ಡಿಕ್ಕೀ ಕೇರಿಯರ ಮಡ್‌ಗರ್ಡ, ಬಾಗಲ ತುಂಬಾ ಸೆಗಣಿಕುಳ್ಳ ಬಡಿಯ ತೊಡಗಿದಳು ಗೌಡತಿ. ಆಳುಗಳಿಗೆ "ನೋಡತೀರ ಯಾಕ? ಬಡೀರಗಾಡಿ ಮ್ಯಾಗೆಲ್ಲಾ ಕುಳ್ಳು. ಅದಕ್ಕ ಚಲೋ ಐತಿ.... ಬಾಡ್ಯಾಗಳು ಗಾಡಿ ಒಯ್ಯುತಾವಂತ! ನೋಡಲೇ ಭಾಡ್ಯಾ"(ಅದೇ; ಪು. ೫೭-೫೮). ಎಂದು ಕಲೆಕ್ಟರನಿಗೆ ಕೂಗಿ ಹೇಳುತ್ತಾಳೆ. ಬ್ರಿಟೀಷರ ಪ್ರತಿಷ್ಠಿತ ಕಾರಿಗೆ ಸೆಗಣಿ ಮೆತ್ತುವುದು ಬ್ರಿಟೀಷರ ಸಾಮ್ರಾಜ್ಯಶಾಹಿ ಆಡಳಿತವನ್ನು ವಿರೋಧಿಸುವುದು ಅಥವಾ ಉರುಳಿಸುವ ಸಂಕೇತವಾಗಿ ಇಲ್ಲಿ ಬಳಸಲಾಗಿದೆ. ಗಾಂಧೀಜಿಯ ಪ್ರಭಾವದಿಂದ ಯಲ್ಲವ್ವ ಗೌಡತಿಗೆ ಬ್ರಿಟೀಷರನ್ನು ಎದುರಿಸಿ ನಿಲ್ಲಲು ಸಾಧ್ಯವಾಯಿತು. ಸತ್ಯಕ್ಕೆ ಜಯವಿದೆ ಎಂಬುದನ್ನು ಗೌಡತಿ ಇಲ್ಲಿ ಎತ್ತಿ ತೋರಿಸಿದ್ದಾಳೆ. ಹಾಗಾಗಿ ಗಾಂಧಿಯನ್ನು ಇಲ್ಲಿ ಹೋರಾಟದ ಸ್ಫೂರ್ತಿಯ ಸೆಲೆಯಾಗಿ ಚಿತ್ರಿಸಲಾಗಿದೆ.

ಪ್ರಗತಿಶೀಲ ಪಂಥದ ಅಗ್ರಗಣ್ಯ ಕಥೆಗಾರರಲ್ಲಿ ಬಸವರಾಜ ಕಟ್ಟೀಮನಿಯವರು ಒಬ್ಬರು. ಇವರು ೧೯೪೫ರಲ್ಲಿ 'ಕಾರ್‌ವಾನ್' ಸಂಕಲನದಿಂದ ೧೯೬೬ರ 'ಸೈನಿಕನ ಹೆಂಡತಿ' ಸಂಕಲನದವರೆಗೆ

ಒಟ್ಟು ಒಂಬತ್ತು ಕಥಾ ಸಂಗ್ರಹಗಳನ್ನು ತಂದಿದ್ದಾರೆ. ಇವರ 'ಆಗಸ್ಟ್ ಒಂಬತ್ತು', 'ಸೆರೆಯಿಂದ ಹೊರಗೆ' ಕಥೆಗಳಲ್ಲಿ ಗಾಂಧೀಜಿಯವರ ಧೋರಣೆಗಳನ್ನು ಕಾಣಬಹುದು.

'ಗಾಂಧೀ ಸೂರ್ಯನ ತೇಜಃಪುಂಜ ನೇತೃತ್ವದಲ್ಲಿ ಮುನ್ನುಡಿಯಿರಿಸಿದ ಸ್ವಾತಂತ್ರ್ಯ ಚಳುವಳಿಯ ಚೈತನ್ಯವಾಹಿನಿ ಶತಶತಮಾನಗಳಿಂದ ಜಡ ದಾಸ್ಯದಲ್ಲಿ ಮೈಮರೆತು ಮಲಗಿದ್ದ ಭಾರತೀಯರ ಹೃದಯದಲ್ಲಿ ಅದ್ಭುತವೂ, ಅಪೂರ್ವವೂ ಆದ ದೇಶಪ್ರೇಮದ ಮಹಾಬೆಳಕನ್ನು ಮೂಡಿಸಿತು. ದೇಶದ ಉದ್ದಗಲವೂ ಮೈಮುರಿದು ಕಣ್ತೆರೆದು ಕಾತರಿಸಿ ನಿಂತಿತು. ಸ್ಪರ್ಶ ಮಣಿಯ ಸಂಪರ್ಕದಿಂದ ಕೀಳು ಲೋಹವೂ ಹೊನ್ನಾಗುವಂತೆ ಬಡವ ಬಲ್ಲಿದರು ಅಜ್ಞಾನಿ ಸುಜ್ಞಾನಿಗಳು ಯುವಕ - ಮುದುಕರು, ಕಾರ್ಮಿಕ - ಕಲಾವಿದರು, ಹೆಣ್ಣು - ಗಂಡುಗಳು ತಾರತಮ್ಯ ಭಾವವನ್ನು ಮರೆತು ಕ್ಷುದ್ರ ಸ್ವಾರ್ಥವನ್ನು ಬದಿಗೊತ್ತಿ ದೇಶ ವಿಮೋಚನಾ ದೀಕ್ಷಾಬದ್ಧರಾದರು. ಆ ಗಳಿಗೆಯಲ್ಲಿ ಕಣ ಕಡಲಾಯಿತು, ಕಿಡಿ ಸಿಡಿಲಾಯಿತು, ಕಡ್ಡಿ ಗುಡ್ಡವಾಯಿತು. ಅವರು ಮೆರೆದ ತ್ಯಾಗ, ಸಹನೆ, ಶೌರ್ಯ ಸತತ ಸ್ಫೂರ್ತಿಯ ಸೆಲೆಯಾಗಿ ಜನಮನದಲ್ಲಿ ನೆಲೆಯಾಗಿ ನಿಂತಿತು. ಕವಿ ಕಲಾವಿದರಿಗೆ ಬತ್ತದ ಮೂಲವಾಯಿತು. ಲೇಖಕ ಕಟ್ಟೀಮನಿಯವರು ಸ್ವತಃ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರು. ಅದರ ಸಿಹಿ ಕಹಿಗಳನ್ನು ಕಂಡುಂಡವರು, ಅನುಭವದ ಸಂಪತ್ತನ್ನು ಸಂವರ್ಧಿಸಿಕೊಂಡವರು. ಆ ಚಳುವಳಿಯಲ್ಲಿ ಪ್ರಾಣಾರ್ಪಣೆ ಮಾಡಿದ ಪುಣ್ಯಾತ್ಮರ ಸ್ಮರಣೆ ಹಿಂದಿನವರಿಗೆ ಕೀರ್ತಿ, ಮುಂದಿನವರಿಗೆ ಸ್ಫೂರ್ತಿ. ಎಂತಲೇ ಆ ವೀರ ಜೀವಗಳನ್ನು ಸಾಹಿತ್ಯ ದಲ್ಲಾದರೂ ಸಾಧ್ಯವಾದಷ್ಟೂ ಮಟ್ಟಿಗೆ ಶಾಶ್ವತಗೊಳಿಸಲು ಲೇಖಕರು ಮಾಡಿದ ಸ್ತುತ್ಯ ಪ್ರಯತ್ನವೇ ಅವರ ದೇಶಪ್ರೇಮದ ಕತೆಗಳ ಗೊಂಚಲು"(ಲಕ್ಕಪ್ಪಗೌಡ. ಎಚ್.ಜೆ.; ೨೦೦೧; ಪು. ೧೦೨) ಎಂದು ಲಕ್ಕಪ್ಪಗೌಡರು ಕಥಾಲೋಕನ ಕೃತಿಯಲ್ಲಿ ಕಟ್ಟೀಮನಿ ಅವರ ಕತೆಗಳ ಹಿಂದಿರುವ ಧೋರಣೆಯನ್ನು ತಿಳಿಸಿದ್ದಾರೆ.

ಬಸವರಾಜ ಕಟ್ಟೀಮನಿಯವರ 'ಆಗಸ್ಟ್ ಒಂಬತ್ತು' ಸಂಕಲನವು ೧೯೪೭ರಲ್ಲಿ ಪ್ರಕಟವಾಗಿದೆ. ಈ ಸಂಕಲನದ ಏಳು ಕತೆಗಳು ೧೯೪೨ರ ಆಗಸ್ಟ್ ಚಳುವಳಿಯ ಹಿನ್ನೆಲೆಯನ್ನು ಹೊಂದಿವೆ. "ಪತಿ ಸ್ವಾತಂತ್ರ್ಯ ಸಮರಾಂಗಣಕ್ಕೆ ತೆರಳಿ ಕಾರಾಗೃಹದಲ್ಲಿ ಬಂಧಿತನಾಗಿದ್ದ ವೇಳೆ ವಿರಹ ವೇದನೆ, ಏಕಾಕಿತನ, ಕಿತ್ತು ತಿನ್ನುವ ದಾರಿದ್ರ್ಯ, ಅಸಹಾಯಕತೆ, ಕಾಮುಕರ ಕೂರ್ನೋಟಗಳಿಗೆ ನೊಂದು ಬೆಂದು ಬವಣೆಪಟ್ಟರೂ ತನ್ನ ಶೀಲವನ್ನು ಬಲಿಗೊಡದೆ, ಪತಿಯ ಪವಿತ್ರ ದೇಶಪ್ರೇಮದ ಹಾಗೂ ತನ್ನ ಕರುಳಿನ ಕುಡಿಯ ಎಳೆ ಹೃದಯದಲ್ಲೂ ಹೊತ್ತಿ ಉರಿಯುತ್ತಿದ್ದ ಸ್ವಾಭಿಮಾನ ಸ್ವಾತಂತ್ರ್ಯಾಕಾಂಕ್ಷೆಗಳ ಪ್ರಭಾವದಿಂದ ಶುದ್ಧ ಭಾರತ ನಾರಿಯಾಗಿಯೇ ಉಳಿದ ಸಾಧ್ವಿಯೊಬ್ಬಳ ಕರುಳು ಮಿಡಿಯುವ ಕತೆ 'ಆಗಸ್ಟ್ ಒಂಬತ್ತು'(ಅದೇ; ಪು. ೧೦೩).

"ಉತ್ತರ ಭಾರತದಲ್ಲಿ ನಡೆದ ಸಹಜ ಘಟನೆಯೊಂದರ ಆಧಾರದ ಮೇಲೆ ರಚಿತವಾದ ರುದ್ರ ರಮ್ಯ ಕತೆ 'ರಕ್ತಧ್ವಜ'. ಅತ್ಯಂತ ಚಿಕ್ಕ ಪರಿಮಿತಿಯಲ್ಲಿ ಅದ್ಭುತ ಅನುಭವವೊಂದನ್ನು ತಂದುಕೊಡುವ ಮೈನವಿರೇಳಿಸುವ ಸತ್ವಶಾಲಿ ಕತೆಯಿದು. ಹತ್ತು ವರ್ಷದ ಹಸುಳೆಯೊಬ್ಬ

ಕೋರ್ಟಿನ ಗೋಪುರದ ಮೇಲೆ ತ್ರಿವರ್ಣ ಧ್ವಜಾರೋಹಣ ಮಾಡಲು ಹೋಗಿ ನಿರ್ಭೀತಿಯಿಂದ ಪೊಲೀಸರ ಗುಂಡಿಗೆ ಗುಂಡಿಗೆಯೊಡ್ಡಿದ ವೀರ ವೃತ್ತಾಂತ ಇದರ ವಸ್ತು. ಕತೆಯ ಸಾಲುಸಾಲಿನಲ್ಲೂ ಸ್ವದೇಶಾಭಿಮಾನ ಸ್ವಾತಂತ್ರ್ಯ ಪ್ರೇಮ ಸಾಹಸ ಛಲ ಕಲಿತನ ಆಶ್ಚರ್ಯಕರ ರೀತಿಯಲ್ಲಿ ಹರಳುಗೊಂಡು ಉಜ್ವಲ ಪರಿಣಾಮವನ್ನುಂಟು ಮಾಡುತ್ತವೆ"(ಅದೇ; ಪು. ೧೦೪).

"ಬೆಳಗಾಂ ಜಿಲ್ಲೆಯ ಕ್ರಾಂತಿವೀರನೊಬ್ಬನ ಕತೆ 'ಹುತಾತ್ಮ'. ಬ್ರಿಟೀಷರ ನರಕಸದೃಶವಾದ ಸೆರೆಮನೆಗಳಲ್ಲಿ ಕೊಳೆತು ನಾಯಿ - ಕಾಗೆಗಳೂ ತಿನ್ನಲಾರದ ತಿನ್ನಬಾರದ ಅನಾರೋಗ್ಯಕರವಾದ ಆಹಾರವನ್ನು ತಿಂದು ರೋಗಗ್ರಸ್ತನಾಗಿ ಹಾಸಿಗೆ ಹಿಡಿದು ಹೆತ್ತ ತಾಯಿಯನ್ನು ಕಳೆದುಕೊಂಡು ಆಸ್ತಿಪಾಸ್ತಿಯನ್ನು ನೀಗಿಕೊಂಡು ತಿನ್ನಲು ಅನ್ನವಿಲ್ಲದೆ ಕುಡಿಯಲು ನೀರಿಲ್ಲದೆ ಕಂಗೆಟ್ಟು ಬಗೆಗೆಟ್ಟು ನಿಸ್ಸಹಾಯಕನಾಗಿ ಭಾರತ ಮಾತೆಯ ಸ್ಮರಣೆಯಲ್ಲಿಯೇ ಸಾವನ್ನಪ್ಪಿದ ಕ್ರಾಂತಿಪುರುಷನೊಬ್ಬನ ಹೃದಯ ವಿದ್ರಾವಕ ಕತೆಯಿದು"(ಅದೇ; ಪು. ೧೦೪-೧೦೫).

"ನಾಡಿನಲ್ಲಿ ನವಕ್ರಾಂತಿ ಎಬ್ಬಿಸಿದ ಚಳುವಳಿಯಲ್ಲಿ ಧುಮುಕಿದ ಪರಿಣಾಮವಾಗಿ ಕಾರಾಗೃಹದಲ್ಲಿ ಬಂಧಿತನಾಗಿದ್ದು, ನಮ್ಮ ನೆಲದಲ್ಲೇ ನಾವು ಪರಕೀಯರೆಂಬಂತೆ ತುಚ್ಚವಾಗಿ ನಡೆಸಿಕೊಳ್ಳುತ್ತಿದ್ದ ಬ್ರಿಟಿಷರ ದಬ್ಬಾಳಿಕೆಗೆ ಉಗ್ರವಾಗಿ ಸಿಡಿದೆದ್ದು, ನಮ್ಮವರ ನರಸತ್ತತನಕೆ ಹೇಸಿ ಅಸಹನೆಯಿಂದ ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿ ಸಿಡಿಲಮರಿಯಾಗಿ ಮೆರೆದ ಹಳ್ಳಿಯ ಹುಡುಗನೊಬ್ಬನ ಕತೆ 'ಜನವರಿ ಇಪ್ಪತ್ತಾರು'. ಅವನ ಬಾಪೂ ನಿಷ್ಠೆ, ದೇಶ ನಿಷ್ಠೆ ಮುಚ್ಚುಮರೆಯಿಲ್ಲದ ನಿಷ್ಕಾಪಟ್ಯ, ಒಲ್ಲದುದನ್ನು ಕಂಡು ಶೀಘ್ರವಾಗಿ ಕೆರಳುವ ನಿಸರ್ಗ ಸಹಜವಾದ ದುಡುಕುತನ ಋಜುತ್ವ, ಎಂಥ ನೋವನ್ನೂ ತಾಳಬಲ್ಲ ವಜ್ರೋಪಮ ಸ್ಥೈರ್ಯ ಕಟ್ಟೀಮನಿಯವರ ಲೇಖನಿಯಲ್ಲಿ ಘನೀಭೂತವಾದ ಆಕೃತಿಯನ್ನು ಪಡೆದಿವೆ"(ಅದೇ; ಪು. ೧೦೫).

"ಕಟ್ಟೀಮನಿಯವರ 'ಬಲಿ' ಕತೆ ಅತ್ಯಂತ ಹೃದಯಸ್ಪರ್ಶಿಯೂ, ಕಲಾತ್ಮಕವೂ, ಸತ್ವಪೂರ್ಣವೂ ಆಗಿದೆ. ಓದಿಗೆ ತಿಲಾಂಜಲಿಯಿತ್ತು ಅಕ್ಕರೆಯ ತಂದೆ ತಾಯಿಗಳ ಮಮತೆಯ ಬಂಧನವನ್ನು ಬದಿಗೊತ್ತಿ ಬಾಪೂ ಕರೆಗೆ ಓಗೊಟ್ಟು 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗವಹಿಸಿ ಸಹೋದ್ಯೋಗಿಗಳಿಗೆ ಸ್ಫೂರ್ತಿಯ ಕೇಂದ್ರವಾಗಿ ಆದರ್ಶದ ಅಣ್ಣನಾಗಿ ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಮನಸ್ಥೈರ್ಯವನ್ನು ಕಳೆದುಕೊಳ್ಳದೆ ಧೀರಪುರುಷನಾಗಿ ಮೆರೆದು ಪೊಲೀಸರ ಅತ್ಯಾಚಾರಕ್ಕೆ ಈಡಾಗಿ ಅಸು ತೆತ್ತ ಬಾಲ ಅಭಿಮನುಷ್ಯವಿನೊಬ್ಬನ ದುರಂತ ಕತೆಯಿದು"(ಅದೇ; ಪು. ೧೦೬).

"ರಾಷ್ಟ್ರದಲ್ಲಿ ಬೀಸಿದ ಸ್ವಾತಂತ್ರ್ಯೇಚ್ಛೆಯ ಬಿರುಗಾಳಿ ಭಾರತದ ಹಳ್ಳಿ ಹಳ್ಳಿಯನ್ನೂ ವ್ಯಾಪಿಸಿ ಅಜ್ಞಾನ, ಮೌಢ್ಯ, ಅನಕ್ಷರತೆ ದಾರಿದ್ರ್ಯಗಳಲ್ಲಿ ಮುಳುಗಿದ ಅತಿ ಸಾಮಾನ್ಯ ಜನಮನವನ್ನೂ ಪ್ರವೇಶಿಸಿದಾಗ ಇಲಿಗಳು ಹುಲಿಯಾದರು, ದುರ್ಬಲ ನಾರಿ ಸಬಲ ಶಕ್ತಿಯಾದಳು, ಬಡಕಲು ಶರೀರ ಧೀರ ಹಿಮಾಚಲವಾಯಿತು. ಅಂತಹ ಒಂದು ಇತ್ರ 'ಅಜ್ಞಾತವಾಸಿ'"(ಅದೇ; ಪು. ೧೦೬-

೧೦೭). ಗಾಂಧೀಜಿಯವರ ಚಳವಳಿಯ ಗಾಳಿ ಎಂತಹ ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ, ಸದೃಢರನ್ನಾಗಿ ಮಾಡುತ್ತದೆ ಎಂಬುದಕ್ಕೆ ಈ ಕತೆ ನಿದರ್ಶನವಾಗಿದೆ.

"'ಮೂವರು ಸೈನಿಕರು' ಉಜ್ವಲ ಸ್ವಾತಂತ್ರ್ಯಾರಾಧನೆಯ ಮತ್ತೊಂದು ರೋಚಕ ಕತೆ. ಇದು ಒಂದು ವಾಸ್ತವ ಸನ್ನಿವೇಶವನ್ನು ಕುರಿತಾದ ಕತೆ; ಮಹದೇವ ಮೈಲಾರ ಮತ್ತು ಸಂಗಡಿಗರು ತಮ್ಮ ಪ್ರಾಣವನ್ನು ತೃಣವಾಗೆಣಿಸಿ ರೈತರ ಕಂದಾಯವನ್ನು ವಸೂಲು ಮಾಡಿ ಕೂಡಿಟ್ಟಿದ್ದ ಖಜಾನೆಯನ್ನು ಆಕ್ರಮಿಸಿಕೊಳ್ಳಲು ಹೋಗಿ ಪೊಲೀಸರ ಗುಂಡಿಗೆ ದೇಹ ತೆತ್ತ ಸಾಹಸದ ಕತೆ; ಮೃತ್ಯುವಿನ ದವಡೆಯಲ್ಲೂ ಅಹಿಂಸೆಯನ್ನು ಪಾಲಿಸಿದ ರೋಮಾಂಚಕ ಸಂಗತಿ"(ಅದೇ; ಪು. ೧೦೭).

ಹೀಗೆ ಕಟ್ಟೀಮನಿಯವರು ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯ ಪ್ರಭಾವದಿಂದ ಪಡೆದುಕೊಂಡಿವೆ ಎಂದು ಗುರುತಿಸಬಹುದು. ಕಥೆಗಳನ್ನು ರಚಿಸಿದ್ದಾರೆಂದು ಇವರ ಕಥಾಸಾಹಿತ್ಯದ ಮೂಲಕ ತಿಳಿದುಬರುತ್ತದೆ. ಕಟ್ಟೀಮನಿಯವರು ತಮ್ಮ ಕಥೆಗಳಲ್ಲಿ ಗಾಂಧೀಜಿಯವರನ್ನು ಆದರ್ಶದ ಭಾಗವಾಗಿಯೇ ಕಂಡರಿಸಿದ್ದಾರೆ ಎಂಬುದಕ್ಕೆ ಮೇಲಿನ ಕತೆಗಳ ತಾತ್ಪೋರ್ವಕ ಸಾರಾಂಶಗಳೇ ಸಾಕ್ಷಿಯಾಗಿವೆ.

ಒಟ್ಟಾರೆ ಪ್ರಗತಿಶೀಲರಿಗೆ ಗಾಂಧೀಜಿ ಮತ್ತು ಅವರ ತತ್ವಗಳು ಶಾಂತಿಯುತವಾದ ಹೋರಾಟದ ಅಸ್ತ್ರಗಳಾಗಿ ಪರಿಭಾವಿಸಿದ್ದಾರೆ. ಗಾಂಧೀ ಹೋರಾಟಗಾರರಿಗೆ ಮಾರ್ಗದರ್ಶಕನಾಗಿ, ಸ್ಫೂರ್ತಿಯ ಸೆಲೆಯಾಗಿ, ಮಾನವತವಾದಿಯಾಗಿ ಆದರ್ಶೀಯ ನೆಲೆಯಲ್ಲಿ ಪ್ರತಿನಿಧಿಸಿದ್ದಾರೆ.

೫.೩. ನವ್ಯ ಕಥೆ

ಕನ್ನಡದಲ್ಲಿ ಸಣ್ಣಕಥೆ ಸಂಕೀರ್ಣವಾಗಿ ಬೆಳೆದಿರುವ ಪ್ರಕಾರವಾಗಿದೆ. ಕಥೆಗಾರರು ಸರಳವಾಗಿ, ನೇರವಾಗಿ ಆಡುಮಾತಿನ ಪರಂಪರೆಯಲ್ಲಿ ಕಥೆ ಹೇಳುವ ನಿರೂಪಣೆಯಿಂದ ಹಿಡಿದು ಐರೋಪ್ಯ ರಾಷ್ಟ್ರಗಳಲ್ಲಿ ಪ್ರಸಿದ್ಧವೆನಿಸಿದ ವಿವರಣಾತ್ಮಕ ತಂತ್ರ, ಪ್ರಜ್ಞಾಪ್ರವಾಹ ತಂತ್ರಗಳನ್ನು ಬಳಸಿ ಸಮಕಾಲೀನ ಬದುಕಿನ ಸಮಸ್ಯೆಗಳನ್ನು ಚಿತ್ರಿಸುವಲ್ಲಿ ಹಾಗೂ ಬದಲಾಗಿರುವ ಮತ್ತು ಬದಲಾಗುತ್ತಿರುವ ಮನುಷ್ಯನನ್ನು ಗುರುತಿಸಲು ನವ್ಯ ಕಥಾಸಾಹಿತ್ಯದಲ್ಲಿ ಪ್ರಯತ್ನ ನಡೆದಿದೆ.

"ಹಿಂದುಳಿದ ವರ್ಗಗಳ ಸಮಸ್ಯೆಯ ಕಡೆಯೂ ನವ್ಯ ಕಥೆಗಾರರು ಅಥವಾ ಬರಹಗಾರರು ಗಮನಹರಿಸಿದ್ದರು. ಇದು ಗಾಂಧೀಜಿಯವರ ದೇಶ ಸ್ವತಂತ್ರವಾಗಬೇಕೆ ಅಥವಾ ಅಂಬೇಡ್ಕರ್ ಅವರ ಭಾರತದ ಒಳಗಡೆಯೇ "ದಲಿತರಿಗೆ ಸ್ವಾತಂತ್ರ್ಯ ಸಿಕ್ಕ ಹೊರತು ದೇಶದ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ" ಎನ್ನುವ ಸಿದ್ಧಾಂತಗಳಿರಬಹುದು ಅಥವಾ ಈ ಎಲ್ಲ ಸಿದ್ಧಾಂತಗಳೂ ಕೂಡಿ, ಮಥನಗೊಂಡು, ಅರ್ಥದಲ್ಲಿ ವಿಸ್ತಾರಗೊಂಡು ಹಿಂದುಳಿದವರ ಬದುಕಿನ ನೋವು, ಸಂಕಟ; ದುಃಖ, ದುರಂತ ಇವುಗಳಿಗೆ ಸಾಹಿತ್ಯದಲ್ಲಿ ಸ್ಥಾನವಿದೆ ಎನ್ನುವ ಸಂವೇದನೆ ಬೆಳೆಸಿಕೊಂಡು ಕನ್ನಡ ಬರಹಗಾರರು ಸಾಹಿತ್ಯ ರಚಿಸಿರಬಹುದು"(ನಾಯಕ.ಜಿ.ಎಚ್.(ಸಂ); ೨೦೦೯; ಪು. ೧೨೭).

ಎಂದು ಪ್ರೊ. ಎನ್.ಎಸ್. ರಘುನಾಥ್ ಅಭಿಪ್ರಾಯಿಸಿದ್ದಾರೆ. ಆದರೆ ಈ ವೈವಿಧ್ಯಮಯ ಸಾಹಿತ್ಯ ಈ ನವ್ಯ ಕಥೆಗಳಲ್ಲಿ ಕಾಣಸಿಗುತ್ತದೆ. ಭಾರತ ಸ್ವಾತಂತ್ರ್ಯ ಹೋರಾಟದ ನಂತರ ಗಾಂಧಿವಾದ ಮತ್ತು ಅಂಬೇಡ್ಕರ್ ವಾದಗಳನ್ನೂ ಅನ್ಯ ಪ್ರಕಾರಗಳಂತೆ ಈ ಪ್ರಕಾರ ಒಳಗೊಂಡಿದೆ. ಈ ನವ್ಯಕಾಲ ಘಟ್ಟದಲ್ಲಿ ಬ್ರಿಟೀಷ್ ವಸಾಹತುಶಾಹಿಯ ಊಳಿಗಮಾನ್ಯ ಪದ್ಧತಿ ಸಮಾಜವಾದಿ ಪ್ರಜಾಪ್ರಭುತ್ವಕ್ಕೆ ತಿರುಗುತ್ತಿತ್ತು. ಗಾಂಧಿಯವರ ಆದರ್ಶಗಳು ಶ್ರೇಣೀಕೃತ ಸಮಾಜದ ಮೇಲೆ ಪ್ರಭಾವ ಬೀರಿದ್ದವು.

ಭಾಷೆಯ ಬಳಕೆಯಲ್ಲಿ ಮೊದಲಿನ ಪಂಥದವರ ನಿಸ್ಸಾರವಾದ ಸರಳ ಗದ್ಯ, ಸಾಧಾರಣ ನಿರೂಪಣೆ ನಂತರ ಕಾವ್ಯಮಯವಾದ ರೂಪಕ ಭಾಷೆಯಲ್ಲಿ ಕಥೆ ಹೇಳುತ್ತಾ, ಸೂಚಿಸುತ್ತಾ ನೈತಿಕ ನಿಲುವಿನ ಶೈಲಿಗಳನ್ನು ನವ್ಯರು ಸಾಧಿಸಿದ್ದಾರೆ. ಅವರಲ್ಲಿ ಯು.ಆರ್. ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಕೆ. ಸದಾಶಿವ, ಲಂಕೇಶ, ಎ.ಕೆ. ರಾಮಾನುಜನ್ ಪ್ರಮುಖರು. ನವ್ಯರಲ್ಲಿ ಈ ಶೈಲಿಯ ನಿರೂಪಣಾ ಧಾಟಿಯಲ್ಲಿ ಪ್ರತಿಮೆಗಳನ್ನು ಸೃಷ್ಟಿಸುವ ಪರಂಪರೆ ತಾಳಿತು. ಇಂಥ ವಿಶಿಷ್ಟತೆಯನ್ನು ಸೃಷ್ಟಿಸಿದ ನವ್ಯ ಕಥೆಗಾರರು ಗಾಂಧೀಜಿಯನ್ನು ಪರಿಭಾವಿಸಿದುದ್ದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರು ನವ್ಯರಲ್ಲಿ ಪ್ರಮುಖರು. ಇವರ ಬರಹಗಳು ಎಲ್ಲಾ ಪಂಥಗಳ ಮಾದರಿಗೆ ಹೊಂದಿಕೊಳ್ಳುವುದರಿಂದ ಸಮನ್ವಯ ಬರಹಗಾರರು ಎಂದೂ ಹೇಳಬಹುದು. ಇವರು ಕಾದಂಬರಿ, ಕಥೆ ಹಾಗೂ ವಿಜ್ಞಾನ ಲೋಕದ ವೈಚಾರಿಕ ಬರಹಗಳಲ್ಲಿ ಹೆಚ್ಚು ಆಸಕ್ತಿ ವಹಿಸಿದವರು.

ಇವರು ಬ್ರಿಟೀಷ್ ಆಡಳಿತದಲ್ಲಿದ್ದ ಒಬ್ಬ ಪ್ರಾಮಾಣಿಕ ಗುಮಾಸ್ತನ ಜೀವನ ಸ್ವಾತಂತ್ರ್ಯೋತ್ತರ ಭಾರತದಲ್ಲಿ ದುರಂತಕ್ಕೀಡಾದುದನ್ನು 'ತಬರನ ಕಥೆ' ಎಂಬ ಕಥೆಯಲ್ಲಿ ಚಿತ್ರಿಸಿದ್ದಾರೆ. ಕಥೆಯ ನಾಯಕ 'ತಬರ'ನಿಗೆ ಗಾಂಧೀಜಿಯ ಪ್ರಭಾವವಿಲ್ಲದಿದ್ದರೂ ಅವರ ಹೋರಾಟದ ಗಾಳಿ ತಬರನಿಗೆ ಅರಿವಿಲ್ಲದೆ ತಗುಲುವುದನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಬ್ರಿಟೀಷರ ಆಳ್ವಿಕೆಯಲ್ಲಿ ತಬರ ಸುಂಕಕಟ್ಟೆ ಗುಮಾಸ್ತನಾಗಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದನು. "ಬ್ರಿಟೀಷ್ ವಿರುದ್ಧ ಹೋರಾಡುತ್ತಿದ್ದ ಗಾಂಧಿ ಎಂದೊಬ್ಬ ಮನುಷ್ಯನ ಹೆಸರು ಆಗ ಬಹಳ ಹೆಚ್ಚಾಗಿ ಕೇಳಿ ಬರುತ್ತಿತ್ತು. ತಬರನಿಗೂ ಅವನ ಹೆಂಡತಿಗೂ ಯಾಕೆ ಈ ಹೋರಾಟ ಎಂದು ಸ್ಪಷ್ಟವಾಗಿ ಗೊತ್ತಿರಲಿಲ್ಲ. ಒಟ್ಟಿನಲ್ಲಿ ಬ್ರಿಟೀಷರು ಈ ನಾಡನ್ನು ಬಿಟ್ಟು ಹೋಗಬೇಕೆಂಬುದು ಚಳವಳಿಯ ಉದ್ದೇಶ ಎಂದು ಗೊತ್ತಿತ್ತು. ತಬರ ದೇಶಭಕ್ತನೇನೂ ಅಲ್ಲ. ಆದರೆ ಕರಿಯರ ನಡುವೆ ನೆಮ್ಮದಿಯಿಂದ ಇರಬಾರದೇ ಎಂದು ಮಾತಾಡಿಕೊಳ್ಳುತ್ತಿದ್ದ. ಅಂತೂ ಗಾಂಧಿವಾದದಲ್ಲೂ ಏನೋ ಒಂದು ಸತ್ಯವಿದೆ ಎಂದು ಅವನಿಗೆ ಅನ್ನಿಸಿತ್ತು. ಆದರೆ ಸತ್ಯಾಗ್ರಹವು ಕರ ನಿರಾಕರಣೆ, ತಂತಿ ಕತ್ತರಿಸುವುದು ಮುಂತಾದ ಕಾರ್ಯಕ್ರಮಗಳ ಸ್ವರೂಪವನ್ನು ತೆಗೆದುಕೊಂಡಾಗ ಮಾತ್ರ ತಬರನಿಗೆ ಪೀಕಲಾಟಕ್ಕೆ ಬಂದಿತು"(ಗೋವಿಂದರಾಜು ಗಿರಡ್ಡಿ(ಸಂ); ೧೯೮೩; ಪು. ೨೯೮). ಹೀಗೆ

ಬ್ರಿಟಿಷ್ ನಿಷ್ಠನಾದ ತಬರನಿಗೆ ಗಾಂಧೀಜಿಯ (ಕರ ನಿರಾಕರಣೆ) ಹೋರಾಟಗಳು ಹಿಡಿಸದಾದವು. ಅದಕ್ಕೆ ತಬರ "ಈ ಗಾಂಧಿ ಮನೆ ಹಾಳಾಗ"(ಅದೇ; ಪು. ೨೯೮). ಎಂದು ಗೊಣಗಿಕೊಂಡ. ಬ್ರಿಟೀಷ್ ಆಡಳಿತದಲ್ಲಿದ್ದ ಸರ್ಕಾರಿ ನೌಕರಿಯಲ್ಲಿದ್ದ ದೇಶೀಯ ಜನತೆಗೆ ಗಾಂಧೀಜಿ ಒಬ್ಬ ಶತ್ರುವಾಗಿ, ತಮ್ಮ ಬಾಳಿಗೆ ಮುಳ್ಳಾಗುವವನಾಗಿ ಕಾಣುತ್ತಾರೆ. ಬ್ರಿಟೀಷ್‌ರೊಂದಿಗೆ ಅಲ್ಲದೇ ಬ್ರಿಟೀಷ್ ನಿಷ್ಠರಾದ ಭಾರತೀಯ ಜನತೆಗೂ ಗಾಂಧೀಜಿ ಸಿಂಹಸ್ವಪ್ನವಾಗಿದ್ದಾರೆ.

ಗಾಂಧೀಜಿಯ ಹೋರಾಟವು ದೇಶದಲ್ಲಿ ಹೆಚ್ಚಾದಂತೆಲ್ಲಾ ದೇಶದ "ಮಕ್ಕಳೆಲ್ಲ ಮನೆ ಬಿಟ್ಟು ಓಡಿ ಹೋಗಿ ಗಾಂಧಿ ಜೊತೆ ಬಂಡಾಯ ಸೇರಿದಂತೆ ಎಂದು ವಾರ್ತೆ ಬರುತ್ತಿತ್ತು. ಲಾಠೀ ಚಾರ್ಜು, ಗೋಲಿಬಾರ್, ಸತ್ಯಾಗ್ರಹ, ಅಸಹಕಾರ ಚಳವಳಿ ನಡೆದೇ ನಡೆದಿತ್ತು. ಈ ಬಗ್ಗೆ ತಬರನಿಗೆ ಯಾವುದೇ ಸ್ಪಷ್ಟ ನಿರ್ಧಾರವೂ ಇರಲಿಲ್ಲ. ಟೆಲಿಫೋನ್ ತಂತಿ ಕತ್ತರಿಸಿದರೆಂದು ಕೇಳಿದಾಗ ಗಾಂಧೀಜಿಯ ಬಗ್ಗೆ ಸಿಟ್ಟು ಬರುತ್ತಿತ್ತು. ಗುಂಡಿನಲ್ಲಿ ಹೊಡೆಸಿದರೆಂದು ಕೇಳಿದಾಗ ಬ್ರಿಟಿಷರ ಬಗ್ಗೆ ಕೋಪ ಬರುತ್ತಿತ್ತು. ಸ್ವಾತಂತ್ರ್ಯ ಹೋರಾಟದ ಬಿಸಿ ಇನ್ನೂ ಏರಿ ಹಳ್ಳಿ ತಾಲೂಕುಗಳವರೆಗೂ ಹೋಯ್ತು. ತಬರನಿಗೂ ಬ್ರಿಟೀಷ್ ಅಧಿಕಾರಿಗಳ ಕೈಂಕರ್ಯ ಮನಃಪೂರ್ವಕ ವಾಗಿ ಮಾಡಲು ಏನೋ ಒಂದು ತರಹ ಅಳುಕು ಆರಂಭವಾಗತೊಡಗಿತು"(ಅದೇ; ಪು. ೨೯೯). ಇಡೀ ದೇಶವೇ ಗಾಂಧೀಜಿಯ ಹೋರಾಟದ ಹಿಂದೆ ನಡೆದಾಗ ತಬರನಂತಹ ದೇಶೀಯ ನೌಕರರು ಗಾಂಧೀಜಿಯ ಕಡೆ ತಮಗರಿವಿಲ್ಲದೆ ಮಾರುಹೋಗುತ್ತಿದ್ದರು. ಬ್ರಿಟೀಷರ ನಿಯಮಗಳನ್ನು ಪಾಲಿಸುವವರ ಮನಸ್ಸನ್ನು ಗಾಂಧೀ ತಮ್ಮ ಚಿಂತನೆಗಳಿಂದ ಪರಿವರ್ತಿಸಿ ದೇಶಕ್ಕಾಗಿ ಚಿಂತಿಸುವಾಗ ಹಾಗೆ, ಹೋರಾಡುವ ಹಾಗೆ ಮಾಡುತ್ತಿದ್ದರು. ಇದರಿಂದ ಗಾಂಧೀಜಿ ಮಹಾಸಂಘಟಕರಾಗಿದ್ದಾರೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ತಬರನ ಗುಮಾಸ್ತಿಕೆಯಲ್ಲಿ ಕಾಫಿ ಬೆಳೆಗಾರರು ಸುಂಕ ಕೊಡುವುದಿಲ್ಲವೆಂದು ವಿರೋಧಿಸುತ್ತಾರೆ. ಇದಕ್ಕೆ ಕಕ್ಕಾಬಿಕ್ಕಿಯಾದ ತಬರ "ಗಾಂಧಿ ಸತ್ತರೂ ಅವನ ಚಳವಳಿ ನಿರಂತರವಾಗಿ ಮುಂದುವರೆಯುತ್ತಿರುವಂತೆ ಕಾಣುತ್ತಿದೆ"(ಅದೇ; ಪು. ೩೦೦) ಎಂದು ಗಾಂಧಿಯನ್ನು ನೆನೆಯುತ್ತಾನೆ. ಸ್ವತಂತ್ರ ಭಾರತದಲ್ಲಿ ಗಾಂಧೀಜಿ ಕೇವಲ ನೆನಪಾಗೇ ಉಳಿದರೂ ಅವರು ಸಾರಿದ ಸಂದೇಶಗಳು, ತತ್ವಗಳು ಸರ್ವಕಾಲಕ್ಕೂ ಪ್ರಸ್ತುತವೆನಿಸುತ್ತವೆ ಎಂದು ಕತೆಗಾರರು ಸೂತ್ರೀಕರಿಸಿದ್ದಾರೆ. ಹಾಗಾಗಿ ಗಾಂಧೀಜಿಯನ್ನು ಮತ್ತು ಗಾಂಧಿಯ ಚಿಂತನೆಗಳು ಕಾಲಾತೀತವಾದವುಗಳು ಎಂದು ಈ ಕಥೆ ವ್ಯಕ್ತಪಡಿಸುತ್ತದೆ. ಸ್ವತಂತ್ರ ಭಾರತದಲ್ಲಿ ಸರ್ಕಾರಿ ನೌಕರರು ಬ್ರಿಟೀಷರ ದಬ್ಬಾಳಿಕೆ, ದರ್ಪ, ಭ್ರಷ್ಟಾಚಾರಗಳನ್ನೇ ಮೈಗೂಡಿಸಿಕೊಂಡಿದ್ದಾರೆ. ಅದನ್ನು ತಬರನ 'ಪ್ರಾವಿಡೆಂಟ್ ಫಂಡು'. ಫೈಲು(ಕಡತ) ಸಂದರ್ಭದಲ್ಲಿ ಕಾಣಬಹುದು. ಗಾಂಧೀಜಿ ಎಷ್ಟೇ ಆದರ್ಶಗಳನ್ನು, ಸಂದೇಶಗಳನ್ನು ಸಾರಿ ದೇಶಕ್ಕೆ ಸ್ವಾತಂತ್ರ್ಯ ತಂದರೂ ಸಹ ಬ್ರಿಟೀಷರ ಅಟ್ಟಹಾಸ, ಭ್ರಷ್ಟಾಚಾರಗಳಂತಹವು ರಕ್ತಬೀಜಾಸುರನಂತೆ ದೇಶದಲ್ಲಿ ಹುಟ್ಟಿಕೊಳ್ಳುತ್ತಲೇ ಇರುತ್ತವೆ ಎಂಬುದನ್ನು ಈ ಕಥೆ ಧ್ವನಿಸುತ್ತದೆ.

ತೇಜಸ್ವಿಯವರು 'ಗಾಂಧೀಜಿ ದೆಸೆಯಿಂದ' ಎಂಬ ಕಥೆಯನ್ನು ೧೯೬೦ರಲ್ಲಿ ರಚಿಸಿದ್ದಾರೆ. ಈ ಕಥೆ ಒಬ್ಬ ಬಾಲಕನು ಗಾಂಧೀಜಿಯವರ ಸತ್ಯದ ಆದರ್ಶದ ಬದುಕನ್ನು ಜೀವಿಸಲು ಹೋಗಿ ಕೊನೆಗೆ ಅಪಾಯಕ್ಕೆ ಸಿಲುಕಿದಾಗ ಸುಳ್ಳಿನ ಮೊರೆಹೋಗುವುದನ್ನು ವಿವರಿಸುತ್ತದೆ. ಗಾಂಧೀಜಿಯವರ ತತ್ವಾದರ್ಶಗಳ ಮೌಲ್ಯವನ್ನು ಅರಿಯದವರ ಮಧ್ಯೆ ಗಾಂಧಿಯಂತೆ ಬದುಕುವುದು ತುಂಬಾ ಕಠಿಣವೆಂದು ಈ ಕಥೆಯ ಸಾರಾಂಶವಾಗಿದೆ.

ಈ ಕಥೆಯಲ್ಲಿ ಬರುವ 'ಮೋನಿ' ಈತನ ಪೂರ್ಣ ಹೆಸರು ಮೋಹನದಾಸ್ ಕೆ.ಜಿ. ಎಂದರೆ ಮೋಹನದಾಸ ಕರಮಚಂದ ಗಾಂಧಿ ಎಂದಲ್ಲ; ಕಲ್ಲುಹಳ್ಳಿಯ ಗುಂಡೇಗೌಡರ ಮಗ ಮೋಹನದಾಸ ಎಂದು. ಈ ಬಾಲಕ ಗಾಂಧೀಜಿಯನ್ನು ಕುರಿತ ಕಥೆಯನ್ನು ಓದಿ ಗಾಂಧೀಜಿಯಂತೆ ತಾನು ಸತ್ಯದ ಪರಿಪಾಲಕನಾಗಿ ಬದುಕಲು ಪ್ರಯತ್ನಿಸುತ್ತಾನೆ. ಗಾಂಧೀಜಿ ತನ್ನ ಚಿಕ್ಕ ವಯಸ್ಸಿನಲ್ಲಿ ಮದ್ಯ, ಮಾಂಸ, ಬೀಡಿ ಸೇವಿಸಿದ್ದನ್ನು ತಪ್ಪೆಂದು ಭಾವಿಸಿ ತಾನು ಮಾಡಿದ ತಪ್ಪನ್ನು ಪತ್ರದಲ್ಲಿ ಬರೆದು ತನ್ನ ತಂದೆಗೆ ತೋರಿಸಿ ಪ್ರಾಯಶ್ಚಿತ ಮಾಡಿಕೊಂಡಂತೆ, ಈ ಕಥೆಯಲ್ಲಿನ ಮೋಹನದಾಸ ತಾನು ಸುಳ್ಳು ಹೇಳಿದ್ದನ್ನು ಬೀಡಿ ಸೇದಿದ್ದರ ಪ್ರಾಯಶ್ಚಿತವಾಗಿ ತನ್ನ ತಂದೆ ಗುಂಡೇಗೌಡರಿಗೆ ಪತ್ರ ಬರೆಯುತ್ತಾನೆ. ಆ ಪತ್ರ ಓದಿದ ಮೋಹನನ ತಂದೆ "ಮೋಹನನನ್ನು ಕಂಡ ಕೂಡಲೇ ಲೇ ನೋಡೇ ನಿನ್ನ ಮಗ ಬಂದಿದ್ದಾನೆ ದಂಡು ಕಡಿದು. ಮನೆ ಹಾಳಾ ವದೀಯೇ ನಾಲ್ಕು' ಗುಡುಗಿದರು. ಅಪ್ಪನ ಕಡೆ ಕಂಗಾಲಾಗಿ ನೋಡುತ್ತಿದ್ದ ಮೋಹನನಿಗೆ ಹಿಂದಿನಿಂದ ಲಕ್ಷ್ಮಮ್ಮ ಸಮೀಪಿಸಿದ್ದು ತಿಳಿಯಲೇ ಇಲ್ಲ. ಪಟೀರನ ಬೆನ್ನಿಗೊಂದು ಬಿದ್ದಾಗ 'ಅಯ್ಯೋ' ಎಂದು ಮೋಹನ ಹಿಂತಿರುಗಿದ. ಹಿಂದಿನಿಂದ ಅಪ್ಪ 'ಹಾಕು ಇನ್ನೊಂದು ನಾಲ್ಕು ತಪರಾಕಿ'. ಬೀಡಿ ಸೆಯ್ಯೋದು, ಮನೆ ಸಾಮಾನು ಮಾರೋದು! ಅಲ್ಲ ನಿನಗೇ ಕಾಗದ ಬರೆಯೋವಷ್ಟು ಎದೆ ಸೊಕ್ಕು ಬಂತೇನೋ? ಲೇ ನಿನ್ನ ಮಗ ನಾಳೆ ಯಾವಳ ಜೋತೇನಾದರೂ ಹಾದರ ಮಾಡಿ ಕಾಗದ ಬರೀದಿದ್ದರೆ ಕೇಳು" ಎಂದು ತಲೆ ತಿಕ್ಕಿಕೊಳ್ಳುತ್ತ ಕೂಗಿದರು.

ಬೆನ್ನಿನ ಮೇಲೆ ಇನ್ನೂ ನಾಲ್ಕು ಬಿದ್ದವು. ಮೋಹನ "ಇಲ್ಲಾ ನಾನಲ್ಲ ಬರ್ದಿದ್ದು" ಎಂದು ಹಸೀ ಸುಳ್ಳು ಬಿಟ್ಟ"(ಪೂರ್ಣಚಂದ್ರ ತೇಜಸ್ವಿ ಕೆ.ಪಿ.;೨೦೦೭;ಪು. ೫೩). ಹೀಗೆ ಸತ್ಯವನ್ನು ಪರಿಪಾಲಿಸಲು ಹೋಗಿ ಕೊನೆಗೆ ಸುಳ್ಳನ್ನೇ ಹೇಳಬೇಕಾಯಿತು. ಗಾಂಧೀಜಿಯ ಆದರ್ಶದ ಬದುಕು ತುಂಬಾ ಕಠಿಣವಾದುದು ಎಂಬುದನ್ನು ಈ ಕಥೆ ವಿವರಿಸುತ್ತದೆ.

ಉಡುಪಿಯ ಸಮೀಪದ ತೆಂಕನಿಡಿಯೂರು ಗ್ರಾಮದಲ್ಲಿ ಜನಿಸಿದ(೧೯೪೦) ಡಾ. ವ್ಯಾಸರಾವ್ ನಿಂಜೂರು ಅವರು ನವ್ಯ ಪಂಥಕ್ಕೆ ಸೇರಿಕೊಳ್ಳುತ್ತಾರೆ. ಇವರು ಒಬ್ಬ ಸಾಮಾನ್ಯ ಯುವಕನು ಗಾಂಧೀಜಿಯವರ ವಿಚಾರಧಾರೆಗೆ ಪ್ರಭಾವಗೊಂಡು ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆದುದರಿಂದ ಜನತೆಗೆ ಹುಚ್ಚನಾಗಿ ಕಾಣುವುದನ್ನು 'ಗರಡಿ ಮಜಲಿನ ಗಾಂಧಿ' ಎಂಬ ಕತೆಯಲ್ಲಿ ಚಿತ್ರಿಸಿದ್ದಾರೆ.

'ಗರಡಿ ಮಜಲಿನ ಗಾಂಧಿ' ಕಥೆಯ ನಾಯಕ ತೋಡುಬಳಿ ಶಿವರಾಮಯ್ಯ. ಈತನು ಮಹಾತ್ಮ ಗಾಂಧಿಯವರಿಂದ ಪ್ರಭಾವಿತಗೊಂಡವನು. ಅವರು ಹಾಕಿಕೊಟ್ಟ ರಚನಾತ್ಮಕ ಕಾರ್ಯಗಳನ್ನು ತಪ್ಪದೇ ಕಾರ್ಯಗತಗೊಳಿಸುತ್ತಿದ್ದನು. ಗಾಂಧಿಯ ಸಾಬರಮತಿ ಆಶ್ರಮದಲ್ಲಿದ್ದು

ಬಂದವನು. ಇದ್ದ ಸರ್ಕಾರಿ ಮಾಸ್ತರ ಹುದ್ದೆಯನ್ನು ಬಿಟ್ಟು ಹಳ್ಳಿಯಲ್ಲಿ ಚರಕದಿಂದ ನೂಲು ತೆಗೆದು ಅದರಿಂದ ಜೀವನ ಸಾಗಿಸುತ್ತಿದ್ದನು. "ಈತನಿಗೆ ಸ್ವಾತಂತ್ರ್ಯದ್ದೇ ಗೀಳು. ಗಾಂಧೀಯೇ ಆತನಿಗೆ ದೇವರು"(ಜನಾರ್ಧನ ಭಟ್ಟ(ಸಂ); ೨೦೦೭; ಪು. ೧೮೧). ಗಾಂಧಿಯನ್ನು ಸಾಕ್ಷಾತ್ ದೈವವಾಗಿಯೇ ಕಾಣುತ್ತಿದ್ದನು. "ತಾನು ದೊರಗಾದ ಖದ್ದರು ಧರಿಸುತ್ತಿದ್ದದ್ದಲ್ಲದೆ, ಹೆಂಡತಿಗೂ ಖಾದಿ ಸೀರೆಯೇ ಧರಿಸತಕ್ಕದ್ದು ಎಂದು ತಾಕೀತು ಮಾಡಿದ್ದನು. ಎಲ್ಲಾದರೂ ಪುರುಸೋತ್ತಾದಲ್ಲಿ ಹಾಗೂ ರಾತ್ರಿಯಿಡೀ ತಕಲಿಯಲ್ಲಿ ನೂಲು ತೆಗೆಯುತ್ತಿದ್ದನು. ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹಕ್ಕೆ ದಂಡೀ ಯಾತ್ರೆಗೆ ಹೊರಟಾಗ ಅಲ್ಲಿಗೂ ಹೋಗಬೇಕು ಎನ್ನುವ ಆತುರ ಶಿವರಾಮಯ್ಯನಿಗೆ. ಆದರೆ ಪುಟ್ಟ ಕೂಸು ಆಗಷ್ಟೇ ಹುಟ್ಟಿತ್ತು. ಅದಕ್ಕೆ ಲವಣದ ಜ್ಞಾಪಕಾರ್ಥ ಲಾವಣ್ಯ ಎನ್ನುವ ಹೆಸರಿಟ್ಟುದ್ದು ಮಾತ್ರವಲ್ಲ, ಸಮುದ್ರದ ನೀರಿನಿಂದ ಮನೆಯಲ್ಲೇ ಉಪ್ಪು ತಯಾರಿಸಿಯೂ ಬಿಟ್ಟಿತು ಮನುಷ್ಯ. ಸೈ, ಪಟೇಲರಿಗೆ ವರ್ತಮಾನ ಹೋಗದಿರುತ್ತದೆಯೇ? ಹದಿನೈದು ದಿನ ಸೆರೆಮನೆಯಲ್ಲಿದ್ದು, 'ಭಾರತ ಮಾತಾಕೀ ಜೈ, ವಂದೇ ಮಾತರಮ್' ಎನ್ನುತ್ತಾ ಬಸ್ಸು ಹತ್ತಿ ಬಿಟ್ಟಿತು. ಕಿವಿಯಲ್ಲಿ ಗಾಳಿ ಹೊಕ್ಕ ಕರುವಿನ ಹಾಗೆ ನಾಲ್ಕು ದಿನ ಅಲೆದಾಡಿದ ಶಿವರಾಮಯ್ಯ ಸೀದಾ ಸಬರಮತಿಯತ್ತ ಪಾದಯಾತ್ರೆ ಮಾಡಿದರು. ಸಬರ್ಮತಿಯಿಂದ ವಾಪಸಾದದ್ದೇ ಊರಿನವರ ಮಟ್ಟಿಗೆ ಶಿವರಾಮಯ್ಯನ ಹುಚ್ಚು ದ್ವಿಗುಣಗೊಂಡಿತ್ತು. ಮೊದಲು ಬರೇ "ಸ್ವಾತಂತ್ರ್ಯ, ಸ್ವಾತಂತ್ರ್ಯ" ಎಂದು ಅಲವತ್ತುಕೊಳ್ಳುತ್ತಿದ್ದ ಮನುಷ್ಯ, ಈಗ ಅದರ ಜೊತೆ ಬ್ರಹ್ಮಚರ್ಯ ಪಾಲನೆ, ಪಾಯಖಾನೆ ಶುಚೀಕರಣ, ಪಾನ ನಿರೋಧ, ಗ್ರಾಮ ಸ್ವರಾಜ್ಯ"(ಅದೇ; ಪು. ೧೮೧-೧೮೨) ಎಂದೆಲ್ಲ ಊರಿನವರಿಗೆ ಅರ್ಥವಾಗದ ಮಂತ್ರಗಳನ್ನು ಹೇಳುತ್ತಾ ಇಡೀ ಮಾಗಣೆಯನ್ನು ಸುತ್ತುತ್ತಾನೆ. ಮನೆಮನೆಗೂ ಗಾಂಧಿ ತತ್ವಗಳನ್ನು, ರಚನಾತ್ಮಕ ಕಾರ್ಯಗಳನ್ನು ಕುರಿತು ಪ್ರಚಾರಿಸುತ್ತಾನೆ. ಇದು ಜನತೆಗೆ ಹುಚ್ಚಾಗಿ ಕಾಣುತ್ತದೆ.

ಗಾಂಧೀಜಿಯವರ 'ಮೂಲಭೂತ ಶಿಕ್ಷಣ'ಕ್ಕಾಗಿ ಶಿವರಾಮಯ್ಯ ಊರ ಅರಳೀ ಮರದ ಕಟ್ಟೆಯ ಸಮೀಪ ಶಾಲೆ ಪ್ರಾರಂಭಿಸುತ್ತಾನೆ. "ತಕಲಿಯನ್ನು ತಿರುಗಿಸಿ ಅರಳೆಯಿಂದ ನೂಲು ತೆಗೆಯುವುದು, ಕಾಗದಗಳಲ್ಲಿ ಹೂ, ಆಟದ ಸಾಮಾನು ತಯಾರಿಸುವುದು, ಚರಕದಿಂದ ನೂಲುವುದು, ಅಲ್ಲಲ್ಲಿ ಫಲಪುಷ್ಪಗಳ ಗಿಡಗಳನ್ನು ನೆಟ್ಟು ವನಮಹೋತ್ಸವ ಆಚರಿಸುವುದು, ಸ್ವದೇಶೀ ಸಾಮಗ್ರಿಗಳ ಪಟ್ಟಿ ಮಾಡಿ ಅವುಗಳನ್ನು ಹೇಗೆ ಉಪಯುಕ್ತವಾಗಿ ಬಳಸಬಹುದು ಎನ್ನುವುದನ್ನು ಮನದಟ್ಟು ಮಾಡಿಕೊಡುವುದು"(ಅದೇ; ಪು. ೧೮೩). ಇವೆಲ್ಲ ಶಿವರಾಮಯ್ಯನ ಅಭ್ಯಾಸ ಪಟ್ಟಿಯಲ್ಲಿ ಸೇರಿದ್ದವು. "ಶಾಲೆಯ ಮಕ್ಕಳಿಗೆಲ್ಲಾ, ಪಾವಣೆ ನಾಣ್ಯದ ನಡುವೆ ಸರಿಗೆ ಸಿಕ್ಕಿಸಿ ತಾವೇ ತಯಾರಿಸಿದ ತಕಲಿಗಳನ್ನು ಉಡುಗೊರೆಯಾಗಿ ಇತ್ತರು. ತಾವೇ ರಚಿಸಿದ ಗಾಂಧಿ ಕೀರ್ತನೆಯನ್ನು ಹಾಡುತ್ತ ಮಕ್ಕಳ ಹಾಗೆ ಕುಣಿಯುತ್ತಿದ್ದ ಶಿವರಾಮಯ್ಯನನ್ನು ಕಂಡು ಜನ "ಆ ಸಾಮಿಗೆ ಹುಚ್ಚು ಹಿಡಿದಿದೆ' ಎಂದು ನಕ್ಕರು"(ಅದೇ; ಪು. ೧೮೪). ಇದು ದೇಶಕ್ಕೆ ಸ್ವಾತಂತ್ರ್ಯ ದೊರೆತಾಗ ಶಿವರಾಮುವಿನಲ್ಲಾದ ವರ್ತನೆಯಾಗಿತ್ತು.

ಈ ಗಾಂಧಿಯ ಅವತಾರವಾದ ಶಿವರಾಮಯ್ಯನನ್ನು ಊರಿನ ಕೆಲವು ಜನರು ಊರಿನಿಂದ ಬಹಿಷ್ಕರಿಸಬೇಕೆಂದು ಪುಕಾರು ಎಬ್ಬಿಸುತ್ತಾರೆ. "ಈ ಮನುಷ್ಯನನ್ನು ಹೀಗೆಯೇ ಊರಲ್ಲಿರಲು ಬಿಟ್ಟರೆ ತಮಗೆ ಬರ್ಕತ್ತಿಲ್ಲ"(ಅದೇ; ಪು. ೧೮೪) ಎಂಬುದು ಎಲ್ಲರ ಅಭಿಪ್ರಾಯವಾಗಿರುತ್ತದೆ. ಇದನ್ನು ಕೇಳಿದ ಗಣಪು ಶಿವರಾಮಯ್ಯನಿಗೆ ತಿಳಿಸಿದಾಗ "ನಮಗೀಗ ಸ್ವರಾಜ್ಯ ಬಂದಿದೆಯಲ್ಲ ಮಾರಾಯ. ನಮ್ಮ ಜನಗಳದ್ದೇ ರಾಜ್ಯ. ಅವರು ಮಾಡಿದ್ದೇ ಕಾನೂನು. ಅವರು ಕೊಟ್ಟದ್ದೇ ಶಿಕ್ಷೆ. ಅದಕ್ಕೆ ತಲೆ ಒಡ್ಡಬೇಕಾದುದು ನಮ್ಮ ಧರ್ಮ"(ಅದೇ; ಪು. ೧೮೫) ಎಂದು ತತ್ವಜ್ಞಾನಿಯ ಹಾಗೆ ಮಾತಾಡುತ್ತಾನೆ. ಕಥೆಗಾರರು ಶಿವರಾಮಯ್ಯನ ಪಾತ್ರದ ಮೂಲಕ ಗಾಂಧೀಜಿಯವರಿಗಿದ್ದ ಸ್ವಾತಂತ್ರ ಭಾರತದಲ್ಲಿನ ಸ್ಥಿತಿಗತಿಯ ಬಗ್ಗೆ ಬೇಸರವನ್ನು ವ್ಯಕ್ತಪಡಿಸಿದ್ದಾರೆ. ಶಿವರಾಮಯ್ಯ ಗಾಂಧೀಜಿಯವರನ್ನು ಪ್ರತಿನಿಧಿಸುತ್ತಾನೆ. ಶಿವರಾಮಯ್ಯನ ಮರಣದ ನಂತರ ಆ ಊರಿನ ಜನತೆ ಆತನ ವಿಚಾರಗಳನ್ನು ಅರ್ಥ ಮಾಡಿಕೊಂಡು ಊರಲ್ಲಿ ಶಿವರಾಮಯ್ಯ ಸ್ಮಾರಕ ಮಾಧ್ಯಮಿಕ ಶಾಲೆ, ರಸ್ತೆಗೆ ದೇಶಭಕ್ತ ಶಿವರಾಮಯ್ಯ ಮಾರ್ಗವೆಂದು, ಶಿವರಾಮಯ್ಯ ಭವನ ಹೀಗೆ ವಿವಿಧ ರೀತಿಯಲ್ಲಿ ಶಿವರಾಮಯ್ಯನನ್ನು ನೆನೆಯಲಾಯಿತು. ಬದುಕಿರುವವರೆಗೆ ಶಿವರಾಮಯ್ಯ ಒಬ್ಬ ಹುಚ್ಚನಾಗಿದ್ದ, ಸತ್ತ ಮೇಲೆ ದೇಶಭಕ್ತ, ಹುತಾತ್ಮ ಎಂದೆಲ್ಲಾ ಹೆಸರುಗಳು ಬಂದವು. ಇದು ಗಾಂಧೀಜಿಯನ್ನು ನೇರವಾಗಿಸಿಯೇ ಈ ಕಥೆಯನ್ನು ರಚನೆ ಮಾಡಿದ್ದಾರೆ ವ್ಯಾಸರಾವ್ ನಿಂಜೂರು. ಗಾಂಧೀ ಬದುಕಿರುವಾಗ ಅವರ ತತ್ವಗಳು, ಆದರ್ಶಗಳು ಹೆಚ್ಚು ಜನರಿಗೆ(ವಿದ್ಯಾವಂತ) ಬೇಡವೆನಿಸಿತ್ತು. ಆದರೆ ಅವರು ತೀರಿಹೋದ ಸಮಾಜದಲ್ಲಿ ಜನತೆ ಅವರ ವಿಚಾರಧಾರೆಗಳನ್ನು ಭಾಷಣ ಮಾಡುವುದರ ಮೂಲಕ, ಪುಸ್ತಕ ರೂಪದಲ್ಲಿ ಬರೆದಿಡುವ ಮೂಲಕ, ಅವರ ಹೆಸರಿನಲ್ಲಿ ಪ್ರಶಸ್ತಿ ಫಲಕಗಳನ್ನು ನೀಡುವುದರ ಮೂಲಕ, ಅವರ ಹೆಸರಿನಲ್ಲಿ ಯೋಜನೆಗಳನ್ನು ನಿರೂಪಿಸುವುದರ ಮೂಲಕ ತಮ್ಮ ತಮ್ಮ ಹೆಸರುಗಳನ್ನು ಗಳಿಸಿಕೊಳ್ಳುವ ತವಕದಲ್ಲಿದ್ದ ಈ ನಮ್ಮ ಸ್ವತಂತ್ರ್ಯ ಭಾರತದ ಜನತೆ ಎಂದು ಕಥೆಗಾರರು ಅಭಿವ್ಯಕ್ತಿಸಿದ್ದಾರೆ. ಇದೊಂದು ಉಡುಪಿಯ ಪ್ರಾದೇಶಿಕತೆಯ ಪ್ರಯೋಗಶೀಲ ಕಥೆಯಾಗಿದೆ. ಸ್ವತಂತ್ರ ಭಾರತದಲ್ಲಿ ಗಾಂಧಿಯವರು ಹೇಗೆ ಪ್ರಕ್ರಿಯೆಗೊಳ್ಳುತ್ತಾರೆ ಎಂಬುದನ್ನು ಇಲ್ಲಿ ಚಿತ್ರಿಸಿದ್ದಾರೆ.

ಬೆಸಗರಹಳ್ಳಿ ರಾಮಣ್ಣ ಅವರ 'ಒಂದು ಹುಡುಗನಿಗೆ ಬಿದ್ದ ಕನಸು' ಎಂಬ ಕಥಾಸಂಕಲನದ 'ಗಾಂಧಿ' ಮತ್ತು 'ಪ್ರಜಾಪ್ರಭುತ್ವದ ಮೂರು ಮಂಗಗಳು' ಈ ಕಥೆಗಳು ಪ್ರಸಿದ್ಧವಾಗಿವೆ. 'ಗಾಂಧಿ' ಈ ಕಥೆ ಹಲವಾರು ಪ್ರಾತಿನಿಧಿಕ ಸಂಕಲನಗಳಿಗೆ ಆಯ್ಕೆಯಾಗಿ ತುಂಬ ಪರಿಚಿತಗೊಂಡಿದೆ.

'ಗಾಂಧಿ' ಕಥೆಯಲ್ಲಿ ಮಹಾತ್ಮ ಗಾಂಧಿಯ ಹೆಸರು ಹೊತ್ತಿರುವ ಹುಡುಗ ಕರಿಸಿದ್ದೇಗೌಡನ ಏಕೈಕ ಮೊಮ್ಮಗ ಕರಿಸಿದ್ದೇಗೌಡನ ಮನೆತನದಲ್ಲಿ ಉಳಿದಿರುವ ಒಂದೇ ಒಂದು ಕುಡಿ. ಈ 'ಗಾಂಧಿ' ಎಂಬ ಹೆಸರಿನ ಹುಡುಗ ಎಳೆವಯಸ್ಸಿನಲ್ಲಿ ರೋಗದಿಂದ ಬಳಲುತ್ತಿದ್ದಾನೆ. ತನ್ನ ರೋಗಕ್ಕೆ ಚಿಕಿತ್ಸೆ ಪಡೆಯಲು ಹಲವು ಮೈಲಿ ದೂರವಿರುವ ಪಕ್ಕದೂರಿನ ಆರೋಗ್ಯ ಕೇಂದ್ರಕ್ಕೆ ಆತ ತನ್ನ ತಾಯಿಯೊಂದಿಗೆ ನಡೆದುಕೊಂಡು ಹೋಗಬೇಕಾಗುತ್ತದೆ. ಕರಿಸಿದ್ದೇಗೌಡ ತನ್ನ

ಮೊಮ್ಮಗನನ್ನು ಉಳಿಸಿಕೊಳ್ಳಲು ಇದ್ದ ಒಂದೇ ಹಲಸಿನ ಮರವನ್ನು ಮಾರಿದರೂ ಅದರಿಂದ ಪ್ರಯೋಜನವಾಗುವುದಿಲ್ಲ. ಗಾಂಧಿ ಚಿಕ್ಕ ವಯಸ್ಸಿನವನಾದರೂ ನೋವು ನಿರಾಸೆಗಳಲ್ಲಿಯೂ ವಿಚಿತ್ರವಾದ ಸೀಮಿತತೆಯನ್ನು ತೋರುತ್ತಾನೆ. ಗಾಂಧಿ ಎಂಬ ಹೆಸರನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುತ್ತಾರೆ.

"ಈ ಕತೆಯ ಆಶಯ ಸ್ಫೋಟಕವಾಗಿದ್ದರೂ ಅದನ್ನು ನಿರ್ವಹಿಸುವಲ್ಲಿ ಅವರು ತೋರುವ ಸಂಯಮ ಅದ್ಭುತವಾದದ್ದು. ನಮ್ಮ ಸಾಮಾಜಿಕ ಸಂಸ್ಥೆಗಳ ಅಮಾನವೀಯ ನಿರ್ಲಕ್ಷ್ಯ ಹಾಗೂ ಕ್ರೌರ್ಯಗಳನ್ನು ಈ ಕತೆಯಷ್ಟು ಪರಿಣಾಮಕಾರಿಯಾಗಿ ಅನಾವರಣಗೊಳಿಸಿದ ಕಥೆಗಳು ಬಹಳಷ್ಟಿಲ್ಲ" ಎಂದು ಜಿ.ಎಸ್. ಆಮೂರ ಅವರು 'ಗಾಂಧಿ' ಕಥೆಯನ್ನುದ್ದೇಶಿಸಿ ಅಭಿಪ್ರಾಯಿಸಿದ್ದಾರೆ (ಆಮೂರ. ಜಿ.ಎಸ್.; ೨೦೦೩; ಪು. ೩೭೬) .

ಮಹಾತ್ಮ ಗಾಂಧೀಜಿಯ ಹೆಸರನ್ನು ಇಟ್ಟುಕೊಂಡವರ ಸ್ಥಿತಿ ಸಮಾಜದಲ್ಲಿ ಅದು ಸ್ವಾತಂತ್ರ್ಯ ನಂತರದ ಭಾರತದಲ್ಲಿ ಹೇಗಿರುತ್ತದೆ ಎಂಬುದನ್ನು ಈ ಕಥೆ ವಿವರಿಸುತ್ತದೆ. ಗಾಂಧಿ ಹೆಸರಿನ ಹುಡುಗನನ್ನು ಅವನ ತಾಯಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ವೈದ್ಯಾಧಿಕಾರಿ -

" "ಇವನ ಹೆಸರೇನಮ್ಮ?"

"ಗಾಂಧಿ ಸ್ವಾಮಿ!"

"ಏನಮ್ಮ ಹುಡುಗಾಟಕ್ಕೆ ನಾನು ಇವನ ಕಿವಿಗಳು ಗಾಂಧೀಜಿಗೆ ಇದ್ದಂತಿವೆ ಅಂದ್ರೆ ಇವನ್ನ ಸಾಕ್ಷಾತ್ ಗಾಂಧಿ ಅಂತ್ಲೇ ತಿಳ್ಕೊಂಡು ಬಿಟ್ರ?"

"ಇಲ್ಲ ಸ್ವಾಮಿ, ಸುಳ್ಳು ಹೇಳಿದ್ರೆ ನನ್ನ ನಾಲ್ಗೆಗೆ ಉಳಾ ಬೀಳ್ಲಿ; ಸೇದೋಗ್ಲಿ, ನನ್ನಾಣೆಗೂ ಇವನ ಹೆಸರು ಗಾಂಧಿ ಅಂತ."

"ನನ್ನ ಹೆಸರು ದೇವರ ಸತ್ಯವಾಗ್ಲೂ ಸಾ ಮಹಾತ್ಮ ಗಾಂಧಿ ಅಂತ" ಹುಡುಗ ಧೈರ್ಯವಾಗಿ, ದೃಢ ನಿಲುವಿನಿಂದ ನುಡಿದ. ವೈದ್ಯಾಧಿಕಾರಿ ಬೆಪ್ಪಾಗಿ ಹೋದ. ಅವನ ಈವರೆಗಿನ ವೈದ್ಯಕೀಯ ಅವಧಿಯಲ್ಲಿ ಈ ರೀತಿಯ ಕಾಕತಾಳ ನ್ಯಾಯವನ್ನು ಅವನು ಕಂಡಿರಲಿಲ್ಲ. ಕೇಳಿಯೂ ಇರಲಿಲ್ಲ. ತನ್ನ ಜೀವಿತದಲ್ಲಿ ಒದಗಿಬಂದ ಈ ಘಟನೆ ತೀರ ಅಪರೂಪ ಎನ್ನಿಸಿ ಇದನ್ನು ತನ್ನ ಸಹೋದ್ಯೋಗಿಗಳೊಂದಿಗೆ ಪಾಲು ಮಾಡಿಕೊಳ್ಳಲು ಮತ್ತು ಮುಂದೆ ತಾನು ಯಾರಿಗಾದರೂ ವರ್ಣಿಸಿದಾಗ ಇದೊಂದು ಬರಿ ಸುಳ್ಳೆಂದು ಹೇಳಿದರೆ, ಇಂಥಿಂಥವರು ಇದ್ದರು; ಬೇಕಾದರೆ ಕೇಳಿಕೊಳ್ಳಿ ಎಂದು ಸಾಕ್ಷಿಗಳನ್ನು ದಾಖಲುಪಡಿಸಿಕೊಳ್ಳಲು ಜವಾನನ್ನು ಜೋರಾಗಿ ಕರೆದು ಹೇಳಿದ.

"ನೋಡೋ ನಾಯ್ಡು, ನರಸಿಂಹಮೂರ್ತಿ, ಸರಸಮ್ಮ ಇವರನ್ನು ಬೇಗನೆ ನಾನು ಬರ ಹೇಳ್ದೆ ಅಂತ ಕೂಗಯ್ಯ". ಎಲ್ಲರೂ ಬಂದರು. ವೈದ್ಯಾಧಿಕಾರಿ ಹೇಳಿದ್ದನ್ನು ಕೇಳಿ ಕಿಸಕ್ಕನೆ ನಕ್ಕು

ಬಿಟ್ಟರು. ಕುಟುಂಬ ಯೋಜನೆಯ ವಿಸ್ತರಣಾಧಿಕಾರಿಯಾಗಿ ಕೆಲಸಕ್ಕೆ ಸೇರಿದ ನರಸಿಂಹಮೂರ್ತಿ ತಾನು ಇದನ್ನು ನಂಬುವುದಿಲ್ಲ ಎನ್ನುವಂತೆ ಕಿಸಕ್ಕನೆ ನಕ್ಕ. ವೈದ್ಯಾಧಿಕಾರಿಗೆ ಸ್ವಲ್ಪ ಕೋಪ ಕೆರಳಿ "ಬೇಕಾದ್ರೆ ಅವನ್ನೇ ಕೇಳ್ರಿ" ಎಂದ.

ನರಸಿಂಹಮೂರ್ತಿ ವೈದ್ಯಾಧಿಕಾರಿಗಳ ಕುರ್ಚಿಯ ಮೇಲೆ ಗೋಡೆಗೆ ತೂಗು ಹಾಕಿರುವ ಫೋಟೋ ಒಂದನ್ನು ತೋರಿಸಿ ಕೇಳಿದ: ಲೋ ಹುಡುಗ ಆ ಫೋಟೋ ಯಾರದಯ್ಯೊ"

"ಮಹಾತ್ಮ ಗಾಂಧಿಯೋರ್ದು ಸಾ, ಇದ ನಾ ಕಾಣನೇ?"

"ನಿನ್ನ ಹೆಸರೇನಯ್ಯಾ?"

"ಮಹಾತ್ಮ ಗಾಂಧಿ ಸಾ"

"ಸುಳ್ಳು ಹೇಳಬ್ಯಾಡ".

"ಸುಳ್ಳು ಹೇಳಿ ನಿಮ್‌ತಾವು ನಾನು ಯಾವ ಸಾಮ್ರಾಜ್ಯ ಈಸ್ಕೊ ಬೇಕು". ಎಲ್ಲರೂ ನಾಲಿಗೆ ಸೇದಿ ಹೋದವರಂತೆ ನಿಂತರು. ಮಹಾತ್ಮ ಗಾಂಧೀಜಿಯ ಫೋಟೋವನ್ನು ಒಮ್ಮೆ; ನಂತರ ರಕ್ತ ಮಾಂಸ ತುಂಬಿಕೊಂಡು ಉಸಿರಾಡುತ್ತ ನೋವನ್ನು ಅನುಭವಿಸುತ್ತ ನೆಲದ ಮೇಲೆ ತಮ್ಮ ಕಣ್ಣೆದುರಿಗೆ ನಿಂತಿರುವ ಮಹಾತ್ಮ ಗಾಂಧಿಯ ಕಡೆಗೊಮ್ಮೆ ದೃಷ್ಟಿಯನ್ನು ಬೀರುತ್ತ ನಿಂತರು. ವೈದ್ಯಾಧಿಕಾರಿ ಮತ್ತು ಅವನ ಬಳಗ ಜಗತ್ತಿನ ಮೇಲೆ ತೀರ ಸೋಜಿಗದ ವಿಷಯವನ್ನು ಕಂಡವರಂತೆ"(ಆಮೂರ.ಜಿ.ಎಸ್.; ೨೦೦೩; ಪು. ೩೩೮-೩೪೯). ನಿಂತರು. ಗಾಂಧಿಯ ಹೆಸರು ಗಾಂಧಿಗೇ ಸರಿ, ಅದನ್ನು ಮತ್ತೊಬ್ಬರು ಹೆಸರಿಟ್ಟುಕೊಂಡರೇ ಅದು ಸೋಜಿಗವಾಗಿ, ವ್ಯಂಗ್ಯವಾಗಿ ಕಾಣುತ್ತದೆ ಎಂಬುದನ್ನು ಇಲ್ಲಿ ಚಿತ್ರಿಸಲಾಗಿದೆ. ಗಾಂಧಿಯ ವ್ಯಕ್ತಿತ್ವಕ್ಕೆ ಮತ್ತು ಅವರ ಹೆಸರಿಗೆ ಮತ್ಯಾರು ಸರಿಸಾಟಿಯಲ್ಲ, ಅವರನ್ನು ಮೀರಿ ನಿಲ್ಲಲು ಯಾರಿಂದಲೂ ಸಾಧ್ಯವಿಲ್ಲ ಎಂಬ ತಾತ್ವಿಕವಾದ ಧ್ವನಿ ಇಲ್ಲಿ ಮೂಡುತ್ತದೆ. ಗಾಂಧೀಜಿಯ ಹೆಸರು ಇಲ್ಲಿ ವ್ಯಂಗ್ಯಕ್ಕೆ ಒಳಗಾದರೂ ಅವರು ಒಬ್ಬ ಕಾಲಾತೀತ ಮನುಷ್ಯನಾಗಿ, ಶಕ್ತಿಯಾಗಿ ಮತ್ತು ಸಂಕೀರ್ಣ ವ್ಯಕ್ತಿಯಾಗಿ ಪ್ರತಿಧ್ವನಿಸಲಾಗಿದೆ.

ಬೆಸಗರಹಳ್ಳಿ ರಾಮಣ್ಣ ಅವರು ಗಾಂಧಿ ಕುರಿತು 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ಎಂಬ ಮತ್ತೊಂದು ಕಥೆ ರಚಿಸಿದ್ದಾರೆ. ಇದು ಮೂರು ಮಂಗಗಳ ಮೂಲಕ ಗಾಂಧೀಜಿಯವರ ಕೆಟ್ಟದ್ದನ್ನು ನೋಡಬಾರದು, ಕೆಟ್ಟದ್ದನ್ನು ಮಾತಾಡಬಾರದು, ಕೆಟ್ಟದ್ದನ್ನು ಕೇಳಬಾರದು ಎಂಬುದನ್ನು ಮತ್ತು ಶಾಂತಿ, ಅಹಿಂಸೆ ತತ್ವಗಳನ್ನು ಪ್ರತಿಪಾದಿಸುತ್ತದೆ.

ಮಂಚಸ್ವಾಮಿ ಎಂಬ ಯುವಕನು ಗಾಂಧೀಜಿ ನಡೆಯೋದು ಹೇಗೆ, ಇಂದಿರಾಗಾಂಧಿ ಭಾಷಣ ಮಾಡೋದು ಹೇಗೆ ಇತ್ಯಾದಿಗಳನ್ನು ಮೂರು ಕೋತಿಗಳ ಮೂಲಕ ಬೀದಿ ಬೀದಿಗಳಲ್ಲಿ ಆಡಿಸುತ್ತಾನೆ. ಆಗ ದೇಶದಲ್ಲಿ ತುರ್ತುಪರಿಸ್ಥಿತಿ ಜಾರಿಯಾಗಿತ್ತು. ಇಂತಹ ಸಂದರ್ಭದಲ್ಲಿ ಒಬ್ಬ

ಪೊಲೀಸ್ ಕಾನ್‌ಸ್ಟೇಬಲ್ ಈತನನ್ನು ಮೊಸಾ ಪ್ರಕಾರ ಬಂಧಿಸಿ ಸ್ಟೇಷನ್‌ಗೆ ತರುತ್ತಾನೆ. ಅಲ್ಲಿ ವಿಚಾರಿಸುವ ಸಂದರ್ಭದಲ್ಲಿ ಕೋತಿಯಾಡಿಸುವನು ಇನ್‌ಸ್ಪೆಕ್ಟರ್ ಎದುರು ಹೆಚ್ಚಾಗಿ ವಾದಿಸಿದ್ದರಿಂದ ಕಾನ್‌ಸ್ಟೇಬಲ್ ಒಂದು ಸಾರಿ ಹೊಡೆಯುತ್ತಾನೆ. ಆ ಸಂದರ್ಭದಲ್ಲಿ "ಕೋತಿಗಳು 'ಗುರ್' ಎಂದು ಗಕ್ಕನೆ ತಿರುಗಿ, ದಫೇದಾರನ ಕಡೆ ಚೆಂಗನೆ ಹಾರಿದವು. ದಫೇದಾರ ತನ್ನ ಕೈಯಲ್ಲಿನ ಲಾಠಿಯಿಂದ "ಉಡೀ ಉಡೀ ಹಾಳಾಗೋದೋವ" ಎಂದು ಅರಚಲು ಪ್ರಾರಂಭಿಸಿದಂತೆಯೇ! ಮಂಗ ಕೂಗಿಕೊಂಡ: "ರಾಮ, ಸೀತೆ, ಅಭಿಮನ್ಯು! ಗಾಂಧಿ ತಾತಾ ಏನು ಹೇಳಿದ್ರು" ಎಂದದ್ದೇ ತಡ: ಒಂದು ಗಂಡು ಕೋತಿ ಇನ್ನೊಂದು ಗಂಡುಕೋತಿಗೆ ಬಲವಾಗಿ ಕೆನ್ನೆಗೆ ಬಾರಿಸಿತು. ಹೊಡೆಸಿಕೊಂಡದ್ದು, ಹೊಡೆದ ಕೋತಿಗೆ ಪ್ರತಿಕಾರ ಮಾಡುವ ಬದಲು ತನ್ನ ಎಡ ಕೆನ್ನೆಯನ್ನು ತೋರಿಸಿತು. ಅದಕ್ಕೂ ಏಟು ಬಿತ್ತು. ಏಟಿನ ಮೇಲೆ ಏಟು ಬಿದ್ದರೂ ಪ್ರತೀಕಾರ ಎಸಗಲಿಲ್ಲ. ಬದಲು ಗಂಭೀರವಾಗಿ ಮಹಾತ್ಮಗಾಂಧಿಯವರು ಬೋಧಿಸಿದ ಸತ್ಯಾಗ್ರಹವನ್ನು ಪ್ರತಿಪಾದನೆ ಮಾಡುವ ರೀತಿಯಲ್ಲಿ ಕುಳಿತುಬಿಟ್ಟಿತು! ಇನ್‌ಸ್ಪೆಕ್ಟರಿಗೆ ಆದ ಆಶ್ಚರ್ಯ ಅಷ್ಟಿಷ್ಟಲ್ಲ, ಸತ್ಯಾಗ್ರಹ! ಅದೂ ಕೋತಿಗಳಿಂದ!! ಮನುಷ್ಯ ಮನುಷ್ಯನ ಮೇಲೆ ದೌರ್ಜನ್ಯ ಮಾಡಿದ್ದಕ್ಕಾಗಿ ಕೋತಿಗಳಿಂದ ಮಹಾತ್ಮನ ತತ್ವ ಪ್ರತಿಪಾದನೆ!"(ರಾಮಣ್ಣ ಬೆಸಗರಹಳ್ಳಿ; ೧೯೮೧; ಪು. ೫೬-೫೭). ಮಾಡಲು ಮುಂದಾದವು. ಈ ಕೋತಿಗಳ ಮುಖಾಂತರ ಮಹಾತ್ಮ ಗಾಂಧಿಯವರು ಬೋಧಿಸಿದ ಅಹಿಂಸೆಯ ತತ್ವಗಳನ್ನು ಪ್ರತಿಪಾದಿಸಲಾಗಿದೆ. ಗಾಂಧೀಜಿಯ ತತ್ವಗಳನ್ನು ಮನುಷ್ಯನು ಮಾತ್ರವಲ್ಲದೇ ಪ್ರಾಣಿಗಳು ಸಹ ಸುಲಭವಾಗಿ ಕಲಿತು ಅನುಸರಿಸಬಹುದು. ಹಾಗಾಗಿ ಗಾಂಧಿ ತತ್ವಗಳು ಸರಳತೆಯಿಂದ ಕೂಡಿದ್ದು ವಿಶಾಲವಾದ ಅರ್ಥವನ್ನು ಹೊಂದಿರುತ್ತವೆ ಎಂಬುದನ್ನು ಚಿತ್ರಿಸಿದ್ದಾರೆ.

ನವ್ಯ ಬರಹಗಾರರು ಗಾಂಧಿಯವರನ್ನು ಅವರ ವಿಚಾರಧಾರೆಗಳನ್ನು ಒಪ್ಪಿಕೊಳ್ಳುತ್ತಾ ಗಾಂಧಿ ನಂತರದ ಸಮಾಜದಲ್ಲಿ ಅವುಗಳನ್ನು ಪ್ರಯೋಗಶೀಲತೆಗೆ ಮತ್ತು ವಿಮರ್ಶೆಗೆ ಒಳಪಡಿಸಲು ಪ್ರಯತ್ನಿಸುತ್ತಾರೆ. ಗಾಂಧಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡ ತಲೆಮಾರನ್ನು ಪ್ರಶ್ನಿಸಲು ಮುಂದಾಗುತ್ತಾರೆ ಮತ್ತು ಸ್ವತಂತ್ರ ಭಾರತದ ಜನಸಾಮಾನ್ಯರ ಮಧ್ಯೆ ಅವರನ್ನು ನೋಡಲು ಪ್ರಯತ್ನಿಸುತ್ತಾರೆ. ಹೀಗಾಗಿ ಗಾಂಧಿ ನವ್ಯರಿಗೆ ಪ್ರಯೋಗಶೀಲತೆಗೆ ನಿಲುಕದ ವ್ಯಕ್ತಿಯಾಗಿ ಪ್ರತಿಪಾದಿತಗೊಳ್ಳುತ್ತಾರೆ. ಅಮೂಲ್ಯವಾದ(ಗಾಂಧಿ) ಚಿನ್ನವನ್ನು ಒರೆಗೆ ಹಚ್ಚಿ ನೋಡುವ ಕಾರ್ಯ ಈ ಪಂಥದ ಬರಹಗಾರರು ಕೈಗೊಂಡಿದ್ದಾರೆ.

೫.೪. ದಲಿತ-ಬಂಡಾಯ ಕಥೆ

ಗಾಂಧೀಜಿಯವರನ್ನು ಕುರಿತು ದಲಿತ ಲೇಖಕರು ಕಥೆಗಳನ್ನು ರಚಿಸಿರುವುದು ತೀರ ವಿರಳ. ದಲಿತ-ಬಂಡಾಯ ಧೋರಣೆಯಲ್ಲಿ ಗಾಂಧೀಜಿ ಮತ್ತು ಅವರ ತತ್ವಗಳನ್ನಾಧರಿಸಿದ ಕಥೆಗಳನ್ನು ಈ ಅಧ್ಯಾಯದಲ್ಲಿ ನಿರೂಪಿಸಲಾಗಿದೆ. ಆದ್ದರಿಂದ ದಲಿತ ಬಂಡಾಯಗಳನ್ನು ಪ್ರತ್ಯೇಕಿಸಲಾಗಿಲ್ಲ. ೧೯೭೦ರ ದಶಕದಲ್ಲಿ ದಲಿತ ಸಾಹಿತ್ಯ, ನಂತರದ ದಿನಗಳಲ್ಲಿ ಬಂಡಾಯ ಸಾಹಿತ್ಯ ಆರಂಭವಾಯಿತು. ದಲಿತ, ಬಂಡಾಯದ ಸಂದರ್ಭದಲ್ಲಿ ಬಂದ ಕಥೆಗಳು ಕನ್ನಡ

ಕಥಾ ಸಾಹಿತ್ಯದಲ್ಲಿ ಹೊಸ ಅಲೆಯನ್ನುಂಟುಮಾಡಿವೆ. ಹಸಿವು, ದುಃಖ-ದುಮ್ಮಾನ, ಶೋಷಣೆ ಕಥೆಯ ವಸ್ತುಗಳಾದವು. "ನವ್ಯರನ್ನು ಬಿಟ್ಟು ಕನ್ನಡದಲ್ಲಿ ಪರಪ್ರಯೋಗಗಳನ್ನು ನಡೆಸಿ ಸಣ್ಣ ಕಥೆಗಳಿಗೆ ಭಿನ್ನ ಆಯಾಮವನ್ನು ಕೊಟ್ಟವರು ಎಂದರೆ ದೇವನೂರು ಮಹಾದೇವ"(ನಾಯಕ. ಜಿ.ಎಚ್. (ಸಂ); ೨೦೦೯; ಪು. ೧೬೪). ಎಂದು ಪ್ರೊ. ಎನ್.ಎಸ್. ರಘುನಾಥ್ ಅವರು ಅಭಿಪ್ರಾಯಿಸಿದ್ದಾರೆ. ಇಲ್ಲಿ ದಲಿತ ಪ್ರಜ್ಞೆಯ ತುಳಿತಕ್ಕೊಳಗಾದವರ, ಅನಾವರಣವಾಗದಿದ್ದ ಬದುಕು, ಆ ಬದುಕಿನ ಸಂಕೀರ್ಣಗಳು ಕಥೆಗಳಲ್ಲಿ ಮೈಪಡೆಯತೊಡಗಿದವು. ಹೊಸ ಸಂವೇದನೆ, ಅನುಭವಗಳು, ದೇಸೀಯತೆ ಮತ್ತು ಆಡುಭಾಷೆಯ ಬಳಕೆಯಿಂದಾಗಿ ಸಣ್ಣಕಥೆ ಹೊಸ ಆಯಾಮ ಪಡೆದುಕೊಂಡಿತು. ಇದೇ ಸಂದರ್ಭದಲ್ಲಿ ಮುಸ್ಲಿಂ ಬರಹಗಾರರೂ ಸಣ್ಣಕಥೆಗಳ ರಚನೆಯಲ್ಲಿ ತೊಡಗಿದರು.

ದಲಿತ - ಬಂಡಾಯ ಕಥೆಗಾರರಲ್ಲಿ ಪ್ರಮುಖವಾಗಿ ದೇವನೂರು ಮಹಾದೇವ, ಕುಂ.ವೀರಭದ್ರಪ್ಪ, ಅಮರೇಶ ನುಗಡೋಣಿ, ಮೊಗಳ್ಳಿ ಗಣೇಶ್, ಬಾಲಚಂದ್ರ ಘಾಣೇಕರ, ಗೋಪಾಲಗೌಡ ಕಲ್ಪಮಂಜರಿ, ಗೋಪಿನಾಥ ರೆಡ್ಡಿ, ನಾ. ಮೊಗಸಾಲೆ, ಕೇಶವರೆಡ್ಡಿ ಹಂದ್ರಾಳ ಮತ್ತು ಮುಸ್ಲಿಂ ಕಥೆಗಾರರಲ್ಲಿ ಫಕೀರ ಮಹಮದ್ ಕಟ್ಪಾಡಿ, ಬೋಳುವಾರು ಮಹಮದ್ ಕುಂಞ ಹೀಗೆ ಮುಂತಾದವರನ್ನು ಗುರುತಿಸಿಕೊಳ್ಳಲಾಗುತ್ತದೆ. ಇವರೆಲ್ಲಾ ದಲಿತ, ಬಂಡಾಯ, ಮುಸ್ಲಿಂ ಸಂವೇದನೆ ಹಾಗೂ ಸಾಮಾಜಿಕ ಇನ್ನಿತರ ಸಂವೇದನೆಗಳನ್ನಿಟ್ಟುಕೊಂಡು ಕಥೆ ರಚಿಸಿದ್ದರಂತೆ. ಒಬ್ಬ ರಾಷ್ಟ್ರನಾಯಕನೆಂದು ಎನಿಸಿಕೊಂಡ ಮಹಾತ್ಮ ಗಾಂಧಿಯನ್ನು ಕುರಿತು ಯಾವ ಬಗೆಯಲ್ಲಿ ಕಥೆ ರಚನೆ ಮಾಡಿದ್ದಾರೆ ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಬಾಲಚಂದ್ರ ಘಾಣೇಕರ ಅವರು ಗಾಂಧೀಜಿಯನ್ನು ಕುರಿತು 'ಗಾಂಧೀ ಹುಚ್ಚು!' ಕಥೆಯನ್ನು ರಚಿಸಿದ್ದಾರೆ. ಶ್ರೀಮಂತ ಕುಟುಂಬದಲ್ಲಿ ಜನಿಸಿದ ಶ್ಯಾಮನು ಗಾಂಧೀಜಿಯವರ ಚಿಂತನೆಗಳಿಂದ ಪ್ರಭಾವಿತನಾಗುತ್ತಾನೆ. ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ ಗಾಂಧೀಜಿಯ ರಚನಾತ್ಮಕ ಕಾರ್ಯಗಳಾದ ಖಾದಿ ಪ್ರಚಾರ, ಸ್ವದೇಶಿ ವಸ್ತುಗಳ ಪ್ರಚಾರ ಮಾಡಿ, ಸ್ವದೇಶಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದು. ಹೀಗೆ ಮುಂತಾದ ಕಾರ್ಯಗಳಲ್ಲಿ ತೊಡಗುತ್ತಾನೆ. ಇದಕ್ಕೆ ಶ್ಯಾಮನ ತಂದೆ ಭೀಮರಾಯರು ವಿರೋಧ ವ್ಯಕ್ತಪಡಿಸುತ್ತಾರೆ. ತಂದೆಯ ಮಾತನ್ನು ಕೇಳದೇ ಅವರ ವಿರೋಧ ಕಟ್ಟಿಕೊಂಡು ಚಳವಳಿಯಲ್ಲಿ ಮುಂದುವರೆಯುತ್ತಾನೆ. ಜೈಲುವಾಸವನ್ನು ಅನುಭವಿಸಿ ಸಫಲನಾಗುತ್ತಾನೆ. ಗಾಂಧಿ ಹುಚ್ಚಿನಿಂದ ತನ್ನ ಮಗ ದೇಶದಲ್ಲಿ ಹೆಸರುವಾಸಿಯಾದದ್ದನ್ನು ಕಂಡು ಭೀಮರಾಯರು ಮನಸ್ಸನ್ನು ಬದಲಾಯಿಸಿ ಗಾಂಧೀಜಿಯನ್ನು ಒಪ್ಪಿಕೊಳ್ಳುತ್ತಾರೆ. ಇದು ಈ ಕಥೆಯ ಸಾರಾಂಶ.

ಶ್ಯಾಮ ಗಾಂಧಿ ಹುಚ್ಚನ್ನು ಹತ್ತಿಸಿಕೊಂಡು ಸುಮ್ಮನೆ ಕೂಡಲಿಲ್ಲ. "ಚಹ ಕುಡಿಯುವುದನ್ನೂ, ಪರದೇಶಿ ಅರಿವೆಗಳನ್ನು ಧರಿಸುವುದನ್ನು ಬಿಟ್ಟ, ಕಾಲೇಜಿನ ಗೆಳೆಯರೆಲ್ಲರೂ ವಿಶ್ರಾಂತಿಯ ಕಾಲಕ್ಕೆ ಇಸ್ಪೇಟಿನಾಟವಾಡುತ್ತ ಕುಳಿತರೆ, ಇವನು ರಾಟೆಯಿಂದ ನೂಲುವನು"(ಬಾಲಚಂದ್ರ ಘಾಣೇಕರ; ೧೯೯೦; ಪು. ೨೩). ಹೀಗೆ ಗಾಂಧೀಜಿಯನ್ನು ಅನುಸರಿಸತೊಡಗಿದನು. ಇದೆಲ್ಲವನ್ನು ವಿರೋಧಿಸುತ್ತಿದ್ದ ಭೀಮರಾಯರು ಮಗ ಶ್ಯಾಮನಿಗೆ "ಬರಬರುತ್ತ ದೊಡ್ಡವನಾದೆ. ಗಾಂಧಿಗೊಂದು

ಹುಚ್ಚು ಹಿಡಿದು ತಿರುಗಾಡಹತ್ತಿದ್ದಾನೆ. ನಿನಗೂ ಹಿಡಿಯಿತೇನೋ?"(ಅದೇ; ಪು. ೨೪) ಎಂದು ಮನಬಂದಂತೆ ಬೈಯುತ್ತ ಗಾಂಧೀಜಿಯನ್ನು ಹುಚ್ಚನೆಂದು ಮೂದಲಿಸತೊಡಗಿದನು.

ಶ್ಯಾಮನಿಗೆ ಹೆಣ್ಣು ಕೊಡುವ ವಾಸುದೇವರಾಯರು ಭೀಮರಾಯನೊಂದಿಗೆ "ಇನ್ನಾದರೂ ಶ್ಯಾಮನು ತನ್ನ ಹುಚ್ಚಾಟಿಕೆಯನ್ನು ಬಿಟ್ಟು ಸುಖದಿಂದ ಕಾಲ ಕಳೆಯಬೇಕೆನ್ನುತ್ತಾನೋ? ಪುನಃ ಹೀಗೆಯೇ ಗಾಂಧಿ ಗಾಂಧಿ ಎನ್ನುತ್ತ ಸನ್ಯಾಸಿಯಂತೆ ತಿರುಗಾಡಬೇಕೆನ್ನುತ್ತಾನೋ?"(ಅದೇ; ಪು. ೨೮) ಎಂದು ಗಾಂಧೀಜಿಯನ್ನು ಒಬ್ಬ ಸನ್ಯಾಸಿಯನ್ನಾಗಿ ಪರಿಭಾವಿಸುತ್ತಾರೆ. ಶ್ಯಾಮ ದೇಶ ಸೇವೆ ಮಾಡುವ ಮನಸ್ಥಿತಿವುಳ್ಳ ವಿಮಲೆಯನ್ನು ಕೈಹಿಡಿಯುತ್ತಾನೆ. ವಿವಾಹದ ನಂತರ ಕಾಯಿದೆ ಭಂಗ ಚಳವಳಿಯಲ್ಲಿ ವಿಮಲೆಯ ಪ್ರೋತ್ಸಾಹದೊಂದಿಗೆ ಭಾಗವಹಿಸುತ್ತಾನೆ. ಇದಕ್ಕೆ ವಿರೋಧಿಸಿದ ಭೀಮರಾಯರಿಗೆ ಶ್ಯಾಮ "ಅಪ್ಪಾ, ಮುಪ್ಪಿನ ಮುದುಕನಾದ ಗಾಂಧಿಯು ಇಷ್ಟೊಂದು ಕಷ್ಟ ಪಡುತ್ತಿರುವಾಗ ತರುಣನಾದ ನನ್ನಿಂದ ಸುಮ್ಮನೆ ಕೂಡುವುದು ಎಂದಿಗೂ ಆಗದು"(ಅದೇ; ಪು. ೨೫) ಎಂದು ಹೇಳಿ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರುತ್ತಾನೆ ಮತ್ತು ಕೆಲವು ದಿನಗಳ ನಂತರ ವಿಮಲೆಯೂ ಜೈಲು ಸೇರುತ್ತಾಳೆ. ಹೀಗೆ ಗಾಂಧಿಯನ್ನು ದೇಶಸೇವೆಗೆ, ಚಳುವಳಿಗೆ ಯುವಶಕ್ತಿಯನ್ನು ಸಂಘಟಿಸಿದ ಗಾಂಧಿಯನ್ನು ಸ್ವಾತಂತ್ರ್ಯ ಹೋರಾಟದ ಮಹಾನಾಯಕನಾಗಿ ಕಂಡರಿಸುತ್ತಾರೆ.

ದೇಶಕ್ಕಾಗಿ ಹೋರಾಡಿ ಜೈಲು ಸೇರಿದ ಶ್ಯಾಮ - ವಿಮಲೆಯರು ಮಹಾದೇಶಭಕ್ತರಾದರು. ಇವರು ಭಾವಚಿತ್ರದೊಂದಿಗೆ ಪತ್ರಿಕೆಯಲ್ಲಿ ದೊಡ್ಡ ಸುದ್ದಿಯನ್ನು ಮಾಡುತ್ತಾರೆ. ಪತ್ರಿಕೆಯಲ್ಲಿ ಮಗ-ಸೊಸೆಯರ ಭಾವಚಿತ್ರ ನೋಡಿದ ಭೀಮರಾಯರಿಗೆ "ಒಂದೆರಡು ನಿಮಿಷಗಳಲ್ಲಿಯೇ ಭೀಮರಾಯರ ಮುಖದ ಮೇಲೆಯೂ ಗಾಂಧಿ ಹುಚ್ಚು ಮೂಡಿ ಬಂದಿತು. ತಮ್ಮನ್ನು ತಾವೇ ಹಳಿದುಕೊಂಡರು. .....ತಮ್ಮ ಪಾಪ-ಪರಿಹಾರಾರ್ಥವಾಗಿ ಆ ಕ್ಷಣದಿಂದಲೇ ಖಾದಿ ಧರಿಸಹತ್ತಿದರು" (ಅದೇ; ಪು. ೨೯). ಗಾಂಧೀಜಿಯನ್ನು ವಿರೋಧಿಸುತ್ತಿದ್ದ ಭೀಮರಾಯರು ಪರಿವರ್ತನೆಗೊಂಡು ಗಾಂಧಿಯನ್ನು ಒಪ್ಪಿಕೊಳ್ಳುತ್ತಾರೆ. ನಾಲ್ಕು ತಿಂಗಳ ನಂತರ ಶ್ಯಾಮ ವಿಮಲೆಯರು ಬಿಡುಗಡೆಯಾಗುತ್ತಾರೆ. ಇವರನ್ನು ಮೆರವಣಿಗೆಯ ಮೂಲಕ ಮನೆಗೆ ಕರೆತಂದಾಗ ಭೀಮರಾಯರು ಶ್ಯಾಮನನ್ನು ಅಪ್ಪಿಕೊಂಡು, "ಕಂದಾ ನನ್ನ ಅಪರಾಧವನ್ನು ಕ್ಷಮಿಸು! ಮಹಾತ್ಮರನ್ನು ಹುಚ್ಚರೆಂದು ಬಗೆಯಲಿಕ್ಕೆ ನನ್ನ ಮನಸ್ಸು ಹೇಸಲಿಲ್ಲ!"(ಅದೇ; ಪು. ೪೧) ಎಂದು ಹೇಳಿ ಕಣ್ಣೀರು ಸುರಿಸುತ್ತಾ ಪಶ್ಚಾತ್ತಾಪ ಪಡುತ್ತಾನೆ. ಅದಕ್ಕೆ ಶ್ಯಾಮ ಅಪ್ಪಾ! ನಿಮ್ಮಲ್ಲಿ ಏನೂ ಅಪರಾಧವಿಲ್ಲ, ಮಹಾತ್ಮರ ತತ್ವವು ಒಮ್ಮೆಲೇ ಎಲ್ಲರ ತಲೆಯಲ್ಲಿ ಸೇರುವುದಿಲ್ಲ. ಇಡೀ ಹಿಂದೂ ಜನಾಂಗವು ಮಹಾತ್ಮರ ಹೇಳಿಕೆಯ ಪ್ರಕಾರ ನಡೆಯಹತ್ತಿದರೆ ಅದರ ಮುಂದೆ ಯಾರ ಆಟವೂ ನಡೆಯುವಂತಿಲ್ಲ ಎಂದು ಹೇಳಿ ಗಾಂಧಿ ತತ್ವಗಳಲ್ಲಿರುವ ಅಂತಃಶಕ್ತಿಯನ್ನು ವಿವರಿಸುತ್ತಾನೆ. ಹೀಗಾಗಿ ಗಾಂಧೀಜಿ ಅವರ ತತ್ವಗಳು ಹೆಚ್ಚು ಮೌಲ್ವಿಕವಾದವುಗಳು. ಅವರ ವ್ಯಕ್ತಿತ್ವ ವಿಶಾಲವಾದದ್ದು ಎಂಬುದನ್ನು ಇಲ್ಲಿ ಚಿತ್ರಿಸಿದ್ದಾರೆ.

ವಿಶೇಷ ವಸ್ತುವಿನೊಂದಿಗೆ ಗೋಪಾಲಗೌಡ ಕಲ್ವಮಂಜರಿ ಅವರು 'ಮಹಾತ್ಮ ಗಾಂಧಿ ಗಿರಿವಿ ಅಂಗಡಿ' ಎಂಬ ಕಥೆಯನ್ನು ರಚಿಸಿದ್ದಾರೆ. ಈ ಕಥೆಯಲ್ಲಿ ಸಮಾಜದಲ್ಲಿ ಗಾಂಧೀಜಿಯ ಹೆಸರು ವ್ಯಾಪಾರದ ವಸ್ತುವಾಗಿ ದುರ್ಬಳಕೆಯಾಗುವುದನ್ನು ಚಿತ್ರಿಸಲಾಗಿದೆ. ಸಿದ್ರಾಮ ಎಂಬಾತನು ವ್ಯಾಪಾರದ ಸಲುವಾಗಿ ಗಿರಿವಿ ಅಂಗಡಿ ತೆರೆಯುತ್ತಾನೆ. ಆ ಅಂಗಡಿಗೆ 'ಮಹಾತ್ಮ ಗಾಂಧಿ ಗಿರಿವಿ ಅಂಗಡಿ' ಎಂದು ಹೆಸರಿಡುತ್ತಾನೆ. ಈ ಹೆಸರನ್ನು ಸಿದ್ರಾಮನ ಬಾಲ್ಯದ ಗುರುಗಳು ನೋಡಿ ಗಾಬರಿಯಾದದ್ದಕ್ಕಾಗಿ "ಯಾಕ್ ಸಾ ಹೆಸರು ನೋಡಿ ಗಾಬ್ರಿ ಬಿದ್ರಿ? ಸತ್ಯವಾದ ಬಡ್ಡಿ, ವ್ಯವಹಾರ ನಡೆಯಿಸಬೇಕು ಅಂತ್ಲೆ ಈ ಹೆಸ್ರು ಇಕ್ಕಿರೋದು. ಬೇರೆಯವರಂಗೆ ಲೆಕ್ಕಾದಾಗೊಂದು ಬುಕ್ಕದಾಗೊಂದು ಮಾಡಾಕಿಲ್ಲ ಸಾ"(ಗೋಪಾಲಗೌಡ ಕಲ್ವಮಂಜರಿ; ೨೦೦೧; ಪು. ೯) ಎಂದು ಹೇಳುತ್ತಾನೆ. ಇಂಥ ಶಿಷ್ಯನಿಗೆ ಪಾಠ ಹೇಳಿಕೊಟ್ಟಿದ್ದಕ್ಕೂ ಸಾರ್ಥಕವಾಯ್ತು ಎಂದು ಆತನ ಗುರು ಸಂತೋಷಿಸುತ್ತಾನೆ. ಗಾಂಧಿ ಸತ್ಯ, ಪ್ರಾಮಾಣಿಕಥೆಯ ಪ್ರತೀಕವೆಂದು ಈ ಸಾಲುಗಳು ಹೇಳುತ್ತವೆ.

ಊರಿನ ಕೆಲವು ಪುಂಡು ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಗಿರಿವಿ ಅಂಗಡಿಯ 'ಮಹಾತ್ಮ ಗಾಂಧಿ ಗಿರಿವಿ ಅಂಗಡಿ' ಎಂಬ ಬೋರ್ಡನ್ನು ರಾತ್ರೋರಾತ್ರಿ ಜಜ್ಜಿ ಹಾಕುತ್ತಾರೆ ಮತ್ತು "ಲೇ ಬಂಚೋತ್ ಭಾರತ ದೇಶದ ಪಿತಾಮಹ ಮಹಾತ್ಮ ಗಾಂಧೀನಾ ನೀನು ಸ್ವಾರ್ಥಕ್ಕಾಗಿ ಗಿರಿವಿ ಇಟ್‌ಕೊಳ್ಳೋದೆ? ಹುಷಾರ್! ಮೊದಲು ಈ ಹೆಸ್ರು ಬದ್ಲಾಯಿಸು. ಇಲ್ದಿದ್ರೆ ಹುಟ್‌ಲಿಲ್ಲ ಅನ್ನಿಸಿಬಿಡ್ತೀವಿ"(ಅದೇ; ಪು. ೮). ಎಂದು ಬೆದರಿಕೆಯ ಚೀಟಿಯನ್ನು ಇಟ್ಟು ಹೋಗ್ತಾರೆ. ಈ ಸಂಗತಿಯನ್ನು ಸಿದ್ರಾಮ ತನ್ನ ಗುರುವಿಗೆ ತಿಳಿಸಿದಾಗ ಅವರು ಅಂಗಡಿಯ ಹೆಸರನ್ನು ಬದಲಾಯಿಸಲು ಸೂಚಿಸುತ್ತಾರೆ. ಸಿದ್ರಾಮ ಅದಕ್ಕೆ ವಿರೋಧಿಸಿ "ಇಡೀ ಇಂಡಿಯಾ ದೇಶಾನೆ ಒಂದು ದೊಡ್ಡ ಮಹಾತ್ಮ ಗಾಂಧಿ ಗಿರಿವಿ ಅಂಗಡಿ! ಪಕ್ಷ ಯಾವುದೇ ಇರ್ಲಿ ರವಷ್ಟೂ ಎಗ್ಗಿಲ್ಲದೆ ಗಾಂಧಿ ತಾತನ್ನ ಮುಂದೆ ಮಡಗಿಕಂಡೆ ಎಲ್ರು ಓಟು ನಾಟಕ ಆಡೋದು. ಓಟು ಬರೋ ವರ್ಗು ಇವರಿಗೆಲ್ಲ ಗಾಂಧಿ ತಾತ್ನೆ ಆದರ್ಶ. ಬಂದ ಮ್ಯಾಲೆ.....? ನಾನು ಬಿಡಿಸಿ ಹೇಳಬೇಕಾಗಿಲ್ಲ ಎಲ್ಲ ನಿಮಗೂ ಗೊತ್ತು"(ಅದೇ; ಪು. ೧೦). ಎಂದು ಗಾಂಧಿ ಹೆಸರಿನ ದುರ್ಬಳಕೆಯನ್ನು ವಿವರಿಸುತ್ತಾನೆ. ಈ ಮಾತುಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ಇಂದು ರಸ್ತೆ, ಪಾರ್ಕ್, ಕಟ್ಟಡ, ಬಡಾವಣೆ ಹೀಗೆ ಇತ್ಯಾದಿ ವಲಯಗಳಲ್ಲಿ ಗಾಂಧಿಯ ಹೆಸರನ್ನು ಕಾಣಬಹುದು.

ಸಿದ್ರಾಮನ ಕಟು ನಿರ್ಧಾರವನ್ನು ಮನಗಂಡು ಊರಿನ ದೊಡ್ಡವರೆಲ್ಲ ಸಿದ್ರಾಮನಿಗೆ ಅಂಗಡಿಯ ಹೆಸರನ್ನು ಬದಲಾಯಿಸಲು ಹೇಳಿ ಆತನಿಗೆ ಪ್ರಜಾಸೇವೆ ಮಾಡಲು ಮುನಿಸಿಪಾಲಿಟಿ ಚುನಾವಣೆಯಲ್ಲಿ ಸೀಟು ಕೊಡುತ್ತೇವೆ ಎಂದು ಆಸೆ ತೋರಿಸುತ್ತಾರೆ. ಅದನ್ನು ಸಿದ್ರಾಮ ತನ್ನ ಗುರುವಿಗೆ ಹೇಳಿದಾಗ "ಹಂಗಾದರೆ ಎಲ್ಲರಂಗು ನೀನೂ ಮಹಾತ್ಮ ಗಾಂಧಿನ ಮುಂದೆ ಇಟ್ಟುಕೊಂಡು ಓಟು ಕೇಳೋಕೆ ಹೊರಡಬೇಕು ಅನ್ನು ಎಂದು ಕೇಳಿದಾಗ ಕೇಳೂ ಕೇಳಿಸದೆ ಹಾಗೇ ಸಾ ಅದೆಲ್ಲ ಈಗ ಯಾಕೆ. ನಿಮ್ ಶಿಷ್ಯ-ಗೆಲ್ಲಲಿ ಅಂತ ಆಶೀರ್ವಾದ ಮಾಡಿ

ಸಾ"(ಅದೇ; ಪು. ೧೧) ಎಂದು ಹೇಳಿ ಹೋಗುತ್ತಾನೆ. ವ್ಯಾಪಾರಸ್ಥರಿಗೆ, ರಾಜಕಾರಣಿಗಳಿಗೆ ಇತ್ಯಾದಿ ಸ್ವಾರ್ಥಪರ ವರ್ಗದವರಿಗೆ ಗಾಂಧೀಜಿ ಮತ್ತು ಅವರ ತತ್ವಗಳು ವ್ಯಾಪಾರದ ವಸ್ತುಗಳಾಗಿವೆ ಎಂದು ಗೋಪಾಲಗೌಡ ಕಲ್ವಮಂಜರಿ ಅವರು ಕಂಡರಿಸಿದ್ದಾರೆ.

ಕುಂ. ವೀರಭದ್ರಪ್ಪ ಅವರು ಗಾಂಧೀಜಿಯವರ ನಿಜ ಜೀವನದ ಕನ್ನಡಿಯಂತೆ 'ಕೂರ್ಮಾವತಾರ' ಕಥೆಯನ್ನು ರಚಿಸಿದ್ದಾರೆ. ಈ ಕಥೆ ಕಿರುತೆರೆ ಮತ್ತು ಬೆಳ್ಳಿತೆರೆಯನ್ನು ಕಂಡಿದೆ. ಕಥೆಯೊಳಗೆ ಗಾಂಧಿ ಜೀವನಾಧಾರಿತ ಚಿತ್ರೀಕರಣ ನಡೆಯುತ್ತದೆ. ಗಾಂಧೀಜಿ ಪಾತ್ರಧಾರಿ ಆನಂದರಾಯರು ನಟನೆ ಮಾಡುತ್ತಲೇ ಜೀವನದಲ್ಲಿ ಗಾಂಧೀಜಿ ಆದರ್ಶಗಳನ್ನು ಮೈಗೂಡಿಸಿಕೊಂಡು ಅಭಿನವ ಗಾಂಧಿಯಾಗಿ ಬದಲಾಗುತ್ತಾರೆ. ಕುಟುಂಬಕ್ಕಿಂತ ದೇಶಸೇವೆಯೇ ದೊಡ್ಡದು ಎಂದು ಬದುಕಿದ ಗಾಂಧೀಜಿಗೆ ಆನಂದರಾಯರು ನನ್ನ ಹೆಂಡತಿ, ಮಗನನ್ನು ಅಲಕ್ಷಿಸಿ ತಮ್ಮ ಆಫೀಸಿನ ಕೆಲಸದಲ್ಲಿ ಮತ್ತು ಸಮಾಜ ಸೇವೆಯಲ್ಲಿ ತೊಡಗುತ್ತಾರೆ. ಇದರಿಂದ ಹೆಂಡತಿ, ಮಗ ಕಸ್ತೂರಿಬಾ ಮತ್ತು ಹರಿಲಲಾನಂತೆ ಮೌನ ಪ್ರತಿಭಟನೆ ನಡೆಸಿ ಅವರ ಕಣ್ಮುಂದೆ ಸಾಯುತ್ತಾರೆ.

ಅಹಿಂಸಾಮೂರ್ತಿಯಾದ ಆನಂದರಾಯರು ಪ್ರಾಣಿ ದಯಾ ಮಂಡಳಿಯ ಅಧ್ಯಕ್ಷರಾಗುತ್ತಾರೆ. ತನ್ನ ಸೊಸೆ ಶ್ರೀಕೃಷ್ಣ ಜನ್ಮಾಷ್ಟಮಿಯಂದು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಆ ಮಗುವಿಗೆ ಆನಂದರಾಯರು ಗೋಪಾಲಕೃಷ್ಣನೆಂದು ಹೆಸರಿಡುತ್ತಾರೆ. ಯಾಕೆಂದರೆ "ಹೆಂಡತಿ ಮಕ್ಕಳನ್ನು ಅಲಕ್ಷಿಸಿದರೆ ಕಷ್ಟವೆಂದೂಹಿಸಿ ಮೋಹನಗಾಂಧಿ ಎಂದು ಹೆಸರಿಡುವ ಧೈರ್ಯವನ್ನು ಮಾಡಲಿಲ್ಲ"(ವೀರಭದ್ರಪ್ಪ. ಕುಂ; ೨೦೧೦; ಪು. ೫೨೦). ಕೌಟುಂಬಿಕ ಒತ್ತಡಗಳಿಗೆ ಇಲ್ಲಿ ಗಾಂಧಿ ತತ್ವಗಳು, ಆದರ್ಶಗಳು ಜರ್ಜರಿತವಾಗುವುದನ್ನು ಕಥೆಗಾರರು ಚಿತ್ರಿಸಿದ್ದಾರೆ. ಗಾಂಧಿ ತತ್ವಗಳಿಗೆ ಮನೆಯೊಳಗೆ ಜಾಗವಿಲ್ಲ. ಅವುಗಳಿಗೆ ಮನೆಯ ಹೊರಗೆ ಅಂದರೆ ಸಮಾಜದಲ್ಲಿ ಸ್ಥಾನಮಾನವಿದೆ ಮತ್ತು ಈ ಗಾಂಧಿ ಚಿಂತನೆಗಳು ಕೌಟುಂಬಿಕ ಸಂಬಂಧಗಳನ್ನು ಅಂತರಗೊಳಿಸುತ್ತವೆ ಎಂಬುದು ಇಲ್ಲಿ ಧ್ವನಿಸುತ್ತದೆ. ಇದೊಂದು ಗಾಂಧಿ ತತ್ವಗಳ ಮಿತಿಯಾಗಿದೆ.

ತನ್ನ ಮೊಮ್ಮಗನ ದೆಸೆಯಿಂದ ಆನಂದರಾಯರು ಆಮೆಯನ್ನು ಸಾಕುತ್ತಾರೆ. ಅದರ ಆಹಾರಾಭ್ಯಾಸದಂತೆ ಮಳೆಹುಳ, ಬಸವನಹುಳ, ಮೃದ್ವಂಗಿ ಕಪ್ಪೆಗಳನ್ನು ನೀಡುತ್ತಿದ್ದರು. ದೈವಾಂಶವುಳ್ಳ ಆಮೆಗೆ ಜಲಚರಗಳನ್ನುಣಬಡಿಸಿದರೆ ಪಾಪವಿಲ್ಲವೆಂಬ ನಿಲುವಿನಿಂದ ಮೇಲಿನ ಹುಳಗಳನ್ನು ಅದಕ್ಕೆ ಆಹಾರವಾಗಿ ನೀಡುತ್ತಿದ್ದರು. ಜೈನ ಸಮಾಜದವರು ಏರ್ಪಡಿಸಿದ್ದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಆನಂದರಾಯರು ತಮ್ಮ ಜೇಬೊಳಗೆ ಮೃದ್ವಂಗಿ ಮತ್ತು ಕಪ್ಪೆಗಳನ್ನಿಟ್ಟುಕೊಂಡಿದ್ದ ಪರಿಣಾಮವಾಗಿ "ಹುತಾತ್ಮ ಗಾಂಧೀಜಿ ಗೋಡ್ಸೆಯನ್ನು ಹತ್ಯೆ ಮಾಡಿದರೆಂದೂ; ಸ್ವಾತಂತ್ರ್ಯೋತ್ತರವಾಗಿ ಬದುಕುತ್ತಲೇ ಇರುವ ಗಾಂಧೀಜಿ ಸ್ವಾತಂತ್ರ್ಯಪೂರ್ವ ಗಾಂಧೀಜಿಯವರಿಗಿಂತ ಹೆಚ್ಚು ಬಲಿಷ್ಠರಿವರೆಂದೂ ತಮ್ಮ ಭಾಷಣದಲ್ಲಿ ಹೇಳಿದರು" (ಅದೇ; ಪು. ೫೨೩). ಸ್ವಾತಂತ್ರ್ಯಪೂರ್ವದ ಗಾಂಧೀಜಿಗಿಂತ ಈ ಆಧುನಿಕ ಗಾಂಧಿ ಹೆಚ್ಚು

ಬಲಿಶಾಲಿಯಾಗುತ್ತಾರೆ ಎಂದು ಗಾಂಧೀವಾದಿಗಳನ್ನು ಕುಂ. ವೀರಭದ್ರಪ್ಪ ವ್ಯಂಗ್ಯವಾಗಿ ವಿಡಂಬಿಸಿದ್ದಾರೆ. ಪೂರ್ವದ ಗಾಂಧಿಗಳು ಸತ್ಯ, ಅಹಿಂಸೆ, ಮಾನವೀಯತೆ ಮುಂತಾದವುಗಳಲ್ಲೇ ಬದುಕಿದರು. ಆದರೆ ಈ ಆಧುನಿಕ ಗಾಂಧಿಗಳು ಸತ್ಯದ ಜೊತೆಗೆ ಅಸತ್ಯ, ಅಹಿಂಸೆಯ ಜೊತೆಗೆ ಹಿಂಸೆ, ಕ್ರೌರ್ಯಗಳನ್ನು ಎಸಗುವುದಕ್ಕೆ ಹೇಸುವುದಿಲ್ಲ ಎಂಬುದು ಈ ಕಥೆಯ ಪ್ರಮುಖ ವಿಚಾರವಾಗಿದೆ. ಒಟ್ಟಾರೆಯಾಗಿ ಅಸಲಿ ಗಾಂಧಿಯನ್ನು ಸರಿಗಟ್ಟುವುದು ನಕಲಿ ಗಾಂಧಿವಾದಿಗಳಿಗೆ ಸಾಧ್ಯವಿಲ್ಲ. ಭೂಮಿಯ ಅತ್ಯಂತ ಪ್ರಾಚೀನ ಪ್ರಾಣಿಗಳಲ್ಲಿ(ಡೈನೋಸಾರಸ್‌ನ್ನು ಹೊರತುಪಡಿಸಿ) ಆಮೆ ಒಂದು. ಇದು ಹೆಚ್ಚು ಆಯಸ್ಸನ್ನು(೨೦೦ ವರ್ಷ) ಹೊಂದಿರುವಂತಹದ್ದು. ಇಂತಹ ದೀರ್ಘ ಆಯಸ್ಸನ್ನು ಹೊಂದಿದ ಆಮೆ(ಕೂರ್ಮ)ಯನ್ನು ಗಾಂಧಿ ತತ್ವಗಳಿಗೆ ಸಾಂಕೇತಿಕವಾಗಿ ಬಳಸಲಾಗಿದೆ. ಗಾಂಧೀಜಿಯ ಆದರ್ಶಗಳಿಗೆ, ಚಿಂತನೆಗಳಿಗೆ ಆಮೆಯಷ್ಟೇ ದೀರ್ಘಕಾಲ ಪ್ರಸ್ತುತವಾಗುವುದರಿಂದ ಅವುಗಳನ್ನು ಅಥವಾ ಗಾಂಧಿಯನ್ನು ಕೂರ್ಮಾವತಾರವೆಂದು ಸಂಕೇತಿಸಿ ಪ್ರತಿನಿಧಿಸಿದ್ದಾರೆ.

ಗಾಂಧೀಜಿಯವರ ನಿಸ್ವಾರ್ಥ ಸೇವೆ ಅಥವಾ ನಿಸ್ವಾರ್ಥ ಮನೋಭಾವ, ತ್ಯಾಗ, ಪ್ರಾಮಾಣಿಕತೆ ಮುಂತಾದ ಅವರ ಮಾನವೀಯ ಗುಣಗಳನ್ನು ದಕ್ಷಿಣಾಫ್ರೀಕನ್ನರು ಮತ್ತು ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರು ಸ್ಮರಿಸುವುದನ್ನು ಪಿ.ಎಸ್. ಬಣಕಾರ ಅವರು 'ನನ್ನ ಸೊತ್ತಲ್ಲ' ಎಂಬ ಕಥೆಯಲ್ಲಿ ವಿವರಿಸಿದ್ದಾರೆ. ದಕ್ಷಿಣ ಆಫ್ರಿಕದ ಭಾರತೀಯರಿಗೆ ಗಾಂಧಿ ಒಬ್ಬ ದೈವಸ್ವರೂಪಿಯಾಗಿ, ಒಂದು ಶಕ್ತಿಯಾಗಿ ಪರಿಣಮಿಸಿದ್ದಾರೆ ಎಂಬುದನ್ನು ಕಥೆಯಲ್ಲಿ ಬಣಕಾರರು ಚಿತ್ರಿಸಿದ್ದಾರೆ.

ಗಾಂಧೀಜಿ ತಮ್ಮ ಹೋರಾಟವನ್ನು ದಕ್ಷಿಣ ಆಫ್ರಿಕಾದಲ್ಲಿ ಪ್ರಾರಂಭಿಸುತ್ತಾರೆ. ಅಲ್ಲಿನ ಭಾರತೀಯರ ಮತ್ತು ಕಪ್ಪು ಜನಾಂಗದವರ ಮೇಲೆ ಬಿಳಿಯರು ದೌರ್ಜನ್ಯವೆಸಗಿ ಪ್ರಾಣಿಗಳಂತೆ ಕಾಣುತ್ತಿದ್ದುದನ್ನು ಗಾಂಧೀಜಿ ಖಂಡಿಸಿ ಅವರೊಂದಿಗೆ ಹೋರಾಡಿ ಸಫಲರಾದರು. ದಕ್ಷಿಣ ಆಫ್ರಿಕಾದ ಜನತೆಗೆ ಬದುಕಿನ ದಾರಿದೀಪವಾದರು. ಅದೇ ಸಂದರ್ಭದಲ್ಲಿ ಭಾರತದಲ್ಲೂ ಬ್ರಿಟೀಷರ ಅಟ್ಟಹಾಸದ ವಿರುದ್ಧ ಹೋರಾಡಲು ಭಾರತಕ್ಕೆ ಹಿಂತಿರುಗುವ ಸಂದರ್ಭದಲ್ಲಿ ಅಲ್ಲಿನ ಜನತೆ ಗಾಂಧೀಜಿಗೆ ಬೀಳ್ಕೊಡುಗೆ ಸಮಾರಂಭವನ್ನು 'ಭಾಗ್ಯರೂಪಿಸಿದ ಗಾಂಧೀಜಿಗೆ ಹಾರ್ದಿಕ ಬೀಳ್ಕೊಡುಗೆ' ಎಂದು ಏರ್ಪಡಿಸಿದ ಸನ್ನಿವೇಶದಿಂದ ಈ ಕಥೆ ಆರಂಭವಾಗುತ್ತದೆ. ಅಲ್ಲಿನ ಸಭಿಕರು ಗಾಂಧಿಯನ್ನು ಕುರಿತು ವೇದಿಕೆಯಲ್ಲಿ ತಮ್ಮ ಅನಿಸಿಕೆಗಳನ್ನು ಹೇಳಿಕೊಳ್ಳುತ್ತಾರೆ. ಬಾಲಸುಂದರಂ ಎಂಬ ಕಾರ್ಮಿಕನು ಗಾಂಧಿಯನ್ನು ಉದ್ದೇಶಿಸಿ "ಮಾನ್ಯರೇ! ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಲ್ಲಿ ನೆಲೆಸಿದ ನಮ್ಮೆಲ್ಲ ಭಾರತೀಯರಿಗೆ ಮತ್ತು ಬಿಳಿಯರ ಆಳ್ವಿಕೆಯ ಅತ್ಯಾಚಾರಕ್ಕೀಡಾದ ಆಫ್ರಿಕನ್ನರ ಪಾಲಿಗೆ ಭಾಗ್ಯ ರೂಪಿಸುವ ಬ್ರಹ್ಮನಿದ್ದಂತೆ" (ಬಣಕಾರ. ಪಿ.ಎಸ್.; ೨೦೦೬; ಪು. ೬೭) ಎಂದು ಉದ್ಗರಿಸುತ್ತಾನೆ. ಹಾಗಾಗಿ ಕಥೆಗಾರರು ಬಡವರ, ಅಸಹಾಯಕರ ಪಾಲಿನ ಬದುಕನ್ನು ರೂಪಿಸುವ ಬ್ರಹ್ಮನಂತೆ ಚಿತ್ರಿಸಿದ್ದಾರೆ. ಮತ್ತೋರ್ವ "ಗಾಂಧೀಜಿ ಒಬ್ಬ ವ್ಯಕ್ತಿಯಲ್ಲ, ಒಂದು ಶಕ್ತಿ. ಈ ಶಕ್ತಿಯ ಆಶ್ರಯದಿಂದಲೇ ಬಿಳಿಯರ ಕಪಿಮುಷ್ಟಿಯಿಂದ

ನಾವು ತಪ್ಪಿಸಿಕೊಂಡು, ಉಸಿರಾಡಿಸುವಂತಾಗಿದೆ"(ಅದೇ; ಪು. ೬೮) ಎಂದು ಹೇಳುತ್ತಾನೆ. ಇನ್ನೋರ್ವ ಭಾರತೀಯ "ಸಭೀಕರೇ!" ಎನ್ನುವಾಗ ಮೊದಲೇ ತಡವರಿಸಿದನು. ಗಾಂಧೀಜಿಯತ್ತ ನೋಡಿದಾಗ ಅವನಿಗೆ ಆವೇಶ ಬಂದಂತಾಯಿತು. ಸಭಾಕಂಪನ ದೂರಾಯಿತು. ಈಗ ತನ್ನ ಮಾತುಗಳನ್ನು ನಿಚ್ಚಳವಾಗಿ, ಪರಿಣಾಮಕಾರಿಯಾಗುವಂತೆ ಹರಿಸತೊಡಗಿದನು..... ಇಂತಹ ಮಹಾತ್ಮನಿಗೆ ಎಷ್ಟು ಸಲ ಶಿರ ಬಾಗಿದರೂ ಕಡಿಮೆ"(ಅದೇ; ಪು. ೬೯) ಎಂದು ಉಚ್ಚರಿಸುತ್ತಾನೆ. ಸಭಾಕಂಪನದಿಂದ ತಡವರಿಸುತ್ತಿದ್ದ ಈತನಿಗೆ ಗಾಂಧೀಜಿಯ ಮುಖ ನೋಡುತ್ತಲೇ ತನ್ನಲ್ಲಿ ಒಂದು ಚೈತನ್ಯ, ಶಕ್ತಿ ಮೂಡಿಸಿಕೊಳ್ಳುತ್ತಾನೆ. ಹೀಗೆ ಹಲವರಿಗೆ ಗಾಂಧೀಜಿ ಶಕ್ತಿಯಾಗಿ, ಸ್ಫೂರ್ತಿಯ ಸೆಲೆಯಾಗಿ ಚೈತನ್ಯದ ಹೂರಣವಾಗಿದ್ದಾರೆ ಎಂದು ಕಂಡರಿಸಿದ್ದಾರೆ.

"ಬಿಳಿಯರ ಕ್ಷೌರಿಕ ಅಂಗಡಿಗಳಲ್ಲಿ ಹಜಾಮತಿ ಮಾಡಿಸಿಕೊಳ್ಳಲು ನಿಷೇಧವಿದ್ದರೂ, ತಾವೇ ತಮ್ಮ ಕೈಗಳಿಂದ ಕ್ಷೌರ ಮಾಡಿಕೊಂಡು, ತಮ್ಮ ಬಟ್ಟೆಗಳನ್ನು ತಾವೇ ಸ್ವಚ್ಛ ಮಾಡಿಕೊಂಡು, ಸ್ವಾವಲಂಬೀ ಜೀವನದ ಪಾಠವನ್ನು ನಮಗೆ ಕಲಿಸಿದ್ದಾರೆ... ಕೋರ್ಟು ಕಚೇರಿಗಳಲ್ಲಿ, ರೈಲುಗಳಲ್ಲಿ ನಮಗಾಗುತ್ತಿದ್ದ ಅಪಮಾನದಿಂದ ತಪ್ಪಿಸಿಕೊಂಡು, ಉಳಿದ ನಾಗರಿಕರಂತೆ ವರ್ತಿಸಲು ನಮಗೆ ಅವಕಾಶ ಸಿಕ್ಕಿರುವುದು ಈ ಮಹಾತ್ಮನ ಹೃದಯದ ಕರುಣೆಯಿಂದ"(ಅದೇ; ಪು. ೭೦) ಎಂದು ಮತ್ತೋರ್ವ ಗಾಂಧಿಯನ್ನು ನೆನೆಯುತ್ತಾನೆ. ಸ್ವಾವಲಂಬನೆ ಜೀವನವನ್ನು ಬದುಕಿ ಇತರರಿಗೆ ಮಾದರಿಯಾದ ಗಾಂಧೀಜಿ ಆಫ್ರಿಕ ಜನರ ಬೆಲೆ ಬಾಳುವ ವಜ್ರ, ವೈಡೂರ್ಯ, ಒಡವೆಗಳ ಉಡುಗೊರೆಗಳನ್ನು ಸ್ವೀಕರಿಸಿ ತಮ್ಮ ವೈಯಕ್ತಿಕ ಜೀವನಕ್ಕೆ ಬಳಸದೆ ಅವುಗಳನ್ನು ನನ್ನ ಸೊತ್ತಲ್ಲವೆಂದು ಸಮಾಜ ಕಾರ್ಯಕ್ಕಾಗಿ ಧರ್ಮದರ್ಶಿಗಳ ಸಮಿತಿಗೆ ನೀಡುತ್ತಾರೆ. ಹೀಗಾಗಿ ಗಾಂಧೀ ತ್ಯಾಗದ, ಪ್ರಾಮಾಣಿಕಥೆಯ ಹಾಗೂ ನಿಸ್ವಾರ್ಥತೆಯ ಪ್ರತೀಕವಾಗಿ ಬಣಕಾರ ಅವರು ಪ್ರತಿನಿಧಿಸಿದ್ದಾರೆ.

'ಮಾಡಿ ಮಡಿದವರು' ಎಂಬುದು ಪಿ.ಎಸ್. ಬಣಕಾರ್ ಅವರ ಮತ್ತೊಂದು ಕಥೆಯಾಗಿದೆ. ಸ್ವಾತಂತ್ರ್ಯ ವೀರಯೋಧರು ಗಾಂಧೀಜಿಯವರ ಮಾರ್ಗದರ್ಶನದಲ್ಲಿ 'ಮಾಡು ಇಲ್ಲವೆ ಮಡಿ' ಎಂಬ ಗಾಂಧಿ ಮಂತ್ರದೊಂದಿಗೆ ಅಸಹಕಾರ ಚಳುವಳಿಯಲ್ಲಿ ಹೋರಾಡಿ ಪೊಲೀಸರ ಬಂದೂಕಿನ ಗುಂಡಿಗೆ ಬಲಿಯಾಗಿ ಹುತಾತ್ಮರಾದುದ್ದನ್ನು ಈ ಕಥೆ ವಿವರಿಸುತ್ತದೆ.

ಕಥೆಯ ನಾಯಕ ಮಹದೇವ ಮೈಲಾರ ಗಾಂಧೀಜಿಯ ಕಣ್ಮಣಿ; ಪ್ರೀತಿಯ ಶಿಷ್ಯನಾಗಿದ್ದಾನೆ. ಅಹಿಂಸಾತ್ಮಕ ಚಟುವಟಿಕೆಗಳಿಂದ ಪ್ರಭಾವಿತಗೊಂಡು ಗಾಂಧೀಜಿಯವರ ಸಾಬರಮತಿ ಆಶ್ರಮದಲ್ಲಿದ್ದು, ಗಾಂಧೀಜಿಯವರ ಮಾರ್ಗದರ್ಶನೊಂದಿಗೆ ತನ್ನ ಕೊರಡೂರಿಗೆ ಬಂದಿದ್ದನು. ಇಲ್ಲಿ 'ಆಜಾದ್ ಆಶ್ರಮ' ಸ್ಥಾಪಿಸಿ ಯುವಶಕ್ತಿಯನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸಂಘಟಿಸುತ್ತಿದ್ದನು. ಹಾಗಾಗಿ ಈ ಯುವಶಕ್ತಿಗೆ ಗಾಂಧೀಜಿ ಆದರ್ಶವಾಗಿದ್ದರು. ಈ ಯುವ ಶಕ್ತಿ "ತಮ್ಮಲ್ಲಿದ್ದ ದೇಶಭಕ್ತಿಯನ್ನು, ಖಾದಿ ಪ್ರೇಮವನ್ನು ಪ್ರದರ್ಶಿಸುತ್ತಿದ್ದರು. ನಿರುದ್ಯೋಗದ ಹಾಗೂ ಬಡತನದ ಭೂತವನ್ನು ಹೊಡೆದೋಡಿಸುವಲ್ಲಿ ಸಹಕರಿಸುತ್ತಿದ್ದರು. ಅನೇಕರು ಖಾದಿಯಲ್ಲಿ ಸ್ವರ್ಗದ ಹಾದಿಯನ್ನು ಕಂಡು

ತಮ್ಮ ಜೀವನವನ್ನು ಪಾವನಗೊಳಿಸಿಕೊಳ್ಳುತ್ತಿದ್ದರು"(ಅದೇ; ಪು. ೧೦೫). ಚರಕ ಸ್ವಾವಲಂಬನೆಯ ಸಂಕೇತವೆಂದು ಗಾಂಧೀಜಿ ತಿಳಿದಿದ್ದರು. ಇದರಿಂದ ತಯಾರಾಗುವ ಖಾದಿ ಬಟ್ಟೆ ಸ್ವದೇಶದ ಅಸ್ತ್ರವೆಂದು ಕರೆದರು. ಈ ಚರಕ(ಖಾದಿ)ದಿಂದ ದೇಶದ ನಿರುದ್ಯೋಗ ಹಾಗೂ ಬಡತನವನ್ನು ಹೋಗಲಾಡಿಸಬಹುದೆಂಬ ಗಾಂಧಿಯವರ ನಿಲುವಿನಿಂದ ಮಹದೇವ ಮೈಲಾರ ಖಾದಿ ಪ್ರಚಾರದಲ್ಲಿ ತೊಡಗಿದನು ಮತ್ತು "ಗಾಂಧೀಜಿಗೆ ಅತ್ಯಂತ ಪ್ರಿಯವಾದ ಹರಿಜನ ಕೇರಿ" (ಅದೇ; ಪು. ೧೦೫)ಯಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ತನ್ನ ಶಿಷ್ಯರೊಂದಿಗೆ ಕೈಗೊಂಡನು. ಹೀಗಾಗಿ ಗಾಂಧಿ ಬಡವರ(ಹರಿಜನ) ಬಂಧುವಾಗಿ ಅವರ ಗೌರವಾದರಗಳಿಗೆ ಪಾತ್ರರಾಗಿದ್ದರು. ಗಾಂಧೀಜಿ ಗ್ರಾಮೋದ್ಧಾರ ಹಾಗೂ ಗ್ರಾಮ ಸ್ವಚ್ಛತಾ ಅಭಿಯಾನದ ಮೂಲ ನೇತಾರರಾಗಿದ್ದರು ಎಂದು ಕಥೆಗಾರರು ಅಭಿವ್ಯಕ್ತಿಸಿದ್ದಾರೆ.

ಮಹದೇವಪ್ಪನ ದೇಶಭಕ್ತಿ, ಸೇವಾನಿಷ್ಠೆ, ಸಾಹಸ ರಚನಾತ್ಮಕ ಕಾರ್ಯಗಳಿಗೆ ಮಾರುಹೋದ ಜನರು ನೂರಾರು ಸಂಖ್ಯೆಯಲ್ಲಿ ಬೆಂಬಲಕ್ಕೆ ನಿಂತರು. ಅಸಹಕಾರ ಚಳವಳಿಯಲ್ಲಿ ಧುಮುಕಿದರು. ಇದರಿಂದ ಮಹದೇವಪ್ಪನಿಗೆ ಆತ್ಮಬಲ ಹೆಚ್ಚಾದಂತೆ ಅಸಹಕಾರ ಅಸ್ತ್ರವನ್ನು ಬಳಸುವಲ್ಲಿ ಮತ್ತಷ್ಟು ಪಳಗಿದನು. ಇಂಗ್ಲೀಷರ ಆಡಳಿತ ಯಂತ್ರವನ್ನು ಮುರಿಯಲು ಮುಂದಾದನು. "ತನ್ನ ದಂಡಿನ ಸೈನಿಕರಲ್ಲಿ ಹಿಂಸೆಗೆ - ಹಿಂಸೆ, ಮುಳ್ಳಿಗೆ - ಮುಳ್ಳು, ಮುಯ್ಯಿಗೆ - ಮುಯ್ಯಿ ಈ ಸೇಡಿನ ಭಾವನೆಗಳು ಬೆಳೆಯದಂತೆ ಎಚ್ಚರವಹಿಸಿದನು. ಸತ್ಯ, ಪ್ರೇಮ, ಅಹಿಂಸೆ, ಧೈರ್ಯ, ಸಾಹಸಗಳನ್ನು ಅವರಲ್ಲಿ ಬಿತ್ತಿ ಬೆಳೆಯುವಂತೆ ಮಾಡಿದನು. ...ಹಾಗೆಯೇ ಗದಗ, ಶಿರಹಟ್ಟಿಗಳಿಂದ ರಾಶಿ ರಾಶಿಯಾಗಿ ಬರುವ ಟಪಾಲುಗಳ ಅಪಹರಣ! ಹಾವೇರಿ ರೈಲು ಸ್ಟೇಷನ್ನಿನಿಂದ ಬರುವ ಟಪಾಲುಗಳ ಚೀಲ ಇವರ ದಾಳಿಗೆ ತುತ್ತಾಗಿ ಕಣ್ಮರೆ! ಇಂದಿದ್ದ ಟೆಲಿಫೋನ್ ತಂತಿಗಳು ಕತ್ತರಿ ಪ್ರಯೋಗಕ್ಕೆ ತುತ್ತಾಗಿ ಸಂಜೆಯಾಗುತ್ತಲೇ ಬಯಲು! ಸಮಾನಾಂತರವಾಗಿ ಹರಿದು ಹೋಗುವ ಉಗಿಬಂಡಿಯ ಹಳಿಗಳು ಇವರ ಪವಾಡದಿಂದ ಅಸ್ತವ್ಯಸ್ತ! ಅಲ್ಲಿಗಲ್ಲಿಗೆ ಕಲ್ಲುಗಳ ರಾಶಿರಾಶಿ! ಕಂದಕಗಳ ಅವಾಂತರ! ಇವೆಲ್ಲ ಅಡ್ಡಿ-ಆತಂಕಗಳಿಂದ ಸರಕಾರಿ ಆಡಳಿತ ಯಂತ್ರದ ನಿರ್ವಹಣೆ ಶೂನ್ಯ!"(ಅದೇ; ಪು. ೧೦೮-೦೯). ಹೀಗೆ ಅಸಹಕಾರ ಚಳುವಳಿಯನ್ನು ಆರಂಭಿಸಿ 'ಮಾಡುತ್ತೇನೆ ಇಲ್ಲವೇ ಮಡಿಯುತ್ತೇನೆ' ಎಂದು ನಿರ್ಧರಿಸಿದನು. ಬ್ರಿಟೀಷರು ಅಕ್ರಮವಾಗಿ ರೈತರಿಂದ ತೆರಿಗೆ ವಸೂಲಿ ಮಾಡಿದ ಖಜಾನೆಯನ್ನು ಲೂಟಿ ಮಾಡುವ ಸಂದರ್ಭದಲ್ಲಿ ಮಹದೇವಪ್ಪ ಮತ್ತು ಆತನ ಶಿಷ್ಯರು ಪೊಲೀಸರ ಬಂದೂಕಿನ ಗುಂಡಿಗೆ ಬಲಿಯಾಗುತ್ತಾರೆ. ಆತನ ಇನ್ನಿತರ ಸಂಗಡಿಗರಿಗೆ ಮಹಾದೇವಪ್ಪನು 'ಗಾಂಧೀಜಿ ನಮ್ಮಪ್ಪ, ಆತನಿಗೆ ಹಿಂಸೆಯೆಂದರೆ ಆಗದು. ಆತನಿಗೆ ಬೇಡವಾದ ಹಿಂಸಾಮಾರ್ಗ ನಮಗೇಕೆ? ಆತನ ಮಾತನ್ನು ಪಾಲಿಸುವುದರಲ್ಲಿಯೇ ನಮ್ಮ ಮತ್ತು ನಮ್ಮ ದೇಶದ ಹಿತವಿದೆ. ಪೊಲೀಸನನ್ನು ಕೊಲ್ಲಬೇಡಿ ಎಂದು ಎಚ್ಚರಿಸಿದನು. ಹೀಗೆ ಹಿಂಸೆಯಲ್ಲಿ ಸುಖವಿಲ್ಲ, ಗಾಂಧೀಜಿಯವರ ಅಹಿಂಸೆಯಲ್ಲಿ ಹಿತವನ್ನು ಕಾಣಬಹುದು ಎನ್ನುತ್ತ ಗಾಂಧೀಜಿ ಅಹಿಂಸಾ ಸ್ವರೂಪಿ ಎಂದು ಬಣಕಾರರು ಪ್ರತಿನಿಧಿಸಿದ್ದಾರೆ.

'ಕಡುಬಡತನ' ಎಂಬುದು ಬಡವರ ಪಾಲಿನ ದೊಡ್ಡ ಶಾಪವಾಗಿದೆ. ಸ್ವಾತಂತ್ರ್ಯಪೂರ್ವದ ಬಡವರು ಖಾದಿ(ಗಾಂಧಿ ಟೋಪಿ) ಸ್ವದೇಶದ ವಸ್ತುವಾಗಿದ್ದರಿಂದ ಗಾಂಧೀಜಿಯ ದೆಸೆಯಿಂದ ಸುಲಭವಾಗಿ ಎಲ್ಲರಿಗೂ ದೊರೆಯುತ್ತಿತ್ತು. ಅದೇ ಖಾದಿ(ಗಾಂಧಿ ಟೋಪಿ) ಸ್ವಾತಂತ್ರ್ಯನಂತರದ ಭಾರತದಲ್ಲಿ ಬಡವರಿಗೆ ಎಟುಕದೇ ಇರುವ ವಸ್ತುವಾಗಿದೆ ಎಂಬುದನ್ನು ಗೋಪಿನಾಥ ರೆಡ್ಡಿ ಅವರು 'ಗಾಂಧಿ ಟೋಪಿ' ಎಂಬ ಕಥೆಯಲ್ಲಿ ಚಿತ್ರಿಸಿದ್ದಾರೆ.

ಈ ಕಥೆಯ ಪ್ರಮುಖ ಪಾತ್ರವಾದ ಭರುಮ ಎಂಬ ಹುಡುಗನು ತನ್ನ ಮುಂಜಿಯಿಂದ ತಲೆ ಬೋಳಾಗಿದ್ದ ಕಾರಣದಿಂದ ಶಾಲೆಯ ಹುಡುಗರ ಕಿರುಕುಳದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ ಮತ್ತು ತನ್ನ ಶಾಲಾ ಹೆಡ್‌ಮಾಸ್ತರ 'ಶೇಕರಾಜ'ರ ಹತ್ತಿರ ಹೋಗಿ ತನಗಾಗುವ ಕಿರುಕುಳವನ್ನು ಭಿನ್ನವಿಸಿಕೊಂಡಾಗ ಅವರು "ಗಾಂಧಿ ಟೋಪಿ ಧರಿಸುವ ಸೂಚನೆ ನೀಡುತ್ತಾರೆ. "ಗಾಂ....ಧಿ.....ಟೋ.....ಪಿ" ಎಂಬ ನಾಕಕ್ಷರ ಭರುಮನ ದೇಹದ ಪ್ರತಿಯೊಂದು ನರಮಂಡಲದಲ್ಲಿ ಸಂಚರಿಸಿದಾಕ್ಷಣ"(ಗುರುಮೂರ್ತಿ ಪೆಂಡಕೂರು(ಸಂ); ೧೯೯೨; ಪು. ೧೮೬) ಅದನ್ನು ಧರಿಸಲೇಬೇಕು ಎಂಬ ಗಾಢ ಆಸೆ ಅವನಲ್ಲಿ ಮೂಡುತ್ತದೆ. ಅದನ್ನು ಕೊಂಡುಕೊಳ್ಳಲು ತನ್ನ ಮನೆಯ ಸದಸ್ಯರಿಂದ ಐದು, ಹತ್ತು ಪೈಸೆಗಳಷ್ಟು ಕೇಳಿ ಐವತ್ತು ಪೈಸೆಗೆ ನಲ್ವತ್ತು ಪೈಸೆ ಕೂಡಿಸುತ್ತಾನೆ. ರಾತ್ರಿ ಮಲಗಿದಾಗ "ಕಣ್ಣು ಮುಚ್ಚಿದರೂ ಗಾಂಧಿತಾತ ಕಣ್ಣೊಳಗೆ ಹೊಕ್ಕೊಂಡಿದ್ದ. ತಾನು ಗಾಂಧಿ ಟೋಪಿ ಧರಿಸಿಕೊಂಡು. ...ಹರುಕು ಕಚ್ಚೆ ಉಟುಗೊಂಡು. ...ದುಂಡನೆ ರವಂಡಿನ ಚಳ್ಳಾಸು ಇಟುಗೊಂಡು....ಗೂಡುಗಟ್ಟಿದ ಎದೆಯ ಗಾಂಧಿಯಂತೆ ಕಂಡಂಗಾಗಿ, ನಂತರ ಕೆಲಸಕ್ಕೆ ಬಾರದ ಗಾಂಧಿತಾತನ ಕೋಲಾಗಿ, ಆಮ್ಯಾಲ ರಾಮಾ... ರಾಮಾ.... ಅಂತ ಹೊಡೆಸಿಕೊಂಡು ಸತ್ತ ಅನುಭವವಾಗಿ ಹಿತದಿಂದ ನರಳಿದ. 'ಗಾಂಧಿ ಟೋಪಿ' ಎಂದು ನರಳಿದ. ...ತಾನು ಗಾಂಧಿ ಟೋಪಿ ಹಾಕಿಕೊಂಡು ಥೇಟ್ ಗಾಂಧಿಯಂತೆ ಎಲ್ಲಿ ಕಂಡು ಬರುವನೇನೋ? ಎಂಬ ಅನುಮಾನ ಬಂದು ಕುತೂಹಲ ತಡೆಯಲಾರದೆ. ...ಬಾಲಗಾಂಧಿಯಂತಿರುವ ತಾನು ಕಟ್ಟಾ ಅಹಿಂಸಾವಾದಿಯಾಗಿರಬೇಕು"(ಅದೇ; ಪು. ೧೮೮-೧೮೯) ಎಂದು ಮನಸ್ಸಿನಲ್ಲಿ, ಆಲೋಚನೆಯಲ್ಲಿ ಭರುಮನನ್ನು ಗಾಂಧಿ ಆವರಿಸಿಕೊಂಡಿದ್ದಾರೆ. ಆ ಚಿಕ್ಕ ವಯಸ್ಸಿನ ಭರುಮನಲ್ಲಿ ಅಹಿಂಸಾ ತತ್ವ ಮೂಡಿಬರುವ ಹಾಗೆ ಗಾಂಧಿ ಪ್ರಭಾವಿ ವ್ಯಕ್ತಿಯಾಗಿದ್ದಾರೆ. ಹಿರಿಯರಿಗೆ - ಕಿರಿಯರಿಗೆ, ಹೆಣ್ಣುಮಕ್ಕಳಿಗೆ ಗಾಂಧಿ ಪ್ರಿಯವೆನಿಸುತ್ತಾರೆ, ಮಕ್ಕಳ ಮನಸ್ಸಿನಲ್ಲಿ ನೆಲೆಸುವಷ್ಟು ಸರಳ ವ್ಯಕ್ತಿತ್ವ ಗಾಂಧೀಜಿಯವರದು ಎಂದು ಗೋಪಿನಾಥ ರೆಡ್ಡಿ ಚಿತ್ರಿಸಿದ್ದಾರೆ.

ದಲಿತ - ಬಂಡಾಯದ ಕಥೆಗಾರರು ಗಾಂಧೀಜಿಯನ್ನು ಮತ್ತು ಅವರ ಚಿಂತನೆಗಳನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಅವುಗಳು ಸಮಾಜದಲ್ಲಿ ಅಪಮೌಲ್ಯಗಳಾಗುವುದನ್ನು ವಿಡಂಬಿಸುತ್ತಾರೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧಿಯ ಹೆಸರು ಸಂಚಲನವನ್ನೇ ಮೂಡಿಸುತ್ತದೆ ಹಾಗೂ ಒಂದು ಶಕ್ತಿಯಾಗಿ ಪರಿಣಮಿಸುತ್ತದೆ ಎಂಬುದಾಗಿ ಚಿತ್ರಿಸಿದ್ದಾರೆ. ಕವಿತೆಗಳಲ್ಲಿ ವಿಡಂಬಿಸುವ ಹಾಗೆ ಕಥೆಗಳಲ್ಲಿ ವಿಡಂಬಿಸುತ್ತಿದ್ದುದು ಕಡಿಮೆ. ಕುಂ. ವೀರಭದ್ರಪ್ಪ, ಬೆಸಗರಹಳ್ಳಿ ರಾಮಣ್ಣನವರು

ಕ್ರಮವಾಗಿ 'ಕೂರ್ಮಾವತಾರ' ಮತ್ತು 'ಪ್ರಜಾಪ್ರಭುತ್ವದ ಮೂರು ಮಂಗಗಳು' ಕಥೆಗಳಲ್ಲಿ ವ್ಯಂಗ್ಯ ಮತ್ತು ವಿಂಡಬನೆಯಿಂದ ಚಿತ್ರಿಸಿದ್ದಾರೆ. ಉಳಿದ ಕಥೆಗಾರರನ್ನು ಒಳಗೊಂಡಂತೆ ಇವರೂ, ಗಾಂಧಿ ಚಿಂತನೆಗಳು ಸಮಾಜದ ಓರೆಕೋರೆಗಳನ್ನು ತಿದ್ದುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂಬ ತಾತ್ವಿಕತೆಯನ್ನು ಅಭಿವ್ಯಕ್ತಿಸುತ್ತಾರೆ. ಹೀಗಾಗಿ ಗಾಂಧಿ ಮಾನವತಾವಾದಿಯಾಗಿ, ಬಡವರ ಪಾಲಿನ ತಂದೆಯಾಗಿ, ದೈವವಾಗಿ ಎಲ್ಲರನ್ನು ಮನುಷ್ಯರಂತೆ ಕಾಣುವ ಮಹಾತ್ಮನಾಗಿ ಪ್ರತಿನಿಧಿಸಿದ್ದಾರೆ.

೫.೫. ಮಹಿಳೆಯರ ಕಥೆ

ಮಹಿಳೆ ಮತ್ತು ಕಥೆ ಇವುಗಳ ಸಂಬಂಧ ಪ್ರಾಚೀನವಾದದ್ದು. ಕಥೆ ಹೇಳುವುದರಲ್ಲಿ ಮಹಿಳೆಯರದೇ ಪ್ರಧಾನ ಪಾತ್ರ. ಸಣ್ಣ ಕಥೆ ಒಂದು ಗಂಭೀರ ಸಾಹಿತ್ಯ ಪ್ರಕಾರ ಎಂದು ಪರಿಗಣಿತವಾದುದು ಇಪ್ಪತ್ತನೆಯ ಶತಮಾನದಲ್ಲಿ ಎಂಬುದು ನಿರ್ವಿವಾದ. ಮಹಿಳೆಯರು ಹಲವಾರು ಸಾಹಿತ್ಯದ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಅದರಲ್ಲೂ ಅವರ ಸಣ್ಣ ಕಥೆಗಳು ಹುಲುಸಾಗಿ ರಚನೆಗೊಂಡಿವೆ. ಕನ್ನಡ ಮಹಿಳಾ ಕಥೆಗಾರ್ತಿಯರು ಭಿನ್ನ ಸಾಂಸ್ಕೃತಿಕ ಸಾಧ್ಯತೆಗಳ ಹುಡುಕಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

"ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಮಹಿಳೆಯರ ಬರವಣಿಗೆಯನ್ನು ಪುರುಷ ಪ್ರಧಾನ ಸಮಾಜ ಗಂಭೀರವಾಗಿ ಗಣನೆಗೆ ತೆಗೆದುಕೊಳ್ಳಲಿಲ್ಲ. ಆದರೆ ಪುರುಷನಿಗೆ ಇರುವಷ್ಟು ಮೇಧಾಶಕ್ತಿ, ಪ್ರತಿಭಾ ಸಂಪನ್ನತೆಗಳು ಸ್ತ್ರೀಯರಲ್ಲಿಯೂ ಸ್ವಾಭಾವಿಕ ಗುಣಗಳಾಗಿದ್ದು, ಅವು ಕೆಲವು ವಿಶಿಷ್ಟ ಸನ್ನಿವೇಶಗಳಲ್ಲಿ ಅಧಿಕವಾಗಿಯೇ ಕೌಶಲ್ಯಪೂರ್ಣವಾಗಿಯೇ ಹೊರಹೊಮ್ಮಿವೆ ಎಂದು ಹಿರಿಯ ಲೇಖಕಿ ಶ್ರೀಮತಿ ತಿರುಮಾಲಾಂಬಾ ಅವರು ಪ್ರತಿಪಾದಿಸಿದರು"ಎಂದು ಕರೀಗೌಡ ಬೀಚನಹಳ್ಳಿ ಅವರು ಗುರುತಿಸಿದ್ದಾರೆ(ಕರೀಗೌಡ ಬೀಚನಹಳ್ಳಿ; ೨೦೧೧; ಪು. ೧೪೮). ಹೀಗೆ ಬೆಳಕಿಗೆ ಬಂದ ಮಹಿಳೆಯರು ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಪರಿಚಿತವಾಗತೊಡಗಿದರು. ಅವರಲ್ಲಿ ಮುಖ್ಯನಾಗಿ- ಸರಸ್ವತಿದೇವಿ ಗೌಡರ, ಶಾಂತದೇವಿ ಕಣವಿ, ತ್ರಿವೇಣಿ, ಅನುಪಮಾ ನಿರಂಜನ, ಎಂ.ಕೆ. ಇಂದಿರಾ, ವೀಣಾ ಶಾಂತೇಶ್ವರ, ವೈದೇಹಿ, ನೇಮಿಚಂದ್ರ ಮುಂತಾದವರನ್ನು ಹೆಸರಿಸಬಹುದು.

ಮಹಿಳೆ ಅವಳದ್ದೇ ಆದ ಅನುಭವ ಲೋಕದಿಂದ ಕಥೆ ರಚನೆಯಲ್ಲಿ ತೊಡಗಿರುವುದು ಸರ್ವೇಸಾಮಾನ್ಯ. ಅವರ ಕಥೆಗಳನ್ನು ಪುರುಷರ ಕಥೆಗಳಿಂದ ಬೇರ್ಪಡಿಸಿ ನೋಡುವುದು ಅಧ್ಯಯನದ ಉದ್ದೇಶವಲ್ಲ. ಗಾಂಧೀಜಿಯ ಪ್ರಭಾವಕ್ಕೆ ಕೆಲವರು ನೇರವಾಗಿ, ಇನ್ನು ಕೆಲವರು ಪರೋಕ್ಷವಾಗಿ ಒಳಗೊಂಡಿದ್ದರೂ ಹೆಚ್ಚಾಗಿ ಗಾಂಧಿ ಕುರಿತ ಕಥೆಗಳ ರಚನೆ ಕಡಿಮೆಯಾಗಿದೆ. ಇಲ್ಲಿ ಗಾಂಧೀಜಿ ಕುರಿತ ಮಹಿಳೆಯರ ಅಭಿವ್ಯಕ್ತಿಯನ್ನು ನಿರೂಪಿಸುವುದು ಅಧ್ಯಯನದ ಉದ್ದೇಶವಾಗಿದೆ. ಯಾವುದೇ ಸಂವೇದನೆ, ವಾದಗಳನ್ನು ನೋಡದೇ ಮಹಿಳಾ ಬರಹಗಳಲ್ಲಿ ಗಾಂಧೀಜಿಯನ್ನು ನಿವೇದಿಸಿರುವುದನ್ನು, ರೂಪಿಸಿರುವುದನ್ನು ನೋಡುವ ಉದ್ದೇಶವಾಗಿದೆ.

ಒಬ್ಬ ಗಂಡಸಿನ ಯಶಸ್ಸಿನ ಹಿಂದೆ ಹೆಣ್ಣು ಇರುತ್ತಾಳೆ ಎಂಬ ನಾಣ್ನುಡಿಯಂತೆ ಗಾಂಧೀಜಿಯವರ ಸಮಗ್ರ ಯೋಜನೆ ಹಾಗೂ ಯೋಚನೆಗಳ ಹಿಂದೆ ಕಸ್ತೂರಬಾ ಅವರು

ಸದಾ ಬೆನ್ನೆಲುಬಾಗಿ ನಿಂತಿದ್ದರು ಎಂಬುದನ್ನು 'ಕಸ್ತೂರಬಾ' ಕಥೆಯಲ್ಲಿ ಅನಸೂಯ ರಾವ್ ಅವರು ವಿವರಿಸಿದ್ದಾರೆ.

ಗಾಂಧೀಜಿ - ಕಸ್ತೂರಬಾ ಅವರು ಸಮವಯಸ್ಕರು. ೧೩ನೇ ವಯಸ್ಸಿನಲ್ಲೇ ಇಬ್ಬರಿಗೂ ವಿವಾಹವಾಯಿತು. ಗಾಂಧೀಜಿ ಬ್ಯಾರಿಸ್ಟರ್ ಪದವಿ ಗಳಿಸಿ ಇಂಗ್ಲೆಂಡಿನಿಂದ ಹಿಂತಿರುಗಿದಾಗ ಕಸ್ತೂರಬಾಗೆ ಅತೀವ ಸಂತೋಷ. ಗಾಂಧೀಜಿ ಆಫ್ರಿಕಾಕ್ಕೆ ಕೆಲಸದ ಮೇಲೆ ಹೊರಟಾಗ ಇವರೂ ಹಿಂಬಾಲಿಸಿದರು. "ಅಲ್ಲಿ ಭಾರತೀಯರಿಗೆ ಆಗುತ್ತಿದ್ದ ಅವಮಾನ, ಹಿಂಸೆಯನ್ನು ಇವರು ಸಹಿಸಿದರು. ಸರಕಾರದ ನೀತಿಯ ವಿರುದ್ಧ ಹೂಡಿದ್ದ ಅಸಹಕಾರ ಚಳುವಳಿಯಲ್ಲಿ ಈಕೆಯೂ ಧುಮುಕಿದಳು. ಪತಿಯ ಹೆಜ್ಜೆಯ ಮೇಲೆ ಹೆಜ್ಜೆ ಇರಿಸಿ ನಡೆಯತೊಡಗಿದರು..... ಗಂಡನ ಇಚ್ಛೆ ಮೇರೆಗೆ ಬೇಡದ ಖಾದಿ ಸೀರೆಯನ್ನೇ ಉಟ್ಟರು. ಶೌಚಾಲಯಗಳನ್ನು ಶುದ್ಧ ಮಾಡಿದರು. ಗಂಡನ ಜೊತೆಯಲ್ಲಿ ಚಳುವಳಿಯಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದರು. .....ಭಾರತಕ್ಕೆ ಬಂದ ಮೇಲೆ ಗಂಡ ಸ್ಥಾಪಿಸಿದ ಸಬರಮತಿ ಆಶ್ರಮದಲ್ಲಿ ಮೇಲ್ವಿಚಾರಕಳಾಗಿ ನಿರ್ವಹಿಸಿ, ಪಾತ್ರೆ ತೊಳೆಯುವುದು, ಕಸ ಗುಡಿಸುವುದು, ರೋಗಿಗಳ ಶುಶ್ರೂಷೆ, ಅತಿಥಿಗಳ ಸತ್ಕಾರ ಹಗಲಿರುಳೂ ಮಾಡಿದರು"(ಅನಸೂಯ ರಾವ್; ೧೯೬೬; ಪು. ೨೮). ಈ ರೀತಿ ಕಸ್ತೂರಬಾ ಗಾಂಧಿಗೆ ನೆರವಾದದ್ದರಿಂದ ಗಾಂಧಿಯ ಗುರಿ, ಉದ್ದೇಶಗಳು ಸಫಲವಾಗುವಲ್ಲಿ ಕಸ್ತೂರಬಾ ಅವರ ಪಾತ್ರ ಬಹುದೊಡ್ಡದು. ಗಾಂಧಿ ಸ್ವಾತಂತ್ರ್ಯ ಹೋರಾಟದಲ್ಲಿ ಜಯ ಗಳಿಸಲು, ದೇಶದ ಪಿತಾಮಹ ಮತ್ತು ಮಹಾತ್ಮನೆಂದೆನಿಸಿಕೊಳ್ಳುವ ಸಾಧನೆಯ ಹಿಂದೆ ಕಸ್ತೂರಬಾ ಬೆನ್ನೆಲುಬಾಗಿ ಸಹಕರಿಸಿದರು.

ಒಂದು ಬಾರಿ ಆಶ್ರಮದಲ್ಲಿ ಒಬ್ಬರಿಗೆ ಖಾಯಿಲೆಯಾಗಿದ್ದು ಕಸ್ತೂರಬಾ ಅವರ ಗಮನಕ್ಕೆ ಬಂದಿರಲಿಲ್ಲ. ಅದು ಗಾಂಧೀಜಿಯವರ ಗಮನಕ್ಕೆ ಬಂದು ಎಲ್ಲರ ಎದುರಿಗೆ ಕಸ್ತೂರಬಾ ಅವರನ್ನು ಹೀಗೆ ತರಾಟೆಗೆ ತೆಗೆದುಕೊಳ್ಳುತ್ತಾರೆ. "ನಿನ್ನ ಮಗ ದೇವದಾಸ ಖಾಯಿಲೆಯಿಂದ ಮಲಗಿದ್ದರೆ ನಿನಗೆ ತಿಳಿಯುತ್ತಿರಲಿಲ್ಲವೇ? ಬೇರೆಯವರು ಖಾಯಿಲಿ ಬಿದ್ದರೆ ನಿನಗೆ ತಿಳಿಯಲೇ ಇಲ್ಲ ಎಂದರೆ ಏನರ್ಥ?" ಎಂದು ಪ್ರಶ್ನಿಸುತ್ತಾರೆ.

ಹೀಗೆ ಗಾಂಧಿ ತನ್ನ ವೈಯಕ್ತಿಕ ಕುಟುಂಬಕ್ಕೋಸ್ಕರ ಜೀವಿಸದೇ ಸಮಾಜ(ಭಾರತ)ವೇ ತನ್ನ ಕುಟುಂಬವೆಂದು, ಭಾರತೀಯರೆಲ್ಲ ಬಂಧುಗಳೆಂದು ಬದುಕಿದ ನಿಸ್ವಾರ್ಥ ಪ್ರತೀಕವಾಗಿದ್ದಾರೆ ಎಂದು ಅನಸೂಯ ರಾವ್(ಅದೇ; ಪು. ೨೯) ಅವರು ಪ್ರತಿನಿಧಿಸಿದ್ದಾರೆ.

"ಸ್ತ್ರೀಯರನ್ನು ದುರ್ಬಲರೆಂದು ಕರೆಯುವುದು ನಿಂದ್ಯಾಸ್ಪದವಿದೆಯಲ್ಲದೆ ಅದು ಪುರುಷನು ಅವರಿಗೆ ಮಾಡುವ ಒಂದು ಮಹದನ್ಯಾಯ. ಈ ಬಲವನ್ನು ಪಶುಬಲವೆಂದು ಅರ್ಥ ಮಾಡಿದರೆ ನಿಜಕ್ಕೂ ಸ್ತ್ರೀಯರು ಈ ಪಶುಸಾಮರ್ಥ್ಯದಲ್ಲಿ ನಿರ್ಬಲರು. ಆದರೆ ಈ ಬಲವನ್ನು ನೈತಿಕ ಬಲವೆಂದು ಭಾವಿಸಿದರೆ ಹೆಣ್ಣುಮಕ್ಕಳು ಗಂಡಸರಿಗಿಂತಲೂ ಆ ಶಕ್ತಿಯಲ್ಲಿ ಸಾವಿರ ಪಾಲು ಸಮರ್ಥರು ಅವಳಿಗೇನು ಅಂತರ್ಜ್ಞಾನ ಕಡಿಮೆಯೇ? ಅವಳಲ್ಲೇನು ಸ್ವಾರ್ಥ, ತ್ಯಾಗ ಅತ್ಯಧಿಕವಾಗಿಲ್ಲವೇ? ಅವಳಲ್ಲಿ ಸಹನ ಶಕ್ತಿ ಅಪಾರವಾಗಿಲ್ಲವೆ? ಅವಳಲ್ಲಿ ಹೆಚ್ಚಿನ ಧೈರ್ಯವಿಲ್ಲವೆ?

ಅವಳಿಲ್ಲದೆ ಪುರುಷನೇ ಇಲ್ಲ. ಅಹಿಂಸೆ ನಮ್ಮ ಬಾಳಿನ ತತ್ವವಾದರೆ, ಭವಿಷ್ಯವು ಸ್ತ್ರೀಯರಿಗಾಗಿಯೇ ಕಾದು ನಿಂತಿದೆ(ಯು.ಇ.೧೦/೦೪/೧೯೩೦)"(ಮೋಹನ್‌ದಾಸ್ ಕರಮಚಂದ್ರ ಗಾಂಧಿ(ಮೂಲ); ದೇಸಾಯಿ.ಜೆ.ಡಿ.(ಅನು); ೨೦೧೧; ಪು. ೨೪-೨೫) ಎಂಬ ಮಹಿಳಾ ಸಮಾನತೆಯ ಬಗ್ಗೆ ಗಾಂಧೀಜಿಯ ದೃಷ್ಟಿಕೋನ ವಿಶಿಷ್ಟವಾದುದು. ಹೀಗೆ ಗಾಂಧಿತತ್ವ, ಚಿಂತನೆಗಳಲ್ಲಿ, ಆದರ್ಶಗಳಲ್ಲಿ ಅಪೂರ್ವವಾದ ಶಕ್ತಿ ಅಡಗಿದೆ ಎಂಬುದನ್ನು ಮನಗಂಡು ಪ್ರಭಾವಿತರಾದ ಸ್ತ್ರೀಯರು ಎಂತಹ ಕಷ್ಟಕಾರ್ಪಣ್ಯಗಳಲ್ಲಿ ಹಾಗೂ ಶೋಷಿತ ಸಮಾಜದಲ್ಲಿ ಸಮಸ್ಯೆಗಳನ್ನು ಎದುರಿಸುವ ಶಕ್ತಿ, ಸಾಮರ್ಥ್ಯ, ಸ್ಥೈರ್ಯ ಗಾಂಧಿ ತತ್ವಗಳು ನೀಡುತ್ತವೆ ಎಂಬುದನ್ನು ಬಲವಾಗಿ ನಂಬಿದರು. ಅದರಿಂದ ಸ್ತ್ರೀ ಜಗತ್ತು ಗಾಂಧಿ ಚಿಂತನೆಗಳ ಪ್ರಭಾವದಿಂದ ಸ್ತ್ರೀ ಸಮಾಜದಲ್ಲಿ ಸಬಲೆಯಾಗಿ ಬದುಕು ಕಟ್ಟಿಕೊಳ್ಳುವುದನ್ನು ಶಾಂತಾದೇವಿ ಕಣವಿ ಅವರು 'ಗಾಂಧೀ ಮಗಳು' ಎಂಬ ಕಥೆಯಲ್ಲಿ ಚಿತ್ರಿಸಿದ್ದಾರೆ.

'ದೇವಕಿ' ಈ ಕಥೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾಳೆ. ಕೃಷ್ಣವರ್ಣಳಾಗಿ ಅಸ್ಪೃಶ್ಯ ಸಮುದಾಯದಲ್ಲಿ ಜನಿಸಿದ್ದು ಒಂದು ಶಾಪವಾಗಿ ಪರಿಣಮಿಸುತ್ತದೆ. ಮೇಲ್ವರ್ಗದ ಯುವಕನ ಪ್ರೀತಿಯ ಬಲೆಯಲ್ಲಿ ಬಿದ್ದು ವಂಚಿತಳಾಗುತ್ತಾಳೆ. ಮೊದಲೇ ಸ್ವಾತಂತ್ರ್ಯ ಹೋರಾಟ, ಚಳವಳಿಗಳ ಮಧ್ಯೆ ಬೆಳೆದ ಕಾರಣ ತನಗಾದ ನೋವನ್ನು ಎದುರಿಸಿ ನಿಲ್ಲುತ್ತಾಳೆ. ಗಾಂಧೀಜಿಯವರ ಆದರ್ಶಗಳಿಂದ ಪ್ರಭಾವಿತಳಾದ ದೇವಕಿ ತನ್ನ ಸಮಸ್ಯೆಗಳಿಗೆ ಗಾಂಧಿ ಚಿಂತನೆಗಳಲ್ಲಿ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾಳೆ. ದೇವಕಿಯನ್ನು ಮದುವೆಯಾಗಿ ಕೈಬಿಟ್ಟು ಹೋದ ಸದಾಶಿವನ ತಾಯಿ ಗೌರಮ್ಮ ದೇವಕಿಯ ಧೈರ್ಯಗಳನ್ನು ಮೆಚ್ಚಿಕೊಳ್ಳುತ್ತಾಳೆ. ಗೌರಮ್ಮನೂ ಸಹ ಗಾಂಧೀಜಿಯ ಭಕ್ತಳು. ತನ್ನ ತಂದೆಯಿಂದ ಗೌರಮ್ಮ ಗಾಂಧೀಜಿಯ ಪ್ರಭಾವಕ್ಕೆ ಒಳಗಾದವಳು. ಈ ಅತ್ತೆ-ಸೊಸೆ ಇಬ್ಬರೂ ಅನ್ಯಾಯಕ್ಕೆ ಒಳಗಾದವರು. ಅತ್ತೆ ಸೊಸೆಯೊಂದಿಗೆ "ನಮ್ಮಪ್ಪ ವೀರಪ್ಪ ದೇಶಕ್ಕೆ ಸ್ವತಂತ್ರ ತರಾಕ ಹೋರಾಡಿ ಪೊಲೀಸರ ಹೊಡೆತಾ ತಿಂದು ಜೈಲಿಗೆ ಹೋಗಿದ್ದ. ಗಾಂಧೀ ಅಜ್ಜನ ಕಟ್ಟಾಭಕ್ತ ಅಂವಾ. ಮಕ್ಕಳಿಗೆಲ್ಲಾ ಓದು-ಬರಹ ಕಲಿಸಿದಾ, ಖಾದೀ ತೊಡಾಕ ಹಚ್ಚಿದಾ, ನೂಲಕ ರಾಟೀ ತಂದುಕೊಟ್ಟಿದ್ದಾ, ರಟ್ಟೀ ಮುರುದು ದುಡದ ತಿನ್ರಿ ಅಂತಿದ್ದಾ. ಈ ಜಾತಿ ಪಾತಿ ಎಲ್ಲಾ ಮನಿಶೇರ ಮಾಡಿಕೊಂಡದ್ದೋ ಮಕ್ಕಳ್ಯಾ, ಎಲ್ಲಾರ ಮೈಯಾನ ರಕ್ತ ಕೆಂಪs ಐತಿ, ಹುಟ್ಟಿಸಿದ ದೇವರು ಒಬ್ಬನs ಅದಾನ ತಿಳಕೊಳ್ರಿ ಅಂತಬುದ್ಧಿ ಹೇಳತಿದ್ದಾ"(ಶಾಂತದೇವಿ ಕಣವಿ; ೧೯೯೭; ಪು. ೧೧) ಎಂದು ನುಡಿಯುತ್ತಾಳೆ. ಇಲ್ಲಿ ಶಾಂತಾದೇವಿ ಕಣವಿಯವರು ವೀರಪ್ಪ ಎಂಬ ಗಾಂಧೀಜಿಯ ಭಕ್ತನ ಮೂಲಕ ಗಾಂಧೀಜಿಯನ್ನು ಜಾತ್ಯಾತೀತನನ್ನಾಗಿ, ಧರ್ಮಾತೀತನನ್ನಾಗಿ ಮತ್ತು ಶ್ರಮಜೀವಿಯನ್ನಾಗಿ ಪ್ರತಿನಿಧಿಸಿದ್ದಾರೆ. ಗಾಂಧಿಯ ಚಿಂತನೆಗಳಿಂದ ಪ್ರಭಾವಿತಳಾದ ದೇವಕಿ ತನ್ನ ನೋವನ್ನು ಎದುರಿಸಿ ಮೋಸ ಮಾಡಿದ ತನ್ನ ಗಂಡನಿಗೆ ಹಿಂಸೆ ನೀಡದೇ ಅಹಿಂಸೆಯನ್ನು ಅನುಸರಿಸುತ್ತಾ ತನ್ನ ಬದುಕನ್ನು ಮುಂದುವರೆಸುತ್ತಾಳೆ.

ಗಾಂಧೀಜಿ ಅಸ್ಪೃಶ್ಯರನ್ನು, ದಲಿತರನ್ನು ಹೆಚ್ಚಾಗಿ ಪ್ರೀತಿಸಿದವರು. ಸರಕಾರ ನಿರೂಪಿಸುವ ಯೋಜನೆಗಳು ದಲಿತರಿಗೆ ಸಮರ್ಪಕವಾಗಿ ತಲುಪಿದರೆ ಮಾತ್ರ ಆ ಯೋಜನೆಗಳಿಗೆ ಅರ್ಥ

ಬರುತ್ತದೆ ಮತ್ತು ಅವುಗಳು ಸಾರ್ಥಕವೆನಿಸುತ್ತದೆ ಎಂದು ತಿಳಿದಿದ್ದವರು. ಇಂತಹ ವಿಚಾರಶೀಲರಾದ ಗಾಂಧಿಯ (ಸ್ವಾತಂತ್ರ್ಯೋತ್ತರ ಭಾರತ) ನಾಡಿನಲ್ಲಿ ದಲಿತರಿಗೆ ಸರಕಾರದಿಂದ ಬರುವಂತಹ ಯೋಜನೆಗಳು ಮತ್ತು ಇನ್ನಿತರವುಗಳಿಂದ ವಂಚಿತರನ್ನಾಗಿಸಿದುದನ್ನು 'ಕೆರೆ' ಎಂಬ ಕಥೆಯಲ್ಲಿ ಡಾ. ನಿರುಪಮಾ ಅವರು ವಿವರಿಸಿದ್ದಾರೆ.

ತಿಂಮನಹಳ್ಳಿಯ ಅಸ್ಪೃಶ್ಯ ಜನಾಂಗದವವರಿಗೆ ಸರ್ಕಾರ ಕುಡಿಯುವ ನೀರಿಗಾಗಿ ಒಂದು ಕೆರೆಯನ್ನು ನಿರ್ಮಿಸುವ ಆಶ್ವಾಸನೆ ಕೊಡುತ್ತದೆ. ಸುಳ್ಳು ದಾಖಲೆಗಳ ಮೂಲಕ ಆ ಸರಕಾರ ತಿಂಮನಹಳ್ಳಿಯಲ್ಲಿ ಕೆರೆ ನಿರ್ಮಿಸಿ, ಅದರ ಕಲುಷಿತ ನೀರಿನಿಂದ ಖಾಯಿಲೆ ಹರಡಿಕೊಂಡಿದ್ದರಿಂದ ಆ ಕೆರೆಯನ್ನು ಮುಚ್ಚಿಸಲಾಗಿದೆ. ಆದರೆ ವಾಸ್ತವವಾಗಿ ಆ ಹಳ್ಳಿಯಲ್ಲಿ ಕೆರೆ ನಿರ್ಮಾಣ ವಾಗಿರುವುದಿಲ್ಲ. ತಿಂಮನಹಳ್ಳಿಯ ಅಸ್ಪೃಶ್ಯ(ಮಾದಿಗ) ಜನಾಂಗದ ಮುಖ್ಯಸ್ಥ ಚೋಮ ಮಾತ್ರ ಕೆರೆ ನಿರ್ಮಾಣಕ್ಕಾಗಿ ಸರಕಾರಿ ಕಛೇರಿಗಳಿಗೆ ಅಲೆಯುತ್ತಿರುತ್ತಾನೆ.

ಈ ಕಥೆಯ ಕಥೆಗಾರ್ತಿಯೇ ಇಲ್ಲಿ ನಿರೂಪಕರಾಗಿದ್ದಾರೆ.

ಗುಂಡಾದ ನುಣ್ಣನೆಯ ಬೋಳು ತಲೆ
ನೆರಿಗೆ ಮೂಡಿದ ಹಣೆ
ಮೂಗಿನ ಮೇಲೆ ಚಾಳೀಸು
ಮೂಗಿನ ಕೆಳಗೆ ತುಟಿಯ ಸುತ್ತಲೂ ಬಾಗಿದ ನೆರೆತ ಮೀಸೆ
ವಸ್ತ್ರರಿಕ್ತ ವಕ್ಷ
ಮೊಣಕಾಲಿನ ಮೇಲೆ ಉಟ್ಟ ಮೂರು ಮೊಳದ ಅಂಗವಸ್ತ್ರ
ಎಡಭಾಗದಲ್ಲಿ ಸೊಂಟದಿಂದ ಅಂಗವಸ್ತ್ರದ ಮೇಲೆ ಚೈನಿನೊಂ
ದಿಗೆ ನೇತಾಡುತ್ತಿರುವ ಒಂದು ಚಿಕ್ಕ ಗಡಿಯಾರ
ಬಲಗೈಯಲ್ಲಿ ಒಂದು ಉದ್ದನೆಯ ಬೆತ್ತ; ಹರಸುತ್ತಿರುವಂತೆ
ಸ್ವಲ್ಪ ಮೇಲಕ್ಕೆತ್ತಿದ ಎಡ ಅಂಗೈ.

ಒಂದು ಕಾಲು ಹಿಂದಿಟ್ಟು ಇನ್ನೊಂದು ಕಾಲು ಮುಂದಕ್ಕೆ ಇಟ್ಟು ನಡೆಯುತ್ತಿರುವ ಭಂಗಿಯಲ್ಲಿರುವ ಪಾದಗಳು. ಆ ಪಾದಗಳಿಗೆ ಸಾದಾ ಚಪ್ಪಲಿ. ಸತ್ಯ ಅಹಿಂಸೆಗಳ ಸರ್ವಸಮಾನತೆಗೆ ಸಂಕೇತವಾಗಿರುವ ಪೂಜ್ಯ ಬಾಪೂಜಿಯ ಜೀವಂತ ಪ್ರಮಾಣದ ತೈಲವರ್ಣ ಚಿತ್ರ" ಎಂದು ಡಾ. ನಿರುಪಮಾ ಕಥೆಯ ಆರಂಭದಲ್ಲಿ ಗಾಂಧೀಜಿಯ ಪೋಷಾಕುವನ್ನು ನಿರೂಪಿಸಿದ್ದಾರೆ (ನಿರುಪಮಾ; ೧೯೯೮; ಪು. ೫). ನುಣ್ಣನೆಯ ಬೋಳು ತಲೆ, ವೃತ್ತಾಕಾರದ ಚಾಳೀಸು, ವಸ್ತ್ರರಿಕ್ತ ವಕ್ಷ, ಮೊಣಕಾಲಿನ ಮೇಲೆ ಮೂರು ಮೊಳದ ಅಂಗವಸ್ತ್ರ, ಉದ್ದನೆಯ ಬೆತ್ತ, ಸೊಂಟದಲ್ಲಿ ನೇತಾಡುವ ಚೈನಿನ ಚಿಕ್ಕ ಗಡಿಯಾರ ಇವೆಲ್ಲವು ಗಾಂಧೀಜಿಯ ಇರುವಿಕೆಯನ್ನು ಪ್ರತಿನಿಧಿಸುತ್ತವೆ. ನಿರುಪಮಾ ಅವರು ಗಾಂಧಿಯನ್ನು ಸತ್ಯ, ಅಹಿಂಸೆಗಳ ಸರ್ವಸಮಾನತೆಯ ಸಂಕೇತವಾಗಿ ಪ್ರತಿನಿಧಿಸಿದ್ದಾರೆ.

ಇಂತಹ ಸರ್ವಸಮಾನತೆಯ ಸಂಕೇತದಂತಿರುವ ಗಾಂಧೀಜಿಯ ನಾಡಿನಲ್ಲಿ ಅಸ್ಪೃಶ್ಯರ ಮೇಲೆ ಸರಕಾರದ ಮಟ್ಟದಲ್ಲಿಯೂ ರಾಜಕೀಯ ಬಲದಿಂದ ಅನ್ಯಾಯ, ದಬ್ಬಾಳಿಕೆಗಳು ನಡೆಯುತ್ತಲೇ ಇವೆ. ಈ ಕಥೆಯ ಪ್ರಮುಖ ಪಾತ್ರವಾದ ಚೋಮ "ಆ ಮಾರಾಯ ಸತ್ತು ಐಸೊಂದು ವರ್ಸ ಕಳದ್ರೂ ನಮ್ಗೆ ಅನ್ಕೂಲ ಆಗ್ನಿಲ್ಲ ಬುದ್ಧೀ"(ಅದೇ; ಪು. ೭) ಎಂದು ನೋವಿನಿಂದ ಬಾಪೂಜಿಯನ್ನು ನೆನೆಯುತ್ತಾನೆ. ಇಲ್ಲಿ ಗಾಂಧೀಜಿ ಇರುವವರೆಗೆ ಅನ್ಯಾಯ, ಅಕ್ರಮ, ಹಿಂಸೆಗಳಿಗೆ ಜಾಗವಿರಲಿಲ್ಲ. ಅವರಿಲ್ಲದ ಈ ನಾಡಿನಲ್ಲಿ ಇವೆಲ್ಲವೂ ತಾಂಡವವಾಡುತ್ತಿವೆ. ಹೀಗಾಗಿ ಗಾಂಧಿ ಅನ್ಯಾಯ, ಅಸತ್ಯ, ಹಿಂಸೆ, ಅರಾಜಕಥೆ ಮುಂತಾದವುಗಳನ್ನು ನಿರ್ನಾಮ ಮಾಡುವ ನೇತಾರನಾಗಿದ್ದಾನೆ ಎಂಬುದು ಈ ಕಥೆ ಧ್ವನಿಸುತ್ತದೆ.

ಗಾಂಧೀಜಿ ಮಹಿಳೆಯರ ಸಮಾನತೆ, ಶಿಕ್ಷಣ ಇತ್ಯಾದಿಗಳಲ್ಲಿ ಸ್ತ್ರೀಗೆ ಹೆಚ್ಚು ಆದ್ಯತೆಯನ್ನು ಕೊಟ್ಟವರಾಗಿದ್ದಾರೆ. ಹಾಗೆ ಸ್ತ್ರೀ ಜಗತ್ತು ಕೂಡ ಗಾಂಧೀಜಿಯನ್ನು ಪೂಜ್ಯರನ್ನಾಗಿಯೇ ಹೆಚ್ಚಾಗಿ ಪರಿಭಾವಿಸಿದೆ. ಡಾ. ನಿರುಪಮಾ ಅವರು ಸರ್ವಸಮಾನತೆಯ ಸಂಕೇತವಾಗಿ, ಅನಸೂಯ ರಾವ್ ಅವರು 'ಕಸ್ತೂರಬಾ' ಕಥೆಯಲ್ಲಿ ನಿಸ್ವಾರ್ಥದ ಪ್ರತೀಕವಾಗಿ, ಶಾಂತಾದೇವಿ ಕಣವಿ ಅವರು 'ಗಾಂಧಿ ಮಗಳು' ಕಥೆಯಲ್ಲಿ ಜಾತ್ಯಾತೀತನಾಗಿ, ಸರ್ವಧರ್ಮ ಆರಾಧಕನಾಗಿ ಗಾಂಧಿಯನ್ನು ಪ್ರತಿನಿಧಿಸಿದ್ದಾರೆ. ದೇಶದ ಆದರ್ಶಪುರುಷನಾಗಿ ಗಾಂಧಿಯನ್ನು ಸ್ತ್ರೀಯರು ಸ್ವೀಕರಿಸಿದ್ದಾರೆ. ಅವರ ಚಿಂತನೆಗಳು, ಅವರ ವ್ಯಕ್ತಿತ್ವ ಅಪಮೌಲ್ಯಗೊಳ್ಳುವುದನ್ನು ತಮ್ಮ ಕಥೆಗಳಲ್ಲಿ ಮಹಿಳೆಯರು ವಿವರಿಸಿದ್ದಾರೆ.

ಸಣ್ಣ ಕಥೆಗಾರರಲ್ಲಿ ಸಹ ಕಾದಂಬರಿಕಾರರ ಸಮಸ್ಯೆ ಅಥವಾ ಧೋರಣೆಗಳೇ ವ್ಯಕ್ತವಾಗುತ್ತವೆ. ಈ ಕಥೆ ಪ್ರಕಾರದಲ್ಲಿ ಗಾಂಧೀಜಿಯವರನ್ನು ಒಂದು ಪಾತ್ರವಾಗಿ ಚಿತ್ರಿಸಿರುವುದು ಬಹುಮಟ್ಟಿಗೆ ಕಾಣಸಿಗುವುದಿಲ್ಲ. ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದು ಗಾಂಧೀಜಿಯವರ ಆದರ್ಶಗಳು ಮತ್ತು ವ್ಯಕ್ತಿತ್ವಗಳು ಉಲ್ಲೇಖವಾಗಿವೆ. ಈ ಪ್ರಕಾರದಲ್ಲಿ ಗಾಂಧೀಜಿಯವರನ್ನು ಆದರ್ಶಿಸುವುದು, ಪ್ರಯೋಗಶೀಲತೆಗೆ ಒಳಪಡಿಸಿ ವಿಡಂಬಿಸಲಾಗಿದೆ. ಇನ್ನು ಕೆಲವರು ಜಾತ್ಯಾತೀತನಾಗಿ, ಸರ್ವಧರ್ಮಗಳ ಆರಾಧಕನಾಗಿ ಪ್ರತಿನಿಧಿಸಿದ್ದಾರೆ. ಕೆಲವು ಕಥೆಗಳಲ್ಲಿ ಲಘು ಹಾಸ್ಯ ವಿಡಂಬನೆಯಿದ್ದರೂ ಅವುಗಳ ಹಿಂದೆ ತೀಕ್ಷ್ಣವಾದ ವಿರೋಧ ಅಥವಾ ಹತಾಶೆಗಳನ್ನು ವ್ಯಕ್ತಪಡಿಸಿದ್ದಾರೆ. ಸಮಾಜದ ಅಂಕು -ಡೊಂಕುಗಳನ್ನು ತಿದ್ದುವಲ್ಲಿ ಗಾಂಧೀತತ್ವಗಳು ಪ್ರಮುಖ ಪಾತ್ರವಹಿಸುತ್ತವೆ ಎಂದು ಗಾಂಧೀಜಿಯವರನ್ನು ಬಡವರ ಪಾಲಿನ ತಂದೆಯಾಗಿ, ಮಧ್ಯಮವರ್ಗದ ವಿದ್ಯಾವಂತರಿಗೆ ಮಾರ್ಗದರ್ಶಕರಾಗಿ ಕಂಡರಿಸಲಾಗಿದೆ.

❖❖❖

ಅಧ್ಯಾಯ : ಆರು

ನಾಟಕಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

ಅಧ್ಯಾಯ : ಆರು

ನಾಟಕಗಳಲ್ಲಿ ಗಾಂಧೀಜಿಯ ಪ್ರತಿನಿಧೀಕರಣ

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು ಶ್ರೀಮಂತವಾಗಿರುವಂತೆ ನಾಟಕ ಪ್ರಕಾರವೂ ಶ್ರೀಮಂತವಾಗಿದೆ. ನಾಟಕ ಒಂದು ಪ್ರದರ್ಶನ ಕಲೆಯಾಗಿದೆ. ಮಾನವನ ಅಭಿನಯದ ಮೂಲಕವೇ ನಾಟಕ ಜನ್ಮತಾಳಿದೆ. ನಾಟಕವು ಮೊದಲಿಗೆ ಗ್ರೀಕ್ ಮತ್ತು ರೋಮ್ ನಾಗರಿಕತೆಗಳಲ್ಲಿ ಉಗಮ ವಾಯಿತೆಂದು ಪರಿಭಾವಿಸಿಕೊಳ್ಳುತ್ತೇವೆ. ಕನ್ನಡ ರಂಗಭೂಮಿಗೆ ಸುಮಾರು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ ಎಂಬ ವಾದವಿದೆ. ಆದರೆ ನಮಗೆ ಇದರ ಹುಟ್ಟನ್ನು - ಬೆಳವಣಿಗೆಯನ್ನು ಗುರುತಿಸಲು ಹೊರಟರೆ ೧೬೮೦ರ ಸುಮಾರಿನಲ್ಲಿ ಚಿಕ್ಕದೇವರಾಜ ಒಡೆಯರ ಆಸ್ಥಾನ ಕವಿ ಸಿಂಗರಾರ್ಯನಿಂದ ರಚಿತವಾದ ಮಿತ್ರಾವಿಂದಾಗೋವಿಂದ ಕನ್ನಡದ ಮೊಟ್ಟಮೊದಲ ನಾಟಕವೆಂದು ಕಂಡುಬರುತ್ತದೆ. ಇದಕ್ಕಿಂತಲೂ ಹಿಂದೆ ನಾಟಕಗಳು ರಚಿತವಾಗಿದ್ದರೂ ಯಾವೊಂದು ನಮಗೆ ದೊರೆತಿಲ್ಲವಾದ ಕಾರಣ ಈ ನಾಟಕವನ್ನೇ ಮೊದಲನೆಯದೆಂದು ಗುರುತಿಸುತ್ತೇವೆ. ಇದು ಶ್ರೀಹರ್ಷನಿಂದ ಸಂಸ್ಕೃತದಲ್ಲಿ ರಚಿತವಾದ ರತ್ನಾವಳಿ ನಾಟಕದ ಕನ್ನಡ ಅನುವಾದ. ಅನುವಾದ ವಾದರೂ ಒಂದು ರೀತಿಯಲ್ಲಿ ಸ್ವತಂತ್ರ ಕೃತಿ ಎನ್ನುವಂತೆ ನಾಟಕಕಾರ ಮಾರ್ಪಾಡು ಗಳನ್ನು ಮಾಡಿಕೊಂಡಿದ್ದಾನೆ. ಕನ್ನಡದಲ್ಲಿ ನಾಟಕ ಸಾಹಿತ್ಯದ ನಿರಂತರ ಧಾರೆ ೧೯ನೇ ಶತಮಾನದ ಅಂತ್ಯದಿಂದ ಹೊಸತಾಗಿ ಪ್ರಾರಂಭವಾಯಿತೆಂದು ಹೇಳಬಹುದು. ಕನ್ನಡ ರಂಗಭೂಮಿಯ ಬೆಳವಣಿಗೆಯಲ್ಲಿ ಪ್ರತ್ಯೇಕವಾದ ಮೂರು ಪರಂಪರೆಗಳನ್ನು ಗುರುತಿಸಬಹುದು. ಜನಪದ ರಂಗಭೂಮಿ ನಾಟಕ, ವೃತ್ತಿರಂಗಭೂಮಿ ನಾಟಕ ಮತ್ತು ಹವ್ಯಾಸಿ ರಂಗಭೂಮಿ ನಾಟಕವೆಂದು ವಿಭಾಗಿಸ ಬಹುದಾಗಿದೆ.

ಸಂಸ್ಕೃತದಿಂದ ನಾಟಕಗಳು ಅನುವಾದಗೊಂಡಂತೆ ಇಂಗ್ಲೀಷ್‌ನಿಂದಲೂ ನಾಟಕಗಳು ಕನ್ನಡಕ್ಕೆ ಅನುವಾದಗೊಂಡವು. ಇಲ್ಲಿ ಕೆಲವು ಮೂಲದಲ್ಲಿದ್ದಂತೆ ಅನುವಾದಗೊಂಡವು. ಇಲ್ಲಿ ಕೆಲವರು ಮೂಲದಲ್ಲಿದ್ದಂತೆ ಅನುವಾದ ಮಾಡಿದರೆ ಕೆಲವರು ರಂಗಭೂಮಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅನುವಾದ ಮಾಡಿದರು ಮತ್ತು ರೂಪಾಂತರಿಸಿದರು. ೧೮೮೦ರ ಸುಮಾರಿನಲ್ಲಿ ಎಂ.ಎಲ್. ಶ್ರೀಕಂಠೇಶಗೌಡರು ಷೇಕ್ಸ್‌ಪಿಯರನ ಮ್ಯಾಕ್‌ಬೆತ್ ಹಾಗೂ ಎ ಮಿಡ್‌ಸಮ್ಮರ್ ನೈಟ್ ಡ್ರೀಮ್

ನಾಟಕಗಳನ್ನು ಪ್ರತಾಪ ರುದ್ರದೇವ ಹಾಗೂ ಪ್ರಮೀಳಾರ್ಜುನೀಯ ಎಂಬ ಹೆಸರುಗಳಿಂದ ಕನ್ನಡಕ್ಕೆ ತಂದರು. ಬಿ.ಎಂ.ಶ್ರೀ ಅವರ ಪಾರಸಿಕರು, ಎಸ್.ಜಿ. ಶಾಸ್ತ್ರೀ ಅವರ ಸಾಕ್ರಟೀಸನ ಕೊನೆಯ ದಿನಗಳು ಆರ್ಯಕ ಮತ್ತು ಸೂತ್ರದ ಬೊಂಬೆ ಇವು ಉತ್ತಮ ಅನುವಾದಗಳಾಗಿವೆ.

ಅನುವಾದಗಳಂತೆಯೇ ಪ್ರಪಂಚದ ಬೇರೆ ಬೇರೆ ಸಾಹಿತ್ಯದಿಂದ ರೂಪಾಂತರಗೊಂಡು ಹಲವು ಸಾಹಿತ್ಯ ಕೃತಿಗಳು ಕನ್ನಡಕ್ಕೆ ಬಂದಿವೆ. ರೂಪಾಂತರಗೊಳ್ಳುವಲ್ಲಿ ಮೂಲದ ಚೌಕಟ್ಟು ಹಾಗೆಯೇ ಇದ್ದು, ವಸ್ತು ಮತ್ತು ಪಾತ್ರಗಳು ನಮ್ಮದಾಗಿವೆ. ಹೀಗೆ ರೂಪಾಂತರಗೊಂಡ ಸಾಮಾಜಿಕ ನಾಟಕಗಳಲ್ಲಿ ಎ.ಎನ್. ಮೂರ್ತಿರಾಯರ ಆಷಾಢಭೂತಿ, ಪರ್ವತವಾಣಿ ಅವರ ಬಹದ್ದೂರ್ ಗಂಡು, ವಾರ್ಷಿಕೋತ್ಸವ, ಉಂಡಾಡಿ ಗುಂಡ ಮೊದಲಾದವನ್ನು ಹೆಸರಿಸಬಹುದಾಗಿದೆ.

ಸ್ವತಂತ್ರವಾಗಿ ನಾಟಕಗಳನ್ನು ರಚಿಸುವಾಗಲೂ ಈ ಅನುವಾದಗಳ ಮಾದರಿಯ ಆದರ್ಶಗಳನ್ನು ಆಧರಿಸಿ ಲೇಖಕರು ನಾಟಕಗಳನ್ನು ರಚಿಸಲು ಹೊರಟರು. ಮೊದಮೊದಲು ಪೌರಾಣಿಕ ವಸ್ತುಗಳನ್ನು ಆಯ್ಕೆ ಮಾಡಿಕೊಂಡರು. ಈ ರಚನೆಗಳಿಗೆ ಕಾರಣ ಕನ್ನಡ ಅಭಿಮಾನ ಹಾಗೂ ಕನ್ನಡ ರಂಗಭೂಮಿಯನ್ನು ಜೀವಂತಗೊಳಿಸಬೇಕೆಂಬ ಹಂಬಲ. ಮರಾಠಿ ನಾಟಕಗಳ ಪ್ರದರ್ಶನಗಳಿಗೆ ಕನ್ನಡ ಜನ ಮಾರುಹೋಗುವುದನ್ನು ತಪ್ಪಿಸಲು ಹಾಗೂ ಕನ್ನಡ ರಂಗಭೂಮಿ ನಾಶವಾಗಬಾರದೆಂಬ ಅಭಿಮಾನದಿಂದ ಸ್ವತಂತ್ರ ನಾಟಕ ರಚಿಸಲು ಮೊದಲು ಮುಂದಾದವರು ಶಾಂತಕವಿಗಳು. ಇವರು ಗಿರಿಜಾ ಕಲ್ಯಾಣ, ಉಷಾಹರಣ, ವತ್ಸಲಾಹರಣ ಇವುಗಳನ್ನು ಬಯಲಾಟದ ಮಾದರಿಯಲ್ಲಿ ರಚಿಸಿದ್ದಾರೆ. ಬೆಳ್ಳಾವೆ ನರಹರಿಶಾಸ್ತ್ರಿಗಳು ಮತ್ತು ನಂಜನಗೂಡು ಶ್ರೀಕಂಠಶಾಸ್ತ್ರಿಗಳು ರಂಗಭೂಮಿ ಗಾಗಿಯೇ ನಾಟಕಗಳನ್ನು ರಚನೆ ಮಾಡಿದವರಲ್ಲಿ ಪ್ರಮುಖರು.

"ಭಾಷಾಂತರ ಕಲೆಯಲ್ಲಿ ಮುಂದುವರೆದ ಕನ್ನಡ ನಾಟಕ ರಚನೆ ಕಾಲಾನಂತರದಲ್ಲಿ ಬದಲಾವಣೆ ಹೊಂದಿತು. ಇಂಗ್ಲೀಷ್, ಗ್ರೀಕ್ ಮೊದಲಾದ ಸಾಹಿತ್ಯಗಳ ಅಭ್ಯಾಸ ಮಾಡಿದವರು ಆ ಸಾಹಿತ್ಯಗಳ ಪ್ರಭಾವಕ್ಕೆ ಒಳಗಾದರು. ಇದರ ಪರಿಣಾಮವಾಗಿ ಕನ್ನಡದಲ್ಲಿ ಓದಲೂ, ಆಡಲೂ ಸಾಧ್ಯವಾಗುವಂಥ ಕೆಲವು ನಾಟಕಗಳು ಬಂದವು. ಇವುಗಳಲ್ಲಿ ರೂಪಾಂತರಗಳೂ ಅನುವಾದಗಳೂ ಸ್ವತಂತ್ರ ಕೃತಿಗಳೂ ಇವೆ. ಈ ಸಾಲಿನಲ್ಲಿ ಬಿ.ಎಂ.ಶ್ರೀ., ಕುವೆಂಪು, ಮಾಸ್ತಿ, ಡಿ.ವಿ.ಜಿ., ವಿ.ಸೀ., ಎಲ್. ಗುಂಡಪ್ಪ, ಜಿ.ಪಿ. ರಾಜರತ್ನಂ, ಕಡೆಂಗೋಡ್ಲು ಶಂಕರಭಟ್ಟ ಮೊದಲಾದವರನ್ನು ಗುರುತಿಸಬಹುದು" ಎಂದು ಲಿಂಗದೇವರು ಹಳೆಮನೆ ಅವರು ವಿವರಿಸಿದ್ದಾರೆ (ಗಂಗಾನಾಯಕ. ಕೆ.ಎನ್.(ಸಂ); ೨೦೧೧; ಪು. ೨೩) .

ಶ್ರೇಷ್ಠ ಕೃತಿಗಳು ಕನ್ನಡಕ್ಕೆ ಅನುವಾದಗೊಂಡು ರೂಪಾಂತರಗೊಂಡು ರಂಗಭೂಮಿಯ ಮೇಲೆ ಬರುತ್ತಿದ್ದಂತೆಯೇ ಕನ್ನಡ ರಂಗಭೂಮಿಯ ಮೇಲೆ ಸ್ವತಂತ್ರ ಕೃತಿಗಳು ಕಾಣಿಸಿಕೊಂಡವು. "ಉತ್ತರ ಕನ್ನಡ ಜಿಲ್ಲೆಯಲ್ಲಿ ಹವ್ಯಕರು ಮಾತನಾಡುವ ಕನ್ನಡದಲ್ಲಿ ರಚಿತವಾದ ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ ಮೊದಲ ಸಾಮಾಜಿಕ ನಾಟಕ ಎನ್ನುವ ಐತಿಹಾಸಿಕ ಮಹತ್ವ ಪಡೆದಿದೆ" (ಅದೇ; ಪು. ೨೩). ಈ ದಿಶೆಯಲ್ಲಿ ಟಿ.ಪಿ. ಕೈಲಾಸಂ ಹಾಗೂ ಶ್ರೀರಂಗರು ಮೊದಲು ಕೆಲಸ

ಮಾಡಿದರು. ಇವರು ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡು ಬರೆಯಲು ಪ್ರಾರಂಭಿಸಿದ ಮೇಲೆ ಹಲವಾರು ನಾಟಕಕಾರರು ಹುಟ್ಟಿಕೊಂಡರು. ಇವರು ಹವ್ಯಾಸಿ ರಂಗಭೂಮಿಯನ್ನು ಜೀವಂತವಾಗಿಡುವ ದೃಷ್ಟಿಯಿಂದ ಇವುಗಳಿಗೆ ಮುಖ್ಯಸ್ಥಾನ ಕೊಟ್ಟರು. ಇವರ ಪ್ರಮುಖ ನಾಟಕಗಳೆಂದರೆ ಬಹದ್ದೂರ್ ಗಂಡು, ಉಂಡಾಡಿ ಗುಂಡ, ವಾರ್ಷಿಕೋತ್ಸವ, ಹಣಹದ್ದು ಮೊದಲಾದವು. ಇನ್ನೂ ಕೆಲವರು ಪ್ರಹಸನಗಳನ್ನು ರಚಿಸಿದರು. ಈ ದಿಕ್ಕಿನಲ್ಲಿ ದಾಶರಥಿ ದೀಕ್ಷಿತ್, ಎ.ಎನ್. ಮೂರ್ತಿ, ಎನ್ಕೆ, ನಾ. ಕಸ್ತೂರಿ, ಕೆ.ಎಸ್. ಸುಬ್ಬನರಸಿಂಹ, ಗುಂಡಣ್ಣ ಮೊದಲಾದವರು ಶ್ರಮಿಸಿದರು.

ಇಂಗ್ಲೀಷ್‌ನ ಅಪೇರಾ ಮಾದರಿಯ ನಾಟಕಗಳು ಗೀತರೂಪಕಗಳು ಎಂಬ ಹೆಸರಿನಿಂದ ಕನ್ನಡಕ್ಕೆ ಬಂದವು. ಈ ಕ್ಷೇತ್ರದಲ್ಲಿ ಶಿವರಾಮ ಕಾರಂತ ಹಾಗೂ ಪು.ತಿ.ನ. ಅವರ ಗೀತನಾಟಕಗಳು ರಚನೆಯಲ್ಲಿ ಭಿನ್ನವಾಗಿವೆ. ಕಾರಂತರು ತಮ್ಮ ಗೀತನಾಟಕಗಳಿಗೆ ಜನಪದ ದೇಸಿಯನ್ನು ಬಳಸಿದರೆ, ಪು.ತಿ.ನ. ಅವರು ತಮ್ಮ ಗೀತನಾಟಕಗಳಿಗೆ ಪುರಾಣಗಳಿಂದ ವಸ್ತುಗಳನ್ನು ಆಯ್ದುಕೊಂಡರು. ಪು.ತಿ.ನ. ಅವರ ಅಹಲ್ಯೆ, ಗೋಕುಲ ನಿರ್ಗಮನ, ಹಂಸದಮಯಂತಿ ಮುಂತಾದವು ಮುಖ್ಯವಾದವು.

ರೇಡಿಯೋಕ್ಕಾಗಿಯೇ ಬರೆದ ನಾಟಕಗಳು ರಂಗಭೂಮಿ ನಾಟಕಗಳಿಗಿಂತ ಭಿನ್ನವಾಗಿವೆ. ಈ ದೃಷ್ಟಿಯಿಂದ ರಚನೆಯಾದ ನಾಟಕಗಳನ್ನು ಗುರುತಿಸುವುದಾದರೆ ಬೀಚಿ ಅವರ ರೇಡಿಯೋ ನಾಟಕಗಳು, ಎಚ್.ಕೆ. ರಂಗನಾಥ ಅವರ ದುರಂತ ಮತ್ತು ಇತರ ಪ್ರಸಾರ ನಾಟಕಗಳು, ಎಸ್.ಎನ್. ಶಿವಸ್ವಾಮಿ ಅವರ ಹೃದಯಾಂತರಾಳ, ವಸಂತಕವಲಿ ಅವರ ಪುರಂದರ ದರ್ಶನ ಮೊದಲಾದವು.

ಪ್ರಬುದ್ಧರಿಗಾಗಿ ನಾಟಕಗಳು ರಚನೆಯಾದಂತೆ ಮಕ್ಕಳಿಗಾಗಿಯೂ ರಚನೆಗೊಂಡಿವೆ. ಬೇಸಿಗೆ ಶಿಬಿರ ಮತ್ತು ಮಕ್ಕಳ ಶಿಬಿರಗಳಿಂದಾಗಿ ಮಕ್ಕಳ ನಾಟಕ ರಚನೆಗೆ ವಿಶೇಷ ಪ್ರೋತ್ಸಾಹ ದೊರಕಿತು. ಇದರಿಂದಾಗಿ ಅನೇಕ ಹಿರಿಯ-ಕಿರಿಯ ನಾಟಕಕಾರರು ಮಕ್ಕಳಿಗಾಗಿಯೇ ಬರೆಯ ತೊಡಗಿದರು. ಬಿ.ವಿ. ಕಾರಂತರ ಪಂಜರ ಶಾಲೆ, ನೀಲಿಕುದುರೆ, ಹೆಡ್ಡಾಯಣ, ಕೆ.ವಿ. ಸುಬ್ಬಣ್ಣ ಅವರ ಜಯಂಟ್‌ಮಾಮ, ಬೆಟ್ಟಕ್ಕೆ ಚಳಿಯಾದರೆ, ಅಬ್ದುಲ್ ರೆಹಮಾನ್‌ಪಾಷ ಅವರ ಬೆಳೆದವರು, ನಕ್ಕಳಾ ರಾಜಕುಮಾರಿ, ನೀ ನನಗಿದ್ದರೆ ನಾ ನಿನಗೆ, ವೈದೇಹಿ ಅವರ ಧಾಂ ಧೂಂ ಸುಂಟರಗಾಳಿ, ಸೂರ್ಯ ಬಂದ, ಮೂಕನ ಮಕ್ಕಳು ಮುಂತಾದವು ಮಕ್ಕಳ ರಂಗಭೂಮಿಯ ಸಾಧ್ಯತೆಗಳನ್ನು ವಿಸ್ತರಿಸಿವೆ.

ಕನ್ನಡದ ಪ್ರಮುಖ ಕತೆ ಮತ್ತು ಕಾದಂಬರಿಗಳನ್ನು ಆಧರಿಸಿ ನಾಟಕದ ರೂಪವನ್ನು ತಳೆಯಲಾರಂಭಿಸಿದವು. ಅವುಗಳಲ್ಲಿ ಪ್ರಮುಖವಾಗಿ ದೇವನೂರು ಮಹಾದೇವ ಅವರ ದ್ಯಾವನೂರು, ಒಡಲಾಳ ಮತ್ತು ಕುಸುಮಬಾಲೆ, ಶಿವರಾಮ ಕಾರಂತರ ಚೋಮ, ತೇಜಸ್ವಿಯವರ ಕುಬಿ ಮತ್ತು ಇಯಾಲ, ಕಿರಗೂರಿನ ಗಯ್ಯಾಳಿಗಳು, ಕುಂ. ವೀರಭದ್ರಪ್ಪನವರ ಬೇಲಿ ಮತ್ತು ಹೊಲ ಈ ನಿಟ್ಟಿನಲ್ಲಿ ಮೂಡಿಬಂದ ನಾಟಕಗಳು.

ಬೀದಿನಾಟಕಗಳು ಸಹ ರಂಗಮಾಧ್ಯಮವಾಗಿ ಕಾಣಿಸಿಕೊಂಡವು. ಎ.ಎಸ್. ಮೂರ್ತಿಯವರ 'ಬಂದ್ರಪ್ಪೋ ಬಂದ್ರು', ಚಂದ್ರಶೇಖರ ಪಾಟೀಲ ಅವರ 'ಜಗದಂಬೆ', ಸಿ.ಜಿ. ಕೃಷ್ಣಸ್ವಾಮಿಯವರ 'ಬೆಲ್ಚಿ' ಮುಂತಾದವು ಬೀದಿನಾಟಕದ ಸ್ವರೂಪಕ್ಕೊಂದು ಸ್ಪಷ್ಟ ಸ್ವರೂಪ ನೀಡಿರುವ ನಾಟಕಗಳಾಗಿವೆ.

ಹೀಗೆ ಕನ್ನಡ ನಾಟಕ ಸಾಹಿತ್ಯ ಬಹುಮುಖವಾದ ಬೆಳವಣಿಗೆಯನ್ನು ಹೊಂದಿದೆ. ಕನ್ನಡ ನಾಟಕ ಚಳುವಳಿ ರಂಗಭೂಮಿಯಂತೆಯೇ ಸಾಹಿತ್ಯಿಕ ಚಳುವಳಿಯೂ ಆಯಿತೆಂಬುದನ್ನು ಗಮನಿಸಬಹುದು. ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸದೊಂದಿಗೆ ಹೊಂದಿಕೊಂಡೇ ಹೆಜ್ಜೆಯಿಟ್ಟಿರುವ ಈ ಆಧುನಿಕ ಕನ್ನಡ ನಾಟಕದಲ್ಲಿಯೂ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಮಾರ್ಗಗಳನ್ನು ಗುರುತಿಸಬಹುದು. ಪ್ರಸ್ತುತ ಅಧ್ಯಾಯ ಪಂಥೀಯ ಬಿಕ್ಕಟ್ಟಿಗೆ ಒಳಗಾಗುವುದರಿಂದ ನಾಟಕಕಾರರನ್ನು ಗೆರೆಕೊರೆದಂತೆ ಆಯಾಯ ಪಂಥದ ನಾಟಕಕಾರರೆಂದು ಗುರುತಿಸುವುದು ಸುಲಭ ಸಾಧ್ಯವಲ್ಲ. ಆದರೂ ಅಧ್ಯಯನದ ಇತಿಮಿತಿಗಳ ನೆಲೆಯಲ್ಲಿಯೇ ಪಂಥೀಯ ನೆಲೆಯಲ್ಲಿ ಗುರುತಿಸಿಕೊಳ್ಳಲಾಗಿದೆ. ಆದರೂ ಗಾಂಧೀಜಿಯವರನ್ನು ಲೇಖಕರು ಸ್ವೀಕರಿಸಿದ ಬಗೆಯಾಗಿ ಅಧ್ಯಯನ ಕೆಲವೊಮ್ಮೆ ತನ್ನ ಇತಿಮಿತಿಗಳೊಂದಿಗೆ ಸಾಗುತ್ತದೆ. ಈ ಎಲ್ಲಾ ಮಾರ್ಗದ ಲೇಖಕರು ರಾಷ್ಟ್ರಪಿತನಾದ ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ಹಲವಾರು ನಾಟಕಗಳನ್ನು ರಚಿಸಿರುವುದನ್ನು ಪರಾಮರ್ಶಿಸಲಾಗಿದೆ. ಸಾಹಿತ್ಯದ ನೆಲೆಯಿಂದಲೇ ಗಾಂಧೀಜಿಯವರನ್ನು ಆಧುನಿಕ ಕನ್ನಡ ನಾಟಕ ವಿವೇಚಿಸಿರುವುದನ್ನು ಹಾಗೂ ಕಂಡರಿಸಿರುವುದನ್ನು ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

೬.೧. ನವೋದಯ ನಾಟಕ

"ಕನ್ನಡ ನಾಟಕ ಸಾಹಿತ್ಯ ಪರಂಪರೆ ಹೆಚ್ಚು ಪ್ರಾಚೀನತೆಯನ್ನು ಹೊಂದಿಲ್ಲ" (ಮರಳುಸಿದ್ದಪ್ಪ. ಕೆ.; ೨೦೧೩; ಪು. ೯೨). ೧೬ - ೧೮ನೆಯ ಶತಮಾನದಿಂದ 'ನಾಟಕ'ಗಳ ಪ್ರಾಚೀನತೆಯನ್ನು ಗುರುತಿಸಿಕೊಳ್ಳಲಾಗಿದೆ. ಕನ್ನಡ ರಂಗಭೂಮಿ ಪ್ರಾಚೀನತೆ ಹೊಂದಿದ್ದು, ಸಾಹಿತ್ಯೋಚಿತ ನಾಟಕಗಳು ಇತ್ತೀಚಿನವೆಂಬ ಸಂಗತಿಯನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ.

"ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗ ಮತ್ತು ಇಪ್ಪತ್ತನೆಯ ಶತಮಾನದ ಆರಂಭ ಕಾಲದಲ್ಲಿ ನಡೆದ ರಾಷ್ಟ್ರೀಯ ಚಳುವಳಿ ಮಹಾತ್ಮ ಗಾಂಧಿಯವರ ಬರವಿಗೆ ಪೂರ್ವ ಸಿದ್ಧತೆಯಾಗಿ ಪರಿಣಮಿಸಿತು. ಮೊದಲನೇ ಮಹಾಯುದ್ಧ ಮತ್ತು ಅದರ ಪರಿಣಾಮಗಳು ಭಾರತವನ್ನು ಆರ್ಥಿಕವಾಗಿ ತೀವ್ರ ಶೋಷಣೆಗೆ ಗುರಿಪಡಿಸುತ್ತಿರುವ ಕಾಲದಲ್ಲಿ ಭಾರತದ ರಾಜಕೀಯ ನಾಯಕತ್ವವನ್ನು ಮಹಾತ್ಮಗಾಂಧಿಯವರು ವಹಿಸಿಕೊಂಡರು. ಇಲ್ಲಿಗೆ ಆಧುನಿಕ ಭಾರತದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸದಲ್ಲಿ ಒಂದು ಪರ್ವವು ಮುಗಿದು ಗಾಂಧಿಯುಗವು ಆರಂಭವಾಯಿತು" ಎಂದು ಕೆ. ಮರುಳಸಿದ್ದಪ್ಪನವರು ಅಭಿಪ್ರಾಯಿಸಿದ್ದಾರೆ (ಅದೇ; ಪು. ೯೨). ಆಧುನಿಕ ಭಾರತೀಯ ಸಾಹಿತ್ಯ ಮತ್ತು ಅದರ ಅವಿಭಾಜ್ಯ ಅಂಗವೇ ಆದ ಹೊಸಗನ್ನಡ ಸಾಹಿತ್ಯದ ಆರಂಭ ಕಾಲಘಟ್ಟವಾದ ನವೋದಯಕ್ಕೆ ಸ್ಫೂರ್ತಿ ದೊರೆತಿದ್ದೂ

ಪಾಶ್ಚಾತ್ಯ ಶಿಕ್ಷಣ ಮತ್ತು ಭಾರತದ ಪುನರುಜ್ಜೀವನ ಚಳವಳಿಯಿಂದ ಎಂದು ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ಉಲ್ಲೇಖಿಸಲಾಗಿದೆ. ನವೋದಯ ಕಾಲಘಟ್ಟ ಮತ್ತು ಗಾಂಧಿಯುಗ ಇವೆರಡೂ ಏಕಕಾಲದಲ್ಲಿ ಪ್ರಕ್ರಿಯೆಯಲ್ಲಿದ್ದಂಥವು. ಹಾಗಾಗಿ ನವೋದಯದ ಕೆಲ ಲೇಖಕರು ನೇರವಾಗಿ ಗಾಂಧಿಯವರ ಪ್ರಭಾವಕ್ಕೊಳಗಾಗಿದ್ದಾರೆ. ಅವರ ಸಾಹಿತ್ಯ(ನಾಟಕ) ಕೃತಿಗಳಲ್ಲಿ ಗಾಂಧಿ ಪ್ರಮುಖ ಪಾತ್ರ ಹಾಗೂ ವಸ್ತುವಾಗಿ ಪರಿಣಮಿಸಿದ್ದಾರೆ.

ಹತ್ತೊಂಬತ್ತನೇ ಶತಮಾನದಲ್ಲಿ ನಡೆದ ಅನುವಾದ ರೂಪಾಂತರಗಳು ಆಧುನಿಕ ಕನ್ನಡ ನಾಟಕಗಳಿಗೆ ಪೂರ್ವಸಿದ್ಧತೆಯೆಂದೇ ಪರಿಗಣಿಸಿದ್ದೇವೆ. "ಆಧುನಿಕ ಕನ್ನಡ ನಾಟಕ ಜನ್ಮ ತಾಳಲು ಪ್ರಮುಖವಾದ ಮತ್ತೊಂದು ಕಾರಣ, ನಾಟಕದ ವಸ್ತುವಿಗೆ ಸಂಬಂಧಿಸಿದೆ. ಪೌರಾಣಿಕ ವಸ್ತುವಿಗೆ ಮಾತ್ರ ರಂಗಭೂಮಿಯಲ್ಲಿ ಆದ್ಯತೆಯಿದ್ದ ಕಾಲದಲ್ಲಿ ಸಾಮಾಜಿಕ ವಸ್ತುವಿನತ್ತ ಕನ್ನಡ ನಾಟಕಕಾರರ ಗಮನಹರಿದದ್ದು ಮತ್ತು ಜೀವನ ವಿಮರ್ಶೆಯ ಸಾಧನವಾಗಿ ನಾಟಕಗಳನ್ನು ರಚಿಸಲು ತೊಡಗಿದ್ದು ಐತಿಹಾಸಿಕವಾಗಿ ಅತ್ಯಂತ ಮಹತ್ವದ ವಿಚಾರವಾಗಿದೆ. ಇಂಗ್ಲೆಂಡಿನಲ್ಲಿ ನಾಟಕಗಳನ್ನು ಕುರಿತು ವಿಶೇಷವಾಗಿ ಅಧ್ಯಯನ ನಡೆಸಿದ ಕೈಲಾಸಂ ಅವರೇ ಈ ಸಾಮಾಜಿಕ ನಾಟಕ ಪರಂಪರೆಗೆ ಜೀವ ತುಂಬಿದವರು"(ಅದೇ; ಪು. ೧೦೭) ಎಂದು ಕೆ. ಮರುಳಸಿದ್ದಪ್ಪನವರು ವಿವರಿಸಿದ್ದಾರೆ.

ನವೋದಯದ ಲೇಖಕರು ತಮ್ಮ ಸಾಹಿತ್ಯಿಕ (ಸಾಮಾಜಿಕ, ರಾಜಕೀಯ) ನಾಟಕಗಳಲ್ಲಿ ಗಾಂಧಿಯಿಂದ ಪ್ರಭಾವಿತರಾಗಿ ಅವರನ್ನು ಕಂಡರಿಸಲು ಪ್ರಯತ್ನಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಜಿ.ಪಿ. ರಾಜರತ್ನಂ ಅವರ 'ಸಂಭವಾಮಿ ಯುಗೇ ಯುಗೇ', ನೀಲತ್ತಳ್ಳಿ ಕಸ್ತೂರಿ ಅವರ 'ಕ್ರಾಂತಿಮಾರ್ಗ' ಮತ್ತು 'ಇದು ಭಾರತದ ದಾರಿ', ಆನಂದಕಂದ ಅವರ 'ಅಮೃತಾತ್ಮ', ಎಚ್. ರಾಮಕೃಷ್ಣರಾಯ ಅವರ 'ಗಾಂಧೀಜಿ ಸ್ವರ್ಗದಲ್ಲಿ', ಎಂ.ಎ. ದೊರೆಸ್ವಾಮಿ ಅಯ್ಯಂಗಾರ್ ಅವರು 'ಧರ್ಮಜ್ಯೋತಿ', ಪು.ತಿ.ನ. ಅವರ 'ವಿಕಟಕವಿ ವಿಜಯ', ರವೀಂದ್ರ ಅವರ 'ಮುಕ್ತಧಾರಾ', ಶ್ರೀರಂಗರ 'ಶೋಕಚಕ್ರ' ಮತ್ತು 'ಹರಿಜನ್ವಾರ', ಗೋವಿಂದ ಪೈ ಅವರ 'ಚಿತ್ರಭಾನು ಅಥವಾ ೧೯೪೨', ಕುವೆಂಪು ಅವರ 'ಬಲಿದಾನ', ದ.ರಾ. ಬೇಂದ್ರೆ ಅವರು 'ಉದ್ಧಾರ' ಹೀಗೆ ಈ ನಾಟಕಗಳಲ್ಲಿ ಗಾಂಧಿಯನ್ನು ಹಾಗೂ ಅವರ ವಿಚಾರಧಾರೆಯನ್ನು ಕಾಣಬಹುದಾಗಿದೆ.

೧೯೪೨ರಲ್ಲಿ ಉತ್ತರ ಕರ್ನಾಟಕದಲ್ಲಿ ನಡೆದ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುಬ್ಬಳ್ಳಿಗೆ ಒಂದು ವಿಶೇಷವಾದ ಸ್ಥಾನವಿತ್ತು. ಆ ರಣರಂಗದಲ್ಲಿ ಮಾತೃಭೂಮಿಯ ಬಿಡುಗಡೆಗಾಗಿ ಹಲವರ ಪ್ರಾಣಗಳು ಬಲಿಯಾಗಿದ್ದವು. ಆ ಪ್ರಾಣತೆತ್ತವರಲ್ಲಿ ವೀರೇಂದ್ರನೆಂಬ ಯುವಕನ ಪಾತ್ರ ಗೋವಿಂದ ಪೈ ಅವರಿಗೆ ಪ್ರಮುಖವೆನಿಸುತ್ತದೆ. ೧೯೪೨ರ ಆ ದುರ್ಘಟನೆಯನ್ನು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯ ಒಂದು ಸಂಚಿಕೆಯಲ್ಲಿ ವಿವರಿಸಿದ ಮಾಹಿತಿಯನ್ನು ಓದಿದ ಗೋವಿಂದ ಪೈ ಅವರು ಅದರಿಂದ ಪ್ರಭಾವಿತರಾಗಿ 'ಚಿತ್ರಭಾನು ಅಥವಾ ೧೯೪೨' ಎಂಬ ನಾಟಕವನ್ನು ರಚಿಸಿದ್ದಾರೆ.

೧೯೪೨ರಲ್ಲಿ ಹುಬ್ಬಳ್ಳಿಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಸಾವಿಗೀಡಾದ ವೀರೇಂದ್ರನೆಂಬ ವಿದ್ಯಾರ್ಥಿ ಬಲಿಯಾಗುತ್ತಾನೆ. "ಆ ದುರ್ಘಟನೆ ಸಂಭವಿಸಿದ ೧೯೪೨ನೆಯ ಇಸವಿಯೆಂದರೆ ನಮ್ಮ ಕಾಲಗಣನೆಯ ಪ್ರಕಾರ ಶಾಲಿವಾಹನ ಶಕವರ್ಷ ೧೮೬೪ನೆಯ ಚಿತ್ರಭಾನು ಸಂವತ್ಸರ ವಾದುದರಿಂದ, ನನ್ನ ನಾಟಕಕ್ಕೆ 'ಚಿತ್ರಭಾನು ಅಥವಾ ೧೯೪೨' ಎಂದು ಜೋಡು ಹೆಸರನ್ನಿತ್ತೆ" ಎಂದು ಗೋವಿಂದ ಪೈ ಅವರು ನಾಟಕದ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ(ಗೋವಿಂದ ಪೈ; ೨೦೦೯; ಪು. ಪ್ರಸ್ತಾವನೆ).

"ಗಾಂಧೀಜಿಯವರ 'ಕ್ವಿಟ್ ಇಂಡಿಯಾ' (ಭಾರತ ಬಿಟ್ಟು ತೊಲಗಿ) ವಜ್ರಘೋಷದಿಂದ ೧೯೪೨ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚರಿತ್ರಾರ್ಹ ಇಸವಿಯಾಗುತ್ತದೆ. 'ಮಾಡು ಇಲ್ಲವೇ ಮಡಿ' (Do Or Die) ಎಂಬ ಕರೆ ದೇಶಭಕ್ತರು ಮತ್ತು ಬ್ರಿಟಿಷರ ನಡುವೆ ಹೋರಾಟವನ್ನು ಪರ್ಯಾಪ್ತ ಸ್ಥಿತಿಗೆ ಎತ್ತುತ್ತದೆ; ದೇಶಕ್ಕಾಗಿ ಬಲಿದಾನ ಇಹ - ಪರ ಸದ್ಗತಿಯ ಸಾಧನವಾಗಿ ಮೌಲ್ಯವಾಗುತ್ತದೆ. ಈ ಹೋರಾಟದ ಸ್ವರೂಪ ಮತ್ತು ಸಂದೇಶವನ್ನು, ಕರ್ನಾಟಕದಲ್ಲಿನ ಒಂದು ಐತಿಹಾಸಿಕ ಘಟನೆಯಿಂದ ಪ್ರೇರಣೆ ಪಡೆದು, ಚಳುವಳಿಗಾರ ವೀರಯುವಕನೊಬ್ಬ ಪೊಲೀಸರ ಗುಂಡಿಗೆ ಬಲಿಯಾಗುವ ವಿವರದ ಮೂಲಕ ಗೋವಿಂದ ಪೈಯವರು ಏಕಾಂಕದ ಪರಿಮಿತಿಯೊಳಗೆ ನಾಟಕವಾಗಿಸಿ, ಅದಕ್ಕೆ, 'ಚಿತ್ರಭಾನು ಅಥವಾ ೧೯೪೨' ಎಂಬ ಜೋಡು ಹೆಸರನ್ನು ಕೊಡುತ್ತಾರೆ"(ಅದೇ; ಪು. ೧೫) ಎಂದು ಎಸ್. ಶಿವಾಜಿ ಜೋಯಿಸ್ ಅವರು ವಿವರಿಸಿದ್ದಾರೆ.

ತಾಯಿ - ಮಗ, ಪ್ರಿಯ - ಪ್ರೇಯಸಿ ಸಂಬಂಧಗಳನ್ನು ದೇಶಭಕ್ತಿ ಮೀರಿ ನಿಲ್ಲುವ ಚಿತ್ರವನ್ನು ಈ ನಾಟಕ ಕೊಡುತ್ತದೆ. ಮಹಾತ್ಮಾ ಗಾಂಧಿಯವರ ಅಹಿಂಸಾ ಮಾರ್ಗದ ಬಗ್ಗೆ ಗೌರವವಿದ್ದೂ, ದೇಶದ ಬಿಡುಗಡೆಯ ಚರಮ ಉದ್ದೇಶದಲ್ಲಿ ಹಿಂಸಿಸಿದವರನ್ನು ಪ್ರತಿ ಹಿಂಸಿಸುವ ಧೋರಣೆಯೇ ಇದ್ದ ಪ್ರಬಲವಾದ ಹೋರಾಟಗಾರರ ವರ್ಗಕ್ಕೆ ಈ ನಾಟಕದ ನಾಯಕ ವೇಣುಗೋಪಾಲ ಸೇರುತ್ತಾನೆ. ಈ ನಾಟಕದಲ್ಲಿ ಬ್ರಿಟಿಷ್ ಅಧಿಕಾರಿಯ ಪಾಶವೀ ಕ್ರೌರ್ಯ ವೇಣುಗೋಪಾಲನನ್ನು ಬಲಿ ತೆಗೆದುಕೊಳ್ಳುತ್ತದೆ. "ವೇಣುಗೋಪಾಲನಿಗೆ ಒಂದು ಕೌಟುಂಬಿಕ ಹಾಗೂ ಹೋರಾಟದ ಪರಿಸರ ಕಟ್ಟಿಕೊಡುವ ಮೂಲಕ, ನಾಟಕದ ಕಟ್ಟಡವನ್ನು ನಾಟಕಕಾರರು ರಚಿಸುತ್ತಾರೆ. ವೇಣುಗೋಪಾಲನ ಮನೆಯಲ್ಲಿಯೇ '೧೯೪೨ನೆಯ ಇಸವಿಯ ಚಿತ್ರಭಾನು ಸಂವತ್ಸರದ ಯಾವೊಂದು ದಿನದ ರಾತ್ರಿ ೧೧ ಗಂಟೆಯಿಂದ ಮಾರನೆಯ ಬೆಳಿಗ್ಗೆ ೪ ಗಂಟೆಯೊಳಗೆ' ತಪ್ಪಿಸಿ ಮನೆಗೆ ಬಂದ ಚಳವಳಿಗಾರ ವೇಣುಗೋಪಾಲನನ್ನು ಪೊಲೀಸರು ಹುಡುಕಿ ಕೊಲ್ಲುವುದರ ಮೂಲಕ ಏಕಾಂಕ ನಾಟಕ ನಿರೀಕ್ಷಿಸುವ ಸ್ಥಳೈಕ್ಯ, ಕಾಲೈಕ್ಯ ಮತ್ತು ಕ್ರಿಯೈಕ್ಯಗಳನ್ನು ಸಾಂಗಗೊಳಿಸಿ ರುವುದು ಈ ನಾಟಕದಲ್ಲಿ ಕಾಣುತ್ತದೆ" (ಅದೇ; ಪು. ೧೬) ಎಂದು ಎಸ್. ಶಿವಾಜಿ ಜೋಯಿಸ್ ಅವರು ಈ ನಾಟಕ ಕುರಿತು ಹೇಳಿದ್ದಾರೆ.

ವೇಣುಗೋಪಾಲ ಚಳುವಳಿಗೆ ಧುಮುಕಿದಾಗಿನ ಅವನ ಕೌಟುಂಬಿಕ ಸನ್ನಿವೇಶ ಇಂತಿದೆ. ಆತ ೨೨-೨೩ ವರ್ಷದ ತರುಣ. ಆತನ ತಾಯಿ ಯಶೋಧೆ ಮುದುಕಿ. ತಂದೆ ಉಪಕಾರದಲ್ಲೇ ಜೀವನ ಕಳೆದು ವಿರಾಗಿಯಾಗಿ ಮನೆ ಬಿಟ್ಟು ಹೋಗಿದ್ದಾನೆ. ಆತನ ಔದಾರ್ಯದಿಂದಾಗಿ ಇವರು ಮನೆಯನ್ನು ಕಳಕೊಳ್ಳುವಂತಾಗಿ, ಬದುಕನ್ನು ತಾವೇ ರೂಪಿಸಿಕೊಳ್ಳಬೇಕಾಗುತ್ತದೆ. ಜೊತೆಗೆ ೧೮-೧೯ರ ಜಾಹ್ನವಿ ಸಾಕುಮಗಳಾಗಿ ಇರುತ್ತಾಳೆ. ತಾಯಿ ಯಶೋಧೆಗೆ ಒಬ್ಬನೇ ಮಗನ ಆಸರೆ ಬೇಕಾಗಿದೆ. ಜಾಹ್ನವಿಗೆ ವೇಣು ಜೊತೆಗೆ ಬಾಳಸಂಗಾತಿಯಾಗಿ ಬಾಳುವ ಆಸೆ. ವೇಣುಗೋಪಾಲನಿಗೆ ತಾಯಿ ಮತ್ತು ಜಾಹ್ನವಿಯರ ಪ್ರೇಮ ಮತ್ತು ಅವರ ಬದುಕಿಗೆ ತನ್ನ ಅನಿವಾರ್ಯತೆಯ ಅರಿವು ಇದ್ದೂ, ಆತ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುವುದರ ಹಿಂದಿರುವ ದೇಶಭಕ್ತಿಯ ತೀವ್ರತೆ ಆಗಿನ ಕಾಲಕ್ಕೆ ಸಹಜವಾದುದೇ ಆಗಿದೆ. ರಾತ್ರಿಯ ಹೊತ್ತು ೫ ಗಂಟೆಯ ಅವಧಿಯಲ್ಲಿ ಈ ಏಕಾಂಕ ನಾಟಕ ನಡೆಯುತ್ತದೆ.

ನಾಟಕದ ಪ್ರಮುಖ ಪಾತ್ರವಹಿಸಿದ ವೇಣುವಿನ ತಾಯಿ ಯಶೋಧ ದೇಶ ಸ್ವಾತಂತ್ರ್ಯದ ಬಗ್ಗೆ ಮತ್ತು ಗಾಂಧೀಜಿಯವರ ಚಿಂತನೆಗಳ ಬಗ್ಗೆ ಅಭಿಮಾನ ತೋರುತ್ತಿದ್ದಳು. ಈಕೆ "ಹಸುವಿನ ಕೆಚ್ಚಲನ್ನು ಒದ್ದೆ ಕೆಯ್ಯಿಂದ ಹಿಂಡುವಂತೆ, ಪ್ರತಿಕೂಲವಾದ ಕಾಲವನ್ನು ಅಹಿಂಸೆಯ ನೆರವಿನಿಂದ ಒಲಿಸಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಾರೆ ಮಹಾತ್ಮರು"(ಅದೇ; ಪು. ೩೨) ಎಂದು ಗಾಂಧೀಜಿಯವರು ಸಾರಿದ ಅಹಿಂಸೆಯ ತತ್ವವು ಪ್ರತಿಕೂಲದಲ್ಲಿ ಅಥವಾ ಅರಾಜಕತೆಯಲ್ಲಿ ತೊಳಲಾಡುವ ದೇಶದ ಜನತೆಯನ್ನು ಹತೋಟಿಯಲ್ಲಿಡುವ ಅಸ್ತ್ರವಾಗಿದೆ ಎಂದು ತನ್ನ ಭಾವವನ್ನು ವ್ಯಕ್ತಪಡಿಸುತ್ತಾಳೆ. ಯಶೋಧ ತನ್ನ ಮಗನಿಗೆ "ಆದರೆ ವೇಣು ಗಾಂಧಿ ತತ್ವದ ಮೇರೆಗೆ ನೀವು ನಿಮ್ಮನ್ನು ಒಪ್ಪಿಕೊಳ್ಳಬೇಕಿತ್ತಲ್ಲ? ಆ ಸುಗ್ರಿವಾಜ್ಞೆಯನ್ನು ಹೇಗೆ ಮುರಿದಿರಿ?"(ಅದೇ; ಪು. ೩೬) ಎಂದು ಪ್ರಶ್ನಿಸುತ್ತಾಳೆ. ಅದಕ್ಕೆ ಪ್ರತಿಯಾಗಿ ವೇಣು ನಗುತ್ತಾ "ಅವ್ವಾ, ಮಹಾತ್ಮರ ತತ್ವ ಬೇರೆ ಅದನ್ನು ಮಂದಿ ಆಚರಿಸುವ ವಿಧಾನ ಬೇರೆ. ಇದನ್ನು ಮಹಾತ್ಮರೂ ಬಲ್ಲರು. ...ಮಹಾತ್ಮರ ಗುರಿಗೂ ನಮ್ಮ ಗುರಿಗೂ ಭೇದವೆಂದರೆ ತಣ್ಣೀರು ಮತ್ತು ಬೆನ್ನೀರಂತೆ. ಆದರೆ ಎರಡರ ಕೆಲಸವೂ ಮನೆಗೆ ಹತ್ತಿದ ಬೆಂಕಿಯನ್ನು ನಂದಿಸುವುದೇ"(ಅದೇ; ಪು. ೩೬). ಗಾಂಧಿ ಮತ್ತು ಕ್ರಾಂತಿಕಾರಿಗಳ ಗುರಿ ದೇಶವನ್ನು ಬ್ರಿಟೀಷರ ಕೈಸೆರೆಯಿಂದ ಬಿಡುಗಡೆಗೊಳಿಸುವುದು ಒಂದೇ ಆದರೂ, ಅನುಸರಿಸುವ ವಿಧಾನ ಬೇರೆ ಬೇರೆ ಎಂಬುದನ್ನು ನಾಟಕಕಾರರು ವ್ಯಕ್ತಪಡಿಸಿದ್ದಾರೆ. ಗಾಂಧಿಯವರ ಹೋರಾಟದ ವಿಧಾನ ಆರೋಗ್ಯಕರವಾಗಿದ್ದು ಸುದೀರ್ಘವಾದ ಫಲವನ್ನು ನೀಡುವಂಥದ್ದು. ಹಾಗಾಗಿ ಗಾಂಧೀಜಿ ದೂರದೃಷ್ಟಿಯನ್ನು ಹೊಂದಿದ ಒಬ್ಬ ಮಹಾಮಾನವತಾವಾದಿ ಎಂದು ಗೋವಿಂದ ಪೈ ಅವರು ಪ್ರತಿನಿಧಿಸಿದ್ದಾರೆ.

ಗಾಂಧೀಜಿ ಅಹಿಂಸಾ ತತ್ವದ ಮೂಲಕ ದೇಶವನ್ನು ಬಂಧಮುಕ್ತವಾಗಿಸಲು ಪ್ರಯತ್ನಿಸುತ್ತಾರೆ. ಆದರೆ ಇವರ ತತ್ವಗಳನ್ನು ಅಲ್ಲಗಳೆದು ಕ್ರಾಂತಿಕಾರಿಗಳು ಆಂಗ್ಲರ ವಿರುದ್ಧ ಹೋರಾಡುತ್ತಾರೆ. ಇದನ್ನು ಯಶೋಧೆ ತನ್ನ ಮಗನಿಗೆ "ವೇಣು, ಮಹಾತ್ಮರ ತತ್ವ ಕೊಲ್ಲಬಾರದೆಂದಲ್ಲವೇ"

(ಅದೇ; ಪು. ೫೨) ಎಂದು ಪ್ರಶ್ನಿಸುವಳು. ಪ್ರತಿಯಾಗಿ ವೇಣು "ಸರಿಯೇ ಅವ್ವಾ, ನಾವು ಕೊಲ್ಲುವುದಿಲ್ಲ. ಈವರೆಗೂ ಕೊಂದಿಲ್ಲ. ಕೊಲ್ಲುವುದೆಲ್ಲಾ ಅವರೇ ನಮ್ಮನ್ನು, ಕೊಲ್ಲುವೆವೆಂಬ ಭಾಷೆ ಆಂಗ್ಲರದು, ಗೆಲ್ಲುವೆವೆಂಬ ಭಾಷೆ ತಾನೆ ನಮ್ಮದು. ಈಗ ತಾಯಿ ಬಿರುಗಾಳಿಗೆ ಏಳುವ ಮುಂಚೆ ಹಲದಿನಗಳಿಂದ ನಿದ್ದೆ ಹೋಗುತ್ತಿರುವ ಕಡಲಿನಂತೆ, ಹೆಚ್ಚು ಕಡಿಮೆ ೧೯೨೦ರವರೆಗೆ ನಿದ್ದೆಯಲ್ಲಿದ್ದ ಅಥವಾ ಅರೆನಿದ್ದೆಯಲ್ಲಿ ಕನವರಿಸುತ್ತಿದ್ದ, ನಮ್ಮ ಭಾರತ ಮಹಾತ್ಮರ ಪರಿಶ್ರಮದ ಫಲವಾಗಿ ಅಂದಿನಿಂದ ಎಚ್ಚೆತ್ತಿದೆ. ಈಗ ಪೂರಾ ಎದ್ದಿದೆ"(ಅದೇ; ಪು. ೫೨) ದೇಶಕ್ಕೆ ಗಾಂಧೀಜಿಯ ಆಗಮನದಿಂದ ಮತ್ತು ಅವರ ತತ್ತ್ವಾದರ್ಶಗಳಿಂದ ದಾಸ್ಯವೆಂಬ ಅಂಧಕಾರದಲ್ಲಿ ಮಲಗಿದ್ದ ಭಾರತವನ್ನು ಗಾಂಧಿ ಎಚ್ಚರಿಸಿದರು. ಅವರ ಅಹಿಂಸಾ ತತ್ವದ ಶಕ್ತಿಯನ್ನು ದೇಶದ ಜನತೆಗೆ ಸಾರಿದರು. ಅದನ್ನು ದೇಶದ ಬಿಡುಗಡೆಯ ಆಕಾಂಕ್ಷಿಗಳು ಸರ್ವವಿದಿತವಾಗಿ ಒಪ್ಪಿದರು. ಅಹಿಂಸಾ ತತ್ವದ ನಿಧಾನಗತಿಯ ಪ್ರಗತಿಯನ್ನು ಮನಗಂಡ ಕ್ರಾಂತಿಕಾರಿಗಳು ಅದರ ಪ್ರತಿರೂಪವಾಗಿಯೇ ಕ್ರಾಂತಿಯನ್ನು ಕೈಗೊಂಡರು. ಶೀಘ್ರವಾಗಿ ಫಲವನ್ನು ಅಪೇಕ್ಷಿಸಿದ ಕ್ರಾಂತಿಕಾರಿಗಳು ಅಷ್ಟೇ ಶೀಘ್ರವಾಗಿ ತಮ್ಮ ಹೋರಾಟಗಳು ವಿಫಲವಾಗುತ್ತಾ ಹೋದವು. ಆದರೆ ಗಾಂಧಿಯವರ ಅಹಿಂಸಾ ತತ್ವದ ವಿಧಾನದ ಹೋರಾಟ ಎಂದಿಗೂ ಸೋಲದೆ ದೇಶ ಬಂಧಮುಕ್ತದ ತನಕ ಕ್ರಿಯಾಶೀಲಗೊಂಡಿತು ಮತ್ತು ದೇಶದ ಜನತೆಯನ್ನು ಎಚ್ಚರಿಸಿತು ಎಂದು ನಾಟಕಕಾರರು ವ್ಯಕ್ತಪಡಿಸುತ್ತಾರೆ.

ವೇಣುವಿಗಿಂತ ಹಿರಿತಲೆಯಾದ ಯಶೋಧೆ ಗಾಂಧಿಯವರ ಅಹಿಂಸಾ ತತ್ವವನ್ನು ಉಲ್ಲಂಘನೆ ಮಾಡಬಾರದು ಎಂದು ಆಲೋಚಿಸುತ್ತಾಳೆ. ಇಂತಹ ಮನಸ್ಥಿತಿಯನ್ನು ಹೊಂದಿದ ಈಕೆ ತನ್ನ ಮಗನಿಗೆ "ಮಹಾತ್ಮರ ಅಹಿಂಸಾ ತತ್ವ ವೇಣು, ಈ ಬಿಡುಗಡೆಯ ಕಾದಾಟಕ್ಕೆ ನೆರವಾದೀತೇ" (ಅದೇ; ಪು. ೫೩) ಎಂದು ಮತ್ತೊಮ್ಮೆ ಪ್ರಶ್ನಿಸುತ್ತಾಳೆ. ಅದಕ್ಕೆ ವೇಣು ಗಂಭೀರವಾಗಿ "ಮಕ್ಕಳಿಗೆ ತಾಯಿ, ಸ್ಪಷ್ಟವಾಗಿ ಬಾಯಿ ಬರುವ ಬಗ್ಗೆ ಬಜೆಯನ್ನು ನಂಜಿಸುವಂತೆ, ಮಹಾತ್ಮರ ಅಹಿಂಸಾ ತತ್ತ್ವದಿಂದ ನಮಗೆ ಸ್ವರಾಜ್ಯ ಸಂಪಾದನೆಯ ಸಿದ್ಧತೆಯಲ್ಲಿ ಅಮೂಲ್ಯವಾದ ಶಿಕ್ಷಣವೂ ದೊರೆತಿದೆ. ಆ ತತ್ವದ ಬೆಳಕಿನಲ್ಲಿ ಇದುವರೆಗೆ ಆಂಗ್ಲಶಾಹಿಯ ಹುರಿಹಗ್ಗವನ್ನು ಹಾವೆಂದು ಹೆದರಿ ಹಿಂಜಿದ ನಮ್ಮ ದೃಷ್ಟಿಕೋನವೂ ನೇರ್ಪಟ್ಟಿದೆ. ಅದರೊಂದಿಗೆ ಹಿಂದಣ ಇತಿಹಾಸದಿಂದ ಬಯಸಿದಂತೆ ದಾಯ ಬಿದ್ದು, ಗೆದ್ದು ಗೆದ್ದು ಎದ್ದು ಬರುವಷ್ಟಕ್ಕೆ ಸಾಮ್ರಾಜಿಕೆ ತನ್ನನ್ನು ಮಣ್ಣು ಮುಕ್ಕಿಸುವ ಗೋರಿಗೆ ಹತ್ತಹತ್ತರವಾಗುತ್ತದೆ ಎಂಬ ಶಾಶ್ವತವಾದ ಸತ್ಯವೂ ಮನದಟ್ಟಿದೆ. ಇದನ್ನು ಸರ್ವಥಾನೇತಿಗಳೆಯಲಾಗುವುದಿಲ್ಲ. ಆದರೆ ಎಷ್ಟೋ ನೂರು ವರ್ಷಕ್ಕೊಮ್ಮೆ ಹುಟ್ಟಲಾಪ ಗಾಂಧಿಯವರಂಥ ಒಬ್ಬೊಬ್ಬರು ಮಹಾತ್ಮರಿಗೆ ಮಾತ್ರ ಅಹಿಂಸಾ ಮಾರ್ಗ ಸಾಧ್ಯವಲ್ಲದೆ ಮಿಕ್ಕ ಮನುಷ್ಯ ಕೋಟಿಗಲ್ಲ. ಇಡೀ ರಾಷ್ಟ್ರದಲ್ಲಿ ಅದರ ಆಚರಣೆ ಎಂದಿಗೂ ಸಾಧಿಸದು. ರಾಜ್ಯ ನಿರ್ವಾಹವಂತೂ ಆ ವಿಧಾನದಿಂದ ತೀರ ಅಸಂಭವ; ಸ್ವಾತಂತ್ರ್ಯ ಸಾಧನೆಯಾದರೂ, ನೆಲದಲ್ಲಿ ಒಚ್ಚಿದ ಹರಿಗೋಲಿನಂತೆ, ಮುಂದೆ ಸಾಗದು. ಅಹಿಂಸಾ ತತ್ವವೆಂದರೆ ತಾಯಿ, ಚೊಕ್ಕ ಕುಂದಣ.

ಬಂಗಾರ ಬಹಳ ಒಳ್ಳೆತೇ ಸರಿ. ಆದರೆ ನೇಗಿಲಗುಳಕ್ಕಾದೀತೇ? ಸ್ವರಾಜ್ಯದ ಆರಂಭದಲ್ಲಿ ಈಗ ಬೇಕೆಂದರೆ ಕಬ್ಬಿಣದ ಗುಳತಾನೆ?"(ಅದೇ; ಪು. ೫೩) ಎಂದು ಉತ್ತರಿಸುತ್ತಾನೆ. ದೇಶದ ಜನತೆಯಲ್ಲಿನ ಕ್ರೌರ್ಯವನ್ನು, ಅಂಧಕಾರವನ್ನು ಮತ್ತು ದೇಶವನ್ನು ಸುವ್ಯವಸ್ಥೆಯಲ್ಲಿ ಮುನ್ನಡೆಸಲು ಗಾಂಧಿಯ ಅಹಿಂಸಾ ಮಾರ್ಗ ಪ್ರಮುಖ ಅಸ್ತ್ರವಾಗುತ್ತದೇ ವಿನಃ ಬ್ರಿಟಿಷರನ್ನು ದೇಶದಿಂದ ಹೊರಗೋಡಿಸಲು ಸಾಧ್ಯವಾಗುವುದಿಲ್ಲ. ಗಾಂಧಿಯಂತಹ ಕೆಲ ಮಹಾತ್ಮರಿಗೆ ಮಾತ್ರ ಅಹಿಂಸೆ ಮಾರ್ಗ ಅನುಸರಿಸಲು ಸಾಧ್ಯವಿದೆ ಹೊರತು ಮಿಕ್ಕ ಸಾಮಾನ್ಯರಿಗೆ ಆಗುವುದಿಲ್ಲ. ಬಂಗಾರ ಚೆನ್ನಾಗಿದೆ, ಒಂದು ಪಕ್ಷ ಕಡಿಮೆ ಬೆಲೆಗೆ ಸಿಗುತ್ತದೆ ಅಂತ ನೇಗಿಲ ಕುಳಕ್ಕೆ ಬಳಸಲಾಗುವುದಿಲ್ಲ. ಹೊಲವನ್ನು ಕಬ್ಬಿಣದ ಕುಳದಿಂದ ಹದ ಮಾಡಲು ಸಾಧ್ಯವೇ ಹೊರತು ಬಂಗಾರದ ಕುಳದಿಂದ ಸಾಧ್ಯವಿಲ್ಲ. ಹಾಗಾಗಿ ಇಲ್ಲಿ 'ಬಂಗಾರ'ವನ್ನು ಗಾಂಧಿಯವರ ಅಹಿಂಸಾ ತತ್ವಕ್ಕೆ, ಕಬ್ಬಿಣದ ಕುಳವನ್ನು ಕ್ರಾಂತಿಕಾರಿ ಹೋರಾಟಗಾರರಿಗೆ ಸಾಂಕೇತಿಸಲಾಗಿದೆ. ಕಬ್ಬಿಣಕ್ಕೂ, ಬಂಗಾರಕ್ಕೂ ಹೋಲಿಸಿದಾಗ ಬಂಗಾರ(ಅಹಿಂಸೆ)ಕ್ಕೆ ಬೆಲೆ ಹೆಚ್ಚು ಎಂಬುದನ್ನು ಮರೆಯಬಾರದು. ಬಂಗಾರಕ್ಕೆ ಎಂದಿಗೂ ತುಕ್ಕು ಹಿಡಿಯುವುದಿಲ್ಲ(ಗಾಂಧಿಯ ತತ್ವಗಳು ಎಂದೆಂದಿಗೂ ಪ್ರಸ್ತುತ) ಆದರೆ ಕಬ್ಬಿಣ ಕಾಲಕ್ರಮೇಣ ತುಕ್ಕು ಹಿಡಿದು(ಕ್ರಾಂತಿಕಾರಿ ಮನೋಭಾವ) ಸವೆದು ನಶಿಸಿಹೋಗುತ್ತದೆ ಎಂದು ಇಲ್ಲಿ ಚಿತ್ರಿಸಿದ್ದಾರೆ.

೧೯೪೮ರಲ್ಲಿ ಕುವೆಂಪು ಅವರು 'ಬಲಿದಾನ' ನಾಟಕವನ್ನು ರಚನೆ ಮಾಡಿದ್ದಾರೆ. ಈ ನಾಟಕದಲ್ಲಿ ಭಾರತಾಂಬೆ ಬ್ರಿಟಿಷರ ಸಂಕೋಲೆಯಲ್ಲಿ ಬಂಧಿತಳಾಗಿ ಭರತಸುತನ ಎದುರಿಗೆ ತನ್ನನ್ನು ಬಂಧಮುಕ್ತಳನ್ನಾಗಿ ಮಾಡಲು ಪರಿತಪಿಸುತ್ತಾಳೆ. ಭಾರತಾಂಬೆ ಬ್ರಿಟಿಷರ ಅಟ್ಟಹಾಸ, ಅನ್ಯಾಯ- ಅಕ್ರಮಗಳಿಂದ ಅವರ ಕಾಲಡಿಯಲ್ಲಿ ಬಿದ್ದು ನಲುಗಿಹೋಗಿರುವಳು. ಬ್ರಿಟಿಷರು ಭಾರತಾಂಬೆಯ ಕೈಕಾಲುಗಳನ್ನು ಸಂಕೋಲೆಗಳಿಂದ ಬಿಗಿದು ತನ್ನ ದಾಸಿಯನ್ನಾಗಿಸಿಕೊಂಡಿರುತ್ತಾರೆ. ಇದರಿಂದ ಬೇಸತ್ತ ಭಾರತಾಂಬೆ ಬ್ರಿಟೀಷರ ಬಂಧನದಿಂದ ಮುಕ್ತಗೊಳಿಸುವ ಸಹಾಯಹಸ್ತಗಳಿಗೆ ಎದುರುನೋಡುತ್ತಾಳೆ. ಅಂತಹ ಸಂದರ್ಭದಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬರುವರು. ಭಾರತಾಂಬೆಯ ಹೀನಾಯ ಸ್ಥಿತಿಯನ್ನು ಕಂಡು ಮರುಗಿ ಅವಳನ್ನು ಬ್ರಿಟಿಷರಿಂದ ಬಂಧಮುಕ್ತಳನ್ನಾಗಿ ಮಾಡಲು ಪ್ರಯತ್ನಿಸುತ್ತಾರೆ. ಕೊನೆಗೆ ಗಾಂಧೀಜಿ ಭಾರತಾಂಬೆಯನ್ನು ಬ್ರಿಟೀಷರ ಬಂಧನದ ಸರಪಳಿಯನ್ನು ಕಳಚಿ ಸ್ವತಂತ್ರಳನ್ನಾಗಿ ಮಾಡುವುದೇ ಈ ನಾಟಕದ ಸಾರಾಂಶವಾಗಿದೆ.

ಈ ನಾಟಕದಲ್ಲಿ ಗಾಂಧೀಜಿಯ ನೇರ ಪಾತ್ರವು ಎಲ್ಲೂ ಕಾಣಸಿಗುವುದಿಲ್ಲ. 'ಭಾರತಾಂಬೆ', 'ಭರತಸುತ' ಹಾಗೂ ಅಶರೀರವಾಗಿ ಕೇಳಿಸುವ 'ವಾಣಿ' ಮತ್ತು 'ಧ್ವನಿ'ಗಳು ಇಲ್ಲಿ ಪಾತ್ರಗಳಾಗಿವೆ. ಇದು ಮೂರು ದೃಶ್ಯಗಳನ್ನು ಒಳಗೊಂಡಿದೆ. ಬ್ರಿಟಿಷರು ಭಾರತಾಂಬೆಯನ್ನು ಬಂಧಿಸುತ್ತಾರೆ. ಅವಳ ಮಕ್ಕಳನ್ನು (ದೇಶದ ಜನತೆಯನ್ನು) ಅನ್ಯಾಯ, ದಬ್ಬಾಳಿಕೆ, ಅತ್ಯಾಚಾರಗಳಿಂದ ಬಲಿ ತೆಗೆದುಕೊಳ್ಳುತ್ತಾರೆ. ಇದೆಲ್ಲವನ್ನು ಭಾರತಾಂಬೆ ನೋಡಿ ಮನನೊಂದು ಭರತಸುತನಲ್ಲಿ ತನ್ನ ವೇದನೆಯನ್ನು ತೋಡಿಕೊಳ್ಳುತ್ತಾಳೆ. ಅವಳ ದುಃಖಕ್ಕೆ ಭರತಸುತನು ಸ್ಪಂದಿಸುತ್ತಾನೆ. ನಿನ್ನನ್ನು

ಬಂಧನದಿಂದ ಬಿಡಿಸಿ ಸ್ವತಂತ್ರಳನ್ನಾಗಿ ಮಾಡುತ್ತೇನೆ ಎಂಬ ಮಾತನ್ನು ಹೇಳುತ್ತಾನೆ. ಅದಕ್ಕೆ ಭಾರತಾಂಬೆ ಮತ್ತು ಭರತಸುತನ ನಡುವಿನ ಮಾತುಗಳು ಹೀಗೆ ಏರ್ಪಡುತ್ತವೆ -

"ಭಾರತಾಂಬೆ - ಆವುದಾ ಸ್ವಾತಂತ್ರ್ಯಂ?

ಭರತಸುತ - ನಾಮೆಲ್ಲರಿತ್ತ ಬಲಿದಾನಂಗಳಿಂ ಪಡೆದ ಭಾರತ ಸ್ವಾತಂತ್ರ್ಯಂ!

ಭಾರತಾಂಬೆ - ಬಾಹ್ಯ ಬಂಧನಗಳಂ ಕಳಲ್ಚಿದಿರಿ ದಿಟಂ ಆಂತರದ ಶೃಂಖಲೆಗಳೊಳವು ವಜ್ರೋಪಮಂ. ಅವುಗಳಂ ಕಡಿವ ದುಡಿಮೆಯೊಳಿರ್ಪನೆಡೆಗೆ ನಾನೆಯ್ದಿದೆನ್, ನೆರವೀಯಲೆಂದಾತಂಗೆ!

ಭರತಸುತ - ಆವೆಡೆಗೆ? ಆರವನ್? ಸ್ವಾತಂತ್ರ್ಯದುತ್ಸವಕೆ ಮಕ್ಕಳೆಲ್ಲರ್ ಇಲ್ಲೆ ನೆರೆದಿರ್ಪರಮ್ಮಾ!

ಭಾರತಾಂಬೆ - ಮರೆತೆಯೇನ್? ನೀಂ ತಂದ ಕೀಲಿಕೈಯಂ,
ನೆತ್ತರೊಳ್ ಮುಳುಗಿರ್ದುದಂ? ...
ಬೆನ್ನಟ್ಟುತಿರ್ಪುದಾ ಭೂತಮಿನ್ನುಂ!
ಖಿನ್ನನಾಗದಿರ್

ಅನಿವಾರ್ಯಮದಕೆ ನೀನಲ್ತು ಕಾರಣಂ
ಎಲ್ಲರುಂ ಇಲ್ಲೆ ನೆರೆದಿಹರೆಂದೆಯಲ್ತೆ?
ಎಲ್ಲಿ ತೋರೆನಗಿಲ್ಲಿ ಆ ಸ್ವಾತಂತ್ರ್ಯ ಶಿಲ್ಪಿಯಂ?

ಭರತಸುತ - (ಬೆರಗಾಗಿ ನೋಡಿ)
ಕಾಣೆನಾ ಪುಣ್ಯಾತ್ಮನಂ! ಎಲ್ಲಿದನ್, ತಾಯಿ?

ಭಾರತಾಂಬೆ - ದಿವ್ಯಶಕ್ತಿಯನಿತ್ತಪೆನ್; ಕೇಳ್! ಕಾಣ್!
(ಭರತಸುತ ಆಲಿಸುತ್ತಾನೆ; ಬಹುದೂರದಿಂದ ರಾಮನಾಮ ಇಂಪಾಗಿ ಕರುಣಪೂರ್ವಕವಾಗಿ ತೇಲಿ ಬರುತ್ತದೆ.)

ವಾಣಿ - ರಘುಪತಿ ರಾಘವ ರಾಜಾರಾಮ್
ಪತಿತ ಪಾವನ ಸೀತಾರಾಮ್
ಈಶ್ವರ ಅಲ್ಲಾ ತೇರೇನಾಮ್
ಸಬಕೋ ಸನ್ಮತಿ ದೇ ಭಗವಾನ್!

ಭಾರತಾಂಬೆ - ....

ಭರತಸುತ - ....

ಭಾರತಾಂಬೆ - ನೀನ್ ಕಾಣ್ಬುದದು ವಂಗದೇಶದೊಳ್
ನವಕಾಲಿ ಎಂಬಾಪ್ರದೇಶಂ

ಕೆಲದಿನಗಳಿಂದಲ್ಲಿ ಮೂರ್ಖರೊಳ್ ಕೆರಳಿರ್ಪ
ಮತವೈರ ವಿಷದುರಿಗಳಂ ನಂದಿಸಲ್
ಅಮೃತ ಸ್ವರೂಪನಪ್ಪಾ ಸ್ವಾತಂತ್ರ್ಯಶಿಲ್ಪಿ" (ಕುವೆಂಪು; ೧೯೯೬; ಪು. ೨೨-೨೩)

ಹೀಗೆ ಭರತಸುತನು ಭಾರತಾಂಬೆಯನ್ನು ಅವಳ ಶೃಂಖಲೆಗಳಿಂದ ಬಿಡಿಸಲು ತಂದ ಕೀಲಿ ಕೈ ರಕ್ತದಿಂದ ಮುಳುಗಿದ್ದರಿಂದ ಭರತಸುತನ ವಿಮೋಚನಾ ಕ್ರಮವನ್ನು ತಿರಸ್ಕರಿಸುತ್ತಾಳೆ. ಹಿಂಸೆಗೆ ಪ್ರತಿ ಹಿಂಸೆ ಮಾಡದೆ ಸತ್ಯ, ಅಹಿಂಸೆಯಂತಹ ಮಾರ್ಗವನ್ನು ಮೆಚ್ಚಿಕೊಳ್ಳುತ್ತಾಳೆ. ಆ ತತ್ವಗಳಲ್ಲಿರುವ ಸದ್ಗುಣಗಳನ್ನು ಆರಾಧಿಸುತ್ತಾಳೆ. ಮೂರ್ಖರಿಗೆ, ಮತವೈರಿಗಳಿಗೆ ಹಾಗೂ ವಿಷವನ್ನು(ಕೇಡನ್ನು ಬಯಸುವವರಿಗೆ) ಕಕ್ಕುವವರಿಗೆ ಗಾಂಧೀಜಿ ಒಳ್ಳೆಯದನ್ನು ಬಯಸಿ ಅಮೃತವನ್ನು ನೀಡಿದ ಅಮೃತ ಸ್ವರೂಪಿಯಂತೆ ಹಾಗೂ ಸ್ವಾತಂತ್ರ್ಯ ಹೋರಾಟದ ಮುಂದಾಳತ್ವ ವಹಿಸಿದ ಸ್ವಾತಂತ್ರ್ಯ ಶಿಲ್ಪಿಯಂತೆ ಕುವೆಂಪು ಪ್ರತಿನಿಧಿಸಿದರು.

ಸತ್ಯ, ಅಹಿಂಸೆ, ಶಾಂತಿಯ ತತ್ವಗಳನ್ನು ಅನುಸರಿಸಿ ಹೋರಾಡಿದ ಗಾಂಧೀಜಿಯನ್ನು ಭಾರತಾಂಬೆ ಹೀಗೆ ಸ್ಮರಿಸಿಕೊಳ್ಳುತ್ತಾಳೆ -

"ಭಾರತಾಂಬೆ - ಶಿಲ್ಪಿಯ ಸಮರ್ಪಣದಿ ಶಿಲ್ಪಕೃತಿಯೇಳ್ಗೆ!
ಆಲಿಸದೊ ಕಬ್ಬಿಗನ ಕೊರಲ್
ಸಾರುತಿದೆ ಸತ್ಯ ಸಂದೇಶಮಂ.

ವಾಣಿ - ಈಶ್ವರ ಕೃಪಾಬಾಲದ ಯಾಚನೆಯ ಸಲುವಾಗಿ
ಭೂಮಾತೆ ಕಳುಹಿಸಿಹ ದೂತ ಭಿಕ್ಷು;
ಈ ಲೋಕಮಂ ನಿರ್ನಿಮೇಷಮವಲೋಕಿಸುವ
ಆ ಲೋಕಋತದೊಂದಲೋಕಚಕ್ಷು;
ಸೃಷ್ಟಿಕರ್ತಂ ಸೃಷ್ಟಿ ತಾನಾಗಿ ಸೃಷ್ಟಿಯೊಳೆ
ದುಡಿಯುತಿರ್ಪುದಕವನ ದಿವ್ಯಸಾಕ್ಷಿ!
ಗಾಂಧಿಯೆಂಬಾ ಪೆಸರೆ ನಾಂದಿಯಾಗಲಿ ನಮ್ಮ
ಸ್ವಾತಂತ್ರ್ಯ ಸಂಭ್ರಮಕೆ ಹಾಡು, ಪಕ್ಷಿ!

ಭಾರತಾಂಬೆ - ಗಾಂಧಿಯೆಂಬಾ ಪೆಸರೆ ನಾಂದಿಯಪ್ಪೊಡೆ ನಿಮ್ಮ
ಸ್ವಾತಂತ್ರ್ಯ ಸಂಭ್ರಮಕೆ....ಉಳಿವನಾತನ್!
ಇಲ್ಲದಿರ ತನ್ನ ಕೃತಿಯಭ್ಯುದಯಕಾಗಿ
ಶಿಲ್ಪಿ ತನ್ನನೆ ತಾನು ಬಲಿಗೊಡಲ್ ವೇಳ್ಕುಂ!" (ಅದೇ; ಪು. ೨೪-೨೫)

ಹೀಗೆ ಈಶ್ವರನ ಕೃಪೆಯಿಂದ ಭೂತಾಯಿ ಗಾಂಧಿಯನ್ನು ದೂತ ಭಿಕ್ಷುವಾಗಿ ಕಳುಹಿಸಿದ್ದಾಳೆ. ಈ ಲೋಕದ ದುಡಿಯುವ ವರ್ಗಕ್ಕೆ ಧ್ವನಿಯಾಗಿ ಗಾಂಧಿ ಚಿತ್ರಿತವಾಗಿದ್ದಾರೆ. ಬ್ರಿಟಿಷರ

ಅಧೀನದಲ್ಲಿರುವ ಭಾರತ ದೇಶದ ಸ್ವಾತಂತ್ರ್ಯದ ಸಂಭ್ರಮಕ್ಕೆ ಗಾಂಧಿಯ ಹೆಸರೇ ನಾಂದಿಯಾಗಲಿ ಎಂದು ಹಾರೈಸುತ್ತಾಳೆ ಭಾರತಾಂಬೆ. ದೇಶದ ಸ್ವಾತಂತ್ರ್ಯಕ್ಕೆ ಗಾಂಧಿ ತನ್ನ ಪ್ರಾಣವನ್ನೇ ಬಲಿ ಕೊಡಲು ಸಿದ್ಧರಿದ್ದಾರೆ. ಹಾಗಾಗಿ ಗಾಂಧಿಯನ್ನು ಒಬ್ಬ ಸ್ವಾತಂತ್ರ್ಯದ ಶಿಲ್ಪಿಯಾಗಿ, ಸ್ವಾತಂತ್ರ್ಯ ಸಂಭ್ರಮದ ರೂವಾರಿಯಾಗಿ ಚಿತ್ರಿಸಲಾಗಿದೆ.

ಸ್ವಾತಂತ್ರ್ಯ ಭಾರತದಲ್ಲಿ ಗಾಂಧೀಜಿಯ ಜೀವ ಬಲಿಯಾದುದನ್ನು ಕುವೆಂಪು ಭಾರತಾಂಬೆಯ ಪಾತ್ರದ ಮೂಲಕ ಹೀಗೆ ವ್ಯಕ್ತಪಡಿಸುತ್ತಾರೆ.

"ಭಾರತಾಂಬೆ - ಕಣ್ದೆರೆದು ಕಾಣ್, ರಾಷ್ಟ್ರಧ್ವಜಂಬಿಡಿದು
ಬರುತಿಹುದು ಮಂದಿ ಸಂದಣಿಸಿ ಗುಡಿಗೆ
ನೀ ಕಂಡ ದರ್ಶನದೊಳ್ ಅಖಿಳಾರ್ಥಮಂ
ತಿಳಿದು ಕಾಣ್!
ಹೃದಯ ದೌರ್ಬಲ್ಯಮಂ ಮಾಣ್!
ಸ್ವಾತಂತ್ರ್ಯಜೀವನಂ ಬಲಿ ಪರಂಪರೆಯೆಂಬುದಂ
ಬಲಿದಾನ ತತ್ತ್ವಮಂ, ಭಾವಿಸಿ ಮನಂಗಾಣ್"

(ಅದೇ; ಪು. ೨೬)

ಹೀಗೆ ಸ್ವತಂತ್ರ ಭಾರತದಲ್ಲಿ ಗಾಂಧೀಜಿಯ ಜೀವ ಬಲಿದಾನವಾದುದನ್ನು ಕುವೆಂಪು ಅವರು 'ಬಲಿದಾನ' ನಾಟಕದಲ್ಲಿ ಚಿತ್ರಿಸಿದ್ದಾರೆ. ಕುವೆಂಪು ಗಾಂಧಿಯನ್ನು ಇಲ್ಲಿ ಅಮೃತ ಸ್ವರೂಪಿಯಾಗಿ, ಸ್ವಾತಂತ್ರ್ಯ ಶಿಲ್ಪಿಯಾಗಿ ಪ್ರತಿನಿಧಿಸಿದ್ದಾರೆ.

ಶ್ರೀರಂಗರನ್ನು ಮತ್ತು ಕಾರಂತರನ್ನು ಗಾಂಧಿಯುಗ ಸಾಹಿತಿಗಳೆಂದು ಹೇಳಬಹುದು. ಶ್ರೀರಂಗರ ಹರಿಜನ್ವಾರ(೧೯೩೩)ದಿಂದ ಶೋಕಚಕ್ರ(೧೯೫೭)ದವರೆಗಿನವು ಗಾಂಧಿಯುಗದ ನಾಟಕಗಳು. ೧೯೨೦ರ ಅಸಹಕಾರ ಚಳವಳಿಯ ಪ್ರಾರಂಭದಲ್ಲೇ ಶ್ರೀರಂಗರು ಮಹಾತ್ಮ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಇವರು ಗಾಂಧೀಜಿಯ ಎಲ್ಲ ವಿಚಾರಗಳನ್ನು ಒಪ್ಪಿಕೊಳ್ಳದಿದ್ದರೂ ಗಾಂಧೀಜಿಯವರ ವ್ಯಕ್ತಿತ್ವ ವಿಚಾರಗಳು ಇವರಲ್ಲಿ ಒಂದು ವಿಶಿಷ್ಟ ಅರಿವನ್ನು ಮೂಡಿಸಿದ್ದವು. ಯಾಕೆಂದರೆ ಇವರು ಗಾಂಧಿಯನ್ನು ತುಂಬಾ ಹತ್ತಿರದಿಂದ ಕಂಡಿದ್ದರಿಂದ ಮತ್ತು ಅವರ ಸಂಪರ್ಕದಲ್ಲಿದ್ದುದರಿಂದ. 'ಶ್ರೀರಂಗ' ಎಂಬ ವ್ಯಕ್ತಿತ್ವ ರೂಪುಗೊಳ್ಳುವುದಕ್ಕೆ ಮಹಾತ್ಮಾಗಾಂಧಿಯೇ ಕಾರಣವೆಂದು ಹೇಳಬಹುದು. ಶ್ರೀರಂಗರು ಗಾಂಧೀಜಿಯವರ ವಿಚಾರಗಳಿಗಿಂತ ಅವರ ವ್ಯಕ್ತಿತ್ವ, ದೇಶಭಕ್ತಿ, ಸತ್ಯನಿಷ್ಠೆ ಇಂಥ ಗುಣಗಳೇ ಹೆಚ್ಚು ಆಕರ್ಷಕ ಎನ್ನುವುದರಲ್ಲಿ ಶಕ್ಯವಿದೆ.

ಶ್ರೀರಂಗರು "ತಮ್ಮ ಶಾಲೆಯ ದಿನಗಳಿಂದಲೂ ಗಾಂಧೀಜಿಯವರ ವ್ಯಕ್ತಿತ್ವ ಹಾಗೂ ವಿಚಾರಗಳಿಂದ ಪ್ರಭಾವಿತರಾದುದು ಅವರ ಸಮಾಜವಾದಿ ಚಿಂತನೆಗೆ ಹಿನ್ನೆಲೆಯಾಯಿತೇ ವಿನಃ

ವಿರೋಧಿಯಾಗಲಿಲ್ಲ. ೧೨ ಮಾರ್ಚ್ ೧೯೩೦ರಂದು ಜರುಗಿದ ಗಾಂಧೀಜಿಯವರ ಅಸಹಕಾರ ಚಳವಳಿಯ ಪ್ರಾರಂಭವನ್ನು ದೇಶದ ಉಳಿದ ಭಾಗಗಳಲ್ಲಿಯಂತೆ ಮುಂಬೈಯಲ್ಲಿಯೂ ಆಚರಿಸಿದಾಗ ಶ್ರೀರಂಗರು ಅಲ್ಲಿಯೇ ಇದ್ದರು. Young India ದ ಪುಟಗಳನ್ನೋದುತ್ತಿದ್ದಂತೆ ಗಾಂಧೀಜಿಯವರ ಬಗ್ಗೆ ಅವರಲ್ಲಿದ್ದ ಅಭಿಮಾನ ಉಕ್ಕೇರಿತು. ತಮ್ಮ ಭಾವನೆಗಳನ್ನು ಅವರು ದಿನಚರಿಯಲ್ಲಿ ಈ ರೀತಿ ವರ್ಣಿಸಿದ್ದಾರೆ. 'On the 12th March evening I was reading young India.... The more I read the more I admired, The more I adored, the man who could present truth with such charm, precision and force. Suddenly I got nervous. These articles are so wonderful. could it be because it is the last message of the prophet? .... would he the All saviour come back? on, why did I not make the most of him, as long as he was with us? why did I not try to understand this phenomenon? what is he? a man? An ideal? A principle? A Force? My Mahatmaji, answer me before you leave'. ಇಂಥ ಭಾವಾವೇಶ ಶ್ರೀರಂಗರ ಬರಹಗಳಲ್ಲಿ ಅಪರೂಪಕ್ಕೆ ಮಾತ್ರ ಕಾಣಸಿಗುತ್ತದೆ. ತಮ್ಮನ್ನು ಗಾಂಧಿಯುಗದ ಲೇಖಕರೆಂದೇ ಅವರು ನಂತರದ ದಿನಗಳಲ್ಲಿಯೂ ಕೂಡ ಗುರುತಿಸಿಕೊಂಡರು" ಎಂದು ಶ್ರೀರಂಗರು ಗಾಂಧೀಜಿಯವರನ್ನು ಸ್ವೀಕರಿಸಿರುವುದನ್ನು ಜಿ.ಎಸ್. ಆಮೂರರು ಹೀಗೆ ಗುರುತಿಸಿದ್ದಾರೆ(ಆಮೂರ. ಜಿ.ಎಸ್.; ೧೯೯೮; ಪು. ೫೭) .

"'ಧರ್ಮವಿಜಯ'ವನ್ನು ಶ್ರೀರಂಗರು 'ಸ್ವಾರ್ಥತ್ಯಾಗ'ವನ್ನು ಬರೆದ ಕಾಲದಲ್ಲಿಯೇ ರಚಿಸಿದರು. ಆದರೆ, ಈ ನಾಟಕವಾಗಲಿ ಅಥವಾ ನಂತರ ಅವರು ಪುಣೆಯಲ್ಲಿದ್ದಾಗ ಬರೆದ 'ಇದೇ ಸಂಸಾರ' ಅಥವಾ 'ಕನ್ನಡ ಶ್ಯಾಮ'ಗಳಾಗಲಿ ಪ್ರಕಟವಾಗಲೇ ಇಲ್ಲ. ಇವುಗಳ ಹಸ್ತಪ್ರತಿಗಳೂ ಈಗ ಕಳೆದುಹೋಗಿವೆ. ಆದರೆ ಈ ನಾಟಕಗಳ ಬಗ್ಗೆ ನಮಗೀಗ ದೊರೆಯುವ ಮಾಹಿತಿ, ಶ್ರೀರಂಗರು ತಮ್ಮ ಆತ್ಮಚರಿತ್ರೆಯಲ್ಲಿ ನೆನಪಿನಿಂದ ಒದಗಿಸಿದ ವಿವರಗಳಿಗೆ ಹಾಗೂ ಶ್ರೀರಂಗರು ಬರೆದ ಶ್ರೀರಂಗರ ಚರಿತ್ರೆಯಲ್ಲಿ ಸಿಗುವ ಮಾಹಿತಿಗೆ ಸೀಮಿತವಾಗಿದೆ"(ಅದೇ; ಪು. ೬೬) ಎಂದು ಆಮೂರರು ವಿವರಿಸಿದ್ದಾರೆ. "ಧರ್ಮವಿಜಯ'ದ ಸಂದರ್ಭ ಮಹಾತ್ಮ ಗಾಂಧಿಯವರ ಅಸಹಕಾರ ಚಳವಳಿ ಹಾಗೂ ಅದರೊಡನೆ ಅಲಿ ಬಂಧುಗಳ ಸಂಬಂಧ, ಮಹಾಭಾರತದ ಪರಿಚಯವೂ, ಪ್ರಭಾವವೂ ಇದ್ದುದಕ್ಕೆ ಗಾಂಧೀಜಿಯವರು ಧರ್ಮರಾಜ, ಶೌಕತ್ ಅಲಿ ಭೀಮಸೇನ ಆಗಲು ತಡವಾಗಲಿಲ್ಲ. ಕೂಡಲೇ ಮಹಾಭಾರತದ ಕತೆಗೆ ಹೊಂದಿಕೊಂಡು ಮಹಾತ್ಮರ ಕತೆಯನ್ನು ಪ್ರಾರಂಭಿಸಿದೆ. ಬ್ರಿಟಿಷರಂತೂ ಕೌರವರೆನಿಸಿಕೊಳ್ಳಲು ಎಂದಿನಿಂದಲೂ ಸಿದ್ಧರಾಗಿ ಕುಳಿತಿದ್ದರು. ಹೀಗೆ ಬ್ರಿಟಿಷ್ ಭಾರತ ಯುದ್ಧ ಕತೆಯನ್ನು 'ಧರ್ಮವಿಜಯ' ಎಂದು ನಾಟಕವನ್ನಾಗಿ ಮಾಡಿದೆ..."(ಅದೇ; ಪು. ೬೬-೬೭) ಎಂದು ಶ್ರೀರಂಗರು ಬರೆದಿರುವುದನ್ನು ಆಮೂರರು ವಿವರಿಸಿದ್ದಾರೆ.

"ಶ್ರೀರಂಗರು ೩೦ ಜನವರಿ ೧೯೫೨ರಂದು 'ಶೋಕಚಕ್ರ'ವನ್ನು ಬರೆದು ಮುಗಿಸಿದ್ದಾರೆ. ಈ ನಾಟಕವನ್ನು ಕುರಿತು ಅದೇ ದಿನ ಅವರು ತಮ್ಮ ದಿನಚರಿಯಲ್ಲಿ ಬರೆದ ಮಾತುಗಳು ಹೀಗಿವೆ: 'ನನ್ನ ಮಟ್ಟಿಗೆ ಹೇಳುವುದಾದರೆ ಹರಿಜನಸ್ವಾರದಲ್ಲಿಯ ವೈಷ್ಣವ ಸಮಾಜದಂತೆ ಇಲ್ಲಿ

ಕಾಂಗ್ರೆಸ್ ಸಂಸ್ಥೆ ಇಂದು ಸಂಕೇತವಾಗಿದೆ. ಸದ್ಯಕ್ಕೆ ಅದೊಂದೆ ಸಂಘಟಿತ ರಾಜಕೀಯ ಪಕ್ಷವಾಗಿದೆ. ಪಕ್ಷ - ರಾಜಕಾರಣ ಮತ್ತು ಸಮಾಜ ಸೇವೆ ಇವೆರಡರಲ್ಲಿ ಒಂದು ಘರ್ಷಣೆ ಅನಿವಾರ್ಯ ಎಂದು ನನಗೆ ಎನ್ನಿಸಿದೆ. ಯಾಕೆಂದರೆ ಒಂದು ಧ್ಯೇಯದ ಪಕ್ಷದಲ್ಲಿ ಆ ಧ್ಯೇಯವನ್ನು ಒಪ್ಪಿಕೊಳ್ಳುವವನಿಗೆ ಪ್ರವೇಶ ದೊರೆತೇ ದೊರೆಯುವುದು, ಅವನಲ್ಲಿ ಮಿಕ್ಕ ಯೋಗ್ಯತೆ ಇರಲಿ ಬಿಡಲಿ ಜೊತೆಗೆ ಅವನಿಗೆ ಧನಬಲ ಇಲ್ಲವೆ ಸ್ಥಾನಬಲವಿದ್ದರೆ ಅವನು ಪಕ್ಷವನ್ನೇ ತನ್ನ ಬಗಲಕೂಸನ್ನಾಗಿಸಬಹುದಾಗಿದೆ. ಹಾಗೆ ಆದ ಪಕ್ಷದಲ್ಲಿ ಮನುಷ್ಯನ ಅಸಾಮಾಜಿಕ ಪ್ರವೃತ್ತಿಗಳಿಗೆ ಅವಕಾಶ ದೊರೆಯುವುದು. ಸ್ವಾರ್ಥದ ತನ್ನ ಸ್ಥಾನಮಾನಗಳ ಅರಿವೂ ಜಾಗೃತವಾಗಿರುವುದು. ಈ ತರದ ಮನೋವೃತ್ತಿ ಸಮಾಜ ಸೇವೆಗೆ ಪೋಷಕವಾಗಬಾರದು. ಇದಲ್ಲದೆ ಪಕ್ಷದಲ್ಲಿ ಸತ್ಯಕ್ಕಿಂತ ಬಹುಮತಕ್ಕೆ ಹೆಚ್ಚಿನ ಪ್ರಾಮಾಣ್ಯ. ಆ ಬಹುಮತ ಎಂತಹ ಅಸ್ಥಿರವಾಗಿದೆ ಎಂಬುದು ಜಯರಾಯನ ಮೊದಲ ಅಂಕದ ಪ್ರಾರಂಭದ ಮತ್ತು ಕೊನೆಯ ಅಂಕದ ಮುಕ್ತಾಯದ ಅವಸ್ಥಾಂತರಗಳಿಂದ ಸ್ಪಷ್ಟವಾಗುವುದು. ಇವೆಲ್ಲವನ್ನೂ ನಾಟಕದ ಪಾತ್ರ-ಸನ್ನಿವೇಶಗಳಿಂದ ಎಷ್ಟರಮಟ್ಟಿಗೆ ಸ್ಪಷ್ಟಪಡಿಸಿರುವೆನೋ, ಈಗ ಹೇಳಲಾರೆ"(ಅದೇ; ಪು. ೧೫೮) ಎಂದು ಶ್ರೀರಂಗರ ಮಾತುಗಳನ್ನು ಆಮೂರರು ಹೀಗೆ ಸಂಗ್ರಹಿಸಿಕೊಟ್ಟಿದ್ದಾರೆ.

"ಮಹಾತ್ಮ ಗಾಂಧಿಯವರ ಚಳುವಳಿ ಪ್ರಾರಂಭವಾದದ್ದು ೧೯೨೦ರಲ್ಲಿ. ಆಗ ನನ್ನ ವಯಸ್ಸು ೧೬. ಆ ಮುಂಚೆ ೧೯೧೮-೧೯ರಲ್ಲಿ ಸ್ವಯಂಸೇವಕನಾಗಿ ಅವರನ್ನು ಹತ್ತಿರದಿಂದ ಕಂಡಿದ್ದೆ; ಮುಂದೊಮ್ಮೆ ೧೯೩೪ರಲ್ಲಿ ೨೦ ನಿಮಿಷಗಳವರೆಗೆ ಅವರ ಸಂದರ್ಶನವನ್ನು ಪಡೆದಿದ್ದೆ. ನಾನು ಗಾಂಧಿಯುಗದ ಯುವಕ ಎಂಬುದಕ್ಕೆ ಈ ಮಾತುಗಳನ್ನು ಕಾಣಿಸಿದ್ದೇನೆ. ರಾಜಕೀಯಕ್ಕಿಂತ ಸಾಮಾಜಿಕ, ಅದಕ್ಕಿಂತ ಆಂತರಂಗಿಕ ಸುಧಾರಣೆ ಅಗತ್ಯ ಎಂಬುದನ್ನು ಆಗ ನಾನು ಕಲಿತುಕೊಂಡ ಪಾಠ. ೧೯೩೪ರಲ್ಲಿ ಆ ಬಗ್ಗೆ ಮಹಾತ್ಮರೊಡನೆ ಒಂದು ಚಿಕ್ಕ ಚರ್ಚೆಯನ್ನೇ ನಡೆಸಿದೆ. ಅಂದಿನಿಂದ ಇಂದಿನವರೆಗಿನ ನನ್ನ ಎಲ್ಲ ಬರಹಗಳನ್ನು ಜೀವನದ ಧೋರಣೆಯನ್ನು ಅರಿತವರಿಗೆ ಇದಿಷ್ಟೆ ಹಿನ್ನೆಲೆ ಸಾಕು"(ಆಮೂರ.ಜಿ.ಎಸ್.(ಸಂ); ೨೦೦೫; ಪು. ३೯೯) ಎಂದು ಶ್ರೀರಂಗರು ಶೋಕಚಕ್ರ ಕೃತಿಯ ಮೊದಲಿಗೆ ಹೇಳಿಕೊಂಡಿದ್ದಾರೆ. ಇದರಿಂದ ಶ್ರೀರಂಗರು ಗಾಂಧೀಜಿಯನ್ನು ಹತ್ತಿರದಿಂದ ಕಂಡಿದ್ದನ್ನು, ಅವರ ಪ್ರಭಾವಕ್ಕೆ ಒಳಗಾಗಿರುವುದು ಮತ್ತು ತಮ್ಮ ಬರಹಗಳಲ್ಲಿ ಗಾಂಧೀಜಿಯವರ ಚಿಂತನೆಗಳನ್ನು ಅಳವಡಿಸಿಕೊಂಡಿರುವುದು ತಿಳಿಯುತ್ತದೆ.

ಶ್ರೀರಂಗರ 'ಶೋಕಚಕ್ರ' ಹೆಚ್ಚು ಪ್ರಸಿದ್ಧಿಯನ್ನು ಹೊಂದಿದ ರಾಜಕೀಯ ನಾಟಕವಾಗಿದೆ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಗಾಂಧೀಜಿಯವರ ಚಿಂತನೆಗಳು ಹಾಗೂ ಆದರ್ಶಗಳು ದುರ್ಬಳಕೆಯಾಗುವುದನ್ನು ಒಂದು ರೀತಿಯಲ್ಲಿ ಈ ನಾಟಕ ವಿಡಂಬಿಸುತ್ತದೆ. "ಸ್ವಾತಂತ್ರ್ಯ ನಂತರ ನಾನು ಬಹಳ ಆಸೆಯಿಂದ ಪರಿಸ್ಥಿತಿಯನ್ನು ನೋಡುತ್ತಲಿದ್ದೆ. ಯಾವುದೋ ಒಂದು ಕಾರಣಕ್ಕೆ ರಾಜಕೀಯ ಸ್ವಾತಂತ್ರ್ಯದ ಅವಸರವಿದ್ದು ಮಹಾತ್ಮ ಗಾಂಧೀಜಿಯವರು ಅದಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿದ್ದರು. ಈಗ ಆ ಜಂಜಾಟ ಮುಗಿಯಿತಲ್ಲ! ಸಾವಿರಾರು ವರ್ಷಗಳಿಗೊಮ್ಮೆ

ಅವತರಿಸುವ ಭಗವಂತನ ಅಂಶದಂತಿದ್ದ ಮಹಾತ್ಮ ಗಾಂಧೀಜಿಯವರಿಂದ ನಿಜವಾದ ಆಂತರಂಗಿಕ-ಸುಧಾರಣೆ ಜನತೆಯಲ್ಲಿ ಮೂಡುವುದಲ್ಲ? ಹೀಗೆ ಉತ್ಸಾಹಗೊಳ್ಳುತ್ತಿರುವಾಗ ಜನವರಿ ೩೦, ೧೯೪೮ರ ದುರ್ಘಟನೆ ನಡೆದುಹೋಯಿತು. "ಜಗತ್ತಿನ ದೀಪ ನಂದಿತು".

ಈ ಸಂದರ್ಭದ ಹಿನ್ನೆಲೆಯಲ್ಲಿ ದೇಶದ ಚುನಾವಣೆ, ಸ್ಥಾನಿಕ ಮುಂದಾಳುಗಳ ಸಾಂಸ್ಕೃತಿಕ ಮಟ್ಟ ಇದನ್ನೆಲ್ಲ ನೋಡಿ ಮೂಡಿದ ಭಾವನೆಗಳೇ ಈ 'ಶೋಕ ಚಕ್ರ' ನಾಟಕದಲ್ಲಿ ಮೂಡಿವೆ(ಅದೇ; ಪು. ೩೪೯) ಎಂದು ಶ್ರೀರಂಗರು ತಮ್ಮ ಶೋಕಚಕ್ರ ನಾಟಕದ ಮೊದಲ ಮಾತುಗಳಲ್ಲಿ ಹೇಳಿಕೊಂಡಿದ್ದಾರೆ. ಈ ಮಾತುಗಳಿಂದ ಗಾಂಧಿಯ ಮುಂದಾಳತ್ವದ ರಾಜಕೀಯ ಗಾಂಧಿಯ ನಂತರ ಅರಾಜಕತೆಗೊಳ್ಳುವುದು ತಿಳಿಯುತ್ತದೆ ಮತ್ತು ಶ್ರೀರಂಗರು ಮಹಾತ್ಮ ಗಾಂಧಿಯನ್ನು ಸಾವಿರಾರು ವರ್ಷಗಳಿಗೊಮ್ಮೆ ಅವತರಿಸಿದ ಭಗವಂತ ಅಥವಾ ದೈವಸ್ವರೂಪಿಯಾಗಿ ಕಂಡರಿಸಿದ್ದಾರೆ.

ಪುರುಷಾರ್ಥ ಕಾದಂಬರಿಯಲ್ಲಿದ್ದಂತೆ ಶೋಕಚಕ್ರದ ಕ್ರಿಯೆಯೂ ಪ್ರಾರಂಭವಾಗುವುದು ೧೯೪೭ರ ಆಗಸ್ಟ್ ೧೫ರ ಬೆಳಗಿನ ಜಾವ. ಮೊದಲನೆ ಅಂಕದ ದೃಶ್ಯದಲ್ಲಿ ಜಯರಾಯನ ಮನೆ ಎದುರಿಗೆಯೆ ಕಾಣುವ ಮಹಾತ್ಮ ಗಾಂಧಿಯವರ ಭಾವಚಿತ್ರದ ಸಾಂಕೇತಿಕತೆ ಮೂಲಕವೇ ನಾಟಕ ಆರಂಭವಾಗುತ್ತದೆ. ಜಯರಾಯ, ಅವನ ಹೆಂಡತಿ ರಂಗಮ್ಮ, ಮಗ ಶ್ಯಾಮ - ಎಲ್ಲರೂ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರು. ಜಯರಾಯ ಹಾಗೂ ರಂಗಮ್ಮ ೧೯೪೨ರ ಚಳುವಳಿಯ ಮೊದಲೇ ರಾಜಕೀಯದಿಂದ ದೂರವಾಗಿದ್ದಾರೆ. ಶ್ಯಾಮ ಮಾತ್ರ ಆ ಕಾಲದ ಹಲವಾರು ಯುವಕರಂತೆ ಸೋಶಿಯಲಿಸಂನತ್ತ ಒಲವು ತೋರಿಸಿದ್ದಾನೆ. ಪತ್ರಕಾರ ವೆಂಕಣ್ಣ ಜಯರಾಯನ ಅಭಿಮಾನಿಯಾಗಿದ್ದಾನೆ. ಆದರೆ ಶ್ಯಾಮನನ್ನು ಟೀಕಿಸುತ್ತಾನೆ. ಹನುಮಂತಪ್ಪ ಚತುರ ರಾಜಕಾರಣಿಯಾದರೂ ಅನಕ್ಷರಸ್ಥ. ಜಯರಾಯ ಹಾಗೂ ಹನುಮಂತಪ್ಪ ಇವರ ದೃಷ್ಟಿಗಳಲ್ಲಿರುವ ಅಂತರವನ್ನು ಉದ್ದೇಶಪೂರ್ವಕವಾಗಿಯೇ ಬಳಸಲಾಗಿದೆ. ಬುದ್ಧಿಜೀವಿಗಳ ಬಗ್ಗೆ ಹನುಮಂತಪ್ಪ ಬಲವಾದ ಸಂದೇಹಗಳನ್ನು ವ್ಯಕ್ತಪಡಿಸುತ್ತಾನೆ. ಆದರೆ ಜಯರಾಯನನ್ನು ಗೌರವಿಸುತ್ತಾನೆ. ಹನುಂತಪ್ಪನಿಗೆ ರಾಮಣ್ಣ, ಭೀಮಣ್ಣ, ಶೀನಪ್ಪಗಂಥ ಹಿತಶತ್ರುಗಳಿದ್ದಾರೆ. ಹನುಂತಪ್ಪ ಜಯರಾಯರನ್ನು ಧ್ವಜಾರೋಹಣಕ್ಕೆ ಆಮಂತ್ರಿಸುವುದು. ನಂತರ ಅವರನ್ನು ರಾಜಕೀಯಕ್ಕೆ ಎಳೆಯುವುದು, ಮುನಿಸಿಪಾಲಿಟಿಯ ಅಧ್ಯಕ್ಷನನ್ನಾಗಿ ಆರಿಸಿ ತರುವುದು ಇವೆಲ್ಲ ತನ್ನ ಪ್ರಬಲ ವಿರೋಧಿಗಳನ್ನು ಅಧಿಕಾರದಿಂದ ದೂರವಿರಿಸಲು ಹನುಮಂತಪ್ಪ ಪ್ರಯೋಗಿಸುವ ತಂತ್ರದ ಭಾಗಗಳಾಗಿವೆ. ಈ ತಂತ್ರದ ಕಾರಣವಾಗಿಯೇ ಹನುಮಂತಪ್ಪ ಜಯರಾಯನ ವಿಧಾಯಕ ಕಾರ್ಯವನ್ನು (ಮಾರ್ಕೆಟ್ಟಿನ ಅಡಿಗಲ್ಲಿನ ವಿಚಾರ) ಮನಸ್ಸಿಲ್ಲದಿದ್ದರೂ ಬೆಂಬಲಿಸುತ್ತಾನೆ. ಆದರೆ ಈ ತಂತ್ರ ಯಶಸ್ವಿಯಾಗದ ಕಾರಣ ಜಯರಾಯನನ್ನು ಅಧಿಕಾರದಿಂದ ಕೆಳಗಿಳಿಸಲು ಹಿಂಸೆಗೂ ಇಳಿಯುತ್ತಾನೆ. ದಿಲ್ಲಿಯಲ್ಲಿ ಮಹಾತ್ಮರನ್ನು ಕೊಲ್ಲುವ ಪ್ರಯತ್ನ ನಡೆದ ದಿನವೇ ಜಯರಾಯನ ಮೇಲೆಯೂ ಹಲ್ಲೆ ನಡೆದು ಗಾಯಗೊಳ್ಳುತ್ತಾನೆ. ಹನುಮಂತಪ್ಪನ ಬೆದರಿಕೆಗೆ ಜಯರಾಯನ ಅಧಿಕಾರ ಬಿಟ್ಟುಕೊಡಲು ನಿರಾಕರಿಸುತ್ತಾನೆ. ನಾಟಕದ ಕೊನೆಗೆ ಜಯರಾಯನ ದಿಟ್ಟ ನಿಲುವಿಗೆ

ಹನ್ಮಂತಪ್ಪ ದಿಙ್ಮೂಡನಾಗುತ್ತಾನೋ ಅಥವಾ ಸೋಲನ್ನೊಪ್ಪುತ್ತಾನೋ ಎನ್ನುವುದು ಅಸ್ಪಷ್ಟವಾಗಿಯೇ ಉಳಿಯುತ್ತದೆ. ಗಾಂಧಿವಾದಿಯಾದ ಜಯರಾಯನ ವ್ಯಕ್ತಿತ್ವದ ಪ್ರಭಾವವನ್ನು ಹನ್ಮಂತಪ್ಪ ಸಂಶಯದಿಂದ ನೋಡುತ್ತಾನೆ. ಆದರೆ ಅದರಿಂದ ಪಾರಾಗುವುದು ಅವನಿಗೆ ಕಠಿಣವೆನಿಸುತ್ತದೆ. ಕೊನೆಗೆ ಮಾನಸಿಕ ಗೊಂದಲಕ್ಕೆ ಒಳಗಾಗುತ್ತಾನೆ. ಇದು ಈ ನಾಟಕದ ಸಾರಾಂಶ. ಇಲ್ಲಿ ಜಯರಾಯ ಗಾಂಧಿಯನ್ನು ಪ್ರತಿನಿಧಿಸುತ್ತಾನೆ. ಜಯರಾಯನ ವಿರುದ್ಧ ಎಷ್ಟೇ ಪಿತೂರಿಗಳನ್ನು ಮಾಡಿದರು. ಕೊನೆಗೆ ಜಯರಾಯನು (ಗಾಂಧೀಜಿ) ಗೆಲ್ಲುತ್ತಾನೆ. ಆದರೆ ಗೆಲುವಿನಲ್ಲಿ ಅಸಮಾಧಾನ ಉಳಿಯುವುದು ಕಾಣುತ್ತದೆ.

ನಾಟಕದ ಆರಂಭದ ದೃಶ್ಯದಲ್ಲಿ ಗಾಂಧಿಯನ್ನು ಶ್ರೀರಂಗರು ಹೀಗೆ ಚಿತ್ರಿಸಿದ್ದಾರೆ.

"ಗೋವಿಂದಪ್ಪ : ಸ್ವಾತಂತ್ರ್ಯ ಸಿಕ್ಕ ದಿನ ಇದೂ -

ರಂಗಮ್ಮ : ಅಯ್ಯ! ಅದಕ್ಕೆ ನಾವೂ ನೀವೂ ಯಾಕ ಹಾರಾಡಬೇಕು, ಸಭಾದಾಗ ಸೇರಿ?(ಮಹಾತ್ಮರ ಭಾವಪಟವನ್ನು ನೋಡುತ್ತ) ಅಲ್ಲಿ ಕೂತಾನ ನೋಡ್ರಿ, ಆ ಮಹಾತ್ಮನ ಪುಣ್ಯದಿಂದ ಸ್ವರಾಜ್ಯ ಸಿಕ್ಕದ್ದು(ಪಟಕ್ಕೆ ಭಕ್ತಿಯಿಂದ ಕೈ ಮುಗಿಯುವಳು).

ಯುವಕ : (ನಗೆಯಿಂದ) ರಾಕ್ಷಸರನ್ನು ಓಡಿಸಿ ಸ್ವಾತಂತ್ರ್ಯ ತಂದದ್ದಕ್ಕೆ ಆರತಿ ಮಾಡತೀಯೇನ ಗಾಂಧಿ ಮಹಾತ್ಮಗೆ? ಆಂ? ಹೌದೇನ ಅವ್ವಾ?

ರಂಗಮ್ಮ : ಅಂಥಾ ಪುಣ್ಯಾತ್ಮನ ಮುಖದ ಆರತೀ ಬೆಳಕಾದರೂ ಕಂಡೀತೇನು?" (ಅದೇ; ಪು. ೩೫೫)

ಎಂದು ಗಾಂಧಿಯ ಮುಖ (ವ್ಯಕ್ತಿತ್ವ) ಆರತಿಯ ಜ್ಯೋತಿಗಿಂತಲು ಪ್ರಕಾಶಮಾನವಾದದ್ದು. ಅವರು ಇಡೀ ದೇಶಕ್ಕೆ ಬೆಳಕಾಗಿದ್ದವರು. ಹಾಗಾಗಿ ಗಾಂಧಿಯನ್ನು ದೈವಸಂಭೂತನಾಗಿ ಪ್ರತಿನಿಧಿಸಿದ್ದಾರೆ. ಗಾಂಧಿಯವರ ತತ್ತ್ವಾದರ್ಶಗಳು ಸ್ವತಂತ್ರ ಭಾರತದಲ್ಲಿ ಕಳಚಿ ಹೋಗುವುದನ್ನು ಹೀಗೆ ಜಯರಾಯನ ಪಾತ್ರದ ಮೂಲಕ ವಿವರಿಸಿದ್ದಾರೆ.

"ವೆಂಕಣ್ಣ : Victory for Gandhism, ...for the Mahatma's Movement - ಗಾಂಧಿವಾದ' ..... ಗಾಂಧಿ ಚಳವಳ ಇವೆರಡೂ -

ಜಯರಾಯ : (ನಡುವೆಯೆ) ಅವೆರಡೂ ಬ್ಯಾರೆ, ವೆಂಕಣ್ಣಾ, ಗಾಂಧಿವಾದ, ಗಾಂಧಿ ಚಳವಳ ಅನ್ನೋ ಎರಡೂ ಬ್ಯಾರೆ; ಒಂದರ ಸಂಬಂಧ ಒಂದಕ್ಕಿಲ್ಲ. (ಏಳಲು ತೊಡಗುವನು).

ಜಯರಾಯ : (ಏಳುತ್ತಲೆ) ಎರಡೂ ಬ್ಯಾರೆ (ಎದ್ದು) ಹಾಂಗ ಕೇಳಿದರ ಎರಡೂ ಒಂದೇ. (ಮೆಲ್ಲಗೆ ಅತ್ತಿತ್ತ ತಿರುಗಾಡುತ್ತ) ನಮಗ ಈ ಸ್ವಾತಂತ್ರ್ಯ ಅನ್ನೋದರ

ಅರ್ಥನೇ ಗೊತ್ತಿಲ್ಲ! ಗಾಂಧೀಜಿಯವರು ನಮಗ ಹೇಳಿಕೊಟ್ಟದ್ದು .... ಸ್ವರಾಜ್ಯ. ಸ್ವರಾಜ್ಯ ಇನ್ನೂ ಬಂದಿಲ್ಲ. - ವೆಂಕಣ್ಣಾ, ಸ್ವಾತಂತ್ರ್ಯ ಬಂದಿತು, ಸ್ವರಾಜ್ಯ ಬಂದಿಲ್ಲ. ಹೃದಯದಲ್ಲಿ ಹ್ಯಾಂಗ ಬದಲಾವಣೆ ಆಗಬೇಕಂತಿದ್ರು ಮಹಾತ್ಮಾಜಿಯವರು, ಅದರ ವಿರುದ್ಧ ಬದಲಾವಣೆ ಆಗೇದ. ಸತ್ಯದ ರಾಜ್ಯ ಸ್ವರಾಜ್ಯ, ಅದಿನ್ನೂ ಬಂದಿಲ್ಲ. ಪ್ರಾಮಾಣಿಕತೆ ಅಂದ್ರ ಅಹಿಂಸಾ, ಅದೂ ಇನ್ನೂ ಬಂದಿಲ್ಲ... ಹುಂ...(ಎನ್ನುತ್ತ ಹಾಗೇ ತಿರುಗಾಡುವನು)".

(ಅದೇ; ಪು. ೪೦೪)

ಗಾಂಧೀಜಿಯ ಪ್ರತಿನಿಧಿಯಾದ ಜಯರಾಯರು ಗಾಂಧೀಜಿಯ ವಿಚಾರಧಾರೆ ಮತ್ತು ಅವರ ತತ್ತ್ವಾದರ್ಶಗಳನ್ನು ವಿವರಿಸುತ್ತಾನೆ. ಸ್ವಾತಂತ್ರ್ಯನಂತರ ಅವರ ವಿಚಾರಧಾರೆಗಳನ್ನು ಗಾಳಿಗೆ ತೂರಿ ಬೇರೊಂದು ಬದಲಾವಣೆ ಹೊಂದುತ್ತಿರುವುದನ್ನು ಇಲ್ಲಿ ವಿವರಿಸಲಾಗಿದೆ. ಜಯರಾಯನಿಗೆ ಗಾಂಧಿ ಮಾರ್ಗದಲ್ಲಿ ಅಚಲವಾದ ವಿಶ್ವಾಸವಿದೆ. ಆದರೆ ಅವರು ಗಾಂಧಿವಾದ ಹಾಗೂ ಗಾಂಧಿ ಚಳವಳಿಗಳಲ್ಲಿ ಅಂತರ ಕಾಣುತ್ತಾರೆ. ಗಾಂಧೀಜಿಯ ವ್ಯಕ್ತಿತ್ವದೊಡಗಿರುವ ಅವನ ಸಂಬಂಧ ಭಾವನಾತ್ಮಕವಾದುದು. ರಾಜಕೀಯದಿಂದ ಜಯರಾಯರು ದೂರ ಸರಿದಿರುವುದಕ್ಕೆ ಈ ಅಂತರದ ಗ್ರಹಿಕೆಯೇ ಕಾರಣವಾಗಿದೆ. ಸತ್ಯದ ಬದಲು ಅಸತ್ಯ, ಅಹಿಂಸೆ ಬದಲು ಹಿಂಸೆ, ಪ್ರಾಮಾಣಿಕತೆಯ ಬದಲು ಅಪ್ರಾಮಾಣಿಕತೆ ಹೀಗೆ ಬದಲಾದುದರಿಂದ ಗಾಂಧೀಜಿಯವರ ಕನಸು ಕನಸಾಗಿಯೇ ಉಳಿದಿದೆ. ನಾಟಕದಲ್ಲಿ ಜಯರಾಯರು ಗಾಂಧಿವಾದದ ಪ್ರತಿನಿಧಿಯಾದರೆ ಅವರ ಶಿಷ್ಯ ಹನುಮಂತಪ್ಪ ಗಾಂಧೀ ಚಳವಳಿಯ ಪ್ರತಿನಿಧಿಯಾಗಿದ್ದಾರೆ.

"ಜಯರಾಯ : ವೆಂಕಣ್ಣಾ, ಗಾಂಧೀಜಿಯವರಿಗೆ ಕ್ಷೇಮ ಅಂದರೆ ಜಗತ್ತಿಗೇ ಕ್ಷೇಮ. ನಿನಗೇನು ಗೊತ್ತು? (ಮುಂದಿನ ಮಾತು ತನ್ನಷ್ಟಕ್ಕೆ ಎನ್ನುವಂತೆ ಎದುರು ನೋಡುತ್ತ ನುಡಿಯುತ್ತಾರೆ.) ನೀವು ಹುಡುಗರು; ನಿಮಗೇನು ಗೊತ್ತು? ಆ ಮಹಾತ್ಮನ ಸಾನಿಧ್ಯದ ಅನುಭವ ನಿಮಗೇನು ತಿಳೀದೀತು? ಮೂವತ್ತು ಕೋಟಿ ಷಂಡರೊಳಗೆ ಪೌರುಷ ತುಂಬಿದ ಅದ್ಭುತ ಸಾಹಸಿ: ಮೂವತ್ತು ಕೋಟಿ ಹೆಣಗಳಲ್ಲಿ ಜೀವ ತುಂಬಿದ ಅಮರ ಮಾಯಾವಿ....(ಹೆಂಡತಿಗೆ) ನಿನಗೆ ಗೊತ್ತಿದೆ ಅಲ್ಲ? ಮೊದಲ ಸಲ ನಾನೂ ನೀನೂ ಅವರನ್ನ ಕಂಡಾಗಿನ ದೃಶ್ಯ! ಮುಖದಲ್ಲಿ ನಗೆ, ಕಣ್ಣಲ್ಲಿ ಕರುಣಾರಸ, ದನಿಯಲ್ಲಿ ಸಂಜೀವಿನಿ, ಸನ್ನಿಧಿಯಲ್ಲಿ ಸಾತ್ವಿಕಶಕ್ತಿ!.

ರಂಗಮ್ಮ : (ಅರೆನಾಚಿದ ದನಿಯಲ್ಲಿ) ಏನೋ - ಏನೋ? ಖೋಡಿ! ಮನಸ್ಸೇ ಹಾಂಗಾಯ್ತು. ನೋಡು, ವೆಂಕಣ್ಣಾ, ಆ ಮಹಾತ್ಮನ್ನ ನೋಡಿದ ಕೂಡಲೇ ಹುಟ್ಟಿದ್ದು ಸಾರ್ಥಕ ಅನ್ನಿಸಿತು. ಅಂಥಾ ಪುಣ್ಯಾತ್ಮನ ಮಾತು ಕೇಳೋದಂದರ ಸಾವಿರ ಪುರಾಣಾ ಕೇಳಿದಷ್ಟು ಪುಣ್ಯ ಅನ್ನಿಸಿತು".(ಅದೇ; ಪು. ೪೩೭)

ಎಂದು ಹೀಗೆ ಗಾಂಧೀಜಿ ಸ್ವಾತಂತ್ರ್ಯಪೂರ್ವದ ಮೂವತ್ತು ಕೋಟಿ ಷಂಡರಿಗೆ(ಬ್ರಿಟಿಷರನ್ನು ಹೆದರುವ ಜನ) ಪೌರುಷ ತುಂಬಿದ ಅದ್ಭುತ ಸಾಹಸಿಯಾಗಿ, ಅದೇ ಜನರ ಹೆಣಗಳಿಗೆ ಜೀವ ತುಂಬಿದ ಅಮರ ಮಾಯಾವಿಯಾಗಿ ಕಂಡರಿಸಲಾಗಿದೆ. ಗಾಂಧೀಜಿಯ ಮುಖವನ್ನು ನೋಡಿದ ಕೂಡಲೇ ಹುಟ್ಟಿದ್ದು ಸಾರ್ಥಕಪಡುವಷ್ಟು ಒಬ್ಬ ಮಹಾತ್ಮನಾಗಿ ಹಾಗೂ ದೈವಸಂಭೂತನಾಗಿ ಶ್ರೀರಂಗರು ಚಿತ್ರಿಸಿದ್ದಾರೆ.

"ಶ್ರೀರಂಗರ ಶೋಕಚಕ್ರ ಪ್ರಪ್ರಥಮ ಒಳ್ಳೆ ರುಚಿಯ ರಾಜಕೀಯ ನಾಟಕ"(ಆಮೂರ. ಜಿ.ಎಸ್.; ೧೯೯೮; ಪು. ೧೬೧)ವೆಂದು ಪರ್ವತವಾಣಿಯವರು ಅಭಿಪ್ರಾಯಿಸಿದ್ದಾರೆ. ಆದರೆ ಈ ನಾಟಕದ ಬಗ್ಗೆ ಟೀಕೆಗಳೂ ಬಂದಿವೆ. "ಜಯರಾಯನ ಪರವಾದ ನಿಲುವು ನಾಟಕದಲ್ಲಿ ಒಂದು ಬಗೆಯ ಅಸಮತೋಲನಕ್ಕೆ ಕಾರಣವಾಗಿದೆ"(ಅದೇ; ಪು. ೧೬೨) ಎಂದು ಟಿ.ಪಿ. ಅಶೋಕ ಅವರು ಅಭಿಪ್ರಾಯಿಸಿದ್ದಾರೆ. ಒಟ್ಟಾರೆಯಾಗಿ ಶ್ರೀರಂಗರು ಈ ನಾಟಕದಲ್ಲಿ ಗಾಂಧಿಯನ್ನು ದೈವಸ್ವರೂಪಿಯಾಗಿ, ಮಹಾತ್ಮನಾಗಿ, ದೇಶದ ನಂದಾದೀಪವಾಗಿ ಪ್ರತಿನಿಧಿಸಿದ್ದಾರೆ. ನವೋದಯ ನಾಟಕಕಾರರು ಗಾಂಧಿಯನ್ನು ತಮ್ಮ ಕೃತಿಗಳಲ್ಲಿ ಪ್ರತಿಶತ ಆರಾಧಕಭಾವವಾಗಿ ಚಿತ್ರಿಸಿದ್ದಾರೆ.

ಪ್ರಗತಿಶೀಲ ಕಾಲಘಟ್ಟದ ಲೇಖಕರು ತಮ್ಮ ಸಾಮಾಜಿಕ ಆಶಯಗಳ ಪ್ರಚಾರ ಮತ್ತು ಪ್ರಸಾರಗಳಿಗೆ ನಾಟಕವು ಅತಿ ಪ್ರಬಲ ಮಾಧ್ಯಮವೆಂಬ ಸಂಗತಿಯನ್ನು ಎಂಬತ್ತು ಮತ್ತು ತೊಂಬತ್ತರ ದಶಕಗಳ ರಂಗಭೂಮಿಯು ಕಂಡುಕೊಂಡಂತೆ ಪ್ರಗತಿಶೀಲ ಲೇಖಕರು ಮನಗಾಣಲಿಲ್ಲ. ಪ್ರಗತಿಶೀಲ ಚಳವಳಿಯ ಸಂಗಡವೂ ಸಂಬಂಧದ ನೆಲೆಗಳನ್ನು ಸ್ಥಾಪಿಸಿಕೊಂಡಿದ್ದ ಶ್ರೀರಂಗರು ಪ್ರಗತಿಪರ ನಾಟಕಗಳನ್ನು ಬರೆಯಲು ಅವರಿಗೆ ಸಾಧ್ಯವಾಯಿತು. 'ಹರಿಜನ್ವಾರ' 'ಶೋಕಚಕ್ರ'ದಂತಹ ಕೃತಿಗಳು ಸಮುದಾಯ ವಿಮರ್ಶೆಯಲ್ಲಿ ತೊಡಗುತ್ತವೆ. ಆದರೆ ಪ್ರಗತಿಶೀಲ ಲೇಖಕನಿಗೆ ಅಗತ್ಯವಾದ ಉತ್ಸಾಹವಾಗಲೀ, ಪರಿವರ್ತನೆಯನ್ನು ಬಯಸುವ ಛಲವಾಗಲೀ ಶ್ರೀರಂಗರಲ್ಲಿ ಇಲ್ಲದೆ ಹೋದುದರಿಂದ ಅವರ ನಾಟಕಗಳು ಕ್ರಮೇಣ ಸಿನಿಕತೆಯ ಕಡೆಗೆ ಚಲಿಸಿದವು. ಹಾಗಾಗಿ ಪ್ರಗತಿಶೀಲ ಕಾಲದಲ್ಲಿ ಗಾಂಧಿ ಕುರಿತ ನಾಟಕಗಳು ಕಾಣಸಿಗದಿರುವುದು ಆಶ್ಚರ್ಯಕರವಾದ ವಿಷಯ. ಇದಕ್ಕೆ ಕಾರಣ ಬಹುಶಃ ಪ್ರಗತಿಶೀಲರು ಹೆಚ್ಚಾಗಿ ತಮ್ಮ ಸಾಹಿತ್ಯ ಅಭಿವ್ಯಕ್ತಿಯ ಮಾಧ್ಯಮವಾಗಿ 'ಕಥೆ' ಮತ್ತು 'ಕಾದಂಬರಿ'ಯನ್ನು ಆರಿಸಿಕೊಂಡಿದ್ದು ಇರಬಹುದು. 'ಕಾವ್ಯ' ಮತ್ತು 'ನಾಟಕ' ಪ್ರಕಾರವು ಹೆಚ್ಚಾಗಿ ಬಳಕೆ ಆಗದಿರುವುದು ಆಗಿನ ಸಾಮಾಜಿಕ ಒತ್ತಡಗಳ ಪರಿಣಾಮವಿರಬಹುದೇನೋ. ಒಟ್ಟಾರೆಯಾಗಿ ಗಾಂಧಿ ಕುರಿತ ನಾಟಕಗಳು ಪ್ರಗತಿಶೀಲ ಪಂಥದಲ್ಲಿ ಕಾಣಸಿಗದು ಎಂದೇ ಹೇಳಬಹುದು.

೬.೨. ನವ್ಯ ನಾಟಕ

ಅರುವತ್ತರ ದಶಕದಲ್ಲಿ ಬೀಸಿದ ನವ್ಯತೆಯ ಗಾಳಿ ಕಾವ್ಯ ಮತ್ತು ಕಥಾ ಸಾಹಿತ್ಯದಂತೆ ರಂಗಭೂಮಿಯನ್ನು ವ್ಯಾಪಿಸಿತು. ಆಧುನಿಕ ಕನ್ನಡ ರಂಗಭೂಮಿಯಲ್ಲಿ ಮಹತ್ವದ ಕೆಲವು ಪ್ರಯೋಗಗಳಿಗೆ ಕಾರಣರಾದ ನವ್ಯ ನಾಟಕಕಾರರು ತೀವ್ರವಾದ ರಂಗಪ್ರಜ್ಞೆಯಿಂದ ನಾಟಕ

ರಚಿಸಲು ತೊಡಗಿದರು. "ಭಾಷಾ ಪ್ರಯೋಗದ ದೃಷ್ಟಿಯಿಂದಲೂ ನವೋದಯ ನಾಟಕಕಾರರಿಗಿಂತ ನವ್ಯ ನಾಟಕಕಾರರು ಭಾಷೆಯ ದ್ವಂದ್ವವನ್ನು ಅರ್ಥಪೂರ್ಣವಾಗಿ ರಂಗಭೂಮಿಗೆ ಸಾಧಿಸಿಕೊಟ್ಟರು" ಎಂದು ಕೆ. ಮರುಳಸಿದ್ದಪ್ಪನವರು ನವ್ಯ ನಾಟಕಕಾರರ ಭಾಷಾ ಪ್ರಯೋಗದ ವೈವಿಧ್ಯತೆಯನ್ನು ಗುರುತಿಸಿದ್ದಾರೆ(ಮರಳುಸಿದ್ದಪ್ಪ.ಕೆ.; ೨೦೦೩; ಪು. ೧೮) ಮತ್ತು "ಕನ್ನಡ ನಾಟಕವೆಂಬುದು ಮಾತಿನಮಯವಾಗಿದ್ದಾಗ ಹುಟ್ಟಿಕೊಂಡ ನವ್ಯ ನಾಟಕಗಳು ನಾಟಕದಲ್ಲಿ ಮಾತಿಗಿರುವ ಸ್ಥಾನವನ್ನು ನಿರ್ದಿಷ್ಟಪಡಿಸಿದವು"(ಅದೇ; ಪು. ೧೮) ಎಂದು ಕೆ. ಮರುಳಸಿದ್ದಪ್ಪನವರೇ ನವ್ಯ ನಾಟಕಗಳ ವಿಶೇಷತೆಯನ್ನು ವ್ಯಕ್ತಪಡಿಸಿದ್ದಾರೆ.

ನವೋದಯ ನಾಟಕಕಾರರಿಗೆ ಹೋಲಿಸಿದಾಗ ನವ್ಯ ನಾಟಕಕಾರರು ಬದುಕಿಗೆ ಹೆಚ್ಚು ವ್ಯಕ್ತಿನಿಷ್ಠವಾಗಿ ಸ್ಪಂದಿಸುತ್ತಾರೆ. ಬದುಕಿನ ಸಮಸ್ಯೆಗಳಿಗೆ ಸುಲಭವಾದ ಪರಿಹಾರಗಳನ್ನು ಕಂಡು ಕೊಳ್ಳುವುದಕ್ಕಿಂತ ಅವುಗಳ ಶೋಧನೆಯ ಮೂಲಕ ಒಂದು ಹೊಸ ಅರಿವನ್ನು ಉಂಟು ಮಾಡಲು ಯತ್ನಿಸುತ್ತಾರೆ. ಈ ಶೋಧನೆಯಿಂದ ಉಂಟಾಗುವ ಅರಿವು, ಬದುಕನ್ನು ಮುಕ್ತವಾಗಿ ಸ್ವತಂತ್ರವಾಗಿ ಎದುರಿಸಲು ನೆರವಾಗುವಂತಹುದು. ಇಂತಹ ವಿವಿಧತೆಯ ಪ್ರಯೋಗಗಳನ್ನು ಸೃಷ್ಟಿಸಿದ ನವ್ಯ ನಾಟಕಕಾರರು ಗಾಂಧೀಜಿಯವರನ್ನು ಪರಿಭಾವಿಸಿದ ಬಗೆಯನ್ನು ಇಲ್ಲಿ ವಿವರಿಸಲಾಗುತ್ತಿದೆ.

ಚಂದ್ರಶೇಖರ ಕಂಬಾರರ 'ಭಾರತಾಂಬೆ' ಒಂದು ಏಕಾಂಕ ನಾಟಕ. ಇದೊಂದು ಹಿಂದೆ ನಡೆದುಹೋದ ಅತ್ಯಾಚಾರ ಘಟನೆಯನ್ನು ಮಹಾತ್ಮ ಗಾಂಧಿ ಮತ್ತು ಭಾರತಾಂಬೆಯ ಹೆಸರನ್ನು ದಾಳವಾಗಿ ಬಳಸಿಕೊಂಡು ಮುಚ್ಚಿ ಹಾಕುವುದನ್ನು ಈ ನಾಟಕ ವಿವರಿಸುತ್ತದೆ. ಒಬ್ಬ ಮುಸ್ಲಿಂ ಮಂತ್ರಿಯ ಮಗ ಹರಿಜನಾಂಗದ ರಾಮಕ್ಕ ಎಂಬುವಳ ಮಗಳಾದ ಬಂಗಾರಿಯನ್ನು ಅತ್ಯಾಚಾರ ಮಾಡುತ್ತಾನೆ. ಈ ದುರ್ಘಟನೆ ಹಿಂದೂ - ಮುಸ್ಲಿಂ, ಧಾರ್ಮಿಕ, ರಾಜಕೀಯ ಸಂಘರ್ಷಗಳಿಗೆ ಕಾರಣವಾಗುತ್ತದೆ. ಈ ಸಂಘರ್ಷದಲ್ಲಿ ಕೆಳವರ್ಗದವರಾದ ಹರಿಜನಾಂಗದವರಾದ ಅತ್ಯಾಚಾರಕ್ಕೆ ಒಳಗಾದ ಬಂಗಾರಿ ಮತ್ತು ಅವಳ ಗಂಡ ಕರಿನಿಂಗರು ಬಲಿಯಾಗುತ್ತಾರೆ. ಈ ಘಟನೆಯನ್ನು ಮುಸಲ್ಮಾನ ಮಂತ್ರಿ ಗಾಂಧೀಜಿಯ ಹೆಸರನ್ನು ದಾಳವಾಗಿಸಿಕೊಂಡು ಮುಚ್ಚಿಹಾಕುತ್ತಾನೆ.

ತನ್ನ ಮಗಳಿಗಾದ ಅನ್ಯಾಯವನ್ನು ರಾಮಕ್ಕ ಪ್ರತಿಭಟಿಸಲು ಮುಂದಾಗುತ್ತಾಳೆ. ಇದನ್ನು ಉಪಾಯವಾಗಿ ಹತ್ತಿಕ್ಕಲು ಮುಸಲ್ಮಾನ ಮಂತ್ರಿ ಗಾಂಧೀಜಿಯ ಹೆಸರನ್ನು ಹೀಗೆ ಬಳಸಿಕೊಳ್ಳುತ್ತಾನೆ. "ತಾಯಿ, ಈ ದಿನ ನೀನು ನನಗೊಂದು ಪಾಠ ಕಲಿಸಿದೆ. ನಾನೂ ಪ್ರಾಮಾಣಿಕನೇ, ನಿನ್ನ ಹಾಗೆ ಗಾಂಧಿ ಜೊತೆ ಇದ್ದೆ(ಚಂದ್ರಶೇಖರ ಕಂಬಾರ; ೨೦೦೪; ಪು. ೪೨೪) ಎಂದು ಪ್ರಾಮಾಣಿಕತೆಗೆ ಪ್ರತೀಕವಾಗಿದ್ದ ಗಾಂಧೀಜಿಯ ಹೆಸರನ್ನು ಸ್ವಾರ್ಥಲೋಲುಪತೆಗೆ ಬಳಸಿಕೊಳ್ಳುವುದನ್ನು ನಾಟಕಕಾರರು ಚಿತ್ರಿಸಿದ್ದಾರೆ.

"ಮಂತ್ರಿ : ಈಗ ಸ್ವಯಂ ಮಹಾತ್ಮಾ ಗಾಂಧೀಜಿಯವರೇ ನಿನ್ನ ಮನೆತನಕ ಬಂದು ಕೇಳಿದರೂಂತ ಇಟ್ಟುಕೊ: ಮಗಳೇ ರಾಮಕ್ಕಾ ಒಂದು ಕಡೆ ನಿನ್ನ

ಮಗಳಿಗಾದ ಅನ್ಯಾಯ ಇದೆ; ಇನ್ನೊಂದು ಕಡೆ ಕೋಟಿ ಕೋಟಿ ಜನರ ಜೀವ ಇದೆ. ಇವೆರಡರಲ್ಲಿ ಯಾವುದು ದೊಡ್ಡದು ತಾಯಿ?

ರಾಮಕ್ಕ : ಗಾಂಧಿ ಸತ್ತಾರ. ನಮ್ಮ ಮನೀಗ್ಯಾಕ ಬಂದಾರ ಬಿಡರೀ.

ಮಂತ್ರಿ : ನಾ ಬಂದೀನಲ್ಲಮ್ಮಾ, ನನಗೇ ಹೇಳು ಯಾವುದು ದೊಡ್ಡದು?

ರಾಮಕ್ಕ : ಗಾಂಧೀ ಆಗಿದ್ದರೆ ಇಂಥಾ ಸುಳ್ಳಿಗೆಲ್ಲ ಸೈ ಹಾಕಂತಿದ್ದರೇನ್ರೀ?"

(ಅದೇ; ಪು. ೪೨೬)

ಗಾಂಧೀಜಿ 'ಸತ್ಯ'ವನ್ನು ಪ್ರತಿಪಾದಿಸಿ ಅದನ್ನು ತತ್ವವಾಗಿಸಿದವರು. ಇಂತಹ ಸತ್ಯವಾದಿ ಗಾಂಧಿ ಸುಳ್ಳನ್ನು ಕಟುವಾಗಿ ವಿರೋಧಿಸುತ್ತಿದ್ದವರು. ಸುಳ್ಳನ್ನೆಲ್ಲಿ ಬೆಂಬಲಿಸುತ್ತಾರೆ ಎಂದು ಕೆಳವರ್ಗದ ಹರಿಜನಾಂಗದ ಪ್ರತಿನಿಧಿಯಾದ ರಾಮಕ್ಕಳ ನಂಬಿಕೆಯಾಗಿದೆ. ಹಾಗಾಗಿ ಗಾಂಧಿ ಇಲ್ಲಿ 'ಸತ್ಯ'ದ ಪ್ರತಿನಿಧಿಯಾಗಿ ಚಿತ್ರಿತವಾಗಿದ್ದಾರೆ. ಗಾಂಧಿ ಹೆಸರನ್ನು ಉನ್ನತ ವರ್ಗದವರು ಮತ್ತು ಶ್ರೀಮಂತ ಜನರು ತಮ್ಮ ಸ್ವಾರ್ಥತೆಗೆ ದಾಳವಾಗಿ ಬಳಸಿಕೊಳ್ಳುವುದನ್ನು ಕಂಬಾರರು ಕಂಡರಿಸಿದ್ದಾರೆ.

ಕೇಶವ ಮೊರಬ್ ಅವರು ರಚಿಸಿದ 'ಅವಿಶ್ವಾಸ' ನಾಟಕವು ಶ್ರೀ ವೀಣಾ ಶಿರ್ವಾಡಕರ್ ಅವರ ಮುಖ್ಯಮಂತ್ರಿ' ಎಂಬ ಮರಾಠಿ ನಾಟಕದ ಪ್ರೇರಣೆಯನ್ನು ಪಡೆದಿದೆ. ಈ ನಾಟಕದ ಮುಖ್ಯಾಂಶಗಳನ್ನು ಎತ್ತಿಕೊಂಡು ಕೇಶವ ಮೊರಬ್ ಅವರು 'ಅವಿಶ್ವಾಸ' ನಾಟಕವನ್ನು ಕನ್ನಡ ಜಾಯಮಾನಕ್ಕೆ ಒಗ್ಗುವಂತೆ ಸ್ವತಂತ್ರ ಕೃತಿಯಾಗಿ ರಚಿಸಿದ್ದಾರೆ.

ಒಬ್ಬ ಗಾಂಧಿವಾದಿ ರಾಜಕಾರಣಿ ಸ್ವತಂತ್ರ ಭಾರತದ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸುತ್ತಾನೆ. ಗಾಂಧಿಯ ತತ್ವಾದರ್ಶಗಳನ್ನು ಮತ್ತು ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು ತನ್ನ ಆಡಳಿತ ಯಂತ್ರವನ್ನು ಮುನ್ನಡೆಸುತ್ತಾನೆ. ಮುಂದೆ ತನ್ನ ಕೆಳಗಿನ ಆಡಳಿತದ ರಾಜಕೀಯ ಸಚಿವರ ಮೋಸ, ವಂಚನೆ, ಅನ್ಯಾಯ, ದಬ್ಬಾಳಿಕೆ ಮತ್ತು ಸ್ವಾರ್ಥಗಳಿಗೆ ಗಾಂಧಿವಾದಿಯ ಆಡಳಿತ ಯಂತ್ರ ಸಿಲುಕಿ ಕೆಟ್ಟು ನಿಲ್ಲುವುದನ್ನು ಈ ನಾಟಕ ವಿವರಿಸುತ್ತದೆ.

ಈ ನಾಟಕದ ಮುಖ್ಯಮಂತ್ರಿಯ ಪ್ರಮುಖ ಪಾತ್ರವಹಿಸಿದವನ ಮಾತುಗಳನ್ನು ನಾಟಕದ ಬೆನ್ನುಡಿಯಲ್ಲಿ ಹೀಗೆ ಕೊಡಲಾಗಿದೆ. "ಬಾಪೂಜಿ ನಾನು ಒಬ್ಬ ಸಾಮಾನ್ಯ ಮನುಷ್ಯ. ತಾವು ದೇಶಕ್ಕೆ ನೀಡಿದ ತತ್ವವನ್ನು, ವಾದವನ್ನು ನಾನು ಸಂಪೂರ್ಣವಾಗಿ ನಂಬಿಕೊಂಡು ತಾವು ಹಾಕಿಕೊಟ್ಟ ದಾರಿಯಲ್ಲಿಯೇ ನಡೆದುಕೊಂಡು ಬಂದಿದ್ದೇನೆ. ಯಾವುದೇ ಸಂದರ್ಭದಲ್ಲಿಯೂ ನಾನು ನಿಮ್ಮ ತತ್ವವನ್ನು ಮರೆತಿಲ್ಲ. ಇಂದು ರಾಜಕಾರಣ ಹದಗೆಟ್ಟು ಹೋಗಿದೆ. ನನ್ನ ಸುತ್ತಮುತ್ತ ಇರುವ ಸ್ನೇಹಿತರೇ ನನ್ನನ್ನು ದೂಷಿಸುತ್ತಿದ್ದಾರೆ. ಪ್ರತಿಯೊಬ್ಬ ಸಹದ್ಯೋಗಿಗೂ ತನ್ನ ಸ್ವಾರ್ಥ ಮಹತ್ವದ್ದು ಆಗಿದೆ. ಸ್ವಾರ್ಥಕ್ಕೋಸ್ಕರ ಅವರು ಏನು ಮಾಡುವುದಕ್ಕೂ ಸಿದ್ಧ. ಅವರು ಹೇಳಿದ ಮಾತನ್ನು ಕೇಳುವುದಿಲ್ಲ ಅಥವಾ ಅವರು ಬಯಸಿದ್ದು ಕೊಡುವುದಕ್ಕೆ ನನಗೆ

ಸಾಧ್ಯವಾಗುತ್ತಿಲ್ಲ. ಅವರು ನನ್ನನ್ನು ಏನಾದರೂ ಮಾಡಿ ಮುಖ್ಯಮಂತ್ರಿಯ ಈ ಆಸನದಿಂದ ಕೆಳಗೆ ಇಳಿಸಬೇಕೆಂದು ಆಶಿಸುತ್ತಾರೆ. ಆದುದರಿಂದಲೇ ಅವರು ನನ್ನ ಮೇಲೆ 'ಅವಿಶ್ವಾಸ'ದ ನಿರ್ಣಯವನ್ನು ಪ್ರಸ್ತಾಪಿಸಿದ್ದಾರೆ. ಬಾಪೂಜಿ, ನಾನು ಈಗ ನಿಜಕ್ಕೂ ಅಂಧಕಾರದಲ್ಲಿದ್ದೇನೆ. ಇಲ್ಲಿಂದ ಹೊರಗಡೆ ಬರುವುದಕ್ಕೆ ದಾರಿಯೇ ಇಲ್ಲ"(ಕೇಶವ ಮೊರಬ್; ೧೯೮೪; ಪು. ಬೆನ್ನುಡಿ) ಎಂಬ ಈ ಮಾತುಗಳನ್ನು ನೋಡಿದರೆ ಈ ನಾಟಕದ ಮೂಲ ಉದ್ದೇಶ ತಿಳಿಯುತ್ತದೆ.

ಮುಖ್ಯಮಂತ್ರಿ ತನ್ನ ಸಹೋದ್ಯೋಗಿಗಳ ಕುಟಿಲತೆಗಳಿಗೆ ಬೇಸತ್ತು ತನ್ನ ಕಛೇರಿಯ ಗಾಂಧೀಜಿಯ ಫೋಟೋ ಜೊತೆಗೆ ಹೀಗೆ ಸಂಭಾಷಿಸುತ್ತಾರೆ. "ನಿಮಗೊತ್ತು ಏನ್ ಮಾಡ್ತೀನಿ ಅಂತ. ನಾನು ನಿಮ್ಮನ್ನು ಕೇವಲ ರಾಷ್ಟ್ರಪಿತ ಅಲ್ಲ, ನನ್ನ ತಂದೆ ಅಂತ ತಿಳ್ಕೊಂಡಿದ್ದೇನೆ. ಮೊದಲ ಸಲ ನಿಮ್ಮನ್ನು ನೋಡಿದ್ದು ೪೨ರ ಕಾಂಗ್ರೆಸಿನಲ್ಲಿ. ಆಗ ನಾನು ಶಾಲೆಯ ವಿದ್ಯಾರ್ಥಿ...

ಫೋಟೋ : ಇದನ್ನೆಲ್ಲಾ ಯಾರ ಸಲುವಾಗಿ ನನಗೆ ಹೇಳ್ತಾ ಇದ್ದೀಯಾ?

ಮುಖ್ಯಮಂತ್ರಿ : ನನಗೆ ನಿಮ್ಮ ಆಶೀರ್ವಾದ ಬೇಕಾಗಿದೆ.

ಫೋಟೋ : ಯಾವುದರ ಸಲುವಾಗಿ?

ಮುಖ್ಯಮಂತ್ರಿ : ಸುಳ್ಳು ಹೇಳುವುದರ ಸಲುವಾಗಿ.

ಫೋಟೋ : ಭೇಷ್..... ನಿನಗೆ ಗೊತ್ತು ನಾನು...(ಅದೇ; ಪು. ೧೬-೧೭)

ಹೀಗೆ ಗಾಂಧೀಜಿಯನ್ನು ಇಡೀ ದೇಶದ ಬಿಸಿರಕ್ತದ ಯುವಕರೆಲ್ಲಾ ಆದರ್ಶವಾಗಿಸಿಕೊಂಡು ತಂದೆಯಂತೆ ಕಾಣುತ್ತಾರೆ. ಆದರೆ ಅಧಿಕಾರದ ಒತ್ತಡಕ್ಕೆ ಸಿಲುಕಿದಾಗ ಪಲಾಯನ ತಂತ್ರ ಮಾಡುವಾಗ ಗಾಂಧಿಯ ಹೆಸರನ್ನು ಅಥವಾ ಅವರ ವಿಚಾರಧಾರೆಯನ್ನು ಅಸ್ತ್ರವಾಗಿ ಉಪಯೋಗಿಸಿಕೊಳ್ಳುತ್ತಾರೆ. ಆದರೆ ಕುಟಿಲತೆಗೆ ಅಥವಾ ಸ್ವಾರ್ಥಕ್ಕೆ ಗಾಂಧೀಜಿಯ ತತ್ವಗಳು ದೀರ್ಘಕಾಲ ಸೊಪ್ಪು ಹಾಕುವುದಿಲ್ಲ ಎಂಬ ಸತ್ಯ ಕೊನೆಯ ಸಾಲಿನಲ್ಲಿ ತಿಳಿಯುತ್ತದೆ.

"ಮುಖ್ಯಮಂತ್ರಿ : ರಾಜಕಾರಣ ಅಂದರೆ ಕಳ್ಳರಿಗೆ, ದರೋಡೆಕೋರರಿಗೆ ಇರುವ ಒಂದು ಆಶ್ರಯ ಸ್ಥಾನ; ಇದನ್ನು ಅವರು ಹೇಳಿದ್ದಾರಂತೆ. ಕೇಳುತ್ತಾ ಇದ್ದೀವಿ. ಆದರೆ ಅದನ್ನು ಯಾವತ್ತೂ ಒಪ್ತಾ ಇಲ್ಲ. ಯಾಕೆಂದರೆ ನೀವು ನಮ್ಮ ಜೊತೆಗೆ ಇದ್ದು ಆ ಮಾತನ್ನು ಸುಳ್ಳು ಅಂತ ಎಲ್ಲರಿಗೂ ತೋರಿಸಿಕೊಟ್ಟಿದ್ದೀರಿ. ನೀವು ಒಂದು ದೊಡ್ಡ ಕ್ರಾಂತಿ ಮಾಡಿದ್ದೀರಿ ರಾಜಕಾರಣ ಎಂಬ ಶಬ್ದಕ್ಕೆ ಬೇರೆ ಒಂದು ಅರ್ಥವನ್ನೇ ಕೊಟ್ಟಿದ್ದೀರಿ. ರಾಜಕಾರಣ ಅಂದರೆ ಒಂದು ದೇವರ ಕಾರ್ಯ ಅನ್ನೋದು ನೀವು ಹೇಳಿದ ಮಾತು.

ಗಾಂಧೀಜಿ ಫೋಟೋ: ಯಾಕೆ ಇದನ್ನೆಲ್ಲಾ ಜ್ಞಾಪಿಸಿಕೊಳ್ಳುತ್ತಿದ್ದೀಯಾ?"

(ಅದೇ; ಪು. ೩೬-೩೭)

ಹಿಂದೆ ಗಾಂಧೀಜಿ ರಾಜಕೀಯವನ್ನು ಸುವ್ಯವಸ್ಥಿತ ರೀತಿಯಲ್ಲಿ ಕಟ್ಟಿ ಅದಕ್ಕೆ ಒಂದು ಅರ್ಥವನ್ನು ಕಲ್ಪಿಸಿದ್ದರು. ರಾಜಕೀಯವು ದೇವರ ಕಾರ್ಯವೆಂದು ಸಾರಿ ಅರಾಜಕತೆಯನ್ನು ತೊಡೆದು ಹಾಕಿದ ಒಬ್ಬ ವಿಚಾರಕ್ರಾಂತಿಕಾರನನ್ನಾಗಿ ಗಾಂಧಿಯನ್ನು ಇಲ್ಲಿ ಚಿತ್ರಿಸಲಾಗಿದೆ. ಮುಖ್ಯಮಂತ್ರಿಯ ಹೆಂಡತಿ ಸುಷ್ಮಾ ಅವರ ನಿಜವಾದ ಗಾಂಧಿನಿಷ್ಠೆಯನ್ನು ಹೀಗೆ ತೋರಿಸುತ್ತಾಳೆ.

"ಸುಷ್ಮಾ : ನಿಜ ಹೇಳ್ತಾ ಇದ್ದೀನಿ. ಈ ರಾಜ್ಯದಲ್ಲಿ ನಿಮ್ಮಷ್ಟು ಭ್ರಷ್ಟಾಚಾರಿ ಇನ್ನ್ಯಾರು ಇಲ್ಲ. ಗಾಂಧೀಜಿಯ ಹೆಸರಿನಲ್ಲಿ ಜಯಘೋಷ ಮಾಡ್ತೀರಿ. ಆದರೆ ಪ್ರತಿಯೊಂದು ಹೆಜ್ಜೆ ಕೆಳಗಡೆ ನೀವು ಅವರನ್ನು ತುಳಿತಾ ಇದ್ದೀರಾ".

ಮುಖ್ಯಮಂತ್ರಿ : ನಿಜ ಸುಷ್ಮಾ. ನೀನು ಹೇಳ್ತಾ ಇರೋದು ನಿಜ. ಈಗ ನನ್ನ ಬಗ್ಗೆ ನನಗೇನೇ ಹೇಸಿಗೆ ಆಗ್ತಾ ಇದೆ.(ಬಾಪೂಜಿ ಫೋಟೋ ಹತ್ತಿರ ಹೋಗಿ) ಹೌದು ಬಾಪೂಜಿ, ಈಗ ನನ್ನ ಬಗ್ಗೆ ನನಗೆ ಹೇಸಿಗೆ ಅನ್ನಿಸ್ತಾ ಇದೆ. ......ಆದರೆ ಇವತ್ತು ನೀವು ನನ್ನ ಜೊತೆ ಮಾತನಾಡಲ್ವಾ? ಬಾಪೂಜಿ ನಮ್ಮ ಸಂವಾದ ಮುಗೀತಾ? ಇರಲಿ ಈ ಶಿಕ್ಷೇನೂ ನಾನು ಸಹಿಸಬೇಕು"

(ಅದೇ; ಪು. ೫೭-೫೯)

ಗಾಂಧಿವಾದಿಯ ಮುಖವಾಡವನ್ನು ಧರಿಸಿ ಗಾಂಧಿಯ ವಿಚಾರಗಳನ್ನು ತುಳಿಯುತ್ತ ಬರುವುದು ಇಂದಿನ ರಾಜಕೀಯದವರ ಸ್ವಾರ್ಥತೆಯನ್ನು ಈ ಸಾಲುಗಳು ವಿವರಿಸುತ್ತವೆ. ಆದರೆ ಗಾಂಧೀಜಿಯ ನಿಸ್ವಾರ್ಥ ತತ್ವಗಳ ಮುಂದೆ ಸ್ವಾರ್ಥತೆಯಿಂದ ಕೂಡಿದ ಕುಟಿಲತೆಗಳು ಹೆಚ್ಚು ಕಾಲ ನಿಲ್ಲುವುದಿಲ್ಲ ಎನ್ನುವುದು ಈ ನಾಟಕದಿಂದ ತಿಳಿಯುತ್ತದೆ.

ಈ ನವ್ಯ ಕಾಲಘಟ್ಟದಲ್ಲಿ ಗಾಂಧೀಜಿಯನ್ನು ಕುರಿತು ಇನ್ನಿತರ ನಾಟಕಗಳು ಎಂದರೆ ವಡ್ಡರ್ ಎಂ.ಎಂ. ಅವರ 'ಅಮರ ಗಾಂಧೀಜಿ' ಮತ್ತು ಪಾಟೀಲ ಕೆ.ಬಿ. ಅವರ 'ಜನವರಿ ೨೬' ರಚಿತವಾಗಿವೆ. ಒಟ್ಟಾರೆಯಾಗಿ ಈ ನವ್ಯದ(೧೯೫೦-೭೦) ಸಂದರ್ಭದಲ್ಲಿ ಗಾಂಧೀಜಿಯ ವಿಚಾರಧಾರೆಗಳು, ತತ್ವಗಳು ಸ್ವಾರ್ಥಲೋಲುಪತೆಯಿಂದ ಕೂಡಿದ ವ್ಯಕ್ತಿಗಳ ಅಸ್ತ್ರಗಳಾಗಿವೆ ಎಂದು ಸಿಕ್ಕಿರುವ ಕೃತಿಗಳಿಂದ ತಿಳಿದುಬರುತ್ತದೆ.

೬.೩. ದಲಿತ-ಬಂಡಾಯ ನಾಟಕ

ಗಾಂಧೀಜಿಯವರನ್ನು ಕುರಿತು ದಲಿತ ಲೇಖಕರೇ ರಚಿಸಿದ ನಾಟಕಗಳು ವಿರಳ. ಹಾಗಾಗಿ ದಲಿತ-ಬಂಡಾಯ ಧೋರಣೆಗಳುಳ್ಳ ನಾಟಕಗಳನ್ನು ಇಲ್ಲಿ ನಿರೂಪಿಸಲಾಗಿದೆ. ಕನ್ನಡ ಸಾರಸ್ವತ ಲೋಕವು ಸಹ ದಲಿತ ಬಂಡಾಯವನ್ನು ಇಡಿಯಾಗಿಯೇ ನೋಡುವ ಕ್ರಮವಹಿಸಿದೆ. ನಾಟಕ ಈ ಕಾಲಘಟ್ಟದಲ್ಲಿ ಅತ್ಯಂತ ಸಮೃದ್ಧವಾಗಿ ಬೆಳೆದುಬಂದಿದೆ. ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಿಗೆ

ಸಿಕ್ಕಿದ್ದಷ್ಟೇ ಪ್ರಾಮುಖ್ಯತೆ ನಾಟಕ ಪ್ರಕಾರಕ್ಕೂ ಸಿಕ್ಕಿದೆ. "ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿ ಹುಟ್ಟಿಕೊಂಡ ಕೆಲವು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳವಳಿಗಳು ನಾಟಕ ರಚನೆಯ ಮೇಲೆ ಆಗಾಧವಾದ ಪರಿಣಾಮ ಬೀರತೊಡಗಿದ್ದವು. ದಲಿತ ಸಂಘರ್ಷ ಸಮಿತಿ, ರೈತ ಸಂಘಟನೆ, ಎಡಪಂಥೀಯ ಸಂಘಟನೆ, ದಲಿತ ಬಂಡಾಯ ಸಾಹಿತ್ಯ ಸಂಘಟನೆಗಳು ತಮ್ಮ ಪ್ರಖರ ರಾಜಕೀಯ, ಸಾಮಾಜಿಕ, ಆರ್ಥಿಕ ಚಿಂತನೆಗಳ ಹಿನ್ನೆಲೆಯಲ್ಲಿ ಇಡೀ ಸಮಾಜದ ಚಾರಿತ್ರಿಕ ದ್ವಂದ್ವಮಾನ ಮತ್ತು ಗತಿತಾರ್ಕಿಕತೆಯನ್ನು ವಿಶ್ಲೇಷಿಸತೊಡಗಿದ್ದವು"(ನಾಯಕ. ಜಿ.ಎಸ್.(ಸಂ); ೨೦೦೯; ಪು. ೧೦೨). ಈ ಎಲ್ಲಾ ಪ್ರಭಾವಗಳೂ ಆ ಕಾಲದ ನಾಟಕ ಬರವಣಿಗೆಯ ಮೇಲೆ ಪ್ರಭಾವ ಬೀರತೊಡಗಿದವು. ಇದರಿಂದ ರಾಜಕೀಯ ನೆಲೆ, ಚಾರಿತ್ರಿಕ ಅಥವಾ ಐತಿಹಾಸಿಕ ವ್ಯಕ್ತಿಗಳ ವ್ಯಕ್ತಿತ್ವಗಳ ಅನೇಕ ಆಯಾಮಗಳನ್ನು ವಿಶ್ಲೇಷಿಸುವ ನಾಟಕಗಳು ರಚನೆಯಾಗತೊಡಗಿದವು. ಅದರಲ್ಲಿ ನೇರವಾಗಿ ಗಾಂಧೀಜಿಯವರನ್ನು ಕುರಿತ ನಾಟಕಗಳು ಮತ್ತು ಅವರ ತತ್ವಗಳನ್ನಾಧರಿಸಿದ ನಾಟಕಗಳು ರಚನೆಗೊಂಡವು. ಅವುಗಳಲ್ಲಿ ಪ್ರಮುಖವಾಗಿ ಟಿ.ಎಂ. ಭಾಸ್ಕರ ಅವರ 'ಗಾಂಧಿಟೋಪಿ', ಮೈ.ನಾ. ಶಿವಾನಂದಸ್ವಾಮಿ ಅವರ 'ರಾಮರಾಜ್ಯದ ಕನಸು' ಮತ್ತು ಕೆ. ವೆಂಕಟರಾಜು ಅವರ 'ತಲೆಬಾಗದ ಜನ' ಮುಂತಾದವುಗಳನ್ನು ಗುರುತಿಸಬಹುದು.

ಟಿ.ಎಂ. ಭಾಸ್ಕರ್ ಅವರು ಗಾಂಧೀಜಿಯವರ ತತ್ವವನ್ನಾಧರಿಸಿ 'ಗಾಂಧಿ ಟೋಪಿ' ನಾಟಕವನ್ನು ರಚಿಸಿದ್ದಾರೆ. ಈ ನಾಟಕ ಗಾಂಧೀಜಿಯವರ ಕಟ್ಟಾ ಅನುಯಾಯಿಗಳಾಗಿದ್ದ ಕೌಜಲಗಿ ಹನುಮಂತರಾಯರು ದೇಶ ಸೇವೆ, ಸಮಾಜ ಸೇವೆಯನ್ನು ಗಾಂಧಿಯ ತತ್ವಗಳನ್ನಾಧರಿಸಿ ಮಾಡಿದುದನ್ನು ವಿವರಿಸುತ್ತದೆ. "ಗಾಂಧೀಜಿಯವರ ಸ್ಫೂರ್ತಿಯಿಂದ ಆರು ದಶಕಗಳ ಹಿಂದೆಯೇ ಬಿಜಾಪುರ ಜಿಲ್ಲೆಯಲ್ಲಿ ಹರಿಜನ ಕನ್ಯಾಮಂದಿರವನ್ನು, ದೇವದಾಸಿಯರ ಉತ್ತಮ ಬದುಕಿಗಾಗಿ 'ಅಹಲ್ಯೋದ್ಧಾರ ಮಂದಿರ' ಆರಂಭಿಸಿದ ಅವರು ಆಳರಸರ ದೌರ್ಜನ್ಯಕ್ಕೆ ಕೊರಗಿದವರು. ಮಾತಿಗಿಂತಲೂ ಮಾಡಿ ತೋರಿಸಿದ್ದೇ ಕೌಜಲಗಿಯವರ ದೊಡ್ಡ ಗುಣ. ಸರಕಾರದ ಯಾವ ಒತ್ತಡಕ್ಕೂ, ಬೆದರಿಕೆಗೂ ಹೆದರಿ, ತಲೆಯ ಮೇಲಿನ ಗಾಂಧೀ ಟೋಪಿಯನ್ನು ತೊರೆಯದ ಧೈರ್ಯಶಾಲಿ ಸರಳ, ನಿಸ್ವಾರ್ಥದ ಮೂರ್ತಿ"(ಭಾಸ್ಕರ. ಟಿ.ಎಂ.; ೨೦೦೦; ಪು. ಮುನ್ನುಡಿ) ಎಂದು ಡಾ. ಸ್ವಾಮಿರಾವ ಕುಲಕರ್ಣಿ ಅವರು ನಾಟಕದ ಮುನ್ನುಡಿಯ ಮಾತುಗಳಿಂದ ಕೌಜಲಗಿ ಹನುಮಂತರಾಯರ ಮೇಲೆ ಗಾಂಧೀಜಿಯವರ ಪ್ರಭಾವ ಎಷ್ಟಿತ್ತೆಂಬುದು ತಿಳಿಯುತ್ತದೆ. ಇವರು ಖಾದಿಧಾರಿಗಳಾಗಿ ಗಾಂಧೀಜಿಯವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಅವರ ಪ್ರತಿಯೊಂದು ರಚನಾತ್ಮಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದನ್ನು ಈ ನಾಟಕ ವಿವರಿಸುತ್ತದೆ.

ಕೌಜಲಗಿ ಹನುಮಂತರಾಯರನ್ನು ನ್ಯಾಯಾಲಯದಲ್ಲಿ ಗಾಂಧೀ ಟೋಪಿ ಧರಿಸಿದ ಅಪರಾಧದ ಮೇಲೆ ಕೋರ್ಟ್ ಕಟಕಟೆಯಲ್ಲಿ ನಿಲ್ಲಿಸಿ ಮ್ಯಾಜಿಸ್ಟ್ರೇಟ್(ನ್ಯಾಯಾಧೀಶ)ರು ವಿಚಾರಿಸುತ್ತಾರೆ. ಗಾಂಧಿ ಟೋಪಿ ಮತ್ತು ಖಾದಿ ಬಟ್ಟೆಯನ್ನು ತ್ಯಜಿಸಲು ಮ್ಯಾಜಿಸ್ಟ್ರೇಟರು ಕೌಜಲಗಿ ಅವರಿಗೆ ಆದೇಶಿಸುತ್ತಾರೆ. ಅದಕ್ಕೆ -

"ಹನುಮಂತರಾಯ : ಕನ್ನಡ ನಾಡಿನ ಹೆಮ್ಮೆಯ ಪುತ್ರರ ಮಾತು ಒಂದೇ, ಅದನ್ನು ಬದಲಿಸಲು ಸಾಧ್ಯವಿಲ್ಲ.

ಮ್ಯಾಜಿಸ್ಟ್ರೇಟ್ : ಏಕೆ ಸಾಧ್ಯವಿಲ್ಲ?

ಹನುಮಂತರಾಯ : ಅದು ಅಷ್ಟು ಸುಲಭವಲ್ಲ; ಮ್ಯಾಜಿಸ್ಟ್ರೇಟರೆ; ಗಾಂಧೀಟೋಪಿ ಅದು ಸಾಮಾನ್ಯ ಟೋಪಿ ಅಲ್ಲ (ತಲೆಯ ಮೇಲಿನ ಟೋಪಿ ತೋರಿಸುತ್ತಾ)

ಮ್ಯಾಜಿಸ್ಟ್ರೇಟ್ : ಅಂತಹ ವಿಶೇಷತೆ ಅದರಲ್ಲೇನಿದೆ?

ಹನುಮಂತರಾಯ : ಅಂತಹ ವಿಶೇಷತೆ ಇರುವುದರಿಂದಲೇ ನೀವು ನನ್ನನ್ನು ಪ್ರಶ್ನಿಸುತ್ತಿರುವುದು.

ಮ್ಯಾಜಿಸ್ಟ್ರೇಟ್ : (ಇವನು ಸಾಮಾನ್ಯ ಮನುಷ್ಯನಂತೆ ಕಾಣಿಸುವುದಿಲ್ಲ. ಪಕ್ಕಾ ಗಾಂಧಿವಾದಿ. ಎಷ್ಟೇ ಕಷ್ಟ ಕೊಟ್ಟರೂ - ದಂಡಿಸಿದರೂ ತನ್ನ ನಿರ್ಧಾರವನ್ನು ಇವನು ಬದಲಿಸುವಂತೆ ತೋರುವುದಿಲ್ಲ)"

(ಅದೇ; ಪು. ೧-೨)

ಎಂಬ ಈ ಸಾಲುಗಳಿಂದ ಗಾಂಧೀಜಿಯವರ ನಿಷ್ಠೆ ಮತ್ತು ಅವರ ವ್ಯಕ್ತಿತ್ವ ಕಠಿಣವಾದುದು ಎಂಬುದು ತಿಳಿದುಬರುತ್ತದೆ. ಹನುಮಂತರಾಯರು ಗಾಂಧಿಯವರ ಸ್ಫೂರ್ತಿಯಿಂದ ಹೋರಾಟಕ್ಕೆ ಇಳಿದವರು. ಹಾಗಾಗಿ ಗಾಂಧಿಯನ್ನು ಹೀಗೆ ನೆನೆಯುತ್ತಾರೆ.

"ಹನುಮಂತರಾಯ: ಸಂಸ್ಥಾನಗಳಲ್ಲಿ ಪ್ರಜೆಗಳು ಎಚ್ಚೆತ್ತರಲ್ಲದೆ, ದೇಶದಲ್ಲಿ ರಾಜಕೀಯ ವಾತಾವರಣದಲ್ಲಿ ಹೊಸ ಅಲೆಗಳು ಹುಟ್ಟುಹಾಕಿದ್ದವು ಮತ್ತು ಪ್ರಜಾ ಪರಿಷತ್ತುಗಳು ತಲೆಎತ್ತಿ ನಿಲ್ಲಲು ಕಾರಣವಾಯಿತು. ನನ್ನ ಹೋರಾಟದ ಬದುಕಿಗೆ ಚಾಲನ ಶಕ್ತಿಯಾಗಿ ನಿಂತವರು ತಿಲಕರು ಮತ್ತು ಗಾಂಧೀಜಿಯವರು.

ಠಕ್ಕರ ಬಾಷಾ : ಹೌದು ಹನುಮಂತರಾಯರೇ ನೀವು ಹೇಳುವುದು ನಿಜ. ಅವರಿಂದಲೇ ನಮ್ಮ ನಾಡಿಗೆ ಮುಕ್ತಿ"(ಅದೇ; ಪು. ೧೦-೧೧)

ಇಲ್ಲಿ ಗಾಂಧಿ ನಿಸ್ವಾರ್ಥ ಸೇವೆ ಮಾಡುವವರಿಗೆ ಸ್ಫೂರ್ತಿಯಾಗಿ, ಶಕ್ತಿಯಾಗಿ ಮತ್ತು ನಾಡಿನ ಅಂಧಕಾರವನ್ನು ತೊಡೆದು ಹಾಕುವ ದೈವಸಂಭೂತರಾಗಿ ಪ್ರತಿಪಾದಿತಗೊಂಡಿದ್ದಾರೆ.

"ಮ್ಯಾಜಿಸ್ಟ್ರೇಟ್ : ಅಲ್ರಿ ಮೊದಲೇ ಹೇಳಲಿಲ್ಲವೇ? ಒಬ್ಬ ಪ್ರಸಿದ್ಧ ವಕೀಲರಾಗಿದ್ದುಕೊಂಡು ಗಾಂಧಿಟೋಪಿ ಮತ್ತು ಖಾದಿಬಟ್ಟೆಗಳನ್ನು ಹಾಕಿಕೊಂಡು ಬರಬಾರದೆಂದು?

ಹನುಮಂತರಾಯ: ಮ್ಯಾಜಿಸ್ಟ್ರೇಟ್‌ರವರೆ, ಈ ಬಟ್ಟೆಯ ಮಹತ್ವ ನಿಮಗೆ ಅರ್ಥವಾಗದು!

ಮ್ಯಾಜಿಸ್ಟ್ರೇಟ್ : ಅಂಥದೇನ್ರಿ? ಅದರ ಮಹತ್ವ?

ಹನುಮಂತರಾಯ: ಈ ಬಟ್ಟೆ ನಮ್ಮ ನಾಡಿನ ಬಡ ಜನರ ಬೆವರಿನಿಂದ ತಯಾರಾದದ್ದು"(ಅದೇ; ಪು. ೧೮-೧೯)

ಗಾಂಧಿಯವರು ಚರಕದಿಂದ ಖಾದಿಬಟ್ಟೆ ನೂಲುವುದನ್ನು ಹೇಳಿಕೊಟ್ಟದ್ದು ಬಡಜನರು ಸ್ವಾವಲಂಬನೆ ಜೀವನ ನಡೆಸಲೆಂದು. ಹೀಗಾಗಿ ಖಾದಿ ಬಡವರ ಸ್ವಾವಲಂಬನೆಯ ಸಂಕೇತವಾಗಿದೆ. ಗಾಂಧಿ ಸ್ವಾವಲಂಬನೆ ಜೀವನದ ಹರಿಕಾರನಾಗಿ ಚಿತ್ರಿತಗೊಂಡಿದ್ದಾರೆ. ಒಟ್ಟಾರೆ ಗಾಂಧಿ ಈ ನಾಟಕದಲ್ಲಿ ಹೋರಾಟದ ಮನಸ್ಸುಗಳಿಗೆ ಸ್ಫೂರ್ತಿಯಾಗಿ, ಶಕ್ತಿಯಾಗಿ, ಜನಸಾಮಾನ್ಯರ ಸ್ವಾವಲಂಬನೆ ಜೀವನದ ಸೆಲೆಯಾಗಿ ವ್ಯಕ್ತಗೊಂಡಿದ್ದಾರೆ.

ಮೈ.ನಾ. ಶಿವಾನಂದಸ್ವಾಮಿ ಅವರು ಗಾಂಧೀಜಿಯವರನ್ನು ಕುರಿತು 'ರಾಮರಾಜ್ಯದ ಕನಸು' ಎಂಬ ನಾಟಕ ಬರೆದಿದ್ದಾರೆ. ಇದರಲ್ಲಿ ಗಾಂಧೀಜಿಯವರು ಕಂಡ ರಾಮರಾಜ್ಯದ ಕನಸು ಕನಸಾಗಿ ಉಳಿದಿರುವುದನ್ನು ಚಿತ್ರಿಸಿದ್ದಾರೆ. ಗಾಂಧೀಜಿ ಸ್ವರ್ಗಸ್ಥರಾಗಿ ಸ್ವತಂತ್ರ ಭಾರತದ ದಿನಮಾನಸಗಳನ್ನು ಸ್ವರ್ಗದಿಂದಲೇ ಕಾಣಲು ಪ್ರಯತ್ನಿಸುತ್ತಾರೆ. ಭಾರತ ಮಾತೆಯ ಅಪ್ಪಣೆ ಪಡೆದು ಭೂಲೋಕ(ಭಾರತ)ಕ್ಕೆ ಬರುತ್ತಾರೆ. ಸ್ವತಂತ್ರ ಭಾರತದಲ್ಲಿ ಎಲ್ಲಿ ನೋಡಿದರೂ ಕೊಲೆ, ಸುಲಿಗೆ, ಸ್ತ್ರೀ ಶೋಷಣೆ, ವರದಕ್ಷಿಣೆ ಪಿಡುಗು, ಜಾತಿ, ಧರ್ಮದ ಕಲಹ, ದಲಿತರ ಮೇಲಿನ ದಬ್ಬಾಳಿಕೆ ಮತ್ತು ಅರಾಜಕತೆಯನ್ನು ಕಂಡು ಗಾಂಧಿ ಬೇಸತ್ತು ನಿರಾಸೆಯಿಂದ ಪುನಃ ಸ್ವರ್ಗಕ್ಕೆ ತೆರಳುವುದನ್ನು ಈ ನಾಟಕ ವಿವರಿಸುತ್ತದೆ.

ಗಾಂಧಿ ಮತ್ತು ಭಾರತ ಮಾತೆಯ ನಡುವೆ ಸ್ವರ್ಗದಲ್ಲಿ ಹೀಗೆ ಸಂಭಾಷಣೆ ನಡೆಯುತ್ತದೆ.

"ಗಾಂಧಿ : .....ತಾಯೆ, ನಮ್ಮ ಭಾರತದಲ್ಲಿ ಇಷ್ಟೊಂದು ಅತ್ಯಾಚಾರ - ಅನಾಚಾರಗಳು ನಡೆಯುತ್ತಿರುವುವೆ..... ಅಯ್ಯೋ ನಾನೊಬ್ಬ ಹುಚ್ಚ. ನಮ್ಮ ಭಾರತದ ಬಗ್ಗೆ ಎಷ್ಟೊಂದು ಕನಸುಗಳನ್ನು ಕಂಡೆ.... ನನ್ನ ಕನಸೆಲ್ಲಾ ನುಚ್ಚು ನೂರಾಯಿತೆ...., ತಾಯೇ... ಹೇಗಾದರೂ ಮಾಡಿ ನಮ್ಮ ಭಾರತದ ನೊಂದ ಪ್ರಜೆಗಳನ್ನು ಉಳಿಸಬೇಕು... (ಬೇಡಿ ಕೊಳ್ಳುವನು) ಅಮ್ಮ...ಇದೊಂದು ಬಾರಿ ನಿನ್ನ ಮಕ್ಕಳನ್ನು ಕ್ಷಮಿಸಿ... ನನ್ನನ್ನು ಭಾರತದಲ್ಲಿ ಜನ್ಮವೆತ್ತಲು ಅವಕಾಶ ಮಾಡಿಕೊಡು.

ಭಾರತ ಮಾತೆ : ಗಾಂಧಿ ನೀನು ಒಬ್ಬ ಅಮರ, ನೀನು ನಿನ್ನ ಭಾರತಕ್ಕೆ ಹೋದರೆ ನಿನ್ನನ್ನೇ ಕೊಲ್ಲುವರು?.... ಬೇಡ ಗಾಂಧಿ ಈ ಸ್ವರ್ಗದಂತಹ ನನ್ನ ಮಡಿಲಲ್ಲೇ ಇದ್ದು ಬಿಡು.

ಗಾಂಧಿ : ಇಲ್ಲಾ ತಾಯೆ.... ಇಲ್ಲಾ ದಯವಿಟ್ಟು ನನ್ನನ್ನು ಕಳುಹಿಸಿಕೊಡು ತಾಯೆ..."(ಮಹಾದೇವಯ್ಯ.ಟಿ.ಆರ್.(ಸಂ); ೧೯೯೬; ಪು. ೧೧೯-೧೨೦)

ಎಂದು ಬೇಡಿಕೊಳ್ಳುತ್ತಾ ಭಾರತ ಮಾತೆಯ ಅಪ್ಪಣೆ ಪಡೆದು ಭೂಲೋಕಕ್ಕೆ ಗಾಂಧಿ ಬರುತ್ತಾರೆ. ನಾಟಕಕಾರರು ಗಾಂಧಿಯನ್ನು, ಅಮರರನ್ನಾಗಿಸಿ, ಅವರಲ್ಲಿರುವ ನಿಸ್ವಾರ್ಥಕ್ಷಮತೆಯನ್ನು ಎತ್ತಿಹಿಡಿದಿದ್ದಾರೆ.

ಗಾಂಧಿ ಕೆಳವರ್ಗದವರನ್ನು ದಲಿತರನ್ನು ಹೆಚ್ಚು ಪ್ರೀತಿಸುತ್ತಿದ್ದವರು. ಬಡ ದಲಿತನ ಮೇಲೆ ಗೌಡ ದಬ್ಬಾಳಿಕೆ ನಡೆಸುವುದನ್ನು ತಡೆಯುವ ಸನ್ನಿವೇಶದ ಸಂಭಾಷಣೆ ಹೀಗಿದೆ.

"ಗಾಂಧಿ : ನಿಲ್ಲಯ್ಯ ನಿಲ್ಲು, ಬಡ ದಲಿತನೇ ಭಾರತದ ಬೆನ್ನೆಲುಬು. ಅಂಥ ದಲಿತನಿಗೆ ನೀನು ಹೊಡೆಯುವುದು ಸರಿಯಲ್ಲಾ...

ಗೌಡ : ಯಾವನ್ಲಾ ಇವ್ನು ಜೋಗಿ! ನನಗೇ ನೀತಿ ಹೇಳಕ್ಕೆ ಬಂದ್ಬಿಟ್ಟ.

ಗಾಂಧಿ : ನಾನಯ್ಯಾ ಗಾಂಧೀಜಿ. ಬಡವನೇ ಭಾರತದ ಬೆನ್ನುಲುಬು. ದಯವಿಟ್ಟು ಅವನನ್ನು ಶಿಕ್ಷಿಸಬೇಡಯ್ಯ. ಕೈಮುಗಿದು ಕೇಳ್ಕೋಳ್ತೀನಿ.

ಗೌಡ : (ನಕ್ಕು) ಗಾಂಧಿ ಅಂತೆ ಗಾಂಧಿ! ಯಾರಯ್ಯ ಗಾಂಧಿ, ಗಾಂಧಿ! ಗಾಂಧಿ ಸತ್ತೆಷ್ಟೋ ವರ್ಷ ಆಯ್ತು - ಈಗ ಇವನ್ಯೊಬ್ಬ ಬಂದ್ಬಿಟ್ಟ ಗಾಂಧಿ ಅಂತ ಹೇಳ್ಕೊಂಡು (ಕೋಪದಿಂದ) ಲೋ ಕಾಳ, ಚನ್ನ, ತಿಮ್ಮ ... ಬನ್ರೋ ಇಲ್ಲಿ ಗಾಂಧಿಯಂತೆ ಇವ್ನ ಎಳ್ಕೊಂಡೋಗಿ ಚೆನ್ನಾಗಿ ಒದ್ದು ನೀರಿಗೆ ಎಸೆದು ಬನ್ನಿ....

ಕಾಳ : ಆಯ್ತು ಬುದ್ಧಿ(ಎಂದು ಗಾಂಧಿಯನ್ನು ಹೊಡೆದು ದರದರನೆ ಎಳೆದುಕೊಂಡು ಹೋಗುವರು.... ಗೌಡ ಚಾವಟಿಯಿಂದ ದಲಿತನಿಗೆ ಹೊಡೆದು ಹಿಂಸಿಸುವನು!)"(ಅದೇ; ಪು. ೧೨೪).

ದಲಿತನಿಗಾದ ಅನ್ಯಾಯವನ್ನು ತಡೆಯಲು ಹೋದ ಗಾಂಧಿಯೇ ಇಲ್ಲಿ (ಸ್ವತಂತ್ರ ಭಾರತದಲ್ಲಿ) ಶಿಕ್ಷೆಗೆ ಒಳಗಾಗುತ್ತಾರೆ ಮತ್ತು ಸ್ತ್ರೀ ಶೋಷಣೆ ಅಥವಾ ಹೆಣ್ಣಿನ ಮೇಲೆ ವರದಕ್ಷಿಣೆ ಮಾರಕಾಸ್ತ್ರ ಪ್ರಯೋಗಿಸುವಾಗ ಗಾಂಧಿ ಪ್ರವೇಶಿಸಿ ಅದನ್ನು ತಡೆಯಲು ಮುಂದಾಗುತ್ತಾರೆ.

"ಗಾಂಧಿ : ಅಮ್ಮಾ ತಾಯಿ, ನೀನೂ ಒಂದು ಹೆಣ್ಣು. ಇನ್ನೊಂದು ಹೆಣ್ಣನ್ನು ಶೋಷಣೆ ಮಾಡ್ತಿದೀಯಲ್ಲಮ್ಮಾ? ಬೇಡಮ್ಮ ನಿನ್ನ ಸೊಸೆಗೆ ಏನೂ ಮಾಡಬೇಡ. ವರದಕ್ಷಿಣೆ ಆಸೆಯನ್ನು ಬಿಡು. ಸ್ತ್ರೀಹತ್ಯಾ ಮಹಾ ಪಾಪಕರ.

ಅತ್ತೆ : ಯಾರಯ್ಯ ನೀನು, ನೀನು ಸುಮ್ನೆ, ರಸ್ತೆ ನೋಡ್ಕೊಂಡು ಹೊಗ್ದೇನೆ ಇಲ್ಲಿಗೆ ಬಂದು ಬುದ್ಧಿ ಹೇಳ್ಲಿಕ್ಕೆ ಬಂದಿದೀಯಲ್ಲ. ಯಾರಯ್ಯ ನೀನು?

ಗಾಂಧಿ : ನಾನಮ್ಮ, ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧಿ.

ರಾಮು : ಗಾಂಧಿ ಅಂತೆ ಗಾಂಧಿ, ಯಾವೂರು ಗಾಂಧಿನಯ್ಯ ನೀನು ಸ್ವಾತಂತ್ರ್ಯ ತಂದ್ಕೊಟ್ಟಂತೆ! ಸುಮ್ನೆ ಇಲ್ಲಿಂದ ಜಾಗ ಖಾಲಿ ಮಾಡು"(ಅದೇ; ಪು. ೧೨೮)

ಎಂದು ಗಾಂಧಿಯನ್ನು ಹೊಡೆದು ಹೊರಕ್ಕೆ ತಳ್ಳುವರು.

ಇದರಿಂದ ಗಾಂಧಿ ನನ್ನಿಂದ ಒಂದು ಹೆಣ್ಣಿನ ಜೀವ ಉಳಿಸಲು ಆಗಲಿಲ್ಲವೆಂದು ತನ್ನನ್ನು ತಾನೇ ಶಪಿಸಿಕೊಳ್ಳುತ್ತಾರೆ. ಸ್ವತಂತ್ರ ಭಾರತದಲ್ಲಿ ಗಾಂಧಿಯ ಯಾವ ತತ್ವಗಳು ನಿಷ್ಪ್ರಯೋಜಕವೆನಿಸಿ ಅವುಗಳನ್ನು ಅನುಸರಿಸುವುದು ಅಸಾಧ್ಯವೆಂದು ಈ ನಾಟಕ ಧ್ವನಿಸುತ್ತದೆ. ಮಾನವೀಯ ಗುಣಗಳು ನಶಿಸಿ ಹೋಗಿ ಕ್ರೌರ್ಯ, ದಬ್ಬಾಳಿಕೆ, ಅನ್ಯಾಯ, ವಂಚನೆ ಈ ದೇಶದಲ್ಲಿ ತುಂಬಿ ತುಳುಕುತ್ತಿವೆ. ಗಾಂಧಿಯವರ ಸತ್ಯ, ಅಹಿಂಸೆಯಂತಹ ತತ್ವಗಳು ತರಗತಿಯ ಪಠ್ಯಗಳಲ್ಲಿ ಬೋಧಿಸಲು, ಭಾಷಣಗಳಲ್ಲಿ ಮಾತನಾಡಲು ಸೀಮಿತಗೊಂಡಿವೆ. ಗಾಂಧೀಜಿ ಕಂಡ ರಾಮರಾಜ್ಯದ ಕನಸು ಯಾವತ್ತು ನನಸಾಗುವುದಿಲ್ಲ. ಹಾಗಾಗಿ ಗಾಂಧಿ ತತ್ವಗಳು ದೇಶದಲ್ಲಿ ಅಪ್ರಸ್ತುತವೆನಿಸುತ್ತವೆ. ಸ್ವಾತಂತ್ರ ಭಾರತದಲ್ಲಿ ಒಂದು ವೇಳೆ ಗಾಂಧೀಜಿ ಬದುಕಿದ್ದರೆ ಅವರು ಅನುಭವಿಸುವ ಬವಣೆಗಳು ಮತ್ತು ಅವರ ಮಾನಸಿಕ ಹಿಂಸೆ ಎಂಥದು ಎಂಬುದನ್ನು ಈ ನಾಟಕ ತಿಳಿಸುತ್ತದೆ.

ರಾಜಕಾರಣಿಗಳ ಅನ್ಯಾಯ, ದಬ್ಬಾಳಿಕೆಯನ್ನು ಕಂಡ ಗಾಂಧೀಜಿ ಬೇಸರದಿಂದ -

"ಗಾಂಧಿ : ತಾಯೇ! ಭಾರತಮಾತೆ, ಈ ಲೋಕದ ಸಹವಾಸ ಸಾಕು, ದಯವಿಟ್ಟು ನನ್ನನ್ನು ಸ್ವರ್ಗಕ್ಕೆ ಕರೆದುಕೋ..... ತಾಯೆ.

ಭಾರತಮಾತೆ : ಗಾಂಧಿ! ನಾನು ಆ ದಿನವೇ ಹೇಳಿದೆ. ನಿನಗೆ ಮಾನವರ ಸಹವಾಸ ಬೇಡವೆಂದು, ಅಂದಿನ ದಾನವರು, ಇಂದಿನ ಮನುಕುಲದ ರಾಜಕಾರಣಿಗಳು. ಅವರನ್ನು ತಿದ್ದಲು, ನಮ್ಮಿಂದ ಸಾಧ್ಯವಿಲ್ಲಾ"(ಅದೇ; ಪು. ೧೩೬)

ಎಂದು ಈ ಭೂಲೋಕದ ಸಹವಾಸದಿಂದ ಬೇಸತ್ತು ಗಾಂಧಿ ಮುಕ್ತಿಗಾಗಿ ರೋಧಿಸುತ್ತಾರೆ. ಗಾಂಧಿ ದೈವಸಂಭೂತ ಅಂಶಗಳನ್ನು ಮತ್ತು ಗುಣಗಳನ್ನು ಹೊಂದಿದ್ದವರು. ಹಾಗಾಗಿ ಅವರಿಗೆ ಮಾನವರ ಸಹವಾಸ ಕೂಡದು ಎಂದು ಗಾಂಧಿಯನ್ನು ನಾಟಕಕಾರರು ದೈವಸ್ವರೂಪಿಯಾಗಿ ಪ್ರತಿನಿಧಿಸಿದ್ದಾರೆ.

೧೯೪೨ರ ಚಲೇಜಾವ್ ಚಳವಳಿಯಲ್ಲಿ ಶಿವಮೊಗ್ಗ ಜಿಲ್ಲೆಯ ಈಸೂರಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಒಂದು ಪ್ರತಿಭಟನೆಯ ಘಟನೆಯನ್ನು ಕೇಂದ್ರವಾಗಿಟ್ಟುಕೊಂಡು ಕೆ. ವೆಂಕಟರಾಜು ಅವರು 'ತಲೆಬಾಗದ ಜನ' ಎಂಬ ನಾಟಕ ರಚಿಸಿದ್ದಾರೆ. ಈ ನಾಟಕದಲ್ಲಿ ಗಾಂಧೀಜಿ ಒಂದು ಭಾಗವಾಗಿ ಚಿತ್ರಿತಗೊಳ್ಳುತ್ತಾರೆ. ಕರ್ನಾಟಕದ ಒಂದು ಪುಟ್ಟ ಗ್ರಾಮ ಕ್ವಿಟ್ ಇಂಡಿಯಾ ಚಳುವಳಿಗೆ ಸ್ಪಂದಿಸಿದ ಬಗೆ ಈಗಲೂ ಕುತೂಹಲದ ವಿಷಯ. ನಮ್ಮ ದೇಶದಲ್ಲಿ ಇಂತಹ ಸಣ್ಣ ಸಣ್ಣ ಹಳ್ಳಿಗಳ ಎಲೆಮರೆಕಾಯಿಯಂತಿರುವ ಶ್ರೀಸಾಮಾನ್ಯರು ಗಾಂಧೀಜಿಯವರ ನೇತೃತ್ವದ ಚಳವಳಿಗೆ ಸ್ಪಂದಿಸಿದ್ದು, ಅನುಸರಿಸಿದ್ದು ಅನನ್ಯವಾದುದು. ಹಾಗಾಗಿ ಗಾಂಧೀಜಿ ದೇಶದ ಪ್ರತಿಯೊಂದು ಹಳ್ಳಿಗಳ ಜನಸಾಮಾನ್ಯರನ್ನು ಪ್ರಭಾವಿಸಿದ್ದಾರೆ.

ಈಸೂರು ಬ್ರಿಟೀಷರ ಆಡಳಿತವನ್ನು, ದೇಶದ ರಾಜರ ಪ್ರಭುತ್ವವನ್ನು ತಿರಸ್ಕರಿಸಿ ತನ್ನಷ್ಟಕ್ಕೆ ತಾನೇ ಸ್ವತಂತ್ರವೆಂದು ಘೋಷಿಸಿಕೊಂಡು, ಕಂದಾಯ ಕಟ್ಟದೇ ಭೂಮಿಯ ಮೇಲಿನ ತಮ್ಮ ಹಕ್ಕನ್ನು ಚಲಾಯಿಸಿದ ಘಟನೆಯನ್ನು ವಿವರಿಸುತ್ತದೆ. ಈ ಹಳ್ಳಿಯ ಹೋರಾಟಗಾರರು ಗಾಂಧೀಜಿಯ ಪ್ರಭಾವದಿಂದ ಅಸಹಕಾರ ಚಳವಳಿಯ ಮೂಲಕ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆಯಿಂದ ಹೋರಾಟ ನಡೆಸಿ ಗುರಪ್ಪ, ಮಲ್ಲಪ್ಪ, ಸೂರ್ಯನಾರಾಯಣಾಚಾರಿ, ಹಾಲಪ್ಪ ಮತ್ತು ಶಂಕರಪ್ಪನಂಥ ನಾಯಕರು ಗಲ್ಲುಶಿಕ್ಷೆಗೆ ಒಳಗಾಗುವುದನ್ನು ಈ ನಾಟಕ ಚಿತ್ರಿಸುತ್ತದೆ.

ಈಸೂರಿನ ಜನತೆ ಬ್ರಿಟೀಷರ ಆಡಳಿತ ವ್ಯವಸ್ಥೆಯನ್ನು ತಿರಸ್ಕರಿಸಿ ಹೋರಾಟದಲ್ಲಿ ಇಳಿಯುವ ಮುನ್ನ ಗುರಪ್ಪ ಮತ್ತು ಆತನ ಮಿತ್ರರು ನಡೆಸಿದ ಸಂಭಾಷಣೆ -

"ಗುರಪ್ಪ : ಇಡೀ ಶಿವಮೊಗ್ಗಾದಲ್ಲೇ ಇಂತಹ ಚಳವಳಿ ಆಗಿರಬಾರದು. ಅಂಥ ಚಳವಳಿ ಮಾಡಬೇಕು. ಸರಕಾರ ಹೆದರಿ ನಡುಗಿ ಹೋಗಬೇಕು. ಗಾಂಧೀಜಿ ಹೇಳಿದ್ದಾರೆ. ಭಾರತದ ಪ್ರಾಣಗಳೇ ಹಳ್ಳಿಗಳೂಂತ. ಅದಕ್ಕೆ ಹೊಂದಿ ಕೊಂಡಂತೆ ಚಳವಳಿ ಆಗಬೇಕು.

ಎಲ್ಲರೂ : ಹಾಗಾದರೆ ಈಗ ನಾವು ಏನು ಮಾಡಬೇಕು?

ಗುರಪ್ಪ : ನಾವು ಸರಕಾರಕ್ಕೆ ಪ್ರತಿ ಸರಕಾರ ರಚಿಸಬೇಕು. ಈ ಸರಕಾರಿ ಅಮಲ್ದಾರರಿಗೆ ಪ್ರತಿಯಾಗಿ ಜನತೆಯ ಅಮಲ್ದಾರರನ್ನು ನೇಮಕ ಮಾಡಬೇಕು... ಆದರೆ ಇವೆಲ್ಲವೂ ಅಹಿಂಸಾತ್ಮಕವಾಗಿ, ಪ್ರೀತಿಯಿಂದ .... ಆದರೆ ಧೈರ್ಯದಿಂದ ನಡೀಬೇಕು.

ರಾಧಾಕೃಷ್ಣ : ಇದು ತಂತ್ರ ಅಲ್ಲ. ಇದು ನಮ್ಮ ಜೀವ-ಜೀವಾಳದ ಸಿದ್ಧಾಂತ. ಗಾಂಧೀಜಿಯ ಕನಸಿನ ಸಾಕಾರ. ಅಂತಿಮ ಹೋರಾಟದ ಅನಿವಾರ್ಯ ಕರ್ಮ".(ವೆಂಕಟರಾಜು.ಕೆ.; ೨೦೦೦; ಪು. ೫-೬)

ಗಾಂಧೀಜಿ 'ಭಾರತ ಹಳ್ಳಿಗಳಿಂದ ಕೂಡಿದ ರಾಷ್ಟ್ರ. ಹಾಗಾಗಿ ಹಳ್ಳಿಗಳೇ ಭಾರತದ ಪ್ರಾಣ'ವೆಂದಿದ್ದಾರೆ. ಭಾರತದ ಪ್ರಾಣ(ಹಳ್ಳಿಗಳು) ಸದೃಢದಿಂದ ಕೂಡಿದ್ದರೆ ದೇಶ ಸದೃಢ (ಸುರಕ್ಷಿತ)ವಾಗಿರುತ್ತದೆ ಎಂದು ನಂಬಿದ್ದರು. ನಿರಕ್ಷರರಲ್ಲಿರುವ ಪ್ರಾಮಾಣಿಕತೆ, ಮಾನವೀಯತೆಯನ್ನು ಅರಿತ ಗಾಂಧಿ ಮೊದಲು ಹಳ್ಳಿಯ ಜನತೆಯನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸಂಘಟಿಸಿದರು. ಪ್ರತಿಯೊಂದು ಹಳ್ಳಿಯೂ ಬ್ರಿಟೀಷರ ಪ್ರಭುತ್ವವನ್ನು(ಕಂದಾಯ ಕಟ್ಟದೇ) ಆದೇಶಗಳನ್ನು ಪಾಲಿಸದೇ, ನಿರಾಕರಿಸಿ, ಅಸಹಕಾರ ಚಳವಳಿ ಪ್ರಾರಂಭಿಸಿ ಎಂದು ಗಾಂಧೀ ಜನತೆಯನ್ನು ಹೋರಾಟಕ್ಕೆ ಒಂದುಗೂಡಿಸಿದ ಮಹಾಸಂಘಟನಕಾರನಾಗಿ ಚಿತ್ರಿತಗೊಂಡಿದ್ದಾರೆ.

ಈಸೂರಿನ ಹಿರಿಯ ಗಾಂಧಿವಾದಿಯ ಜೊತೆ ಅದೇ ಊರಿನ ಯುವ ಹೋರಾಟಗಾರನಾದ ಗುರಪ್ಪ ಗಾಂಧೀಜಿಯ ಚರಕ ಮಂತ್ರದ ಕುರಿತ ಸಂಭಾಷಣೆ -

"ಗುರಪ್ಪ : ಏನಿಲ್ಲ ಅಜ್ಜಾ, ತಾವು ರಾಟೆನಲ್ಲಿ ನೂಲುತ್ತಿದ್ದರಲ್ಲ ಬಹಳ ಮೋಜೆನಿಸಿತು.

ತಾತ : ಮೋಜೇನ್ಬಂತು ಗುರಣ್ಣಾ, ಆ ಗಾಂಧೀ ಮಹಾತ್ಮನ ದೆಸೆಯಿಂದ ಎಲ್ಲೆಲ್ಲೂ ರಾಟೆ ಆಗಿದೆ. ಮನೆ - ಮನೇಲಿ ಚರಕಾ ನಡೀತಿದೆ. ನಿನಗೆ ಗೊತ್ತದಾ ಏನು? ಮೈಸೂರನ್ಹತ್ರ ಬದನವಾಳು ಇದೆಯಲ್ಲ ಅಲ್ಲಿ ಈ ಚರಕದಿಂದ ೩೦೦೦ ಜನಕ್ಕೆ ಒಪ್ಪೊತ್ತಿನ ಗಂಜೀಗೆ ಗತಿ ಆಗಿದೆ. ಅದಕ್ಕೇ ಗುರಣ್ಣಾ, ಒಂದು ಕಡೆ ಜಿಂದಾಬಾದ್, ಧಿಕ್ಕಾರ ಪ್ರತಿಭಟನೆ ನಡೀತಾ ಇರಬೇಕು. ಅದರ ಹಿಂದೇನೇ ಈ ಚರಕದ ಸಂಗೀತಾನೂ ಇರಬೇಕು. ಇದು ಒಂದು ಥರಾ ದೇವರ ಪೂಜೇ ತರಹಾ ಆಗಿದೆ".(ಅದೇ; ಪು. ೯)

ಸ್ವಾತಂತ್ರ್ಯ ಹೋರಾಟದ ಹಿಂದೆ ಚರಕ ಪ್ರಮುಖ ಪಾತ್ರವಹಿಸಿದೆ. ದೇಶದ ಬಡಜನರು ಸ್ವಾವಲಂಬನೆ ಬದುಕನ್ನು ಕಟ್ಟಿಕೊಳ್ಳಲು ಗಾಂಧೀಜಿ 'ಚರಕ'ದ ಮಂತ್ರವನ್ನು ಬೋಧಿಸಿದರು. ಬಡವರ ಸ್ವಾವಲಂಬಿ ಜೀವನದ ನೇತಾರನನ್ನಾಗಿ, ಬಡವರ ಹಸಿವನ್ನು ನೀಗಿಸಿದ ದೇವರನ್ನಾಗಿ ಗಾಂಧಿಯನ್ನು ಪ್ರತಿನಿಧಿಸಲಾಗಿದೆ. ಒಟ್ಟಾರೆ ದಲಿತ - ಬಂಡಾಯ ಕಾಲಘಟ್ಟದ ನಾಟಕ ಪ್ರಕಾರ ಗಾಂಧಿಯನ್ನು ಅಂಧಕಾರ ವ್ಯವಸ್ಥೆಯನ್ನು ನಿಸ್ವಾರ್ಥ ನಿಲುವಿನಿಂದ ತೊಡೆದು ಹಾಕಲು ಪ್ರಯತ್ನಿಸಿದ ವ್ಯಕ್ತಿತ್ವವಾಗಿ ಮತ್ತು ದೇಶದ ಪ್ರತಿಯೊಂದು ವರ್ಗದ ಜನತೆಯನ್ನು ಪ್ರೀತಿಸಿ, ಬ್ರಿಟೀಷ್ ರಾಕ್ಷಸರಿಂದ ರಕ್ಷಿಸಹೊರಟ ದೈವಸ್ವರೂಪಿಯಾಗಿ ಪ್ರತಿನಿಧಿಸಿದೆ.

ಈ ಕಾಲಘಟ್ಟದಲ್ಲಿ ಗಾಂಧಿಯವರನ್ನು ಕುರಿತು ನಾಟಕಗಳು ಅಧ್ಯಯನದ ವ್ಯಾಪ್ತಿಯ ಆಚೆಗೂ ರಚನೆಗೊಂಡಿವೆ. ಅವುಗಳೆಂದರೆ ಆರ್.ವಿ. ಭಂಡಾರಿ ಅವರ 'ನಾನೂ ಗಾಂಧಿ ಆಗ್ತೇನೆ', ಎ.ಎಸ್. ಮೂರ್ತಿ ಅವರ 'ಆ ಗಾಂಧಿ - ಈ ಗಾಂಧಿ', ನೀನಾ ಮಧ್ಯಸ್ಥ ಅವರ 'ವಂದೇ ಮಾತರಂ', ಉದಯಕುಮಾರ್ ವಿ. ಅವರ 'ಯಮಪಾಶ' ಮತ್ತು 'ಹೋರಾಟದ ಹಾದಿ'ಗಳು ಕಂಡುಬರುತ್ತವೆ.

೬.೪. ಮಹಿಳೆಯರ ನಾಟಕ

ಕನ್ನಡ ಸಾಹಿತ್ಯದಲ್ಲಿ ಕಾವ್ಯ, ಕತೆ, ಕಾದಂಬರಿ ಪ್ರಕಾರಗಳಿಗೆ ಹೋಲಿಸಿದರೆ, ನಾಟಕ ಪ್ರಕಾರ ತುಂಬಾ ಕ್ಷೀಣವಾಗಿರುವುದು ಗೋಚರಿಸುತ್ತದೆ. ಸಂಸ್ಕೃತ - ಇಂಗ್ಲಿಷ್ ನಾಟಕಗಳ ಅನುವಾದವೇ ಕನ್ನಡ ನಾಟಕ ರಚನೆಗೆ ಪ್ರೇರಣೆ ನೀಡಿದೆ. "ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ಮಹಿಳೆಯರು ಬರೆಯತೊಡಗಿದರೂ ಅವರ ಆಸಕ್ತಿ ಕಥಾ ಸಾಹಿತ್ಯದ ಕಡೆಗೆ"(ಆರ್ಯಾಂಬಪಟ್ಟಾಬಿ ಮತ್ತು ಇತರರು(ಸಂ); ೨೦೦೪; ಪು. ೨೨೧) ಎಂಬ ಪ್ರೊ. ಎಚ್.ಜೆ. ಸರಸ್ವತಿ ಅವರ ಮಾತು ಸತ್ಯವೆನಿಸುತ್ತದೆ. "ಸ್ವಾತಂತ್ರ್ಯೋತ್ತರ ಭಾರತದಲ್ಲಿ ಲಭ್ಯವಾದ ವಿದ್ಯಾಭ್ಯಾಸದ ಕಾರಣದಿಂದ ಬಹುಮಟ್ಟಿನ ನಗರದ ವಿದ್ಯಾವಂತ ಮಧ್ಯಮವರ್ಗದ ಮಹಿಳೆಯರು ಬರಹಕ್ಕೆ ತೊಡಗಿಸಿಕೊಂಡರೂ ಅವರು ಮುಂದುವರಿಸಿದ್ದು ಕಥನ ಪರಂಪರೆಯನ್ನು ನಾಟಕ ನೋಡುವುದಕ್ಕೆ ಬಹಳ ಕಾಲದವರೆಗೆ

ನಿಷೇಧವಿದ್ದುದರಿಂದ ನಾಟಕ ರಚನೆಗೆ ಆಸಕ್ತಿ ತೋರುವುದು ಕಠಿಣವೇ"(ಅದೇ; ಪು. ೨೨೧) ಎಂಬ ಮಾತನ್ನು ಪ್ರೊ. ಎಚ್.ಜೆ. ಸರಸ್ವತಿ ಅವರೇ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಕಾರಣ ನಮ್ಮ ಸಾಮಾಜಿಕ ವ್ಯವಸ್ಥೆಯ ನಾಟಕದ ಬಗ್ಗೆ ನಮ್ಮ ಸಮಾಜದಲ್ಲಿ ಮೊದಲಿನಿಂದಲೂ ಕೀಳು ಭಾವನೆ ಬೆಳೆದುಬಂದಿದೆ. ಒಬ್ಬ ಹೆಣ್ಣು ನಾಟಕದಲ್ಲಿ ಅಭಿನಯಿಸುವುದಿರಲಿ, ನಾಟಕ ನೋಡುವುದೂ ಅಪರಾಧವಾಗಿತ್ತು. ಇವತ್ತಿಗೂ ಮಹಿಳೆಯರಲ್ಲಿ ನಾಟಕದ ಅಭಿರುಚಿ ಅಷ್ಟಕಷ್ಟೇ ಎಂದು ಹೇಳಬಹುದು. ವಸಾಹತೋತ್ತರ ಭಾರತದಲ್ಲಿ ದಲಿತರು, ಹಿಂದುಳಿದವರು, ಮಹಿಳೆಯರು, ದನಿ ಎತ್ತುವ ಚಾರಿತ್ರಿಕ ಪರಿಸರ ನಿರ್ಮಾಣಗೊಂಡಿತ್ತೆನ್ನುವುದು ನಿಜ. ನಾಟಕ ಕ್ಷೇತ್ರ ಈ ಅಭಿವ್ಯಕ್ತಿಗೆ ಪ್ರಭಾವಶಾಲಿ ಮಾಧ್ಯಮವಾಗಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಈ ಕ್ಷೇತ್ರಕ್ಕೆ ಕಾಲಿಡದಿರುವುದು ಸಹಜ ಸಂಗತಿ ಎನ್ನಿಸುತ್ತದೆ.

ಡಾ. ಅನುಪಮ ನಿರಂಜನ, ಬಿ. ಕಾಮಾಕ್ಷಮ್ಮ, ಗೀತ ಕುಲಕರ್ಣಿ, ಜಗ್ಗು ಪ್ರಿಯದರ್ಶಿನಿ, ಜಯಲಕ್ಷ್ಮಿದೇವಿ, ಭಾರತಿ ಮಲ್ಲಿಕಾ, ಮಾತಂಗಿ, ಬಿ.ಟಿ. ಲಲಿತಾನಾಯಕ, ಲೀಲಾವತಿ ಆರ್. ಪ್ರಸಾದ್, ವಸಂತಿ ಚಂದ್ರಶೇಖರ, ಸರೋಜರಾವ್ ಕಾಕೋಳು, ಕಮಲ ಹಂಪನಾ ಮೊದಲಾದ ಹಿರಿಯ ಕತೆಗಾರ್ತಿಯರು ಕಥೆ, ಕಾದಂಬರಿಗಳೊಂದಿಗೆ ಪ್ರಯೋಗಶೀಲತೆಗೆ ಎಂಬಂತೆ ಒಂದೆರಡು ನಾಟಕಗಳನ್ನು ರಚಿಸಿದ್ದಾರೆ. ಇವರ ನಂತರದ ತಲೆಮಾರಿನ ವೈದೇಹಿ, ವಿಜಯಾ ಎಸ್. ಸಂಧ್ಯಾ, ಗೀತಾ ರಾಮಾನುಜಂ, ನುಗ್ಗೆಹಳ್ಳಿ ಪಂಕಜ, ಪ್ರತಿಮಾ ಮಿತ್ರ, ಮನೋರಮ ಭಟ್, ಪ್ರೇಮಾ ಕಾರಂತ, ಯಮುನಾಮೂರ್ತಿ, ಎಸ್. ಮಾಲತಿ, ಮೀರಾಮೂರ್ತಿ ಮೊದಲಾದವರು ನಾಟಕ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದ್ದಾರೆ.

ಮಹಿಳೆಯರು ರಚಿಸಿರುವ ನಾಟಕಗಳು ವಸ್ತುವಿನಲ್ಲಿ ವೈವಿಧ್ಯತೆ ಇದೆ. ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ಬರೆದಿದ್ದಾರೆ. ರೇಡಿಯೋ ನಾಟಕ, ಬೀದಿ ನಾಟಕಗಳನ್ನು ರಚಿಸಿದ್ದಾರೆ. ಇಂಗ್ಲಿಷ್ ಹಾಗೂ ಇತರ ಭಾರತೀಯ ಭಾಷೆಗಳ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಜಾನಪದ ಕಥೆಗಳನ್ನು, ಕಥೆ - ಕಾದಂಬರಿಗಳನ್ನು ಆಧರಿಸಿ ನಾಟಕಗಳಾಗಿ ರೂಪಾಂತರಿಸಿದ್ದಾರೆ. ಮಹಾತ್ಮ ಗಾಂಧೀಜಿಯವರನ್ನು ಕುರಿತು ಮಹಿಳೆಯರು ನಾಟಕ ರಚಿಸಿದ್ದು ತುಂಬಾ ಕಡಿಮೆ. ಪ್ರತಿಮಾ ಮಿತ್ರ ಅವರ "ನಾನೇಕೆ ಮಹಾತ್ಮನಲ್ಲ" ಎಂಬ ನಾಟಕವೊಂದು ದೊರಕುತ್ತದೆ. ಮಹಿಳೆಯರ ಬಹುಮಟ್ಟಿನ ನಾಟಕಗಳು ಸ್ತ್ರೀ ಸಂವೇದನೆಯನ್ನು ಪ್ರತಿನಿಧಿಸುವಂಥವು. ಎಪ್ಪತ್ತರ ದಶಕದ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಕಾವ್ಯ, ಕಥಾ ಸಾಹಿತ್ಯದಲ್ಲಿ ಮಹಿಳೆಯರು ಸ್ತ್ರೀಪರವಾದ ಗಟ್ಟಿದನಿಯನ್ನು ವ್ಯಕ್ತಪಡಿಸಿದ್ದರು. ಆದರೆ ಈ ಅಧ್ಯಯನದಲ್ಲಿ ಸ್ತ್ರೀಪರ ಅಥವಾ ಸ್ತ್ರೀ ಸಂವೇದನೆಯನ್ನು ಆಳವಾಗಿ ಪರಿಗಣಿಸದೆ ಸಾರ್ವತ್ರಿಕವಾಗಿ ಮಹಿಳೆ ಗಾಂಧೀಜಿಯನ್ನು ಸ್ವೀಕರಿಸಿದ ಅಥವಾ ಅರ್ಥೈಸಿಕೊಂಡ ಬಗೆಯನ್ನು ಸೀಮಿತವಾಗಿ ವಿವರಿಸಲಾಗಿದೆ.

ಶ್ರೀಮತಿ ಪ್ರತಿಮಾ ಮಿತ್ರರವರು ರಚಿಸಿದ 'ನಾನೇಕೆ ಮಹಾತ್ಮನಲ್ಲ' ನಾಟಕವು ಗಾಂಧಿ ತತ್ವಗಳನ್ನು ಆಧರಿಸಿದೆ. ಈ ನಾಟಕವು ಶೈಕ್ಷಣಿಕ, ಸಾಮಾಜಿಕ, ಹಾಸ್ಯಪೂರ್ಣ ಹಾಗೂ

ಸೃಜನಶೀಲತೆಯಿಂದ ಕೂಡಿದೆ. "ಪ್ರತಿಮಾ ಮಿತ್ರ ಅವರ 'ನಾನೇಕೆ ಮಹಾತ್ಮನಲ್ಲ' ನಾಟಕದಲ್ಲಿ ಗಾಂಧೀಜಿಯವರ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು ಎಂಬ ನಿಲುವು ಕಂಡು ಬರುತ್ತದೆ" (ಅದೇ; ಪು. ೨೩೯) ಎಂದು ಡಾ. ಹೇಮಾ ಪಟ್ಟಣಶೆಟ್ಟಿ ಅವರು ಅಭಿಪ್ರಾಯಿಸಿದಂತೆ ಈ ನಾಟಕದಲ್ಲಿ ಗಾಂಧೀಜಿಯವರ ತತ್ವಚಿಂತನೆಗಳನ್ನು ಅಳವಡಿಸಿಕೊಂಡು ಹೆಜ್ಜೆ ಇಟ್ಟರೆ ಸೂಕ್ತವೆಂಬ ಚಿತ್ರಣ ಕಂಡುಬರುತ್ತದೆ. "ಈ ನಾಟಕವು ಸ್ವಾತಂತ್ರ್ಯಪೂರ್ವದ್ದಾದರೂ ಈ ಕಾಲಕ್ಕೂ ಪ್ರದರ್ಶಿಸಬಹುದಾದ ಹಾಸ್ಯ ನಾಟಕವಾಗಿದೆ"(ಪ್ರತಿಮಾ ಮಿತ್ರ; ೨೦೦೧; ಪು. ಮುನ್ನುಡಿ) ಎಂದು ಗೊ.ರು. ಚನ್ನಬಸಪ್ಪ ಅವರು ನಾಟಕದ ಮುನ್ನುಡಿಯಲ್ಲಿ ವ್ಯಕ್ತಪಡಿಸಿದ್ದಾರೆ. ಈ ನಾಟಕ ಬ್ರಿಟಿಷರ ಹಿಂಸಾಚಾರ, ದೇಶೀಯರ ಸಹನೆ, ಸ್ವಾತಂತ್ರ್ಯ ಚಳವಳಿ, ಮಹಾತ್ಮ ಗಾಂಧೀಜಿಯವರ ತತ್ವಗಳ ಪ್ರತಿಪಾದನೆಗಳನ್ನು ಚಿತ್ರಿಸುತ್ತದೆ.

ದೇಶಭಕ್ತನಾದ ಸೋಮು ಬ್ರಿಟಿಷರು ದಬ್ಬಾಳಿಕೆಯಿಂದ ದೇಶದ ಸಂಪತ್ತನ್ನು ಕೂಡಿಟ್ಟದ್ದನ್ನು ಕೊಳ್ಳೆ ಹೊಡೆದು ರುದ್ರಭೂಮಿಯಲ್ಲಿ ಸಂಗ್ರಹಿಸಿಡುತ್ತಾನೆ. ಬ್ರಿಟಿಷರ ಗುಲಾಮಗಿರಿಯಲ್ಲಿ ನೊಂದು ಬೆಂದು ತೀರಿಹೋದ ಎರಡು ಶವಗಳು ಪ್ರೇತಗಳಾಗಿ ತಿರುಗಾಡುತ್ತಿರುತ್ತವೆ. ಆ ಪ್ರೇತಗಳು ಭಾರತ ದೇಶದ ಸ್ವಾತಂತ್ರ್ಯ ಚಳವಳಿಯ ವಿಷಯವನ್ನು ಸಂವಹನ ಮಾಡುತ್ತವೆ. ಪ್ರೇತಗಳಿಗೆ ಮಾನವ ಜನ್ಮ ಪ್ರಾಪ್ತವಾಗುವ ವೇಳೆ ಮೂರ್ಛೆ ಬೀಳುತ್ತವೆ. ಆಗ ಸೋಮು ಹಾಗಾದರೆ ನನಗೆ ದಾರಿ ತೋರುವವರು ಯಾರು? ಮುಂದೆ ನನ್ನ ಹೋರಾಟದ ಗತಿಯೇನು? ಎಂದು ಪ್ರಲಾಪಿಸುವಾಗ ಮಲಗಿಕೊಂಡ ಪ್ರೇತಗಳು - "ನಿನ್ನ ದಾರಿ ತೋರುವವನು! ಹುಟ್ಟಿದ್ದಾನೆ. "ಮಹಾ-ಆತ್ಮ-ದ" ಮೋಹನದಾಸ ಕರಮಚಂದ ಗಾಂಧಿ. "ಮಹಾತ್ಮ ಗಾಂಧಿ". ಆತನು ದೈವ ಅಂಶ ಪುರುಷ. ಅಹಿಂಸೋ ಪರಮೋ ಧರ್ಮಃ, ಮಾರ್ಗದಲ್ಲಿ ಹರಿಜನರನ್ನು ಎತ್ತಿ ಹಿಡಿಯುವನು"(ಅದೇ; ಪು. ೭) ಎಂದು ಪ್ರತಿಮಾ ಮಿತ್ರ ಅವರು ಇಲ್ಲಿ ಗಾಂಧಿಯನ್ನು ಒಬ್ಬ ಮಹಾತ್ಮನಾಗಿ, ಅಹಿಂಸೋ ಪರಮೋ ಧರ್ಮಃ. ಪರಿಪಾಲಕನಾಗಿ, ಹರಿಜನರ ಸ್ಥಿತಿಗತಿಯನ್ನು ಕಾಪಾಡುವ ದೈವಸಂಭೂತನಾಗಿ ಚಿತ್ರಿಸಿದ್ದಾರೆ.

ಗಾಂಧೀಜಿಯ ಉಪದೇಶ ಎಂಬ ದೃಶ್ಯ ಮೂರರಲ್ಲಿ 'ಒಬ್ಬ'ನೆಂಬ ಪಾತ್ರಧಾರಿ ಗಾಂಧಿಗೆ ಪ್ರಶ್ನಿಸುತ್ತಾನೆ. "ಬಾಪೂಜಿ, ನಾವು ಇದುವರೆಗೂ ಯಾವ ಸುಳ್ಳನ್ನೂ ಹೇಳಿಲ್ಲವಲ್ಲ! ಆದರೂ ನಾವು ಗುಲಾಮಗಿರಿಯಿಂದ ಜೀವಿಸುತ್ತಿದ್ದೇವೆ, ಇದಕ್ಕೆ ಪರಿಹಾರವೇ ಇಲ್ಲವೇ? ಬಾಪೂಜಿ- ಸತ್ಯಕ್ಕೆ ಎಂದೆಂದೂ ಜಯ, ಸತ್ಯ ಅಂದರೆ ನಮ್ಮ ಅಂತಃಸಾಕ್ಷಿ ಅಂತರಂಗದ ನುಡಿ ಸತ್ಯದ ಮುಂದೆ ನಾವು ಶೂನ್ಯರಾಗಬೇಕು. ಆಗಲೇ ಅದರ ಸಾಕ್ಷಾತ್ಕಾರ, ಸತ್ಯವೇ ದೇವರು"(ಅದೇ; ಪು. ೧೧- ೧೨) ಎಂದು ಉಪದೇಶಿಸಿ ಗಾಂಧಿ ಸತ್ಯದ ಆರಾಧಕನಾಗಿ ಚಿತ್ರಿತಗೊಳ್ಳುತ್ತಾರೆ. ಗಾಂಧಿ ಸತ್ಯವನ್ನು ದೇವರಾಗಿ ಕಾಣುತ್ತಾರೆ. ಗಾಂಧಿ ಇಡೀ ಲೋಕವನ್ನೇ ಪ್ರಭಾವಿಸಿದ್ದಾರೆ. "ಅವರ ನವಭಾರತ Young India ಓದಿದರೆ ಸಾಕು ಶಾಂತಚಿತ್ತರಾಗಿ ಭಗವಂತನ ಧ್ಯಾನದಲ್ಲಿ ಒಂದು ನಿಮಿಷ ಇದ್ದರೂ ಸಾಕು. ಓದಿದ್ದೆಲ್ಲ ತಲೆಯಲ್ಲಿ ಉಳಿಯುತ್ತೆ. ನಂತರ ಎನ್ನಬಹುದು ದೇಶ ಸೇವೆಯೇ

ಈಶ ಸೇವೆ. ಆರೋಗ್ಯವೇ ಭಾಗ್ಯ. ತಾಳಿದವನು ಬಾಳಿಯಾನು. ಶಾಂತಂ ಪಾಪಂ. ದಯೇಯೇ ಧರ್ಮದ ಮೂಲ. ದುರಾಸೆ ದುಃಖಕ್ಕೆ ಕಾರಣ. ದುಷ್ಟರನ್ನು ಕಂಡಾಗ ದೂರ ಸರಿ. ಕಾಯಕವೇ ಕೈಲಾಸ. ಬಡವನ ಕೋಪ ದವಡೆಗೆ ಮೂಲ. "ಅಹಿಂಸೋ ಪರಮೋ ಧರ್ಮ", ಸತ್ಯಮೇವ ಜಯತೆ"(ಅದೇ; ಪು. ೫೧-೫೨) ಎನ್ನುವ ತತ್ವಗಳನ್ನು ಬೋಧಿಸುತ್ತದೆ ಮತ್ತು ಸನ್ಮಾರ್ಗಗಳಲ್ಲಿ ನಡೆಸುತ್ತವೆ. ಹೀಗಾಗಿ ಗಾಂಧಿಯನ್ನು, ಲೋಕವನ್ನು ತಿದ್ದುವಂಥ ತತ್ವಜ್ಞಾನಿ, ಅಂಧಕಾರಗಳನ್ನು ತೊಡೆದು ಹಾಕುವ ವೈಚಾರಿಕರಾಗಿ ಮತ್ತು ಒಬ್ಬ ಆದರ್ಶ ಪುರುಷರನ್ನಾಗಿ ಪ್ರತಿನಿಧಿಸಿದ್ದಾರೆ. ಪ್ರತಿಮಾ ಮಿತ್ರ ಅವರು ಗಾಂಧೀಜಿಯನ್ನು ಆದರ್ಶೀಯ ಭಾಗವಾಗಿ ಇಲ್ಲಿ ಅರ್ಥೈಸಿದ್ದಾರೆ. ಗಾಂಧಿಯಂತೆ ಜೀವಿಸುವುದು ತುಂಬಾ ಕಷ್ಟ. ಮಹಾತ್ಮನಾಗುವುದು ಎಲ್ಲರಿಗೂ ಸಾಧ್ಯವಿಲ್ಲ. ಹಾಗಾಗಿ ಗಾಂಧಿಯೇ ಸರಿಸಾಟಿ. ಒಟ್ಟಾರೆ ಮಹಿಳೆಯರು ಗಾಂಧಿಯನ್ನು ಆದರ್ಶೀಯವಾಗಿ ಆನ್ವಯಿಕ ನೆಲೆಯಲ್ಲಿ ಅರ್ಥೈಸಿಕೊಂಡಿದ್ದಾರೆ.

ನಾಟಕ ಪ್ರಕಾರ ಮಾತ್ರ ಗಾಂಧೀಜಿಯವರನ್ನು ನೇರವಾಗಿ ಪಾತ್ರವಾಗಿಸಿ ಚಿತ್ರಿಸುತ್ತದೆ. ಪ್ರದರ್ಶನ ಮಾಧ್ಯಮವಾದ ಈ ನಾಟಕ ಪ್ರಕಾರ ಗಾಂಧೀಜಿಯವರನ್ನು ಮತ್ತು ಅವರ ತತ್ತ್ವಾದರ್ಶಗಳನ್ನು ಅನಕ್ಷರಸ್ಥರಿಗೂ ತಿಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಈ ಪ್ರಕಾರದಿಂದ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಜನಸಾಮಾನ್ಯರನ್ನು ಸ್ವಾತಂತ್ರ್ಯ ಚಳುವಳಿಗೆ ಅಣಿಗೊಳಿಸಿದೆ. ಹಾಗಾಗಿ ಈ ನಾಟಕ ಪ್ರಕಾರ ಇತರ ಕಥೆ, ಕಾದಂಬರಿ, ಕಾವ್ಯ ಪ್ರಕಾರಗಳಿಗಿಂತಲೂ ಪ್ರಭಾವಶಾಲಿಯಾಗಿದೆ.

❖❖❖

ಅಧ್ಯಾಯ : ಏಳು

ಕನ್ನಡದಲ್ಲಿ ಗಾಂಧೀಜಿಯ ಕುರಿತ ಇತರ ಸಾಹಿತ್ಯ

೭.೧. ಪ್ರಬಂಧ/ಲೇಖನ

೭.೨. ಜೀವನಚರಿತ್ರೆ

೭.೩. ಶಿಶುಸಾಹಿತ್ಯ

೭.೪. ಅನುವಾದ ಕೃತಿ

ಅಧ್ಯಾಯ : ಏಳು

ಕನ್ನಡದಲ್ಲಿ ಗಾಂಧೀಜಿಯ ಕುರಿತ ಇತರ ಸಾಹಿತ್ಯ

ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕಥೆ, ಕಾವ್ಯ, ಕಾದಂಬರಿಗಳಂತೆ ಕನ್ನಡದಲ್ಲಿ ಗಾಂಧೀಜಿಯವರನ್ನು ಕುರಿತಂತೆ ಇತರ ಬರಹಗಳು, ಪ್ರಬಂಧಗಳು, ಜೀವನ ಚರಿತ್ರೆಗಳು, ವ್ಯಾಖ್ಯಾನಗಳು, ಲೇಖನಗಳು ಮತ್ತು ಶಿಶುಸಾಹಿತ್ಯ ಮುಂತಾದವುಗಳು ಕಾಣಬರುತ್ತವೆ.

೭.೧. ಪ್ರಬಂಧ/ಲೇಖನ

ಪ್ರಬಂಧಗಳು ವೈಯಕ್ತಿಕ ಹಾಗೂ ವಿವರಣಾತ್ಮಕ ಸ್ವರೂಪದ್ದಾಗಿವೆ. ಗಾಂಧೀಜಿಯವರ ಕೊಲೆಯಿಂದ ಸ್ಫೂರ್ತಿಗೊಂಡ ಪ್ರಬಂಧಗಳು ಕನ್ನಡ ಸಾಹಿತ್ಯದಲ್ಲಿ ಕಾಣಸಿಗುತ್ತವೆ. ೩೧-೨-೧೯೪೮ರಂದು ಮೈಸೂರು ಆಕಾಶವಾಣಿಯಿಂದ ಪ್ರಸಾರವಾದ ಕುವೆಂಪು ಅವರ "ದಿವಂಗತ ರಾಷ್ಟ್ರಪಿತ" ಎಂಬ ಭಾಷಣದ ಒಂದು ಭಾಗವನ್ನು ನೋಡುವುದಾದರೆ: "ಎಷ್ಟು ಅನೀರಿಕ್ಷಿತ, ಎಷ್ಟು ಆಕಸ್ಮಿಕ, ಎಷ್ಟು ಭಯಂಕರವಾಗಿತ್ತು ನಿನ್ನೆ ಆ ಘೋರ ವಾರ್ತೆ..... ಆ ವಾರ್ತೆ ಕಿವಿಗೆ ಬಿದ್ದಾಗ ಜನ ನಕ್ಕು ಬಿಟ್ಟರು. ಅದನ್ನು ತಿಳಿಸಿದವರಿಗೆ ಛೀ ಮಾಡಿದರು. ಸತ್ತರೆಂದು ನಂಬುವುದಾದರೂ ಎಂತು? ಗುಂಡು ಬಿದ್ದು ಸತ್ತರೆಂದಾಗಲೂ ಯಾರೂ ನಂಬದೇ ಹೋದರು. ಏನು? ಗಾಂಧೀಜಿಗೆ? ಗುಂಡಿನೇಟು? ಅಸಾಧ್ಯ! ಅಸಂಭವ! ಅವಿವೇಕ! ಸುಳ್ಳು! ಖಂಡಿತ ಸುಳ್ಳು! ಆಕಾಶವಾಣಿ ಶೋಕವಾರ್ತೆಯನ್ನು ಮತ್ತೆ ಮತ್ತೆ ಒತ್ತಿಯೊತ್ತಿ ಹೇಳಿದಾಗ ನಂಬಲೇಬೇಕಾಗಿ ಬಂತು. ಆಗಂತೂ ಜನರಲ್ಲುಂಟಾದ ಕಳವಳ, ಭೀತಿ, ನಿರಾಶೆ, ಸಂಕಟ ಇವುಗಳನ್ನು ಹೇಳತೀರದು. ಬದುಕಿನ ಅರ್ಥವೆ ಇದ್ದಕ್ಕಿದ್ದಂತೆ ಶೂನ್ಯವಾದಂತಾಯಿತು, ಜೀವನದ ಪ್ರಯೋಜನವೆ ಕೊನೆಮುಟ್ಟಿದಂತೆ ತೋರಿತು. ಗಾಂಧಿ ಇಲ್ಲದ ಜಗತ್ತು ಜಗತ್ತೆ?... ನಿನ್ನೆ ಸರ್ವದೇಶಗಳನ್ನೂ ನಗುವಂತೆ ಶ್ರೀಮಂತರಾಗಿದ್ದವರು ಇಂದು ಎಲ್ಲ ನಾಡುಗಳೂ ನಗುವಂತೆ ದಟ್ಟದರಿದ್ರರಾಗಿದ್ದೇವೆ..." (ಹಾ.ಮಾ.ನಾಯಕ (ಸಂ); ೧೯೭೧; ಪು. ೧೪೫-೧೪೬) ಎಂದು ಕುವೆಂಪು ಅವರು ಗಾಂಧಿ ಇಲ್ಲದ ಜೀವನ ಅಥವಾ ಜಗತ್ತು ಶೂನ್ಯವಾದಂತೆ ಎಂದು ಹೇಳಿದ್ದಾರೆ. ಕುವೆಂಪುರವರೆ 'ಬಾಪೂಜಿಗೆ ಭಾಷ್ಪಾಂಜಲಿ' ಎಂಬ ಮತ್ತೊಂದು ಭಾಷಣದಲ್ಲಿ ಹೀಗೆ ನುಡಿದಿದ್ದಾರೆ:

"ಮಹಾತ್ಮಾಜಿಯ ಮರಣವನ್ನು ದುರ್ಮರಣವೆಂದು ಕರೆಯುವುದು ಅಜ್ಞಾನದ ಮಾತು. ಲೋಕದಲ್ಲಿ ಅಂತಹ ಸಾವಿನ ಸುಕೃತ ಲಭಿಸುವುದು ಭಗವತ್‌ಕೃಪೆಯಿಂದ ಎಲ್ಲಿಯೋ ಒಬ್ಬೊಬ್ಬರಿಗೆ

ಮಾತ್ರ. ಅವರು ರೋಗಗ್ರಸ್ತರಾಗಿ ಸತ್ತವರಲ್ಲ; ಲೋಭ ವಿಷಯಾಸಕ್ತರಾಗಿರುವಾಗ ಹೃದಯಸ್ತಂಭನದಿಂದ ಸಾಯಲಿಲ್ಲ. ಸಂಕುಚಿತ ಭಾವ ಪ್ರೇರಿತವಾದ ಪಕ್ಷವಿಪಕ್ಷಗಳ ಕ್ಷುದ್ರವಾದ ಹೋರಾಟದಲ್ಲಿ ಸಿಕ್ಕಿ ಪ್ರಾಣತ್ಯಾಗ ಮಾಡಿದವರಲ್ಲ..... ಲೋಕ ಸೇವೆಯಲ್ಲಿ ತೊಡಗಿರುವಾಗ, ಪ್ರಾರ್ಥನಾ ಸಭೆಗೆ ಹೋಗುತ್ತಿರುವಾಗ, ಸಮಸ್ತ ಪ್ರಜ್ಞೆಯೂ ಮಾನವ ಕಲ್ಯಾಣಕ್ಕಾಗಿ ಭಗವನ್ಮುಖವಾಗುತ್ತಿರುವಾಗ... ತಮ್ಮ ಬಾಳುವೆಯನ್ನು ದಿವ್ಯಾಗ್ನಿಗೆ ಬೇಳುವೆಯಾಗಿ ನೀಡಿದರು" (ಶಿವಾರೆಡ್ಡಿ.ಕೆ.ಸಿ. (ಸಂ); ೨೦೦೩; ಪು. ૩೩೨) ಎಂದು ಸಾಂತ್ವನದ ನುಡಿಗಳನ್ನು ಆಡಿದ್ದಾರೆ. ಕುವೆಂಪು ಅವರು 'ಪೂರ್ಣದೃಷ್ಟಿಗೆ ಗಾಂಧೀಜಿ' ಎಂಬ ಪ್ರಬಂಧದಲ್ಲಿ ಗಾಂಧೀಜಿ ಬಿಟ್ಟುಹೋದ ನಮ್ಮ ಈ ಪ್ರಪಂಚ ಅವರು ಇಲ್ಲಿಗೆ ಬರುವಾಗ ಇದ್ದ ಸ್ಥಿತಿಗಿಂತಲೂ ಈಗ ಹೆಚ್ಚು ಶ್ರೀಮಂತವಾಗಿದೆ; ಆಧ್ಯಾತ್ಮಿಕ ಪುನಶ್ಚೇತನದ ದೃಷ್ಟಿಯಿಂದ ದೈವವೇ ನಿಯೋಜಿಸಿದ ಯೋಜನೆಯೊಂದನ್ನು ಈಡೇರಿಸಲು ಅವತರಿಸಿದ ಗಾಂಧೀಜಿಯವರು ರಾಮಕೃಷ್ಣ, ವಿವೇಕಾನಂದ ಮತ್ತು ಟಾಗೂರರ ಶ್ರೇಣಿಯಲ್ಲಿ ಕಾಣಿಸಿಕೊಳ್ಳುತ್ತಾರೆ ಎಂದು ವ್ಯಕ್ತಪಡಿಸಿದ್ದಾರೆ.

ಮಾಸ್ತಿ ವೆಂಕಟೇಶ ಅಯ್ಯಂಗಾರರು ಗಾಂಧೀಜಿ ಭಾರತೀಯ ರಂಗದಿಂದ ನಿರ್ಗಮಿಸಿದ್ದನ್ನು ದೈವನಿಯಾಮಕವೆಂಬುದಾಗಿ 'ಮಹಾತ್ಮರ ದೇಹ ಮುಕ್ತಿ' ಎಂಬ ಲೇಖನದಲ್ಲಿ ವಿವರಿಸಿದ್ದಾರೆ. ಈ ಲೇಖನವನ್ನು ೧೯೪೮ರ ಫೆಬ್ರವರಿಯಲ್ಲಿ ತಮ್ಮ 'ಜೀವನ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

"ಮಹಾತ್ಮರು ದೇವರೆಂಬ ತತ್ತ್ವವನ್ನು ನಂಬಿದ್ದರು. 'ತೇನ ವಿನಾತೃಣ ಮಪಿ ನ ಚಲತಿ' ಎಂಬ ಉಪನಿಷತ್‌ನ ವಾಕ್ಯವನ್ನು ಮತ್ತೆ ಮತ್ತೆ ಉಸುರುತ್ತಿದ್ದರು. ತಮ್ಮ ಜೀವನದ, ಸಾವಿನ, ಮಾತಿಗೆ ಎಷ್ಟೋ ಸಲ ತಮ್ಮ ಉಸಿರು ದೇವರ ಮಡಿಲಲ್ಲಿದೆ ಎನ್ನುತ್ತಿದ್ದರು... ದೇಹದಲ್ಲಿ ಇದ್ದಂದು ದೇಹಕ್ಕಿಂತ ಹೆಚ್ಚಾಗಿ ಆತ್ಮವಾಗಿದ್ದು ದೇಹದಿಂದ ಈಗ ಮುಕ್ತರಾಗಿರುವ ಮಹಾತ್ಮರ ನೆನಪು, ಅವರ ಮಾತೃಭೂಮಿ ಈ ಶುಭವನ್ನು ಕಾಣುವ ಸಾಧನವಾಗಿ ಸಾವಿರ ಸಾವಿರ ಕಾಲಕ್ಕೂ ಬೆಳಗಿ ನಿಂತಿರಲಿ"(ಹಾ.ಮಾ.ನಾಯಕ (ಸಂ); ೧೯೭೧; ಪು. ೧೪೭) ಎಂದು ಮಾಸ್ತಿಯವರು ತೀವ್ರ ಭಾವೋದ್ವೇಗದ ಉದ್ಗಾರಗಳನ್ನು ವ್ಯಕ್ತಗೊಳಿಸಿದ್ದಾರೆ.

ತೀ.ನಂ.ಶ್ರೀಕಂಠಯ್ಯನವರು 'ನಂದಾದೀಪ'ದಲ್ಲಿ "ಗಾಂಧೀಜಿ ಕೊಲೆಗಾರನ ಕೈಯಲ್ಲಿ ಮಡಿಯುವುದಕ್ಕಿಂತ, ಕೆಲವು ದಿನಗಳ ಮುಂಚೆ ಹಿಡಿದಿದ್ದ ಉಪವಾಸ ವ್ರತದಲ್ಲೇ ದೇಹವನ್ನು ತೊರೆದಿದ್ದರೆ ಉತ್ತಮವಾಗುತ್ತಿತ್ತೋ ಏನೋ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಗಾಂಧೀಜಿಯ ಜೀವನಕ್ಕೆ ಈ ಕೊಲೆಯ ಕೊನೆಯೇ ಅಂತ್ಯವಾದರೂ ಭೀಕರವಾದರೂ ಸಹಜ ಶಿಖರವೆಂದು ತೋರುತ್ತದೆ. ಈ ಮಹಾಪುರುಷನ ಜೀವನ ಚರಿತೆ ಈ ಉಪಸಂಹಾರದಿಂದ ಎಲ್ಲ ನಿರೀಕ್ಷೆಗೂ ಮೀರಿ ಸರ್ವಾಂಗ ಪೂರ್ಣವಾದ ಕಲಾಕೃತಿಯಾಯಿತು..... ಪ್ರೇಮ ಪ್ರತಿಷ್ಠಾಪನೆಯ ಮಹಾಯಜ್ಞದಲ್ಲಿ ತಮ್ಮ ಅಮೂಲ್ಯ ಜೀವನವನ್ನು ಪೂರ್ಣಾಹುತಿಯಾಗಿ ಸಲ್ಲಿಸಿಬಿಟ್ಟರು"(ಅದೇ; ಪು. ೧೪೭-೧೪೮) ಎಂದು ನುಡಿದಿದ್ದಾರೆ.

ಕೆ. ನರಸಿಂಹಶಾಸ್ತ್ರಿಗಳು 'ಗಾಂಧೀಜಿ ಭವನ' ಎಂಬ ಪ್ರಬಂಧ ರಚಿಸಿದ್ದಾರೆ. ಇದೊಂದು ವಿಡಂಬನಾತ್ಮಕ ಬರಹವೆಂದು ಹೇಳಬಹುದು. ಇದು ತಮ್ಮ ಪಾಪಗಳನ್ನು ಮುಚ್ಚಿಕೊಳ್ಳುವ ಸಲುವಾಗಿ ಹೊಟೇಲುಗಳು, ಅಂಗಡಿಗಳು, ಜ್ಯೋತಿಷಶಾಸ್ತ್ರ ವಿಭಾಗಗಳು ಇತ್ಯಾದಿ ಎಲ್ಲ ಅಗತ್ಯಗಳಿಗೂ

ಗಾಂಧೀಜಿಯವರ ಹೆಸರನ್ನು ಬಳಸಿಕೊಳ್ಳುವುದರ ಮೂಲಕ ಹೇಗೆ ಜನ ತಾವೇ ಅಪಹಾಸ್ಯಕ್ಕೀಡಾಗುತ್ತಾರೆ. ಇತರರನ್ನು ಮೋಸಗೊಳಿಸುತ್ತಾರೆ ಎಂಬುದನ್ನು ಕುರಿತು ವಿವರಿಸುತ್ತದೆ.

ಈ ಬಗೆಯ ಬರೆಹಗಳಲ್ಲದೆ, ಗಾಂಧೀಜಿಯವರ ಜೀವನ ದರ್ಶನವನ್ನು ನಿರೂಪಿಸುವ ಅಸಂಖ್ಯಾತ ವ್ಯಾಖ್ಯಾನ ಸ್ವರೂಪದ ಪ್ರಬಂಧಗಳು ಕನ್ನಡ ಪುಸ್ತಕಗಳಲ್ಲಿ ಮತ್ತು ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಅವುಗಳಲ್ಲಿ ಹರ್ಡೇಕರ ಮಂಜಪ್ಪನ 'ಖಾದಿಶಾಸ್ತ್ರ', ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಪೂರ್ಣ ಸ್ವದೇಶಿ', ಜಿ.ಪಿ. ರಾಜರತ್ನಂ ಅವರ 'ವಿಚಾರ ತರಂಗ' ಮತ್ತು ಕೃಷ್ಣಾನುಭವ, ಸಿದ್ಧವನಹಳ್ಳಿ ಕೃಷ್ಣಶರ್ಮ ಅವರ 'ಪರ್ಣಕುಟಿ' ಮುಂತಾದವುಗಳನ್ನು ಹೆಸರಿಸಬಹುದು.

"ಮಹಾತ್ಮಾ ಗಾಂಧಿಯವರು ಲೋಕ ವಿಖ್ಯಾತರು. ಲೋಕ ವಿಖ್ಯಾತರಾಗಿ ಎಲ್ಲಾ ಕಾಲದಲ್ಲೂ ಕೆಲವು ಜನ ಇರುತ್ತಾರೆ. ಒಂದೊಂದು ಕಾಲಕ್ಕೆ ಒಂದೊಂದು ದೇಶಕ್ಕೆ ಲೋಕ ಎನ್ನುವುದು ಒಂದೊಂದು ಪರಿಮಿತಿಯದಾಗಿರುತ್ತದೆ. ಪ್ರತಿಕೂಲ ಸನ್ನಿವೇಶದಲ್ಲಿದ್ದರೂ ಲೋಕವಿಖ್ಯಾತಿಯನ್ನು ಪಡೆದವರು. ನಮ್ಮ ದೇಶದಲ್ಲಿ ಇರುವುದೇ ಅದು ಸಜೀವವಾಗಿರುವುದಕ್ಕೆ ಸಾಕ್ಷಿ. ಇವರಲ್ಲೆಲ್ಲ ಹೆಚ್ಚಿನ ಹೆಸರುವಾಸಿ ಮಹಾತ್ಮ ಗಾಂಧಿಯವರು. ಲೋಕದ ಯಾವ ಖ್ಯಾತಿವಂತರೊಂದಿಗಾದರೂ ಇವರನ್ನು ತೂಗಬಹುದು. ಇವರು ಆ ಯಾರಿಗೂ ಕಡಿಮೆಯೆಂದು ಕಾಣುವುದಿಲ್ಲ"(ಕೃಷ್ಣಶರ್ಮ ಸಿದ್ದವನಹಳ್ಳಿ; ೨೦೦೬; ಮುನ್ನುಡಿ) ಎಂದು ಮಾಸ್ತಿವೆಂಕಟೇಶ ಅಯ್ಯಂಗಾರ್ ಅವರು ಸಿದ್ದವನಹಳ್ಳಿ ಕೃಷ್ಣಶರ್ಮರ 'ಪರ್ಣಕುಟಿ' ಪುಸ್ತಕದ ಮುನ್ನುಡಿಯಲ್ಲಿ ಹೇಳಿದ್ದಾರೆ. ಇಲ್ಲಿ ಗಾಂಧೀಜಿಯವರನ್ನು ಲೋಕವಿಖ್ಯಾತರನ್ನಾಗಿ ಗಾಂಧೀಜಿಯವರ ವ್ಯಕ್ತಿತ್ವಕ್ಕೆ ಗಾಂಧೀಜಿಯೇ ಸರಿಸಾಟಿ ಎಂದು ಪರಿಭಾವಿಸಲಾಗಿದೆ.

ಗಾಂಧೀಜಿ ಅನಂತರೂಪಿ. ಅವರನ್ನು ಬೇರೆ ಬೇರೆಯಾಗಿ ಗುರುತಿಸಿಕೊಂಡವರಿದ್ದಾರೆ. ಕಲೆಯ ಕಣ್ಣಿಂದ ಗಾಂಧೀಜಿಯನ್ನು ನೋಡಿದರೆ ಉಳಿದ ಎಲ್ಲ ಪ್ರಕರಣಗಳೂ ತಿಳಿಯಾಗುತ್ತವೆ. ಆ ಕಲಾಪುರುಷನ ಬದುಕು ಮಾನವ ಸಂಬಂಧಗಳಲ್ಲಿ, ಹೆಂಗಸರೊಡನೆ, ಮಕ್ಕಳೊಡನೆ, ತನ್ನ ಕುಟುಂಬದವರೊಡನೆ ಹೇಗೆ ರೂಪುಗೊಂಡಿದೆ; ಹೇಗೆ ಆ ರೀತಿಯಲ್ಲಿ ಒಂದು ಉಚ್ಚ ಸಂಸ್ಕೃತಿ, ಆಳವಾದ ಸಿದ್ಧಾಂತ ಇದೆ ಎಂಬುದು ಅರ್ಥವಾಗುತ್ತದೆ(ಅದೇ; ಪು. ಬಿನ್ನಹ ಮಾತುಗಳು) ಎಂದು ಸಿದ್ದವನಹಳ್ಳಿ ಕೃಷ್ಣಶರ್ಮರು ತಮ್ಮ 'ಪರ್ಣಕುಟಿ' ಕೃತಿಯಲ್ಲಿ ಬಿನ್ನವಿಸಿಕೊಂಡಿದ್ದಾರೆ. ಗಾಂಧೀಜಿ ಇಲ್ಲಿ ಕಲಾಪುರುಷನಾಗಿ, ಅನಂತರೂಪಿಯಾಗಿ ಕಂಡಿದ್ದಾರೆ.

"ಗಾಂಧೀಜಿ ಎಂದರೆ ಒಬ್ಬ ವ್ಯಕ್ತಿಯಲ್ಲ. ಅದು ಒಂದು ಯುಗ. ಹಿಂದುಸ್ಥಾನದ ಜನಕ್ಕೆ ಗಾಂಧೀಜಿ ಒಂದು ಸಮ್ಮೋಹನ ಮಂತ್ರ. ಅವರು ನಡೆದ ದಾರಿಯ ಧೂಳನ್ನು ಜನ ಹಣೆಗೆ ಹಚ್ಚುತ್ತಾರೆ. ಸಾವಿರಾರು ಹರದಾರಿಯಿಂದ ದರ್ಶನಕ್ಕಾಗಿ ಬರುತ್ತಾರೆ. ಆ ದರ್ಶನದಿಂದ ತಮ್ಮ ಸಕಲ ಪಾಪವೂ ಹರಿಯಿತೆಂದು ತಿಳಿಯುತ್ತಾರೆ. ಬುದ್ಧ ದೇವನ ಹಾಗೆ ಗಾಂಧೀಜಿಗೆ ಪೂಜೆ ಸಲ್ಲುತ್ತದೆ. ಶ್ರೀರಾಮಚಂದ್ರನ ಹಾಗೆ ಗಾಂಧೀಜಿ ಒಂದು ಅವತಾರ ಎಂದು ತಿಳಿಯುತ್ತಾರೆ. ಈ ಆದರ, ಈ ಭಕ್ತಿ ಹಿಂದುಸ್ಥಾನದ ನಾಲ್ಕು ದಿಕ್ಕುಗಳನ್ನು ದಾಟಿ ಜಗತ್ತಿನಲ್ಲಿ ಮೊಳೆತಿದೆ.

ಮಿದುವಾದ ಕಪ್ಪು ಗಂಟಿನ ಈ ಬಡಕಲು ಬೈರಾಗಿಯ ಹೆಸರು ಜಗತ್ತಿನ ಮೂಲೆಮೂಲೆಗೂ ತಿಳಿದಿದೆ.

ಮೈಸೂರಿನ ಸನ್ಯಾಸಿಯೊಬ್ಬರು ಫ್ರಾನ್ಸ್ ದೇಶಕ್ಕೆ ಹೋಗಿದ್ದರು. ಅಲ್ಲಿ ಒಂದು ಕಡೆ ರೈಲು ನಿಲುತಾಣದಲ್ಲಿ ಇವರ ಸಾಮಾನು ಹೊತ್ತ ಪೋರ್ಟರ್ ಒಬ್ಬನು ಹೊರಗೆ ಬಂದು ಸಾಮಾನು ಇಳಿಸಿದ ಮೇಲೆ, ಇವರು ಕೂಲಿ ಕೊಟ್ಟರೆ ಬೇಡ ಎಂದು ನಿರಾಕರಿಸಿದನಂತೆ. ಇವರಿಗೆ ಅವನ ನಡತೆ ಅರ್ಥವಾಗಲಿಲ್ಲ. ಏಕೆ ಎಂದು ಕೇಳಿದರು. 'ಹಾ, ನೀವು ಗಾಂಧೀ ದೇಶದವರು!' ಎಂದನಂತೆ. ಗಾಂಧೀಜಿ ದೇವರು, ಅವತಾರ!

ಒಬ್ಬ ಹಿಂದೀ ಕ್ರೈಸ್ತರ ಬಿಷಪ್ ಇಟಲಿಗೆ ಹೋದಾಗ ಅಲ್ಲಿ ಪೋಪರ ಅರಮನೆಯ ಬಾಗಿಲು ಕಾಯುವವನು ಇವರ ಭೇಟಿ - ಚೀಟಿ ನೋಡಿ 'ಇಂಡಿಯಾವೆ?' ಎಂದು ಕೇಳಿದ. ಇವರು ಹೌದು ಎಂದರು. 'ಗಾಂಧೀ.....?' ಎಂದು ಕೇಳಿದ ಅವನು. ಗಾಂಧೀ ದೇಶವಲ್ಲವೆ ಎಂದು ಅವನ ಭಾವ. ಭಾರತ ಕಾರ್ಯದರ್ಶಿಯ ಸಲಹೆಗಾರರಾದ ಸರ್ ಅಬ್ದುಲ್ ಕಾದರ್, ವಿಯನ್ನಾ ಪಟ್ಟಣದ ಒಂದು ಹೋಟಲಿಗೆ ಹೋದಾಗ ಅಲ್ಲಿ ಪರಿಚಾರಕ ಒಬ್ಬ 'ನೀವು ಗಾಂಧೀ ದೇಶದವರಲ್ಲವೆ? ಎಂದು ಕೇಳಿದ. 'ಹೌದು. ನನಗೆ ಗಾಂಧೀ ಚೆನ್ನಾಗಿ ಗೊತ್ತು. ನಾನು ಅವರ ಸಂಗಡ ಮಾತಾಡಿದ್ದೇನೆ' ಎಂದರು ಇವರು. ಅವನ ಸಂತೋಷಕ್ಕೆ ಪಾರವೇ ಇಲ್ಲವಾಯಿತು. ಹೋ! ಗಾಂಧಿಯನ್ನು ನೋಡಿ ಮಾತಾಡಿಸಿದವರು ಒಬ್ಬರನ್ನು ನಾನು ನೋಡಿದ್ದೆ ಎಂತ ಎಲ್ಲರಿಗೂ ಹೇಳಬಹುದು' ಎಂದು ಹೇಳಿದ"(ಅದೇ; ಪು. ೧-೨) ಎಂದು ಕೃಷ್ಣಶರ್ಮರು ಉಲ್ಲೇಖಿಸಿದ್ದಾರೆ. ಹೀಗೆ ಗಾಂಧೀಜಿ ವ್ಯಕ್ತಿಯಾಗಿರದೆ ಒಂದು ಯುಗವಾಗುತ್ತಾರೆ. ಯುಗಪುರುಷರಾಗಿ ಎಲ್ಲರ ಮನದಲ್ಲಿ ದೈವಸಂಭೂತರಾಗಿ ಹೊಮ್ಮುತ್ತಾರೆ.

"ಗಾಂಧೀಜಿಯವರನ್ನು ನೆನೆದರೆ ಬೇರೆ ಬೇರೆ ಚಿತ್ರ ಕಣ್ಣ ಮುಂದೆ ನಿಲ್ಲುತ್ತವೆ. ನಾನಾ ಭಾವ ಮನಸ್ಸಿನಲ್ಲಿ ಮೂಡುತ್ತವೆ. ಸರೋಜಿನಿದೇವಿ ಗಾಂಧೀಜಿ ಕುರಿತು ಹೀಗೆ ಹೇಳುತ್ತಾರೆ. ಗಾಂಧೀಜಿ ಬಹುರೂಪಿ. ಕೆಲವರಿಗೆ ನಗೆಗಾರ ಗಾಂಧೀ ನೆನಪಾದರೆ ಕೆಲವರಿಗೆ ಹಟಗಾರ ಗಾಂಧಿಯ ನೆನಪಾಗುತ್ತದೆ. ಒಬ್ಬರಿಗೆ ಗಾಂಧೀ ಶುದ್ಧ ಬೈರಾಗಿ; ಇನ್ನೊಬ್ಬರಿಗೆ ಉತ್ತಮ ಗೃಹಸ್ಥ. ಚಾಣಾಕ್ಷ ರಾಜಕಾರಣಿ ಎಂದು ಕೆಲವರಿಗೆ; ಖಾದೀ ಗೊಡ್ಡು ಎಂದು ಕೆಲವರಿಗೆ, ಜಗದ್ವಂದ್ಯ ಕರ್ಮಯೋಗಿ ಎಂದು ಕೆಲವರಿಗೆ ಅನಿಸಿದರೆ ಬರೀ ಹುಚ್ಚು ಎಂದು ಕೆಲವರು ತಿಳಿಸಿದ್ದಾರೆ. ಒಬ್ಬೊಬ್ಬರದು ಒಂದು ನೋಟ(ಅದೇ; ಪು. ೩). ಹೀಗೆ ಗಾಂಧಿಯನ್ನು ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಕಾಣುತ್ತಾರೆ. ಗಾಂಧೀಜಿ ಮತ್ತು ಅವರ ವ್ಯಕ್ತಿತ್ವ ಭಾರತ ದೇಶವನ್ನು ಪ್ರತಿನಿಧಿಸುತ್ತಾರೆ. ಗಾಂಧೀಜಿ ದೇವರಾಗಿ, ಕಲಾಪುರುಷನಾಗಿ, ಶ್ರೀರಾಮನ ಅವತಾರಿಯಾಗಿ ಹೀಗೆ ವಿವಿಧ ಬಗೆಯಲ್ಲಿ ಪ್ರತಿನಿಧಿಗೊಳ್ಳುತ್ತಾರೆ. ಸಿದ್ಧವನಹಳ್ಳಿ ಕೃಷ್ಣಶರ್ಮರು ತಮ್ಮ ಪರ್ಣಕುಟಿಯಲ್ಲಿ ಗಾಂಧೀಜಿಯವರ ಆಪ್ತವಲಯದ ಸಂಗತಿಗಳನ್ನು ಸನ್ನಿವೇಶಗಳನ್ನು ವಿವರಿಸಿ, ಗಾಂಧೀಜಿಯನ್ನು ಆದರ್ಶೀಸಿ, ದೈವೀಕರಿಸಿದ್ದಾರೆ.

'ಖಾದಿಶಾಸ್ತ್ರ' ಖಾದಿಯ ಗುಣವಿಶೇಷಗಳು, ಖಾದಿ ಪ್ರಚಾರದ ಬಗ್ಗೆ ಗಾಂಧೀಜಿಯವರ ಮೂಲಭೂತ ಆಲೋಚನೆಗಳೇನೆಂಬುದನ್ನು ಸ್ಪಷ್ಟಪಡಿಸುತ್ತದೆ. ಗೊರೂರು ಅವರ 'ಪೂರ್ಣ ಸ್ವದೇಶಿ' ಗ್ರಾಮ ಪುನರ್ರಚನೆಯನ್ನು ಕುರಿತ ಗಾಂಧೀಜಿಯವರ ಆಲೋಚನೆಗಳ ವ್ಯಾಖ್ಯಾನ ಗ್ರಂಥವಾಗಿದೆ. ಸಿದ್ಧವನಹಳ್ಳಿ ಕೃಷ್ಣಶರ್ಮರ 'ಸೇವಾಗ್ರಾಮ' ಮತ್ತು 'ಸರ್ವೋದಯ' ಗಾಂಧೀಜಿಯವರ ಆಲೋಚನೆ ಮತ್ತು ಬೋಧನೆಯ ವಿವಿಧ ಮುಖಗಳನ್ನು ಚಿತ್ರಿಸುತ್ತವೆ. ಕೃಷ್ಣಶರ್ಮರದೇ ಆದ ಮತ್ತೊಂದು 'ಗಾಂಧೀ ಯೋಜನೆ' ಎಂಬ ಗ್ರಂಥದಲ್ಲಿ ಗಾಂಧೀಜಿಯವರು ರೂಪಿಸಿದ ಸಾಮಾಜಿಕ, ಆರ್ಥಿಕ ರಚನೆಯ ಸ್ವರೂಪವನ್ನು ಓದುಗನಿಗೆ ಪರಿಚಯ ಮಾಡಿಕೊಡುತ್ತದೆ. ಗಾಂಧೀಜಿಯವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ದೃಷ್ಟಿಗಳನ್ನು ವಿವರವಾಗಿ ಪ್ರತಿಪಾದಿಸುವ ಮತ್ತೆರಡು ಗ್ರಂಥಗಳೆಂದರೆ, ವಿ.ಎಸ್. ನಾರಾಯಣರಾಯರ 'ಗಾಂಧೀವಾದ' ಮತ್ತು 'ಗಾಂಧಿಯವರ ಆರ್ಥಿಕವಾದ'. ಇವು ಗಾಂಧೀವಾದ ಅರ್ಥಶಾಸ್ತ್ರವನ್ನು ಸರಳವಾಗಿ, ನೇರವಾಗಿ ವಿವರಿಸುವ ಗ್ರಂಥಗಳು. ಜಿ.ಪಿ. ರಾಜರತ್ನಂ ಅವರು ಖಾದಿಯನ್ನು ಕುರಿತು 'ಗಾಂಧಿವಿದ್ಯಾ' ಎಂಬ ಕೃತಿ ರಚಿಸಿದ್ದಾರೆ. ಈ ಕೃತಿಯಲ್ಲಿ 'ಮಹಾತ್ಮರ ಮರಣ ಹಾಗೂ ಇತರ ಉಪನ್ಯಾಸಗಳು" ಎಂಬುದು ಗಾಂಧೀಜಿಯವರ ಕೊಲೆಯಾದ ಅನಂತರದ ದಿನಗಳಲ್ಲಿ ಮಾಡಿದ ಅವರ ಭಾಷಣಗಳ ಸಂಕಲನ. ಇದನ್ನು ರಾಜರತ್ನಂ ಅವರೇ ಸಂಕಲಿಸಿದ್ದಾರೆ. ಆರ್.ಆರ್. ದಿವಾಕರರ 'ಸತ್ಯಾಗ್ರಹ' ಗಾಂಧಿ ಸತ್ಯಾಗ್ರಹ ಸಿದ್ಧಾಂತಗಳು ಮತ್ತು ತಂತ್ರಗಳ ಬಗ್ಗೆ ಹಾಗೂ ಥೋರೋ, ರಸ್ಕಿನ್ ಮತ್ತು ಟಾಲ್‌ಸ್ಟಾಯ್‌ರಂತಹ ಜಗತ್ತಿನ ಇತರ ಭಾಗಗಳ ನಾಯಕರು ಕೈಗೊಂಡ ಅಂಥದೇ ಚಟುವಟಿಕೆಗಳ ಬಗ್ಗೆ ಮತ್ತು ಆ ವಿಷಯವನ್ನು ಕುರಿತ ಆದರ್ಶಗಳ ಬಗ್ಗೆ ಅಸದೃಶ ವಿವರಣೆಯನ್ನು ನೀಡುತ್ತದೆ.

೭.೨. ಜೀವನ ಚರಿತ್ರೆ

ಗಾಂಧೀಜಿಯವರನ್ನು ಕುರಿತ ಜೀವನ ಚರಿತ್ರೆಗಳು ಕನ್ನಡದಲ್ಲಿ ಪ್ರಕಟವಾಗಿವೆ. ಅವುಗಳಲ್ಲಿ ಹರ್ಡೇಕರ ಮಂಜಪ್ಪನವರ 'ಮಹಾತ್ಮ ಗಾಂಧಿಯವರ ಚರಿತ್ರೆ'. ಇದು ಗಾಂಧೀಜಿಯವರ ಮೊದಲ ಐವತ್ತು ವರ್ಷಗಳ ಜೀವನವನ್ನು ಸರಳವಾದ ಹಾಗೂ ಮನೆಮಾತಿನ ಶೈಲಿಯಲ್ಲಿ ನಿರೂಪಿಸುತ್ತದೆ. ಬಿ.ಎಲ್. ಆಚಾರ್ ಅವರ 'ಮಹಾತ್ಮಗಾಂಧಿ' ಗಾಂಧೀಜಿಯವರ ಜೀವನ ಮತ್ತು ಕಾರ್ಯಗಳನ್ನು ಕುರಿತ ಕೃತಿಯಾಗಿದೆ. ಬಿ.ಎ.ಆರ್. ಅವರ 'ಪೂಜ್ಯ ಗಾಂಧೀಜಿ, ಧನ್ಯೆ ಕಸ್ತೂರಬಾ', ವಿ.ಎಸ್. ನಾರಾಯಣರಾಯರ 'ಮಹಾತ್ಮ ಬಾಪೂಜಿ', ನಭ ಅವರ 'ಗಾಂಧೀಜಿ', ಅ.ನ.ಕೃ. ಅವರ 'ಭಾರತದ ಬಾಪು', ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಭಾರತದ ಭಾಗ್ಯ ವಿಧಾತ' ಮತ್ತು "ಜೋನ್ ಆಫ್ ಆರ್ಕ್ ಮತ್ತು ಮಹಾತ್ಮ ಗಾಂಧಿ", ದಿವಾಕರರ "ಮಹಾತ್ಮಗಾಂಧಿ", ಕರಗುಪ್ಪೆ ಅವರ "ಮಹಾತ್ಮಗಾಂಧಿ ಚರಿತ್ರೆ" ಮತ್ತು "ಸುಬೋಧ ರಾಮರಾಯರ "ಮಹಾತ್ಮಗಾಂಧಿ" ಮುಂತಾದವು ಗಾಂಧೀಜಿಯವರ ಜೀವನ ಚರಿತ್ರೆಯನ್ನು ದರ್ಶಿಸುತ್ತವೆ. ಜೀವನ ಚರಿತ್ರೆಯ ಮಾದರಿಗೆ ಸೇರಿದ ಇತರ ಕೃತಿಗಳೆಂದರೆ ಸಿದ್ಧವನಹಳ್ಳಿ ಕೃಷ್ಣಶರ್ಮರ 'ಗಾಂಧಿ ಕತೆಗಳು' ಮತ್ತು ಗೋಸಾವಿಯವರ 'ಬಾಪೂಜಿಯ ಬದುಕು'.

ಗಾಂಧೀಜಿಯವರನ್ನು ಕುರಿತು ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸಿರುವ ಲೇಖಕರ ಪುಸ್ತಕಗಳೂ ಕನ್ನಡದಲ್ಲಿ ಪ್ರಕಟವಾಗಿವೆ. ಗಾಂಧೀಜಿಯವರ ಜೀವನ ಮತ್ತು ವ್ಯಕ್ತಿತ್ವದ ಹಲವಾರು ಮುಖಗಳನ್ನು ಅವು ಬೆಳಕಿಗೆ ತರುತ್ತವೆ. ಪ್ರತಿಯೊಬ್ಬ ಲೇಖಕನೂ ತಾನು ಕಂಡುಕೊಂಡಂತೆ ಗಾಂಧೀಜಿಯವರ ಹಿರಿಮೆಯನ್ನು ವರ್ಣಿಸುತ್ತಾನೆ. 'ಗಾಂಧೀಜಿ ನಾನು ಕಂಡಂತೆ' ಎಂಬ ದಿವಾಕರರ ಪುಸ್ತಕ ಇದನ್ನು ಸೂಚಿಸುತ್ತದೆ. ಕೃಷ್ಣಶರ್ಮರ "ವರ್ಧಾಯಾತ್ರೆ" ಅವರು ಸೇವಾಗ್ರಾಮದಲ್ಲಿದ್ದ ಗಾಂಧೀಜಿಯವರ ಆಶ್ರಮಕ್ಕೆ ಭೇಟಿ ನೀಡಿದಾಗ ಆದ ಅನುಭವದ ವರದಿಯನ್ನೊಳಗೊಂಡಿದೆ. ಕಂದಾಡೆಕೃಷ್ಣ ಅಯ್ಯಂಗಾರರು "ಗಾಂಧೀಜಿಯ ಹಾಸ್ಯ ಪ್ರವೃತ್ತಿ" ಎಂಬ ಗ್ರಂಥ ಗಾಂಧೀಜಿಯವರ ಉಲ್ಲಾಸಭರಿತ, ಶಿಶುಸದೃಶ ಹಾಸ್ಯ ಪ್ರವೃತ್ತಿಯನ್ನು ಉದಾಹರಣೆಗಳ ಮೂಲಕ ಚಿತ್ರಿಸುತ್ತದೆ. ಬ.ನ. ಸುಂದರರಾಯರ "ಗಾಂಧೀಜಿಯ ಜೀವನ ಪಾಠಗಳು" ಎಂಬ ಗಾಂಧೀಜಿಯವರ ಜೀವನದ ದಾರಿದೀಪದಂತಿರುವ ಹಲವಾರು ಘಟನೆಗಳನ್ನು ವಿವರಿಸುತ್ತದೆ. ಕೆ.ಎಸ್. ನರಸಿಂಹಸ್ವಾಮಿಗಳ 'ವಿಶ್ವಜ್ಯೋತಿಗಳು' ಎಂಬ ಪುಸ್ತಕ ಗಾಂಧೀಜಿ, ಲಿಂಕನ್ ಮತ್ತು ಲೆನಿನ್ನರ ತೌಲನಿಕ ಅಧ್ಯಯನವನ್ನೊಳಗೊಂಡಿದೆ.

೭.೩. ಶಿಶುಸಾಹಿತ್ಯ

ಚಿಕ್ಕಮಕ್ಕಳೆಂದರೆ ಆನಂದ, ಚಿಕ್ಕಮಕ್ಕಳೆಂದರೆ ಜಗತ್ತಿನ ಆಸೆ. ಮಕ್ಕಳೆಂದರೆ ನಿರ್ಮಲತೆ. ಮಕ್ಕಳೆಂದರೆ ಉತ್ಸಾಹ. ಮುಕ್ತ ಪುರುಷರಲ್ಲಿ ಒಂದು ಬಗೆಯ ಮಕ್ಕಳ ಪ್ರವೃತ್ತಿ ನೆಲೆಸಿರುತ್ತದೆ. ಮಹಾತ್ಮಾಗಾಂಧೀಜಿಯವರು ಮಕ್ಕಳಂತೆ ನಿಷ್ಪಾಪರಾಗಿದ್ದರು. ಆದ್ದರಿಂದ ಅವರ ಕತೆಯನ್ನು ನಾನು 'ಮಕ್ಕಳ ಕತೆ'ಯೆಂದೇ ಹೇಳಬಹುದು(ಸಾನೇ ಗುರೂಜಿ; ೨೦೦೧; ಪು. ೧). ಗಾಂಧೀಜಿ ಮಕ್ಕಳ ಮುಗ್ಧಮನಸ್ಸಿನಂತವರು. ಹಾಗಾಗಿ ಗಾಂಧೀಜಿ ಎಲ್ಲಾ ಮಕ್ಕಳಿಗೂ ಹತ್ತಿರವಾಗುತ್ತಾರೆ. ಅದರಂತೆಯೇ ಗಾಂಧೀಜಿಯವರಿಗೂ ಮಕ್ಕಳ ಹುಚ್ಚು ಬಹಳ. ತಿರುಗಾಡಲು ಹೋಗುವಾಗ ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಮುಂಬಯಿಯಲ್ಲಿರುವ ಜುಹೂದ ಸಮುದ್ರ ತೀರದಲ್ಲಿ, ಬೆತ್ತದ ಒಂದು ತುದಿಯು ಒಂದು ಮಗುವಿನ ಕೈಯೊಳಗೆ ಇನ್ನೊಂದು ತುದಿಯು ಗಾಂಧೀಜಿಯವರು ಕೈಯೊಳಗೆ ಇದ್ದು, ಅವರು ನಗುತ್ತ ಹೋಗುತ್ತಿರುವ ಚಿತ್ರಣವನ್ನು ಸರ್ವೇಸಾಮಾನ್ಯವಾಗಿ ಎಲ್ಲರೂ ಗಮನಿಸಿರಬಹುದು. ಗಾಂಧೀಜಿಯವರಿಗೆ ಮಕ್ಕಳೆಂದರೆ ಎಷ್ಟು ಇಷ್ಟಪಡುತ್ತಾರೆಂದು ಇದರಿಂದಲೇ ತಿಳಿಯುತ್ತದೆ.

ಗಾಂಧೀಜಿಯವರ ಬಗ್ಗೆ ಪುಸ್ತಕಗಳನ್ನು ಬರೆದು ಅವರನ್ನು ಮಕ್ಕಳ ಹತ್ತಿರ ತರಲು ಕನ್ನಡ ಲೇಖಕರು ಪ್ರಯತ್ನಿಸಿದ್ದಾರೆ. ಗಾಂಧೀಜಿಯವರ ವಾಚನ ಮತ್ತು ನೀತಿಬೋಧನದ ದೃಷ್ಟಿಯಿಂದಲೇ ಈ ಪುಸ್ತಕಗಳನ್ನು ರಚಿಸಲಾಗಿದೆ. ಹರ್ಡೇಕರ್ ಮಂಜಪ್ಪ ಅವರ "ಗಾಂಧೀ ಸಂದೇಶ", "ಕನ್ನಡದಲ್ಲೇ ಗಾಂಧೀಜಿಯವರನ್ನು ಕುರಿತ ಮೊಟ್ಟಮೊದಲ ಶಿಶುಸಾಹಿತ್ಯ ಕೃತಿಯೆಂದು" ಎಂ. ರಾಮರಾವ್ ಅವರು ಹೇಳಿದ್ದಾರೆ(ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ; ಪು. ೧೫೨). ಇದು ಮಕ್ಕಳಿಗೆ ಸರಳವಾದ ಭಾಷೆಯಲ್ಲಿ ಖಾದಿ ಮೊದಲಾದ ವಿಷಯಗಳ ಬಗ್ಗೆ ಗಾಂಧೀಜಿಯವರ

ನಿಲುವುಗಳನ್ನು ವಿವರಿಸುತ್ತದೆ. ಬ.ನ. ಸುಂದರರಾಯರು ಮಕ್ಕಳಿಗಾಗಿ ಬರೆದ ಕವನ ಸಂಕಲನ "ಮಕ್ಕಳ ಕಹಳೆ"ಯಲ್ಲಿ ಗಾಂಧೀಜಿಯವರ ಬಗ್ಗೆ ಕವನಗಳಿವೆ. ಪರಿಮಳ ಮತ್ತು ಟಿ.ಎಂ.ಆರ್. ಸ್ವಾಮಿಯವರು "ಅಜ್ಜಅಜ್ಜಿ" ಎಂಬ ಪುಸ್ತಕ ರಚಿಸಿದ್ದಾರೆ. ಇದು ಗಾಂಧೀಜಿ ಮತ್ತು ಕಸ್ತೂರಬಾ ಅವರ ಬಗ್ಗೆ ವಿವರಿಸುತ್ತದೆ. ಇವರನ್ನು ನಾಡಿನ ಮಕ್ಕಳ ಅಜ್ಜ ಅಜ್ಜಿಯಾಗಿಸಿದ್ದಾರೆ.

ಗಾಂಧೀಜಿಯವರ ಜೀವನ ಮತ್ತು ಕೃತಿಗಳನ್ನು ಕುರಿತು ಮಕ್ಕಳಿಗಾಗಿಯೇ ಬರೆಯಲಾದ ಪುಸ್ತಕಗಳು "ಮಕ್ಕಳ ಮಹಾತ್ಮಗಾಂಧಿ" ಎಂಬ ಪುಸ್ತಕವನ್ನು ನಾರಾಯಣ ಶರ್ಮರು ರಚಿಸಿದ್ದಾರೆ. ರವಿಚಂದ್ರ ಅವರು "ಮಹಾತ್ಮಾಗಾಂಧಿ" ಪುಸ್ತಕ ರಚಿಸಿದ್ದಾರೆ. ವಿ.ಎಸ್. ನಾರಾಯಣರಾಯರು "ಗಾಂಧೀ ಕಥಾವಳಿ"ಯನ್ನು ಬರೆದಿದ್ದಾರೆ. ರಾಮಚಂದ್ರ ವಡವಿಯವರು "ಗಾಂಧೀಜಿಯ ಕಥೆ"ಯನ್ನು ಸವ್ಯಸಾಚಿ ಅವರು 'ಭಾರತ ಭಾಗ್ಯವಿಧಾತ"ವನ್ನೂ, ಉಳವೀಶರು 'ಗಾಂಧೀ ಅಜ್ಜ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಇವು ಮಕ್ಕಳ ಮನಸ್ಸನ್ನು ಸೆರೆಹಿಡಿಯುವ ಗುಣಗಳನ್ನೊಳಗೊಂಡಿವೆ.

ಬಾಲಭಾಷೆಯಲ್ಲಿ ಮಕ್ಕಳಿಗೆ ಗಾಂಧೀಜಿಯವರ ತತ್ತ್ವಗಳನ್ನು ವಿವರಿಸುವಂತಹ ಪುಸ್ತಕಗಳೆಂದರೆ ಸೀತಾರಾಮಭಟ್ಟರ 'ಚರಕ ಹಾಗೂ ಬಾಪೂಜಿ', ಪದ್ಮನಾಭ ಆಚಾರ್ಯರ 'ನಮ್ಮ ರಾಟೆ ಮತ್ತು ನೂಲುವುದು, ಹತ್ತಿ ಹಿಂಜುವುದು' ಈ ಪುಸ್ತಕಗಳು ಖಾದಿಯನ್ನು ತಯಾರಿಸುವ ವಿಧಾನ ಮತ್ತು ಅದರ ಆರ್ಥಿಕತೆಯ ಧೋರಣೆಯನ್ನು ವಿವರಿಸುತ್ತವೆ. ಕನ್ನಡದಲ್ಲಿ ಶಿಶುಸಾಹಿತ್ಯಕ್ಕೆ ಹೊಸ ಹೊಸ ಕೊಡುಗೆಗಳನ್ನು ನೀಡಿದ ಜಿ.ಪಿ. ರಾಜರತ್ನಂ ಅವರು ಗಾಂಧೀಜಿಯವರನ್ನು ಕುರಿತು ಶಿಶುಸಾಹಿತ್ಯವನ್ನು ವಿಶೇಷವಾಗಿ ಸ್ಮರಿಸಿದ್ದಾರೆ. ಗಾಂಧೀಜಿಯನ್ನು ಕುರಿತು ಕವನಗಳು, ನಾಟಕಗಳು, ಕತೆಗಳು ಮತ್ತು ಪ್ರಬಂಧಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ 'ಗಿಳಿಮರಿಗಳ ಗಾಂಧಿ', 'ವಂದೇ ಗಾಂಧಿ', 'ಮಕ್ಕಳ ಗಾಂಧಿ ಮಾದರಿ', 'ಗಾಂಧಿ ಚರಿತ' ಮತ್ತು 'ಬೆಳೆಯುವ ಪೈರು' ಮುಂತಾದವುಗಳನ್ನು ಹೆಸರಿಸಬಹುದು. 'ಗಿಳಿಮರಿಗಳ ಗಾಂಧಿ' ಗಾಂಧೀಜಿಯವರ ಜೀವನದ ಸ್ಥೂಲ ಚಿತ್ರಣವನ್ನೊದಗಿಸುತ್ತದೆ. 'ಬೆಳೆಯುವ ಪೈರು' ಮತ್ತು 'ಧ್ವಜವಂದನೆ' ನಾಟಕಗಳು. ಗಾಂಧೀಜಿಯವರ ಬಗ್ಗೆ ಮಕ್ಕಳಿಗಾಗಿ ಬರೆದ ತಮ್ಮ ಎಲ್ಲಾ ಬರಹಗಳನ್ನು ಸಂಗ್ರಹಿಸಿ 'ಮಕ್ಕಳ ಗಾಂಧಿ' ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಇದು ಮಕ್ಕಳಿಗೆ ಹಾಡಲು ಹಾಡುಗಳನ್ನು, ಓದಲು ಕತೆಗಳನ್ನೂ, ಅಭಿನಯಿಸಲು ನಾಟಕಗಳನ್ನು ಒದಗಿಸುತ್ತದೆ. ಹೀಗಾಗಿ ಕನ್ನಡದಲ್ಲಿ ಗಾಂಧೀಜಿಯವರ ಬಗ್ಗೆ ರಚಿತವಾದ ಶಿಶುಸಾಹಿತ್ಯದಲ್ಲಿ ಸಿಂಹಪಾಲು ರಾಜರತ್ನಂ ಅವರದ್ದಾಗಿದೆ.

ಗಾಂಧೀಜಿಯ ತತ್ತ್ವಾದರ್ಶಗಳನ್ನು ಸರಳವಾಗಿ ಬಾಲಭಾಷೆಯಲ್ಲಿ ಜಿ.ಪಿ. ರಾಜರತ್ನಂ ಅವರು 'ಮಕ್ಕಳ ಗಾಂಧಿ' ಕೃತಿಯಲ್ಲಿ ಮಕ್ಕಳಿಗೆ ತಿಳಿಸಿ ಹೇಳಿದ್ದಾರೆ. ಈ ಕೃತಿಯಲ್ಲಿರುವ 'ವಂದೇ ಗಾಂಧೀಜಿ' ಕವನದಲ್ಲಿ ಗಾಂಧಿಯನ್ನು ಹೀಗೆ ಚಿತ್ರಿಸಿದ್ದಾರೆ.

> ಧರಣಿಮಂಡಲ ಮಧ್ಯದೊಳಗೆ
> ಕೊರಗಿ ಭಾರತಗಜವು ಸೊರಗಿರೆ
> ಕರಿವರದ ಬಂದಂತೆ ಬಂದರು

ಚರಕ ಚಕ್ರದ ಗಾಂಧೀಜಿ.

....

ಬಡವರೇ ಭಗವಂತನೆನ್ನಿ;
ದುಡಿಮೆಯೇ ತಾನವರ ಪೂಜೆ;
ಹಿಡಿದು ಸತ್ಯವ ದೇವರೆನ್ನಿ
ಬಿಡದೆ ನೀವದ ಭಜಿಸಿರಿ.

ತಿರುಗಿಸಿ ದಿನಕೊಮ್ಮೆ ಚರಖಾ;
ಬರವ ನೀಗಿರಿ ಬಟ್ಟೆಗಳಿಗೆ;
ಹರಿಜನರ ಕರೆದೊಂದುಗೂಡಿರಿ;
ಸರುವಸಮತೆಯ ಬೆಳೆಸಿರಿ

....

ಎಂದು ಬುದ್ಧಿಯ ಹೇಳಿ ಕಲಿಸಿ,
ಬಂದು ಕೈಹಿಡಿದೊಯ್ದು ನಮ್ಮನು
ಮುಂದೆ ತಂದಾ ತಂದೆ ಗಾಂಧಿಗೆ
ವಂದಿಪೆವು ನಾವೆಲ್ಲರೂ

(ರಾಜರತ್ನಂ. ಜಿ.ಪಿ.; ೨೦೧೧; ಪು. ೧-೨)

ಹೀಗೆ ಗಾಂಧೀಜಿಯವರು ಉಪದೇಶಿಸಿದ ಸತ್ಯ, ಅಹಿಂಸೆ, ಸ್ವಾವಲಂಬಿ ಜೀವನ, ಎಲ್ಲಾ ಧರ್ಮ, ದೈವಗಳು ಒಂದೇ ಎನ್ನುವುದನ್ನು ಮಕ್ಕಳ ಮನಸ್ಸಿನಲ್ಲಿ ಮೂಡಿಸಲಾಗಿದೆ. ಗಾಂಧಿ ತನ್ನ ತತ್ತ್ವಾದರ್ಶಗಳ ಜೊತೆಗೆ ನೀತಿಯನ್ನು ಬೋಧಿಸಿದ್ದರಿಂದ ಅವರು ಒಬ್ಬ ತಂದೆಯಾಗಿ ಪ್ರತಿಪಾದಿತಗೊಂಡಿದ್ದಾರೆ.

ರಾಜರತ್ನಂ ಅವರು ಗಾಂಧೀ ಕುರಿತು ಕವಿತೆಯಲ್ಲದೆ 'ಮಕ್ಕಳ ಗಾಂಧಿ' ಎಂಬ ಕತೆಯನ್ನು ರಚಿಸಿದ್ದಾರೆ. ಈ ಕತೆಯಲ್ಲಿ ಗಾಂಧೀಜಿಯ ಬಾಲ್ಯ, ಅವರ ಬಾಲ್ಯ ಜೀವನದ ಮೇಲೆ ಪ್ರಭಾವ ಬೀರಿದ ಸಂಗತಿಗಳನ್ನು ವಿವರಿಸಿದ್ದಾರೆ. ಹಾಗಾಗಿ ಈ ಕತೆ ಬಾಲಕರಿಗೆ ಬಾಲಗಾಂಧಿಯನ್ನು ಪರಿಚಯಿಸುತ್ತದೆ. ಆ ಸಂಗತಿಗಳಲ್ಲಿ ಪ್ರಮುಖವಾದವುಗಳನ್ನು ನೋಡುವುದಾದರೆ 'ಕಾಪಿ ಮಾಡದ ಕತೆ' ಒಂದು. ಗಾಂಧೀಜಿ ಕಲಿಯುತ್ತಿದ್ದ ಶಾಲೆಗೆ ವಿದ್ಯಾರ್ಥಿಗಳನ್ನು ಪರೀಕ್ಷೆ ಮಾಡುವುದಕ್ಕಾಗಿ ಇನ್‌ಸ್ಪೆಕ್ಟರ್ ಆಗಮಿಸುತ್ತಾರೆ. ಅವರು KETTLE(ಕೆಟ್ಲ್) ಎಂಬ ಶಬ್ದವನ್ನು ಪರೀಕ್ಷೆಗೆ ಒಡ್ಡುತ್ತಾರೆ. ಗಾಂಧೀಜಿ ಅ ಶಬ್ದವನ್ನು ತಪ್ಪಾಗಿ ಬರೆಯುತ್ತಾರೆ. ತರಗತಿಯ ಉಪಾಧ್ಯಾಯರು ಅದನ್ನು ನೋಡಿ, ಪಕ್ಕದ ಹುಡುಗನನ್ನು ನೋಡಿ ನಕಲು ಮಾಡಲು ಸೂಚಿಸುತ್ತಾರೆ. ಆದರೂ ಗಾಂಧಿ ನಕಲು ಮಾಡುವುದಿಲ್ಲ. ತರಗತಿಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಸರಿಯಾಗಿ ಬರೆದಿದ್ದರು. ಗಾಂಧೀ ಮಾತ್ರ ತಪ್ಪಾಗಿ ಬರೆದಿದ್ದರು. "ನೀನು ಬರೆದದ್ದು ತಪ್ಪು. ಪಕ್ಕದವನನ್ನು ನೋಡಿಕೋ' ಎಂದು ನಾನು ಸೂಚನೆ ಕೊಟ್ಟರೂ ನೀನು ತಿದ್ದಿಕೊಳ್ಳಲಿಲ್ಲ. ದಡ್ಡ!" (ಅದೇ; ಪು. ೧೨) ಎಂದು ಉಪಾಧ್ಯಾಯರು ಹೇಳಿದರು. ಅದಕ್ಕೆ ಗಾಂಧಿ ತಾನು ದಡ್ಡನಾದೆನೆಲ್ಲಾ ಎಂದು ಅವರು

ದುಃಖಪಡಲಿಲ್ಲ. ನಾನು 'ಕಾಪಿ' ಮಾಡಲಿಲ್ಲವಲ್ಲಾ ಎಂದು ಸಂತೋಷಪಟ್ಟರು. ಇದರಿಂದ ಗಾಂಧೀಜಿ ಪ್ರಾಮಾಣಿಕತೆಯ ಪ್ರತೀಕವಾಗುತ್ತಾರೆ. ಈ ಕಥೆ ಮಕ್ಕಳು ಗಾಂಧಿಯಂತೆ ಪ್ರಾಮಾಣಿಕರಾಗಲು ಸೂಚಿಸುತ್ತದೆ. ಗಾಂಧೀಜಿ 'ಶ್ರವಣನ ಪಿತೃಭಕ್ತಿ' ಪುಸ್ತಕ ಓದಿ ಪರಿವರ್ತನೆಯಾಗುವುದು, 'ಹರಿಶ್ಚಂದ್ರ' ನಾಟಕ ನೋಡಿ ಸತ್ಯದ ಪರಿಪಾಲಕನಾಗುವುದು, ಮಾಂಸ ತಿಂದದ್ದು, ಬೀಡಿ - ಹೆಂಡ ಸೇವಿಸಿದ್ದು, ಕಳ್ಳತನ ಮಾಡಿದ್ದು, ಈ ಎಲ್ಲಾ ಕೆಟ್ಟ ಸಹವಾಸ ಬಿಟ್ಟಿದ್ದು ಹೀಗೆ ಮುಂತಾದ ಸಂಗತಿಗಳನ್ನು ಈ ಕತೆಯಲ್ಲಿರಿಸಲಾಗಿದೆ. ಗಾಂಧಿ ತನ್ನ ತಪ್ಪುಗಳನ್ನು ಅವರ ತಂದೆಯ ಮುಂದೆ ಹೇಳಿ ಕ್ಷಮೆಯಾಚಿಸಿ ತನ್ನನ್ನು ತಾನು ತಿದ್ದಿಕೊಂಡರು. ಇದರಿಂದ ಗಾಂಧಿ ಸತ್ಯ, ಪ್ರಾಮಾಣಿಕರೆನಿಸುತ್ತಾರೆ. ಮಕ್ಕಳನ್ನು ನೈತಿಕವಂತರನ್ನಾಗಿ ಮಾಡಲು ಗಾಂಧೀಜಿ ಕುರಿತ ಕತೆಗಳು ಸಹಕಾರಿಯಾಗುತ್ತವೆ. ಶಿಕ್ಷಕರು ಪಾಠದ ನಡುವೆ ಈ ಕತೆಗಳನ್ನು ಸಮಯಾನುಸಾರವಾಗಿ ಉಪಯೋಗಿಸಿದರೆ, ಮಕ್ಕಳ ಮನಸ್ಸನ್ನು ಉಲ್ಲಾಸಭರಿತವಾಗಿಡುವುದು, ಅವರಿಗೆ ಎಚ್ಚರಿಕೆ, ಸ್ಫೂರ್ತಿ ಮತ್ತು ಅವರ ಬದುಕಿಗೊಂದು ಅರ್ಥವನ್ನು ಕೊಡುವುದು ಕೂಡ ಸಾಧ್ಯವಾಗುತ್ತದೆ.

'ಅಜ್ಜಮ್ಮ ಅಸೆಪಟ್ಟ ಅವತಾರ' ಕತೆಯಲ್ಲಿ ಅಜ್ಜಿಗೆ ಒಬ್ಬ ಗಾಂಧೀಜಿಯವರನ್ನು ಕುರಿತು ಹೀಗೆ ಹೇಳುತ್ತಾರೆ. ಈಗ ನಮ್ಮ ದೇಶದಲ್ಲಿ ಗಾಂಧಿ ಎಂಬುವರು ಇದ್ದಾರೆ. 'ಅವರು ದೇವರಂಥ ಮನುಷ್ಯರು. ಅವರನ್ನು ಕಂಡರೆ ದೇವರನ್ನು ಕಂಡ ಹಾಗೆ ಆಗುತ್ತದೆ. ಹಿಂದೆ ನಮ್ಮಲ್ಲಿ ರಾಮ, ಕೃಷ್ಣ ಮುಂತಾದವರು ಲೋಕದ ಹಿತಕ್ಕಾಗಿ ಕೆಲಸ ಮಾಡಿದಂತೆ ಗಾಂಧಿ ಕೆಲಸ ಮಾಡುತ್ತಿದ್ದಾರೆ' ಎಂದು. ಆ ಮಾತನ್ನು ಕೇಳಿದ ದಿವಸದಿಂದ "ರಾಮನ ಅವತಾರ", ಕೃಷ್ಣನ ಅವತಾರ ಆದ ಹಾಗೆ ಈಗ ಗಾಂಧಿ ಅವತಾರವಾಗಿದೆ. ನಾನು ಎಲ್ಲ ದೇವರನ್ನೂ ದರ್ಶನ ಮಾಡಿದ್ದೇನೆ. ಈ ಗಾಂಧಿಯನ್ನು ದರ್ಶನ ಮಾಡಬೇಕು' ಎಂದು ಆ ನೂರನಾಲ್ಕು ವರ್ಷದ ಅಜ್ಜಮ್ಮನಿಗೆ ಆಸೆ ಬಂತು"(ಅದೇ; ಪು. ೮೬). ಹೀಗೆ ಆ ಅಜ್ಜಮ್ಮ ಗಾಂಧೀಜಿಯನ್ನು 'ಅವತಾರ' ಎಂದು ತಿಳಿದಿದ್ದಳು. ಅವತಾರ ಎಂದರೆ ದೇವರು ಭೂಮಿಗೆ ಇಳಿದು ಬಂದು, ಮನುಷ್ಯನಾಗಿ ಹುಟ್ಟಿ ಬದುಕುವುದು' ಎಂದರ್ಥವಲ್ಲ. ಅವತಾರ ಎಂದರೆ ಎಲ್ಲರಂತೆ ತಾನೂ ಮನುಷ್ಯನಾಗಿ ಹುಟ್ಟಿದವನು, ತನ್ನ ಶುದ್ಧವಾದ ಮನಸ್ಸಿನಿಂದಲೂ ಶುದ್ಧವಾದ ಮಾತಿನಿಂದಲೂ ಶುದ್ಧವಾದ ಕಾರ್ಯಗಳಿಂದಲೂ ದೇವರಂತೆ ಆಗುವುದು. ಗಾಂಧೀಜಿ ಅಂತಹ 'ಅವತಾರ' ಎಂದು ಜಿ.ಪಿ. ರಾಜರತ್ನಂ ಅವರು ಅರ್ಥೈಸಿದ್ದಾರೆ.

೭.೪. ಅನುವಾದ ಕೃತಿ

ಕನ್ನಡ ಲೇಖಕರು ಅಥವಾ ವಿದ್ವಾಂಸರು ಗಾಂಧೀಜಿಯವರ ಜೀವನ, ಆಲೋಚನೆ ಮತ್ತು ಸಾಧನೆಗಳ ವಿಷಯದಲ್ಲಿ ಎಷ್ಟು ಆಸಕ್ತಿ ಮತ್ತು ಪ್ರಭಾವ ಹೊಂದಿದ್ದರು ಎಂಬುದನ್ನು ತೋರಿಸಿಕೊಡುವಲ್ಲಿ ಕನ್ನಡದಲ್ಲಿ ಗಾಂಧೀಜಿಯವರನ್ನು ಕುರಿತ ಸಾಹಿತ್ಯದ ಇದುವರೆಗಿನ ಅಧ್ಯಯನವೇ ಉತ್ತರಿಸುತ್ತದೆ. ಆದರೆ ಕನ್ನಡದಲ್ಲಿ ಗಾಂಧಿ ಸಾಹಿತ್ಯ ಇಷ್ಟಕ್ಕೆ ಸೀಮಿತವಾಗಿಲ್ಲ. ಬೇರೆ ಭಾಷೆಗಳಲ್ಲಿನ ಗಾಂಧೀಜಿಯವರ ಕೃತಿಗಳನ್ನೇ ಭಾಷಾಂತರಿಸುವುದರ ಮೂಲಕ ಅವರ ಮಾತುಗಳನ್ನೇ ಕನ್ನಡ ಸಾಹಿತ್ಯಾಸಕ್ತರಿಗೆ ಉಣಬಡಿಸುವ ಕಾರ್ಯವನ್ನು ಕನ್ನಡ ಲೇಖಕರು ಮಾಡಿದ್ದಾರೆ. ಸತ್ಯಾಗ್ರಹ,

ಅಹಿಂಸೆ, ಖಾದಿ, ಮೂಲಶಿಕ್ಷಣ, ಬ್ರಹ್ಮಚರ್ಯ, ಮತಸಹಿಷ್ಣುತೆ ಮೊದಲಾದ ವಿಷಯಗಳನ್ನು ಕುರಿತು ಗಾಂಧೀಜಿಯವರ ಬರಹಗಳು ಕನ್ನಡ ಸಾಹಿತ್ಯದಲ್ಲಿ ಲಭ್ಯವಾಗುತ್ತಿವೆ. ಇವುಗಳ ಮೂಲಕ ಗಾಂಧೀಜಿಯವರ ಮನಸ್ಸು ಮತ್ತು ವ್ಯಕ್ತಿತ್ವಗಳನ್ನು ತಿಳಿದುಕೊಳ್ಳಲು ಸಹಾಯವಾಗುತ್ತವೆ.

ಗಾಂಧೀಜಿಯವರ ಜೀವನವನ್ನು ಕುರಿತು ಕನ್ನಡ ಲೇಖಕರು ಹಲವಾರು ಕೃತಿಗಳನ್ನು ರಚಿಸಿರುವುದನ್ನು ಈಗಾಗಲೇ ಹೆಸರಿಸಲಾಗಿದೆ. ಆದರೆ ಗಾಂಧೀಜಿಯವರನ್ನು ಕುರಿತ ಉತ್ತಮವಾದ ಜೀವನ ಚರಿತ್ರೆಯೆಂದರೆ ಗಾಂಧೀಜಿಯವರೇ ಬರೆದ "Story of My Experiments With Truth" ಎಂಬ ಕೃತಿ. ಈ ಕೃತಿಯನ್ನು ಎಪ್ಪತ್ತೈದು ವರ್ಷಗಳ ಹಿಂದೆ ಐದು ಸಂಪುಟಗಳಲ್ಲಿ 'ಇಬ್ಬರು ಕನ್ನಡಿಗರು" ಅನುವಾದಿಸಿದ್ದರು. ಅನಂತರ ಒಂದು ಸಂಪುಟದಲ್ಲಿ ಪ್ರಕಟವಾಯಿತು. ಗಾಂಧೀಜಿಯವರೇ ಸ್ವತಃ ತಮ್ಮ ಕಥೆಯನ್ನು ಹೇಳುತ್ತಿರುವಂತೆ ಈ ಕೃತಿಯನ್ನು ಓದುವಾಗ ಭಾಸವಾಗುತ್ತದೆ. 'ಹಿಂದ್ ಸ್ವರಾಜ್ಯ'ವನ್ನು ಡಿ.ಕೆ. ಭಾರದ್ವಾಜರು ಕನ್ನಡಿಸಿದ್ದಾರೆ. ಇದೇ ಕೃತಿಯನ್ನು ಸಿದ್ಧವನಹಳ್ಳಿ ಕೃಷ್ಣಶರ್ಮರು ಭಾಷಾಂತರಿಸಿದ್ದಾರೆ. ಗಾಂಧೀಜಿಯವರ ಭಗವದ್ಗೀತೆಯನ್ನು 'ಅನಾಸಕ್ತಿಯೋಗ' ಎಂಬ ಹೆಸರಿನಲ್ಲಿ ಮತ್ತು ಆತ್ಮಸಂಯಮ ಮತ್ತು ಅನುರಕ್ತಿಯನ್ನು ಕುರಿತ ವಿಚಾರಗಳನ್ನು "ಬ್ರಹ್ಮಚರ್ಯೆಯೊ ಕಾಮಸಾಧನೆಯೊ" ಎಂಬ ಹೆಸರಿನಲ್ಲಿ ಭಾರದ್ವಾಜರು ಕನ್ನಡಕ್ಕೆ ತಂದಿದ್ದಾರೆ. 'ಗೀತಾಮಾತೆ' ಗ್ರಂಥವನ್ನು ಸಿದ್ಧವನಹಳ್ಳಿ ಕೃಷ್ಣಶರ್ಮ ಮತ್ತು ಎ. ರಾಮಮೂರ್ತಿಯವರು ಸೇರಿ ಅನುವಾದಿಸಿದ್ದಾರೆ. ಗಾಂಧೀಜಿಯವರ ಜೀವನ ಮತ್ತು ಸಂದೇಶವನ್ನು ಕುರಿತ ಲೂಯಿ ಫಿಷರ್ ಅವರ ಕೃತಿಯನ್ನು ಎಚ್.ವಿ. ಸಾವಿತ್ರಮ್ಮ ಕನ್ನಡಿಸಿದ್ದಾರೆ. ಗಾಂಧೀಜಿ ಮತ್ತು ಮಾರ್ಕ್ಸ್‌ರವರನ್ನು ಕುರಿತ ಆಚಾರ್ಯ ವಿನೋಬಭಾವೆ ಅವರ ತೌಲನಿಕ ಅಧ್ಯಯನ ಹಾಗೂ ಗಾಂಧೀಜಿಯವರ ಆಧ್ಯಾತ್ಮಿಕ ಸಾಧನೆಯನ್ನು ವಿವರಿಸುವ ಕಾಲೇಲ್ಕರರ ಗ್ರಂಥಗಳನ್ನು ಸಿದ್ಧವನಹಳ್ಳಿ ಕೃಷ್ಣಶರ್ಮರು ಅನುವಾದಿಸಿದ್ದಾರೆ. ಹೀಗೆ ದೊಡ್ಡ ಪಟ್ಟಿಯೇ ಆಗುವಷ್ಟು ಗಾಂಧೀಜಿ ಕುರಿತ ಪುಸ್ತಕಗಳು ಕನ್ನಡದಲ್ಲಿ ಪ್ರಕಟವಾಗಿವೆ. ಒಟ್ಟಾರೆ ಕನ್ನಡದ ಇತರ ಸಾಹಿತ್ಯಗಳಲ್ಲಿ ಗಾಂಧಿಯವರ ತತ್ವಸಿದ್ಧಾಂತಗಳನ್ನು ಆರಾಧನ ನೆಲೆಯಲ್ಲಿ ಪರಿಭಾವಿಸಲಾಗಿದೆ. ದೈವದತ್ತ ಸ್ವರೂಪವೆಂಬಂತೆ ಈ ಪ್ರಕಾರಗಳಲ್ಲಿ ಪ್ರತಿನಿಧಿಸಿದೆ.

♦♦♦

ಅಧ್ಯಾಯ : ಎಂಟು

ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿ : ತಾತ್ವಿಕ ಚಿಂತನೆ

ಅಧ್ಯಾಯ : ಎಂಟು

ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿ : ತಾತ್ವಿಕ ಚಿಂತನೆ

ಗಾಂಧೀಜಿಯವರದ್ದು ಸಂಕೀರ್ಣ ವ್ಯಕ್ತಿತ್ವ. ಅವರು ಬಾಪು ಗಾಂಧಿಯಾಗಿ ಎಷ್ಟು ಸರಳರೋ ಮತ್ತು ಜನಪ್ರಿಯರೋ ಅಷ್ಟೇ ಗಂಭೀರ ಚಿಂತನೆಗೆ ಗ್ರಾಸವಾದವರು. ಗಾಂಧೀಜಿಯವರನ್ನು ಕುರಿತು ಬರೆಯದವರಿಲ್ಲ. ಅವರ ಕುರಿತು ಎಷ್ಟು ಸಾಹಿತ್ಯ ಇದೆಯೆಂದರೆ ಅಷ್ಟು ಜನಪ್ರಿಯತೆಯನ್ನು ಅವರ ಕುರಿತ ಬರವಣಿಗೆಗಳೇ ದಾಖಲೀಕರಿಸಿವೆ. ಹಾಗೆಂದು ಅಷ್ಟು ಸುಲಭಕ್ಕೆ ಸಿಗುವ ಚಹರೆ ಅವರದ್ದಲ್ಲ. ಅರ್ಥವಾಗುತ್ತಲೇ ಇಲ್ಲವಾಗುವ, ಇಲ್ಲವಾಗುತ್ತಲೇ ಪ್ರತಿಯೊಬ್ಬರ ಲೇಖನಿಗೂ ಸಿಗುವಷ್ಟು ಆಪ್ತರು. ಹಾಗೆಯೇ ವೈಚಾರಿಕತೆಯನ್ನು ಬಯಸುವವರು. ಹೀಗಿರುವ ಗಾಂಧೀಜಿಯವರನ್ನು ಕುರಿತ ತಾತ್ವೀಕರಣ ಸ್ವರೂಪ ಅಷ್ಟು ಸುಲಭ ಸಾಧ್ಯವಲ್ಲ.

ಪ್ರಸ್ತುತ ಕನ್ನಡ ಸಾಹಿತ್ಯ ಸಂದರ್ಭದಲ್ಲೂ ಗಾಂಧೀಜಿಯವರ ಬಗೆಗೆ ಬಂದಿರುವ ಸಾಹಿತ್ಯ ಹೇರಳ. ಅಧ್ಯಯನದ ಇತಿಮಿತಿಗಳಲ್ಲಿಯೂ ಹೇಳುವುದಾದರೆ ಬಂದಿರುವ ಕೃತಿಗಳಲ್ಲಿ ಮೇಲ್ನೋಟಕ್ಕೆ ಎಲ್ಲವೂ ಸರಳ ಸುಲಭ ಯೋಜನಾಬದ್ಧ ಬರವಣಿಗೆ ಎನಿಸಿದರೂ ಕೂಡ ಗ್ರಹಿಕೆ ಮತ್ತು ಅಭಿವ್ಯಕ್ತಿಯಲ್ಲಿ ಸಾಕಷ್ಟು Vacum(ಶೂನ್ಯ ಪ್ರದೇಶ)ವಿದೆ ಎನಿಸುತ್ತದೆ. ಕಾರಣವೆಂದರೆ ಕವಿ/ಲೇಖಕರುಗಳು ಸಮಕಾಲೀನ ಸಂದರ್ಭವನ್ನು ಗ್ರಹಿಸುವುದಕ್ಕೂ ಅದರ ಅಭಿವ್ಯಕ್ತಿಗೂ ಸಾಕಷ್ಟು (Space) ಅವಕಾಶವಿದೆ. ಕೆಲವರು ಸ್ವಾತಂತ್ರ್ಯ ಅಥವಾ ಗಾಂಧಿಯುಗದವರಾಗಿರಬಹುದು. ಇನ್ನು ಕೆಲವರು ಘಟನಾವಳಿಗಳು ಮತ್ತು ಸಂದರ್ಭಗಳ ಮೂಲಕ ಪುನರಚಿಸಿಕೊಳ್ಳಬಹುದು. ಸಾಮಾನ್ಯವಾಗಿ ಕವಿ/ಲೇಖಕ ಲೋಕಗ್ರಹಿಕೆಯಂತೆಯೇ ಅಭಿವ್ಯಕ್ತಿಸುವನಾದರೂ ಚಾರಿತ್ರಿಕ ವ್ಯಕ್ತಿಯೋರ್ವನನ್ನು ಕಣ್ಣೆದುರಿಗೆ ಕಟ್ಟಿದಂತೆ ಗ್ರಹಿಸುವ ಇಲ್ಲವೇ ಅಭಿವ್ಯಕ್ತಿಸುವಲ್ಲಿ ಕಾಲ್ಪನಿಕತೆಗೆ ಅವಕಾಶವಿರುತ್ತದೆ. ಅದರಲ್ಲೂ ಗಾಂಧೀಜಿಯವರನಂತೂ ಹೀಗೆ ಇದ್ದರು, ಅವರೆಂದರೆ ಹೀಗೆ ಎಂದು ಹೇಳುವುದು ಬಹುಶಃ ಸಮಕಾಲೀನರಿಗೂ ಕಷ್ಟಸಾಧ್ಯ.

ಹೀಗಿರುವಲ್ಲಿಯೂ ಅವರನ್ನು ಹಿಡಿದಿಡುವ ಪ್ರಯತ್ನ ಮಾಡಿದವರು ಸಾಕಷ್ಟು ಜನ. ಹಾಗೇ ಹಿಡಿದಿಡುವಲ್ಲಿ ಅವರ ಉದ್ದೇಶಗಳು ಅನೇಕ. ರಾಷ್ಟ್ರೀಯತೆಯ ಪ್ರಭಾವ, ವಸಾಹತುಶಾಹಿ ಆಡಳಿತ ಮತ್ತು ಶಿಕ್ಷಣ. ಅವರ ಕುರಿತ ಪೂಜ್ಯಭಾವ, ಅವರನ್ನು ಹುತಾತ್ಮರನ್ನಾಗಿಯೋ

ಮಹಾತ್ಮರನ್ನಾಗಿಯೋ ಚಿತ್ರಿಸುವ ಹಂಬಲ. ಅವರನ್ನು ಕುರಿತು ಬರೆಯುವವರು ಎಂತಹವರು ಎಂಬ ಯುಗಧರ್ಮ ಪ್ರಜ್ಞೆ ಅವರೊಬ್ಬ ದೇವಮಾನವರಾಗಿರುವುದು ಅಥವಾ ಅವರನ್ನು ಬಲ್ಲವರು ಅಥವಾ ಓದಿ ತಿಳಿದವರು ಅವರನ್ನು ಕುರಿತು ಇಡೀ ಜಗತ್ತಿಗೆ ಸಾರುವ ತುಡಿತ ಹೊಂದಿರುವವರು.

ಇದಕ್ಕಾಗಿ ಅವರು ಆಯ್ದುಕೊಂಡ ಮಾರ್ಗ ಸಾಹಿತ್ಯ ಸೃಜನೆ. ಅದು ಸೃಜನಾತ್ಮಕವೋ/ಸೃಜನೇತರವೋ ಅದು ಅವರ ಆಯ್ಕೆ. ಒಟ್ಟಿನಲ್ಲಿ ಗಾಂಧೀಜಿಯವರನ್ನು ಕುರಿತು ತಮ್ಮ ಅನಿಸಿಕೆ/ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಮಾರ್ಗ. ಹಾಗಾಗಿ ಗಾಂಧೀಜಿಯವರ ಕುರಿತು ಸಾಹಿತ್ಯ ಅಪಾರ. ಈ ಪ್ರಕ್ರಿಯೆಯಲ್ಲಿ ಇದನ್ನು ಅರ್ಥೈಸಿಕೊಳ್ಳುವುದು ಹೇಗೆ ಎಂಬ ಬಗೆಯಾಗಿ ಅಧ್ಯಯನದ ಇತಿಮಿತಿಗಳನ್ವಯ ಪಂಥೀಯ ಪರಿಕಲ್ಪನೆಯಲ್ಲಿ ಅಧ್ಯಯನವನ್ನು ಹೊಂದಿಸಿ ನಡೆಸಲಾಯಿತು. ಬೃಹತ್ ವಿರಾಡ್ರೂಪದ ಗಾಂಧೀಜಿಯವರನ್ನು ಸಣ್ಣ ಚೌಕಾಕಾರದ ಮನೆಯಲ್ಲಿ ಹೊಂದಿಸಿಡುವುದು ಹರಸಾಹಸ. ಆದರೆ ಅಧ್ಯಯನದ ಈ ಇತಿಮಿತಿಗಳೇ ಗಾಂಧೀಜಿಯವರನ್ನು ಕುರಿತ ಅಚ್ಚುಕಟ್ಟು ಅಧ್ಯಯನಕ್ಕೆ ದಾರಿಯಾಗಿದೆ. ಬಹುಶಃ ವಿರೂಡ್ರಾಪದಲ್ಲಿ ಗೊತ್ತಾಗದ ಹಲವಾರು ಅಂಶಗಳನ್ನು ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಹೆಕ್ಕಿ ತೆಗೆಯಲು ಇದರಿಂದ ಸಾಧ್ಯ. ಒಂದೊಮ್ಮೆ ಪಾದರಸದಂತಹ ಅವರ ವ್ಯಕ್ತಿತ್ವಕ್ಕೂ ಇದು ಸರಿಯಾದ ಮಾರ್ಗ. ಇಷ್ಟೆಲ್ಲ ಲೇಖಕರಿಗೂ ಗಾಂಧೀಜಿಯವರನ್ನು ಅರ್ಥೈಸಿಕೊಂಡು ಬರೆಯಲು ಅವರ ಪಾದರಸದ ವ್ಯಕ್ತಿತ್ವ ಕಾರಣ. ಆ ಕಾರಣದಿಂದ ಗಾಂಧೀಜಿಯವರನ್ನು ಅಭಿವ್ಯಕ್ತಿಸಿದವರೇ ಹೆಚ್ಚು. ಅಂದರೆ ಗಾಂಧೀಜಿಯವರನ್ನು ಗಾಂಧೀಜಿಯಾಗಿ ಮಾತ್ರ ಗ್ರಹಿಸಲು ಸಾಧ್ಯವಾಗಿದೆ. ಅಭಿವ್ಯಕ್ತಿಯಲ್ಲಿ ಯಾವುದೋ ಒಂದು ವಿಶಿಷ್ಟ ಪಂಥ/ಧೋರಣೆಯನ್ನು ಎಲ್ಲರಿಗೂ, ಎಲ್ಲ ಕಾಲಕ್ಕೂ ಅಭಿವ್ಯಕ್ತಿಸಲು ಸಾಧ್ಯವಾಗಲಿಲ್ಲ. ಆ ಪಂಥೀಯ ಪರಿಕಲ್ಪನೆಗಳನ್ನು ನೂಕಿ ಹೊರಬಂದವರೆಷ್ಟು ಜನ ಇದೊಂದು ಬಗೆಯ ವಿಚಾರವಾದರೆ ಇನ್ನೊಂದು ಮಹತ್ವದ ಅಂಶವೆಂದರೆ ಎಷ್ಟೋ ಪ್ರಮುಖ ಲೇಖಕರು/ಕವಿಗಳು ಅವರು ಯಾವುದೇ ಪಂಥದಲ್ಲಿ ಗುರುತಿಸಿಕೊಂಡಿದ್ದರೂ ಕೂಡ ಕಾಲಾತೀತವಾಗಿ ಅಥವಾ ಎಲ್ಲ ಕಾಲಕ್ಕೂ ಸಲ್ಲುವವರಾಗಿ ಪಂಥೀಯ ಚಿಂತನೆಯ ನೆಲೆಯನನೇ ಸೀಳಿ ಹೊರಬಂದಿದ್ದಾರೆ. ಇನ್ನೊಂದರ್ಥದಲ್ಲಿ ಗಾಂಧೀಜಿ ಪ್ರಭಾವ-ಪ್ರೇರಣೆಗಳು ಈ ರೀತಿಗೆ ಸ್ಫೂರ್ತಿಯಾಗಿರಲು ಸಾಕು. ಆಶ್ಚರ್ಯವೆಂದರೆ ಗಾಂಧೀಜಿಯವರು ಇಲ್ಲವಾದ ನಂತರದಲ್ಲೂ ಅವರು ಕವಿ/ಲೇಖಕರಿಗೆ ಪ್ರಭಾವ ಒದಗಿಸುತ್ತಿರುವುದು ಮತ್ತು ಕಾಲಕಾಲಕ್ಕೆ ಕವಿ/ಲೇಖಕರುಗಳಲ್ಲಿ ದೃಷ್ಟಿಕೋನ ಬದಲಾವಣೆಯಾಗುತ್ತಿರುವುದು ಗಾಂಧೀಜಿ ಮತ್ತು ಕವಿ/ಲೇಖಕರುಗಳಲ್ಲಿನ ಸಮಕಾಲೀನ ಧೋರಣೆಗಳು ಸಾರ್ವಕಾಲೀನ ಧೋರಣೆಗಳಾಗಿ ಮಾರ್ಪಾಡಾಗುತ್ತಿರುವುದರ ದ್ಯೋತಕವಾಗಿರಬಹುದು.

ಪ್ರಕಾರದ ದೃಷ್ಟಿಕೋನದಿಂದ ಈ ಚರ್ಚೆಯನ್ನು ಬೆಳೆಸುವುದಾದರೆ ಕಾವ್ಯದಲ್ಲಿ ಗಾಂಧೀಜಿಯವರನ್ನು ಕುರಿತು ಸಾಹಿತ್ಯಕೃಷಿ ಸಾಕಷ್ಟಿದೆ. ಬಹುಶಃ ಇಂದಿಗೂ ಗಾಂಧಿ ಜಯಂತಿ ಇತ್ಯಾದಿ ಕಾರ್ಯಕ್ರಮಗಳಲ್ಲಿ ಕಾವ್ಯ ರಚನೆ ಮಾತ್ರ ಸಾಧ್ಯವಿದೆ. ಕಾರಣ ಇಷ್ಟೇ ಕಾವ್ಯ ನಮ್ಮ

ದೇಸೀ ತಳಿ. ಕಾವ್ಯ ಬಹುತೇಕ ಜನರಿಗೆ ಕೈಗೆಟಕುವ ಸರಳ ಮಾಧ್ಯಮ. ಅರಿವಿಗೂ ಇಂದಿಗೂ ಎಂದೆಂದಿಗೂ ಚಿರಂತನ ಹಾಗೂ ಚಿರನೂತನವಾಗಿರುವ ಪ್ರಕಾರ. ಸಮಕಾಲೀನ ಕಾವ್ಯ, ವಿಮರ್ಶೆಗಳು ಗುರುತಿಸಿರುವಂತೆ ಯಾವುದೇ ಪಂಥವನ್ನು ಸ್ವೀಕರಿಸಿ ಅಭಿವ್ಯಕ್ತಿಸಬಹುದಾದ ಮಾದರಿ ಎನ್ನುವಂತೆ ಕಾವ್ಯ ಸ್ವರೂಪವಿದೆ. ಇನ್ನು ಸಣ್ಣಕತೆ ಕಾದಂಬರಿಗಳದ್ದು ನಂತರದ ಸ್ಥಾನ. ಸಣ್ಣಕತೆಗಿಂತಲೂ ಕಾದಂಬರಿ ಸಮಯ, ತಾಳ್ಮೆ ಎಲ್ಲವನ್ನು ನಿರೀಕ್ಷಿಸುವಂತಹದ್ದು. ಅದರಲ್ಲೂ ಗಾಂಧೀಜಿಯ ನೇರ ಪ್ರವೇಶವೇ ಅಥವಾ ಪರೋಕ್ಷವೇ ಎಂಬುದಿಲ್ಲಿ ಚರ್ಚಿತ ವಿಷಯ. ಬಹುತೇಕ ಕಥೆ-ಕಾದಂಬರಿಗಳಲ್ಲಿ ಗಾಂಧೀಜಿಯವರದ್ದು ನೇರ ಪ್ರವೇಶವಿಲ್ಲ. ಮತ್ತೆ ಕೆಲವೆಡೆಗಳಲ್ಲಿ ಗಾಂಧೀಜಿಯವರ ಪ್ರತಿನಿಧೀಕರಣ ತೀರ ಕಡಿಮೆ ಪ್ರಮಾಣದ್ದು. ಮಿಕ್ಕೆಲ್ಲ ಸ್ವಾತಂತ್ರ್ಯ ಚಳುವಳಿ ಇತ್ಯಾದಿಗಳ ಭರಾಟೆ. ನಾಟಕಗಳಲ್ಲಿ ಗಾಂಧೀಜಿಯವರ ಪ್ರತಿನಿಧೀಕರಣ ತುಸು ಕಷ್ಟವೇ. ನಾಟಕದ ಪಾತ್ರಧಾರಿಯಿಂದ ಹಿಡಿದು ಈ ಚರ್ಚೆ ಆರಂಭಗೊಳ್ಳುತ್ತದೆ. ಅಷ್ಟೇ ಏಕೆ ನಾಟಕದಲ್ಲಿ ವೇಷ ಹಾಕುವವರು ನಿಜವಾಗಿಯೂ ಗಾಂಧಿವಾದಿಯೇ ಎಂಬುದು. ಲೇಖಕರೊಬ್ಬರು ಇದನ್ನೆಲ್ಲ ಯೋಚಿಸದೇ ಬರೆಯಲು ಸಾಧ್ಯವಿಲ್ಲ. ಕಾರಣ ನಾಟಕ ದೃಶ್ಯ ಮಾಧ್ಯಮ ಪಠ್ಯವಾಗಿ ಅದು ಪ್ರಚಾರ ಪಡೆಯುವುದಕ್ಕಿಂತ ದೃಶ್ಯವಾಗಿ ಕಣ್ಮನ ಸೆಳೆಯುವುದೇ ಹೆಚ್ಚು. ಅಲ್ಲದೇ ಇದು ಮನೋರಂಜನಾ ಮಾಧ್ಯಮವಾಗಿರುವುದರಿಂದ ಗಾಂಧೀಜಿಯವರ ಪಾತ್ರ ಪೋಷಣೆ ಹೇಗೆ ಮತ್ತು ಎಷ್ಟರಮಟ್ಟಿಗೆ ಸಾಧ್ಯವಾಗಿದೆ. ಅಲ್ಲದೇ ರಾಷ್ಟ್ರೀಯತೆ ಮತ್ತು ವಸಾಹತುಶಾಹಿ ಆಡಳಿತಗಳು ತಕ್ಕಮಟ್ಟಿಗೆ ಇದನ್ನು ನಿಯಂತ್ರಿಸಿವೆ. ಏಕಕಾಲಕ್ಕೆ ಗಾಂಭೀರ್ಯ ಸ್ವರೂಪದ ಚಿಂತನೆಯನ್ನು ರಾಷ್ಟ್ರಾಭಿಮಾನ, ರಾಷ್ಟ್ರಭಕ್ತಿಗಳನ್ನು ಸಂವೇದನಾ ಪೂರ್ವಕವಾಗಿ ಅನಕ್ಷರಸ್ಥ ಮತ್ತು ಅಕ್ಷರಸ್ಥ ಇಬ್ಬರಿಗೂ ರಸಭಂಗವಾಗದಂತೆ ನಿವೇದಿಸುವ ಜವಾಬ್ದಾರಿ ನಾಟಕಕ್ಕಿದೆ. ಈ ಪ್ರಕಾರದ ಹೆಚ್ಚುಗಾರಿಕೆಯೆಂದರೆ ಅನಕ್ಷರಸ್ಥ ಸಮುದಾಯವು ಇದರ ಭಾಗವಾಗಿರುವುದು. ಅವರಿಗೂ ಮನಮುಟ್ಟುವಂತೆ ಹಾಗೂ ಪಂಡಿತರಿಗೆ ರಸಪೋಷಣೆಯಾಗುವಂತೆ ನಾಟಕಗಳನ್ನು ರಚಿಸುವುದು ಕಷ್ಟದಾಯಕ. ಹಾಗಾಗಿ ನಾಟಕ ಪ್ರಕಾರದಲ್ಲಿ ಇಳುವರಿ ಕಮ್ಮಿ ಎಂದೇ ಹೇಳಬಹುದಾಗಿದೆ. ವಸಾಹತುಶಾಹಿ ಆಡಳಿತದಲ್ಲಿ ಪ್ರದರ್ಶನ ಸಾಧ್ಯತೆಯೂ ತೀರ ಕಡಿಮೆ. ವ್ಯವಸ್ಥೆಯ ವಿರುದ್ಧದ ಜನಸಂಘಟನಾ ಮಾರ್ಗವಾಗಿ/ಮಾಧ್ಯಮವಾಗಿ ಗುರುತಿಸಿಕೊಂಡರೂ ಕೂಡ ಗಾಂಧೀಜಿಯವರ ಚಿತ್ರಣದಲ್ಲಿ ಪ್ರಮಾಣ ಕಡಿಮೆ ಎನ್ನಬಹುದು.

ಪಂಥೀಯ ನೆಲೆಯಲ್ಲಿ ಇಡೀ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಪಂಥ ಪರಿಕಲ್ಪನೆಯಲ್ಲಿ ಗಾಂಧೀಜಿಯವರ ಪ್ರತಿನಿಧೀಕರಣದ ಸ್ವರೂಪ ಹೀಗಿದೆ. ನವೋದಯ ಕಾಲಘಟ್ಟದಲ್ಲಿ ರಾಷ್ಟ್ರೀಯತೆ, ಗಾಂಧಿಯುಗ ಮತ್ತು ಸ್ವಾತಂತ್ರ್ಯ ಸಂದರ್ಭ ಇರುವ ಹಿನ್ನೆಲೆಯಲ್ಲಿ ಸಹಜವಾಗಿಯೇ ಪೂಜ್ಯಭಾವ/ ಆರಾಧಕಭಾವ ಕಂಡುಬಂದಿದೆ. ಇನ್ನು ಪ್ರಗತಿಶೀಲ ಸಾಹಿತ್ಯದ ಕಾಲಘಟ್ಟದಲ್ಲಿ ಒದಗಿಬಂದ ವಸಾಹತುಶಾಹಿ ಶಿಕ್ಷಣದಿಂದಾಗಿ ಪ್ರಜ್ಞಾವಂತ ವರ್ಗವೊಂದರ ಅನಾವರಣಗೊಂಡಿತು. ಎಲ್ಲವನ್ನು ಇದ್ದಂತೆ ಒಪ್ಪಿಕೊಳ್ಳುವುದಕ್ಕಿಂತ ವಿಚಾರ ಮಾಡಿ ನೋಡುವ ಗುಣಸ್ವಭಾವದಿಂದಾಗಿ

ನವೋದಯದವರಿಗಿಂತ ಕೊಂಚ ಭಿನ್ನವಾಗಿ ಆಲೋಚಿಸುವ ನಿಟ್ಟಿನಲ್ಲಿ ಗಾಂಧೀಜಿಯವರನ್ನು(Role Model) ಆದರ್ಶ ವ್ಯಕ್ತಿತ್ವವಾಗಿ ಸ್ವೀಕರಿಸಿದ ಬಗೆ ಕಂಡುಬರುವುದು. ನವ್ಯದ ಸಂದರ್ಭದಲ್ಲೂ ಗಾಂಧೀಜಿಯವರು ಅಂತರ್ಗತ ನಿಲುವಿನಲ್ಲಿ ಒಪ್ಪಿತ ಸತ್ಯವಾದರೂ ಸ್ವಾತಂತ್ರ್ಯೋತ್ತರ ಸಂದರ್ಭವಾದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ, ಗಾಂಧಿತತ್ವ ಚಿಂತನೆಗಳನ್ನು ಕುರಿತ ಭ್ರಮನಿರಸನ ವ್ಯಕ್ತವಾಗಿದೆ. ಇನ್ನು ದಲಿತ-ಬಂಡಾಯ ಸಂದರ್ಭದಲ್ಲಿ ಗಾಂಧೀಜಿಯವರನ್ನು ಕುರಿತು ನೇರಪ್ರಶ್ನೆ ಮುಖಾಮುಖಿ ಕಂಡುಬಂದಿದೆ. ಮಹಿಳಾ ಬರೆಹಗಳಲ್ಲಿ ಒಂದು ಹೊಸ ಸಂವೇದನೆ, ಪ್ರಯೋಗಶೀಲತೆ ಕಂಡುಬರುತ್ತವೆ. ಆಕರಗಳ ಇತಿಮಿತಿಯ ಹಿನ್ನೆಲೆಯಲ್ಲಿಯೇ ಹೇಳುವುದಾದರೂ ಒಬ್ಬ ಲೇಖಕಿ ಕಸ್ತೂರಬಾ ಪರವಾಗಿ ನಿಂತು ಗಾಂಧಿಯನ್ನು ವಿಮರ್ಶಿಸುತ್ತಾರೆ. ಮಿಕ್ಕಂತೆ ಗಾಂಧೀಜಿ ಒಪ್ಪಿತ ಸತ್ಯವೇ ಅಲ್ಲದೇ ಗಾಂಧೀಜಿಯ ಬಗೆಗೆ ಅವರ ತತ್ವಾನುಸರಣಿಯ ಸಾಧ್ಯಾಸಾಧ್ಯತೆಗಳ ಬಗೆಗೆ ತಕರಾರೂ ಇದೆ. ಇನ್ನು ಪ್ರಬಂಧ, ಲೇಖನ ಇತ್ಯಾದಿಗಳಲ್ಲಿ ಗಾಂಧೀಜಿಯವರ ತತ್ವಾದರ್ಶಗಳ ಆನ್ವಯಿಕತೆಯ ಚರ್ಚೆಯಿದೆ. ಶಿಶುಸಾಹಿತ್ಯದಲ್ಲಿ ಒಮ್ಮೆಲೇ ಗಾಂಧೀಜಿ ಬಾಪು ಆದ ವಿವರಗಳಿವೆ.

ಕನ್ನಡ ಸಾಹಿತ್ಯದ ಮೇಲೆ ಗಾಂಧೀಜಿಯವರ ಪ್ರಭಾವ ಎಂದರೆ ಮುಖ್ಯವಾಗಿ ಅದರ ಮೇಲೆ ಅವರ ತತ್ವಚಿಂತನೆ ಆಲೋಚನೆಗಳ ಪ್ರಭಾವ ಎಂದರ್ಥ. ಗಾಂಧೀಜಿಯವರ ವಿಚಾರಸರಣಿಗಳಿಂದ ಕನ್ನಡ ಸಾಹಿತ್ಯ ಗಣನೀಯ ಪ್ರಮಾಣದಲ್ಲಿ ಸೃಷ್ಟಿಯಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಪುನರ್‌ರಚನೆ, ಗ್ರಾಮೀಣ ಜೀವನ, ಸ್ತ್ರೀಯರ ಉದ್ಧಾರ, ಮಧ್ಯಪಾನ, ಅಸ್ಪೃಶ್ಯತೆ ಮತ್ತು ಜಾತೀಯತೆಗಳಂತಹ ದುಷ್ಟಪದ್ಧತಿಗಳ ನಿವಾರಣೆ ಮೊದಲಾದವುಗಳ ಬಗ್ಗೆ ಕನ್ನಡ ಲೇಖಕರು ಹೊಸ ಉತ್ಸಾಹವನ್ನು ತೋರಿಸಿದರು. ಈ ಬಗೆಯ ಅನೇಕ ಹೊಸ ವಿಷಯಗಳು ಕನ್ನಡ ಸಾಹಿತ್ಯದಲ್ಲಿ ತಲೆದೋರಿದವು. ಹೊಸವಸ್ತು, ಹೊಸದೃಷ್ಟಿಗಳಿಂದ ಗಾಂಧೀಜಿಯವರ ತತ್ವಚಿಂತನೆಗಳನ್ನು ಶ್ರೀಮಂತಗೊಳಿಸಿದವು. ಅಷ್ಟೇ ಅಲ್ಲ ಈ ಬೆಳವಣಿಗೆಗಳಿಂದ ಒಂದು ಬಗೆಯ ಹೊಸಶೈಲಿ (ಸರಳವೂ, ನೇರವೂ, ಅಲಂಕಾರರಹಿತವೂ) ಅನಿವಾರ್ಯವಾಗಿ ಹುಟ್ಟಿಕೊಂಡಿತು. ಕನ್ನಡ ಸಾಹಿತ್ಯ ಇದಕ್ಕೆ ಅಪವಾದವಗಲಿಲ್ಲ.

ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿಯವರನ್ನು ತಾತ್ವಿಕವಾಗಿ ವಿವೇಚಿಸಲು ೫ ಅಂಶಗಳನ್ನು ಈ ಅಧ್ಯಾಯದ ಅನುಕೂಲಕ್ಕಾಗಿ ರೂಪಿಸಿಕೊಳ್ಳಲಾಗಿದೆ. ಅವುಗಳೆಂದರೆ

೧. ಪಂಥೀಯ ಮತ್ತು ಪ್ರಕಾರ

೨. ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ

೩. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ

೪. ಸೃಜನಶೀಲ ಮತ್ತು ಸೃಜನೇತರ

೫. ವ್ಯಕ್ತಿ ಮತ್ತು ಶಕ್ತಿ

೧. ಪಂಥೀಯ ಮತ್ತು ಪ್ರಕಾರ

ಗಾಂಧೀಜಿಯವರದು ಸಂಕೀರ್ಣ ವ್ಯಕ್ತಿತ್ವ. ಆ ಚಹರೆಯನ್ನು ನಿಯಮಿತ ಕಾಲಘಟ್ಟ ತನ್ನದೇ ಅದ ಧೋರಣೆಗಳನ್ನು ಇಟ್ಟುಕೊಂಡು ಪಂಥೀಯ ನಿಲುವಿನಲ್ಲಿ ಗಾಂಧೀಜಿ ಅವರನ್ನು ಹಿಡಿದಿಡುವುದು ಮತ್ತು ನಿರ್ವಚಿಸುವುದು ಕಷ್ಟ. ಪಂಥೀಯವಾಗಿ ಉಳಿಯದ ಲೇಖಕರನ್ನು ಸಮನ್ವಯವಾಗಿ ವಿವೇಚಿಸಲಾಗಿದೆ. ಪ್ರಕಾರಕೇಂದ್ರಿತ ನೆಲೆಯಲ್ಲಿಯೂ ಗಾಂಧಿಯನ್ನು ಅರ್ಥೈಸಿಕೊಳ್ಳುವುದು ಸುಲಭವಿಲ್ಲ. ಆದರೂ ಗಾಂಧೀಜಿಯವರ ಬಗ್ಗೆ ಸಾಕಷ್ಟು ಕಾವ್ಯರಚನೆಯಾಗಿದೆ. ಕಾರಣ ಕಾವ್ಯ ಎಲ್ಲಾ ವರ್ಗದ ಲೇಖಕರಿಗೆ ಕೈಗೆಟುಕುವುದರಿಂದಿರಬಹುದು. ಗದ್ಯ ಪ್ರಕಾರದಲ್ಲಿ ಅಂದರೆ ಕತೆ, ಕಾದಂಬರಿ ಹಾಗೂ ನಾಟಕಗಳಲ್ಲಿ ಕಾವ್ಯಗಳಷ್ಟು ವಿಪುಲತೆ ಕಾಣಬರುವುದಿಲ್ಲ. ಕಾದಂಬರಿ ದೀರ್ಘ ಕಥಾ ಹಂದರದ ಬರವಣಿಗೆಯನ್ನು ನಿರೀಕ್ಷಿಸುತ್ತದೆ. ನಾಟಕ ಪ್ರಕಾರ ಸಾಹಿತ್ಯ, ಸಂಗೀತ ಮತ್ತು ಪ್ರದರ್ಶನಗಳನ್ನು ಒಳಗೊಂಡಿರುವುದರಿಂದ ವಿಶೇಷ ಪ್ರತಿಭೆ ಬೇಕಾಗುತ್ತದೆ. ಕನ್ನಡದ ಕತೆ, ಕಾದಂಬರಿ ಮತ್ತು ನಾಟಕಗಳಲ್ಲಿ ಗಾಂಧೀಜಿಯವರನ್ನು ವರ್ಣನೆಯ ಭಾಗವಾಗಿ ಪಾತ್ರದ ಮೂಲಕ ಪ್ರತಿಪಾದಿಸಿರುವುದು ತೀರಾ ವಿರಳವನ್ನಬಹುದು.

“ಭಾರತೀಯ ಭಾಷೆಗಳ ಭವಿಷ್ಯದ ಬಗ್ಗೆ ಉತ್ಸಾಹ, ಜೊತೆಗೆ ಕ್ರಾಂತಿಕಾರಕ ಇಂಗ್ಲಿಷ್ ಸಾಹಿತ್ಯದ ಪ್ರಭಾವ ಎರಡೂ ಕೂಡಿ ನಮ್ಮ ನವೋದಯ ಕಾಲದ ಸಾಹಿತ್ಯ ಗಾಂಧಿಯುಗದ ಆಸಕ್ತಿಗಳನ್ನು ತನ್ನದೇ ಆದ ರೀತಿಯಲ್ಲಿ ಅಳವಡಿಸಿಕೊಂಡಿತು. ಆದರೆ ಗಾಂಧಿಯುಗ ನಮ್ಮ ಸಾಹಿತ್ಯ ಸನ್ನಿವೇಶದ ಬದಲಾವಣೆಗೆ ಪ್ರೇರಕಶಕ್ತಿಯಾಗಿ ಕೆಲಸ ಮಾಡಿತು ಎಂದು ನಾವು ಹೇಳುವಾಗ ಈ ಪ್ರೇರಣೆ ಸರಳವೂ ನೇರವೂ ಆದದ್ದಲ್ಲವೆಂಬುದನ್ನೂ ಗಮನಿಸಬೇಕೆಂದು ನನ್ನ ಕೋರಿಕೆ”(ದಂಡಪ್ಪ.ಎಚ್. ಮತ್ತು ಇತರರು(ಸಂ); ೨೦೦೬; ಪು. ೩೨೭) ಎಂದು ಯು.ಆರ್. ಅನಂತಮೂರ್ತಿ ಅವರು ವ್ಯಕ್ತಪಡಿಸಿದ್ದಾರೆ. ಇದರಂತೆ ಕನ್ನಡ ಸಾಹಿತ್ಯದಲ್ಲಿ ಗಾಂಧೀಜಿಯವರ ತತ್ವಚಿಂತನೆಗಳು ತೀಕ್ಷ್ಣವಾಗಿ ಬೆರೆತುಹೋಗಿರುವುದನ್ನು ಮನಗಾಣಿಸಿದ್ದಾರೆ.

“ನವೋದಯ ಸಾಹಿತ್ಯ ಸಂದರ್ಭದಲ್ಲಿ ಕಾವ್ಯದ ಮೇಲೆ ಗಾಢ ಪ್ರಭಾವ ಬೀರಿದ ರವೀಂದ್ರನಾಥ ಠಾಕೂರ, ಸಾಮಾಜಿಕ ಮತ್ತು ರಾಜಕೀಯ ಆಲೋಚನೆಗಳಿಗೆ ಹೊಸ ಆಯಾಮ ತಂದುಕೊಟ್ಟ ಮಹಾತ್ಮಾಗಾಂಧಿ, ಆಧ್ಯಾತ್ಮಿಕ, ಅನುಭಾವಿಕ ಚಿಂತನೆ ಹಾಗೂ ಸಾಧನೆಗಳಿಗೆ ಬೆಳಕು ನೀಡಿದ ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಶ್ರೀ ಅರವಿಂದರು ಕನ್ನಡ ಸಾಹಿತ್ಯಕ್ಕೆ ಹೊಸತನವನ್ನು ತಂದುಕೊಡಲು ಕಾರಣಕರ್ತರಾಗಿದ್ದಾರೆ”(ಬಸವರಾಜ ಸಾದರ; ೨೦೦೨; ಪು. ೪೧) ಎಂದು ಗುರುಲಿಂಗ ಕಾಪಸೆ ಅವರು ಅಭಿಪ್ರಾಯಿಸಿದ್ದಾರೆ. ಇದರಂತೆ ಇತರ ಮಹಾತ್ಮರಿಗಿಂತ ಗಾಂಧೀಜಿಯವರ ಸಾಮಾಜಿಕ ಮತ್ತು ರಾಜಕೀಯ ಚಿಂತನೆಗಳು ನವೋದಯ ಕಾವ್ಯದ ಮೇಲೆ ಪ್ರಭಾವ ಬೀರಿರುವುದನ್ನು ಹೇಳಿದ್ದಾರೆ.

ಕಾವ್ಯ ಪ್ರಕಾರದಲ್ಲಿ ಮಾತ್ರ ನೇರವಾಗಿ ಗಾಂಧೀಜಿಯವರನ್ನು ವಸ್ತುವಾಗಿ ಒಳಗೊಂಡಿದೆ. ಗಾಂಧೀಜಿಯವರ ಆಲೋಚನೆ ಮತ್ತು ಕಾರ್ಯಗಳ ಬಗ್ಗೆ ಪ್ರತಿಯೊಬ್ಬ ಕವಿಯ ವೈಯಕ್ತಿಕ

ಮತ್ತು ವ್ಯಕ್ತಿನಿಷ್ಠ ಅನುಕ್ರಿಯೆಗಳು ಮತ್ತು ಪ್ರಕ್ರಿಯೆಗಳು ಈ ಕಾವ್ಯ ಪ್ರಕಾರದಲ್ಲಿ ಅಭಿವ್ಯಕ್ತಿಯನ್ನು ಪಡೆದುಕೊಂಡಿವೆ. ಕಾವ್ಯ ಗಾಂಧೀಜಿಯವರ ತತ್ತ್ವ ಚಿಂತನೆಗಳನ್ನು ತನ್ನದೇ ಆದ ರೀತಿಯಲ್ಲಿ ಅಳವಡಿಸಿಕೊಂಡಿತು. ಕವಿಗಳು ಇವನ್ನು ಕುತೂಹಲಕಾರಿಯಾದ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಪು.ತಿ.ನ. ಅವರ 'ನೆರಳು' ಕವಿತೆಯಲ್ಲಿ ಸ್ವಾತಂತ್ರ್ಯ ಸಮರಕ್ಕೆ ಇಡೀ ದೇಶದ ಎಲ್ಲ ಸಮುದಾಯದ ಜನಗಳನ್ನು ಸಂಘಟಿಸಿದ ನಾಯಕ ವ್ಯಕ್ತಿತ್ವವಾಗಿ ಗಾಂಧಿಯನ್ನು ಪರಿಭಾವಿಸಲಾಗಿದೆ. ಡಿ.ಎಸ್. ಕರ್ಕಿಯವರು 'ದಿವ್ಯಜ್ಯೋತಿ' ಕವನದಲ್ಲಿ ಗಾಂಧಿಯ ವ್ಯಕ್ತಿತ್ವವನ್ನು ಸತ್ಯ, ಪ್ರೇಮ, ಕರುಣೆಯಿಂದ ಕೂಡಿದ ಕಾಮಧೇನುವೆಂದು ಪರಿಭಾವಿಸಿದ್ದಾರೆ. ಗೋವಿಂದ ಪೈ ಅವರು "ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು!" ಕವಿತೆಯಲ್ಲಿ ಸ್ವಾತಂತ್ರ್ಯ ಭಾರತವನ್ನು ಮುನ್ನಡೆಸಿಕೊಂಡು ಹೋಗಲು ನಿನ್ನ ಮಾರ್ಗದರ್ಶನ ಅತ್ಯಗತ್ಯವೆಂದು ಪೂಜ್ಯತೆಯಿಂದ ಮಹಾತ್ಮನೆಂದು ನೆನೆದಿದ್ದಾರೆ. ಕುವೆಂಪು 'ಸಭ್ಯತಾದೇವತೆ'ಯೆಂದು ಇಕ್ಷು ಗಂಗೋತ್ರಿಯೊಳಗೆ ಕರೆದಿದ್ದಾರೆ. ಕೆ.ಎಸ್. ನರಸಿಂಹಸ್ವಾಮಿ ಅವರು 'ಗಾಂಧೀಸ್ತವನ' ಕವಿತೆಯಲ್ಲಿ "ನಿನ್ನ ಹೆಸರಿಡಬಹುದು ಬೀದಿ ಬೀದಿಗೆ ಸುಲಭ; ನಿನ್ನಂತೆ ಬದುಕುವುದು ದುರ್ಲಭ. ನಿನ್ನ ಹೆಸರೆತ್ತಿದರೆ, ನಿನ್ನ ಮಾತಾಡಿದರೆ ನಿನ್ನ ವೈರಿಗೆ ಕೂಡ ಲಾಭ" ಎಂದು ಪ್ರತಿಪಾದಿಸಿದ್ದಾರೆ. ಗಾಂಧಿಯನ್ನು ಕುರಿತು ಮಾತಾಡಬಹುದು ಆದರೆ ಅವರಂತೆ ಬದುಕುವುದು ಕಷ್ಟ.

ಪ್ರಗತಿಶೀಲ ಕಾಲದ ಕಾವ್ಯ ಗಾಂಧಿಯವರನ್ನು ಆದರ್ಶೀಕೃತ ಭಾವದಿಂದ ವ್ಯಕ್ತಿಗಿಂತ ವ್ಯಕ್ತಿತ್ವವಾಗಿ, ಶಕ್ತಿಯಾಗಿ ನೋಡಿದ್ದೇ ಹೆಚ್ಚು. ಯಾಕೆಂದರೆ ಈ ಸಾಹಿತ್ಯ ನವೋದಯ ಸಾಹಿತ್ಯದಂತೆ ಗಾಂಧಿಯುಗದಲ್ಲಿ ಹುಟ್ಟಿಕೊಂಡಿದ್ದು, ಗಾಂಧಿಯವರನ್ನು ತುಂಬಾ ಹತ್ತಿರದಿಂದ ಕಂಡಂತೆ ಪರಿಭಾವಿಸಲಾಗಿದೆ. ಪ್ರಗತಿಶೀಲ ಕಾಲಘಟ್ಟದ ಕವಿಗಳು ಗಾಂಧಿಯ ವ್ಯಕ್ತಿತ್ವ ಸಂಕೀರ್ಣತೆಯಿಂದ ಕೂಡಿದ್ದಾಗಿದೆ ಎಂದು ಪರಿಭಾವಿಸಿದ್ದಾರೆ. ಸು.ರಂ. ಎಕ್ಕುಂಡಿ ಅವರು 'ಗಾಂಧೀಜಿ' ಎಂಬ ಕವಿತೆಯಲ್ಲಿ ನಮ್ಮ ನಾಡನ್ನು ಪರದಾಸ್ಯದಿಂದ ಬಿಡಿಸಿಕೊಳ್ಳುವಲ್ಲಿ ಗಾಂಧೀಜಿ ಪಾತ್ರ ಅನನ್ಯವಾದುದು ಎಂದು ಚಿತ್ರಿಸಿದ್ದಾರೆ. ಗಾಂಧಿಯುಗದಲ್ಲಿದ್ದ ಪ್ರಗತಿಶೀಲ ಕಾಲಘಟ್ಟದ ಕವಿಗಳು ಗಾಂಧಿಯನ್ನು ನೇರವಾಗಿ ಆದರ್ಶೀಯ ನೆಲೆಯಲ್ಲಿ ಪರಿಭಾವಿಸಿದ್ದಾರೆ. ಹೀಗಾಗಿ ಪ್ರಗತಿಶೀಲ ಕವಿಗಳು ಗಾಂಧಿಯನ್ನು ಆದರ್ಶೀಕೃತಭಾವವಾಗಿ ಸ್ವೀಕರಿಸಿ ಪ್ರತಿಪಾದಿಸಿದ್ದಾರೆ.

ನವ್ಯ ಕಾವ್ಯಗಳಲ್ಲಿ ಗಾಂಧೀಜಿಯವರ ಆದರ್ಶತ್ವದ ಕಾಣಿಕೆಯಾಗಿ, ಬಾಹ್ಯರೂಪದಲ್ಲಿ ಅನುಸರಿಸುವ, ವಾಸ್ತವದಲ್ಲಿ ಗಾಂಧಿ ಅಮೂರ್ತವಾಗುವುದನ್ನು ಭ್ರಮನಿರಸನವಾಗಿ ಬಿಂಬಿಸಿದ್ದಾರೆ. ದಲಿತ - ಬಂಡಾಯ ಕಾಲದ ಕಾವ್ಯಗಳಲ್ಲಿ ಗಾಂಧಿಯನ್ನು ಶೋಷಣೆ ದಬ್ಬಾಳಿಕೆಗಳನ್ನು ದಮನಗೊಳಿಸುವ ಶಕ್ತಿಯಾಗಿ, ಕೆಲವರು ಮುಖಾಮುಖಿಗೊಳಿಸಿ ಗಾಂಧಿ ತತ್ವಗಳು ಸಮಕಾಲೀನ ಸಂದರ್ಭದಲ್ಲಿ ಗೌಣವಾಗುತ್ತಿರುವುದನ್ನು ವಿಮರ್ಶಿಸಿದ್ದಾರೆ. ದಲಿತ-ಬಂಡಾಯ ಸಂದರ್ಭದಲ್ಲಿ ಗಾಂಧೀಜಿಯವರನ್ನು ತೀಕ್ಷ್ಣವಾಗಿ ಪ್ರತಿಕ್ರಿಯಿಸಿ, ತರಾಟೆಗೆ ತೆಗೆದುಕೊಂಡಿದ್ದಾರೆ. ಆದರೂ ದಲಿತ ಬಂಡಾಯ ಕಾವ್ಯಗಳಲ್ಲಿ ವ್ಯಂಗ್ಯ ವಿಡಂಬನೆ ಕಂಡುಬಂದರೂ ಸಹ ಗಾಂಧೀಜಿ ಮೇಲಿನ

ಪೂಜ್ಯತೆ ಮಾಸಿ ಹೋಗುವುದಿಲ್ಲ ಎಂದು ಪರಿಭಾವಿಸಿದ್ದಾರೆ. ಮಹಿಳೆಯರೂ ಸಹ ಗಾಂಧೀಯನ್ನು ತಮ್ಮ ಕಾವ್ಯಗಳಲ್ಲಿ ಅತ್ಯಂತ ಆಪ್ತಭಾವದಲ್ಲಿ ಸ್ವೀಕರಿಸಿದ್ದಾರೆ. ಲೇಖಕಿಯರ ಸಂವೇದನೆ ಪುರುಷರಿಗಿಂತ ಭಿನ್ನವಾದದ್ದು. ಅಪ್ಪಾ, ಗಾಂಧಿ ತಾತ ಎಂದು ಅಕ್ಕರೆ, ಅಂತಃಕರಣದ ಭಾವಗಳನ್ನು ಬಿಂಬಿಸಿದ್ದಾರೆ. ಇನ್ನು ಮಹಿಳಾ ಲೇಖಕಿಯೊಬ್ಬರು ಕಸ್ತೂರಬಾ ಅವರನ್ನು ಗಾಂಧೀಜಿ ನಡೆಸಿಕೊಂಡ ಬಗೆಯನ್ನು ಪ್ರತಿಕ್ರಿಯಿಸುತ್ತಾರೆ. ಒಟ್ಟಾರೆ ಕಾವ್ಯ ಪ್ರಕಾರ ಗಾಂಧೀಜಿಯವರನ್ನು ಆಪ್ತಭಾವದಿಂದ ಸ್ವೀಕರಿಸಿ ದೈವಸ್ವರೂಪಿಯಾಗಿ, ಶಕ್ತಿಯಾಗಿ ಒಂದು ಮೌಲ್ಯವಾಗಿ ಪ್ರತಿಪಾದಿಸಿದೆ.

"ದಲಿತ-ಬಂಡಾಯ ಚಳುವಳಿಯನ್ನು ತಮ್ಮ ಹೊಲೆಮಾದಿಗರ ಹಾಡು(೧೯೭೫) ಸಂಕಲನದಿಂದ ಪ್ರಾರಂಭಿಸಿದ ಸಿದ್ಧಲಿಂಗಯ್ಯನವರು ಇತ್ತೀಚಿನ ಮೆರವಣಿಗೆ(೨೦೦೦) ಸಂಕಲನದಲ್ಲಿ ತಮ್ಮ ಮೊದಲಿನ ವೈಚಾರಿಕತೆ ಹಾಗೂ ಕಾವ್ಯ ಸ್ವರೂಪಗಳನ್ನು ವಿಮರ್ಶಾತ್ಮಕವಾಗಿ ನೋಡುತ್ತಾರೆ. ಈ ಸಂಕಲನದ 'ಗಾಂಧಿ' ಎಬ ಕವನದಲ್ಲಿ ತಮ್ಮ ಚಳವಳಿಯ ವೈಚಾರಿಕ ಕೇಂದ್ರವಾಗಿದ್ದ ಅಂಬೇಡ್ಕರ್ ಅವರ ಜಾಗದಲ್ಲಿ ಈಗ ಗಾಂಧೀಜಿ ಅವರನ್ನು ಕಾಣುವ ಪ್ರಯತ್ನವಿದೆ. 'ಮೃಗಬಲವ ಮೆಟ್ಟಿದಿರಿ, ದೇಶದಿಂದಟ್ಟಿದಿರಿ, ಬಿಳಿಯ ಸೂರ್ಯನ ನೀವು ಮುಳುಗಿಸಿದಿರಿ"(ರಾಮಚಂದ್ರನ್.ಸಿ.ಎನ್." ೨೦೧೧; ಪು. ೧೯೪) ಎಂದು ಸಿ.ಎನ್. ರಾಮಚಂದ್ರನ್ ಅವರು ಆಖ್ಯಾನ-ವ್ಯಾಖ್ಯಾನ ಕೃತಿಯಲ್ಲಿ ವಿಮರ್ಶಿಸಿದ್ದಾರೆ. ಈ ಮಾತಿನಿಂದ ಕವಿ ಸಿದ್ಧಲಿಂಗಯ್ಯನವರು(ದಲಿತ ಕವಿಗಳು) ಗಾಂಧೀಜಿಯವರನ್ನು ತಮ್ಮ ಸಾಹಿತ್ಯಗಳಲ್ಲಿ ವಾಸ್ತವತೆಯೊಂದಿಗೆ ಮುಖಾಮುಖಿಯಾಗಿಸಿರುವುದು ಮತ್ತೆ ಗಾಂಧಿ ತತ್ವಚಿಂತನೆಗಳಿಂದ ಪ್ರಭಾವಗೊಂಡಿರುವುದು ತಿಳಿಯುತ್ತದೆ.

ಬೆಟಗೇರಿ ಕೃಷ್ಣಶರ್ಮರ ಸುದರ್ಶನ(೧೯೩೩) ಗಾಂಧೀವಾದದ ವಸ್ತುವನ್ನು ಹೊಂದಿದ್ದು ಗಾಂಧಿಯ ಆದರ್ಶಗಳನ್ನು ವೈಭವೀಕರಿಸಿದ ಮೊದಲ ಕಾದಂಬರಿಯೆನಿಸಿದೆ(ಶಾಮರಾಯ.ತ.ಸು.; ೨೦೦೬; ಪು. ೨೨೨) ಎಂದು ತ.ಸು. ಶಾಮರಾಯರು ಅಭಿಪ್ರಾಯಿಸಿದ್ದಾರೆ. ಹೀಗೆ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಗಾಂಧೀಜಿ ಬರುವುದರಿಂದ ಸ್ವಾತಂತ್ರ್ಯ ಚಳವಳಿಯ ಹಿನ್ನೆಲೆ ಕಾದಂಬರಿಗಳಲ್ಲೂ ಗಾಂಧೀಜಿ ಮತ್ತು ಗಾಂಧಿ ಚಿಂತನೆಗಳು ಮೇಳೈಸಿಕೊಳ್ಳುತ್ತವೆ.

ಕಾದಂಬರಿ, ಸಣ್ಣಕತೆ ಅಥವಾ ನಾಟಕದಲ್ಲಿ ಗಾಂಧೀಜಿಯವರನ್ನು ವರ್ಣಿಸುವುದಾಗಲಿ, ಜೀವಂತ ಪಾತ್ರವೆಂಬಂತೆ ಚಿತ್ರಿಸುವುದಾಗಲೀ ಅತ್ಯಂತ ಕಷ್ಟ ಸಾಧ್ಯವಾಗಿದೆ. ಕತೆಗಾರ, ಕಾದಂಬರಿಕಾರ ಅಥವಾ ನಾಟಕಕಾರನಿಗೆ, ಅದರಲ್ಲೂ ವಿಶೇಷವಾಗಿ ಸಮಕಾಲೀನ ಸಾಹಿತಿಗೆ, ಗಾಂಧೀಜಿಯಂತಹ ಶ್ರೇಷ್ಠ ವ್ಯಕ್ತಿಗೆ ಸರಿಯಾದ ನ್ಯಾಯ ದೊರಕಿಸಿಕೊಡುವುದು ವಾಸ್ತವವಾಗಿ ಅತ್ಯಂತ ಅಸಾಧ್ಯವಾದ ಕಾರ್ಯವಾಗಿ ಪರಿಣಮಿಸುತ್ತದೆ. ಗಾಂಧೀಜಿಯವರೇ ರೂಪಿಸಿದ, ಪ್ರೇರಣೆ ನೀಡಿದ ಅಥವಾ ಪ್ರೋತ್ಸಾಹಿಸಿದ ಚಳುವಳಿಗಳು ಮತ್ತು ಇತರ ಪೂರಕ ಚಟುವಟಿಕೆಗಳನ್ನು ವರ್ಣಿಸುವ ಕಾದಂಬರಿಗಳು, ಕತೆಗಳು ಮತ್ತು ನಾಟಕಗಳು ಕನ್ನಡದಲ್ಲಿವೆ. ಆದರೆ ಅವು ಯಾವುವೂ ಗಾಂಧೀಜಿಯವರ ಜೀವನ ಮತ್ತು ವ್ಯಕ್ತಿತ್ವಗಳ ಪೂರ್ಣ ದರ್ಶನವನ್ನು ನೀಡುವುದಿಲ್ಲ. ಒಂದು ವೇಳೆ ಗಾಂಧೀಜಿ ಕಾಣಿಸಿಕೊಂಡರೂ ಒಂದು ಅಥವಾ ಎರಡು ನಿಮಿಷಗಳವರೆಗೆ, ಅದೂ ಒಂದೋ ಎರಡೋ

ಮಾತನಾಡುವುದಕ್ಕೆ ಮಾತ್ರ. ವರ್ಣರಂಜಿತವಾಗಿ ಸೂಕ್ತ ಪ್ರಾಧಾನ್ಯತೆಯನ್ನು ನೀಡಿ ಗಾಂಧೀಜಿಯವರನ್ನು ಚಿತ್ರಿಸಬೇಕೆಂದರೆ ಲೇಖಕನಿಗೆ ಅವರ ಆತ್ಮೀಯ, ವೈಯಕ್ತಿಕ ಪರಿಚಯ ಇರಬೇಕಾಗುತ್ತದೆ. ಆದರೆ ಇದೇ ಸಾಹಿತ್ಯಕಾರರ ಕೊರತೆ ಅಥವಾ ಮಿತಿಯಾಗಿದೆ ಅಥವಾ ಗಾಂಧೀಜಿಗೆ ಸಾಕಷ್ಟು ಪ್ರಾಧಾನ್ಯತೆಯನ್ನು ಕೊಟ್ಟರೆ ಗಾಂಧೀಯವರ ವ್ಯಕ್ತಿತ್ವದ ಪ್ರತಿಭೆಯೆದುರು ತಮ್ಮ ಕೃತಿಗಳ ಇತರ ಪಾತ್ರಗಳಿಗೆ ಮಂಕು(ಜಡತ್ವ) ಹಿಡಿದಂತಾಗಬಹುದೆಂಬ ಸಮಸ್ಯೆಯನ್ನು ಸಾಹಿತಿಗಳು ಎದುರಿಸಿರಬಹುದು. ಇಂತಹ ಕೊರತೆ ಅಥವಾ ಹಿಂಜರಿಕೆಯ ಫಲವಾಗಿ ಓದುಗರಿಗೆ ದೊರೆಯುವುದು ಕೇವಲ ಗಾಂಧೀಜಿಯವರ ಒಂದು ಬಗೆಯ ನೋಟ ಮಾತ್ರ.

ನವೋದಯ ಸಂದರ್ಭದ ಕಾದಂಬರಿ ಪ್ರಕಾರದಲ್ಲಿ ವಿ.ಎಂ. ಇನಾಂದಾರರು ತಮ್ಮ 'ಮೂರಾಬಟ್ಟೆ' ಕೃತಿಯಲ್ಲಿ ಹೀಗೆ ಚಿತ್ರಿಸಿದ್ದಾರೆ. ಗಾಂಧೀಜಿಯ ಆದರ್ಶ, ತತ್ತ್ವಗಳನ್ನು ಶಾಮಣ್ಣ ಪಾತ್ರದ ಮೂಲಕ ಪ್ರತಿನಿಧಿಸಿದ್ದಾರೆ. ಹಳ್ಳಿಯಲ್ಲಿ ರೈತರಿಗೆ ಹೊಲದಲ್ಲಿ ಕೆಲಸವಿಲ್ಲದಿದ್ದಾಗ ಮನೆಯಲ್ಲಿ ನೂಲಬೇಕು ಎಂದು ಶಾಮಣ್ಣ ಹೇಳುತ್ತಿದ್ದ. ಇದಕ್ಕೆ ರೈತರು "ಇದೇನಪ್ಪಾ ಒಳ್ಳೆ ಸಣ್ಣ ಗಾಂಧೀ ಬಂದ್ಹಾಂಗ ಆಗೇತಿ ಊರಾಗ; ಆತು ಮೂರು ದಿನಾ ಮಾತಾಡಿ ನಾಕನೇ ದಿನಾ ಸುಮ್ಮಗಾಗತಾನ"(ಮೂರಾಬಟ್ಟೆ, ಪು. ೩೭) ಎಂದು ಊರಿನ ಜನ ಪಿಸುಗುಡುತ್ತಾರೆ. ಕಾದಂಬರಿಗಳು ಗಾಂಧೀಜಿಯವರನ್ನು ವ್ಯಕ್ತಿತ್ವವಾಗಿ ಮತ್ತು ಒಂದು ಶಕ್ತಿಯಾಗಿ ಪರಿಭಾವಿಸಿರುವುದನ್ನು ಕಾಣಬಹುದು. ಎಸ್.ಎಲ್. ಭೈರಪ್ಪನವರು 'ದಾಟು' ಕಾದಂಬರಿಯಲ್ಲಿ ಅಸ್ಪೃಶ್ಯತಾ ನಿವಾರಣೆ, ಹರಿಜನರ ದೇವಾಲಯ ಪ್ರವೇಶಗಳಂತಹ ಗಾಂಧೀಜಿಯ ವಿಚಾರಧಾರೆಗಳನ್ನು ಕಾಣಿಸಿದ್ದಾರೆ. ರಂ.ಶ್ರೀ. ಮುಗಳಿ ಅವರು 'ಅನ್ನ' ಕಾದಂಬರಿಯಲ್ಲಿ ಗಾಂಧೀಜಿಯ ಚರಕವನ್ನು ಸ್ವಾವಲಂಬನೆಯ ಸಂಕೇತವಾಗಿ ಚಿತ್ರಿಸಿದ್ದಾರೆ. ಹಾಗಾಗಿ ಈ ಕಾದಂಬರಿ ಗಾಂಧಿಯನ್ನು ಸ್ವಾವಲಂಬನೆಯ ಹರಿಕಾರನೆಂಬಂತೆ ಪರಿಭಾವಿಸಿದೆ. ವ್ಯಾಸರಾಯ ಬಲ್ಲಾಳರ ಹೆಜ್ಜೆ... ಮತ್ತು ಹೇಮಂತಗಾನ ಕಾದಂಬರಿಗಳಲ್ಲಿ ಗಾಂಧೀಜಿಯನ್ನು ದೇಶದ ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸಿಕೊಂಡು ಹೋಗುವ ಆದರ್ಶ ಪುರುಷನಾಗಿ ಪರಿಭಾವಿಸಲಾಗಿದೆ. ಇದೇ ಮಾದರಿಯಲ್ಲಿ ಬಸವರಾಜ ಕಟ್ಟೀಮನಿ ಅವರ 'ಸ್ವಾತಂತ್ರ್ಯದೆಡೆಗೆ', ಮಾಡಿ ಮಡಿದವರು, ಕೋಚೆ ಅವರ 'ಬೇಡಿ ಕಳಚಿತು ದೇಶ ಒಡೆಯಿತು' ವಸುದೇವ ಭೂಪಾಲನಂ ಅವರ ಆಂದೋಲನ, ಅನಕೃ ಅವರ ರಕ್ತತರ್ಪಣ ಮುಂತಾದವು ಗಾಂಧಿಯನ್ನು ಆದರ್ಶೀಯ ನೆಲೆಯಲ್ಲಿ ಪರಿಭಾವಿಸಿ ಅಭಿವ್ಯಕ್ತಿಸಲಾಗಿದೆ. ಕಡಿದಾಳ್ ಮಂಜಪ್ಪನವರು 'ಪಂಜರವಳ್ಳಿಯ ಪಂಜು'ವಿನಲ್ಲಿ ಮೋಹನನ ಪಾತ್ರ, ಶಿವರಾಮ ಕಾರಂತರ 'ಔದಾರ್ಯದ ಉರುಳಲ್ಲಿ'ನ ರಾಧಾಕೃಷ್ಣ ಪಾತ್ರ, ವಿ.ಎಂ. ಇನಾಂದರ್‌ರು 'ವಿಜಯಯಾತ್ರೆ'ಯಲ್ಲಿ 'ವಿಜಯ ಪಾತ್ರ, ಮೂರಾಬಟ್ಟೆಯಲ್ಲಿನ 'ಶಾಮಣ್ಣ' ಹೀಗೆ ಈ ಪಾತ್ರಗಳ ಮೂಲಕ ಗಾಂಧಿಯನ್ನು ಆರಾಧಕಭಾವವಾಗಿ ಪರಿಭಾವಿಸಲಾಗಿದೆ. ಬಾಳಾಸಾಹೇಬ ಲೋಕಾಪುರ ಅವರು 'ಹುತ್ತ' ಕಾದಂಬರಿಯಲ್ಲಿ ಗಾಂಧೀಜಿ ಇಡೀ ಮನುಕುಲದ ಆತ್ಮರೂಪವೆಂಬಂತೆ ಪ್ರತಿಪಾದಿಸಲಾಗಿದೆ. ಎಚ್. ನಾಗವೇಣಿ ಅವರು 'ಗಾಂಧಿ ಬಂದ' ಕಾದಂಬರಿಯಲ್ಲಿ ಗಾಂಧಿಯನ್ನು ಮೌಢ್ಯ

ಸಂಪ್ರದಾಯಗಳನ್ನು ತೊಡೆದು ಹಾಕಿದ, ವಿಚಾರಶೀಲವುಳ್ಳ ಪುರುಷನಾಗಿ, ಬದಲಾವಣೆಯ ಸಂಕೇತವಾಗಿ ಪರಿಭಾವಿಸಲಾಗಿದೆ. ಹೀಗೆ ಗಾಂಧಿಯನ್ನು ಪಾತ್ರಗಳ ಮೂಲಕ ಅವರ ವ್ಯಕ್ತಿತ್ವಕ್ಕೆ ಜೀವತುಂಬಿ, ತತ್ತ್ವಾದರ್ಶಗಳು ಕ್ರಿಯಾಶೀಲವಾಗಿರುವಂತೆ ಕಾದಂಬರಿ(ಸಾಹಿತಿ)ಕಾರರು ಮಾಡಿದ್ದಾರೆ. ಹೀಗೆ ಕಾದಂಬರಿ ಪ್ರಕಾರದಲ್ಲಿ ಗಾಂಧಿಯನ್ನು ಪೂಜ್ಯಭಾವದಿಂದ ಕಾಣುತ್ತಾ ಅವರನ್ನು ಪವಾಡ ಪುರುಷನಾಗಿ, ಸಿದ್ಧಿಸಿದ ಮಹಾ ಮಾನವತವಾದಿಯಾಗಿ, ದೈವಸಂಭೂತನಾಗಿ ಪ್ರತಿಪಾದಿಸಿದ್ದಾರೆ. ಸ್ವಾತಂತ್ರ್ಯೋತ್ತರದ ಸಾಹಿತಿಗಳು ಅದೇ ಪೂಜ್ಯಭಾವದಿಂದಲೇ ಗಾಂಧೀಜಿಯನ್ನು ವಿಮರ್ಶಿಸುತ್ತಾ, ಅವರ ತತ್ತ್ವಾದರ್ಶಗಳಲ್ಲಿ ಸಮಕಾಲೀನ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ.

ಕನ್ನಡ ಸಣ್ಣಕತೆಯ ಸಂದರ್ಭದ ಲೇಖಕರಲ್ಲೂ ಸಹ ಕಾದಂಬರಿಕಾರರ ಸಮಸ್ಯೆ ಅಥವಾ ಧೋರಣೆಗಳೇ ವ್ಯಕ್ತವಾಗುತ್ತವೆ. ಕತೆಗಾರರೂ ಸಹ ಗಾಂಧೀಜಿಯವರನ್ನೇ ಒಂದು ಪಾತ್ರವಾಗಿ ಚಿತ್ರಿಸಿರುವುದು ಬಹುಮಟ್ಟಿಗೆ ಕಾಣಸಿಗುವುದಿಲ್ಲ. ಕಾದಂಬರಿಗಳಲ್ಲಂತೆಯೇ ಸಣ್ಣ ಕತೆಗಳಲ್ಲಿಯೂ ಹೆಚ್ಚಾಗಿ ಕಾಣುವುದು ಗಾಂಧೀಜಿಯವರ ಆದರ್ಶಗಳು, ವ್ಯಕ್ತಿತ್ವ ಮತ್ತು ಚಟುವಟಿಕೆಗಳು ಉಲ್ಲೇಖವಾಗಿವೆ. ಇದಕ್ಕೆ ನಿದರ್ಶನವಾಗಿ ನಿರಂಜನರ 'ಬಾಪೂಜಿ! ಬಾಪೂಜಿ! ಮತ್ತು ಆರ್. ಬಸವರಾಜ ಅವರ 'ಕುರಿಗಳು ಸಾಕಿದ ತೋಳ' ಎಂಬ ಕತೆಗಳು ನಮ್ಮೆದುರಿಗೆ ನಿಲ್ಲುತ್ತವೆ. ಪೂರ್ಣಚಂದ್ರ ತೇಜಸ್ವಿ ಅವರ 'ಗಾಂಧೀಜಿ ದೆಸೆಯಿಂದ' ಎಂಬ ಕತೆ ಲಘುವಿಡಂಬನಾತ್ಮ ವಾಗಿದೆ. ಗಾಂಧೀಜಿಯವರ ಕಾಲದಲ್ಲಿಯೂ ಕೌಟುಂಬಿಕ ವಲಯದೊಳಗೆ ಗಾಂಧಿಯನ್ನು ಮತ್ತು ಆತನ ತತ್ತ್ವಗಳನ್ನು ತಿರಸ್ಕರಿಸುವ ವಸ್ತುವನ್ನು ಕತೆ, ಕಾದಂಬರಿಗಳು ವಸ್ತು ಪಡೆದುಕೊಂಡಿವೆ. ಅದಕ್ಕೆ ಉದಾಹರಣೆಗೆ ಜನಾರ್ದನ ಗುರ್ಕಾರರ 'ಬಾಪೂಜಿ' ಕತೆ, ತೇಜಸ್ವಿಯವರು "ಗಾಂಧೀಜಿ ದೆಸೆಯಿಂದ' ಮುಂತಾದವುಗಳಲ್ಲಿ ಕಾಣಬಹುದು. ನವೋದಯ ಕಾಲಘಟ್ಟದಲ್ಲಿ ಕಥೆಗಳು ರಚನೆಯಾದದ್ದು ಕಡಿಮೆ. ಕಾವ್ಯ, ಕಾದಂಬರಿ, ನಾಟಕ ಮತ್ತು ಇತರೆ ಪ್ರಕಾರಗಳಲ್ಲಿ ಹೆಚ್ಚು ಕಂಡರಿಸಿದ್ದಾರೆ. ಈ ಕಥಾ ಪ್ರಕಾರದಲ್ಲಿಯೂ ನವೋದಯ ಕಾಲದ ಕಥೆಗಳಲ್ಲಿ ಗಾಂಧಿಯನ್ನು ಆರಾಧನ ನೆಲೆಯಲ್ಲಿ ಸ್ವೀಕರಿಸಿ ಪರಿಭಾವಿಸಲಾಗಿದೆ. ಪ್ರಗತಿಶೀಲ ಕಾಲದ ಕಥೆಗಳಲ್ಲಿ ಗಾಂಧೀಯ ವರನ್ನು ಆದರ್ಶೀಯ ನೆಲೆಯಲ್ಲಿ ಸ್ವೀಕರಿಸಿ, ಹೋರಾಟಗಾರ ಯುವಕರಿಗೆ ಮಾರ್ಗದರ್ಶಕಾರಿ, ಅವರ ತತ್ವಗಳು ಮತ್ತು ಆದರ್ಶಗಳು ಹೋರಾಟದ ಅಸ್ತ್ರಗಳಂತೆ ಚಿತ್ರಿಸಿದ್ದಾರೆ.

ನವ್ಯ ಕಾಲದ ಕಥೆಗಳಲ್ಲಿ ಗಾಂಧೀಜಿಯ ತತ್ತ್ವಾದರ್ಶಗಳನ್ನು ಒಪ್ಪಿಕೊಳ್ಳುತ್ತಾ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅವುಗಳನ್ನು ಪ್ರಯೋಗಶೀಲತೆಗೆ ಒಳಪಡಿಸಿದ್ದಾರೆ. ಉದಾಹರಣೆಗೆ ಪೂರ್ಣಚಂದ್ರ ತೇಜಸ್ವಿ ಅವರ 'ಗಾಂಧೀಜಿ ದೆಸೆಯಿಂದ' ಎಂಬ ಕಥೆ ಲಘು ವಿಡಂಬನಾತ್ಮಕವಾಗಿದೆ. ಕೊನೆಗೆ ಗಾಂಧೀಜಿಯನ್ನು ಸಂಕೀರ್ಣ ವ್ಯಕ್ತಿತ್ವದ ಮೌಲ್ಯವಾಗಿ ನವ್ಯ ಬರಹಗಾರರು ಸ್ವೀಕರಿಸಿದ್ದಾರೆ. ದಲಿತ - ಬಂಡಾಯ ಕಾಲಘಟ್ಟದಲ್ಲಿ ಬರೆದ ಕಥೆಗಾರರು ಗಾಂಧೀಜಿಯ ವ್ಯಕ್ತಿತ್ವ ಮತ್ತು ತತ್ತ್ವಗಳನ್ನು ಒಪ್ಪಿಕೊಳ್ಳುತ್ತಾ ಅವುಗಳು ಸಮಾಜದಲ್ಲಿ ಅಪಮೌಲ್ಯಗಳಾಗುವುದನ್ನು ವಿಡಂಬಿಸಿದ್ದಾರೆ.

ಉದಾಹರಣೆಗೆ ಕುಂ. ವೀರಭದ್ರಪ್ಪನವರ 'ಕೂರ್ಮಾವತಾರ' ಮತ್ತು ಬೆಸಗರಹಳ್ಳಿ ರಾಮಣ್ಣ ಅವರ 'ಪ್ರಜಾಪ್ರಭುತ್ವದ ಮೂರು ಮಂಗಗಳು' ಕಥೆಗಳನ್ನು ಹೆಸರಿಸಬಹುದು. ಇವು ಲಘು ಹಾಸ್ಯ ವಿಡಂಬನೆಯಾದರೂ ಅವುಗಳ ಹಿಂದೆ ತೀಕ್ಷ್ಣವಾದ ವಿರೋಧ ಅಥವಾ ಹತಾಶೆಗಳನ್ನು ವ್ಯಕ್ತಪಡಿಸಿದ್ದಾರೆ. ಸಮಾಜದ ಅಂಕು-ಡೊಂಕುಗಳನ್ನು ತಿದ್ದುವಲ್ಲಿ ಗಾಂಧೀತತ್ತ್ವಗಳು ಪ್ರಮುಖ ಪಾತ್ರವಹಿಸುತ್ತವೆ ಎಂದು, ಗಾಂಧಿಯನ್ನು ಬಡವರ ಪಾಲಿನ ತಂದೆಯಾಗಿ, ಮಧ್ಯಮವರ್ಗದ ವಿದ್ಯಾವಂತರಿಗೆ ಮಾರ್ಗದರ್ಶಕನಾಗಿ, ಮಾನವತವಾದಿಯಾಗಿ ಈ ಕಾಲಘಟ್ಟದ ಲೇಖಕರು ಸ್ವೀಕರಿಸಿದ್ದಾರೆ. ಮಹಿಳಾ ಬರಹಗಾರರು ಗಾಂಧೀಜಿಯನ್ನು ಒಂದು ಮೌಲ್ಯವಾಗಿ ತಮ್ಮ ಕಥೆಗಳಲ್ಲಿ ಕಂಡರಿಸಿದ್ದಾರೆ. ಡಾ. ನಿರೂಪಮಾ ಅವರು ಸರ್ವಸಮಾನತೆಯ ಪ್ರತೀಕವಾಗಿ, ಅನಸೂಯರಾವ್ ಅವರು ಕಸ್ತೂರಬಾ ಕಥೆಯಲ್ಲಿ ನಿಸ್ವಾರ್ಥಪರನಾಗಿ, ಶಾಂತಾದೇವಿ ಕಣವಿ ಅವರ 'ಗಾಂಧಿ ಮಗಳು' ಕಥೆಯಲ್ಲಿ ಜಾತ್ಯಾತೀತನಾಗಿ, ಸರ್ವಧರ್ಮಗಳ ಆರಾಧಕನಾಗಿ ಗಾಂಧೀಜಿಯನ್ನು ಪ್ರತಿನಿಧಿಸಿದ್ದಾರೆ.

ಗಾಂಧೀಜಿಯವರ ಬಗ್ಗೆ ಬರೆಯಲು ಕಾದಂಬರಿಕಾರರು ಮತ್ತು ಸಣ್ಣಕತೆಗಾರರು ಎದುರಿಸಿದ ಕಷ್ಟದ ಪರಿಸ್ಥಿತಿಗಳು ಇನ್ನೂ ಹೆಚ್ಚು ಕ್ರಿಯಾಶೀಲವಾಗಿ ನಾಟಕಕಾರನಿಗೆ ಎದುರಾಗುತ್ತವೆ. ಪಾತ್ರ ಸೃಷ್ಟಿಯ ಮೂಲಕ, ಇಲ್ಲವೆ, ವಿವರಣೆಯ ಮೂಲಕ ಗಾಂಧೀಜಿಯವರನ್ನು ಕತೆಯಲ್ಲಿ ಅಥವಾ ರಂಗದ ಮೇಲೆ ಚಿತ್ರಿಸುವುದು ಅಸಭ್ಯತೆಯಾಗುತ್ತದೆ. "ಅವರ ವ್ಯಕ್ತಿತ್ವವನ್ನು ನಟನೋರ್ವನು ಕಂಪೆನಿ ನಾಟಕಗಳಲ್ಲಿ ಪ್ರತಿನಿಧಿಸುವುದು ಇನ್ನಷ್ಟು ಅಪರಾಧವಾಗಿ ಪರಿಗಣಿತವಾಗುತ್ತದೆ" ಎಂದು ಎಂ. ರಾಮರಾವ್ ಅವರು ಅಭಿಪ್ರಾಯಿಸಿದ್ದಾರೆ(ಹಾ.ಮಾ.ನಾಯಕ (ಸಂ); ೧೯೭೧; ಪು. ೧೪೩). ಇದಕ್ಕೆ ಕಾರಣ ಗಾಂಧೀಜಿಯವರ ಮೇಲಿರುವ ಪೂಜ್ಯಭಾವನೆ. "ಗಾಂಧೀಜಿಯವರ ವ್ಯಕ್ತಿತ್ವದ ಬಗ್ಗೆ ಓದುಗರ ಅಥವಾ ಪ್ರೇಕ್ಷಕರ ಕಾಲ್ಪನಿಕ ಚಿತ್ರ ಹಾಗೂ ಸಾಧಾರಣ ನಟನೊಬ್ಬನು ಅವರ ಪಾತ್ರದಲ್ಲಿ ಅಭಿನಯಿಸುವುದರಲ್ಲಿ ಕಾಣುವ ಅರೆಕೊರೆಗಳು - ಇವೆರಡರ ಮಧ್ಯೆ ಒಂದು ಸಂಬಂಧವನ್ನು ಕಲ್ಪಿಸುವುದು ಕಾದಂಬರಿ ಮತ್ತು ಸಣ್ಣಕತೆಗಳಿಗಿಂತ ನಾಟಕದಲ್ಲಿ ಹೆಚ್ಚು ಕಷ್ಟವಾಗುತ್ತದೆ. ಬಹಳ ಹೆಚ್ಚೆಂದರೆ ಗಾಂಧೀಜಿಯ ಪಾತ್ರಧಾರಿ ಅವರ ಭಾವನೆಗಳನ್ನು ಕೊಂಡೊಯ್ಯುವ ಮಾಧ್ಯಮವಾಗಬಲ್ಲನೇ ಹೊರತು ಅವರ ವ್ಯಕ್ತಿತ್ವದ ಸಹಜವಾದ ಮತ್ತು ತೃಪ್ತಿಕರವಾದ ಪ್ರತಿಬಿಂಬವಾಗುವುದು ಸಾಧ್ಯವಿಲ್ಲ. ಇಂಥ ನಾಟಕಗಳು ಸುಲಭವಾಗಿ ಗಾಂಧೀತತ್ತ್ವ ಪ್ರಚಾರಕ್ಕೆ ಮಾಧ್ಯಮವಾಗಿ ಪರಿಣಮಿಸುತ್ತವೆಯೇ ಹೊರತು ಗಾಂಧೀಜಿಯವರನ್ನು ನಮ್ಮ ಮುಂದಿರಿಸುವ ಜೀವಂತ ನಾಟಕಗಳಾಗಿರುವುದಿಲ್ಲ. ಗಾಂಧೀಜಿ ಎಂಬುದಾಗಿ ಊಹಿಸಿಕೊಳ್ಳಬೇಕಾದರೆ ನಟನಿಗೆ ಎಂಟೆದೆಯೇ ಬೇಕಾಗುತ್ತದೆ" (ಅದೇ; ಪು. ೧೪೪) ಎಂಬ ಎಂ. ರಾಮರಾವ್ ಅವರ ಮಾತು ಸತ್ಯವಾಗಿದೆ. ಆದರೆ ಈ ಅಧ್ಯಯನದಲ್ಲಿ ರಂಗದ ನೆಲೆಗಿಂತ ಸಾಹಿತ್ಯಿಕ ನೆಲೆಯಲ್ಲಿ ಗಾಂಧೀಜಿಯವರನ್ನು ಪ್ರತಿನಿಧಿಸಿರುವ ಕ್ರಮವನ್ನು ನೋಡಲಾಗಿದೆ. ನಾಟಕಕಾರರು ಗಾಂಧೀಜಿಯವರ ಹೋರಾಟಗಳು, ಜೀವನ ಚರಿತ್ರೆಯ ಕೆಲವು ಮುಖ್ಯ ಘಟನೆಗಳು ಮತ್ತು ಅವರ ಕೌಟುಂಬಿಕ ವಿಷಯಗಳ ಘಟನೆಗಳನ್ನು ವಸ್ತುವಾಗಿಸಿ

ನಾಟಕ ರಚಿಸಿದ್ದಾರೆ. ಗೋವಿಂದ ಪೈ ಅವರ 'ಚಿತ್ರಭಾನು ಅಥವಾ ೧೯೪೨", ದ.ರಾ. ಬೇಂದ್ರೆ ಅವರ 'ಉದ್ಧಾರ', ಎಚ್. ರಾಮಕೃಷ್ಣರಾಯ ಅವರ 'ಗಾಂಧೀಜಿಯ ಸ್ವರ್ಗದಲ್ಲಿ', ಶ್ರೀರಂಗರ 'ಶೋಕ ಚಕ್ರ', ಕುವೆಂಪು ಅವರ 'ಬಲಿದಾನ', ಆನಂದಕಂದ ಅವರ 'ಅಮೃತಾತ್ಮ', ಜಿ.ಪಿ. ರಾಜರತ್ನಂ ಅವರ 'ಸಂಭವಾಮಿ ಯುಗೇ ಯುಗೇ' ಹೀಗೆ ಮುಂತಾದ ನಾಟಕಗಳಲ್ಲಿ ಗಾಂಧೀಜಿಯವರ ವ್ಯಕ್ತಿತ್ವ - ಚಿಂತನೆಗಳನ್ನು ಪ್ರತಿಪಾದಿಸಿದ್ದಾರೆ.

ಗಾಂಧಿ ಸತ್ತರೂ ಸಾಹಿತ್ಯಕ(ನಾಟಕ) ಪಠ್ಯಗಳಲ್ಲಿ ಜೀವಂತ ಪಾತ್ರ ನಿರ್ವಹಿಸುವ ಹಾಗೆ ನವ್ಯರು ಗಾಂಧಿಯನ್ನು ತರುತ್ತಾರೆ. ಚಂದ್ರಶೇಖರ ಕಂಬಾರರು 'ಭಾರತಾಂಬೆ' ನಾಟಕದಲ್ಲಿ ಗಾಂಧಿಯನ್ನು ಸ್ವರ್ಗದಿಂದ ಧರೆಗಿಳಿಸುತ್ತಾರೆ. ಪ್ರಸ್ತುತ ಭಾರತದ ಸ್ಥಿತಿಗತಿಗಳನ್ನು ನೋಡಿದ ಗಾಂಧಿ ಇಲ್ಲಿ ಜೀವಿಸಲಾರದೆ ಪುನಃ ಸ್ವರ್ಗಕ್ಕೆ ಹೋಗುವಂತೆ ಚಿತ್ರಿಸಿದ್ದಾರೆ. ಸಮಕಾಲೀನ ಸಂದರ್ಭದಲ್ಲಿ ಗಾಂಧೀಜಿಯ ಆದರ್ಶಗಳು, ತತ್ವಗಳು ಚಲಾವಣೆ ಕಳೆದುಕೊಂಡ ನಾಣ್ಯಗಳಂತೆ ಚಿತ್ರಿಸಿದ್ದಾರೆ. ಕೇಶವ ಮೊರಬ್ ಅವರು 'ಅವಿಶ್ವಾಸ' ನಾಟಕದಲ್ಲಿ ಗಾಂಧಿಯ ಆದರ್ಶಗಳು ಪಾಲಿಸಿದರೆ ಸುಖವಿಲ್ಲವೆಂಬಂತೆ ಚಿತ್ರಿಸಿದ್ದಾರೆ. ಆದರೂ ಗಾಂಧೀತತ್ತ್ವಗಳನ್ನು ಬಹುದೊಡ್ಡದಾಗಿ ಗೌರವಿಸುತ್ತಾರೆ. ದಲಿತ - ಬಂಡಾಯ ಕಾಲಘಟ್ಟದಲ್ಲಿ ಗಾಂಧೀಯ ವ್ಯಕ್ತಿತ್ವ ಹಾಗೂ ಆದರ್ಶಗಳು ಅನಾವರಣಗೊಂಡಿವೆ. ಟಿ.ಎಂ. ಭಾಸ್ಕರ್ ಅವರು ಗಾಂಧೀತತ್ತ್ವವನ್ನಾಧರಿಸಿ 'ಗಾಂಧಿಟೋಪಿ' ರಚಿಸಿದ್ದಾರೆ. ಮೈ.ನಾ. ಶಿವಾನಂದಸ್ವಾಮಿ ಅವರು 'ರಾಮರಾಜ್ಯದ ಕನಸು' ನಾಟಕ ಚಿತ್ರಿಸಿದ್ದಾರೆ. ಇಲ್ಲಿ ಗಾಂಧೀತತ್ತ್ವಗಳು ಒಂದೊಂದಾಗಿ ಸಮಾಜದಲ್ಲಿ ಲೀನವಾಗುತ್ತಿರುವುದನ್ನು ಹತಾಶೆ ಭಾವನೆಯಿಂದ ವ್ಯಕ್ತಪಡಿಸುತ್ತಲೇ ಗಾಂಧೀಯವರನ್ನು ಆದರ್ಶೀಕೃತವಾಗಿಯೇ ಸ್ವೀಕರಿಸಿದ್ದಾರೆ. ಮಹಿಳಾ ನಾಟಕಕಾರ್ತಿಯರು ಗಾಂಧಿಯನ್ನು ಆರಾಧಕ ಪೂಜ್ಯ ನೆಲೆಯಲ್ಲಿ ಸ್ವೀಕರಿಸಿದ್ದಾರೆ.

"ಗಾಂಧಿಯುಗದ ವಿಚಾರಧಾರೆಯ ಪರಿಣಾಮ ಶ್ರೀರಂಗರ ಮೇಲೆ ಆಗಿದ್ದು, ಸ್ವತಃ ಪಾಶ್ಚಾತ್ಯ ನಾಟಕ ಹಾಗೂ ರಂಗಭೂಮಿಗಳ ಪರಿಚಯವುಳ್ಳ ಅವರು ದಿಟ್ಟತನದಿಂದಲೇ ನಾಟಕಗಳನ್ನು ಬರೆದರು"(ಬಸವರಾಜ ಸಾದರ; ೨೦೦೨; ಪು. ೫೯) ಎಂದು ಗುರುಲಿಂಗ ಕಾಪಸೆ ಅವರು ಹೇಳಿದ್ದಾರೆ. ಹಾಗಾಗಿ ಶ್ರೀರಂಗರು ಗಾಂಧೀಜಿಯವರ ನಿಕಟವರ್ತಿಯಾಗಿದ್ದರಿಂದ ಗಾಂಧೀಜಿ ಯವರಿಂದ ನೇರವಾಗಿ ಪ್ರಭಾವಿತರಾಗಿದ್ದಾರೆ ಮತ್ತು ಇವರ ನಾಟಕ(ಸಾಹಿತ್ಯ)ಗಳು ಗಾಂಧೀವಾದ ಗಳೊಂದಿಗೆ ಬೆಸೆದುಕೊಂಡಿವೆ ಎಂದು ಹೇಳಬಹುದು. ಇವರ ಶೋಕಚಕ್ರ, ಧರ್ಮವಿಜಯ, ಹರಿಜನ್ವಾರ ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು.

ಸೃಜನಶೀಲ ಸಾಹಿತ್ಯದ ಪ್ರಮುಖ ಪ್ರಕಾರಗಳನ್ನು ಬಿಟ್ಟರೆ, ಕನ್ನಡದಲ್ಲಿ ಗಾಂಧೀಜಿಯವರನ್ನು ಮತ್ತು ಅವರ ತತ್ವಚಿಂತನೆಗಳನ್ನು ಸೃಜನೇತರ ಪ್ರಕಾರಗಳಲ್ಲಿ (ಪ್ರಬಂಧಗಳು, ವ್ಯಾಖ್ಯಾನಗಳು, ಲೇಖನಗಳು ಮುಂತಾದವುಗಳು) ನಿರೂಪಿಸಲಾಗಿದೆ. ಪ್ರಬಂಧಗಳು ವೈಯಕ್ತಿಕ ಹಾಗೂ ವಿವರಣಾತ್ಮಕ ಸ್ವರೂಪದ್ದಾಗಿವೆ. ಗಾಂಧೀಜಿಯ ಕೊಲೆಯಿಂದ ಪ್ರಭಾವಗೊಂಡು ಕನ್ನಡ ಸಾಹಿತ್ಯದಲ್ಲಿ ರಚನೆಗೊಂಡಿವೆ. 'ದಿವಂಗತ ರಾಷ್ಟ್ರಪಿತ' ೩೧.೦೧.೧೯೪೮ರಂದು ಮೈಸೂರು ಆಕಾಶವಾಣಿಯಿಂದ ಪ್ರಸಾರ),

‘ಬಾಪೂಜಿಗೆ ಬಾಷ್ಪಾಂಜಲಿ’(ಮಹಾತ್ಮ ಗಾಂಧಿಯ ಅಸ್ಥಿ ವಿಸರ್ಜನೆ ನಂತರ ಮೈಸೂರು ನಗರದಲ್ಲಿ ೧೨.೨.೧೯೪೮ರಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾಡಿದ ಭಾಷಣ), ಪೂರ್ಣದೃಷ್ಟಿಗೆ ಗಾಂಧೀಜಿ(ಗಾಂಧೀಜಿಯ ಜನ್ಮೋತ್ಸವ ಸಂದರ್ಭದಲ್ಲಿ ೧೨.೧೦.೧೯೪೮ರಲ್ಲಿ ಮಾಡಿದ ಭಾಷಣ), ಈ ಪ್ರಬಂಧಗಳಲ್ಲಿ ಕುವೆಂಪುರವರು ಗಾಂಧಿಯನ್ನು ದೈವಸ್ವರೂಪಿಯಂತೆ ಪ್ರಭಾವಿಸಿದ್ದಾರೆ. ಮಾಸ್ತಿ ವೆಂಕಟೇಶ ಅಯ್ಯಂಗಾರರು ‘ಮಹಾತ್ಮರ ದೇಹ ಮುಕ್ತಿ’(೧೯೪೮ ಫೆಬ್ರವರಿ ತಿಂಗಳಿನಲ್ಲಿ ‘ಜೀವನ ಪತ್ರಿಕೆಗೆ ಬರೆದ ಪ್ರಬಂಧ) ಪ್ರಬಂಧದಲ್ಲಿ ಗಾಂಧೀಜಿಯವರು ಭಾರತೀಯ ರಂಗದಿಂದ ನಿರ್ಗಮಿಸಿದ್ದನ್ನು ದೈವನಿಯಮವೆಂದು ವಿವರಿಸಿದ್ದಾರೆ. ತೀ.ನಂ.ಶ್ರೀಕಂಠಯ್ಯನವರ ‘ನಂದಾದೀಪ’ ಪ್ರಬಂಧದಲ್ಲಿ ಗಾಂಧಿಯನ್ನು ದೇವರ ಮುಂದಿನ ನಂದಾದೀಪಕ್ಕೆ ಹೋಲಿಸಿದ್ದಾರೆ. ದೀಪವು ಸಹಜವಾಗಿ ನಂದಿ ಹೋಗದೇ, ಅದನ್ನು ಉದ್ದೇಶ ಪೂರ್ವಕವಾಗಿ ನಂದಿಸಿದ್ದರಿಂದ ಆ ದೈವಕ್ಕೆ ಅಪಚಾರವೆಸಗಿದಂತಾಗಿದೆ ಎಂದು ವಿವರಿಸಿದ್ದಾರೆ.

ಗಾಂಧೀಜಿಯವರ ಜೀವನ ದರ್ಶನವನ್ನು ನಿರೂಪಿಸುವ ಅಸಂಖ್ಯಾತ ವ್ಯಾಖ್ಯಾನ ಸ್ವರೂಪದ ಪ್ರಬಂಧಗಳು ಕನ್ನಡ ಸಾಹಿತ್ಯದಲ್ಲಿ ಪ್ರಕಟಗೊಂಡಿವೆ. ಜಿ.ಪಿ. ರಾಜರತ್ನಂ ಅವರ ‘ವಿಚಾರತರಂಗ’ ಮತ್ತು ‘ಕೃಷ್ಣಾನುಭವ’, ಸಿದ್ಧವನಹಳ್ಳಿ ಕೃಷ್ಣಶರ್ಮರ ‘ಪರ್ಣಕುಟಿ’, ಹರ್ಡೇಕರ್ ಮಂಜಪ್ಪನವರ ‘ಖಾದಿಶಾಸ್ತ್ರ’, ಗೊರೂರು ರಾಮಸ್ವಾಮಿ ಅಯ್ಯಂಗಾರರ ‘ಪೂರ್ಣ ಸ್ವದೇಶಿ’. ಹೀಗೆ ಮುಂತಾದವರು ಗಾಂಧೀಜಿಯನ್ನು ಕುರಿತು ರಚಿಸಿದ್ದಾರೆ. ಇವರೆಲ್ಲ ಗಾಂಧೀಜಿಯವರ ತತ್ತ್ವಾದರ್ಶಗಳನ್ನು ಕನ್ನಡ ಓದುಗರಿಗೆ ಪರಿಚಯ ಮಾಡಿಕೊಡುವ ಕೆಲಸ ಮಾಡಿದ್ದಾರೆ. ಒಟ್ಟಾರೆ ಇಡೀ ಕನ್ನಡ ಸಾಹಿತ್ಯ ಗಾಂಧೀಜಿಯನ್ನು ಕಂಡರಿಸುವ, ಅಭಿವ್ಯಕ್ತಿಸುವ ಮತ್ತು ಪ್ರತಿನಿಧಿಸುವ ಕ್ರಮ ಪ್ರತಿಶತಃ ಆರಾಧಿಸುವ ಮತ್ತು ದೈವಸ್ವರೂಪಿಯಾಗಿ ನೋಡುವ ಕ್ರಮವಹಿಸಿದೆ.

೨. ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ

ಕನ್ನಡ ಲೇಖಕರು ಗಾಂಧೀಜಿಯವರ ಪ್ರತ್ಯಕ್ಷ ಇಲ್ಲವೆ ಪರೋಕ್ಷ ಪ್ರಭಾವದ ಫಲವಾಗಿ ಸಾಹಿತ್ಯ ನಿರ್ಮಿಸಿದ್ದಾರೆ. ಈ ಸಾಹಿತ್ಯದ ಒಂದು ಭಾಗ ಗಾಂಧೀಜಿಯವರನ್ನೇ ನೇರವಾಗಿ ಕುರಿತದ್ದು, ಇನ್ನೊಂದು ಭಾಗ ಅವರ ಸ್ಫೂರ್ತಿಯಿಂದ ಹುಟ್ಟಿಕೊಂಡದ್ದು. ಕನ್ನಡದಲ್ಲಿ ಗಾಂಧೀಜಿಯವರ ಸ್ಫೂರ್ತಿಯಿಂದ ಅಧಿಕವಾಗಿ ಸಾಹಿತ್ಯ ರಚನೆಯಾಗಿದೆ. ಕಾವ್ಯಗಳು ನೇರವಾಗಿ ಗಾಂಧೀಜಿಯವರನ್ನೆ ಕುರಿತು ಹೆಚ್ಚು ರಚನೆಗೊಂಡಿವೆ. ವ್ಯಾಸರಾಯ ಬಲ್ಲಾಳರ ಹೆಜ್ಜೆ, ಕಡಿದಾಳ್ ಮಂಜಪ್ಪನವರ ಪಂಜರವಳ್ಳಿಯ ಪಂಜು, ನಾಗವೇಣಿಯವರ ಗಾಂಧಿ ಬಂಧ, ನಾ. ಡಿಸೋಜ ಅವರ ಗಾಂಧಿ ಬಂದರು, ಕಡೆಂಗೋಡ್ಲು ಶಂಕರಭಟ್ಟರ ಈ ಪೀಳಿಗೆ, ಬಾಳಾಸಾಹೇಬ ಲೋಕಪುರ ಅವರ ಹುತ್ತ ಹೀಗೆ ಈ ಕಾದಂಬರಿಗಳು, ಬೆಸಗರಹಳ್ಳಿ ರಾಮಣ್ಣ ಅವರ ಗಾಂಧಿ ಮತ್ತು ಪ್ರಜಾಪ್ರಭುತ್ವದ ಮೂರು ಮಂಗಗಳು, ಕುಂ.ವೀ.ಅವರ ಕೂರ್ಮಾವತಾರ, ಭಾಲಚಂದ್ರ ಘಾಣೇಕರ ಅವರ ಗಾಂಧಿ ಹುಚ್ಚು, ಬಣಕಾರ ಪಿ.ಎಸ್. ಅವರ ನನ್ನ ಸೊತ್ತಲ್ಲ, ಶಾಂತಾದೇವಿ ಕಣವಿ ಅವರ ಗಾಂಧೀ ಮಗಳು ಹೀಗೆ ಈ ಕತೆಗಳು, ಕೇಶವ ಮೊರಬ್ ಅವರ ಅವಿಶ್ವಾಸ,

ಶ್ರೀರಂಗರ ಶೋಕಚಕ್ರ, ಕುವೆಂಪು ಅವರ ಬಲಿದಾನ, ವೈ.ನಾ.ಶಿವಾನಂದಸ್ವಾಮಿ ಅವರ ರಾಮರಾಜ್ಯದ ಕನಸು ಹೀಗೆ ಈ ನಾಟಕಗಳು ಗಾಂಧೀಜಿಯವರನ್ನೆ ಕುರಿತು ರಚನೆಗೊಂಡಿವೆ.

ವಿ.ಎಂ. ಇನಾಂದಾರರ ಮೂರಾಬಟ್ಟೆ ಮತ್ತು ವಿಜಯಯಾತ್ರೆ, ಶಿವರಾಮಕಾರಂತರ ಔದಾರ್ಯದ ಉರುಳಲ್ಲಿ, ಮಿರ್ಜಿಅಣ್ಣಾರಾಯರ ಭಸ್ಮಾಸುರ, ಬಸವರಾಜ ಕಟ್ಟೀಮನಿಯವರ ಸ್ವಾತಂತ್ರ್ಯದೆಡೆಗೆ ಮತ್ತು ಮಾಡಿಮಡಿದವರು, ಅ.ನ.ಕೃ ಅವರ ಅಮರ ಆಗಸ್ಟ್, ಆನಂದಕಂದ ಅವರ ಮಗಳ ಮದುವೆ ಮತ್ತು ಸುದರ್ಶನ, ಕೋ.ಚೆನ್ನಬಸಪ್ಪ ಅವರ ಬೇಡಿಕಳಚಿತು ದೇಶೆಒಡೆಯಿತು, ಗೊರೂರವರ ಮೆರವಣಿಗೆ, ಶ್ರೀರಂಗರ ವಿಶ್ವಾಮಿತ್ರನ ಸೃಷ್ಟಿ, ಕಾಕೋಳು ಸರೋಜಾರಾವ್ ಅವರ ನಾನೂ ಭಾರತೀಯ ಹೀಗೆ ಈ ಕಾದಂಬರಿಗಳು, ಅನ.ಕೃ ಅವರ ಗಿರಿಜವ್ವನರೊಟ್ಟಿ ಮತ್ತು ಜೈಹಿಂದ್, ಪು.ತಿ.ನ. ಅವರ ಧ್ವಜರಕ್ಷಣೆ, ನಿರುಪಮಾ ಅವರ ಕೆರೆ, ಬಸವರಾಜ ಕಟ್ಟೀಮನಿ ಅವರ ಜನವರಿ ಇಪ್ಪತ್ತಾರು ಮತ್ತು ಆಗಸ್ಟ್ ಒಂಭತ್ತು ಹೀಗೆ ಈ ಕತೆಗಳು, ಗೋವಿಂದ ಪೈ ಅವರ ಚಿತ್ರಭಾನು ಅಥವಾ ೧೯೪೨, ಚಂದ್ರಶೇಖರ ಕಂಬಾರ ಅವರ ಭಾರತಾಂಬೆ, ಪ್ರತಿಮಾ ಮಿತ್ರ ಅವರ ನಾನೇಕೆ ಮಹಾತ್ಮನಲ್ಲ ಹೀಗೆ ಈ ನಾಟಕಗಳು ಗಾಂಧೀಜಿಯವರ ಸ್ಫೂರ್ತಿಯಿಂದ ರಚನೆಗೊಂಡಿವೆ.

ಗಾಂಧೀಜಿಯವರನ್ನು ನೇರವಾಗಿ ಕಥೆ, ಕಾದಂಬರಿಗಳಲ್ಲಿ ಪಾತ್ರವಾಗಿ ಚಿತ್ರಿಸಿರುವುದು ತೀರ ವಿರಳ. ವ್ಯಾಸರಾಯ ಬಲ್ಲಾಳರ ಹೆಜ್ಜೆ, ಬಾಳಾಸಾಹೇಬ ಲೋಕಾಪುರ ಅವರ ಹುತ್ತ ಕಾದಂಬರಿಗಳಲ್ಲಿ ಕೆಲವು ಸಂದರ್ಭಗಳಲ್ಲಿ ಅಪರೂಪವಾಗಿ ಬಂದುಹೋಗುತ್ತಾರೆ. ಇತರ ಪಾತ್ರಗಳ ಮೂಲಕ ಗಾಂಧೀಜಿಯವರ ಮಾತುಗಳನ್ನು ಹೇಳಿಸಲಾಗುತ್ತದೆ. ವ್ಯಾಸರಾಯ ಬಲ್ಲಾಳರ 'ಹೆಜ್ಜೆ'ಯಲ್ಲಿನ ಸಾವಿತ್ರಿ, ಕಡಿದಾಳ್ ಮಂಜಪ್ಪನವರ ಪಂಜರವಳ್ಳಿಯ ಪಂಜುವಿನಲ್ಲಿನ ಮೋಹನ, ಬಸವರಾಜ ಕಟ್ಟೀಮನಿಯವರ ಸ್ವಾತಂತ್ರ್ಯದೆಡೆಗೆಯ ಶೇಖರ ಇವರೆಲ್ಲಾ ಗಾಂಧೀಜಿಯವರನ್ನು ಪ್ರತಿನಿಧಿಸುತ್ತಾರೆ.

"ದೇಶದಲ್ಲಿ ನಡೆದ ರಾಜಕೀಯ ಹೋರಾಟ ಮತ್ತು ಸ್ವಾತಂತ್ರ್ಯ ಚಳುವಳಿಗಳು ಹಲವು ಕಾದಂಬರಿಗಳಿಗೆ ವಸ್ತುವಾಗಿ ಒದಗಿಬಂದಿವೆ. ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ನಡೆದ ಪ್ರಯೋಗಗಳ ಸೋಲುಗೆಲುವುಗಳ ಚಿತ್ರಣವನ್ನು ಶಿವರಾಮ ಕಾರಂತರ ಔದಾರ್ಯದ ಉರುಳಲ್ಲಿ ಎಂಬ ಕೃತಿಯಲ್ಲಿ ಕಾಣಬಹುದಾಗಿದೆ. ಮಿರ್ಜಿಅಣ್ಣಾರಾಯರ ಪ್ರತಿಸರಕಾರ, ರಾಷ್ಟ್ರಪುರುಷ, ಬಸವರಾಜ ಕಟ್ಟೀಮನಿಯವರ ಮಾಡಿಮಡಿದವರು, ತ.ರಾ.ಸು ಅವರ ರಕ್ತತರ್ಪಣ, ನಿರಂಜನರ ಚಿರಸ್ಮರಣೆ ಮೊದಲಾದ ಕಾದಂಬರಿಗಳು ಸ್ವಾತಂತ್ರ್ಯ ಚಳುವಳಿಯ ಚಿತ್ರಣವನ್ನು ನೀಡುತ್ತವೆ. ಮುಂಬಯಿಯಲ್ಲಿ ೧೯೪೨ರ ಆಗಸ್ಟ್ ತಿಂಗಳಲ್ಲಿ ನಡೆದ ಚಳುವಳಿಯ ಹಿನ್ನೆಲೆಯಲ್ಲಿ ವಿ.ಎಂ. ಇನಾಂದಾರರ ಮೂರಾಬಟ್ಟೆ ಕಾದಂಬರಿ ರಚಿತವಾಗಿದೆ"(ಶಾಮರಾಯ ತ.ಸು.; ೨೦೦೬; ಪು. ೨೨೨) ಎಂದು ತ.ಸು.ಶಾಮರಾಯರು ಅಭಿಪ್ರಾಯಿಸಿದ್ದಾರೆ. ಹೀಗೆ ಸ್ವಾತಂತ್ರ್ಯ ಮತ್ತು ರಾಜಕೀಯ ಹೋರಾಟದ ಹಿನ್ನೆಲೆಯಲ್ಲಿ ರಚನೆಗೊಂಡ ಈ ಕಾದಂಬರಿಗಳಲ್ಲಿ ಗಾಂಧಿ ತತ್ವಚಿಂತನೆಗಳು ಅಪ್ಯಾಯಮಾನವಾಗಿ ಮೂಡಿಬರುತ್ತವೆ.

೩. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಗಾಂಧೀಜಿಯವರು ರೂಪಿಸಿದ ಸತ್ಯಾಗ್ರಹಗಳು ಮತ್ತು ಅವರ ವ್ಯಕ್ತಿತ್ವ, ತತ್ತ್ವಗಳು ಮುಂತಾದ ಅಂಶಗಳೆಲ್ಲ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಭಾವಿಸಿವೆ. ಸ್ವಾತಂತ್ರ್ಯನಂತರದ ಕಾಲಘಟ್ಟದ ಸಾಹಿತ್ಯದಲ್ಲಿಯೂ ಗಾಂಧೀಜಿ ಮೇಲಿಂದ ಮೇಲೆ ನೆನಪಿಗೆ ಬರುತ್ತಾರೆ. ಜಾತಿ, ಮತ-ಧರ್ಮಗಳಲ್ಲಿ ಮತ್ತು ಮಾನವೀಯ ಮೌಲ್ಯಗಳಿಗೆ ಧಕ್ಕೆ ಉಂಟಾದಾಗ ಗಾಂಧೀಜಿಯವರ ಮೌಲ್ಯಾದರ್ಶಗಳನ್ನು ಕನ್ನಡ ಸಾಹಿತ್ಯದಲ್ಲಿ ಸಾಹಿತಿಗಳು ಪ್ರಸ್ತಾಪಿಸಿರುವುದನ್ನು ಕಾಣಬಹುದು. ಗಾಂಧೀಜಿಯ ಕುರಿತ ಸಾಹಿತ್ಯದಲ್ಲಿ 'ಸ್ವಾತಂತ್ರ್ಯ'ದ ಅರಿವು ಮತ್ತು 'ರಾಷ್ಟ್ರೀಯ' ಭಾವನೆ ಜೊತೆಯಾಗಿ ಬೆಸೆದುಕೊಳ್ಳುತ್ತವೆ. ಹಾಗಾಗಿ ಗಾಂಧೀಜಿ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯತೆಯ ಭಾಗವಾಗಿ ಪ್ರತಿಪಾದಿತಗೊಳ್ಳುತ್ತಾರೆ. ಇದರಿಂದ ಗಾಂಧೀಜಿಯವರ ವ್ಯಕ್ತಿತ್ವ ಮತ್ತು ತತ್ತ್ವಚಿಂತನೆಗಳು ವಿಶಾಲತೆಯನ್ನು ಹೊಂದಿರುವುದು ತಿಳಿಯುತ್ತದೆ.

ಸ್ವಾತಂತ್ರ್ಯಪೂರ್ವ ಕಾಲಘಟ್ಟದ ಸಂದರ್ಭದಲ್ಲಿ ಗಾಂಧೀಜಿ ಉಂಟುಮಾಡಿದ ಪ್ರಭಾವ ಮತ್ತು ಪ್ರೇರಣೆಗಳು ಅನನ್ಯವಾದವುಗಳಾಗಿವೆ. ಹೀಗಾಗಿ ಆ ಕಾಲದ ನವೋದಯ ಕವಿಗಳ ಆರಾಧನೆಯ ಮನೋಭಾವ ಗಾಂಧೀಜಿಯವರನ್ನು ಅಲೌಕಿಕ ನೆಲೆಯಲ್ಲಿ ನಿಲ್ಲಿಸಿಬಿಟ್ಟಿದೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿದ್ದ ಲೇಖಕರು ನೇರವಾಗಿ ಗಾಂಧೀಜಿಯವರ ಪ್ರಭಾವಕ್ಕೆ ಸಿಕ್ಕಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಗಾಂಧೀಜಿ ಅವರೆಲ್ಲರಲ್ಲೂ ಆ ಕಾಲಕ್ಕೆ ಬೇಕಾಗಿದ್ದ ಸೃಷ್ಟಿಶಕ್ತಿಯನ್ನು ಪ್ರಚೋದಿಸಿದರು. ಸ್ವಾತಂತ್ರ್ಯಪೂರ್ವ ಕಾಲದ ಸಾಹಿತ್ಯದಲ್ಲಿ ಕೆಲವೆಡೆಯಾದರೂ ಗಾಂಧೀಜಿಯವರ ಉಸಿರನ್ನು ಆಲಿಸಬಹುದಾಗಿದೆ. ಮೇಲೊಂದು ಗರುಡ ಹಾರುತಿಹುದು ಕೆಳಗದರ ನೆರಳು ಓಡುತಿಹುದು ಎಂದು ನೆರಳು ಕವಿತೆಯಲ್ಲಿ ನೆರಳಿಗೆ ಸಾಂಕೇತಿಸಿ ಪು.ತಿ.ನ ಅವರು ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿ ಹಾಗೂ ಅವರ ತತ್ವಗಳನ್ನು ಸೂಚಿಸಿದ್ದಾರೆ. ಗೋವಿಂದ ಪೈ ಅವರು ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತು! ಕವಿತೆಯಲ್ಲಿ ಸ್ವಾತಂತ್ರ್ಯ ನಂತರ ದೇಶವನ್ನು ಮುನ್ನಡೆಸಲು ಗಾಂಧೀಜಿಯವರ ಮಾರ್ಗದರ್ಶನ ಅತ್ಯವಶ್ಯಕ ಎಂಬಂತೆ ಚಿತ್ರಿಸಿದ್ದಾರೆ. ಗಾಂಧೀಜಿಯ ಸಾವು ಲೇಖಕರನ್ನು ಬಾಧಿಸಿದೆ. ಅವರ ಸಾವನ್ನು ಕುರಿತು ಬೇಂದ್ರೆಯವರು ಹಲವು ಕವಿತೆಗಳನ್ನು ರಚಿಸಿದ್ದಾರೆ. ಹೋ.ಮ. ಪಂಡಿತಾರಾಧ್ಯ ಅವರು ಗಾಂಧೀಜಿ ಕವಿತೆಯಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿ ಹೆಸರು ಸ್ವಾತಂತ್ರ್ಯಕ್ಕೆ ಮೂಲಮಂತ್ರವಾಗಿತ್ತು ಆದರೆ ನಂತರದಲ್ಲಿ ಅದೆಲ್ಲಾ ಅದಲು–ಬದಲಾಗಿವೆ ಎಂದು ವಿಷದಿಕರಿಸಿದ್ದಾರೆ. ತಬರನ ಕತೆಯಲ್ಲಿ ತೇಜಸ್ವಿಯವರು ಸ್ವಾತಂತ್ರ್ಯ ನಂತರದಲ್ಲಿ ರಚಿಸಿದರೂ ಅದು ಸ್ವಾತಂತ್ರ್ಯಪೂರ್ವದ ಉಪ್ಪಿನ ಚಳುವಳಿ ಮತ್ತು ಸ್ವಾತಂತ್ರ್ಯ ನಂತರ ಅದರ ಪರಿಣಾಮಗಳನ್ನು ವಿವರಿಸಿದ್ದಾರೆ. ಅ.ನ.ಕೃ ಅವರ ಗಿರಿಜವ್ವನರೊಟ್ಟಿ ಮತ್ತು ಜೈಹಿಂದ್, ನಿರುಪಮಾ ಅವರ ಕೆರೆ ಈ ಕಥೆಗಳು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟಗಳವರೆಗೆ ಕಥಾ ಹಂದರವನ್ನು

ಚಾಚಿಕೊಂಡಿವೆ. ಬಸವರಾಜ ಕಟ್ಟೀಮನಿಯವರ, ಸ್ವಾತಂತ್ರ್ಯದೆಡೆಗೆ ಮತ್ತು ಮಾಡಿಮಡಿದವರು, ವ್ಯಾಸರಾಯ ಬಲ್ಲಾಳರ ಹೆಜ್ಜೆ... ಮತ್ತು ಹೇಮಂತಗಾನ ಬಾಳಾಸಾಹೇಬ ಲೋಕಾಪುರ ಅವರ ಹುತ್ತ, ನಾಗವೇಣಿಯವರ ಗಾಂಧಿ ಬಂದ, ಕಾಕೋಳು ಸರೋಜಾರಾವ್ ಅವರ ನಾನೂ ಭಾರತೀಯ, ಕಡೆಂಗೋಡ್ಲು ಶಂಕರಭಟ್ಟರ ಈ ಪೀಳಿಗೆ, ತ.ರಾ.ಸು. ಅವರ ರಕ್ತತರ್ಪಣ, ಕೋ.ಚೆನ್ನಬಸಪ್ಪ ಅವರ ಬೇಡಿಕಳಚಿತು ದೇಶಒಡೆಯಿತು ಹೀಗೆ ಹಲವು ಕಾದಂಬರಿಗಳು ಸ್ವಾತಂತ್ರ್ಯಪೂರ್ವ ಸ್ವಾತಂತ್ರ್ಯೋತ್ತರ ಕಾಲಘಟ್ಟಗಳ ಬಹು ವಿಸ್ತಾರವನ್ನು ಹೊಂದಿವೆ.

೪. ಸೃಜನಶೀಲ ಮತ್ತು ಸೃಜನೇತರ

ಗಾಂಧೀಜಿಯವರನ್ನು ಕುರಿತು ಯೋಚಿಸದೇ ಇರದ ಕನ್ನಡ ಲೇಖಕರು ಇಲ್ಲವೆಂದು ಹೇಳಬಹುದು. ಕನ್ನಡ ಸಾಹಿತಿಗಳು ಒಂದಿಲ್ಲೊಂದು ರೀತಿಯಲ್ಲಿ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಅವರನ್ನು ಅವರ ತತ್ವಚಿಂತನೆಗಳನ್ನು ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯಗಳಲ್ಲಿ ಹಿಡಿದಿಟ್ಟಿದ್ದಾರೆ. ಲೇಖಕರು ಸೃಜನಶೀಲ ಸಾಹಿತ್ಯದಲ್ಲಿ ಗಾಂಧೀಜಿಯವರನ್ನು ಅತ್ಯಂತ ಆಪ್ತಭಾವದಿಂದಲೇ ಸೃಜಿಸಿದ್ದಾರೆ. ಇದೊಂದು ಸೃಜನಶೀಲ ಸಾಹಿತ್ಯದ ವಿಶೇಷತೆಯೂ ಹೌದು. ಸೃಜನಶೀಲ ಸಾಹಿತ್ಯದಲ್ಲಿ ಗಾಂಧೀಜಿಯವರನ್ನು ದೈವಸ್ವರೂಪಿಯಾಗಿ, ಪವಾಡಪುರುಷನಾಗಿ, ಅವತಾರಪುರುಷನಾಗಿ, ಸ್ವಾತಂತ್ರ್ಯದ ಭೈರವನಾಗಿ, ಸ್ವಾತಂತ್ರ್ಯಶಿಲ್ಪಿ, ಎಲ್ಲರ ಜನಮಾನಸದಲ್ಲಿ ನಿಂತ ಮಹಾತ್ಮನಾಗಿ ಹೀಗೆ ಹಲವು ಬಗೆಯಾಗಿ ಗಾಂಧೀಜಿಯನ್ನು ಪ್ರತಿನಿಧಿಸಿದ್ದಾರೆ. ಗಾಂಧೀಜಿಯವರ ವ್ಯಕ್ತಿತ್ವ ಮತ್ತು ತತ್ವಚಿಂತನೆಗಳು ಸೃಜನಶೀಲ ಸಾಹಿತ್ಯದದೊಳಗೆ ಒಂದು ಹೊಸ ಮೆರುಗನ್ನು ಪಡೆಯುತ್ತವೆ. ಸೃಜನೇತರದಲ್ಲಿ ಅವು ಇದ್ದ ಸ್ಥಿತಿಯಲ್ಲೇ ನೀತಿ ಸಂಹಿತೆಯಂತೆ ನಿರೂಪಿತವಾಗುತ್ತವೆ.

೫. ವ್ಯಕ್ತಿ ಮತ್ತು ಶಕ್ತಿ

ಗಾಂಧೀಜಿಯವರದ್ದು ಮೌಲ್ಯಾಧಾರಿತ ಬದುಕು. ಮೌಲ್ಯವನ್ನೇ ವ್ಯಕ್ತಿತ್ವವಾಗಿಸಿದ ವ್ಯಕ್ತಿತ್ವ ನಂತರ ಶಕ್ತಿಯಾಗಿ, ಗಾಂಧಿತತ್ವಗಳಾಗಿ ಪ್ರಚಲಿತಗೊಂಡಿರುವುದು ಸಹಜ. "ಕರ್ನಾಟಕವು ಗಾಂಧೀಜಿ ಅವರನ್ನು ಕೇವಲ ಭಾವನಾತ್ಮಕವಾಗಿ ಮಾತ್ರ ತೆಗೆದುಕೊಳ್ಳಲಿಲ್ಲ; ನೋಡಲಿಲ್ಲ. ಅದು ನಾಡಿನ ಜೀವಸಂಬಂಧಿ ನೆಲೆಯಾಗಿ ಗಾಂಧಿ ತನ್ನತ್ತ ಸೆಳೆದುಕೊಂಡಿತು. ಭಾರತವೇ ಆ ಗಾಂಧಿ ಸಂತನ ಹಿಂದೆ ನಡೆಯಿತು. ಈ ಮಾತು ಕರ್ನಾಟಕಕ್ಕೆ ಹೊರತಾದುದಲ್ಲ, ಅವರು ಕವಿಗಳಿಗೆ, ಬರಹಗಾರರಿಗೆ, ಕಲಾವಿದರಿಗೆ, ವಿಜ್ಞಾನಿಗಳಿಗೆ, ಸಮಾಜಶಾಸ್ತ್ರಜ್ಞರಿಗೆ, ಹೋರಾಟಗಾರರಿಗೆ, ಸತ್ಯವಂತರಿಗೆ, ಧಾರ್ಮಿಕ ಚಿಂತಕರಿಗೆ ಒಂದು ಬಗೆಯ 'ಶಕ್ತಿ'ಯನ್ನು ಪ್ರದಾನ ಮಾಡಿದರು"(ಶ್ರೀನಿವಾಸಯ್ಯ.ಹೋ.; ೨೦೦೪; ಪು. ೪) ಎಂದು ಡಾ. ಹೋ. ಶ್ರೀನಿವಾಸಯ್ಯ ಅವರು ತಮ್ಮ ವಿಚಾರಗಳನ್ನು ಅರ್ಥಪೂರ್ಣ ಗೊಳಿಸಿದ್ದಾರೆ. ಹೀಗಾಗಿ ಗಾಂಧೀಜಿ ಒಬ್ಬ ವ್ಯಕ್ತಿಯಾಗಿ ತೋರದೆ ಅವರೊಂದು ಶಕ್ತಿಯಾಗಿ,

ಚೈತನ್ಯವಾಗಿ ಕನ್ನಡ ಸಾರಸ್ವತ ಲೋಕದಲ್ಲಿ ಅಭಿವ್ಯಕ್ತಿ ಪಡೆದಿದ್ದಾರೆ. ಕನ್ನಡ ಲೇಖಕರು ಗಾಂಧೀಜಿಯವರನ್ನು ವ್ಯಕ್ತಿಯಾಗಿ ಮತ್ತು ಒಂದು ಶಕ್ತಿ(ತತ್ವ)ಯಾಗಿ ಪರಿಭಾವಿಸಿದ್ದೇ ಹೆಚ್ಚು. ಗಾಂಧಿ ಟೋಪಿ, ಉರುಟು ಕನ್ನಡಕ, ಕೋಲು, ಕಚ್ಚೆಪಂಚೆ, ಸೊಂಟದ ಚೈನ್ ಗಡಿಯಾರ, ಬೋಳುತಲೆ, ಸರಳ ಉಡುಪು, ಅವರ ಆಹಾರ ಪದ್ಧತಿ ಮುಂತಾದವು ಮೇಲ್ನೋಟಕ್ಕೆ ಗಾಂಧಿಯವರ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತವೆ. ಅಂತರಾಳದಲ್ಲಿ ಅವು ಶಕ್ತಿ ಕೇಂದ್ರಗಳೇ. ಅಂದರೆ ಕಥನ ತಂತ್ರಗಾರಿಕೆಯಲ್ಲಿ ಅವು ಸಾಂಕೇತಿಕವಾಗಿ ಬೇರೆ ಬೇರೆ ಸಂದೇಶಗಳನ್ನು ನಿರ್ವಹಿಸುತ್ತವೆ. ಹರಿಜನರಿಗೆ ದೇವಾಲಯ ಪ್ರವೇಶ, ಪಾನನಿರೋಧ, ಖಾದಿ ಆಂದೋಲನ, ವಯಸ್ಕರ ಶಿಕ್ಷಣ, ವಿದೇಶಿ ವಸ್ತ್ರಗಳ ದಹನ ಮುಂತಾದ ರಚನಾತ್ಮಕ ಕಾರ್ಯಗಳನ್ನು ಮತ್ತು ಗಾಂಧಿ ಚಿಂತನೆಗಳನ್ನು ಒಂದು ಶಕ್ತಿಯಾಗಿ, ಮೌಲ್ಯವಾಗಿ ಪರಿಭಾವಿಸಿದ್ದಾರೆ. ರಾಷ್ಟ್ರೀಯ ಹೋರಾಟದ ಉರುಬಿನ ಕಾಲವೇ ಕನ್ನಡ ನವೋದಯದ ಕಾಲವೂ ಹೌದು. ಆಧುನಿಕ ಕನ್ನಡ ಕಾವ್ಯದ ಈ ಯುಗ. ಗಾಂಧೀಯುಗದ ಜೊತೆಗೇ ಆರಂಭಗೊಂಡಿತ್ತು. ಇದರಿಂದಾಗಿ ಈ ಯುಗ ಗಾಂಧಿ ಕುರಿತು ಪ್ರತಿಕ್ರಿಯಿಸಲೇಬೇಕಾದ ಒತ್ತಡವನ್ನು ಅನುಭವಿಸಿತು. ೨೦ನೇ ಶತಮಾನದ ಆರಂಭದ ದಶಕಗಳಲ್ಲಿ ಬದುಕಿದ ಕವಿಯೊಬ್ಬನಿಗೆ ಗಾಂಧಿಯೊಂದಿಗಿನ ಮುಖಾಮುಖಿಯಿಂದ ತಪ್ಪಿಸಿಕೊಳ್ಳಲಾಗದ ವಾಸ್ತವ ಎನಿಸಿತು. ಆದರೆ ಹೀಗೆ ಗಾಂಧಿಯನ್ನು ಆವಾಹಿಸಿಕೊಳ್ಳುವಲ್ಲಿ ಅಲ್ಲಿ ಮೈತಳೆದುದು ಬರಿ ಗಾಂಧಿ ಅಲ್ಲ ಎಂಬುದನ್ನು ಮರೆಯಲಾಗದು, ಜೊತೆಗೆ ಗಾಂಧೀಜಿ ಅಲ್ಲಿ ಕೇವಲ ಒಬ್ಬ ವ್ಯಕ್ತಿಯಾಗದೆ, ಭಾರತದ ರಾಷ್ಟ್ರೀಯತೆಯನ್ನು ವಿವರಿಸಿಕೊಳ್ಳಲಾದ ಮಾದರಿಯೊಂದರ ಪ್ರತಿನಿಧಿಯಾಗಿಯೇ ದಾಖಲಾಗುತ್ತಾರೆ. ಹೀಗೆ ಗಾಂಧೀ ಬರೀ ವ್ಯಕ್ತಿಯಾಗಿರದೇ ಒಂದು ಶಕ್ತಿಯಾಗಿ ದೇಶದ ಮನಸ್ಸನ್ನು ಮತ್ತು ಲೇಖಕರನ್ನು ಪ್ರಭಾವಿಸಿದ್ದಾರೆ.

ಕಥಾ ಸಾಹಿತ್ಯದಲ್ಲಿ ಗಾಂಧೀಜಿಯವರನ್ನು ವ್ಯಕ್ತಿ ಮತ್ತು ಶಕ್ತಿಯಾಗಿ ಪರಿಭಾವಿಸಿದುದನ್ನು ಕಾಣಬಹುದು. ಗಾಂಧೀಜಿಯ ಹೋರಾಟದ ಪ್ರಭಾವದಿಂದ ೧೯೪೨ನೆಯ ಆಗಸ್ಟ್ ಕಥೆಯನ್ನು ರಚಿಸಿದ್ದಾರೆ. ಈ ಕತೆಯ ನಾಯಕ ಹೇಮುಕಲಾನಿ ಗಾಂಧೀವಾದದಿಂದ ಪ್ರೇರಣೆ ಹೊಂದಿರುವುದನ್ನು ಗುರುತಿಸಬಹುದು. ಅನಕೃ ಅವರು 'ಜೈ ಹಿಂದ್' ಕತೆಯನ್ನು ಖಾದಿ ಆಂದೋಲನವನ್ನು ವಸ್ತುವಾಗಿಸಿದ್ದಾರೆ. ರಂ.ಶ್ರೀ. ಮುಗಳಿಯವರು 'ಅನ್ನ' ಕಾದಂಬರಿಯಲ್ಲಿ ಖಾದಿ ವಿಚಾರವನ್ನು ತಂದಿದ್ದಾರೆ. ಟಿ.ಎಂ. ಭಾಸ್ಕರ ಅವರು 'ಗಾಂಧಿ ಟೋಪಿ' ನಾಟಕದಲ್ಲಿ ಗಾಂಧಿ ಟೋಪಿಯನ್ನು ಸಾಂಕೇತಿಸಿ ಗಾಂಧೀವಾದವನ್ನು ವಿವರಿಸಿದ್ದಾರೆ. ಈ ನಾಟಕದಲ್ಲಿ ಗಾಂಧೀ ವಿಚಾರಗಳನ್ನು ಮುಖಾಮುಖಿಯಾಗಿಸಲಾಗಿದೆ. ಪೂರ್ಣಚಂದ್ರ ತೇಜಸ್ವಿಯವರ 'ಗಾಂಧೀಜಿ ದೆಸೆಯಿಂದ' ಕಥೆಯಲ್ಲಿ ಗಾಂಧಿಯ ವ್ಯಕ್ತಿತ್ವವನ್ನು ಆದರ್ಶವಾಗಿ ಮತ್ತು ವಿಮರ್ಶಾತ್ಮಕವಾಗಿ ಪರಿಭಾವಿಸಿದ್ದಾರೆ. ಬೆಸರಗರಹಳ್ಳಿ ರಾಮಣ್ಣ ಅವರು 'ಪ್ರಜಾಪ್ರಭುತ್ವದ ಮೂರು ಮಂಗಗಳು' ಎಂಬ ಕತೆಯಲ್ಲಿ ಗಾಂಧೀಜಿಯ ತತ್ವ-ಚಿಂತನೆಗಳನ್ನು ಸರಳತೆ ಮತ್ತು ಸಂಕೀರ್ಣತೆಗಳಾಗಿ ಅಭಿವ್ಯಕ್ತಿಸಿದ್ದಾರೆ. ಗಾಂಧೀಜಿಯನ್ನು

ವ್ಯಕ್ತಿಗಿಂತ ಒಂದು ಶಕ್ತಿಯಾಗಿ ಪ್ರಭಾವಿಸಿದ್ದುದ್ದೇ ಹೆಚ್ಚು. ಅದಕ್ಕೆ ಶಾಂತದೇವಿ ಕಣವಿಯವರ 'ಗಾಂಧೀ ಮಗಳು' ಕತೆ ಉತ್ತಮ ನಿದರ್ಶನವಾಗುತ್ತದೆ.

ಕಾವ್ಯಗಳಲ್ಲಿ ಗಾಂಧೀಜಿಯವರ ವ್ಯಕ್ತಿತ್ವವನ್ನು ಸೂಚ್ಯವಾಗಿ ಸಂಕೇತಿಸಲಾಗಿದೆ. "ನಿನ್ನ ಬೆತ್ತದಲಿ ಅದೆಂಥ ಗಟ್ಟಿತನ ಭೂಮಿಯನ್ನೇ ಸತ್ಯ ಎತ್ತುಹಿಡಿಯಿತು"(ಚಂದ್ರಶೇಖರ ಪಾಟೀಲ ಮತ್ತು ಇತರರು; ೧೯೯೮; ಪು. ೧೪೭) ಎಂದು ಡಾ. ಶ್ರೀನಿವಾಸ ಕುಲಕರ್ಣಿಯವರು 'ಬಾಪೂಗೆ!' ಕವಿತೆಯ ಮೂಲಕ ಆರಾಧಿಸಿದ್ದಾರೆ. "ಉಪ್ಪೇ ಇರಲಿ, ಊಟವಿರಲಿ, ಒಡವೆ ವಸ್ತ್ರ ಏನೇ ಇರಲಿ, ಪ್ರತಿಯೊಂದೂ ಅಸ್ತ್ರವಾಗಿ ಬಿಡಲು ಕಲಿಸಿದ, ಪರದೇಶದ ವಸ್ತ್ರ ಸುಟ್ಟು, ತೊಟ್ಟ ಒಡವೆ ಬಿಚ್ಚಿಕೊಟ್ಟು, ಗುರಿಯನೊಂದೆ ನೆಚ್ಚುವಂಥ ಸ್ಥೈರ್ಯ ಕಲಿಸಿದ"(ಅದೇ., ಪು. ೧೦೫-೧೦೬) ಎಂದು ಸುಮತೀಂದ್ರ ನಾಡಿಗ್ ಅವರು ಗಾಂಧೀಜಿಯ ರಚನಾತ್ಮಕ ಕಾರ್ಯಗಳನ್ನು 'ಗಾಂಧೀಜಿಯ ಸಂವಹನ ಮಾಧ್ಯಮಗಳು' ಕವಿತೆಯಲ್ಲಿ ಉಲ್ಲೇಖಿಸಿದ್ದಾರೆ. ಬಿ.ಟಿ. ಲಲಿತಾನಾಯಕ್ ಅವರು 'ನಾನು ನಿನ್ನಂಗ ಅಜ್ಜ' ಕವಿತೆಯಲ್ಲಿ "ಥೇಟ್ ನಿನ್ನಂಗ ಅಜ್ಜಾ ನಾನೂ ಬೋಳು ತಲಿ ಬಿಳಿದೊಗಲು ಅಗಲ ಕಿವಿ ಕೃಷಕಾಯ ಕಣ್ಣಿಗೆ ಹಾಕಿಹೆನು ಹೊಳೆವ ಕನ್ನಡಕ. ದೇಶಕ್ಕಾಗಿ ದುಡಿದವ ನೀ ವೇಷ ಬಲು ಸರಳ"(ಅದೇ., ಪು. ೨೧೨) ಎಂದು ಗಾಂಧೀಜಿಯವರ ವ್ಯಕ್ತಿತ್ವವನ್ನು ಆಪ್ತಭಾವದಿಂದ ಹಿಡಿದಿಟ್ಟಿದ್ದಾರೆ. "ಸಂದಿ ಗೊಂದಿಗ ಸಹಿತ ನಿನ್ನ ಹೆಸರಿಟ್ಟು ಬಡಕ, ದೇಹ ಒಡಕು ಚಾಳೀಸ ಬರೇ ಬತ್ಲ್ಯಾ ಕಯ್ಯಾಗೊಂದು ಮುರಕ ಕಟಗಿ ಹಿಡ್ದು ನಿಂತ ನಿನ್ನ ಇಂಥ ಅಸಹ್ಯ ಮೂರ್ತಿ ನಗರದ ನಡು ಮಧ್ಯೆ ಬೀದಿಯೊಳಗೆ ನಿಲ್ಲಿಸಲಕ ನಮಗ ನಾಚಗಿ ಬಂತಪ್ಪ" (ಅದೇ., ಪುಟ ೨೧೭) ಎಂದು ಪ್ರಭು ಖಾನಾಪುರೆ ಅವರು 'ಗಾಂಧಿ' ಕವಿತೆಯಲ್ಲಿ ಗಾಂಧಿಯ ವ್ಯಕ್ತಿತ್ವ ಅಪಮೌಲ್ಯವಾಗುತ್ತಿರುವುದನ್ನು ವಿಡಂಬಿಸಿದ್ದಾರೆ.

ಕನ್ನಡ ಲೇಖಕರು ಗಾಂಧೀಜಿಯ ವ್ಯಕ್ತಿತ್ವ ಮತ್ತು ಅವರ ತತ್ವಗಳಿಂದ ಒಂದಿಲ್ಲೊಂದು ರೀತಿಯಲ್ಲಿ ಪ್ರಭಾವಿತರಾಗಿದ್ದಾರೆ. ಹಲವು ಮುಖಗಳಿಂದ ಅಥವಾ ವಿಭಿನ್ನಭಾವಗಳಿಂದ ಅಭಿವ್ಯಕ್ತಿಸಿದ್ದಾರೆ. ಹಾಗಾಗಿ ವ್ಯಕ್ತಿತ್ವ ಮತ್ತು ಒಂದು ಶಕ್ತಿಯಾಗಿ ಗಾಂಧೀಜಿ ಪ್ರಭಾವಿಸಿರುವುದು ಹೆಚ್ಚು. ಅವರನ್ನು ಆರಾಧಕ ಭಾವದಲ್ಲಿ, ವೈಚಾರಿಕ ನಿಲುವಿನಲ್ಲಿ, ವಿಮರ್ಶಾ ಪ್ರಜ್ಞೆಯಲ್ಲಿ, ಮುಖಾಮುಖಿಗೊಳಿಸುವ ಮೂಲಕ, ಸಂವೇದನಾಶೀಲವಾಗಿ ಅಥವಾ ಆನ್ವಯಿಕ ರೂಪದಲ್ಲಿ ಪರಿಭಾವಿಸಲಾಗಿದೆ. ಗಾಂಧೀಜಿಯನ್ನು ಕೆಲವರು ದೈವವಾಗಿ, ಪವಾಡ ಸದೃಶವಾಗಿ, ಅವತಾರ ಪುರುಷರಂತೆ ಕಂಡರಿಸಿದ್ದಾರೆ. ಇನ್ನೂ ಕೆಲವರು ವ್ಯಂಗ್ಯವಾಗಿ ವಿಡಂಬನೆಯಿಂದ ಚಿತ್ರಿಸಿದ್ದಾರೆ. ಒಟ್ಟಾರೆ ಕನ್ನಡ ಸಾಹಿತ್ಯದಲ್ಲಿ ವ್ಯಷ್ಟಿ ಪ್ರಜ್ಞೆಯಿಂದ ಅಲ್ಲಲ್ಲಿ ಭಿನ್ನ-ವಿಭಿನ್ನಭಾವಗಳು ತೋರಿದರೂ ಸಮಷ್ಟಿ ಪ್ರಜ್ಞೆಯಲ್ಲಿ ಗಾಂಧೀಜಿಯವರನ್ನು ಆರಾಧಕ ಇಲ್ಲವೇ ಆದರ್ಶೀಕೃತವಾಗಿ ಪ್ರತಿಪಾದಿಸಿರುವುದನ್ನು ವ್ಯಾಖ್ಯಾನಿಸಬಹುದು.

ಅಧ್ಯಯನದ ಫಲಿತಗಳು

೧. ನವೋದಯ ಕಾಲಘಟ್ಟದ ಲೇಖಕರು ಗಾಂಧೀಜಿಯವರನ್ನು ಪೂಜ್ಯಭಾವವಾಗಿ ಸ್ವೀಕರಿಸಿ ಆರಾಧಕ ನೆಲೆಯಲ್ಲಿ ಕಂಡರಿಸಿದ್ದಾರೆ.

೨. ಪ್ರಗತಿಶೀಲ ಕಾಲಘಟ್ಟದಲ್ಲಿ ಗಾಂಧೀಜಿಯವರನ್ನು ಆದರ್ಶೀಕೃತಭಾವವಾಗಿ ಪ್ರತಿಪಾದಿಸಿದ್ದಾರೆ.

೩. ನವ್ಯರು ಸಹ ಗಾಂಧಿಯನ್ನು ಆದರ್ಶೀಯನೆಲೆಯ ಜೊತೆಗೆ ಭ್ರಮನಿರಸನವಾಗಿ ಅಭಿವ್ಯಕ್ತಿಸಿದ್ದಾರೆ.

೪. ದಲಿತ - ಬಂಡಾಯ ಕಾಲಘಟ್ಟದ ಸಾಹಿತ್ಯದಲ್ಲಿ ಗಾಂಧೀಜಿಯವರನ್ನು ಪ್ರಶ್ನಿಸುವುದರ ಜೊತೆಗೆ ಮುಖಾಮುಖಿಯಾಗಿಸಿದ್ದಾರೆ ಮತ್ತು ಕೆಲವು ಕವಿತೆಗಳಲ್ಲಿ ವಿಡಂಬನೆ ಅಥವಾ ವ್ಯಂಗ್ಯ ಕಂಡುಬರುತ್ತದೆ.

೫. ಮಹಿಳೆಯರು ಗಾಂಧೀಜಿಯವರನ್ನು ಅರಾಧನಾ ಭಾವವಾಗಿ, ಪೂಜ್ಯವಾಗಿ ಸ್ವೀಕರಿಸುತ್ತಾ ಬಂದಿದ್ದಾರೆ. ಆದರೂ ಕಸ್ತೂರಬಾ ಕುರಿತ ಧೋರಣೆಯನ್ನು ಪ್ರಶ್ನಿಸಿದ್ದಾರೆ.

೬. ಗಾಂಧೀಜಿಯವರನ್ನು ಕಥೆ, ಕಾದಂಬರಿ, ನಾಟಕ ಮುಂತಾದ ಪ್ರಕಾರಗಳಿಗಿಂತಲೂ ಕಾವ್ಯಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಚಿತ್ರಿಸಲಾಗಿದೆ.

೭. ಕಾದಂಬರಿಗಳಲ್ಲಿ ಮತ್ತು ಕಥೆಗಳಲ್ಲಿ ಗಾಂಧಿಯವರ ಆದರ್ಶಗಳು ಮತ್ತು ತತ್ವಗಳನ್ನು ಅಳವಡಿಸಿ ಒಂದು ಪಾತ್ರದ ಮೂಲಕ ಗಾಂಧಿಯನ್ನು ಚಿತ್ರಿಸಲಾಗಿದೆ.

೮. ಕೆಲವು ಕಥೆಗಳಲ್ಲಿ ಗಾಂಧೀಜಿಯವರನ್ನು ನೇರವಾಗಿ ಚಿತ್ರಿಸಲಾಗಿದೆ ಮತ್ತು ಇಲ್ಲಿಯೂ ಒಂದು ಪಾತ್ರಕ್ಕೆ ಸಮೀಕರಿಸಿ ಅಭಿವ್ಯಕ್ತಿಸಲಾಗಿದೆ.

೯. ನಾಟಕಗಳಲ್ಲಿ ಗಾಂಧೀಜಿಯೇ ಪಾತ್ರವಾಗಿ ವ್ಯಕ್ತಗೊಳ್ಳುತ್ತಾರೆ. ನಾಟಕವು ಗಾಂಧೀಜಿಯವರ ಸಮಗ್ರ ವ್ಯಕ್ತಿತ್ವವನ್ನು ಎಲ್ಲಾ ಜನಸಾಮಾನ್ಯರಿಗೂ ತಿಳಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

೧೦. ಇತರ ಸೃಜನೇತರ ಸಾಹಿತ್ಯದಲ್ಲಿಯೂ ಗಾಂಧೀಜಿಯವರನ್ನು ಆದರ್ಶವಾಗಿಯೇ ಕಾಣಲಾಗಿದೆ.

೧೧. ಮಕ್ಕಳ ಸಾಹಿತ್ಯದ ಬಾಪುವಾಗಿ, ಸ್ತ್ರೀಯರು ಅಂತಃಕರಣದ ನೆಲೆಯಲ್ಲಿ ಕಂಡರಿಸಿದ್ದಾರೆ.

೧೨. ಕನ್ನಡ ಲೇಖಕರು ಗಾಂಧೀಜಿಯವರ ಪ್ರತ್ಯಕ್ಷ ಇಲ್ಲವೆ ಪರೋಕ್ಷ ಪ್ರಭಾವದ ಫಲವಾಗಿ ಉತ್ತಮ ಸಾಹಿತ್ಯ ನಿರ್ಮಿಸಿದ್ದಾರೆ. ಈ ಸಾಹಿತ್ಯದ ಒಂದು ಭಾಗ ಗಾಂಧೀಜಿಯವರನ್ನೇ ನೇರವಾಗಿ ಕುರಿತದ್ದು; ಇನ್ನೊಂದು ಭಾಗ ಅವರ ಸ್ಫೂರ್ತಿಯಿಂದ ಹೊಮ್ಮಿದ್ದು. ಕನ್ನಡದಲ್ಲಿ ಗಾಂಧೀಜಿಯವರ ಸ್ಫೂರ್ತಿಯಿಂದ ರಚನೆಯಾದ ಸಾಹಿತ್ಯ ಅಧಿಕವಾಗಿದೆ.

೧೩. ಕಾವ್ಯಕ್ಷೇತ್ರ ಗಾಂಧೀಜಿಯವರ ಒಂದೊಂದು ಭಂಗಿ, ಕಾರ್ಯ, ಆಲೋಚನೆ ಮತ್ತು ಇದೆಲ್ಲಕ್ಕಿಂತಲೂ ಹೆಚ್ಚಾಗಿ ಗಾಂಧೀಜಿಯವರ ಸಾವು ಕನ್ನಡ ಕವಿಗಳ ಪ್ರತಿಭೆಯನ್ನು ಸೆಳೆದುಕೊಂಡಿದೆ. ಸ್ಥೂಲವಾಗಿ ಹೇಳುವುದಾದರೆ, ಕೆಲವೊಂದು ಅಪವಾದಗಳನ್ನು ಬಿಟ್ಟರೆ ಗಾಂಧೀ ಸಾಹಿತ್ಯ ಭಾವಾವೇಶಪೂರ್ಣವಾಗಿದೆ.

೧೪. ಗಾಂಧೀಜಿಯವರ ಜೀವನದ ಸಂಗತಿಗಳ ವಸ್ತುನಿಷ್ಠ ಮೌಲ್ಯಗಳಾಗಲೀ, ಚಿಂತನಾತ್ಮಕವಾದ ಅಥವಾ ಕಲ್ಪನಾತ್ಮಕವಾದ ಸೃಷ್ಟಿಯಾಗಲೀ ಸರಿಯಾದ ರೀತಿಯಲ್ಲಿ ಮೂಡಿಬಂದಿಲ್ಲವೆಂದು ಹೇಳಬಹುದು.

೧೫. ಕಥೆ, ಕಾದಂಬರಿಗಳಲ್ಲಿ ಗಾಂಧೀಜಿಯ ನೇರ ಅಭಿವ್ಯಕ್ತಿಗಿಂತ ಪರೋಕ್ಷ ಅಭಿವ್ಯಕ್ತಿಯೇ ಹೆಚ್ಚು ಪರಿಣಾಮಕಾರಿಯಾಗಿದೆ.

೧೬. ವ್ಯಷ್ಟಿ ಪ್ರಜ್ಞೆಯಲ್ಲಿ ಗಾಂಧೀಜಿಯವರನ್ನು ಚಿಂತಕರು, ವಿಮರ್ಶಕರು ಹಾಗೂ ಮಕ್ಕಳ ಸಾಹಿತ್ಯದಲ್ಲಿ, ಸ್ತ್ರೀಯರ ಧೋರಣೆಯಲ್ಲಿ, ದಲಿತ - ಬಂಡಾಯರ ಅಭಿವ್ಯಕ್ತಿಯಲ್ಲಿ ಹೇಗೆ ಚಿತ್ರಿಸಲಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಒಟ್ಟಾರೆಯಾಗಿ ಗಾಂಧೀಜಿಯವರನ್ನು ಕನ್ನಡ ಸಾಹಿತ್ಯ ಆದರ್ಶೀಕೃತ ನೆಲೆಯಲ್ಲಿ ಮತ್ತು ಆರಾಧಕ ಭಾವದಲ್ಲಿ ಸೃಜಿಸಿದೆ. ವ್ಯಷ್ಟಿ ಪ್ರಜ್ಞೆಯಾಗಿ ಅಲ್ಲಲ್ಲಿ ಭಿನ್ನಭಾವಗಳು ಕಾಣಬಂದರೂ ಅಂತ್ಯದಲ್ಲಿ ಅವುಗಳ ಗುರಿ ಗಾಂಧೀಜಿಯರನ್ನು ಆತ್ಮೀಯವಾಗಿ, ಪೂಜ್ಯವಾಗಿ ಸ್ವೀಕರಿಸುವುದೇ ಆಗಿದೆ.

❖❖❖

ಅನುಬಂಧಗಳು

೧. ಆಕರ ಸೂಚಿ

(i). ಪ್ರಧಾನ ಆಕರಗಳು

(ii). ಆನುಷಂಗಿಕ ಆಕರಗಳು(ಪರಾಮರ್ಶನ ಗ್ರಂಥಗಳು)

೨. ಕನ್ನಡದಲ್ಲಿ ಗಾಂಧೀಜಿಯವರನ್ನು ಕುರಿತ ಸೃಜನಶೀಲ ಸಾಹಿತ್ಯ ಸೂಚಿ

(i). ಕಾವ್ಯ

(ii). ಕಾದಂಬರಿ

(iii). ಸಣ್ಣ ಕಥೆ

(iv). ನಾಟಕ

(v). ಶಿಶುಸಾಹಿತ್ಯ

೧. ಆಕರ ಸೂಚಿ

೧. ಪ್ರಧಾನ ಆಕರಗಳು

೧. ಅ.ನ.ಕೃ.; ೧೯೫೦; **ಅಮರ ಆಗಸ್ಟ್;** ಸಾಗರ ಪ್ರಕಾಶನ; ಬೆಂಗಳೂರು.

೨. ಅನುಸೂಯ ರಾವ್; ೧೯೭೭; **ಸಹನಶೀಲತೆ;** ಅಕ್ಷಯ ಪ್ರಕಾಶನ; ಬೆಂಗಳೂರು.

೩. ಅಲ್ಲಮಪ್ರಭು ಬೆಟ್ಟದೂರು; ೧೯೭೭; "ಇದು ನನ್ನ ಭಾರತ"; ಸಂಕ್ರಮಣ ಪ್ರಕಾಶನ; ಧಾರವಾಡ.

೪. ಅಲ್ಲಮಪ್ರಭು ಬೆಟ್ಟದೂರು(ಸಂ); ೧೯೯೩; "ಕವಿತೆ : ೧೯೯೧"; ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೫. ಆನಂದಕಂದ; ೨೦೦೫; **ಮಗಳ ಮದುವೆ;** ಸಾಹಿತ್ಯ ಚಂದನ ಪ್ರಕಾಶನ; ಬೆಂಗಳೂರು.

೬. ಆರ್ಯ; ೨೦೦೦; **ದೇಶಿ ಪರದೇಶಿ ಕತೆಗಳು;** ಮನೋಹರ ಗ್ರಂಥಮಾಲಾ; ಧಾರವಾಡ.

೭. ಇನಾಂದಾರ್ ವಿ.ಎಂ.; ೧೯೯೧; **ವಿಜಯಯಾತ್ರೆ;** ಗೀತಾ ಬುಕ್‌ಹೌಸ್; ಮೈಸೂರು.

೮. ಇನಾಂದಾರ್ ವಿ.ಎಂ.; ೧೯೯೩; **ಮೂರಾಬಟ್ಟೆ;** ಗೀತಾ ಬುಕ್‌ಹೌಸ್; ಮೈಸೂರು.

೯. ಉದಯಕುಮಾರ್ ವಿ.(ಗೆಜ್ಜೆಹೆಜ್ಜೆ); ೨೦೦೯; **ಹತ್ತು ನಾಟಕಗಳು;** ಕಿಟಕಿ ಪ್ರಕಾಶನ; ಮೈಸೂರು.

೧೦. ಕುವೆಂಪು ಐ.ಮು. ೧೯೯೬; **ಬಲಿದಾನ;** ಉದಯರವಿ ಪ್ರಕಾಶನ; ಮೈಸೂರು.

೧೧. ಕುವೆಂಪು; ೧೯೮೦; **ನೆನಪಿನ ದೋಣಿಯಲ್ಲಿ;** ಸಹ್ಯಾದ್ರಿ ಪ್ರಕಾಶನ; ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್; ಮೈಸೂರು.

೧೨. ಕೃಷ್ಣಕುಮಾರ್ ಸಿ.ಪಿ.; ೨೦೦೦; **ಸಿ.ಪಿ.ಕೆ. ಸಮಗ್ರ ಕವಿತೆ(೧೯೫೫-೨೦೦೦);** ಸಂವಹನ ಪ್ರಕಾಶನ; ಮೈಸೂರು.

೧೩. ಕೇಶವ ಮೊರಬ್; ೧೯೮೪; **ಅವಿಶ್ವಾಸ;** ಭಾಗ್ಯಲಕ್ಷ್ಮಿ ಪ್ರಕಾಶನ; ಬೆಂಗಳೂರು.

೧೪. ಗುರುಮೂರ್ತಿ ಪೆಂಡಕೂರು(ಸಂ); ೧೯೯೨; **ಹೆಜ್ಜೆಗಳು(ಬಳ್ಳಾರಿ ಜಿಲ್ಲಾ ಪ್ರಾತಿನಿಧಿಕ ಕಥಾ ಸಂಕಲನ);** ಕನ್ನಡ ಸಾಹಿತ್ಯ ಪರಿಷತ್ತು; ಬಳ್ಳಾರಿ ಜಿಲ್ಲಾ ಸಮಿತಿ; ಹಗರಿಬೊಮ್ಮನಹಳ್ಳಿ.

೧೫. ಗೋಪಾಲಗೌಡ ಕಲ್ಪಮಂಜರಿ; ೨೦೦೧; **ಸೀತಮ್ಮನ ಬಯಕೆ(ಕಥಾ ಸಂಕಲನ);** ಲಕ್ಷ್ಮೀ ಪ್ರಕಾಶನ; ಬೆಂಗಳೂರು.

೧೬. ಗೋವಿಂದ ಪೈ; ೨೦೦೯; **ಚಿತ್ರಭಾನು ಅಥವಾ ೧೯೪೨;** ಕಾವ್ಯಾಲಯ ಪ್ರಕಾಶನ; ಮೈಸೂರು.

೧೭. ಗೋವಿಂದರಾಜು ಗಿರಡ್ಡಿ(ಸಂ); ೧೯೮೩; "ಕನ್ನಡ ಕಥಾ ಸಂಕಲನ"; ವಿಶ್ವ ಕನ್ನಡ ಸಮ್ಮೇಳನ; ಬೆಂಗಳೂರು.

೧೮. ಚೆನ್ನಬಸಪ್ಪ ಕೋ.; ೨೦೦೧; **ಬೇಡಿ ಕಳಚಿತು ದೇಶ ಒಡೆಯಿತು;** ನವಕರ್ನಾಟಕ ಪ್ರಕಾಶನ; ಬೆಂಗಳೂರು.

೧೯. ಚೆನ್ನವೀರ ಕಣವಿ; ೧೯೯೬; **ಸಮಗ್ರ ಕಾವ್ಯ;** ವೀರಶೈವ ಅಧ್ಯಯನ ಅಕಾಡೆಮಿ; ಬೆಳಗಾವಿ.

೨೦. ಚೆನ್ನವೀರ ಕಣವಿ; ೨೦೦೩; **ಕಣವಿ ಸಮಗ್ರ ಕಾವ್ಯ(ಕವಿತೆಗಳು ೧೯೪೯-೨೦೦೨);** ಸಂವಹನ ಪ್ರಕಾಶನ, ಮೈಸೂರು.

೨೧. ಚಂದ್ರಶೇಖರ ಕಂಬಾರ; ೨೦೦೮; **ನೆಲಸಂಪಿಗೆ;** ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೨೨. ಚಂದ್ರಶೇಖರ ಕೆ.ಟಿ.(ಸಂ); ೨೦೦೫; **ಅ.ನ.ಕೃ. ಅವರ ಸಮಗ್ರ ಕಥಾ ಸಂಕಲನ;** ಸಾಗರ ಪ್ರಕಾಶನ; ಬೆಂಗಳೂರು.

೨೩. ಚಂದ್ರಶೇಖರ ನಾಗತಿಹಳ್ಳಿ; ೧೯೯೫; ೨೦೦೮; **ವಲಸೆ ಹಕ್ಕಿಯ ಹಾಡು;** ಅಭಿವ್ಯಕ್ತಿ ಪ್ರಕಾಶನ; ಬೆಂಗಳೂರು.

೨೪. ಚಂದ್ರಶೇಖರ ಪಾಟೀಲ ಮತ್ತು ಇತರರು(ಸಂ); ೧೯೯೮; **ಗಾಂಧಿ ಎಂಬುವ ಹೆಸರು;** ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೨೫. ತ.ರಾ.ಸು.; ೨೦೦೬; **ರಕ್ತ ತರ್ಪಣ;** ಓಂ ಶಕ್ತಿ ಪ್ರಕಾಶನ; ಬೆಂಗಳೂರು.

೨೬. ತಿಪ್ಪೇರುದ್ರಸ್ವಾಮಿ ಎಚ್. ಮತ್ತು ಸಿ.ಪಿ.ಕೆ.(ಸಂ); ೧೯೭೦; **ಪ್ರಬುದ್ಧ ಕರ್ನಾಟಕ;** ಗಾಂಧಿ ಸಂಪುಟ - ೫೧; ಸಂಚಿಕೆ - ೪; ಪ್ರಸಾರಾಂಗ; ಮೈಸೂರು ವಿಶ್ವವಿದ್ಯಾನಿಲಯ; ಮೈಸೂರು.

೨೭. ಧಾರವಾಡಕರ ರಾ.ಯ.(ಸಂ); ೧೯೬೦; **ಬಾಪೂ ಕಾವ್ಯಾಂಜಲಿ;** ಗಾಂಧಿ ಸ್ಮಾರಕ ನಿಧಿ ಪ್ರಕಾಶನ; ಧಾರವಾಡ.

೨೮. ದಂಡಪ್ಪ ಎಚ್. ಮತ್ತು ಇತರರು; ೨೦೦೬; **ಸುವರ್ಣ ಸಾಹಿತ್ಯ ವಿಮರ್ಶೆ;** ಕನ್ನಡ ಮತ್ತು ಸಂಸ್ಕೃತಿ ಇಲಾಖೆ; ಬೆಂಗಳೂರು.

೨೯. ದಿವಾಕರ್ ಎಸ್.; ೧೯೯೭; **ಶತಮಾನದ ಸಣ್ಣಕಥೆಗಳು;** ಪ್ರಿಸಂ ಬುಕ್ಸ್ ಪ್ರೈ.ಲಿ., ಬೆಂಗಳೂರು.

೩೦. ನರಸಿಂಹಾಚಾರ್ ಪು.ತಿ.; ೧೯೩೧; **ಧ್ವಜ ರಕ್ಷಣೆ;** ಕಾವ್ಯಾಲಯ ಪ್ರಕಾಶನ; ಮೈಸೂರು.

೩೧. ನಾಗವೇಣಿ ಎಚ್.; ೨೦೧೧; **ಗಾಂಧಿ ಬಂದ;** ಅಹರ್ನಿಶಿ ಪ್ರಕಾಶನ; ಶಿವಮೊಗ್ಗ.

೩೨. ನಿರುಪಮಾ; ೧೯೭೮; **ಕೆರೆ(ಕಥಾ ಸಂಕಲನ);** ಆರತಿ ಪಬ್ಲಿಕೇಷನ್ಸ್; ಬೆಂಗಳೂರು.

೩೩. ಪ.ಸು. ಭಟ್ಟ; ೧೯೬೭; **ಆತ್ಮಾರ್ಪಣೆ;** ವಿಜಯ ಭಾರತಿ ಪ್ರಕಾಶನ; ಬೆಂಗಳೂರು.

೩೪. ಪಾದೇಕಲ್ಲು ವಿಷ್ಣು ಭಟ್ಟ(ಸಂ); ೨೦೦೪; **ಕಡೆಂಗೋಡ್ಲು ಶಂಕರ ಭಟ್ಟರ ಸಮಗ್ರ ಕಾದಂಬರಿಯ ಸಂಪುಟ ಭಾಗ-೨;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ; ಉಡುಪಿ.

೩೫. ಪೂರ್ಣಚಂದ್ರ ತೇಜಸ್ವಿ. ಕೆ.ಪಿ.; ೨೦೦೭; **ಹುಲಿಯೂರಿನ ಸರಹದ್ದು ಸ್ವರೂಪ ನಿಗೂಢ ಮನುಷ್ಯರು(ಕಥಾ ಸಂಕಲನ);** ಪುಸ್ತಕ ಪ್ರಕಾಶನ; ಮೈಸೂರು.

೩೬. ಪ್ರತಿಮಾ ಮಿತ್ರ; ೨೦೦೧; **ನಾನೇಕೆ ಮಹಾತ್ಮನಲ್ಲ;** ಪ್ರತಿಮಾಮಿತ್ರ ಪ್ರಕಾಶನ; ಬೆಂಗಳೂರು.

೩೭. ಬಣಕಾರ ಪಿ.ಎಸ್.; ೨೦೦೬; **ಕ್ರಾಂತಿಕಾರರು(ಕಥಾ ಸಂಕಲನ);** ಐಬಿಎಚ್. ಪ್ರಕಾಶನ, ಬೆಂಗಳೂರು.

೩೮. ಬಸವರಾಜ ಕಟ್ಟೀಮನಿ; ೨೦೧೧; **ಸ್ವಾತಂತ್ರ್ಯದೆಡೆಗೆ;** ಸಪ್ನ ಬುಕ್‌ಹೌಸ್; ಬೆಂಗಳೂರು.

೩೯. ಬಸವರಾಜ ಕಟ್ಟೀಮನಿ; ೨೦೧೩; **ಮಾಡಿ ಮಡಿದವರು;** ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೪೦. ಬಾಳಾಸಾಹೇಬ ಲೋಕಾಪುರ; ೨೦೦೯; **ಹುತ್ತ;** ಲೋಹಿಯಾ ಪ್ರಕಾಶನ; ಬಳ್ಳಾರಿ.

೪೧. ಭೈರಪ್ಪ ಎಸ್.ಎಲ್.; ೨೦೦೪; **ದಾಟು;** ಸಾಹಿತ್ಯ ಭಂಡಾರ ಪ್ರಕಾಶನ; ಬೆಂಗಳೂರು.

೪೨. ಭಾಲಚಂದ್ರ ಫಾಣೇಕರ; ೧೯೯೦; **ನಾಲೇಹೊಲೆಯ;** ಸಮಾಜ ಪುಸ್ತಕಾಲಯ; ಧಾರವಾಡ.

೪೩. ಭಾಸ್ಕರ ಟಿ.ಎಂ.; ೨೦೦೦; **ಗಾಂಧಿ ಟೋಪಿ;** ಮುರುಗ ಪ್ರಕಾಶನ; ಗುಲಬರ್ಗಾ.

೪೪. ಮಹಾದೇವಯ್ಯ ಟಿ.ಆರ್.(ಸಂ); ೧೯೯೬; **ದಲಿತೋದಯ(ಭಾಗ-೧);** ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೪೫. ಮಾದೇಶ ಜಿ.ವಿ.; ೨೦೧೩; **ದಲಿತ ಗಾಂಧಿ;** ಸಂಜನ ಪ್ರಕಾಶನ; ಮಂಡ್ಯ.

೪೬. ಮಂಜಪ್ಪ ಕಡಿದಾಳ್; ೨೦೦೮; **ಪಂಜರವಳ್ಳಿಯ ಪಂಜು;** ಕನ್ನಡ ಮತ್ತು ಸಂಸ್ಕೃತಿ ಇಲಾಖೆ; ಬೆಂಗಳೂರು.

೪೭. ರಾಘವೇಂದ್ರರಾವ್ ಎಚ್.ಎಸ್.(ಸಂ); ೨೦೧೩; **ರಂ.ಶ್ರೀ. ಮುಗಳಿ ಸಮಗ್ರ ಸಾಹಿತ್ಯ ಸಂಪುಟ-೧;** ಕಾದಂಬರಿ ಕತೆಗಳು ಭಾಗ-೨"; ಕನ್ನಡ ಮತ್ತು ಸಂಸ್ಕೃತಿ ಇಲಾಖೆ; ಬೆಂಗಳೂರು.

೪೮. ರಾಜರತ್ನಂ ಜಿ.ಪಿ.; ೨೦೧೧; **ಮಕ್ಕಳ ಗಾಂಧಿ,** ಸಪ್ನ ಬುಕ್‌ಹೌಸ್; ಬೆಂಗಳೂರು.

೪೯. ರಾಮಚಂದ್ರಪ್ಪ ಬರಗೂರು; ೨೦೦೧; **ಕಾಂಟೇಸ್ಯದಲ್ಲಿ ಕಾವ್ಯ;** ಅಂಕಿತ ಪುಸ್ತಕ ಪ್ರಕಾಶನ; ಬೆಂಗಳೂರು.

೫೦. ರಾಮಣ್ಣ ಬೆಸಗರಹಳ್ಳಿ; ೧೯೮೧; **ಒಂದು ಹುಡುಗನಿಗೆ ಬಿದ್ದ ಕನಸು(ಕಥಾ ಸಂಕಲನ);** ನೆಲಮನೆ ಪ್ರಕಾಶನ; ಮೈಸೂರು.

೫೧. ರಾಮಸ್ವಾಮಿ ಅಯ್ಯಂಗಾರ್ ಗೊರೂರು; ೧೯೮೧; **ಮೆರವಣಿಗೆ;** ಐಬಿಎಚ್ ಪ್ರಕಾಶನ; ಬೆಂಗಳೂರು.

೫೨. ರಾಮಸ್ವಾಮಿ ಅಯ್ಯಂಗಾರ್ ಗೊರೂರು; ೧೯೯೬; **ಕನ್ಯಾಕುಮಾರಿ ಮತ್ತು ಇತರ ಕಥೆಗಳು;** ಐಬಿಎಚ್ ಪ್ರಕಾಶನ; ಬೆಂಗಳೂರು.

೫೩. ವಸುದೇವ ಭೂಪಾಲನಂ; **ಆಂದೋಲನ;** ಬೆಂಗಳೂರು ಪ್ರೈಸ್, ಬೆಂಗಳೂರು.

೫೪. ವಾಮನ ಬೇಂದ್ರೆ(ಸಂ); ೨೦೦೩; **ಅಂಬಿಕಾತನಯದತ್ತರ ಸಮಗ್ರ ಕಾವ್ಯ ನಮನ;** ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ; ಹುಬ್ಬಳ್ಳಿ.

೫೫. ವೀರಭದ್ರಪ್ಪ ಕುಂ.; ೨೦೧೦; **ಬರಿ ಕಥೆಯಲ್ಲೋ ಅಣ್ಣಾ;(ಕುಂ. ವೀರಭದ್ರ ಸಮಗ್ರ ಕಥೆಗಳು);** ಸಪ್ನ ಬುಕ್‌ಹೌಸ್; ಬೆಂಗಳೂರು.

೫೬. ವೆಂಕಟರಾಜು ಕೆ.; ೨೦೦೦; **ತಲೆಬಾಗದ ಜನ;** ಶಾಂತಲಾ ಕಲಾವಿದರು ಪ್ರಕಾಶನ; ಚಾಮರಾಜನಗರ.

೫೭. ವ್ಯಾಸರಾಯ ಬಲ್ಲಾಳ; ೨೦೦೦; "ಹೆಜ್ಜೆ..."; ಗೀತಾ ಬುಕ್‌ಹೌಸ್; ಮೈಸೂರು.

೫೮. ವ್ಯಾಸರಾಯ ಬಲ್ಲಾಳ; ೨೦೦೫; **ಹೇಮಂತಗಾನ;** ನವಕರ್ನಾಟಕ ಪ್ರಕಾಶನ; ಬೆಂಗಳೂರು.

೫೯. ಶಾಂತದೇವಿ ಕಣವಿ; ೧೯೯೭; **ಗಾಂಧೀ ಮಗಳು(ಕಥಾ ಸಂಕಲನ);** ಮಹಿಳಾ ಸಾಹಿತ್ಯಿಕ ಪ್ರಕಾಶನ; ಹುಬ್ಬಳ್ಳಿ.

೬೦. ಶಿವರಾಮ ಕಾರಂತ ಕೆ.; ೧೯೭೭; **ಅದೇ ಊರು,** ಅದೇ ಮರ; ರಾಜಲಕ್ಷ್ಮಿ ಪ್ರಕಾಶನ; ಬೆಂಗಳೂರು.

೬೧. ಶಿವರಾಮ ಕಾರಂತ ಕೆ.; ೨೦೦೬; **ನಾವು ಕಟ್ಟಿದ ಸ್ವರ್ಗ;** ಎಸ್.ಬಿ.ಎಸ್. ಪಬ್ಲಿಷರ್ಸ್; ಬೆಂಗಳೂರು.

೬೨. ಶಿವರಾಮ ಕಾರಂತ ಕೆ.; ೨೦೦೮; **ಔದಾರ್ಯದ ಉರುಳಲ್ಲಿ;** ಐಬಿಎಚ್ ಪ್ರಕಾಶನ; ಬೆಂಗಳೂರು.

೬೩. ಶಿವರಾಮ ಕಾರಂತ ಕೆ.; ೨೦೦೮; **ಗೊಂಡಾರಣ್ಯ;** ಸಪ್ನ ಬುಕ್‌ಹೌಸ್; ಬೆಂಗಳೂರು.

೬೪. ಶ್ರೀನಿವಾಸಯ್ಯ ಹೋ., ೨೦೦೪; **ಕುವೆಂಪು ಕಂಡ ಗಾಂಧಿ;** ಕರ್ನಾಟಕ ಗಾಂಧಿ ಸ್ಮಾರಕ ನಿಧಿ; ಬೆಂಗಳೂರು.

೬೫. ಶ್ರೀರಂಗ; ೧೯೪೭; **ಪುರುಷಾರ್ಥ;** ಲಲಿತ ಸಾಹಿತ್ಯ ಮಾಲೆ; ಧಾರವಾಡ.

೬೬. ಶ್ರೀರಂಗ; ೧೯೪೯; **ಕುಮಾರ ಸಂಭವ;** ಉಷಾ ಸಾಹಿತ್ಯ ಮಾಲೆ; ಮೈಸೂರು.

೬೭. ಶ್ರೀರಂಗ; ೧೯೬೧; **ವಿಷ ಚಕ್ರವ್ಯೂಹ;** ಸಮಾಜ ಪುಸ್ತಕಾಲಯ; ಧಾರವಾಡ.

೬೮. ಸತೀಶ್ ಕುಲಕರ್ಣಿ; ೨೦೦೧; **ಗಾಂಧೀಗಿಡ;** ಲೋಹಿಯಾ ಪ್ರಕಾಶನ; ಬಳ್ಳಾರಿ.

೬೯. ಸಿದ್ಧಲಿಂಗಯ್ಯ ಜಿ.ಎಸ್.(ಸಂ); ೧೯೭೧; **ಶತಾಬ್ದಿದೀಪ;** ಗಾಂಧಿ ಸಾಹಿತ್ಯ ಪ್ರಕಾಶನ ಸಮಿತಿ; ಬೆಂಗಳೂರು.

೨. ಆನುಷಂಗಿಕ ಆಕರಗಳು(ಪರಾಮರ್ಶನ ಗ್ರಂಥಗಳು)

೧. ಅರ್ಜುನ ಗೊಳಸಂಗಿ(ಸಂ); ೨೦೦೩; **ಕನ್ನಡ ದಲಿತ ಸಾಹಿತ್ಯ ಸಮಾಲೋಕನ;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೨. ಅನಂತ ಚಿನಿವಾರ್; ೨೦೧೨; ಹೇರಾಮ್... **ಗಾಂಧಿ-ಗೋಡ್ಸೆ ಸಂಘರ್ಷ;** ಅಭಿನವ ಪ್ರಕಾಶನ; ಬೆಂಗಳೂರು.

೩. ಅನಂತಮೂರ್ತಿ ಯು.ಆರ್. ೨೦೦೪; **ಪ್ರಜ್ಞೆ ಮತ್ತು ಪರಿಸರ ಸಾಹಿತ್ಯದ ಒಳಹೊರಗು;** ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೪. ಅನಂತಮೂರ್ತಿ ಯು.ಆರ್.; ೧೯೯೬; **ಪೂರ್ವಾಪರ;** ಅಕ್ಷರ ಪ್ರಕಾಶ; ಹೆಗ್ಗೋಡು.

೫. ಅನಂತಮೂರ್ತಿ ಯು.ಆರ್.; ೨೦೦೬; **ವಾಲ್ಮೀಕಿಯ ನೆವದಲ್ಲಿ;** ಅಭಿನವ ಪ್ರಕಾಶನ; ಬೆಂಗಳೂರು.

೬ ಅರವಿಂದ ಮಾಲಗತ್ತಿ; ೨೦೦೩; **ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ;** ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೭ ಅಶೋಕ ಟಿ.ಪಿ.; ೧೯೯೧; **ಸಾಹಿತ್ಯ ಸಂದರ್ಭ;** ಅಕ್ಷರ ಪ್ರಕಾಶನ, ಹೆಗ್ಗೋಡು; ಸಾಗರ.

೮. ಅಶೋಕ ಟಿ.ಪಿ.; ೨೦೦೮; **ಸಾಹಿತ್ಯ ಸಂಬಂಧ;** ಅಕ್ಷರ ಪ್ರಕಾಶನ; ಹೆಗ್ಗೋಡು; ಸಾಗರ.

೯. ಅಶೋಕ ಟಿ.ಪಿ.; ೨೦೦೮; **ಮಹಾತ್ಮ ಗಾಂಧಿ ಅವರ ಹಿಂದ್ ಸ್ವರಾಜ್ಯ;** ಅಕ್ಷರ ಪ್ರಕಾಶನ; ಹೆಗ್ಗೋಡು; ಸಾಗರ.

೧೦. ಆಮೂರ ಜಿ.ಎಸ್.; ೧೯೯೧; **ಭುವನದ ಭಾಗ್ಯ, ಬೇಂದ್ರೆ ಸಾಹಿತ್ಯ(ಸಮೀಕ್ಷೆ);** ಸ್ನೇಹ ಪ್ರಕಾಶನ; ಬೆಂಗಳೂರು.

೧೧. ಆಮೂರ ಜಿ.ಎಸ್.; ೧೯೯೮; **ವಿರಾಟ ಪುರುಷ(ಶ್ರೀರಂಗ ಸಾರಸ್ವತ ಸಮೀಕ್ಷೆ);** ಪ್ರಿಯದರ್ಶಿನಿ ಪ್ರಕಾಶನ; ಬೆಂಗಳೂರು.

೧೨. ಆಮೂರ ಜಿ.ಎಸ್.; ೨೦೦೩; **ಕನ್ನಡ ಕಥನ ಸಾಹಿತ್ಯ: ಸಣ್ಣಕತೆ;** ಪ್ರಿಯದರ್ಶಿನಿ ಪ್ರಕಾಶನ; ಬೆಂಗಳೂರು.

೧೩. ಆಮೂರ ಜಿ.ಎಸ್.(ಸಂ); ೨೦೦೫; **ಶ್ರೀರಂಗ ಸಾರಸ್ವತ-೨; ಕಾದಂಬರಿ ಸಂಪುಟ-೨;** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ; ಬೆಂಗಳೂರು.

೧೪. ಆಮೂರ ಜಿ.ಎಸ್.(ಸಂ); ೨೦೦೫; **ಶ್ರೀರಂಗ ಸಾರಸ್ವತ-೪; ನಾಟಕ ಸಂಪುಟ-೨;** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ; ಬೆಂಗಳೂರು.

೧೫. ಆರ್ಯಾಂಬ ಪಟ್ಟಾಬಿ(ಪ್ರ.ಸಂ.); ೨೦೦೪; **ಮಹಿಳಾ ಸಾಹಿತ್ಯ ಸಮೀಕ್ಷೆ;** ಸಂವಹನ ಪ್ರಕಾಶನ; ಮೈಸೂರು.

೧೬. ಆರ್ಕೆ ಮಣಿಪಾಲ; ೨೦೦೬; **ವಿಮರ್ಶೆಯ ಸವಾಲು;** ಸಂವಾದ ಪ್ರಕಾಶನ; ಮಣಿಪಾಲ.

೧೭. ಇನಾಂದಾರ್ ವಿ.ಎಂ.; ೧೯೮೨; **ಶಿವರಾಮ ಕಾರಂತ ಬದುಕು-ಬರಹ;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ; ಉಡುಪಿ.

೧೮. ಕರೀಗೌಡ ಬೀಚನಹಳ್ಳಿ; ೨೦೧೧; **ಶತಮಾನದ ಸಣ್ಣಕಥೆಗಳ ಸಮೀಕ್ಷೆ;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೧೯. ಕರೀಗೌಡ ಬೀಚನಹಳ್ಳಿ; ೨೦೦೦; **ಸಂಕಥನ;** ಅಜಂತ ಪ್ರಕಾಶನ; ಬೆಂಗಳೂರು.

೨೦. ಕುಲಕರ್ಣಿ ಎನ್ಕೆ; ೧೯೮೯; **ಶ್ರೀರಂಗ;** ಸಾಹಿತ್ಯ ಅಕಾಡೆಮಿ; ನವದೆಹಲಿ.

೨೧. ಕೃಷ್ಣಮೂರ್ತಿ ಅಗ್ರಹಾರ(ಸಂ); ೨೦೦೮; **ಸಂಸ್ಕೃತಿ ಕಥನ;** ಸಪ್ನ ಬುಕ್‌ಹೌಸ್; ಬೆಂಗಳೂರು.

೨೨. ಕೃಷ್ಣಶರ್ಮ ಸಿದ್ದವನಹಳ್ಳಿ; ೨೦೦೬; **ಪರ್ಣಕುಟಿ;** ಕನ್ನಡ ಮತ್ತು ಸಂಸ್ಕೃತಿ ಇಲಾಖೆ; ಬೆಂಗಳೂರು.

೨೩. ಕೆದಿಲಾಯ ಬಿ.ವಿ.; ೧೯೯೬; **ಗೋಪಾಲಕೃಷ್ಣ ಅಡಿಗ;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ; ಉಡುಪಿ.

೨೪. ಗಣೇಶ ಕೆ. ಕೋಡೂರು; ೨೦೦೬; **ಗಾಂಧೀ ತುಂಡು(ಕಥಾ ಸಂಕಲನ);** ಆದಿ ಪುಸ್ತಕ ಮನೆ; ಬೆಂಗಳೂರು.

೨೫. ಗುರುದತ್ತ ಪ್ರಧಾನ್(ಸಂ); ೨೦೦೬; **ಗೊರೂರು ರಾಮಸ್ವಾಮಿ ಅಯ್ಯಂಗಾರ್;** ನವಕರ್ನಾಟಕ ಪ್ರಕಾಶನ; ಬೆಂಗಳೂರು.

೨೬. ಗುರುಲಿಂಗ ಕಾಪಸೆ ಮತ್ತು ಹೆಗಡೆ ಜಿ.ಎಂ.(ಸಂ); ೨೦೦೮; **ಕಣವಿಯವರ ಕವಿತೆ: ಹೊಸ ಓದು;** ಸುಮುಖ ಪ್ರಕಾಶನ; ಬೆಂಗಳೂರು.

೨೭. ಗೋವಿಂದರಾಜು ಗಿರಡ್ಡಿ; ೧೯೮೧; **ಸಾಹಿತ್ಯ ಮತ್ತು ಪರಂಪರೆ;** ಅಭಿಜಾತ ಗ್ರಂಥಮಾಲೆ; ಬೆಂಗಳೂರು.

೨೮. ಗೋವಿಂದರಾಜು ಗಿರಡ್ಡಿ(ಸಂ); ೧೯೮೯; **ಆಧುನಿಕ ಕನ್ನಡ ಕಾವ್ಯ(ಉತ್ತರ ಕರ್ನಾಟಕದ ಕೊಡುಗೆ);** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೨೯. ಗೋವಿಂದರಾಜು ಗಿರಡ್ಡಿ; ೨೦೧೦; **ಯುಗಧರ್ಮ ಹಾಗೂ ಸಾಹಿತ್ಯ ದರ್ಶನ: ಸಾಹಿತ್ಯ ಮತ್ತು ಸಾಹಿತ್ಯ ಪ್ರಜ್ಞೆ;** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೩೦. ಗೌರೀಶ ಕಾಯ್ಕಿಣಿ; ೧೯೯೯; **ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ;** ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೩೧. ಗಂಗಾನಾಯಕ್ ಕೆ.ಎನ್.(ಸಂ); ೨೦೧೧; **ಹೊಸಗನ್ನಡ ಕಥೆಗಾರರು ಹಾಗೂ ಕಾದಂಬರಿಕಾರರು;** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ; ಮೈಸೂರು ವಿಶ್ವವಿದ್ಯಾನಿಲಯ; ಮೈಸೂರು.

೩೨. ಗಂಗಾನಾಯಕ್ ಕೆ.ಎನ್.(ಸಂ); ೨೦೧೧; **ಹೊಸಗನ್ನಡ ಕವಿಗಳು ಮತ್ತು ನಾಟಕಕಾರರು;** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ; ಮೈಸೂರು ವಿಶ್ವವಿದ್ಯಾನಿಲಯ; ಮೈಸೂರು.

೩೩. ಚಂದ್ರಶೇಖರ್(ಅನು); ಸಿ. ನಾಗಣ್ಣ; ೨೦೦೦; **ದಕ್ಷಿಣ ಭಾರತ ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಸಂಘರ್ಷ;** ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ; ಹಂಪಿ.

೩೪. ಚೌಗಲೆ ಡಿ.ಎಸ್.; ೨೦೦೯; **ಕಸ್ತೂರಬಾ(ನಾಟಕ);** ದಾಮಿನಿ ಸಾಹಿತ್ಯ ಪ್ರಕಾಶನ; ಬೆಂಗಳೂರು.

೩೫. ಜನಾರ್ಧನ ಭಟ್(ಸಂ); ೨೦೦೭; **ಉಡುಪಿಯ ಶತಮಾನದ ಕಥೆಗಳು;** ಸ್ವಾಗತ ಸಮಿತಿ; ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ; ಉಡುಪಿ.

೩೬. ಜವರಯ್ಯ ಮ.ನ.; ೧೯೮೯; **ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ ಸಮಗ್ರ ಅಧ್ಯಯನ;** ಸಿದ್ಧಾರ್ಥ ಗ್ರಂಥಮಾಲೆ; ಮೈಸೂರು.

೩೭. ಜವರಯ್ಯ ಮ.ನ.; ೧೯೯೯; **ಗಾಂಧಿ ಮತ್ತು ಅಂಬೇಡ್ಕರ್ ಧ್ಯೇಯ ಮತ್ತು ಧೋರಣೆ;** ನವಕರ್ನಾಟಕ ಪ್ರಕಾಶನ; ಬೆಂಗಳೂರು.

೩೮. ಜಾಕೋಬ್ ಲೊ ಬೋ ಸಿ.ಎಚ್.(ಸಂ); ೧೯೯೩; **ನಾ.ಡಿಸೋಜ ಅಭಿನಂದನ;** ಆಶೀರ್ವಾದ ಪ್ರಕಾಶನ; ಬೆಂಗಳೂರು.

೩೯. ಧ್ರುವನಾರಾಯಣ ಎಂ. ಮತ್ತು ನಾಗರಾಜ ಕಿ.ರಂ.; ೨೦೧೦; **ಅಂಟಿದ ನಂಟು;** ಅಭಿನವ ಪ್ರಕಾಶನ; ಬೆಂಗಳೂರು.

೪೦. ನಟರಾಜ ಹುಳಿಯಾರ್(ಸಂ); ೨೦೦೩; **ಮಾರ್ಕ್ಸ್-ಗಾಂಧಿ, ಸಮಾಜವಾದ ಭಾಗ-೧ (ರಾಮಮನೋಹರ ಲೋಹಿಯಾ ಬರಹಗಳು);** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ; ಬೆಂಗಳೂರು.

೪೧. ನಾಗಣ್ಣ ಡಿ.; ೨೦೦೫; **ಸಾಹಿತ್ಯ ನೋಟ;** ತಳಗವಾದಿ ಪ್ರಕಾಶನ; ಮೈಸೂರು.

೪೨. ನಾಗಭೂಷಣ ಡಿ.ಎಸ್.; ೧೯೯೦; **ಗಮನ;** ಸಂವಾದ ಪ್ರಕಾಶನ; ಮಲ್ಲಾಡಿಹಳ್ಳಿ.

೪೩. ನಾಗರಾಜ ಡಿ.ಆರ್.; ೨೦೦೬; **ಸಾಹಿತ್ಯ ಕಥನ;** ಅಕ್ಷರ ಪ್ರಕಾಶನ; ಹೆಗ್ಗೋಡು; ಸಾಗರ.

೪೪. ನಾಗರಾಜ ಡಿ.ಆರ್.; ೧೯೮೨; **ಶಕ್ತಿ ಶಾರದೆಯ ಮೇಳ;** ಅಕ್ಷರ ಪ್ರಕಾಶನ; ಸಾಗರ.

೪೫. ನಾಯಕ ಜಿ.ಎಚ್.; ೧೯೮೪; **ನಿರಪೇಕ್ಷೆ;** ಅಕ್ಷರ ಪ್ರಕಾಶ, ಸಾಗರ.

೪೬. ನಾಯಕ ಜಿ.ಎಚ್.; ೧೯೯೧; **ವಿನಯ ವಿಮರ್ಶೆ;** ಕನ್ನಡ ಮತ್ತು ಸಂಸ್ಕೃತಿ ಇಲಾಖೆ; ಬೆಂಗಳೂರು.

೪೭. ನಾಯಕ ಜಿ.ಎಚ್.(ಸಂ); ೨೦೦೦; **ಶತಮಾನದ ಕನ್ನಡ ಸಾಹಿತ್ಯ(ಸಮೀಕ್ಷೆ ಸಂಪುಟ-೧);** ಶ್ರೀರಾಘವೇಂದ್ರ ಪ್ರಕಾಶನ; ಅಂಕೋಲಾ.

೪೮. ನಾಯಕ ಜಿ.ಎಚ್.(ಸಂ); ೨೦೦೯; **ಶತಮಾನದ ಕನ್ನಡ ಸಾಹಿತ್ಯ(ಸಮೀಕ್ಷೆ ಸಂಪುಟ-೨);** ಶ್ರೀ ರಾಘವೇಂದ್ರ ಪ್ರಕಾಶನ; ಅಂಕೋಲಾ.

೪೯. ನಾಯಕ ಡಿ.ಬಿ.; ೧೯೮೭; **ಸಾಹಿತ್ಯ ಲೋಕ-೧;** ರೂಪರಶ್ಮಿ ಪ್ರಕಾಶನ; ಕಲಬುರ್ಗಿ.

೫೦. ನಾರಾಯಣರಾವ್ ವಿ.ಎಸ್.; ೧೯೪೭; **ಗಾಂಧಿವಾದ;** ವಿಚಾರ ಸಾಹಿತ್ಯ ಲಿಮಿಟೆಡ್; ಬೆಂಗಳೂರು.

೫೧. ನಾರಾಯಣರಾವ್ ವಿ.ಎಸ್.; ೧೯೭೯; **ಮಹಾತ್ಮರ ಮಾರ್ಗ;** ಪ್ರಸಾರಾಂಗ; ಬೆಂಗಳೂರು ವಿಶ್ವವಿದ್ಯಾಲಯ; ಬೆಂಗಳೂರು.

೫೨. ನಾರಾಯಣಸ್ವಾಮಿ ಕೆ.ಎಸ್.; ೧೯೯೫; **ಗಾಂಧಿ ಪ್ರಭಾವ ಸೌರಭ;** ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೫೩. ನಿರುಪಮಾ ಮತ್ತು ಲಲಿತಾಶಾಸ್ತ್ರಿ; ೨೦೧೨; **ರಾಷ್ಟ್ರೀಯತೆ ಮತ್ತು ಕಾವ್ಯ;** ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೫೪. ನೀಲಮ್ಮ; ೨೦೦೦; **ಬಸವರಾಜ ಕಟ್ಟೀಮನಿಯವರ ಕೃತಿಗಳು ಒಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ;** ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೫೫. ಪದ್ಮ ಟಿ.(ಸಂ); ೨೦೦೮; **ನಮ್ಮ ಸುತ್ತಣ ಗಾಂಧಿವಾದಿಗಳು;** ಗಾಂಧಿ ಅಧ್ಯಯನ ಕೇಂದ್ರ; ಬೆಂಗಳೂರು ವಿಶ್ವವಿದ್ಯಾಲಯ; ಬೆಂಗಳೂರು.

೫೬. ಪುರುಷೋತ್ತಮ ಬಿಳಿಮಲೆ; ೧೯೯೦; **ದಲಿತ ಬಂಡಾಯ ಸಾಹಿತ್ಯ;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೫೭. ಪ್ರಕಾಶ ಹಿಟ್ಟಿನಹಳ್ಳಿ; ೧೯೮೫; **ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯ ಮುಸ್ಲಿಮರ ಪಾತ್ರ;** ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೫೮. ಪ್ರಹ್ಲಾದ ಅಗಸನಕಟ್ಟೆ; ೨೦೦೯; **ಅಂತಃಕರಣ;** ಕವನ ಪ್ರಕಾಶನ; ಬೆಂಗಳೂರು.

೫೯. ಪ್ರಹ್ಲಾದ ಅಗಸನಕಟ್ಟೆ; ೨೦೦೪; **ಕಲಕಲಿ;** ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಕೇಷರ್ಸ್, ಬೆಂಗಳೂರು.

೬೦. ಪ್ರಹ್ಲಾದ ಅಗಸನಕಟ್ಟೆ; ೨೦೦೪; **ಬಂಡಾಯ-ದಲಿತ ಕಾವ್ಯ ಮತ್ತು ವಿಚಾರವಾದಗಳು;** ಹರ್ಷ ಪ್ರಕಾಶನ; ಹುಬ್ಬಳ್ಳಿ.

೬೧. ಪ್ರಾಣೇಶರಾವ್ ಬಿ.ಆರ್.; ೧೯೯೯; **ಮಹಾತ್ಮಾ ಗಾಂಧಿ; ಜೀವನ ಚರಿತ್ರೆ;** ಭಾರತೀ ಪ್ರಕಾಶನ; ಮೈಸೂರು.

೬೨. ಬಸವರಾಜ ಡೋಣೂರ್; ೨೦೦೦; **ಸೀಳು ನೋಟಗಳು(ವಿಮರ್ಶಾ ಲೇಖನಗಳು);** ಸ್ವಾಗತ ಸಮಿತಿ; ಅಖಿಲ ಭಾರತ ೬೮ನೇ ಸಾಹಿತ್ಯ ಸಮ್ಮೇಳನ, ಬಾಗಲಕೋಟೆ.

೬೩. ಬಸವರಾಜ ಸಬರದ; ೧೯೯೪; **ಸಾಹಿತ್ಯ ಸಂಗತಿ;** ಪಲ್ಲವಿ ಪ್ರಕಾಶನ; ಗುಲಬರ್ಗಾ.

೬೪. ಬಸವರಾಜ ಸಾದರ(ಸಂ); ೨೦೦೨; **ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು;** ಕರ್ನಾಟಕ ವಿದ್ಯಾವರ್ಧಕ ಸಂಘ; ಧಾರವಾಡ.

೬೫. ಬಾದಾಮಿ ಎಂ.ಎಸ್.(ಸಂ); ೨೦೦೦; **ಆರ್ಥಿಕ-ಚಿಂತನೆ;** ಸ್ವಾಗತ ಸಮಿತಿ; ಅಖಿಲ ಭಾರತ ೬೮ನೇ ಸಾಹಿತ್ಯ ಸಮ್ಮೇಳನ; ಬಾಗಲಕೋಟೆ.

೬೬. ಬಾಲಸುಬ್ರಹ್ಮಣ್ಯ ನರಹಳ್ಳಿ; ೧೯೯೨; **ನವ್ಯತೆ;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೬೭ ಭಂಡಾರಿ ಆರ್.ವಿ.; ೨೦೦೪; **ಬೆಳಕು ಹಂಚಿದ ಬಾಲಕ ಮತ್ತು ನಾನು ಗಾಂಧಿ ಆಗ್ತೇನೆ(ಮಕ್ಕಳ ನಾಟಕ);** ಬಂಡಾಯ ಪ್ರಕಾಶನ; ಅರೆಅಂಗಡಿ; ಹೊನ್ನಾವರ; ಉತ್ತರ ಕನ್ನಡ.

೬೮. ಮಧು ದಂಡವತೆ; ೧೯೮೩; **ಮಾರ್ಕ್ಸ್ ಮತ್ತು ಗಾಂಧಿ;** ಜನ ಪ್ರಕಾಶನ; ಬೆಂಗಳೂರು.

೬೯. ಮನು ಬಳಿಗಾರ(ಸಂ); ೨೦೦೯; **ಬೆಳಕು ಬೆಡಗು;** ಅಂಕಿತ ಪುಸ್ತಕಾಲಯ; ಬೆಂಗಳೂರು.

೭೦. ಮರುಳಸಿದ್ಧಪ್ಪ ಕೆ.; ೨೦೦೩; **ಒಡನಾಟ;** ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೭೧. ಮರುಳಸಿದ್ಧಪ್ಪ ಕೆ.; ೨೦೧೩; **ಆಧುನಿಕ ಕನ್ನಡ ನಾಟಕ;** ಅಂಕಿತ ಪುಸ್ತಕ ಪ್ರಕಾಶನ; ಬೆಂಗಳೂರು.

೭೨. ಮಹಮ್ಮದ್ ಕುಂಞಿ ಬೊಳುವಾರು; ೨೦೧೨; **ಪಾಪುಗಾಂಧಿ ಗಾಂಧಿಬಾಪು ಆದ ಕತೆ;** ಕಡಲು ಪ್ರಕಾಶನ; ಬೆಂಗಳೂರು.

೭೩. ಮಹಾದೇವ ದೇವನೂರ; ೨೦೧೩; **ಎದೆಗೆ ಬಿದ್ದ ಅಕ್ಷರ;** ಅಭಿನವ ಪ್ರಕಾಶನ; ಬೆಂಗಳೂರು.

೭೪. ಮುಗಳಿ ರಂ.ಶ್ರೀ.; ೧೯೯೧; **ಸಾಹಿತ್ಯೋಪಾಸನೆ;** ಅಖಿಲಾ ಏಜನ್ಸೀಸ್; ಮೈಸೂರು.

೭೫. ಮುನಿವೆಂಕಟಪ್ಪ.ವಿ.(ಸಂ); ೨೦೦೨; **ದಲಿತ ಸಾಹಿತ್ಯ ದರ್ಶನ;** ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೭೬. ಮುನಿವೆಂಕಟಪ್ಪ.ವಿ.; ೨೦೦೯; **ದಲಿತ ಚಳವಳಿ ಮತ್ತು ಸಾಹಿತ್ಯ;** ತನುಮನು ಪ್ರಕಾಶನ; ಮೈಸೂರು.

೭೭. ಮುರಳೀಧರ ಉಪಾಧ್ಯ ಹಿರಿಯಡಕ(ಸಂ); ೧೯೯೨; **ಸಾಹಿತ್ಯ ವಿಮರ್ಶೆ:೧೯೯೦;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೭೮. ಮೊಗಸಾಲೆ ನಾ.; ೧೯೯೫; **ಉಪ್ಪು;** ಶ್ರೀ ಪ್ರೇಮಸಾಯಿ ಪ್ರಕಾಶನ; ಬೆಂಗಳೂರು.

೭೯. ಮೋಹನದಾಸ ಕರಮಚಂದ್ರಗಾಂಧಿ; ದೇಸಾಯಿ ಜೆ.ಡಿ.(ಅನು); ೨೦೧೧; **ಮಹಿಳೆಯರು;** ಗಾಂಧೀಯಾನ ಪಬ್ಲಿಷಿಂಗ್ ಹೌಸ್; ಬೆಂಗಳೂರು.

೮೦. ಮೋಹನ ಕುಂಟಾರ್; ೧೯೯೪; **ಇನಾಂದರರ ಬದುಕು ಬರಹ;** ಶೇಣಿ ಪ್ರಕಾಶನ; ಉಕ್ಕಿನಡ್ಕ; ಕಾಸರಗೋಡು.

೮೧. ಮ್ಯಾಗೇರಿ ಪಿ.ಜೆ.; ೨೦೦೮; **ವಸಾಹತುಶಾಹಿ ಅನುಭವ ಮತ್ತು ಕನ್ನಡ ಕಾದಂಬರಿಗಳು;** ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೮೨. ಯಶಪಾಲ್; ೧೯೯೮; **ಗಾಂಧಿವಾದದ ಶವಪರೀಕ್ಷೆ;** ಡಿ.ವಿ.ಕೆ. ಮೂರ್ತಿ ಪ್ರಕಾಶನ; ಮೈಸೂರು.

೮೩. ರಾಘವೇಂದ್ರರಾವ್ ಎಚ್.ಎಸ್.; ೧೯೯೫; **ಹಾಡೆ ಹಾದಿಯ ತೋರಿತು;** ಕನ್ನಡ ಸಂಘ; ಕ್ರೈಸ್ಟ್ ಕಾಲೇಜು; ಬೆಂಗಳೂರು.

೮೪. ರಾಘವೇಂದ್ರರಾವ್ ಎಚ್.ಎಸ್.; ೧೯೯೮; **ನಿಲುವು;** ಕನ್ನಡ ಸಂಘ; ಕ್ರೈಸ್ಟ್ ಕಾಲೇಜು; ಬೆಂಗಳೂರು.

೮೫. ರಾಜಣ್ಣ ಬಿ. ಉಪಲೀಕನಹಳ್ಳಿ; ೨೦೦೫; **ಬಂಡಾಯ ಕಾವ್ಯ ಒಂದು ಸಾಂಸ್ಕೃತಿಕ ಅಧ್ಯಯನ,** ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್; ಬೆಂಗಳೂರು.

೮೬. ರಾಜಶೇಖರ ಮಠಪತಿ(ರಾಗಂ); ೨೦೧೩; **ಗಾಂಧಿ ಮುಗಿಯದ ಅಧ್ಯಾಯ;** ಕಣ್ವ ಪ್ರಕಾಶನ; ಬೆಂಗಳೂರು.

೮೭. ರಾಜೇಂದ್ರ ಚೆನ್ನಿ; ೧೯೮೯; **ಸಾಹಿತ್ಯ ವಿಮರ್ಶೆ: ೧೯೮೮;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೮೮. 'ರಾಜೇಂದ್ರ ಚೆನ್ನಿ; ೨೦೧೩; **ಸದ್ಯದ ಹಂಗು;** ಪಲ್ಲವ ಪ್ರಕಾಶನ; ಬಳ್ಳಾರಿ.

೮೯. ರಾಜೇಂದ್ರಸ್ವಾಮಿ ಜಿ. ಹಿರೇಮಠ; ೨೦೦೦; **ಚಿನ್ನದ ಚೆಂಡು(ಮಕ್ಕಳ ಕವಿತೆಗಳು);** ಸ್ವಾಗತ ಸಮಿತಿ ಅಖಿಲ ಭಾರತ ೬೮ನೇ ಕನ್ನಡ ಸಾಹಿತ್ಯ ಸಮ್ಮೇಳನ; ಬಾಗಲಕೋಟೆ.

೯೦. ರಾಮಚಂದ್ರಪ್ಪ ಬರಗೂರು(ಪ್ರ.ಸಂ.); ೧೯೯೩; **ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೯೧. ರಾಮಚಂದ್ರಪ್ಪ ಬರಗೂರು(ಸಂ); ೧೯೯೦; **ಬಂಡಾಯ ಕಾವ್ಯ;** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ; ಬೆಂಗಳೂರು.

೯೨. ರಾಮಚಂದ್ರಪ್ಪ ಬರಗೂರು; ೨೦೦೫; **ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ;** ಅಂಕಿತ ಪುಸ್ತಕ ಪ್ರಕಾಶನ; ಬೆಂಗಳೂರು.

೯೩. ರಾಮಚಂದ್ರಪ್ಪ ಬರಗೂರು; ೧೯೯೮; **ಸಾಹಿತ್ಯ ಮತ್ತು ರಾಜಕಾರಣ;** ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೯೪. ರಾಮಚಂದ್ರಪ್ಪ ಬರಗೂರು; ೨೦೦೭; **ಶಬ್ದವಿಲ್ಲದ ಯುದ್ಧ;** ಅಂಕಿತ ಪ್ರಕಾಶನ; ಬೆಂಗಳೂರು.

೯೫. ರಾಮಚಂದ್ರನ್.ಸಿ.ಎನ್.; ೨೦೧೧; **ಆಖ್ಯಾನ ವ್ಯಾಖ್ಯಾನ;** ಸಪ್ನ ಬುಕ್‌ಹೌಸ್; ಬೆಂಗಳೂರು.

೯೬. ರಾಮಸ್ವಾಮಿ ಅಯ್ಯಂಗಾರ್ ಗೊರೂರು; ೧೯೫೬; **ಭಾರತ ಭಾಗ್ಯವಿಧಾತ;** ಸತ್ಯಶೋಧನ ಪುಸ್ತಕ ಭಂಡಾರ; ಬೆಂಗಳೂರು.

೯೭. ರಂಜಾನ್ ದರ್ಗಾ; ೧೯೮೨; **ಸಾಹಿತ್ಯ ಮತ್ತು ಸಮಾಜ;** ಭಾರತೀ ಪ್ರಕಾಶನ; ಮೈಸೂರು.

೯೮. ಲಕ್ಕಪ್ಪಗೌಡ ಎಚ್.ಜೆ. ೨೦೦೧; **ಕಥಾಲೋಕನ;** ಚೇತನ ಬುಕ್ ಹೌಸ್; ಮೈಸೂರು.

೯೯. ಲಕ್ಷ್ಮೀನಾರಾಯಣಭಟ್ಟ ಎನ್.ಎಸ್.(ಸಂ); ೧೯೯೭; **'ಅನನ್ಯ' ಗೋಪಾಲಕೃಷ್ಣ ಅಡಿಗರ ಸಮಗ್ರ ಕಾವ್ಯದ ಪರಿಶೀಲನೆ;** ಕ್ಷಮಾ ಪ್ರಕಾಶನ; ಬೆಂಗಳೂರು.

೧೦೦. ಲೀಲಾ ಮಣ್ಣಾಲ; ೨೦೦೧; **ನಿರಂತರ ಸತ್ಯ(ಬಾಪೂ ಬದುಕಿನ ಸಾರಸ್ಯಗಳು);** ನಿಸರ್ಗ ಪ್ರಕಾಶನ; ಮೈಸೂರು.

೧೦೧. ಲೋಕೇಶ್ ಅಗಸನಕಟ್ಟೆ; ೨೦೦೩; **ಆಧುನಿಕ ಕನ್ನಡ ಕಾವ್ಯ ಸಮಾಜ: ಸಂಸ್ಕೃತಿ;** ಆಲೋಕ ಪ್ರಕಾಶನ; ಚಿತ್ರದುರ್ಗ.

೧೦೨. ವಿಜಯಶ್ರೀ ಸಬರದ(ಸಂ); ೨೦೦೦; **ವಿಚಾರ ಸಾಹಿತ್ಯ-೧೯೯೯;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೧೦೩. ವಿಷ್ಣುನಾಯ್ಕ(ಸಂ); ೧೯೭೬; **ಸಾಹಿತ್ಯದಲ್ಲಿ ನವ್ಯತೆ;** ಶ್ರೀ ರಾಘವೇಂದ್ರ ಪ್ರಕಾಶನ; ಅಂಕೋಲಾ(ಉತ್ತರ ಕನ್ನಡ).

೧೦೪. ವೇಣುಗೋಪಾಲ ರಾವ್ ಎ.ಎಸ್.; ೨೦೦೫; **ಗಾಂಧೀಜಿ ಮತ್ತು ರಚನಾತ್ಮಕ ಕಾರ್ಯಗಳು;** ಪ್ರಸಾರಾಂಗ; ಮೈಸೂರು ವಿಶ್ವವಿದ್ಯಾನಿಲಯ; ಮೈಸೂರು.

೧೦೫. ವೆಂಕಟೇಶ್ ಜಿ.; ಮಲ್ಲೇಪುರಂ(ಸಂ); ೧೯೯೮; **ಸಾಹಿತ್ಯ ವಿಮರ್ಶೆ;** ಕನ್ನಡ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೧೦೬. ಶಂಕರನಾರಾಯಣರಾವ್ ಎನ್.ಪಿ.; ೨೦೦೬; **ಸ್ವಾತಂತ್ರ್ಯಗಂಗೆಯ ಸಾವಿರ ತೊರೆಗಳು (ರಾಷ್ಟ್ರೀಯ ಚಳುವಳಿಯ ಸಮಗ್ರ ಪರಿಚಯ);** ನವಕರ್ನಾಟಕ ಪ್ರಕಾಶನ; ಬೆಂಗಳೂರು.

೧೦೭. ಶಂಭುನಾಥ ರಾವಳ; ೧೯೬೯; **ಯುಗಾವತಾರಿ ಗಾಂಧೀಜಿ;** ಯುನಿವ್ಹರ್ಸಿಟಿ ಪಬ್ಲಿಕ್ ಸ್ಕೂಲ್; ಧಾರವಾಡ.

೧೦೮. ಶಾಂತಿನಾಥ ದೇಸಾಯಿ; ೧೯೯೦; **ನವ್ಯ ಸಾಹಿತ್ಯ ದರ್ಶನ;** ಪರಿಸರ ಸಾಹಿತ್ಯ ಪ್ರಕಾಶನ; ಶಿವಮೊಗ್ಗ.

೧೦೯. ಶಾಮರಾಯ.ತ.ಸು.; ೨೦೧೪; **ಕನ್ನಡ ಸಾಹಿತ್ಯ ಚರಿತ್ರೆ;** ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ; ಮೈಸೂರು.

೧೧೦. ಶಿವರಾಮ ಕಾರಂತ ಕೆ., ೨೦೧೦; **ಸಮೀಕ್ಷೆ,** ಸಪ್ನ ಬುಕ್‌ಹೌಸ್; ಬೆಂಗಳೂರು.

೧೧೧. ಶಿವರುದ್ರಪ್ಪ ಜಿ.ಎಸ್.(ಸಂ); ೧೯೯೦; **ಕನ್ನಡ ಸಾಹಿತ್ಯ ಸಂದರ್ಭ;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೧೧೨. ಶಿವರುದ್ರಪ್ಪ ಜಿ.ಎಸ್.(ಸಂ); ೧೯೭೩; **ಕಾವ್ಯ ಸಾಹಿತ್ಯ ವಾರ್ಷಿಕ - ೧೯೭೧;** ಬೆಂಗಳೂರು ವಿಶ್ವವಿದ್ಯಾಲಯ; ಬೆಂಗಳೂರು.

೧೧೩. ಶಿವರುದ್ರಪ್ಪ ಜಿ.ಎಸ್.(ಸಂ); ೧೯೯೮; **ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೧೧೪. ಶಿವರುದ್ರಪ್ಪ ಜಿ.ಎಸ್.(ಸಂ); ೧೯೯೮; **ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ;** ಕನ್ನಡ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೧೧೫. ಶಿವರುದ್ರಪ್ಪ ಜಿ.ಎಸ್.(ಸಂ); ೧೯೯೮; **ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ;** ಕನ್ನಡ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೧೧೬. ಶಿವರುದ್ರಪ್ಪ ಜಿ.ಎಸ್.(ಸಂ); ೧೯೭೬; **ಸ್ವಾತಂತ್ರ್ಯ ಚಳುವಳಿ: ಕನ್ನಡ ಸಾಹಿತ್ಯದಲ್ಲಿ 'ನವೋದಯ';** ಶರತ್ ಪ್ರಕಾಶನ; ಮೈಸೂರು.

೧೧೭. ಶಿವರುದ್ರಪ್ಪ ಜಿ.ಎಸ್.; ೧೯೯೪; **ಸಮಗ್ರ ಗದ್ಯ ಸಂಪುಟ-೨;** ಸ್ನೇಹ ಪ್ರಕಾಶನ; ಬೆಂಗಳೂರು.

೧೧೮. ಶಿವಾಜಿ ಜೋಯಿಸ್ ಎಸ್. ೨೦೦೪; **ಆಕಲನ;** ಸಮರಸ ಪ್ರಕಾಶನ; ಮೈಸೂರು.

೧೧೯. ಶಿವಾನಂದ ಗಾಳಿ; ೧೯೯೫; **ಮಿರ್ಜಿ ಅಣ್ಣಾರಾಯರು - ಒಂದು ಅಧ್ಯಯನ;** ಸುಂದರ ಪುಸ್ತಕ ಪ್ರಕಾಶನ; ಧಾರವಾಡ.

೧೨೦. ಶಿವಾರೆಡ್ಡಿ ಕೆ.ಸಿ.; ೨೦೦೩; **ಕುವೆಂಪು ಸಮಗ್ರ ಗದ್ಯ;** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ; ಹಂಪಿ; ವಿದ್ಯಾರಣ್ಯ.

೧೨೧. ಶೇಖರ್ ಎಂ.ಎಸ್.; ೨೦೦೭; **ಡಿ. ಗೋವಿಂದದಾಸ್ ಸಮಗ್ರ ಸಾಹಿತ್ಯ;** ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾಲಯ; ಹಂಪಿ.

೧೨೨. ಶೇಷಗಿರಿರಾವ್ ಎಲ್.ಎಸ್.; ೧೯೯೩; **ಹೊಸಗನ್ನಡ ಸಾಹಿತ್ಯ;** ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೧೨೩. ಶೇಷಗಿರಿರಾವ್ ಎಲ್.ಎಸ್.; ೨೦೦೯; **ಹೊಸಗನ್ನಡ ಸಾಹಿತ್ಯ ಚರಿತ್ರೆ;** ಸಪ್ನ ಬುಕ್‌ಹೌಸ್; ಬೆಂಗಳೂರು.

೧೨೪. ಶ್ರೀಧರ ಬಿ.ವಿ.; ೨೦೦೮; **ಬಾಪು ಚಿಂತನೆ;** ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್; ಕೃಷ್ಣಾಪುರದೊಡ್ಡಿ.

೧೨೫. ಶ್ರೀನಿವಾಸನ್ ಕೆ.; ೧೯೯೬; **ಗಾಂಧೀ ಚಿಂತನ;** ಪ್ರೊ. ಬಿ.ಆರ್. ಪ್ರಾಣೇಶರಾವ್ ಸನ್ಮಾನ ಸಮಿತಿ; ಮೈಸೂರು.

೧೨೬. ಶ್ರೀನಿವಾಸಮೂರ್ತಿ ಎ.ಪಿ.; ೧೯೯೪; **ಭಾರತ ಸ್ವಾತಂತ್ರ್ಯ ಚಳುವಳಿ(೧೮೫೭-೧೯೪೭);** ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೧೨೭. ಶ್ರೀನಿವಾಸ ಹಾವನೂರ; ೧೯೭೪; **ಹೊಸಗನ್ನಡ ಅರುಣೋದಯ;** ಕನ್ನಡ ಪುಸ್ತಕ ಪ್ರಾಧಿಕಾರ; ಬೆಂಗಳೂರು.

೧೨೮. ಸತ್ಯಾನಂದ ಪಾತ್ರೋಟ; ೧೯೯೮; **ಕರಿಯ ಕಟ್ಟದ ಕವನ(ಕವನ ಸಂಕಲನ);** ಸಮತಾ ಪ್ರಕಾಶನ; ಬಾಗಲಕೋಟೆ.

೧೨೯. ಸತ್ಯಾನಂದ ಪಾತ್ರೋಟ; ೧೯೯೦; **ಜಾಜಿ ಮಲ್ಲಿಗೆ(ಕವನ ಸಂಕಲನ);** ಸಮತಾ ಪ್ರಕಾಶನ; ಬಾಗಲಕೋಟೆ.

೧೩೦. ಸದಾಶಿವರಾಯ ಪೇಜಾವರ(ಸಂ); **ಮರೆಯಲಾರದ ಬರಹಗಾರರು;** ಸಾಹಿತ್ಯ ವಾಚಿಕೆ.

೧೩೧. ಸರೋಜಾ ರಾವ್ ಕಾಕೋಳು; ೧೯೯೮; **ನಾನು ಭಾರತೀಯ;** ಚಂದ್ರಿಕಾ ಪ್ರಕಾಶನ; ಬೆಂಗಳೂರು.

೧೩೨. ಸಿದ್ಧಲಿಂಗಯ್ಯ ಜಿ.ಎಸ್.; ೧೯೮೧; **ಐವತ್ತರ ನೆರಳು(ಕವನ ಸಂಕಲನ);** ವಾಗ್ದೇವಿ ಎಂಟರ್‌ಪ್ರೈಸಸ್; ಮೈಸೂರು.

೧೩೩. ಸಿದ್ಧಲಿಂಗಯ್ಯ ಜಿ.ಎಸ್. ಮತ್ತು ಕೃಷ್ಣಯ್ಯ ಎಂ.ಎಚ್.(ಸಂ); ೨೦೦೧; **ಸಾಲುದೀಪಗಳು;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೧೩೪. ಸಿಂಹ ಸಿ.ಆರ್.; ೨೦೦೯; "ನೀನೊಬ್ಬ ಗಾಂಧಿ(ನಾಟಕ)"; ಸಪ್ನ ಬುಕ್‌ಹೌಸ್; ಬೆಂಗಳೂರು.

೧೩೫. ಸೀತಾರಾಮಯ್ಯ ವಿ.; ೧೯೯೩; **ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ; ಉಡುಪಿ.

೧೩೬. ಸಿ.ಪಿ.ಕೆ.; ೧೯೭೭; **ಒಳದನಿ(ಕವನ ಸಂಕಲನ);** ಅರ್ಕಾವತಿ ಪ್ರಕಾಶನ; ಮೈಸೂರು.

೧೩೭. ಸುನಂದಾ ಪ್ರಕಾಶ ಕಡಮೆ; ೨೦೦೮; **ಗಾಂಧಿ ಚಿತ್ರದ ನೋಟು(ಕಥಾ ಸಂಕಲನ);** ಅಕ್ಷರ ಪ್ರಕಾಶನ; ಹೆಗ್ಗೋಡು(ಸಾಗರ).

೧೩೮. ಸುಮತೀಂದ್ರ ನಾಡಿಗ(ಸಂ); ೨೦೦೨; **ಎಸ್.ಎಲ್. ಭೈರಪ್ಪ ಅವರ ಕೃತಿಗಳ ವಿಮರ್ಶೆ;** ಸುಂದರ ಪ್ರಕಾಶನ; ಬೆಂಗಳೂರು.

೧೩೯. ಸುರೇಶ ಭೀಮರಾವ್ ಪಾಟೀಲ; ೧೯೯೫; **ಕನ್ನಡ ಕಾದಂಬರಿಗಳಲ್ಲಿ ರಾಜಕೀಯ ವಸ್ತುವಿನ್ಯಾಸ;** ಕನ್ನಡ ಸಾಹಿತ್ಯ ಪರಿಷತ್ತು; ಬೆಂಗಳೂರು.

೧೪೦. ಸೂರ್ಯನಾಥ ಕಾಮತ್(ಸಂ); ೧೯೯೮; **ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು;** ಕರ್ನಾಟಕ ಸಾಹಿತ್ಯ ಅಕಾಡೆಮಿ; ಬೆಂಗಳೂರು.

೧೪೧. ಸೋಮಶೇಖರ ಇಮ್ರಾಪುರ; ೧೯೯೧; "ಹುಟ್ಟಬಾರದಾಗಿತ್ತು ಗಾಂಧಿ"; ಸಾಹಿತ್ಯ ಭಂಡಾರ; ಹುಬ್ಬಳ್ಳಿ.

೧೪೨. ಹನುಮಂತಯ್ಯ ಎಲ್.; ೧೯೯೩; **ಅಂಬೇಡ್ಕರ್ ಮತ್ತು ಸಮಕಾಲೀನತೆ;** ವಾಹಿನಿ ಪ್ರಕಾಶನ; ಬೆಂಗಳೂರು.

೧೪೩. ಹರಿಹರ ಪ್ರಿಯ; ೧೯೯೮; **ಸಮಗ್ರ ವಿಚಾರ ವಿಮರ್ಶೆ - ಸಂಪುಟ - ೨;** ಸಿಪಿ.ಕೆ. ಪಬ್ಲಿಕೇಷನ್ಸ್; ಬೆಂಗಳೂರು.

೧೪೪. ಹಾ.ಮಾ. ನಾಯಕ; ೧೯೭೧; **ಭಾರತೀಯ ಸಾಹಿತ್ಯದಲ್ಲಿ ಗಾಂಧೀಜಿ;** ಕನ್ನಡ ಅಧ್ಯಯನ ಸಂಸ್ಥೆ; ಮೈಸೂರು ವಿಶ್ವವಿದ್ಯಾನಿಲಯ; ಮೈಸೂರು.

೧೪೫. ಹಾ.ಮಾ. ನಾಯಕ; ೧೯೯೮; **ಸೃಜನ;** ಗೀತಾ ಬುಕ್‌ಹೌಸ್; ಮೈಸೂರು.

೧೪೬. ಹಾ.ಮಾ. ನಾಯಕ; ೨೦೦೧; **ವ್ಯಾಸರಾಯ ಬಲ್ಲಾಳ;** ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೧೪೭. ಹಿರೇಮಠ ಎಸ್.ಎಂ.; ೧೯೯೩; **ಹೊಸಗನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳು;** ವಿದ್ಯಾನಿಧಿ ಪ್ರಕಾಶನ; ಗದಗ.

ಎಂ.ಫಿಲ್. ಸಂಪ್ರಬಂಧಗಳು

೧. ಅನ್ನಪೂರ್ಣ ಮಲ್ಲಪ್ಪ ಕಂಬಾರ; ೨೦೧೦; **'ಗಾಂಧಿ' ಮೂಲಕತೆ ಮತ್ತು 'ನಾನು ಗಾಂಧಿ' ಸಿನಿಮಾ: ತೌಲನಿಕ ವಿವೇಚನೆ;** ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ; ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ(ಕನ್ನಡ ವಿಶ್ವವಿದ್ಯಾಲಯ, ಹಂಪಿ); ಬೆಂಗಳೂರು.

೨. ಗಂಗಾಧರ; ೨೦೦೨; **ಎಂ. ವಿಶ್ವೇಶ್ವರಯ್ಯ ಮತ್ತು ಗಾಂಧಿ(ಚಿಂತನೆಗಳ ತೌಲನಿಕ ಅಧ್ಯಯನ);** ಚರಿತ್ರೆ ವಿಭಾಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಜಗದೀಶ್ ಕೆರೆನಳ್ಳಿ; ೨೦೦೨; **ಹೆಜ್ಜೆ ಮತ್ತು ಗಾಂಧಿ ಬಂದ ಕಾದಂಬರಿಗಳ ಅಧ್ಯಯನ;** ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ದಮಯಂತಿ ಪಿ.ಸಿ.; ೨೦೦೮; **ನಾಗವೇಣಿಯವರ ಗಾಂಧಿ ಬಂದ ಕಾದಂಬರಿ ಸಾಂಸ್ಕೃತಿಕ ಒಳನೋಟಗಳು;** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ; ಎಂ.ಜಿ.ಎಂ. ಕಾಲೇಜು; ಕುಂಜಿಬೆಟ್ಟು; ಉಡುಪಿ(ಕನ್ನಡ ವಿಶ್ವವಿದ್ಯಾಲಯ, ಹಂಪಿ).

೫. ವೀಣಾಕುಮಾರ್; ೨೦೦೯; **ಗಾಂಧಿ ಬಂದ ಕಾದಂಬರಿಯ ಒಂದು ಸಾಂಸ್ಕೃತಿಕ ಅಧ್ಯಯನ;** ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ; ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ; ಬೆಂಗಳೂರು(ಕನ್ನಡ ವಿಶ್ವವಿದ್ಯಾಲಯ, ಹಂಪಿ).

ಪಿಎಚ್.ಡಿ. ಮಹಾಪ್ರಬಂಧಗಳು

೧. ಜ್ಯೋತಿ ರೈ; ೨೦೧೬; **ಕನ್ನಡ ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಚಳುವಳಿ(ಅಪ್ರಕಟಿತ);** ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ನಾಗರಾಜ ಕೆ.ವಿ.; ೨೦೦೬; **ಗೊರೂರರವರ ಸಾಹಿತ್ಯದಲ್ಲಿ ಗ್ರಾಮ ಸಮಾಜ(ಅಪ್ರಕಟಿತ);** ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ; ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಮುನಿಯಪ್ಪ; ೨೦೦೫; **ಶಿವರಾಮ ಕಾರಂತರ ಕಾದಂಬರಿಗಳಲ್ಲಿ ರಾಷ್ಟ್ರೀಯ ಪ್ರಜ್ಞೆ"** ಅನಿಕೇತನ ಪ್ರಕಾಶನ, ಬೆಂಗಳೂರು.

೪. ಮುನಿಶಾಪ್ಪ ಎ.; ೨೦೦೯; **ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ;** ಕಾಲ ಪ್ರಕಾಶನ; ಬೆಂಗಳೂರು.

೫. ಮೂಡಲಗಿರಿಯಯ್ಯ; ೧೯೯೮; **ಕನ್ನಡ ಕಾದಂಬರಿಗಳಲ್ಲಿ ಗಾಂಧೀವಾದದ ಪ್ರೇರಣೆ(ಅಪ್ರಕಟಿತ);** ಕನ್ನಡ ಭಾರತಿ; ಕುವೆಂಪು ವಿಶ್ವವಿದ್ಯಾನಿಲಯ; ಶಿವಮೊಗ್ಗ;

೬. ಹಾಲೊಳ್ಳಿ ಎಚ್.ಪಿ.; ೨೦೦೯; **ಆಧುನಿಕ ಕನ್ನಡ ಕಾವ್ಯ ಮತ್ತು ಗಾಂಧಿವಾದ;** ಶ್ರೀಮಹದೇಶ್ವರ ಸ್ಟೋರ್ಸ್; ಬೆಂಗಳೂರು.

❖❖❖

೨. ಕನ್ನಡದಲ್ಲಿ ಗಾಂಧೀಜಿಯವರನ್ನು ಕುರಿತ ಸೃಜನಶೀಲ ಸಾಹಿತ್ಯ ಸೂಚಿ

I. ಕಾವ್ಯ

೧. ಅಕಬರ ಅಲಿ.ಎಂ. - ನಾಡನೇಸರ ಬಾಪು, ಏನೆಂಥ ಕಣ್ಣು!!, ಜಗದ ಕಣ್ಣು-ಗಾಂಧಿ

೨. ಅಬ್ದುಲ್ ಮಜೀದ್ ಖಾನ್ - ಬಾಪೂ

೩. ಅನಂತಮೂರ್ತಿ.ಯು.ಆರ್. - ಗುರುರಾಯ

೪. ಅರ್ಮಾಂಡೋ ಮನೆಝಿಸ್ - ಜನವರಿ ಮೂವತ್ತು

೫. ಅರವಿಂದ ನಾಡಕರ್ಣಿ - ಗಾಂಧಿ

೬. ಅರುಣ ಬಿ. ಕುಲಕರ್ಣಿ - ಮಹಾತ್ಮನ ಅಳಲು

೭. ಅಲ್ಲಮಪ್ರಭು ಬೆಟ್ಟದೂರು - ಗಾಂಧಿ, ತಾತನುದ್ದೇಶಿಸಿ, ಗುಲಾಬಿ ಮಂದಿರ

೮. ಅಶೋಕ ನರೋಡೆ - ಅಜ್ಜನಿಗೊಂದು ಓಲೆ

೯. ಅಶೋಕ ಶೆಟ್ಟರ - ಇಂದು ಸ್ಮರಿಸಿಬಿಡುತ್ತೇವೆ ಏಕೆಂದರೆ

೧೦. ಅಜ್ಞಾತ ಕವಿ - ಸತ್ಯಾಗ್ರಹ, ದೇವರೌ ನನಗಾಂಧಿ, ಖಾದಿ, ಏಕೆ ಧರಿಸುವೆ ಬಿಡು, ದುರ್ವ್ಯಸನಗಳನ್ನು ಬಿಡಿರಿ, ಶೆರೆ, ಸೇಂದಿ, ಬ್ರಾಂಡಿಗಳ ಕುಡಿಯದಿರಿ, ಮಾರಿಯ ಓಡಿಸಬೇಕು, ಹೊಡೆದೊಡಿಸು, ಇದು ನೀತಿ ಧರ್ಮ

೧೧. ಅಂಬಿಕಾತನಯದತ್ತ - ಮರಣ?, ಶ್ರದ್ಧಾಂಜಲಿ, ಜಯಜಯಾ ಗಾಂಧಿ ಮೋಹನಾ, ಶೂನ್ಯ, ಬಾಪೂಜಿ-ಪೂಜಿ, ಗಾಂಧೀವಾದಿ, ಕೇಳಿರೊಂದು ಸೋಜಿಗ, ಶಕಪುರುಷನ ಶತಮಾನ, ಅಮರ ಮರಣ, ದರಿದ್ರ

		ನಾರಾಯಣ, ಪೂತಾತ್ಮ-ಹೂತಾತ್ಮ-ಹುತಾತ್ಮ-ಮಹಾತ್ಮ, ಗಾಂಧಿ-ಸತ್ಯ, ಧ್ರುವತಾರೆ, ಮಹಾತ್ಮಾ, ವೃದ್ಧಗಾಂಧಿ, ಜಯಂತಿ, 'ಬಾ', ಗಾಂಧಿ ಭಸ್ಮ, ನೂರು ವರ್ಷವಾತು, ಸ್ಮೃತಿಕುಸುಮಾಂಜಲಿ.
೧೨. ಆಚಾರ್ಯ ಪಾ.ವೆಂ.	-	ಗಾಂಧಿಗೆ
೧೩. ಆಂಜನೇಯ ಜಾಲಿಬೆಂಚಿ	-	ಗಾಂಧೀಜಿಗೆ
೧೪. ಆನಂದ ಝುಂಜರವಾಡ	-	ಅವರು
೧೫. ಇಂಚಲ ಎಸ್.ಡಿ.	-	ಮಹಾತ್ಮರ ಚಿತಾಭಸ್ಮ ವಿತರಣ, ಕರ್ಮಯೋಗಿ ಗಾಂಧೀಜಿ
೧೬. ಇಂದಿರೇಶ	-	ವಿಶ್ವಮೋಹನಗಾಂಧಿ
೧೭. ಈರಪ್ಪ.ಎಂ. ಕಂಬಳಿ	-	ಬಾಪುವಿನ ಗೋರಿಯ ಸುತ್ತ
೧೮. ಈಶ್ವರ ಸಣಕಲ್ಲ	-	ಬಾಷ್ಪ- ಪುಷ್ಪ
೧೯. ಎಕ್ಕುಂಡಿ.ಸು.ರಂ.	-	ಗಾಂಧೀಜಿ
೨೦. ಎಚ್.ಎಸ್.ಎನ್.	-	ನೋಡಾಗ ಭಾರತವು
೨೧. ಎನ್ಕೆ	-	ನಮನ ನಿನಗೆ
೨೨. ಕರ್ಕಿ ಡಿ.ಎಸ್.	-	ದಿವ್ಯ ಜ್ಯೋತಿ, ನಿಂತಿರುವರು ಗಾಂಧೀಜಿ- ಸ್ವಾತಂತ್ರ್ಯಯೋಗಿ
೨೩. ಕಮಲಾ ಹಂಪನಾ	-	ಅಜ್ಜಿಯ ಗಾಂಧೀಜಿ
೨೪. ಕಯ್ಯಾರ ಕಿಞ್ಞಣ್ಣ ರೈ	-	ಗಾಂಧೀಜಿಗೆ, ಗಾಂಧಿ ಗಾಥಾ, ಐಕ್ಯಗಾನ
೨೫. ಕವಿರುದ್ರ	-	ಅಹಿಂಸೆ, ಗಾಂಧಿ
೨೬. ಕಾಡಣ್ಣನವರ.ಸಿ.ಬಾ.	-	ಸ್ವಾತಂತ್ರ್ಯದೇವ, ಭಾರತದ ಮುತ್ತಜ್ಜ, ಮಹಾತ್ಮರ ನಗೆ, ಭಾರತೀಯ ಪ್ರಳಾಪ, ಕೀರ್ತಿ ರವಿಯ ನೆನಪು, ಅಮರ ನಗೆ, ಬೆಳಕು ಕಂಡಿರಾ, ಸ್ವಾತಂತ್ರ್ಯದ ಸವಿ ನೆನಪು, ಸಹಕಾರದ ಆದಿ, ಬುನಾದಿ, ಹಾದಿ (ಲಾವಣಿ)
೨೭. ಕಾಮತ್.ಬಿ.ವಿ.	-	ಹಾಡು (ಮದ್ಯಪಾನ)

೨೮. ಕಾವ್ಯಾನಂದ - ಶ್ರೀಶರಣ

೨೯. ಕುಲಕರ್ಣಿ 'ಜೀವಿ' - ನಾಲ್ಕು ಧ್ವನಿ

೩೦. ಕುಲಕರ್ಣಿ, ಪುಟ್ಟು ಪ. - ಗಾಂಧೀಜಿ

೩೧. ಕುವೆಂಪು - ಮಹಾತ್ಮಾಗಾಂಧಿ, ಸಭ್ಯತಾ ದೇವತೆ, ಸ್ವಾತಂತ್ರ್ಯ ಶಿಲ್ಪಿ, ಸತ್ಯಾಗ್ರಹಿ, ಇದು ವಿಶ್ವಘಟನೆ, ಶ್ರೀರಾಮಪುರದಲ್ಲಿ ಗಾಂಧೀಜಿ.

೩೨. ಕೃಷ್ಣದಾಸ - ಅಸಹಕಾರ ಲಾವಣಿ

೩೩. ಕೃಷ್ಣಮೂರ್ತಿ ಪುರಾಣಿಕ - ಅಮರಜ್ಯೋತಿ, ವಿಶ್ವದ ಹೊಸ ಕಣ್ಣು

೩೪. ಕೃಷ್ಣಮೂರ್ತಿ ಬಿಳಿಗೆರೆ - ಗಾಂಧಿ ತಾತ, ನಾನು ಮತ್ತು ನನ್ನ ಮಗಳು

೩೫. ಕೈಲಾಸಂ.ಟಿ.ಪಿ. - ನಮ್ಮ ಬಾಪೂ

೩೬. ಕೊಟ್ರಪ್ಪ. ಎಚ್.ಕೆ. - ಆದರ್ಶಕ್ಕೆ ನೇಣು?

೩೭. ಖುರ್ಷೀದ್ ಆಲಂ ಮೋಮಿ - ಮತ್ತೆ ಹುಟ್ಟಿ ಬಾ

೩೮. ಗಜಾನನ ಈಶ್ವರ ಹೆಗಡೆ - ಇವನಾರು?

೩೯. ಗಣಪತಿರಾವ್ ಪಾಂಡೇಶ್ವರ - ಮಹಾತ್ಮಾಗಾಂಧಿಗೆ, ಕೀರ್ತಿಕಾಯ ಅವರ ಗಾಂಧಿ

೪೦. ಗವಿಸಿದ್ಧ ಎನ್. ಬಳ್ಳಾರಿ - ಬಾಪೂಜಿ

೪೧. ಗುಂಡಪ್ಪ. ಡಿ.ವಿ. - ಮಹಾತ್ಮಗಾಂಧಿ, ಸಾಧು ಗಾಂಧಿ

೪೨. ಗುರುಸ್ವಾಮಿ ಗಣಾಚಾರಿ - ಮಾನವನೇ ಎಚ್ಚರ!, ಶಾಂತಿಧೂತ ಗಾಂಧೀಜಿ

೪೩. ಗೋಗೇರಿ ಎಂ.ಡಿ. - ಜನಿಸಿ ಬಾ ಗಾಂಧಿ

೪೪. ಗೋಪಾಲಕೃಷ್ಣ ಅಡಿಗ.ಎಂ. - ಭಾರತದ ತಂದೆ ಗಾಂಧಿ, ಗಾಂಧಿ, ಗಾಂಧಿ-೧೯೫೮, ಸ್ವಾತಂತ್ರ್ಯ-೧೯೮೭

೪೫. ಗೋವಿಂದ ಪೈ - ಮಹಾತ್ಮನ ಆತ್ಮಕ್ಕೆ, "ಇನ್ನಿನಿತು ನೀ ಮಹಾತ್ಮಾ ಬದುಕಬೇಕಿತ್ತು"!

೪೬. ಗೋವಿಂದರಾಜು ಗಿರಡ್ಡಿ - ಗಾಂಧೀಜಿಯ ನೆನಪು

೪೭. ಗೌರೀಶ ಕಾಯ್ಕಿಣಿ - ನಕ್ಕನಾ ತಾತ, ಅಮರ ಜನ್ಮ

೪೮. ಗಂಗಪ್ಪ ವಾಲಿ - ಭಾಗ್ಯವದು ಬಯಲಾಯಿತೆ?

೪೯. ಗಂಗಾಧರ ಚಿತ್ತಾಲ - ಮಹಾತ್ಮ

೫೦. ಗಂಗಾಧರ ಭಟ್ಟ - ಗಾಂಧಿ ಇದ್ದನೆ?

೫೧. ಚಿದಂಬರ ದೀಕ್ಷಿತ - ಶಾಂತಿದೂತ

೫೨. ಚನ್ನಪ್ಪ ಕಟ್ಟಿ - ನಮ್ಮೊಳಗಿನ ಗಾಂಧಿಗೆ

೫೩. ಚೆನ್ನಸ್ವಾಮಿ ಮೂಡ್ನಾಕೂಡು - ಗಾಂಧಿ ಇದ್ದಿದ್ದರೆ

೫೪. ಚಿಂತಾಮಣಿ ಕೊಡ್ಲೆಕೆರೆ - ಗೋಡ್ಸೆ ಗಾಂಧೀಜಿ ಮತ್ತು ನಾವು

೫೫. ಚೆನ್ನವೀರ ಕಣವಿ - ಆದರೂ ಅವನ ನೆನಪು, ಗಾಂಧಿಯುಗ, ನಮ್ಮ ಬಾಪೂ, ಅಮರ ತೇಜಃಪುಂಜಿ, ಗಾಂಧಿ, ಬಾಪು-ಭಾಪು, ಗಾಂಧಿ-ಶರದ್ಗೀತ

೫೬. ಚಂದ್ರಶೇಖರ ಆಲೂರು - ಲೋಕನಾಯಕನಿಗೆ

೫೭. ಚಂದ್ರಶೇಖರ ಕಂಬಾರ - ಸ್ವಾತಂತ್ರ್ಯ ಹೋರಾಟದ ಲಾವಣಿ, ದೇಶಭಕ್ತನ ಗಾಂಧಿ ಗೀತೆ, ಗಾಂಧೀಜಿ ಸ್ವರ್ಗದಿಂದ ಇಳಿದು ಬಂದಾಗ

೫೮. ಚಂದ್ರಶೇಖರ ತಾಳ್ಯ - ಗಾಂಧಿಗೆ ಏನೂ ಅನ್ನಲಾರೆ, ಗಾಂಧಿಯ ಮುದಿಚಿತ್ರ ಮತ್ತು ನಾನು

೫೯. ಚಂದ್ರಶೇಖರ ಪಾಟೀಲ - ಗಾಂಧೀಸ್ಮರಣೆ, ಅಕ್ಟೋಬರ್ ೨ರಂದು ಅಸಾಮಾನ್ಯಗಾಂಧಿ, ಮಹಾರಾಜನಿಗೆ ಸಾಮಾನ್ಯ ಹೇಳಿದ್ದು, ೨, ೧೦, ೧೯೭೬: ಒಂದು ವರದಿ, ಮಹಾತ್ಮಗಾಂಧಿ ಮತ್ತು ನಾಯಿ, ಗಾಂಧಿ ಗಾಂಧಿ ಗಾಂಧಿ, ಗಾಂಧಿಯನ್ನು ನಾನು ಕಂಡಿಲ್ಲ, ಗಾಂಧಿ ಅಜ್ಜನ ಮೋರೆ ನಗುತ್ತಲೇ ಇತ್ತು, ಅತಿಥಿ, ಗಾಂಧಿ ಅಜ್ಜನ ಕುರಿತು

೬೦. ಜಗದೀಶ ಮಂಗಳೂರುಮಠ - ದೀಪ ನಂದಿದೆ.

೬೧. ಜಯದೇವಿತಾಯಿ ಲಿಗಾಡೆ - ಅಮರಜ್ಯೋತಿ ಬಾಪೂಜಿ, ಭಾರತಾಂಬೆಯ ಕೂಗು, ಭಾಪೂ ವಾಣಿ

೬೨. ಜಯಪ್ರಕಾಶ ಬಂಜೆಗೆರೆ - ಗಾಂಧಿ ಮಾರ್ಗ

೬೩. ಜಯಪ್ರಕಾಶ ಮಾವಿನಕುಳಿ - ಗಾಂಧಿಗೆ ಕೊನೇ ನಮಸ್ಕಾರ

೬೪. ಜಯರಾಮ ಹೆಗಡೆ - ಕವನದಲ್ಲಿ ಬದುಕಿದ ಗಾಂಧಿ

೬೫. ಜಯಸುದರ್ಶನ	-	ಗಾಂಧೀಜಿಯ ಕೋತಿಗಳು
೬೬. ಜಯಂತ ಕಾಯ್ಕಿಣಿ	-	ವೇಷ
೬೭. ಜಾನಕಮ್ಮ ಬೆಳಗೆರೆ	-	ಕರ್ಮಯೋಗಿ ಗಾಂಧೀಜಿ
೬೮. ಜಿನದತ್ತ ದೇಸಾಯಿ	-	ನೀ ತಂದೆಯಂತ ಬಂದೆವು
೬೯. ಢಂಗ.ಡಿ.ಬಿ.	-	ನಾನು ನಿನ್ನಂತೆ ನಡೆಯುವಾಗ
೭೦. ತಿಪ್ಪಯ್ಯ ಮಾಸ್ತರ	-	ಸ್ವಯಂ ಸೇವಕರಾಗಿ, ಗಾಂಧೀಯವರ ಸಂದೇಶ ಸರ್ವತ್ರ ಗಾಂಧಿ, ನೀಧರಿಸೈ ಖಾದಿ, ಹೆಂಡದ ಲಾವಣಿ
೭೧. ತಿರುಮಲೇಶ್.ಕೆ.ವಿ.	-	ಗಾಂಧಿಗೆ
೭೨. ದಿನಕರ ದೇಸಾಯಿ	-	ಮಹಾತ್ಮಾಗಾಂಧಿ, ಗಾಂಧಿಯವರ ಸ್ಮಾರಕ
೭೩. ದುಂಡರಡ್ಡಿ ಬಿ.ಎಸ್.	-	ನಾವು ಕೊಲ್ಲಲಿಲ್ಲ...
೭೪. ದುಂಡೀರಾಜ ಎಚ್.	-	ಗಾಂಧಿ ಮೈದಾನ
೭೫. ದೇವೇಂದ್ರಕುಮಾರ ಹಕಾರಿ	-	ಗಾಂಧೀಜಿ ಕಂಡ ಕನಸು
೭೬. ದೊಡ್ಡರಂಗೇಗೌಡ	-	ಗಾಂಧೀಜಿಗೆ
೭೭. ದೊರೆಸ್ವಾಮಿ ಹೊರೆಯಾಲ	-	ನಿನ್ನದೇನು ತಪ್ಪು
೭೮. ಧರಣೇಂದ್ರ ಕುರಕುರಿ	-	ಗಾಂಧೀ ಟೊಪ್ಪಿಗೆ
೭೯. ನ.ಮ.ಕೊ. ಸೋಗಿ	-	ಉರುಗೋಲಿನ ವೀರ
೮೦. ನರಸಿಂಹಾಚಾರ್. ಪು.ತಿ.	-	ಗಾಂಧಿಸ್ತವ, ನೆರಳು
೮೧. ನರಸಿಂಹಸ್ವಾಮಿ ಕೆ.ಎಸ್.	-	ಗಾಂಧೀಜಿಯ ಪಾದಕ್ಕೆ, ಗಾಂಧೀಸ್ತವನ, ಅಮರಜನ್ಮ
೮೨. ನರಸಿಂಹಶಾಸ್ತ್ರಿ.ಕೆ.	-	ಬಾಪೂಜಿಯವರ ಭೌತಶರೀರಕ್ಕೆ
೮೩. ನ.ಹ. ಕಟಗೇರಿ	-	ಮೊಳೆಯೇ ನೀನೆ ಧನ್ಯ
೮೪. ನಾಗರತ್ನಕುಮಾರಿ ಬಿ.ಎಸ್.	-	ಗಾಂಧೀ ತಾತನಿಗೆ
೮೫. ನಾಗರಾಜನ್ ಎಂ.ಜಿ.	-	ಗಾಂಧಿ ಮಾರ್ಗ
೮೬. ನಾಗರಾಜ.ಆರ್.ಜಿ.ಹಳ್ಳಿ	-	ಗಾಂಧಿ ಅಜ್ಜನಿಗೆ
೮೭. ನಾಗರಾಜರಾಯ.ಹ.ವೆಂ.	-	ಆ, ಮಹಾತ್ಮನಿಗೆ, ಅದ ನೆನಪಿಸಿಕೊಂಡರೆ

೮೮. ನಾಗೇಶ ರಾಂಪೂರ - ಗಾಂಧಿ ನಾಡಿನಲ್ಲಿ

೮೯. ನಾರಾಯಣಮೂರ್ತಿ ಜಿ.ವಿ. - ವಿನಯದ ಪ್ರಭುವೇ

೯೦. ನಾರಾಯಣ ಸಂಗಮ - ಗಾಂಧಿ ಗುಣ ಗಂಧಗಾನ

೯೧. ನಿಂಗಣ್ಣ ಸಣ್ಣಕ್ಕಿ - ಕ್ಷಮಿಸು ಗಾಂಧಿ

೯೨. ನಿಸಾರ್ ಅಹಮದ್ ಕೆ.ಎಸ್. - ಬಾಪೂ, ಅಂತರ, ದಾರಿದೀಪ

೯೩. ನೀಲಕಂಠಯ್ಯ ಬಿ. - ಮದ್ಯಪಾನ ನಿರೋಧ

೯೪. ಪರಮೇಶ್ವರಭಟ್ಟ ಎಸ್.ವಿ. - ಮಹಾತ್ಮಗಾಂಧಿಗೆ, ಅಮರನಾದೈ ತಂದೆ!

೯೫. ಪಾಟೀಲ ಬಿ.ಕೆ. ಜನರಾಳ - ಯಾವ ಗಾಂಧಿ

೯೬. ಪಂಡಿತಾರಾಧ್ಯ ಹೋ.ಮ. - ಗಾಂಧೀಜಿ

೯೭. ಪಾಂಡೇಶ್ವರ ಜಿ.ಆರ್. - ಅವತಾರಿ ಗಾಂಧಿ, ಮಹಾತ್ಮಾ ಗಾಂಧಿಗೆ

೯೮. ಪೆ.ರ.ಮ. - ಭಾರತ ಬೋಧೆ

೯೯. ಪ್ರತಿಭಾ ನಂದಕುಮಾರ - ಗನ್ನು ಮತ್ತು ಗಾಂಧಿ

೧೦೦. ಪ್ರಭು ಖಾನಾಪೂರೆ - ಗಾಂಧಿ

೧೦೧. ಪ್ರಭುಸ್ವಾಮಿಮಠ - ಬಾಪುವಿಗೆ

೧೦೨. ಪ್ರಭುಪ್ರಸಾದ - ನಿರ್ಭಯ

೧೦೩. ಪ್ರಮೋದ್ ತುರ್ವಿಹಾಳ್ - ಗಾಂಧಿಯೊಂದಿಗೆ

೧೦೪. ಪ್ರಸನ್ನ - ಗಾಂಧಿ ಎಂಬ ಮಹಾತ್ಮೆ

೧೦೫. ಪ್ರಹ್ಲಾದ ಬೆಟಗೇರಿ - ಟೋಪಿ

೧೦೬. ಪ್ರಹ್ಲಾದ ರೆಡ್ಡಿ ಬೂದುಗುಪ್ಪ - ಗಾಂಧಿ ಮತ್ತು ಸ್ವಾತಂತ್ರ್ಯ

೧೦೭. ಬಸವರಾಜ ವಕ್ಕುಂದ - ಲೆನಿನ್-ಗಾಂಧಿ

೧೦೮. ಬಸವರಾಜ ಸಬರದ - ಬೆಂಕ್ಯಾಗ ಹೂವು ಅರಳ್ಯಾವ - ಗಾಂಧೀ ನೀ ಇರಬೇಕಿತ್ತು

೧೦೯. ಬಸವಲಿಂಗ ಸೊಪ್ಪಿಮಠ - ಗಾಂಧಿ ಮತ್ತು ಜಗದಂಬಾ ಕ್ಯಾಲೆಂಡರ್

೧೧೦. ಬಸುಪಟ್ಟದ ಎಸ್.ಎಸ್. - ಬಾಪೂಜಿ!

೧೧೧. ಬಾಪೂಗೌಡ ಪಾಟೀಲ - ಕೊಲ್ಲಲೇ ಸಾಯಲೇ

೧೧೨. ಬಾಲಕೃಷ್ಣ ಜಂಬಗಿ - ಏಳ್ತಿರೋ ಏನ್ ಹಾಳಾಗಿ ಹೋಗ್ತೀರೋ

೧೧೩. ಬಾಲೂರಾವ್ ಶಾ. - ಗಾಂಧೀಜಿ - ಲಾರ್ಡ್ ಬಾಟಿವ್ಸ್‌ಲೇಗೆ ಹೇಳಿದ್ದು

೧೧೪. ಬಿಳಿಗಿರಿ - ವಿರೋಧಾಭಾಸ

೧೧೫. ಬುದ್ಧ ಹಿಂಗಮಿರೆ - ಮೂರಿಂಚು ಆರಿಂಚು ಮಾನವರ ಪ್ರಾರ್ಥನೆ

೧೧೬. ಭಟ್ಟ ಟಿ.ಜಿ. ಹಾಸಣಗಿ - ಓ ಮೋಹನ ಮುರಳಿ

೧೧೭. ಭಾವಜೀವಿ - ಗಾಂಧೀಸ್ಮರಣೆ, ಗಾಂಧೀ ಜಯಂತಿ, ಗಾಂಧೀ ಪಥ, ನಮನವಿದೋ, ಅಮರ ಬಾಪು, ಮಹಾತ್ಮನ ಸ್ಮರಣೆ, ಹಕೀಮಗಾಂಧಿ, ಗಾಂಧೀ ವಾದಿಗಳಿಗೆ, ಪಾವಕ ಗಾಂಧೀ, ಪ್ರಾತಃಸ್ಮರಣೀಯ, ಗಾಂಧೀ ಸ್ತುತಿ, ಗಾಂಧೀ - ಗೋಡ್ಸೆ, ಗಾಂಧೀಯ ನೆನೆದರೆ, ಗಾಂಧೀ ಭವನ, ಗಾಂಧೀ ಹೃದಯ ವಿಹಾರಿಗಳು, ತಾತನ ಓಲೆ, ವೈದಿಕ ಬುಲೆಟ್ಟು, ನಿತ್ಯ ನಮನ ಗಾಂಧಿಗೆ, ಗಾಂಧೀ ಕಥನ, ರಾಟೆಯನು ಮೀಟಿದವ, ರಾಜಘಾಟ್, ಮಹಾತ್ಮನಿಗೊಂದು ಓಲೆ, ಕಪಿಗಳ ಸಂದೇಶ, ಬನ್ನಿ ಗಾಂಧಿ ಉಪಾಸನೆಗೆ, ಗಾಂಧೀವಾದ, ಗಾಂಧೀ ಉಪವನದಿ, ಗಾಂಧೀ ವಿಚಾರ ತೀರ್ಥ, ವಿಶ್ವಸ್ಥನಾಗು, ಗಾಂಧಿ ಬರಿಯ ಮನುಜವಲ್ಲ, ಗಾಂಧೀ ತತ್ವದ ಗರಿಮೆ, ಗಾಂಧೀ ತಾತ

೧೧೮. ಭೀಮಕವಿ ಹುಲಕುಂದ - ಪವಿತ್ರ ಖಾದಿ, ಖಾದಿಯ ಅಂಗಿ, ಖಾದಿ ಅರವಿ, ಶ್ರೀ ವಂದೇ ಮಾತರಂ

೧೧೯. ಭೀಮನಗೌಡರ ಎಚ್.ಎಸ್. - ಕಿಟ್ಟನ ಗಾಂಧೀ ಚಿತ್ರ

೧೨೦. ಭುಜೇಂದ್ರ ಮಹೀಷವಾಡಿ - ಓ! ತಂದೆ, ಜ್ಯೋತಿ ನಂದಿ ಹೋಯಿತೇ

೧೨೧. ಆರ್ಕೆ ಮಣಿಪಾಲ - ರಾಷ್ಟ್ರಪಿತನೊಂದಿಗೆ

೧೨೨. ಮರುಳಯ್ಯ ಸಾ.ಶಿ. - ಗಾಂಧಿ, ಗಾಂಧಿ ಸ್ಮೃತಿ

೧೨೩. ಮಲ್ಲಿಕಾರ್ಜುನ ಹಿರೇಮಠ - ನಾವಿನ್ನು ಕಲಿಯಲಿಲ್ಲ ಬಾಪು

೧೨೪. ಮಹದೇವಯ್ಯ ಟಿ.ಎನ್. - ಗುರು ಗಾಂಧೀಜಿ

೧೨೫. ಮಹಾಬಲೇಶ್ವರ ಕಾಟ್ರಹಳ್ಳಿ - ಅನಾಥ ದೇಹ ಪ್ರದರ್ಶನ

೧೨೬. ಮಳಗಿ ಆರ್.ಎಸ್. - ಓ ಬಾಪೂಜಿ

೧೨೭. ಮಾಧವಿ ಭಂಡಾರಿ - ಗಾಂಧೀ ಜನ್ಮದಿನದಂದು

೧೨೮. ಮಾಲತಿ.ಎಸ್. - ಗಾಂಧೀಜಿಯಿಂದ ಗಾಂಧಿವರೆಗೆ ಮತ್ತು ಈಗ

೧೨೯. ಮುಕುಂದರಾಜ ಎಲ್.ಎನ್. - ಪ್ರಿಯ ಗಾಂಧಿ

೧೩೦. ಮುಗಳಿ.ರಂ.ಶ್ರೀ - ಗಾಂಧಿ ಕಿರಣ

೧೩೧. ಮುತ್ತಾಚಾರ್ಯ.ಟಿ.ವಿ. - ಮರೆತು ಜೀವಿಸಲಾರೆವ್ವ

೧೩೨. ಮುನಿಕುಮಾರ.ಪಿ. - ಗಾಂಧೀಭಜನ ಸ್ವಾತಂತ್ರ್ಯ ದಿನ, ಅಮರ ಬಾಪೂ

೧೩೩. ಮುನಿವೆಂಕಟಪ್ಪ.ವಿ. - ಈ ದೇಶದ ಗಾಂಧಿ!

೧೩೪. ಮೇಟಿ.ವಿ.ಎಮ್. - ಸತ್ತಾವಾ - ಗೆದ್ದಾವಾ

೧೩೫. ಮೊಗಸಾಲೆ.ನಾ. - ನೋಡಿದರು ಗಾಂಧೀಜಿಯನ್ನು ಎಲ್ಲರೂ ಬೆಳಕಿನಲ್ಲಿ, ಗಾಂಧಿ ಶಿಷ್ಯರಾಗಿದ್ದ ನನ್ನಪ್ಪನಿಗೆ

೧೩೬. ಮೋಹನಚಂದ ಪಾಟೀಲ - ಮೂರು ಮಂಗಗಳು

೧೩೭. ಮೋಹನ ನಾಗಮ್ಮನವರ್ - ಗಾಂಧಿ ಸ್ಮರಣೆ - ೯೫

೧೩೮. ಮೃತ್ಯುಂಜಯ ಹೊರಕೇರಿ - ಆರಾಮವಾಗಿರು ಗಾಂಧಿ

೧೩೯. ಯಲ್ಲಟ್ಟಿ. ಬ.ಗಿ. - ವಿಶ್ವಮಾನ್ಯ!

೧೪೦. ರಘುನಾಥ. ಸ. - ಶೇಷಪ್ರಶ್ನೆ

೧೪೧. ರಾಚಪ್ಪ.ಆರ್. - ಬಾಪೂ

೧೪೨. ರಾಜಗೋಪಾಲ ಕ.ವೆಂ. - ನಾನು ಮತ್ತು ಗಾಂಧಿ

೧೪೩. ರಾಜರತ್ನಂ.ಜಿ.ಪಿ. - ಗೊಮ್ಮಟ ಜಿನ ಗಾಂಧಿ

೧೪೪. ರಾಮಚಂದ್ರಚಾರ್. ಡಿ.ಬಿ. - ನೆನೆಯಲಾರೆ

೧೪೫. ರಾಮಚಂದ್ರರಾಯ ಸಾಲಿ - ಆಶ್ಚರ್ಯದದ್ಭುತವು!, ಜಯಮಾಲೆ, ಉತ್ಪಾತ

೧೪೬. ರಾಮಚಂದ್ರ ಶರ್ಮಾ - ಇಂದಿಲ್ಲವೇ ಆ ದೇವಮಾನವ, ಅಕ್ಟೋಬರ್ ಎರಡಕ್ಕೆ

೧೪೭. ರಾಮಾನುಜಂ .ಪಿ.ಎಸ್. - ಓ ಅದ್ಭುತ ಸನ್ಯಾಸಿ

೧೪೮. ರೂಪಕವಿ - ಗಾಂಧಿ

೧೪೯. ರಂಜಾನ್ ದರ್ಗಾ - ನನಗೆ ಗಾಂಧಿ ಆಗುವ ಇಚ್ಛೆ

೧೫೦. ಲತಾ ಗುತ್ತಿ - ಬಾ ಮತ್ತೊಮ್ಮೆ...

೧೫೧. ಲಲಿತಾನಾಯಕ್ ಬಿ.ಟಿ. - ನಾನು ನಿನ್ನಂಗ ಅಜ್ಜ

೧೫೨. ಲಕ್ಷ್ಮೀನಾರಾಯಣ ಪುಣಿಂಚತ್ತಾಯ ಪುಂಡೂರು - ಉಪ್ಪಿನ ಕಥನ, ಖಾದಿಯ ಹಾಡು, ಹರಿಜನ ಸಂಧಾನ

೧೫೩. ಲಕ್ಷ್ಮೀನಾರಾಯಣಭಟ್ಟ ಎನ್.ಎಸ್. - ಅಪರೂಪದವನು

೧೫೪. ಲಿಂಗಪ್ಪ. ಕೆ.ವಿ. - ಬಾಪೂವನ್ನು ನೆನೆದು

೧೫೫. ಲಿಂಗಣ್ಣ ಸಿಂಪಿ - ಬಹುರೂಪಿ, ಪೂರ್ಣಜೀವಿ, ಭಾರತ ಸೂರ್ಯ, ನಾಡಿನಜ್ಜ

೧೫೬. ಲೋಕೇಶ. ಎಂ. - ಹರಿಜನ ಮೋಹನದಾಸರಿಗೆ

೧೫೭. ವರದರಾಜರಾವ್. ಜಿ. - ಗಾಂಧೀಜಿಯ ಒಕ್ಕಲು

೧೫೮. ವಸಂತಕುಮಾರ ಪೆರ್ಲ - ಗಾಂಧಿಗೆ

೧೫೯. ವಸಂತಕುಮಾರ. ಎಂ.ಸಿ. - ಗಾಂಧೀ ಮಹಿಮೆ

೧೬೦. ವಸುದೇವ ಭೂಪಾಲನಂ - ಅಮರಗಾಂಧಿ

೧೬೧. ವಿನಾಯಕ - ಗಾಂಧೀಜಿ

೧೬೨. ವಿಜಯಶ್ರೀ ಸಬರದ - ಗಾಂಧೀಜಿ ನೆನಪುಗಳು

೧೬೩. ವಿರುಪಾಕ್ಷಗೌಡ. ಕೆ. - ಗೀತೆಯ ಬಾಳಿದ ಗಾಂಧಿ

೧೬೪. ವಿಷಕಂಠರಾವ್.ಎನ್. - ನಿಷ್ಕಾಮ ಕರ್ಮಯೋಗಿ

೧೬೫. ವೆಂಕಟೇಶ ಅರ್ಚಕ - ಬಾಪೂಜಿಗೆ

೧೬೬. ವೆಂಕಟೇಶ ಮಲ್ಲೇಪುರಂ.ಜಿ. - ಸರ್ವೋದಯ ಮತ್ತು ಗಾಂಧೀಜಿ

೧೬೭. ವೆಂಕಟೇಶಮೂರ್ತಿ.ಎಚ್.ಎಸ್. - ಗಾಂಧಿ ಮತ್ತು ನಿರಾವರಣ

೧೬೮. ವೆಂಕಟೇಶ ಅಯ್ಯಂಗಾರ್ ಮಾಸ್ತಿ - ಗಾಂಧಿಯವರ ದರ್ಶನ

೧೬೯. ವೇದಾ ಎಂ.ಎಸ್. - ಪುಟ್ಟ ಪುಢಾರಿಗೊಂದು ಉಪದೇಶ

೧೭೦. ವೇಣುಗೋಪಾಲ ರಾವ್ - ಕಿವಿಮಾತು

೧೭೧. ವೇಣುಗೋಪಾಲ ಕಾಸರಗೋಡು - ನಾವು ಮತ್ತು ನೀನು

೧೭೨. ಶರೀಫಾ.ಕೆ. - ಗಾಂಧಿಗೊಂದು ಪ್ರಶ್ನೆ

೧೭೩. ಶಶಿಕಲಾ ವೀರಯ್ಯಸ್ವಾಮಿ - ಕಸ್ತೂರಿಯ ಕಂಪು

೧೭೪. ಶಾಮಸುಂದರ ಬಿದರಕುಂದಿ - ಕತ್ತಲ ನಡುವೆ ದೀಪ

೧೭೫. ಶಿವರುದ್ರಪ್ಪ .ಜಿ.ಎಸ್. - ಕಂಡದ್ದು ಮೂರು ಸಲ, ಗಾಂಧಿ, ಗಾಂಧಿ ಶತಮಾನೋತ್ಸವ, ಅನಾವರಣವಾಯಿತಂತೆ!

೧೭೬. ಶಿವಲಿಂಗಯ್ಯ. ಕೆ.ಪಿ. - ಗಾಂಧೀಸ್ಮೃತಿ

೧೭೭. ಶಿವತೀರ್ಥನ್. ಕೆ.ನ. - ಬಾಪು

೧೭೮. ಶಿವಶರಣ ಪಾಟೀಲ ಜಾವಳಿ - ನೀನುಂಟು ನಾವುಂಟು

೧೭೯. ಶಿವಶಂಕರ ಜರಗನಹಳ್ಳಿ - ಗಾಂಧಿ

೧೮೦. ಶಿವಾನಂದ ಬೆಳಕೂಡ - ಶರಣು ಶರಣಾರ್ಥಿ

೧೮೧. ಶಿವಾನಂದ ಮೂಲಿಮನಿ - ಗಾಂಧೀ ಚಿತ್ರ

೧೮೨. ಶಿವಲಿಂಗಪ್ಪ ಭಾವಿಕಟ್ಟಿ - ಗಾಂಧಿ ಸತ್ತದ್ದೇ ವಾಸಿ

೧೮೩. ಶೈಲಾ ವಸಂತ - ನಟ್ಟಿರುಳ ಸದ್ದು

೧೮೪. ಶಂಕರ ಭಟ್ಟ ಕಡೆಂಗೋಡ್ಲು - ಗಾಂಧಿ ಸಂದೇಶ

೧೮೫. ಶಂಕರಪ್ಪ. ಡಿ.ಬಿ. - ಗಾಂಧಿ

೧೮೬. ಶಂಭುನಾಥ ರಾವಳ - ವಚನಪಾಲಕ, ಮಾತೃನಿಯೋಗಿ, ಆಫ್ರಿಕೆಯಲ್ಲಿ ಗಾಂಧೀಜಿ, ಪಠಾಣನ ಪರಿವರ್ತನೆ, ಜೀವನದಲ್ಲಿ ಪರಿವರ್ತನೆ, ಗಾಂಧೀ ಪ್ರಾಂತ, ಉಪ್ಪಿನ ಸತ್ಯಾಗ್ರಹಿ, ರಚನಾತ್ಮಕ ಕರ್ತೃ, ಅಹಿಂಸಾವಾದಿ, ಸೇವಾಭಾವಿ, ಹರಿಜನೋದ್ಧಾರಕ, ಹರಿಜನಕೆ ಕಿವಿಮಾತು, ಸಾಬರಮತಿ ಆಶ್ರಮ ಸಂಸ್ಥಾಪಕ, ಧರ್ಮಮೂರ್ತಿ, ಕವಿ ರವೀಂದ್ರ ರೊಡನೆ, ಸರ್ವಧರ್ಮ ಸಿಂಧು, ಕ್ರಾಂತಿಕಾರಕ ಭಾಷಣ, ಸ್ವಾತಂತ್ರ್ಯ ಸಂಗ್ರಾಮ, ಚಲೇಜಾವ್ ಘೋಷಣೆ, ನೌಖಾಲಿಯಲ್ಲಿ ಶಾಂತಿ ಸಂದೇಶ, ನೌಬಾಲಿ ಟೋಪಿಯಲ್ಲಿ ಗಾಂಧೀಜಿ, ಮಾನವ

ಕುಲದ ನಂದಾದೀಪ, ಯುಗಾವತಾರಿ ಗಾಂಧೀಜಿ,
ಮಕ್ಕಳ ಬಾಪು, ಸಮಯಪಾಲಕ ಗಾಂಧೀಜಿ,
ಗಾಂಧೀಜಿಯವರ ರಾಮರಾಜ್ಯ.

೧೮೭. ಶಾಂತರಸ	-	ಗಾಂಧಿ ಎಂಬುವ ಹೆಸರು
೧೮೮. ಶ್ರೀಕಂಠಶಾಸ್ತ್ರಿ ನಲವಡಿ	-	ವಂದೇ ಮಾತರಂ, ಮೋದವ ಪಡೆಯಿರಿ
೧೮೯. ಶ್ರೀಕಂಠಯ್ಯ ತೀ.ನಂ.	-	ಗಾಂಧಿ
೧೯೦. ಶ್ರೀ.ಜ.ಚ.ನಿ.	-	ಭಾರತ ಪಿತ
೧೯೧. ಶ್ರೀಧರ.ಬ.ಹೆ.	-	ರಾಷ್ಟ್ರ ಪಿತಾಮಹ
೧೯೨. ಶ್ರೀನಿವಾಸ ಕುಲಕರ್ಣಿ	-	ಬಾಪೂಗೆ
೧೯೩. ಶ್ರೀನಿವಾಸ ಮಾರ್ಕಂಡಪುರಂ	-	ಗಾಂಧಿಗೆ
೧೯೪. ಶ್ರೀನಿವಾಸ. ಹೆಚ್.	-	ಗಾಂಧಿ
೧೯೫. ಶ್ರೀನಿವಾಸ ಶೂದ್ರ	-	ಕಾಲಗರ್ಭದಲ್ಲಿ ಗಾಂಧಿ ಮತ್ತು ನಾನು
೧೯೬. ಶ್ರೀಪಾದಶೆಟ್ಟಿ	-	ಅಚ್ಚು ಕಂಡೆಯಾ...!
೧೯೭. ಸಣ್ಣಗುಡ್ಡಯ್ಯ ಎಚ್.ಜಿ.	-	ರಾಷ್ಟ್ರಪಿತನಿಗೊಂದು ಕಿವಿಮಾತು
೧೯೮. ಸಣ್ಣಪ್ಪ ಗಾಂವಕರ	-	ಅಭಯದೇವ ಗಾಂಧಿ
೧೯೯. ಸತೀಶ ಕುಲಕರ್ಣಿ	-	ಅಲಿಖಿತ ಕಾದಂಬರಿ ನಾಯಕನ ಕವಿತೆ, ಗಾಂಧಿಗಿಡ
೨೦೦. ಸತ್ಯಾನಂದ ಪಾತ್ರೋಟ	-	ಪಂಜೆಯುಡಿಗೆಯ ಮುದುಕ, ಬರಬ್ಯಾಡ ಅಜ್ಜ
೨೦೧. ಸದಾನಂದ ಪಾಟೀಲ	-	ಸತ್ತ ಗಾಂಧಿಗಳೊಡನೆ ಸ್ವಗತ
೨೦೨. ಸನದಿ. ಬಿ.ಎ.	-	ನಾವೂ ನಿನ್ನವರು, ಕ್ರಿಯಾಸ್ಮೃತಿ
೨೦೩. ಸರಜೂ ಕಾಟ್ಕರ್	-	ಗಾಂಧಿ ಸಿಕ್ಕ
೨೦೪. ಸರಸ್ವತಿ ಚಿಮ್ಮಲಗಿ	-	ಗಾಂಧೀ
೨೦೫. ಸರಸ್ವತಿಗೌಡ.ಎಂ.	-	ಶಾಂತಿ ಸಭೆಯಲ್ಲಿ
೨೦೬. ಸರೋಜ ಇಟ್ಟಣ್ಣನವರ	-	ಗಾಂಧಿ
೨೦೭. ಸರೋಜಿನಿ ಮಹಿಷಿ	-	ಗಾಂಧಿ ದರ್ಶನ

೨೦೮. ಸವಿತಾ ನಾಗಭೂಷಣ - ಗಾಂಧಿ ಹುಟ್ಟಿದ್ದು...

೨೦೯. ಸಿದ್ದಣ್ಣ ಮಸಳಿ - ಶುಭೋದಯ

೨೧೦. ಸಿದ್ಧಲಿಂಗಯ್ಯ - ಗಾಂಧಿ

೨೧೧. ಸಿದ್ಧಲಿಂಗಯ್ಯ. ಜಿ.ಎಸ್. - ಈ ಮುದುಕ ಗಾಂಧಿ ಮತ್ತು ನಾನು

೨೧೨. ಸಿದ್ಧಲಿಂಗ ದೇಸಾಯಿ - ಗಾಂಧಿ ನೆನಪು ಮತ್ಯಾಕ

೨೧೩. ಸಿದ್ಧಲಿಂಗ ಪಟ್ಟಣಶೆಟ್ಟಿ - ಗಾಂಧೀಜಿ

೨೧೪. ಸಿ.ಪಿ.ಕೆ. - ಗಾಂಧೀಜಿಗೆ, ಮಹಾತ್ಮ, ಸಮೀಕ್ಷೆ, ನಾನು ಗಾಂಧಿ, ಗಾಂಧೀಜಿ ಜಯಂತಿಯನ್ನು ನೆನೆದು, ಗಾಂಧೀಜಿಗೆ, ಅಂದು-ಇಂದು

೨೧೫. ಸೀತಾರಾಮ ಹೆಬ್ಬಾರ ಬಲವಾಡಿ - ಭಾರತೀಯರ ಕರ್ತವ್ಯ

೨೧೬. ಸೀತಾರಾಮಯ್ಯ. ವಿ. - ಮಹಾತ್ಮ, ಕೈಮುಗಿವ ಗಾಂಧಿ

೨೧೭. ಸುಜನಾ - ಗಾಂಧಿ

೨೧೮. ಸುಜಾತ. ಎಚ್.ಎಸ್. - ಮಹಾತ್ಮ

೨೧೯. ಸುನಿತಾ ಶೆಟ್ಟಿ - ತಾತ ನಮ್ಮ ಬಾಪೂ

೨೨೦. ಸುಬ್ರಾಯ ಚೊಕ್ಕಾಡಿ - ಬಾಪೂ ಜತೆ ಮಾತುಕತೆ

೨೨೧. ಸುಬ್ಬು ಹೊಲೆಯಾರ್ - ಗಾಂಧಿಯನ್ನು ಪ್ರೀತಿಸಲಾರದವರು

೨೨೨. ಸುಮತೀಂದ್ರ ನಾಡಿಗ್ - ಗಾಂಧೀಜಿಯ ಸಂವಹನ ಮಾಧ್ಯಮಗಳು

೨೨೩. ಸೋಮಶೇಖರ ಇಮ್ರಾಪುರ - ಗಂಡು ಜೋಗತೀ ಗಾಂಧೀ ಸ್ಮರಣೆ, ಹುಟ್ಟಬಾರದಾಗಿತ್ತು ಗಾಂಧಿ

೨೨೪. ಹನೀಫ್.ಬಿ.ಎಂ. - ಗಾಂಧಿಗೆ

೨೨೫. ಹರೀಶ್‌ಕುಮಾರ ಕೆ. - ಗಾಂಧಿ ಅಮರನಾಗಲಿ

೨೨೬. ಹಲಸಂಗಿ ಆರ್.ಡಿ. - ಬೀಸುವ ಹಾಡು

೨೨೭. ಹಿರೇಮಠ ಅನ್ನದಾನಿ - ಗಾಂಧಿ

೨೨೮. ಹಿರೇಮಠ.ಆರ್.ಸಿ. - ಯೋಗಿತ್ಯಾಗಿ ಹಾ ವಿರಾಗಿ

೨೨೯. ಹುಣಶಾಳ.ಎಸ್.ಎಮ್. - ಮಹಾತ್ಮಾಗಾಂಧಿ, ಗಾಂಧಿನೀತಿ, ಸಮಾಜ ಸಂಘಟನೆ, ಸ್ವಾತಂತ್ರ್ಯ ಸಿದ್ಧಿ, ರಾಷ್ಟ್ರಪುರುಷ,

		ಮಹಾತ್ಮನ ಮಹಿಮೆ, ಗಾಂಧಿ ಹುಟ್ಟಿ ಬಾ, ಮಹಾತ್ಮನ ಮಾನವತೆ, ಮಹಾತ್ಮನ ಸಂದೇಶ, ಸತ್ಯಾಗ್ರಹ, ವಿಧಾಯಕ ಕಾರ್ಯಕ್ರಮ, ಸ್ವರಾಜ್ಯ
೨೩೦. ಹೆಗಡೆ.ಜಿ.ಕೆ.	-	ಸತ್ಯಾವತಾರ

II. ಕಾದಂಬರಿ

೧. ಅಣ್ಣಾರಾಯ ಮಿರ್ಜಿ	-	ಭಸ್ಮಾಸುರ, ರಾಷ್ಟ್ರ ಪುರುಷ, ಪ್ರತಿ ಸರಕಾರ, ಹದಗೆಟ್ಟಹಳ್ಳಿ
೨. ಅನಂತ ನಾರಾಯಣ	-	ಮುರುಕು ಮಂಟಪ
೩. ಅಶ್ವಥ ನಾರಾಯಣ	-	ಬಿಡುಗಡೆಯ ಬೆಲೆ
೪. ಆನಂದಕಂದ	-	ಮಗಳ ಮದುವೆ, ಸುದರ್ಶನ
೫. ಇನಾಂದಾರ್.ವಿ.ಎಂ.	-	ವಿಜಯಯಾತ್ರೆ, ಮೂರಾಬಟ್ಟೆ
೬. ಕೃಷ್ಣರಾಯ. ಅ.ನ.	-	ಅಮರ ಆಗಸ್ಟ್
೭. ಚೆನ್ನಬಸಪ್ಪ.ಕೋ.	-	ಬೇಡಿ ಕಳಚಿತು ದೇಶ ಒಡೆಯಿತು, ಹಿಂದಿರುಗಿ ಬರಲಿಲ್ಲ
೮. ಚಂದ್ರಶೇಖರ ನಾಗತಿಹಳ್ಳಿ	-	ವಲಸೆ ಹಕ್ಕಿಯ ಹಾಡು
೯. ಜಡಭರತ	-	ಧರ್ಮಸೆರೆ
೧೦. ಡಿಸೋಜ. ನಾ.	-	ಗಾಂಧಿ ಬಂದರು
೧೧. ನಾಗವೇಣಿ.ಎಚ್.	-	ಗಾಂಧಿ ಬಂದ
೧೨. ನಿರಂಜನ	-	ಚಿರಸ್ಮರಣೆ
೧೩. ಪ್ರಭಾಕರ ನೀರುಮಾರ್ಗ	-	ಮಂಗಳೂರು ಕ್ರಾಂತಿ
೧೪. ಫ.ಸು. ಭಟ್ಟ	-	ಆತ್ಮಾರ್ಪಣೆ
೧೫. ಬಸವರಾಜ.ಆರ್.	-	ಈಸೂರಿನ ಚಿರಂಜೀವಿಗಳು
೧೬. ಬಸವರಾಜ ಕಟ್ಟೀಮನಿ	-	ಮಾಡಿ ಮಡಿದವರು, ಸ್ವಾತಂತ್ರ್ಯದೆಡೆಗೆ
೧೭. ಬಾಳಾಸಾಹೇಬ ಲೋಕಾಪುರ	-	ಹುತ್ತ
೧೮. ಭಾರತೀಸುತ	-	ಸಾಧನ ಕುಟೀರ, ಶತದ್ರುದಂಡೆಗೆ
೧೯. ಭೈರಪ್ಪ. ಎಸ್.ಎಲ್.	-	ದಾಟು

೨೦. ಮಹಮ್ಮದ್ ಕುಂಞಿ ಬೊಳುವಾರು - ಸ್ವಾತಂತ್ರ್ಯದ ಓಟ

೨೧. ಮಾದೇಶ. ಜಿ.ಬಿ. - ದಲಿತ ಗಾಂಧಿ

೨೨. ಮುಗಳಿ. ರಂ.ಶ್ರೀ. - ಅನ್ನ

೨೩. ಮೊಗಸಾಲೆ. ನಾ. - ಉಪ್ಪು

೨೪. ಮಂಜಪ್ಪ ಕಡಿದಾಳ್ - ಪಂಜರವಳ್ಳಿಯ ಪಂಜು

೨೫. ರಾಜಾರಾಮ್ ಮುಜಲೀಕರ - ಶ್ರದ್ಧಾಂಜಲಿ

೨೬. ರಾಮಸ್ವಾಮಿ ಅಯ್ಯಂಗಾರ್ ಗೊರೂರು - ಮೆರವಣಿಗೆ

೨೭. ವಸುದೇವ ಭೂಪಾಲನಂ - ಆಂದೋಲನ

೨೮. ವಾಸುದೇವಾಚಾರ್ಯ ಬಾಗಲಕೋಟೆ - ಸೆರೆಮನೆಯ ಶೂರ

೨೯. ವೆಂಕಟೇಶ ಅರ್ಚಕ - ಚಲೋ ದಿಲ್ಲಿ

೩೦. ವ್ಯಾಸರಾಯ ಬಲ್ಲಾಳ - ಹೆಜ್ಜೆ, ಹೇಮಂತಗಾನ

೩೧. ಶಂಕರ ಭಟ್ಟ ಕಡೆಂಗೋಡ್ಲು - ಈ ಪೀಳಿಗೆ

೩೨. ಶಿವರಾಮ ಕಾರಂತ. ಕೆ. - ಔದಾರ್ಯದ ಉರುಳಲ್ಲಿ, ನಾವು ಕಟ್ಟಿದ ಸ್ವರ್ಗ, ಅದೇ ಊರು ಅದೇ ಮರ, ಗೊಂಡಾರಣ್ಯ, ಮರಳಿ ಮಣ್ಣಿಗೆ

೩೩. ಶ್ರೀರಂಗ - ಪುರುಷಾರ್ಥ, ಕುಮಾರ ಸಂಭವ, ವಿಷಚಕ್ರವ್ಯೂಹ, ವಿಶ್ವಾಮಿತ್ರನ ಸೃಷ್ಟಿ

೩೪. ಸರೋಜಾ ರಾವ್ ಕಾಕೋಳು - ನಾನು ಭಾರತೀಯ

III. ಸಣ್ಣ ಕಥೆ

೧. ಅನಸೂಯ ರಾವ್ - ಕಸ್ತೂರಬಾ

೨. ಅಬ್ಬಾಸ್ ಮೇಲಿನಮನಿ - ಗಾಂಧಿ ಕಾಲೋನಿಯು ಮಂಜನೆಂಬ ಸ್ಲಂ ಬಾಲನು, ರಸೂಲ್‌ಬಾಯಿ ಎಂಬ ಮನುಷ್ಯ

೩. ಆರ್ಯ - ಸ್ವಾತಂತ್ರ್ಯ ಸಂಗ್ರಾಮದಲ್ಲೊಂದು ಮಾಜಿಕಲ್ ಪ್ರಸಂಗ

೪. ಕೃಷ್ಣರಾಯ.ಅ.ನ. - ಜೈಹಿಂದ್, ಗಿರಿಜವ್ವನ ರೊಟ್ಟಿ, ಮೃತ್ಯುಶಾಂತಿ

೫. ಕೇಶವರೆಡ್ಡಿ ಹಂದ್ರಾಳ - ಗಾಂಧಿ

೬. ಗಣೇಶ.ಕೆ. ಕೋಡೂರು - ಗಾಂಧಿ ತುಂಡು

೭. ಗೋಪಾಲಗೌಡ ಕಲ್ಲವಮಂಜರಿ - ಮಹಾತ್ಮಗಾಂಧಿ ಗಿರಿವಿ ಅಂಗಡಿ

೮. ಗೋಪಿನಾಥ ರೆಡ್ಡಿ	-	ಗಾಂಧಿ ಟೋಪಿ
೯. ಜಾನಕಿ ಸುಂದರೇಶ್	-	ವಿದಾಯ
೧೦. ಜನಾರ್ಧನ ಗುರ್ಕಾ	-	ಬಾಪೂಜಿ
೧೧. ನರಸಿಂಹಾಚಾರ್.ಪು.ತಿ.	-	ಧ್ವಜರಕ್ಷಣೆ
೧೨. ನರಸಿಂಹಪ್ಪ ಸಿಂಧನೂರ	-	ಗಾಂಧಿಯ ನಾಡಿನಲ್ಲಿ
೧೩. ನಾಗರಾಜರಾವ್.ಎಂ.ವಿ.	-	ಗಾಂಧೀಜಿ ಸರಳತೆ
೧೪. ನಿರುಪಮಾ	-	ಕೆರೆ
೧೫. ನಿರಂಜನ	-	ಬಾಪೂಜಿ ಬಾಪೂಜಿ
೧೬. ಪೂರ್ಣಚಂದ್ರ ತೇಜಸ್ವಿ	-	ಗಾಂಧೀಜಿ ದೆಸೆಯಿಂದ, ತಬರನ ಕತೆ
೧೭. ಪೇಜಾವರ ಸದಾಶಿವರಾಯ	-	ಮುದುಕಿ
೧೮. ಬಣಕಾರ.ವಿ.ಎಸ್.	-	ಮಾಡಿಮಡಿದವರು, ನನ್ನ ಸೊತ್ತಲ್ಲ
೧೯. ಬಸವರಾಜ.ಆರ್.	-	ಕುರಿಗಳು ಸಾಕಿದ ತೋಳ
೨೦. ಬಸವರಾಜ ಕಟ್ಟೀಮನಿ	-	ಆಗಸ್ಟ್ ಒಂಬತ್ತು, ರಕ್ತಧ್ವಜ, ಹುತಾತ್ಮ, ಜನವರಿ ಇಪ್ಪತ್ತಾರು, ಬಲಿ, ಅಜ್ಞಾತವಾಸಿ, ಮೂವರು ಸೈನಿಕರು
೨೧. ಬಾಲಚಂದ್ರ ಘಾಣೇಕರ	-	ಗಾಂಧೀ ಹುಚ್ಚು!
೨೨. ಭಾಸ್ಕರ ಹೆಗಡೆ	-	ಭಾವಚಿತ್ರ
೨೩. ಮಹಮ್ಮದ್ ಕುಂಞ್ ಬೊಳುವಾರು	-	ಪಾಪು ಗಾಂಧಿ, ಗಾಂಧಿ ಬಾಪು ಆದ ಕಥೆ
೨೪. ಮೊಗಸಾಲೆ.ನಾ.	-	ಸೀತಾಪುರದಲ್ಲಿ ಗಾಂಧೀಜಿ
೨೫. ರಾಜಶೇಖರ ಹತಗುಂದಿ	-	ಕ್ರಾಂತಿಗೆ ಒಂದು ಪತ್ರ
೨೬. ರಾಮಣ್ಣ ಬೆಸಗರಹಳ್ಳಿ	-	ಗಾಂಧಿ, ಪ್ರಜಾಪ್ರಭುತ್ವದ ಮೂರು ಮಂಗಗಳು, ನಮ್ಮೂರಿನ ಗಾಂಧಿ
೨೭. ರಾಮಸ್ವಾಮಿ ಅಯ್ಯಂಗಾರ್ ಗೊರೂರು	-	೧೯೪೨ನೇ ಆಗಸ್ಟ್
೨೮. ವ್ಯಾಸರಾವ್ ನಿಂಜೂರು	-	ಗರಡಿ ಮಜಲಿನ ಗಾಂಧಿ
೨೯. ವೀರಭದ್ರಪ್ಪ.ಕುಂ.	-	ಕೂರ್ಮಾವತಾರ
೩೦. ವಿಶ್ವಾಸ ಭಾರದ್ವಾಜ್	-	ಮಹಾತ್ಮ
೩೧. ಶಲಿಗಣನಾಥ ಗುಡದೂರು	-	ಮಾಮೂಲಿ ಗಾಂಧಿ

೩೨. ಶ್ರೀನಿಧಿ ಡಿ.ಎಸ್. - ಗಾಂಧಿಮರ

೩೩. ಸರ್ಜಾಶಂಕರ ಹರಳಿಮಠ - ಧ್ವಜಾರೋಹಣ

೩೪. ಸದಾಶಿವರಾಯ ಪೇಜಾವರ - ಮುದುಕಿ

೩೫. ಸಾನೇಗುರೂಜಿ - ಗಾಂಧೀಜಿಯವರ ಸವಿಗತೆಗಳು

೩೬. ಸುನಂದಾ ಪ್ರಕಾಶ ಕಡಮೆ - ಗಾಂಧೀಚಿತ್ರದ ನೋಟು

IV. ನಾಟಕ

೧. ಅನಂತ ಚಿನಿವಾರ - ಹೇ ರಾಮ್ ...

೨. ಆನಂದಕಂದ - ಅಮೃತಾತ್ಮ

೩. ಉದಯಕುಮಾರ್.ವಿ. - ಹೋರಾಟದ ಹಾದಿ, ಯಮಪಾಶ

೪. ಕಸ್ತೂರಿ ನೀಲತ್ತಳ್ಳಿ - ಕ್ರಾಂತಿಮಾರ್ಗ, ಇದು ಭಾರತದ ದಾರಿ

೫. ಕುವೆಂಪು - ಬಲಿದಾನ

೬. ಕೇಶವ ಮೊರಬ್ - ಅವಿಶ್ವಾಸ

೭. ಗೋವಿಂದ ಪೈ - ಚಿತ್ರಭಾನು ಅಥವಾ ೧೯೪೨

೮. ಚಂದ್ರಶೇಖರ ಕಂಬಾರ - ಭಾರತಾಂಬೆ

೯. ಚೌಗಲೆ.ಡಿ.ಎಸ್. - ಕಸ್ತೂರಬಾ

೧೦. ದೊರೆಸ್ವಾಮಿ ಅಯ್ಯಂಗಾರ್. ಎಂ.ಎ. - ಧರ್ಮಜ್ಯೋತಿ

೧೧. ನರಸಿಂಹಾಚಾರ್ ಪು.ತಿ. - ವಿಕಟಕವಿ ವಿಜಯ

೧೨. ನೀನಾ ಮಧ್ಯಸ್ಥ - ವಂದೇ ಮಾತರಂ

೧೩. ಪಾಟೀಲ. ಕೆ.ಬಿ. - ಜನವರಿ ೨೬

೧೪. ಪ್ರತಿಮಾ ಮಿತ್ರ - ನಾನೇಕೆ ಮಹಾತ್ಮನಲ್ಲ

೧೫. ಬೇಂದ್ರೆ. ದ.ರಾ. - ಉದ್ಧಾರ

೧೬. ಭಂಡಾರಿ. ಆರ್.ವಿ. - ನಾನು ಗಾಂಧಿ ಆಗ್ತೇನೆ

೧೭. ಭಾಸ್ಕರ. ಟಿ.ಎಂ. - ಗಾಂಧಿಟೋಪಿ

೧೮. ಮೂರ್ತಿ. ಎ.ಎಸ್. - ಆ ಗಾಂಧಿ ಈ ಗಾಂಧಿ

೧೯. ರವೀಂದ್ರ - ಮುಕ್ತಧಾರಾ

೨೦. ರಾಜರತ್ನಂ. ಜಿ.ಪಿ. - ಸಂಭವಾಮಿ ಯುಗೇ ಯುಗೇ

೨೧. ರಾಮಕೃಷ್ಣರಾಯ. ಎಚ್. - ಗಾಂಧೀಜಿ ಸ್ವರ್ಗದಲ್ಲಿ

೨೨. ವಡ್ಡರ್. ಎಂ.ಎಂ. - ಅಮರ ಗಾಂಧಿ

೨೩. ವೆಂಕಟರಾಜು. ಕೆ. - ತಲೆಬಾಗದ ಜನ

೨೪. ಶಿವಾನಂದಸ್ವಾಮಿ. ವೈ.ನಾ. - ರಾಮರಾಜ್ಯದ ಕನಸು

೨೫. ಶ್ರೀರಂಗ - ಧರ್ಮವಿಜಯ, ಶೋಕಚಕ್ರ, ಹರಿಜನ್ವಾರ

೨೬. ಸಿಂಹ. ಸಿ.ಆರ್. - ನೀನೊಬ್ಬ ಗಾಂಧಿ

V. ಶಿಶುಸಾಹಿತ್ಯ

೧. ಆನಂದ.ವಿ. ಪಾಟೀಲ - ಪಪ್ಪಿ ಕೊಟ್ರು ಬಾಪೂ

೨. ಉಳವೀಶ - ಗಾಂಧೀ ಅಜ್ಜ

೩. ನಾರಾಯಣರಾಯ. ವಿ.ಎಸ್. - ಗಾಂಧೀ ಕಥಾವಳಿ

೪. ನಾರಾಯಣ ಶರ್ಮ - ಮಕ್ಕಳ ಮಹಾತ್ಮಗಾಂಧಿ

೫. ಪದ್ಮನಾಭ ಆಚಾರ್ಯ - ನಮ್ಮ ರಾಟೆ ಮತ್ತು ನೂಲುವುದು, ಹತ್ತಿ ಹಿಂಜುವುದು

೬. ಪರಿಮಳ ಮತ್ತು ಟಿ.ಎಂ.ಆರ್. ಸ್ವಾಮಿ - ಅಜ್ಜ ಅಜ್ಜಿ

೭. ಮಂಜಪ್ಪ ಹರ್ಡೇಕರ್ - ಗಾಂಧೀ ಸಂದೇಶ

೮. ರಾಜರತ್ನಂ.ಜಿ.ಪಿ. - ಗಿಳಿಮರಿಗಳ ಗಾಂಧಿ(ಕತೆ) ವಂದೇ ಗಾಂಧೀಜಿ(ಕವಿತೆ), ಮಕ್ಕಳ ಗಾಂಧಿ, ಮಾದರಿ ಗಾಂಧಿ ಚರಿತ್ರೆ(ಲಾವಣಿ), ಬೆಳೆಯುವ ಪೈರು (ನಾಟಕ), ಧ್ವಜ ವಂದನೆ(ನಾಟಕ), ಗಾಂಧಿ ವಿದ್ಯೆ (ಕತೆ), ಮಕ್ಕಳ ಗಾಂಧಿ(ಕತೆ)

೯. ರಾಮಚಂದ್ರ ವಡವಿ - ಗಾಂಧೀಜಿಯ ಕಥೆ

೧೦. ಸವ್ಯಸಾಚಿ - ಭಾರತ ಭಾಗ್ಯವಿಧಾತ

೧೧. ಸೀತಾರಾಮ ಭಟ್ಟ - ಚರಕ ಹಾಗೂ ಬಾಪೂಜಿ

೧೨. ಸುಂದರರಾಯ. ಬ.ನ. - ಮಕ್ಕಳ ಕಹಳೆ

❖❖❖

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ